Printed at the
B. B. D. Power Press
10, Cottonpet, - - - Bangalore City

॥ श्रीः ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ

**ನರಸಿಂಹೋಽಖಿಲಾಜ್ಞಾನಮತಧ್ವಾಂತದಿವಾಕರಃ ।**
**ಜಯತ್ಯಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ ॥**



# ಸಭಾಸಾರಸಂಗ್ರಹ

**(Volume III)**

## ಗೀತೋಪನ್ಯಾಸಗಳು (Part II)

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕಗುಣಸಂಪನ್ನ
ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯರಾದ
**ಶ್ರೀಮದುತ್ತರಾದಿಮಠದ ಶ್ರೀಶ್ರೀಪಾದಂಗಳವರ**
**ಮಹಾಸನ್ನಿಧಾನದಲ್ಲಿ**
ಮೈಸೂರು ರಾಜಧಾನಿಯ ಸೀತಾವಿಲಾಸಛತ್ರದಲ್ಲಿ ನಡೆದ
**ವೇದಾಂತವಿಮರ್ಶಿನೀಮಹಾಸಭೆಯಲ್ಲಿ**
ಚರ್ಚಿಸಿದ ವಿಷಯಗಳ ಮುಖ್ಯಸಾರಾಂಶವು

EDITED BY
**H. SUBBA RAO, M.A.**

Published by the
S. M. S. A. Sabha, Tiruchanur.

# ಮುನ್ನುಡಿಯು.

ಈ ಗ್ರಂಥದಲ್ಲಿರುವ ಪ್ರಮೇಯಗಳ ಪ್ರತಿಪಾದನೆಗೆ ಮಹಾಸಭೆಯಲ್ಲಿ ಶ್ರೀಪಾದಒಡೆಯರ ಸನ್ನಿಧಾನದಲ್ಲಿ ನಡೆದ ಚರ್ಚೆಯು ಬೀಜಭೂತವಾದುದು. ಕೆಲವು ವಿಷಯಗಳು ಸಭೆಯಲ್ಲಿಯೂ, ಕೆಲವು ವಿಷಯಗಳು ಚಾತುರ್ಮಾಸ್ಯದಲ್ಲಿ ಸಂಸ್ಥಾನದವರ ನಿವಾಸವಾದ 'ಚಿತ್ರರಂಜನ' ದಲ್ಲಿ ವಿದ್ವಜ್ಜನಗೋಷ್ಠಿಯಲ್ಲಿಯೂ ಚರ್ಚಿಸಲ್ಪಟ್ಟಿರುವುವು. ಮತ್ತು ಕೆಲವು ಪ್ರಶ್ನೆಗಳು ಬೇರೆಬೇರೆ ತಾರೀಖುಗಳಲ್ಲಿ ಮಾಡಲ್ಪಟ್ಟಿರುವುವು. ವಿಭಿನ್ನದೇಶಕಾಲಗಳಲ್ಲಿ ಚರ್ಚಿಸಿದ ವಿಷಯಗಳು ಸಂಗತವಾಗುವಂತೆ ಪ್ರಕರಣೋಚಿತವಾಗಿ ಅಲ್ಲಿ ಅಲ್ಲಿ ನಿರೂಪಿತವಾಗಿರುವುವು. ಮತ್ತು ಕೆಲವು ವಿಷಯಗಳು ಸಭೆಯಲ್ಲಿ ಸಂಕ್ಷೇಪವಾಗಿ ಚರ್ಚಿಸಲ್ಪಟ್ಟಿದ್ದರೂ ಗ್ರಂಥದಲ್ಲಿ ವಿಸ್ತಾರವಾಗಿಯೇ ಉಪಪಾದಿಸಲ್ಪಟ್ಟಿರುವುವು. ಪ್ರಾಶ್ನಿಕರ ನಾಮನಿರ್ದೇಶವು ಉದ್ವೇಗಕರವಾಗಬಹುದೆಂದು ನಾನೇ ಸ್ವಂತವಾಗಿ ಶಂಕಿಸಿಕೊಂಡು ಹೆಸರುಗಳನ್ನು ಹೇಳುವುದನ್ನು ಬಿಟ್ಟು ಸಾಮಾನ್ಯವಾಗಿ ಉಪನ್ಯಾಸರೂಪದಿಂದಲೂ, ಕಠಿಣಸ್ಥಳಗಳಲ್ಲಿ ಪ್ರಶ್ನೋತ್ತರರೂಪದಿಂದಲೂ, ಶ್ರೀಪಾದಂಗಳವರ ಅಭಿಪ್ರಾಯಗಳನ್ನು ಓದುವವರ ಅನುಕೂಲವನ್ನನುಸರಿಸಿ—ನಾನು ತಿಳಿದುಕೊಂಡಂತೆ—ನಿರೂಪಿಸಿರುತ್ತೇನೆ. ಆದುದರಿಂದ ಕೆಲವು ವಿಷಯಗಳು ಸೀತಾವಿಲಾಸದಲ್ಲಿ ಚರ್ಚಿಸಲ್ಪಡಲಿಲ್ಲವೆಂದಾಗಲೀ, ಕೆಲವು ವಿಷಯಗಳು ಗ್ರಂಥದಲ್ಲಿ ನಮೂದಿಸಲ್ಪಟ್ಟಿರುವ ತಾರೀಖಿನಲ್ಲಿ ವಿಚಾರಿತವಾಗಲಿಲ್ಲವೆಂದಾಗಲೀ ಯಾವ ವಿಧವಾದ ಶಂಕೆಯನ್ನೂ ಹೊಂದಬೇಕಾದುದಿಲ್ಲ. ರಾಮದೇವರ ನಿವಾಸವು ಅಯೋಧ್ಯೆಯು, ಕೃಷ್ಣನ ವಸತಿಯು ವೈಕುಂಠವು. ಇದೇ ನ್ಯಾಯದಿಂದ ಶ್ರೀಪಾದಒಡೆಯರು ತತ್ವವಿಮರ್ಶಾರ್ಥವಾಗಿ ಕುಳಿತ ಸ್ಥಳವೇ ಮಹಾಸಭೆಯು. ಅವರು ಸಾಭಿಪ್ರಾಯವಾಗಿ ಆಡಿದ ಮಾತುಗಳೇ ತತ್ವಗಳು. ಅವುಗಳೆಲ್ಲಾ ಪ್ರಾಯೇಣ ನನ್ನ ನಿರೂಪಣೆಗೆ ವಿಷಯಗಳು. ಈ ನ್ಯಾಯವನ್ನು ಅನುಸರಿಸಿಯೇ ಇನ್ನೂ ಅನೇಕ ಗ್ರಂಥಗಳನ್ನು ಮುಂದೆ ಬರೆಯಬೇಕೆಂದಿರು

ತ್ತೇನೆ. ಆದುದರಿಂದ ಮಹಾಪುರುಷರಾದ ಶ್ರೀಶ್ರೀಗಳವರು ಅಭಿಪ್ರಾಯ ಪುರಸ್ಸರವಾಗಿ ನಿರೂಪಿಸಿರುವ ತತ್ವವಿಷಯಗಳಿಂದಲೇ ಪೂರ್ಣವಾಗಿರುವುದರಿಂದ ಈ ಗ್ರಂಥವೂ, ಇನ್ನು ಮೇಲೆ ಇದೇ ನ್ಯಾಯವನ್ನವಲಂಬಿಸಿ ಬರೆಯಲ್ಪಡುವ ಇತರ ಗ್ರಂಥಗಳೂ ಸಹ, ವಿದ್ವಜ್ಜನಮನೋರಂಜಕವಾಗಿ, ಸಜ್ಜನರಿಗೆ ಸಂಸಾರ ತಾರಕವಾದ ಶ್ರೀಕೃಷ್ಣನ ಬ್ರಹ್ಮವಿದ್ಯೆಯ ಯಥಾರ್ಥವಾದ ರಹಸ್ಯವನ್ನು ತಿಳಿದುಕೊಳ್ಳುವುದರಲ್ಲಿ ಸಹಾಯಕವಾಗಿರುತ್ತದೆ ಎಂದು ನಂಬಿರುತ್ತೇನೆ.

ಮುದ್ರಣವೇಗದಿಂದ ಕೆಲವು ದೋಷಗಳು ಪ್ರಾಪ್ತವಾಗಿವೆ! 208 ನೆಯ ಪುಟದ 7 ನೆಯ ಪಙ್ಕ್ತಿಯಲ್ಲಿ "ಇಷ್ಟವಿಷಯಪ್ರಾಪ್ತಿಯಿಂದ ದುಃಖವು ಉಂಟಾಗುವುದು" ಎಂದು ಅಬದ್ಧವಿರುವುದು. ಅಲ್ಲಿ "ಇಷ್ಟವಿಷಯಪ್ರಾಪ್ತಿ ಯಿಂದ ಸುಖವೂ ಅನಿಷ್ಟವಿಷಯಪ್ರಾಪ್ತಿಯಿಂದ ದುಃಖವೂ ಉಂಟಾಗುವುದು" ಎಂದು ತಿದ್ದಿಕೊಳ್ಳಬೇಕು. 192 ನೆಯ ಪುಟದ 7 ನೆಯ ಪಙ್ಕ್ತಿಯಲ್ಲಿ "ಜೀವಸ್ವರೂಪಾತಿರಿಕ್ತವಾದ ಉಪಾಧಿಯು ಅನಿತ್ಯವಾದುದರಿಂದ" ಎಂದು ಅಬದ್ಧವಿರುವುದು. ಅಲ್ಲಿ "ಜೀವಸ್ವರೂಪಾತಿರಿಕ್ತವಾದ ಅಥವಾ ಅನಿತ್ಯವಾದ ಬೇರೊಂದು ಉಪಾಧಿಯು ಇಲ್ಲವಾದುದರಿಂದ" ಎಂದು ತಿಳಿದುಕೊಳ್ಳಬೇಕು. 48ನೆಯ ಪುಟದ 13ನೆಯ ಪಙ್ಕ್ತಿಯಲ್ಲಿ "ಪ್ರಧಾನವಾದ" ಎಂಬುದನ್ನು "ದ್ರವ್ಯಪ್ರಧಾನವಾದ" ಎಂದೂ, 75ನೆಯ ಪುಟದ 18ನೆಯ ಪಙ್ಕ್ತಿಯಲ್ಲಿ "ಪ್ರತಿಷ್ಠಾ" ಎಂಬುದನ್ನು "ಪ್ರತಿಷ್ಠಾಪಿಸಿ" ಎಂದೂ ಓದಿಕೊಳ್ಳಬೇಕು. 303ನೆಯ ಪುಟದಲ್ಲಿರುವ ಶ್ಲೋಕಕ್ಕೆ ಅರ್ಥವನ್ನು 263ನೆಯ ಪುಟವನ್ನು ನೋಡಿ ಸರಿಯಾಗಿ ತಿಳಿಯಬೇಕು. ಇತರ ದೋಷಗಳು ಶುದ್ಧಾಶುದ್ಧಪತ್ರಿಕೆ ಯಲ್ಲಿ ನಿರೂಪಿಸಲ್ಪಟ್ಟಿವೆ. ವಿಷ್ಣುಭಕ್ತರಾದ ವಾಚಕರು ಕುಶಾಗ್ರದಂತೆ ಸೂಕ್ಷ್ಮವಾದ ತಮ್ಮ ಬುದ್ಧಿಯಿಂದ ಈ ವಿಧವಾದ ನ್ಯೂನತೆಗಳನ್ನು ಸರಿ ಪಡಿಸಿಕೊಂಡು ಶ್ರೀಪಾದಂಗಳವರ ಕರುಣಾಮೃತರೂಪವಾಗಿ ಪ್ರವಹಿಸುವ ಮಹೋಪದೇಶಗಳ ಅರ್ಥಸಾಗರದ ಗಾಂಭೀರ್ಯದಲ್ಲಿ ಗಮನವಿಟ್ಟು "ಕಬ್ಬು ಡೊಂಕಾದರೂ ಸಿಹಿಯು ಡೊಂಕೇ" ಎಂದು ನಾಣ್ನುಡಿಯಿರುವುದರಿಂದ ಮಾಧುರ್ಯರಸಪೂರ್ಣವಾದ ಶ್ರೀಶ್ರೀಗಳವರ ಉಪದೇಶಸುಧಾಪಾನದಿಂದಲೇ ತೃಪ್ತರಾಗಬೇಕೆಂದು ಕೋರುತ್ತೇನೆ.

ಮುದ್ರಣಕಾಲದಲ್ಲಿ ಪ್ರೂಫ್ ಪತ್ರಗಳ ಶೋಧನೆ, ಶುದ್ಧಾಶುದ್ಧಪತ್ರಿಕಾ ನಿರ್ಮಾಣ, ವಿಷಯಾನುಕ್ರಮಣಿಕಾರಚನೆಯೇ ಮುಂತಾದ ಕಾರ್ಯಗಳಲ್ಲಿ, ರಾಮಾನುಜಮತದ ಆನಂದಸಾಮ್ಯವೇ ಮುಂತಾದ ವಾದಗಳ ಸ್ವಾಭಾವಿಕ ದೋಷಗಳನ್ನು ಗ್ರಹಿಸಿ, ಆದುದರಿಂದಲೇ ಆ ಮತವನ್ನು ಪರಿತ್ಯಾಗಮಾಡಿ, ಶ್ರೀಮಚ್ಚರಣರ ಅನುಗ್ರಹದಿಂದ ಉತ್ತಮವಾದ ವೈಷ್ಣವದೀಕ್ಷೆಯನ್ನು ಸ್ವೀಕರಿಸಿ ಮಧ್ವಮತದ ಪದ್ಧತಿಯನ್ನನುಸರಿಸಿ ಕೃಷ್ಣೋಪಾಸನೆಯಲ್ಲಿ ನಿರತರಾಗಿರುವ, ಶ್ರೀಮಾನ್ ಏ. ಯನ್. ದೇಶಿಕಾಚಾರ್ಯ, ಬಿ.ಎ. ಯವರು ನನಗೆ ಸಹಾಯಮಾಡಿ ಶ್ರೀಶ್ರೀಗಳವರ ಪರಮಾನುಗ್ರಹಕ್ಕೆ ಪಾತ್ರರಾಗಿರುತ್ತಾರೆ. ಅವರಿಗೆ ಧನ್ಯವಾದಗಳು. ಮತ್ತು ಸಮಾಭ್ಯಧಿಕರಹಿತನಾದ ಪರಬ್ರಹ್ಮನಾದ ಪ್ರಾಣಪತಿಯಾದ ಶ್ರೀಮನ್ನಾರಾಯಣನಲ್ಲಿ ಲಗ್ನವಾದ ಚಿತ್ತವುಳ್ಳ ಸಕಲ ಸದ್ವೈಷ್ಣವರಿಗೂ ನನ್ನ ಮನಃಪೂರ್ವಕವಾದ ನಮಸ್ಕಾರಗಳು.

ಬೆಂಗಳೂರು,
ತಾ|| 15—6—1931. **H. Subba Rao.**

# ವಿಷಯಾನುಕ್ರಮಣಿಕೆ.

| ವಿಷಯಗಳು | ಪುಟ |
|---|---|

*

ವಿಷಯಗಳು — ಪುಟ

॥ श्रीः ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ

ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ಶ್ರೀ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ

**ಶ್ರೀಮದುತ್ತರಾದಿಮಠದ ಸಂಸ್ಥಾನದ ಶ್ರೀಪಾದಂಗಳವರ**

**ಮಹಾಸನ್ನಿಧಾನದಲ್ಲಿ**

**ಮೈಸೂರಿನಲ್ಲಿ ಸೀತಾವಿಲಾಸಛತ್ರದಲ್ಲಿ ನಡೆದ**

**ಶ್ರೀವೇದಾಂತವಿಮರ್ಶಿನೀಮಹಾಸಭೆಯಲ್ಲಿ ಚರ್ಚಿಸಿದ**

# ವಿಷಯಗಳ ಮುಖ್ಯಸಾರಾಂಶ.

## VII

# ಮೋಕ್ಷಸಾಧನನಿರೂಪಣವು

6 ರಿಂದ 13—8—1930ರ ವರೆವಿಗೆ

---

**ಸಭಿಕರು— ಧರ್ಮಾಧಿಕಾರಿಗಳು, ವಿದ್ವಾಂಸರು**

**ಮತ್ತು ವಿದ್ಯಾರ್ಥಿಗಳು.**

## 1.

### ಅಪರೋಕ್ಷಜ್ಞಾನಾನಂತರಕೃತಭಕ್ತಿಲಬ್ಧವಿಷ್ಣುಪ್ರಸಾದಕ್ಕೆ ಸಾಕ್ಷಾನ್ಮೋಕ್ಷಸಾಧನತ್ವಸಮರ್ಥನವು.

**ಪ್ರಶ್ನೆ—** ಸ್ವಾಮಿ! ಈ ದಿವಸ ತಾವು ಪುರುಷಾರ್ಥಪ್ರಧಾನವಾದ ಮೋಕ್ಷಕ್ಕೆ ಸಾಕ್ಷಾತ್ಸಾಧನವು ಯಾವುದೆಂಬುದನ್ನು ಶ್ರೀಕೃಷ್ಣನ ಗೀತಾವಾಕ್ಯಗಳಿಂದಲೇ ನಿರ್ಣಯಮಾಡಿ ಹೇಳಬೇಕು.

ಶ್ರೀಶ್ರೀಗಳವರು— **"ಅಮಲಾ ಭಕ್ತಿಶ್ಚ ತತ್ಸಾಧನಂ"** ಎಂದು ನಮ್ಮಿಂದ ಪ್ರತಿಜ್ಞಾತವಾದ ಶ್ಲೋಕಭಾಗದಲ್ಲಿ ವ್ಯಾಸರಾಯರೇ, ಮುಕ್ತಿಗೆ ದೋಷರಹಿತವಾದ ಭಕ್ತಿಯು ಸಾಕ್ಷಾತ್ಸಾಧನವೆಂದು ನಿರೂಪಿಸಿರುತ್ತಾರೆ.

ಆದರೆ ಇಲ್ಲಿ ತಿಳಿಯಬೇಕಾದ ಒಂದು ಸೂಕ್ಷ್ಮಾಂಶವು ಇರುವುದು. ಮುಕ್ತಿಯು ಸತ್ಯವಾದ ಬಂಧದ ನಿವೃತ್ತಿರೂಪವಾದುದೆಂದು ನಾವು ನಿರೂಪಿಸಿದೆವು. ಬಂಧಕನಾದ ಪರಮಾತ್ಮನ ಅಧೀನವಾದ ಭವಪಾಶವು ಪರಮಾತ್ಮನ ಇಚ್ಛೆಯಿಂದಲೇ ನಿವೃತ್ತವಾಗುವುದೇ ಹೊರತು ಸ್ವಯಂ ನಿವೃತ್ತವಾಗಲಾರದು. ರಾಜಾಧೀನವಾದ ಬಂಧನವನ್ನು ಅನುಭವಿಸುವ ಕಾರಾಗೃಹವಾಸಿಯು ಪುನಃ ರಾಜನ ಇಚ್ಛೆಯಿಂದಲೇ ಬಿಡುಗಡೆ ಹೊಂದಿಸಲ್ಪಡುತ್ತಿರುವುದು ಲೋಕಾನುಭವಸಿದ್ಧವು. ಹಾಗಿಲ್ಲದೆ, ಸಂಕೋಲೆಯು ತನ್ನಷ್ಟಕ್ಕೆ ತಾನೇ ಕಳಚಿಹೋಗಿ ಬಂದೀನಿವಾಸಿಯು ಸ್ವತಂತ್ರನಾಗಿ ರಾಜನ ಆಸ್ಥಾನ ಸಭೆಯಲ್ಲಿ ಕಾರ್ಯಾರ್ಥವಾಗಿ ಪ್ರಾಪ್ತನಾಗಲಾರನು. ಆದುದರಿಂದ ಮೋಕ್ಷಕ್ಕೆ ಸಾಕ್ಷಾತ್ಸಾಧನವು ಮುಕ್ತಿಪ್ರದನಾದ ಶ್ರೀಮನ್ನಾರಾಯಣನ ಅತ್ಯರ್ಥಪ್ರಸಾದವು.

ಹಾಗಿದ್ದರೂ, **ಅಮಲಾ ಭಕ್ತಿಶ್ಚ ತತ್ಸಾಧನಂ** ಎಂಬ ವ್ಯಾಸರಾಜರ ವಾಕ್ಯವೂ ಯಥಾರ್ಥವೇ. ಹೇಗೆಂದರೆ, ಹರಿಪ್ರಸಾದವು **"ಏನಂ ಮೋಚಯಾಮಿ"** ಎಂಬ ಈಶ್ವರೇಚ್ಛಾರೂಪವಾದುದು. ಅದು ಅಧಿಕಾರಿಯ ಅಧೀನವಲ್ಲ. ಮೋಕ್ಷಾಪೇಕ್ಷಿಗಳಾದ ಅಧಿಕಾರಿಗಳು ಮೋಕ್ಷಾರ್ಥವಾಗಿ ಮಾಡತಕ್ಕ ಪ್ರಯತ್ನದಲ್ಲಿ, ವಿಷಯಕಾಮದಿಂದ ರಹಿತವಾದ ಭಕ್ತಿಯು ಮುಖ್ಯಸಾಧನವು. ಇಂಥಾ ಭಕ್ತಿಯು ಸಾಕ್ಷಾನ್ಮೋಕ್ಷಸಾಧನವಾದ ಹರಿಪ್ರಸಾದಕ್ಕೆ ಸಾಕ್ಷಾತ್ಕಾರಣವಾಗುವುದು.

ಹೀಗಿರುವುದರಿಂದ ನಾವು ಪ್ರಥಮತಃ ವಿಷ್ಣುಪ್ರಸಾದವು ಸಾಕ್ಷಾನ್ಮೋಕ್ಷಸಾಧನವೆಂಬುದನ್ನು ನಿರೂಪಿಸುತ್ತೇವೆ. ಶ್ರೀಕೃಷ್ಣನು ಹೇಳುತ್ತಾನೆ:—

(1) **ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ॥**
—(18. 58.)

ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನು (ಭಕ್ತನು) ನನ್ನ (ಶ್ರೀಕೃಷ್ಣನ) ಪ್ರಸಾದದಿಂದ ಸರ್ವದುರ್ಗಗಳನ್ನೂ ದಾಟುವೆ(ವನು); ಮುಕ್ತನಾಗುತ್ತಾನೆಂದರ್ಥವು.

(2) **ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಂ।**
—(18. 56.)

(ಜ್ಞಾನಿಯು) ನನ್ನ (ಶ್ರೀಕೃಷ್ಣನ) ಪ್ರಸಾದದಿಂದ ಶಾಶ್ವತವಾದ ವಿಕಾರರಹಿತವಾದ ಸ್ಥಾನವನ್ನು ಹೊಂದುತ್ತಾನೆ; ಮುಕ್ತನಾಗುತ್ತಾನೆಂದರ್ಥವು.

(3) **ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ।**
—(18. 62.)

ವಿಷ್ಣುಪ್ರಸಾದದಿಂದ ನೀನು ಶಾಶ್ವತವಾದ ಉತ್ತಮಸುಖಪ್ರದವಾದ ಸ್ಥಾನವನ್ನು ಹೊಂದುತ್ತೀಯೆ; ಮುಕ್ತನಾಗುತ್ತೀಯೆ ಎಂದರ್ಥವು.

ಈ ಮೂರು ವಾಕ್ಯಗಳಲ್ಲೂ ಪರಮಮುಕ್ತಿಯು ಶ್ರೀಕೃಷ್ಣನ ಪ್ರಸಾದದಿಂದಲೇ ಬರುವುದೆಂದು ಹೇಳಿರುತ್ತದೆ.

**ಪ್ರಶ್ನೆ—** ಸ್ವಾಮಿ ! ಬ್ರಹ್ಮಜ್ಞಾನವು ಮುಕ್ತಿಗೆ ಸಾಧನವೆಂದು ಸರ್ವಸಮ್ಮತವಾದ ಪ್ರಕ್ರಿಯೆಯು. ಪೂರ್ಣಪ್ರಕಾಶಾತ್ಮಕನಾದ ಸೂರ್ಯನು ಉದಯಿಸಿದಾಗ ಅಂಧಕಾರವು ನಿವೃತ್ತಿಯಾಗುವಂತೆ ಅಥವಾ ಹಿಮವು ಕರಗುವಂತೆ, ಜ್ಞಾನೋದಯವಾದರೆ ಅಜ್ಞಾನಾದಿಬಂಧಗಳು ಸ್ವಯಂ ನಷ್ಟವಾಗುವುವು. ಅದಷ್ಟೇ ಮುಕ್ತಿಯು! ಆದುದರಿಂದ ಜ್ಞಾನವು ಹುಟ್ಟುವುದಕ್ಕೆ ಭಗವತ್ಪ್ರಸಾದವು ಅಪೇಕ್ಷಿತವಾದರೂ, ಜ್ಞಾನೋತ್ಪತ್ತಿಯಾದ ನಂತರ ಮುಕ್ತ್ಯರ್ಥವಾಗಿ ಭಗವಂತನ ಅನುಗ್ರಹವು ಏತಕ್ಕೆ?

ಶ್ರೀ ಶ್ರೀಗಳವರು— ಭಗವಂತನಾದ ಶ್ರೀಕೃಷ್ಣನು ಸರ್ವಸ್ವತಂತ್ರನು ಎಂದು ನಾವು ಪೂರ್ವದಲ್ಲಿಯೇ ನಿರೂಪಿಸಿರುತ್ತೇವೆ. ಹೀಗಿರುವಲ್ಲಿ ಜಡವಾದ ಜ್ಞಾನವು ಸಾಕ್ಷಾತ್ತಾಗಿ ಸ್ವತಂತ್ರಸಾಮರ್ಥ್ಯದಿಂದ ಮುಕ್ತಿಯನ್ನು ಕೊಡಿಸುವುದು ಎಂದು ಹೇಳುವುದು ಅಯುಕ್ತವು. ಸೂರ್ಯನು ಅಂಧಕಾರವನ್ನು ನಿವೃತ್ತಿಮಾಡುವುದೂ, ಸೂರ್ಯೋದಯದಿಂದ ಹಿಮವು ನಷ್ಟವಾಗುವುದೂ ಸಹ, ಸೂರ್ಯಪ್ರಕಾಶದ ಸ್ವಾಭಾವಿಕಗುಣಕ್ಕೂ ನಿಯಾಮಕನಾದ, ಭಗವಂತನಾದ ಶ್ರೀಕೃಷ್ಣನ ಅಧೀನವಾಗಿರುತ್ತದೆ. ಹೀಗೆಯೇ ಜ್ಞಾನದಿಂದಲೇ ಸಾಕ್ಷಾತ್ತಾಗಿ ಮುಕ್ತಿಯಾಗುವುದೆಂದು ಒಪ್ಪಿದರೂ ಸಹ ಜ್ಞಾನದ ಸಹಜಸ್ವಭಾವಕ್ಕೂ ನಿಯಾಮಕನಾದ ಭಗವಂತನ ಪ್ರಸಾದವು ಅವಶ್ಯಕವೆಂದು ಒಪ್ಪಬೇಕು. ವಸ್ತುಗಳ ಸ್ವಾಭಾವಿಕಗುಣಗಳಿಗೂ ಭಗವಂತನು ನಿಯಾಮಕನೆಂಬ ತತ್ವವು ಭಗವದ್ಗೀತೆಯಲ್ಲಿ ಬಹುಸ್ಥಳಗಳಲ್ಲಿ* ಹೇಳಿರುತ್ತದೆ.

---

* "**ರಸೋಽಹಮಪ್ಸು ಕೌಂತೇಯ**" ಇತ್ಯಾದಿ ಸಪ್ತಮಾಧ್ಯಾಯಗತ ಶ್ಲೋಕಗಳಲ್ಲಿಯೂ, "**ಅಹಂ ಕ್ರತುರಹಂ ಯಜ್ಞ**" ಇತ್ಯಾದಿ ನವಮಾಧ್ಯಾಯಗತ ಶ್ಲೋಕಗಳಲ್ಲಿಯೂ, "**ಜ್ಞಾನಂ ಜ್ಞಾನವತಾಮಹಂ**" ಇತ್ಯಾದಿ ದಶಮಾಧ್ಯಾಯಗತ ವಾಕ್ಯಗಳಲ್ಲಿಯೂ ಈ ಪ್ರಮೇಯವು ನಿಶ್ಚಿತವಾಗಿರುವುದು.

2. ಇದು "ತುಷ್ಯತು ದುರ್ಜನಃ" ಎಂಬ ನ್ಯಾಯವನ್ನನುಸರಿಸಿ ಹೇಳಿದ ಮಾತು. ವಸ್ತುತಃ ಜ್ಞಾನಿಗೆ ಜ್ಞಾನೋತ್ಪತ್ತಿಯಾದ ಕ್ಷಣವೇ ಶಂಕರಾಚಾರ್ಯರು ಹೇಳುವಂತೆ ಸದ್ಯೋಮುಕ್ತಿಯು ಬರುವುದಾಗಿದ್ದರೆ, ಬ್ರಹ್ಮಜ್ಞಾನದಿಂದಲೇ ಮೋಕ್ಷವಾಗುವುದು, ಇನ್ನು ಪ್ರಸಾದವು ಏತಕ್ಕೆಂದು ಕಥಂಚಿತ್ ಪ್ರಶ್ನೆಮಾಡಬಹುದಾಗಿತ್ತು. ಆದರೆ ಅದ್ವೈತಿಗಳು ಹೇಳುವಂತೆ ಜ್ಞಾನಿಯು ಸದ್ಯೋಮುಕ್ತನಾಗಿ ಒಂದು ಕ್ಷಣಕಾಲದಲ್ಲೂ ಸಂಸಾರದಲ್ಲಿ ಇರುವುದಿಲ್ಲವೆಂದು ಶ್ರೀಕೃಷ್ಣನು ಹೇಳುವುದಿಲ್ಲ. ಜ್ಞಾನಿಯು ಬ್ರಹ್ಮದರ್ಶನವನ್ನು ಹೊಂದಿದ ನಂತರ, ಪರಬ್ರಹ್ಮನ ವಿಶೇಷಪ್ರಸಾದಾರ್ಥವಾಗಿ ತಪಸ್ಸು ಮಾಡುತ್ತಾ, ಇನ್ನೂ ತನ್ನ ಪ್ರಾರಬ್ಧಕರ್ಮವು ಪರಿಸಮಾಪ್ತವಾಗುವ ವರೆವಿಗೂ, ಸಂಸಾರದಲ್ಲಿಯೇ ಅವಸ್ಥಾನವನ್ನು ಹೊಂದುವನೆಂದು ಶ್ರೀಕೃಷ್ಣನ ವಾಕ್ಯಗಳಿಂದ ನಿಶ್ಚಿತವಾಗುವುದು. ಅರ್ಜುನನ ಪ್ರಶ್ನೆಯೇ ಜ್ಞಾನಿಗೂ ಸಂಸಾರದಲ್ಲಿ ಅವಸ್ಥಾನವು ಉಂಟೆಂದು ಸೂಚಿಸುವುದು:—

(4) **ಅರ್ಜುನ ಉವಾಚ :—**

**ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।**
**ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ ॥**

—(2. 54.)

**ಅರ್ಥವು—** ಅರ್ಜುನನು ಹೇಳುತ್ತಾನೆ:— ಎಲೈ ಕೇಶವನೇ ! ಸಮಾಧಿಯೋಗನಿರತನಾದ ಅಪರೋಕ್ಷಜ್ಞಾನಿಯ ಲಕ್ಷಣವೇನು ? ಬ್ರಹ್ಮಾಪರೋಕ್ಷಜ್ಞಾನವುಳ್ಳವನು ಇತರರ ಸಂಗಡ ಮಾತಾಡುವುದು ಹೇಗೆ? ಅವನು ಯಾವುದನ್ನು ಉದ್ದೇಶಮಾಡಿ ಆಸನ ಮತ್ತು ಗಮನಾಗಮನಾದಿಪ್ರವೃತ್ತಿಗಳನ್ನು ಹೊಂದುವನು ? (ಬ್ರಹ್ಮದರ್ಶನಾನಂದದಲ್ಲಿ ಮಗ್ನನಾದ ಬ್ರಹ್ಮಜ್ಞಾನಿಯು, ಇತರರ ಸಂಗಡ ಸಂಭಾಷಣಾದಿವ್ಯವಹಾರಗಳನ್ನು ಮಾಡುವುದು ಮತ್ತು ಯಾವುದನ್ನಾದರೂ ಅಪೇಕ್ಷಿಸಿ ಪ್ರವೃತ್ತಿಸುವುದೂ ಸಹ ಅಸಂಭಾವಿತನೆಂದು ಪ್ರಶ್ನಭಾವವು.)

ಇದರಿಂದ ಬ್ರಹ್ಮಾಪರೋಕ್ಷಜ್ಞಾನವನ್ನು ಹೊಂದಿದ ಸಮಾಧಿಯೋಗನಿರತನಾದ ಸ್ಥಿತಪ್ರಜ್ಞನೂ ಸಹ ಇನ್ನೂ ಕೆಲವು ಕಾಲ ಗಮನಾಗಮನಾದಿಪ್ರವೃತ್ತಿಗಳಿಂದ ಸಹಿತನಾಗಿ ಸಂಸಾರದಲ್ಲಿ ಇರುವನೆಂದು ಸಿದ್ಧವಾಯಿತು. ಜ್ಞಾನದಿಂದ ತತ್ಕಾಲದಲ್ಲಿ ದೇಹಾದಿಬಂಧಗಳು ನಷ್ಟವಾಗಿ ಮುಕ್ತಿಯಾಗುವು

ದಿಲ್ಲವೆಂದೂ ಸಿದ್ಧವಾಯಿತು. ಜ್ಞಾನಕ್ಕೆ ಸಾಕ್ಷಾನ್ಮುಕ್ತಿದಾತೃತ್ವಸಾಮರ್ಥ್ಯವು ಇಲ್ಲವೆಂದೂ ನಿಶ್ಚಿತವಾಯಿತು.

3. ಜ್ಞಾನಿಯ ಲಕ್ಷಣವನ್ನು ಬೋಧಿಸುವ ಶ್ರೀಕೃಷ್ಣನ ಉತ್ತರವೂ ಸಹ, ಜ್ಞಾನಿಯು **ಮುಂದೆ** ಮುಕ್ತನಾಗುವನು, ಈಗ ಕರ್ಮಶೇಷನಿಮಿತ್ತವಾಗಿ ಅವನಿಗೆ ಸ್ವಲ್ಪ ಪ್ರವೃತ್ತಿಗಳು ಉಂಟು ಎಂದು ತಿಳಿಸಿಕೊಡುತ್ತದೆ:—

(5) **ಶ್ರೀಭಗವಾನುವಾಚ :—**

**ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।**
**ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥** —(55).

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ।**
**ವೀತರಾಗಭಯಕ್ರೋಧಃ ಸ್ಥಿತಧೀಃ ಮುನಿರುಚ್ಯತೇ ॥**
**ಯಃ ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಂ ।**
**ನಾಭಿನಂದಂತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**
**ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶಃ ।**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**
—(58.)

**ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।**
**ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥**
**ಯತತೋಽಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ।**
**ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ॥** —(60.)
**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।**
**ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**
—(61.)

.... .... .... .... .... ....

**ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।**
**ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥** —(67.)
**ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ।**

**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**
—(68.)

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**
**ಆಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।**
**ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥**
**ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।**
**ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥**
**ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ।**
**ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ॥**
(2. 55—72.)

**ಅರ್ಥವು:** — "ಎಲೈ ಪಾರ್ಥನೇ ! ಮೋಕ್ಷಾಧಿಕಾರಿಯು ಯಾವಾಗ ಮನೋಗತವಾದ ಸರ್ವವಿರುದ್ಧಕಾಮಕ್ರೋಧಾದಿಗಳನ್ನು ಪರಿತ್ಯಾಗ ಮಾಡುತ್ತಾನೆಯೋ, ಯಾವಾಗ ಪರಮಾತ್ಮನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗಿ ಪರಮಾತ್ಮಪ್ರಸಾದದಿಂದಲೇ ಸಂತುಷ್ಟನಾಗುತ್ತಾನೆಯೋ ಆಗ ಅವನು ಅಪರೋಕ್ಷಜ್ಞಾನಿಯು ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ. ದುಃಖಗಳು ಬಂದೊದಗಿದರೂ ಸಮಾಧಾನಮನಸ್ಕನಾಗಿಯೂ, ಸುಖಸಾಧನಗಳು ಪ್ರಾಪ್ತವಾದಾಗ ಅವುಗಳ ವಿಷಯದಲ್ಲಿ ಅಪೇಕ್ಷಾರಹಿತನಾಗಿಯೂ, ಮತ್ತು ರಾಗ (ದುಷ್ಟಪದಾರ್ಥಗಳಲ್ಲಿ ಉತ್ತಮತ್ವಬುದ್ಧಿ), ಭಯ, ಕ್ರೋಧಾದಿಗಳಿಂದ ರಹಿತನಾದವನು ಅಪರೋಕ್ಷಜ್ಞಾನಿಯೆನ್ನಿಸುವನು. ಯಾವಾತನು ಸರ್ವ ವಿಷಯಗಳಲ್ಲಿಯೂ ಸ್ನೇಹರಹಿತನಾಗಿರುವನೋ, ಆದುದರಿಂದಲೇ ಶುಭವಿಷಯಪ್ರಾಪ್ತಿಯಿಂದ ಅತ್ಯಂತ ಆನಂದವನ್ನೂ ಅಶುಭವಿಷಯಪ್ರಾಪ್ತಿಯಿಂದ ದ್ವೇಷವನ್ನೂ ಹೊಂದುವುದಿಲ್ಲವೋ, ಅವನು ಅಪರೋಕ್ಷಜ್ಞಾನಿಯೆನ್ನಿಸುವನು. ಮತ್ತು ಯಾವಾತನು ಯಾವಾಗ ಇಂದ್ರಿಯವಿಷಯಗಳಾದ ಶಬ್ದಸ್ಪರ್ಶರೂಪ ರಸಗಂಧಗಳಿಂದ ಶ್ರೋತ್ರಾದಿ ಇಂದ್ರಿಯಗಳನ್ನು ಕೂರ್ಮವು ತನ್ನ ಕರ ಚರಣಗಳನ್ನು ಉಪಸಂಹಾರಮಾಡಿಕೊಳ್ಳುವಂತೆ, ವಿಷಯಗಳಲ್ಲಿ ಆಸಕ್ತವಾಗ

ದಂತೆ ಉಪಸಂಹರಿಸುವನೋ, ಅವನು ಅಪರೋಕ್ಷಜ್ಞಾನಿಯೆನ್ನಿಸುವನು. (ಇವುಗಳೆಲ್ಲಾ ಅಪರೋಕ್ಷಜ್ಞಾನಿಯ ಲಕ್ಷಣಗಳೆಂದು ತಾತ್ಪರ್ಯವು.)

"ವಿಷಯಗಳಲ್ಲಿ ಕಾಮನಿವೃತ್ತಿಯಿಂದ ಜ್ಞಾನವನ್ನು ಸಂಪಾದಿಸುವುದಾದರೆ, ಸರ್ವರೂ ಏತಕ್ಕೆ ಜ್ಞಾನಿಗಳಾಗುವುದಿಲ್ಲವೆಂದರೆ ಹೇಳುತ್ತಾನೆ. * ಜೀವನು ನಿರಾಹಾರನಾಗಿ ಇದ್ದರೆ ಇಂದ್ರಿಯಗಳಲ್ಲಿರುವ ವಿಷಯಭೋಗ ಶಕ್ತಿಯು ಕುಂಠಿತವಾಗುವುದು. ಆದರೂ ರಸನೇಂದ್ರಿಯದ ಭೋಗಶಕ್ತಿಯೂ ಮಾನಸಿಕವಿಷಯಾಭಿಲಾಷೆಯೂ ನಿವೃತ್ತವಾಗುವುದಿಲ್ಲ. ವಿಷಯಕಾಮವು ಪರಬ್ರಹ್ಮದರ್ಶನದಿಂದಲೇ ನಿವೃತ್ತವಾಗುವುದು. (ಆದುದರಿಂದ ಕೇವಲ ನಿರಾಹಾರತ್ವಾದಿ ಪ್ರಯತ್ನಗಳಿಂದಲೂ ವಿಷಯಕಾಮಸಾರಾಹಿತ್ಯವನ್ನು ಹೊಂದುವುದಕ್ಕಾಗುವುದಿಲ್ಲ. ಅತಏವ ಎಲ್ಲರೂ ಸುಲಭವಾಗಿ ವಿಷಯಾಪೇಕ್ಷಾರಹಿತರಾಗಿ ಜ್ಞಾನಿಗಳಾಗಲಾರರು ಎಂದು ಭಾವವು.) ಇದರಿಂದ ನಿರಾಹಾರತ್ವಾದಿ ಅನೇಕ ಪ್ರಯತ್ನಗಳನ್ನು ಮಾಡಿ, ಇಂದ್ರಿಯಜಯವನ್ನು ಕಷ್ಟದಿಂದ ಸಂಪಾದಿಸಿ, ವಿಷಯಾಪೇಕ್ಷೆಯನ್ನು ಬಿಡಬೇಕೆಂದು ಶ್ರೀಕೃಷ್ಣನು ಬೋಧಿಸಿದಂತಾಯಿತು. ಆದರೆ ನಿರಾಹಾರತ್ವಾದಿಭಯಂಕರ ಪ್ರಯತ್ನಗಳು ಏತಕ್ಕೆ? ಪ್ರತ್ಯಾಹಾರಾದಿಸಾಧಾರಣಪ್ರಯತ್ನದಿಂದಲೇ ಇಂದ್ರಿಯಜಯವು ಸಾಧ್ಯವಾಗಲಾರದೇ ಎಂಬ ಶಂಕೆಗೆ ಶ್ರೀಕೃಷ್ಣನು ಸಮಾಧಾನವನ್ನು ಹೇಳುತ್ತಾನೆ:— ಎಲೈ ಕೌಂತೇಯನೇ! ಪ್ರತ್ಯಾಹಾರಾದಿಪ್ರಯತ್ನಶೀಲನಾದ ಪರೋಕ್ಷಜ್ಞಾನಿಯಾದ ಪುರುಷನಿಗೂ ಕೂಡ ಇಂದ್ರಿಯಗಳು ಪ್ರಮಥನಶೀಲಗಳು; ಎಂದರೆ, ಬಲವಂತವಾಗಿ ಮನಸ್ಸನ್ನು ವಿಷಯಗಳಲ್ಲಿ ಹೋಗುವಂತೆ ಆಕರ್ಷಣೆಮಾಡುತ್ತವೆ. (ಆದುದರಿಂದ ನಿರಾಹಾರತ್ವಾದಿ ಮಹಾಪ್ರಯತ್ನಗಳಿಂದಲೇ ಇಂದ್ರಿಯಜಯವನ್ನು ಸಂಪಾದಿಸಿ ವಿಷಯಕಾಮವನ್ನು ಪರಿಹರಿಸಿಕೊಳ್ಳಬೇಕು ಎಂದು ಭಾವವು.) —(60. 11.)

---

* ಇದೇ ಮೊದಲು ಮಾಡಿ "**ಯಾ ನಿಶಾ**" ಎಂಬ ಶ್ಲೋಕಪರ್ಯಂತವೂ ಇಂದ್ರಿಯಜಯ, ಮನಃಪ್ರಸಾದಾದಿಗಳೂ ಅಪರೋಕ್ಷಜ್ಞಾನಸಾಧನಗಳೆಂದು ಹೇಳಿ ಅವುಗಳು ಉತ್ಪನ್ನವಾಗುವ ಪ್ರಕಾರವನ್ನೂ, ನಿರಾಹಾರತ್ವ, ಪ್ರತ್ಯಾಹಾರ, ಭಗವಂತನಲ್ಲಿ ಮನೋಯೋಗರೂಪವಾದ ಉಪಾಯಗಳನ್ನೂ ಶ್ರೀಕೃಷ್ಣನು ಹೇಳಿರುತ್ತಾನೆ. ಈ ಅನುಷ್ಠಾನಗಳಿಂದ ಜ್ಞಾನಿಯು ಬ್ರಹ್ಮದರ್ಶನವನ್ನು ಹೊಂದಿರುವನು. ಪ್ರಸಂಗಸಂಗತಿಯಿಂದ ಈ ಶ್ಲೋಕಗಳು ಇಲ್ಲಿ ಉದಾಹೃತವಾಗಿ ವ್ಯಾಖ್ಯಾತವಾಗಿರುವುವು.

"ನಿರಾಹಾರತ್ವವು ಅಶಕ್ಯಸಾಧನವು. ಪ್ರತ್ಯಾಹಾರಾದಿಗಳು ದುರ್ಬಲ ಸಾಧನಗಳು. ಕಿಂಚ ಬ್ರಹ್ಮದರ್ಶನದಿಂದಲೇ ಇಂದ್ರಿಯಜಯಾದಿಗಳು, ಇಂದ್ರಿಯಜಯದಿಂದ ಬ್ರಹ್ಮಾಪರೋಕ್ಷಜ್ಞಾನವು, ಹೀಗೆ ಅನ್ಯೋನ್ಯಾಶ್ರಯವು ಬರುವುದು. ಇತ್ಯಾದಿ ರೀತಿಯಾಗಿ ಪ್ರಾಪ್ತವಾದ ಮಂದರ ಶಂಕೆಯನ್ನು ಶ್ರೀಕೃಷ್ಣನು ಪರಿಹರಿಸುತ್ತಾನೆ:— ಯದ್ಯಪಿ ಪ್ರತ್ಯಾಹಾರಾದಿಪ್ರಯತ್ನಗಳು ಮುಖ್ಯಸಾಧನವಲ್ಲ. ಆದರೆ ನಿರಾಹಾರತ್ವಾದಿಪ್ರಯತ್ನವು ಅಶಕ್ಯವಲ್ಲ. ಹೀಗಿದ್ದರೂ ಇವುಗಳಿಂದಲೂ ಸಾಧ್ಯವಲ್ಲದ ಇಂದ್ರಿಯಜಯವು ಇವುಗಳಿಗೆಲ್ಲಾ ಪ್ರತಿನಿಧಿಯಾದ ಪರಮಾತ್ಮನ ಸರ್ವೋತ್ತಮತ್ವಜ್ಞಾನಪೂರ್ವಕವಾದ ನಿರಂತರ ಮನೋಯೋಗದಿಂದ ಬರುವುದೆಂದು, ಶ್ರೀಕೃಷ್ಣನು ಅನ್ಯೋನ್ಯಾಶ್ರಯರಹಿತವಾದ ಸಮಾಧಾನವನ್ನು ಹೇಳುತ್ತಾನೆ:— ಮೋಕ್ಷಾಧಿಕಾರಿಯು ಸರ್ವೇಂದ್ರಿಯಗಳನ್ನೂ ವಿಷಯಗಳ ದೆಸೆಯಿಂದ ಉಪಸಂಹರಿಸಿ ಮತ್ಪರಃ – ಶ್ರೀಕೃಷ್ಣನೇ ಸರ್ವೋತ್ತಮನೆಂದು ತಿಳಿದು, ಯುಕ್ತ ಆಸೀತ– ಪುನಃ ಪುನಃ ಪರಮಾತ್ಮನಲ್ಲಿ ಮನಸ್ಸನ್ನು ಯೋಜನೆಮಾಡುತ್ತಾ ಇರಬೇಕು. ಯಾರಿಗೆ ಇಂದ್ರಿಯಗಳು ವಶದಲ್ಲಿರುವುವೋ, ಅವನಿಗೆ (ಮನಃಪ್ರಸಾದದ್ವಾರಾ) ಬ್ರಹ್ಮಾಪರೋಕ್ಷಜ್ಞಾನವು ಉಂಟಾಗುವುದು. (ಏವಂ ಚ ದುಃಖದರ್ಶನಾದಿಗಳಿಂದ ಸ್ವಲ್ಪ ವಿಷಯಜಿಹಾಸೆಯುಳ್ಳವನು, ಪರಮಾತ್ಮನ ಪಾದಮೂಲದಲ್ಲಿ ಪುನಃ ಪುನಃ ಮನಸ್ಸನ್ನು ಇಡೋಣವೆಂಬ ಯೋಗದಿಂದ ಪೂರ್ಣ ಜಿತೇಂದ್ರಿಯತ್ವವನ್ನೂ, ಮನಸ್ಸು **ಸ್ವತ ಏವ** ವಿಷಯಗಳಲ್ಲಿ ಹೋಗದೆ ಇರೋಣವೆಂಬ ಮನಃಪ್ರಸಾದವನ್ನೂ ಹೊಂದಿ, ಕ್ಷಿಪ್ರದಲ್ಲಿ ಬ್ರಹ್ಮಜ್ಞಾನಿಯಾಗುತ್ತಾನೆ ಎಂದು ಭಾವವು.) —(61.)

ಇಂಥಾ **ಮನೋಯೋಗ**ರಹಿತನಾದವನು ಬಹುಶಾಸ್ತ್ರಜ್ಞಾನಿಯಾದರೂ ಬ್ರಹ್ಮದರ್ಶನವನ್ನು ಮಾಡಲು ಸಮರ್ಥನಾಗಲಾರನೆಂಬಲ್ಲಿ ಕಾರಣವನ್ನು ಶ್ರೀಕೃಷ್ಣನು ನಿರೂಪಿಸುತ್ತಾನೆ:— ಯಾರ ಇಂದ್ರಿಯಗಳು ಯಥೇಷ್ಟವಾಗಿ ವಿಷಯಗಳಲ್ಲಿ ಸಂಚರಿಸುತ್ತಿರುವುವೋ ಅಂಥವರ ಮನಸ್ಸನ್ನು ಶ್ರೀಪರಮಾತ್ಮನು ಆ ಇಂದ್ರಿಯಗಳ ಸಂಗಡಲೇ ಹೋಗುವಂತೆ ಮಾಡುತ್ತಾನೆ. (ಇಂದ್ರಿಯಗಳು ವಿಷಯಗಳಲ್ಲಿ ರತವಾದರೆ ಮನಸ್ಸೂ ನಿಯಮೇನ ವಿಷಯಗಳಲ್ಲಿ ರತವಾಗುವುದು, ಎಂದು ಭಾವವು.) ಈ ಪ್ರಕಾರ ವಿಷಯಾಸಕ್ತವಾದ ಮನಸ್ಸು, ವಾಯುವು ಜಲದಲ್ಲಿ ನಾವೆಯನ್ನು ಉರುಳಿಸುವಂತೆ ಅಧಿಕಾರಿಯ ಪರೋಕ್ಷತತ್ವನಿಶ್ಚಯವನ್ನು ಹರಣಮಾಡುತ್ತದೆ, ಎಂದರೆ, ಉತ್ಪತ್ತಿಗೆ ಅವಕಾಶಕೊಡು

ವುದಿಲ್ಲ. ಉತ್ಪನ್ನವಾದರೂ ಅಪರೋಕ್ಷಜ್ಞಾನೋತ್ಪತ್ತಿಯಲ್ಲಿ ಸಮರ್ಥವಾಗ ದಂತೆ ಮಾಡುವುದು. ಆದುದರಿಂದ ಎಲೈ ಮಹಾಬಾಹುವೇ! ಯಾವಾತನ ಸರ್ವೇಂದ್ರಿಯಗಳೂ ಇಂದ್ರಿಯವಿಷಯಗಳಿಂದ ನಿವರ್ತಿಸಲ್ಪಟ್ಟಿರುವುವೋ ಆತ ನಿಗೆ ಅಪರೋಕ್ಷಜ್ಞಾನವು ಶೀಘ್ರದಲ್ಲಿ ಹುಟ್ಟುತ್ತದೆ. ‡ —(67. 68.)

ಮುಖ್ಯವಾದ ಜ್ಞಾನಿಲಕ್ಷಣವನ್ನು ಸಂಗ್ರಹವಾಗಿ ಶ್ರೀಕೃಷ್ಣನು ಹೇಳು ತ್ತಾನೆ:— ಯಾವ ಪರಮಾತ್ಮಸ್ವರೂಪವನ್ನು ಸರ್ವರೂ ಅಂಧಕಾರಸ್ಥವಸ್ತು ವಿನಂತೆ ತಿಳಿಯುವುದಿಲ್ಲವೋ ಅಂಥಾ ಪರಬ್ರಹ್ಮವಿಷಯದಲ್ಲಿ ಜಿತೇಂದ್ರಿಯನಾದ ಜ್ಞಾನಿಯು ಸದಾ ಜಾಗರೂಕನಾಗಿರುತ್ತಾನೆ. ಜ್ಞಾನಿಯು ಸರ್ವದಾ ಭಗವದ್ಧ್ಯಾನದಲ್ಲಿ ಆಸಕ್ತನಾಗಿರುತ್ತಾನೆಂದು ಭಾವವು. ಯಾವ ವಿಷಯ ಪ್ರಪಂಚದಲ್ಲಿ ಸರ್ವ ಪ್ರಾಣಿಗಳೂ ಆಸಕ್ತಿಯಿಂದ ಮಗ್ನರಾಗಿರುವರೋ ಆ ವಿಷಯವನ್ನು ಮನನಶೀಲನಾದ ಬ್ರಹ್ಮಾಪರೋಕ್ಷಜ್ಞಾನಿಯು ಅಂಧಕಾ ರಸ್ಥವಸ್ತುವಿನಂತೆ ತಿಳಿಯುವುದಿಲ್ಲ. —(69.)

"ಜ್ಞಾನಿಯು ವಿಷಯಾನುಭವವನ್ನು ಮಾಡುವ ಪ್ರಕಾರವನ್ನು ಶ್ರೀ ಕೃಷ್ಣನು ವರ್ಣಿಸುತ್ತಾನೆ:— ನಾನಾ ನದೀಜಲಗಳಿಂದ ಪೂರಿತವಾದರೂ ಅಚಲಪ್ರತಿಷ್ಠವಾದ, ಎಂದರೆ, ನದೀಪ್ರವೇಶದಿಂದ ಹೆಚ್ಚು ವೃದ್ಧಿಯನ್ನಾಗಲೀ, ಅಪ್ರವೇಶದಿಂದ ಅತ್ಯಂತ ಹ್ರಾಸವನ್ನಾಗಲೀ ಹೊಂದದೇ ನದೀಪ್ರವೇಶಾರ್ಥವಾಗಿ ಪ್ರಯತ್ನಮಾಡದ, ಶಶ್ವದೇಕಪ್ರಕಾರವಾದ, ಗಂಭೀರವಾದ ಸಮುದ್ರವನ್ನು ನದಿಗಳು ಪ್ರವೇಶಿಸುವಂತೆ ಯಾವ ಪುರುಷನನ್ನು ವಿಷಯಗಳು ಪ್ರವೇಶಿಸು ವುವೋ, ಅಂಥಾ ಜ್ಞಾನಿಯು ಮೋಕ್ಷವನ್ನು ಹೊಂದುತ್ತಾನೆ. ವಿಷಯಾ ಪೇಕ್ಷೆಯುಳ್ಳವನು ಮುಕ್ತನಾಗುವುದಿಲ್ಲ. ಯಾವಾತನು ದುರ್ವಿಷಯೇಚ್ಛಾ ರಹಿತನಾಗಿ ಅಹಂತಾಮಮತಾದಿಗಳನ್ನು ಬಿಟ್ಟು ವಿಷಯಗಳನ್ನು ದೇಹಧಾರ ಣಾರ್ಥವಾಗಿ ಮಾತ್ರ ಭಕ್ಷಿಸುತ್ತಾನೆಯೋ ಅಂಥಾ ಜ್ಞಾನಿಯು ಮೋಕ್ಷ ವನ್ನು ಹೊಂದುತ್ತಾನೆ. ಎಲೈ ಪಾರ್ಥನೇ! ಇದು ಬ್ರಹ್ಮಜ್ಞಾನಿಯು

---

‡ ಇಂದ್ರಿಯಜಯ, ಪ್ರಾಯೇಣ ಸರ್ವಕಾಮರಾಹಿತ್ಯ, ಆತ್ಮಪ್ರಸಾದದಿಂದಲೇ ತುಷ್ಟಿ ಮುಂತಾದ ಜ್ಞಾನಿಲಕ್ಷಣಗಳನ್ನು ಇಲ್ಲಿ ಹೇಳಿರುವದು ಪ್ರಕೃತವು. ಇಂದ್ರಿಯಜಯದ ಪ್ರಾಪ್ತಿ ಸಾಧನ, ಅಪರೋಕ್ಷಜ್ಞಾನಸಾಧನ ಮುಂತಾದುವುಗಳು ಪ್ರಸಂಗಾತ್ ಹೇಳಿದುದೆಂದು ತಿಳಿಯ ಬೇಕು. ಪ್ರಕರಣವಿವರಣಸಮಯದಲ್ಲೇ ಈ ಸಮಾಧಾನೋಕ್ತಿಯು ಹೆಚ್ಚು ಸಂಗತವೆಂದು ಇಲ್ಲಿಯೇ ಈ ಶ್ಲೋಕಗಳು ಉದಾಹೃತವಾಗಿ ವ್ಯಾಖ್ಯಾತವಾಗಿರುವುವು.

ಇರುವ ರೀತಿಯು. ಈ ಸ್ಥಿತಿಯನ್ನು ಹೊಂದಿದವನು ಭವವೇದನೆಯನ್ನು ಹೊಂದುವುದಿಲ್ಲ. ಜ್ಞಾನಿಯು ಮರಣಕಾಲದಲ್ಲಿ ಭಗವದ್ಧ್ಯಾನರೂಪವಾದ ಈ ಸ್ಥಿತಿಯಲ್ಲಿದ್ದವನಾಗಿ ಪ್ರಾಕೃತಶರೀರರಹಿತನಾದ ಪರಬ್ರಹ್ಮನನ್ನು ಹೊಂದುತ್ತಾನೆ.'' —(70—72.)

ಏವಂಚ ಪ್ರಾಯೇಣ ಸರ್ವಕಾಮಪರಿತ್ಯಾಗವು ಜ್ಞಾನಿಯ ಲಕ್ಷಣವು. ಆತನು ಮತ್ತರಾದ ಜನರಂತೆ ಕಿಂಚಿತ್ ಪ್ರವೃತ್ತಿಯುಳ್ಳವನಾಗಿ ವಿಷಯ ಪ್ರಾಪ್ತಿಯಿಂದ ಹಿಗ್ಗದೆ, ವಿಷಯಲಾಭವಿಲ್ಲದಿದ್ದರೆ ಕುಗ್ಗದೆ, ಭಗವದ್ಧ್ಯಾನ ದಲ್ಲಿ ರತನಾಗಿ ಆತ್ಮದರ್ಶನಜನ್ಯಸಂತೋಷದಿಂದಲೂ ಭಗವತ್ಪ್ರಸಾದದಿಂದಲೂ, ಪೂರ್ಣನಾಗಿರುತ್ತಾನೆ. ಆದುದರಿಂದಲೇ ವಿಷಯಗಳಲ್ಲಿ ಅಲಂಬುದ್ಧಿ ಯುಳ್ಳವನಾಗಿ ಇಂದ್ರಿಯಜಯ ಮತ್ತು ಮನಃಪ್ರಸಾದಗಳಿಂದ ಜನಿತವಾದ ವೈರಾಗ್ಯಭಾಗ್ಯದಿಂದ ಸಂಪನ್ನನಾಗಿರುತ್ತಾನೆ.

**ಪ್ರಶ್ನೆ—** ಸ್ವಾಮಿ ! ಇಲ್ಲಿ ಹೇಳಿರುವ ಜ್ಞಾನಿಲಕ್ಷಣಗಳು ಬ್ರಹ್ಮಾಪರೋಕ್ಷಜ್ಞಾನರಹಿತನಾದ ನಿಷ್ಕಾಮವಾದ ಭಗವದಾರಾಧನೆಯಲ್ಲಿ ತತ್ಪರನಾದ ಭಗವದ್ಭಕ್ತನ ಲಕ್ಷಣಗಳೆಂದು ಏತಕ್ಕೆ ಹೇಳಬಾರದು ?

**ಉತ್ತರ—** ಶ್ರೀಶ್ರೀಗಳವರು— 1. ಪರಿಪೂರ್ಣವಾದ ನಿಷ್ಕಾಮತೆಯು ಭಗವದ್ದರ್ಶನವಿಲ್ಲದೆ ಬರಲಾರದು. ಇಲ್ಲಿ ಹೇಳಿರುವಂತೆ ಸಕಲಲೌಕಿಕವ್ಯಾಪಾರ ಗಳ ವಿಷಯದಲ್ಲೂ ''ನಿಶಾ''ಪ್ರಾಯವಾಗಿ ತಿಳಿಯುವುದು, ಎಂದರೆ, ಅತ್ಯಂತ ಉದಾಸೀನತೆಯನ್ನು ಹೊಂದುವುದು ; ಇದು ಭಗವದಪರೋಕ್ಷಜ್ಞಾನಿಗೇ ಸಂಭವಿಸುವುದು. 2. ಕಿಂಚ **"ಪಶ್ಯತೋ ಮುನೇಃ", "ಆತ್ಮನ್ಯೇವಾತ್ಮನಾ ತುಷ್ಟಃ"** ಎಂಬ ವಿಶೇಷಣಗಳ ಬಲದಿಂದ ಇಲ್ಲಿ ವರ್ಣಿಸಲ್ಪಟ್ಟಿರುವ ಜ್ಞಾನಿಯು, ಭಗವದಪರೋಕ್ಷವನ್ನು ಹೊಂದಿರುವ ಜೀವನ್ಮುಕ್ತನೆಂದೇ ಸಿದ್ಧಿಸುವುದು. 3. ಪರಂತು **''ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ"** ಎಂದರೆ ಸಂಪೂರ್ಣ ವಿಷಯಾಭಿಲಾಷೆಯು ಮತ್ತು ರಸನೇಂದ್ರಿಯಾಭಿಲಾಷೆಯೂ ಬ್ರಹ್ಮ ದರ್ಶನವನ್ನು ಮಾಡಿದನಂತರವೇ ಸಮಗ್ರವಾಗಿ ಹೋಗುತ್ತದೆ ಎಂದು ಯುಕ್ತಿ ಯನ್ನೂ ಹೇಳಿ, ಶ್ರೀಕೃಷ್ಣನು **'ಸ್ಥಿತಪ್ರಜ್ಞನು'** ಸಕಲವಿಷಯಾಭಿಲಾಷೆಯಿಂದ ರಹಿತನು, ಸಮುದ್ರಕ್ಕೆ ನದೀ ಪ್ರವೇಶಾಪ್ರವೇಶಗಳಿಂದ ಅತ್ಯಂತ ವೃದ್ಧಿಹಾನಿ ಗಳಿಲ್ಲದೆ ಎಂದಿನಂತೆ ಗಂಭೀರವಾಗಿ ಇರುವಂತೆ, ಜ್ಞಾನಿಯು ವಿಷಯಗಳ ಪ್ರಾಪ್ತಿಯಿಂದ ಹಿಗ್ಗದೆ ಅಪ್ರಾಪ್ತಿಯಿಂದ ಕುಗ್ಗದೇ ಇರುವನೆಂದು ಹೇಳಿರು

ವುದರಿಂದ ಇಂಥಾ ಲಕ್ಷಣವು ಅಸಂಪ್ರಜ್ಞಾತಸಮಾಧಿಯಲ್ಲಿ ಪರಬ್ರಹ್ಮನನ್ನು ದರ್ಶನ ಮಾಡದಿರುವ ಸಾಮಾನ್ಯ ಜ್ಞಾನಿಯಲ್ಲಿ ಅಸಂಭಾವಿತವು. 4. ಪರಂತು ಸ್ಥಿತಪ್ರಜ್ಞನೆಂಬ ಹೆಸರಿನಿಂದ ಜ್ಞಾನಿಯನ್ನು ವರ್ಣನೆ ಮಾಡಿ ಆ ಜ್ಞಾನಿಯು ಅಂತ್ಯದಲ್ಲಿ ಭಗವದನುಸ್ಮೃತಿಪ್ರಭಾವದಿಂದ ಮುಕ್ತನಾಗುತ್ತಾನೆ, ಎಂದು ಹೇಳಿರುವುದೇ ಹೊರತು, ಬ್ರಹ್ಮಜ್ಞಾನವನ್ನು ಸಂಪಾದಿಸಿ ಮುಕ್ತನಾಗುವನು ಎಂದು ಹೇಳಲಿಲ್ಲ. ಸ್ಥಿತಪ್ರಜ್ಞನು ನಿಷ್ಕಾಮಕರ್ಮಿಯಾಗಿದ್ದರೆ ಅಂತ್ಯ ಶ್ಲೋಕದಲ್ಲಿ ಶ್ರೀಕೃಷ್ಣನು ಈ ಬ್ರಾಹ್ಮೀಸ್ಥಿತಿಯನ್ನು ಹೊಂದಿದವನು **'ಜ್ಞಾನಂ ಪ್ರಾಪ್ಯ ನಿರ್ವಾಣಂ ಬ್ರಹ್ಮಾಧಿಗಚ್ಛತಿ'** ಎಂದರೆ ಜ್ಞಾನವನ್ನು ಹೊಂದಿ ನಿರ್ವಾಣಬ್ರಹ್ಮನನ್ನು ಹೊಂದುತ್ತಾನೆ ಎಂದು ಹೇಳುತ್ತಿದ್ದನು. ಆದುದರಿಂದ ಈ ಪ್ರಕರಣದಲ್ಲಿ ಶ್ರೀಕೃಷ್ಣನು ಜೀವನ್ಮುಕ್ತನಾದ ಬ್ರಹ್ಮಾಪರೋಕ್ಷಜ್ಞಾನಿಯನ್ನೇ ವರ್ಣಿಸಿರುತ್ತಾನೆ.

**ಪ್ರಶ್ನೆ—** ಸ್ವಾಮಿ! ಹೀಗೆಯೇ ಇನ್ನೂ ಸ್ಪಷ್ಟವಾಗಿ ಜ್ಞಾನಿಯು ಕೂಡಲೇ ಮುಕ್ತನಾಗದೆ, ಪರಮಾತ್ಮನ ಪೂರ್ಣಪ್ರಸಾದಾರ್ಥವಾಗಿ ಕಾದುಕೊಂಡಿರುವನೆಂದು ಶ್ರೀಕೃಷ್ಣನು ಎತ್ತೆಲ್ಲಿ ಹೇಳಿರುವನು?

**ಉತ್ತರ—** ಶ್ರೀಶ್ರೀಗಳವರು— 5. ಏಳನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ಜ್ಞಾನವನ್ನು ಹೊಂದಿದವನು ತತ್ಕಾಲದಲ್ಲಿ ಮುಕ್ತನಾಗುವನು ಎಂದು ಹೇಳದೆ, ಪರಮಾತ್ಮನ ಪ್ರೀತಿಗೆ ಪಾತ್ರನಾಗಿ ಇನ್ನೂ ಬದುಕಿರುವನು ಎಂದೇ ಶ್ರೀಕೃಷ್ಣನು ಸೂಚಿಸಿರುತ್ತಾನೆ. ಶ್ರೀಕೃಷ್ಣನು ಹೇಳುತ್ತಾನೆ:—

(6) **"ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।**
**ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ।**
**ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ ।**
**ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ ॥**
—(7.17—18.)

**ಅರ್ಥ—** ಎಲೈ ಅರ್ಜುನನೇ! ನಾಲ್ಕು ವಿಧರಾದ ಜನರು ನನ್ನನ್ನು ಭಜಿಸುತ್ತಾರೆ. ಅವರ ಮಧ್ಯದಲ್ಲಿ ಸದಾ ಭಗವದ್ಧ್ಯಾನರತನಾದ, ನನ್ನಲ್ಲಿ ಭಕ್ತಿಯೇ ಪ್ರಧಾನವಾಗಿ ಉಳ್ಳ ಜ್ಞಾನಿಯು ಶ್ರೇಷ್ಠನು. ಜ್ಞಾನಿಗೆ ನಾನು ಅತ್ಯಂತ ಪ್ರಿಯನು. ನನಗೂ ಆತನು ಪ್ರಿಯನು. ಚತುರ್ವಿಧ ಭಕ್ತರೂ ಉತ್ತಮರೇ.

ಆದರಲ್ಲೂ ಜ್ಞಾನಿಯುನ್ನಾದರೋ ನಾನು ನನ್ನ ದೇಹವೆಂದೇ ತಿಳಿಯುತ್ತೇನೆ. (ನನಗೆ ಪರಮಪ್ರೀತಿ ವಿಷಯನೆಂದು ಭಾವವು.) ಏಕೆಂದರೆ ಜ್ಞಾನಿಯು ಅತ್ಯುತ್ತಮಗತಿಯನ್ನು (ಮೋಕ್ಷವನ್ನು) ಅಪೇಕ್ಷಿಸುವವನಾಗಿ, ನನ್ನನ್ನು ಕುರಿತು ಉಪಾಸನೆ ಮಾಡುವವನಾಗಿದ್ದಾನೆ.

ಈ ರೀತಿಯಾಗಿ ಜ್ಞಾನಿಯು ನನಗೆ 'ಪ್ರಿಯ'ನೆಂದು ಶ್ರೀಕೃಷ್ಣನು ಹೇಳಿ ಜ್ಞಾನಿಯು ಪ್ರಿಯನಾಗುವುದರಲ್ಲಿ ಯುಕ್ತಿಯನ್ನೂ ಹೇಳಿರುತ್ತಾನೆ. ಜ್ಞಾನಿಯು ಅತ್ಯುತ್ತಮಗತಿಯಾದ ನನ್ನನ್ನು ಧ್ಯಾನಮಾಡುತ್ತಾ ಯೋಗಾರೂಢನಾದ ಮನಸ್ಸುಳ್ಳವನಾಗಿರುತ್ತಾನೆ, ಎಂದು ಶ್ರೀಕೃಷ್ಣನು ಹೇಳಿರುವನು. ಜ್ಞಾನಿಯು ಭಗವದಪರೋಕ್ಷಜ್ಞಾನಪ್ರಭಾವದಿಂದ ಮನ ಆದಿ ಸರ್ವ ಇಂದ್ರಿಯಬಂಧಗಳಿಂದಲೂ ರಹಿತನಾಗಿ ಬ್ರಹ್ಮನಲ್ಲಿ ಲೀನವಾಗುವ ಸದ್ಯೋಮುಕ್ತಿಯನ್ನು ಹೊಂದುವುದಾದರೆ ಆತನು **'ಯುಕ್ತಾತ್ಮ'**ನಾಗಿ ಅವನನ್ನೇ ನಂಬಿಕೊಂಡಿರುವುದೆಲ್ಲಿಂದಬಂತು ? ಹದಿನೆಂಟನೆಯ ಅಧ್ಯಾಯದಲ್ಲೂ ಶ್ರೀಕೃಷ್ಣನು ಹೀಗೆಯೇ ಹೇಳಿರುತ್ತಾನೆ:—

(7) **ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ ॥**
—(18. 55)

ಧ್ಯಾನವೈರಾಗ್ಯಗಳಿಂದ ಸಹಿತವಾದ ಭಕ್ತಿಯಿಂದ ಅಧಿಕಾರಿಯು ನನ್ನ ದೇಶತಃ ಕಾಲತಃ ಗುಣತಃ ವ್ಯಾಪ್ತಿಯನ್ನೂ ನನ್ನ ಯಥಾರ್ಥರೂಪವನ್ನೂ ಚೆನ್ನಾಗಿ ತಿಳಿದು (ನೋಡಿ) ಹಾಗೆ ನನ್ನನ್ನು ತಿಳಿದ ಮೇಲೆ, **ತತೋ= ಅನಂತರ** (ಎಂದರೆ ಪುನಃ ಉದ್ರಿಕ್ತಭಕ್ತಿಯಿಂದ ನನ್ನನ್ನು ಧ್ಯಾನಮಾಡಿ) ವಿಶತೇ = ನನಲ್ಲಿ ಪ್ರವೇಶಿಸುತ್ತಾನೆ, ಮುಕ್ತನಾಗುತ್ತಾನೆ ಎಂದು ಅರ್ಥವು.

ಬ್ರಹ್ಮಜ್ಞಾನವನ್ನು ಸಂಪಾದಿಸಿದ ಮತ್ತು ಗುಣಕಾರ್ಯವನ್ನು ಪ್ರಾಯೇಣ ವಿಾರಿದ ಭಕ್ತನು ಲೋಕದಲ್ಲಿ ಇರುವ ರೀತಿಯನ್ನು ಹದಿನಾಲ್ಕನೆಯ ಅಧ್ಯಾಯದಲ್ಲಿಯೂ ಸಹ ಶ್ರೀಕೃಷ್ಣನು ವರ್ಣನೆಮಾಡಿರುತ್ತಾನೆ. ಇಲ್ಲಿಯೂ ಶ್ರೀಕೃಷ್ಣಾರ್ಜುನರ ಸಂವಾದವು ಹೀಗೆ ನಡೆದಿರುತ್ತದೆ:—

(8) **ಅರ್ಜುನ ಉವಾಚ—**

**ಕೈರ್ಲಿಂಗೈಸ್ತ್ರೀನ್ ಗುಣಾನೇತಾನತೀತೋ ಭವತಿ ಪ್ರಭೋ ।**
**ಕಿಮಾಚಾರಃ** .... .... .... .... ....? ॥

**ಶ್ರೀಭಗವಾನುವಾಚ—**

**ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ।**
**ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ।**
**ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ।**
**ಗುಣಾವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ।**
**ಸಮದುಃಖಸುಖಸ್ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ।**
**ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ।**
**ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ।**
**ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ॥**—(14. 21—25.)

**ಅರ್ಥವು—** (ಈ ಪ್ರಕರಣದಲ್ಲಿ ಗುಣಾತೀತನೆಂದರೆ ಸತ್ವಾದಿಗುಣವಿಕಾರ ನಿಮಿತ್ತಕವಾಗಿ ಸ್ವರೂಪವಿಕಾರವನ್ನು (ನೀಚೋಚ್ಚತೆಗಳನ್ನು) ಹೊಂದದ ಜ್ಞಾನಿಯು ಎಂದರ್ಥವು.) ಅರ್ಜುನನು ಕೇಳುತ್ತಾನೆ—

ಎಲೈ ಸ್ವಾಮಿಯೇ! ತ್ರಿಗುಣವಿಕಾರಗಳನ್ನು ಜಯಿಸಿದ ಜ್ಞಾನಿಯು ಯಾವ ಲಕ್ಷಣಗಳಿಂದ ಇರುತ್ತಾನೆ? ಅವನು ಯಾವ ಆಚಾರವುಳ್ಳವನಾಗಿ ರುವನು?

ಶ್ರೀಕೃಷ್ಣನು ಹೇಳುತ್ತಾನೆ— ಎಲೈ ಪಾಂಡುನಂದನನೇ! ಗುಣಾತೀತ ನಾದ ಜ್ಞಾನಿಯು, ಸ್ಥೂಲವಾದ ಸತ್ವರಜಸ್ತಮೋಗುಣಗಳಿಂದ ಕ್ರಮವಾಗಿ ಪ್ರಾಪ್ತವಾಗುವ ಲೌಕಿಕ ಜ್ಞಾನ, ಲೌಕಿಕ ಪ್ರವೃತ್ತಿ, ಮತ್ತು ಲೌಕಿಕ ವಿಷ ಯಕ ಅಜ್ಞಾನ, ಇವುಗಳು (ವಿಷ್ಣುಧ್ಯಾನಕ್ಕೆ ಅವಿರುದ್ಧವಾಗಿ) ಪ್ರಾಪ್ತವಾದರೆ ದ್ವೇಷಮಾಡುವುದಿಲ್ಲ; ಇವುಗಳು ಪ್ರಾಪ್ತವಾಗದಿದ್ದರೆ ಅಥವಾ ನಿವೃತ್ತವಾ ದರೆ (ಕೇವಲ ವಿಷ್ಣುಧ್ಯಾನಕ್ಕೆ ಅವುಗಳು ಅಪೇಕ್ಷಿತವಲ್ಲವಾದುದರಿಂದ) ಪುನಃ ಅವುಗಳನ್ನು ಹೊಂದಬೇಕೆಂದು ಅಪೇಕ್ಷಿಸುವುದಿಲ್ಲ. * ಉದಾಸೀನನೋಪಾ

---

* ಜ್ಞಾನಿಯು ಸೂಕ್ಷ್ಮಸತ್ತ್ವರಜಸ್ತಮೋಗುಣಗಳಿಂದ ಕ್ರಮವಾಗಿ ಉಂಟಾಗುವ ವಿಷ್ಣು ವಿಷಯಕಪ್ರಕಾಶಪ್ರವೃತ್ತಿಮೋಹಗಳಲ್ಲಿ ವಿಷ್ಣುವಿಷಯಕಪ್ರವೃತ್ತಿಗಳನ್ನು ಆದರಪೂರ್ವಕವಾಗಿ ಅಪೇಕ್ಷಿಸುತ್ತಾನೆ. ವಿಷ್ಣುವಿಷಯಕಮೋಹವನ್ನು ದ್ವೇಷಿಸುತ್ತಾನೆ, ಎಂದು ತಿಳಿಯಬೇಕು. ಈ ಶ್ಲೋಕಕ್ಕೆ ಪ್ರಕಾರಾಂತರವಾದ ಅರ್ಥವನ್ನೂ ಮಾಡಬಹುದು. ಜ್ಞಾನಿಯು ಸಾಧುಜನರಿಗೆ ಪುರುಷಾರ್ಥೋಪಯೋಗಿಯಾದ ಪ್ರಕಾಶಪ್ರವೃತ್ತಿಮೋಹಗಳು ಪ್ರಾಪ್ತವಾದರೆ ದ್ವೇಷಮಾಡು

ದಿಯಲ್ಲಿ ಇರುವವನಾಗಿ, ಎಂದರೆ, ದುರ್ವಿಷಯಗಳಲ್ಲಿ ಉದಾಸೀನನಾಗಿ ವೈಷ್ಣವ ಧರ್ಮಗಳ ವಿಷಯದಲ್ಲಿ ಜಾಗರೂಕನಾಗಿಯೇ ಇರುವವನಾಗಿ, ಗುಣಕೃತ ವಿಕಾರಗಳಿಂದ ಚಲನವನ್ನು ಹೊಂದದೆ, ಸತ್ವಾದಿಗುಣಗಳೂ ದೇಹೇಂದ್ರಿಯಾದಿಗಳೂ ಪರಮಾತ್ಮನ ಇಚ್ಛೆಯಿಂದಲೇ ಪ್ರವೃತ್ತವಾಗುತ್ತವೆ ಎಂದು ತಿಳಿದು ಅವೈಷ್ಣವವ್ಯಾಪಾರಾರ್ಥವಾಗಿ ಪ್ರವರ್ತಿಸುವುದಿಲ್ಲ. ಜ್ಞಾನಿಯು ವೈಷಯಿಕಸುಖವೂ ಮೋಕ್ಷವಿರೋಧಿಯಾದುದರಿಂದ ದುಃಖದಂತೆ ಅನಿಷ್ಟವೆಂದೇ ತಿಳಿದಿರುವನು. ಅವನು ನಿರ್ವಿಕಾರನು, ಮಣ್ಣುಕಲ್ಲುಗಳಿಗೆ ಸಮವಾಗಿ ಭಂಗಾರವನ್ನು ತಿಳಿದವನು. (ದ್ರವ್ಯಾಶಾರಹಿತನೆಂದು ಭಾವವು) ಲೌಕಿಕ ಪ್ರಿಯಗಳನ್ನು ಅಪ್ರಿಯತುಲ್ಯವಾಗಿ ತಿಳಿದವನು, ಧೀರನು, ನಿಂದಾತುಲ್ಯವಾಗಿ ಆತ್ಮಸ್ತುತಿಗಳನ್ನು ತಿಳಿದವನು; ಮಾನಾಪಮಾನಗಳು ಯಾವುದು ಪ್ರಾಪ್ತವಾದರೂ ಸಮವಾದ ವಿಷ್ಣುಭಕ್ತಿಯುಳ್ಳವನು. ಮಿತ್ರರಲ್ಲಿಯೂ ಶತ್ರುಗಳಲ್ಲಿಯೂ ಸಮನು, ಎಂದರೆ, ಯಾರು ಪ್ರಾಪ್ತರಾದರೂ ಸಮವಾದ ವಿಷ್ಣುಭಕ್ತಿಯುಳ್ಳವನು. ಗುಣಾತೀತನು ಸರ್ವ ಅವೈಷ್ಣವ ಉದ್ಯೋಗಗಳನ್ನೂ ಪರಿತ್ಯಾಗಮಾಡಿರುವನು.

ಈ ರೀತಿಯಾಗಿ ಸಕಲದುರುದ್ಯೋಗಗಳನ್ನು ತ್ಯಜಿಸಿ ಜ್ಞಾನಿಯು ಕೇವಲ ಹರಿಪಾದವಿನಮ್ರವಾದ ಚಿತ್ತವುಳ್ಳವನಾಗಿರುವನೆಂದು ಹೇಳಲ್ಪಟ್ಟಿರುವುದೇ ಹೊರತು, ತನ್ನ ಜ್ಞಾನಪ್ರಭಾವದಿಂದಲೇ ಸದ್ಯೋಮುಕ್ತಿಯನ್ನು ಹೊಂದುವನೆಂದು ಹೇಳಿರುವುದಿಲ್ಲ.

ಕಿಂಚ 6. ಅಪರೋಕ್ಷಜ್ಞಾನಿಗಳು ವಿಲಕ್ಷಣಭಕ್ತಿ ಮಾಡುವ ಪ್ರಕಾರವನ್ನೂ ಸಹ ಶ್ರೀಕೃಷ್ಣನು ದ್ವಾದಶಾಧ್ಯಾಯದಲ್ಲಿ ನಿರೂಪಿಸಿರುತ್ತಾನೆ. ಆ ಶ್ಲೋಕಗಳನ್ನು ಮುಂದೆ ಉದಾಹರಿಸುವೆವು. ಜ್ಞಾನಪ್ರಾಪ್ತಿ ಕ್ಷಣದಲ್ಲಿಯೇ ಮುಕ್ತಿಯಾಗುವುದಾದರೆ ಈ ವರ್ಣನೆಯು ನಿರರ್ಥಕವಾಗುವುದು. ಇದರಿಂದಲೂ ಜ್ಞಾನಿಗೆ ಇನ್ನೂ ಸಂಸಾರದಲ್ಲಿ ಸ್ವಲ್ಪ ಅವಸ್ಥಾನವು ಉಂಟೆಂದು ನಿಶ್ಚಯಿಸಬಹುದು.

---

ವುದಿಲ್ಲ. ಅಸಾಧುಜನರಿಗೆ ಉತ್ತಮಪ್ರಕಾಶಪ್ರವೃತ್ತಿಗಳು ಬರದೆ ಅವರು ನಾಶಹೊಂದಿದರೆ ಅವರಿಗೆ ಅವುಗಳು ಪ್ರಾಪ್ತವಾಗಬೇಕು, ದುಷ್ಟರಿಗೆ ಕಲ್ಯಾಣವಾಗಬೇಕು ಎಂದು ಇಚ್ಛಿಸುವುದಿಲ್ಲ. ಜ್ಞಾನಿಯು ಸಾಧುಜನರ ಏಳಿಗೆಯನ್ನು ಕೋರುತ್ತಾನೆ; ದುರ್ಜನರ ಶ್ರೇಯೋವೃದ್ಧಿಯನ್ನು ಕೋರುವುದಿಲ್ಲ ಎಂದು ಭಾವವು.

ಪರಂತು 7. ಭಗವದ್ಗೀತೆಯಲ್ಲಿ **'ಬ್ರಹ್ಮಾಣಮೀಶಂ', 'ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾಃ', 'ಮಹರ್ಷಿಸಿದ್ಧಸಂಘಾಃ'** ಇತ್ಯಾದಿಶ್ಲೋಕ ಭಾಗಗಳಲ್ಲಿ ಅನೇಕ ಉತ್ತಮದೇವತೆಗಳ ಸದ್ಭಾವವು ಪ್ರಮಿತವಾಗಿರುವುದು. ಸಕಲದೇವತೆಗಳು, ಋಷಿಗಳು, ಸಿದ್ಧರು, ಸಾಧ್ಯರು, ಗಂಧರ್ವರು ಇವ ರೆಲ್ಲರೂ ಬ್ರಹ್ಮಾಪರೋಕ್ಷಜ್ಞಾನವನ್ನು ಹೊಂದಿದವರೆಂದು ಶ್ರೀಮದ್ಭಾಗವತ ದಲ್ಲಿಯೂ ಮತ್ತು "ನೈವ ದೇವಪದಂ ಪ್ರಾಪ್ತಾ ಬ್ರಹ್ಮದರ್ಶನವರ್ಜಿತಾಃ" ಇತ್ಯಾದಿ ಬಹುಪ್ರಮಾಣವಚನಗಳಿಂದಲೂ ಪ್ರಸಿದ್ಧವಾಗಿರುತ್ತದೆ. ಇಂಥಾ ಜ್ಞಾನಿಗಳಾದ ಅನೇಕದೇವತೆಗಳೂ ಋಷಿಗಳೂ ಬ್ರಹ್ಮಧ್ಯಾನದಲ್ಲಿ ರತರಾಗಿ, ಹಗಲೂ ಇರುಳೂ ಪರಮಾತ್ಮನಾದ ವಿಷ್ಣುವಿನ ಸೇವೆಯಲ್ಲಿ ಆಸಕ್ತರಾಗಿರುವು ದರಿಂದಲೂ, ಅಪರೋಕ್ಷಜ್ಞಾನವನ್ನು ಹೊಂದಿದನೇಲೂ ಕೆಲವುಕಾಲ ಸಂಸಾರ ದಲ್ಲಿ ಅವಸ್ಥಾನವು ಪ್ರಾಮಾಣಿಕವೆಂದು ಸಿದ್ಧವಾಗುವುದು.

ಬಹುದೂರ ಏತಕ್ಕೆ ಹೋಗಬೇಕು? 8. ಮೊದಲೇ ಬ್ರಹ್ಮಜ್ಞಾನಿಯಾದ ಅರ್ಜುನನು ಪರಬ್ರಹ್ಮನಾದ ಶ್ರೀಕೃಷ್ಣನ ವಿಶ್ವರೂಪದರ್ಶನದಿಂದ ತಿರೋಹಿತ ವಾದ ತನ್ನ ದಿವ್ಯಜ್ಞಾನವನ್ನು ಪುನಃ ಪಡೆದನೆಂದು ಹೇಳುವದರಲ್ಲಿ ಸಂದೇಹಕ್ಕೇ ಕಾರಣವಿಲ್ಲ. ಬ್ರಹ್ಮಜ್ಞಾನಿಯು ಸದ್ಯೋಮುಕ್ತನಾಗಿ ನಷ್ಟಜೀವಭಾವವುಳ್ಳ ವನಾಗಿ ಸಂಸಾರದಿಂದ ಅದೃಶ್ಯನಾಗುವುದಾದರೆ, ಶ್ರೀಕೃಷ್ಣನಿಂದ ಉಪ ದಿಷ್ಟತತ್ತ್ವವುಳ್ಳ ವಿಶ್ವರೂಪಾಪರೋಕ್ಷಜ್ಞಾನವನ್ನು ಹೊಂದಿದ ಅರ್ಜುನನು ಯುದ್ಧರಂಗದಲ್ಲಿ ಸ್ಥಿತವಾದ ತನ್ನ ರಥದಿಂದ ಅದೃಶ್ಯನಾಗಿ ಬ್ರಹ್ಮನಲ್ಲಿ ವಿಲೀನವಾಗಿ ಹೋಗಿ, ರಥಿಕರಹಿತವಾದ ಬೋಳುರಥವನ್ನು ಶ್ರೀಕೃಷ್ಣನು ಹೊಡೆಯಬೇಕಾಗುತ್ತಿತ್ತು! ಹಾಗೆ ಹೊಡೆಯದೇ ಶ್ರೀಕೃಷ್ಣಸೇವಾರೂಪ ವಾದ ಪ್ರಬಲವಾದ ಸ್ವೋಚಿತಕರ್ಮದಲ್ಲಿ ಅರ್ಜುನನು ಆಸಕ್ತನಾದುದರಿಂ ದಲೂ, ಭೀಷ್ಮಾಶ್ವತ್ಥಾಮದ್ರೋಣಾದಿಮಹಾಜ್ಞಾನಿಗಳೂ ಆಸಕ್ತರಾದು ದರಿಂದಲೂ, ಜ್ಞಾನಿಗಳು ವಿಷ್ಣುಸೇವಾನಿಮಿತ್ತವಾಗಿ ಇನ್ನೂ ಸ್ವಲ್ಪಕಾಲ ಸಂಸಾರದಲ್ಲಿ ವಾಸಮಾಡುವರೆಂದು ನಿಶ್ಚಿತವಾಗುವುದು.*

---

* **ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯೇ ।** ಎಂಬ ಶ್ರುತಿಯೂ ಪ್ರಾರಬ್ಧಕರ್ಮವು ಕ್ಷಯವನ್ನು ಹೊಂದುವವರೆವಿಗೂ ಜ್ಞಾನಿಗೆ ಭೂಲೋಕ ದಲ್ಲಿ ವಾಸವು ಅವಶ್ಯಕವೆಂದೂ **ಅಥ** ಎಂದರೆ ಪ್ರಾರಬ್ಧಕರ್ಮವು ಕ್ಷಯವನ್ನು ಹೊಂದಿದ ಅನಂ ತರವೇ ಆತನು ಬ್ರಹ್ಮನನ್ನು ಹೊಂದುತ್ತಾನೆಂದೂ ಹೇಳಿರುವುದು. "ತಾವದೇವ ಚಿರಂ" ಎಂದು

ಹೀಗೆ 9. ಜ್ಞಾನಿಯ ಸಾಂಸಾರಿಕ ಅವಸ್ಥಾನದಿಂದ ಜಗದ್ಬಂಧವು ಸತ್ಯವೆಂದು ಸಹ ಸಿದ್ಧವಾಗುವದು. ಏಮದಾದಿ ಯಾವತ್ತೂ ಪ್ರಪಂಚವು, ಸುಖದುಃಖ, ಕರ್ತೃತ್ವ, ಭೋಕ್ತೃತ್ವ, '**ಅಹಂ**' ಎಂಬ ಜೀವಭಾವಾದಿಗಳೆಲ್ಲಾ 'ಮಿಥ್ಯಾ' ಆಗಿದ್ದರೆ ಬ್ರಹ್ಮಜ್ಞಾನವಾದ ಉತ್ತರಕ್ಷಣದಲ್ಲಿಯೇ,

---

ಬ್ರಹ್ಮಜ್ಞಾನವಾದ ಅನಂತರ ಬ್ರಹ್ಮಪ್ರಾಪ್ತಿಗೆ (ಮುಕ್ತಿಗೆ) ಸ್ವಲ್ಪ ವಿಳಂಬವು ಇರುವುದೆಂದು ಪ್ರಮಿತವಾಗಿರುತ್ತದೆ. "ಸ ಸದ್ಯಃ ಸಂಪತ್ಸ್ಯತೇ" ಎಂದು ಶ್ರುತಿಯು ಹೇಳಿರುವುದಿಲ್ಲ. ಶಂಕರಾಚಾರ್ಯರೂ ಸಹ ಈ ಶ್ರುತಿಗೆ ಪೂರ್ವೋಕ್ತರೀತಿಯಲ್ಲಿಯೇ ಅರ್ಥಮಾಡಿರುತ್ತಾರೆ.

ಹೀಗಿದ್ದರೂ, ಜ್ಞಾನೋತ್ತರಕ್ಷಣದಲ್ಲಿ ಜ್ಞಾನಿಯು ಐಕ್ಯವನ್ನು ಹೊಂದುವನೆಂದು ಹೇಳುವ ಶಂಕರಾಚಾರ್ಯರೂ ಸಹ ಪರಸ್ಪರವಿರುದ್ಧವಾದ ಒಂದೆರಡು ಪ್ರಕ್ರಿಯೆಯನ್ನು ಕಲ್ಪಿಸಿರುವರು. ಬ್ರಹ್ಮಜ್ಞಾನಿಯು ಐಕ್ಯವನ್ನು ಹೊಂದುವನು ಎಂದು ಹೇಳಿ ಕ್ವಚಿತ್ ಮರಣದವರೆವಿಗೂ ಅವಸ್ಥಾನವು ಆತನಿಗೆ ಉಂಟೆಂದು ಒಪ್ಪಿರುವರು. ತತ್ಕಾಲದಲ್ಲಿ ಐಕ್ಯವನ್ನು ಹೊಂದಿ ವಿಲೀನನಾಗಿ ಹೋದವನು ವಿದೇಹಮುಕ್ತನು. ಮರಣದವರೆವಿಗೆ ಇದ್ದು ವಿಲೀನನಾದವನು ಜೀವನ್ಮುಕ್ತನು ಎಂದು ಕಲ್ಪಿಸಿರುವರು. ಈ ಪ್ರಭೇಧವು ಅನ್ಯಾಯವೇ. ಮರಣದಿಂದ ಗಂತವ್ಯದೇಶಾಂತರವಿದ್ದಿದ್ದರೆ ಈ ಭೇದವು ಮನಸ್ಸಿಗೆ ಬರುತ್ತಿತ್ತು. ಜ್ಞಾನಿಯು ಎಲ್ಲಾ ಸುಳ್ಳು ಎಂದು ತಿಳಿದಿರುವನು. ಮರಣದಿಂದ ಇನ್ನೂ ಹೊಸದಾಗಿ ತಿಳಿಯಬೇಕಾದುದು ಏನೂ ಇಲ್ಲ. ಉರ್ಕ್ಹಾರ್ಟ್ ಪಂಡಿತನೂ ಈ ದೋಷವನ್ನೇ ತೋರಿಸುತ್ತಾನೆ:—

**"The sage, according to Sankara is thus raised above all conditions of mundane existence. Nothing that is outside of Brahman has any power to disturb him and he has not to wait for the slow temporal processes of improvement in this life and the next. But why, if Sankara's view is correct, should he have to wait even for the end of this present life? .... .... .... .... .... .... But in order to accomplish this final merging in Brahman, we do not require, according to Sankara, to imagine at death any semi-angelic flight of the spirit by the path of the Gods."**

**—W. S. Urquhart. M. A. D. Litt.**

**ಅರ್ಥವು:—** ಶಂಕರಾಚಾರ್ಯರ ಅಭಿಪ್ರಾಯದಲ್ಲಿ ಜ್ಞಾನಿಯು ಸಕಲವ್ಯಾವಹಾರಿಕ ಪ್ರಪಂಚದ ಧರ್ಮಗಳನ್ನು ಅತಿಕ್ರಮಿಸಿರುವನು. ಬ್ರಹ್ಮಾತಿರಿಕ್ತವಾದ ಯಾವುದೊಂದೂ ಅವನನ್ನು

**ತತ್ತ್ವಮಸ್ಯಾದಿವಾಕ್ಯೋತ್ಥಸಮ್ಯಗ್ಧೀ ಜನ್ಮಮಾತ್ರತಃ।**
**ಅವಿದ್ಯಾಸಹಕಾರ್ಯೇಣ ನಾಸೀದಸ್ತಿ ಭವಿಷ್ಯತಿ ॥**

ಎಂಬ ಅದ್ವೈತಿಗಳ ಶ್ಲೋಕಾಭಿಪ್ರಾಯಾನುಸಾರವಾಗಿ ಬ್ರಹ್ಮನಲ್ಲಿ ಅಧ್ಯಸ್ತ ವಾದ ಸಕಲಪ್ರಪಂಚವೂ ಮಾಯವಾಗಿ ಹೋಗುತ್ತಿತ್ತು. ಪುನಃ ಪ್ರಪಂಚ ವಾಗಲೀ, ತನ್ನ ದೇಹಾದಿಬಂಧಗಳಾಗಲೀ ಜ್ಞಾನಿಗೆ * ಪರಿದೃಶ್ಯಮಾನವಾಗು ತ್ತಿರಲಿಲ್ಲ. ಅರ್ಜುನನು ಬ್ರಹ್ಮಜ್ಞಾನಿಯಾಗಿ ಆಕ್ಷಣವೇ ಬ್ರಹ್ಮೈಕ್ಯವನ್ನು ಹೊಂದಿಬಿಟ್ಟನು ; ಮಿಥ್ಯಾಭೂತವಾದ ಅವನ ಬಂಧಗಳೆಲ್ಲಾ ಅವನ ವಿಷಯ ದಲ್ಲಿ ಮಾಯವಾದವು; ಅವನು ರಥದಲ್ಲಿ ಇರಲೇ ಇಲ್ಲ; ಆದರೂ ಅವನ ಆಕಾರವು ರಥದಲ್ಲಿದ್ದಂತೆ ತೋರುತ್ತಿತ್ತು ; ಅದು ಭ್ರಮವು ಎಂದು

---

ತೊಂದರೆಗೊಳಿಸಲು ಸಮರ್ಥವಲ್ಲ. ಮತ್ತು ಅವನು ಕಾಲಪ್ರವಾಹದಿಂದ ಬರುವ ಐಹಿಕ ಮತ್ತು ಪಾರಲೌಕಿಕಶ್ರೇಯಸ್ಸಿಗೆ ಭಾಗಿಯಾಗಿ ಅದಕ್ಕಾಗಿ ಕಾಯಬೇಕಾದುದಿಲ್ಲ. ಈ ಶಂಕರಾಚಾರ್ಯರ ಅಭಿಪ್ರಾಯವು ನಿಜವಾಗುವುದಾದರೆ ಜ್ಞಾನಿಯು ಏತಕ್ಕೆ ಮರಣಕಾಲದವರೆವಿಗೂ ಕಾಯಬೇಕು ? .... ... .... .... .... .... ಕಿಂಚ ಮರಣಾನಂತರ ದೇವಯಾನಮಾರ್ಗದಿಂದ ಗಮನವೇ ಮುಂತಾದ ವೈಮಾನಿಕಸಂಚಾರವಾದರೂ ಮರಣದಿಂದ ಬಂದು ಬ್ರಹ್ಮೈಕ್ಯವು ಜ್ಞಾನಿಗೆ ಬರತಕ್ಕದ್ದಾಗಿರುವದಿಲ್ಲ.'' ಬ್ರಹ್ಮೈಕ್ಯವು ಸರ್ವ ನಿರಪೇಕ್ಷವೆಂದು ಹೇಳಿ ಕ್ವಚಿತ್ ಜ್ಞಾನಿಯು ಮರಣಪರ್ಯಂತ ಇರುವನೆಂದು ಹೇಳಿದುದು ಸ್ವನ್ಯಾಯವಿರುದ್ಧವೂ ಅನುಚಿತವೂ ಆಗಿರುವುದೆಂದು ಭಾವವು.

*. ಶಂಕರಾಚಾರ್ಯರು ಅಪರೋಕ್ಷಜ್ಞಾನಿಗಳಾಗಿರಲಿಲ್ಲವೆಂದು ಅದ್ವೈತಮತದ ರೀತಿಯಿಂದಲೇ ಸಿದ್ಧವಾಗುವುದು. ಶಂಕರಾಚಾರ್ಯರು ಅದ್ವೈತಸಾಕ್ಷಾತ್ಕಾರವನ್ನು ಹೊಂದಿದ ಬ್ರಹ್ಮಜ್ಞಾನಿಗಳಾಗಿದ್ದರೆ, ಅವರ ಉಪದೇಶರೂಪವಾದ ಪ್ರವೃತ್ತಿಯು ಅಸಂಗತವಾಗುವುದು. ಸಂಸಾರದಲ್ಲಿ ಅವರ ಸ್ಥಿತಿಯು, ಗ್ರಂಥರಚನಾದಿಗಳು ಎಲ್ಲವೂ ಅಸಂಭಾವಿತವೇ ಆಗುವುದು. ಅವರು ಇನ್ನೂ ಅದ್ವೈತಾತ್ಮನಲ್ಲಿ ಲೀನವಾಗದೆ ಉಪದೇಶಗಳನ್ನು ಮಾಡುತ್ತಿದ್ದುದರಿಂದ ಅವರೂ ಅಜ್ಞರೆಂದು ನಿರ್ವಿವಾದವಾಗಿ ಸಿದ್ಧವಾಗುವುದು. ಹಾಗಿಲ್ಲದೆ ಶಂಕರಾಚಾರ್ಯರು ಜ್ಞಾನಿಗಳೆಂದು ಒಪ್ಪುವುದಾದರೆ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ಜ್ಞಾನಿಗೂ ಸಂಸಾರದಲ್ಲಿ ಅವಸ್ಥಾನವು ಉಚಿತವೆಂದೂ, ಗ್ರಂಥರಚನೆ, ಉಪದೇಶಾದಿಕಾರ್ಯಗಳಿಂದ ಅವರಿಗೂ ಅಭಿಸಂಧಿಪೂರ್ವಕವಾದ ಪ್ರವೃತ್ತಿಯೂ ಉಚಿತವೆಂದೂ, ಅದರಿಂದ ಅವರಿಗೂ ಪ್ರಯೋಜನವು ಉಂಟೆಂದೂ ಅವಶ್ಯವಾಗಿ ಒಪ್ಪಬೇಕಾಗುವುದು.

ಹೇಳುವುದು ಶಿರಸ್ಸಿನಲ್ಲಿ ಕಿರೀಟವನ್ನು ಧರಿಸಿದ ಕತ್ತೆಯ ಕಲ್ಪನೆಯನ್ನು ಮೀರುವುದು. ಜ್ಞಾನಿಪ್ರಧಾನನಾದ ಪರಮಾತ್ಮನು ಅರ್ಜುನನನ್ನು ನೋಡುತ್ತಾ ಆಲಿಂಗನಮಾಡುತ್ತಾ ಪುನಃ ಪುನಃ ಅವನ ಸಂಗಡ ಮಾತಾಡುತ್ತಿದ್ದುದರಿಂದಲೂ, ರಥದಿಂದ ಬಾಣಗಳು ಪುಂಖಾನುಪುಂಖವಾಗಿ ಬರುತ್ತಿದ್ದುದರಿಂದಲೂ, ಇನ್ನೂ ಅರ್ಜುನನು ರಥದಲ್ಲಿಯೇ ಇದ್ದನು. ಅವನು ಇನ್ನೂ ವಿಲೀನವಾಗಿ ಹೋಗಲಿಲ್ಲವೆಂದು ಸಿದ್ಧವಾಗುವದು. ಏವಂಚ ಜ್ಞಾನಿಗಳು ದೇಹಾದಿಬಂಧನಗಳಿಂದಲೂ ಸಹಿತವಾಗಿಯೇ ಇರುವುದರಿಂದಲೂ, ಪ್ರಪಂಚದಲ್ಲಿಯೇ ಇದ್ದು ತಮ್ಮ ತಮ್ಮ ನಿಯತಾಧಿಪತ್ಯದಲ್ಲಿ ವಿಷ್ಣುಸೇವೆಯನ್ನು ಮಾಡಿ ಪರಮಾತ್ಮನಿಗೆ ಅರ್ಪಿಸುತ್ತಿರುವುದರಿಂದಲೂ ಜಗತ್ತು ಸತ್ಯವೆಂದೇ ಸಿದ್ಧವಾಯಿತು.

ಈ ಕಾರಣಗಳಿಂದಲೂ ಮತ್ತು ಸತ್ಯಬಂಧದಿಂದ ಯುಕ್ತವಾಗಿರುವುದರಿಂದಲೂ ಜ್ಞಾನಿಗಳಿಗೆ ಜ್ಞಾನಪ್ರಾಪ್ತವಾದರೂ ಎಲ್ಲಿಗೂ ಅವರು ಹಾರಿಹೋಗಲಾರರು. ಅಪರಿಮಿತ ಐಶ್ವರ್ಯವನ್ನು ಸಂಪಾದಿಸಿದ ಒಬ್ಬ ದರಿದ್ರನು ತತ್ಕ್ಷಣವೇ ರಾಜ್ಯವನ್ನು ಅನುಭವಿಸುವ ರಾಜನಾಗುವುದಕ್ಕಾದೀತೇ! ಹೀಗೆಯೇ ವಿಮಲಜ್ಞಾನವನ್ನು ಹೊಂದಿದ ಅಪರೋಕ್ಷಜ್ಞಾನಿಯೂ ಕೂಡ ತತ್ಕ್ಷಣವೇ ಮುಕ್ತಿಯನ್ನು ಹೊಂದದೇ ಸ್ವಲ್ಪಕಾಲ ಕಾದುಕೊಂಡಿರುವುದು ಲೋಕಾನುಭವಸಿದ್ಧವಾಗಿರುವುದು.

**ಪ್ರಶ್ನೆ:—** ಸ್ವಾಮಿ!

**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ।** —(4. 37.)

**ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥** —(4. 39.)

ಇತ್ಯಾದಿ ಶ್ಲೋಕಗಳಲ್ಲಿ ಜ್ಞಾನವು ಬಂದಕೂಡಲೇ ಕರ್ಮಬಂಧವು ಸುಟ್ಟು ಹೋಗುವುದು ಎಂದು ಹೇಳಿರುತ್ತದೆ. ಪರಂತು ತಾವು ಹೇಳಿದ ದೃಷ್ಟಾಂತದಿಂದಲೂ ಜ್ಞಾನವು ಬಂದಕ್ಷಣದಲ್ಲಿಯೇ ಮುಕ್ತಿಯು ಬರಬೇಕೆಂದು ಸಿದ್ಧವಾಗುವುದು. ಹೇಗೆಂದರೆ ರಾಜ್ಯಾದಿಹೀನನಾದ ಒಬ್ಬ ದರಿದ್ರನಿಗೆ ಈ ದಿವಸ ಕುಬೇರನ ಐಶ್ವರ್ಯವು ಪ್ರಾಪ್ತವಾದರೆ, ಆತನು ಧನವ್ಯಯದಿಂದ ಚಕ್ರವರ್ತಿಯ ರಾಜ್ಯವನ್ನಾದರೂ ಕೊಂಡುಕೊಂಡು ಬಿಡಬಹುದು. ಅವರವರಿಂದ ಅಪೇಕ್ಷಿತವಾದಷ್ಟು ದ್ರವ್ಯವನ್ನು ಕೊಟ್ಟುಬಿಟ್ಟು ರಾಜ್ಯೈಶ್ವರ್ಯವನ್ನೂ

ತಾನೇ ಹೊಂದಬಹುದು. ದುಡ್ಡಿದ್ದರೆ ಇಹದಲ್ಲಿ ತತ್ಕಾಲದಲ್ಲಿ ದೊರಕದ ಸಾಮಗ್ರಿಯು ಇಲ್ಲ. ಹೀಗೆಯೇ ಜ್ಞಾನದಿಂದ ಪರಮಸಂಸಿದ್ಧಿಯನ್ನು ಹೊಂದಿದ ಬ್ರಹ್ಮಾಪರೋಕ್ಷಿಯು ಬೇಕಾದ ಲೋಕಕ್ಕೂ ಮುಕ್ತಿಸ್ಥಾನಕ್ಕೂ ಹೋಗುವುದರಲ್ಲಿ ಅಡ್ಡಿಯೇನು?

10. **ಉತ್ತರ:—** ಶ್ರೀಶ್ರೀಗಳವರು – ನಿಮ್ಮ ದೃಷ್ಟಾಂತವಿವರಣವು ಸ್ವಲ್ಪ ಲೋಕಾನುಭವಕ್ಕೆ ವಿರುದ್ಧವಾಗಿರುವುದು. ಅಪರಿಮಿತ ಐಶ್ವರ್ಯವು ಈ ದಿನ ನಿಮಗೆ ಪ್ರಾಪ್ತವಾದರೂ ಐಶ್ವರ್ಯವು ಸಾಕ್ಷಾತ್ತಾಗಿ ಜಹಗೀರಿಯನ್ನು ತಂದು ಕೊಡಲಾರದು. ನಿಮ್ಮ ಐಶ್ವರ್ಯವನ್ನು ಜಹಗೀರುದಾರನಿಗೆ ಅರ್ಪಣೆಮಾಡಿ ಅವನ ಮನಸ್ಸನ್ನು ಅದರಿಂದ ಸಂತೋಷಪಡಿಸಿ ನಿಮ್ಮ ಐಶ್ವರ್ಯಕ್ಕೆ ಪ್ರತಿಫಲವಾದ ನಿಮ್ಮಿಂದ ಅಪೇಕ್ಷಿತವಾದ ಜಹಗೀರಿಯನ್ನು ನೀವು ಹೊಂದಬೇಕು. ಬಹುಕಾಲ ದಾರಿದ್ರ್ಯದಿಂದ ಸಂತಪ್ತರಾದ ನೀವು ಅವನು ಹೇಳಿದಷ್ಟು ಹಣವನ್ನು ಕೊಡುವುದಕ್ಕೆ ಒಪ್ಪಿದ ಮೇಲೆ ಅವನು ನಿಮ್ಮಿಂದ ತನಗೆ ಅಭಿಮತವಾದಷ್ಟು ಪೂರ್ಣವಾದ ಧನವನ್ನು ಪಡೆದು ಅದಕ್ಕೆ ಪ್ರತಿಯಾಗಿ ಜಹಗೀರಿಯನ್ನು ನಿಮಗೆ ಒಪ್ಪಿಸುವನು. ಇದೇ ರೀತಿಯಲ್ಲಿ ಜಡವಾದ ಜ್ಞಾನವು ಸಾಕ್ಷಾತ್ತಾಗಿ ಮುಕ್ತಿಯೆಂಬ ಫಲವನ್ನು ಕೊಡಲಾರದು. ಪರಮಾತ್ಮನ ಅನುಗ್ರಹವೂಬೇಕು. ಅಪರೋಕ್ಷಜ್ಞಾನವೆಂದರೆ ಹೃದಯದಲ್ಲಿ ಪರಮಾತ್ಮನ ದರ್ಶನವೆಂದು ಅರ್ಥವು. ದರ್ಶನವಾದಮಾತ್ರಕ್ಕೇ ಮುಕ್ತಿಫಲವು ಅದೇ ಕ್ಷಣದಲ್ಲಿ ಬರಬೇಕೆಂಬ ನಿಯಮವಿಲ್ಲ. ಪ್ರಸನ್ನನಾದ ರಾಜನು ಕಾರಾಗೃಹಕ್ಕೆ ಪ್ರಾಪ್ತನಾದರೆ ಬಂಧವನ್ನು ಬಿಡಿಸುವುದು ನಿಶ್ಚಯವೆಂದು ಬಂದಿಯು ನಿಶ್ಚಯಿಸುವನು. ಆ ಕ್ಷಣದಲ್ಲೋ ಅಥವಾ ಹತ್ತು ದಿನಗಳ ಮೇಲೋ ಎಂಬುದು ಸಂಶಯವೇ. ಹೀಗೆಯೇ ದರ್ಶನಕೊಟ್ಟ ಪರಮಾತ್ಮನು ಇನ್ನೂ ಹೆಚ್ಚು ಭಕ್ತಿಯನ್ನು ಅಪೇಕ್ಷಿಸಿ ಸ್ವಲ್ಪ ಕಾಲವಿಳಂಬ ಮಾಡಿ ಮುಕ್ತಿಕೊಡುವನೆಂದು ಪ್ರಮಾಣಪ್ರಮಿತವಾಗಿರುವುದು. ನಮ್ಮ ಅಪರೋಕ್ಷಜ್ಞಾನಮಾತ್ರದಿಂದಲೇ ನಾವು ಮುಕ್ತಿಫಲವನ್ನು ಕೋರಿದರೆ ಜಹಗೀರುದಾರನಂತಿರುವ ಶ್ರೀವಿಷ್ಣುವು ಇನ್ನೂ ಸ್ವಲ್ಪ ಹೆಚ್ಚು ಭಕ್ತಿಯಿಂದ ತನ್ನ ಆರಾಧನವನ್ನು ಮಾಡಿದಮೇಲೆ ಜಹಗೀರಿನಂತಿರುವ ಮುಕ್ತಿಯನ್ನು ಕೊಡುವನೆಂದು ಹೇಳುವುದು ಲೋಕನ್ಯಾಯಾನುಗುಣವೇ ಆಗಿರುವುದು.

ಈರೀತಿಯಲ್ಲಿ ಜಗದ್ಬಂಧವು ಸತ್ಯವಾದುದರಿಂದಲೂ, ಮುಕ್ತಿಯೆಂಬ ಪದಾರ್ಥವು ಮತ್ತೊಬ್ಬ ಚೇತನನ ಮನಃಪ್ರಸಾದದಿಂದ ಪ್ರಾಪ್ತವಾಗತಕ್ಕ ಮಹಾಫಲವಾದುದರಿಂದಲೂ, ಜ್ಞಾನವು ಸಾಕ್ಷಾತ್ತಾಗಿ ಮತ್ತು ಸ್ವತಂತ್ರವಾಗಿ ಮುಕ್ತಿಯನ್ನು ಕೊಡಲಾರದೆಂದು ನಾವು ನಿರೂಪಿಸಿದೆವು. ಜ್ಞಾನಾಗ್ನಿಯು ಕರ್ಮವನ್ನು ದಹಿಸುವುದೆಂದು ಹೇಳಿದರೂ ಸಹ **ಪೂರ್ವೋಕ್ತ**ಬಾಧಗಳಿರುವುದರಿಂದ ಪ್ರಾರಬ್ಧಕರ್ಮಭಿನ್ನವಾದ ಸಕಲಕರ್ಮಗಳನ್ನೂ ಜ್ಞಾನದಿಂದ ಪ್ರಸನ್ನನಾದ ಈಶ್ವರನು ದಹಿಸುವನೆಂದು ಅರ್ಥಮಾಡಬೇಕು. **"ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ।"** ಎಂಬ ಶ್ರೀಕೃಷ್ಣನ ವಾಕ್ಯವೇ ಹೀಗೆ ಅರ್ಥಮಾಡುವುದರಲ್ಲಿ ನಿಶ್ಚಾಯಕವಾಗಿದೆ. **"ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥"** ಎಂಬ ಶ್ಲೋಕವೂ ಸಹ ಹೀಗೆ ಅರ್ಥಮಾಡುವುದಕ್ಕೆ ಸಹಾಯಕವಾಗಿರುತ್ತದೆ. ಬ್ರಹ್ಮಜ್ಞಾನವನ್ನು ಹೊಂದಿದ ಅನಂತರ "ಅಚಿರೇಣ" ಎಂದರೆ ಶೀಘ್ರದಲ್ಲಿಯೇ ಮುಕ್ತನಾಗುವನೆಂದರ್ಥವು. ಅನೇಕ ಕಲ್ಪಗಳ ಪರ್ಯಂತ ಸಂಸಾರದಲ್ಲಿ ಅವಸ್ಥಾನವನ್ನು ಹೊಂದದೆ, ಅಪರೋಕ್ಷಜನಿತಭಕ್ತಿಯಿಂದ ಪ್ರಸನ್ನನಾದ ಈಶ್ವರನ ಪರಮಪ್ರಸಾದದಿಂದ ಜ್ಞಾನಿಯು ಮುಕ್ತನಾಗುವನೆಂದರ್ಥವು. ಇದರಿಂದಲೇ "ನಾನ್ಯಃ ಪಂಥಾ ಅಯನಾಯ ವಿದ್ಯತೇ" ಎಂದರೆ ಬ್ರಹ್ಮಜ್ಞಾನ ಹೊರತು ಮುಕ್ತಿಗೆ ಬೇರೆ ಉಪಾಯವಿಲ್ಲ ಎಂದು ಹೇಳುವ ಶ್ರುತಿಗೂ ಅರ್ಥವನ್ನು ಹೇಳಿದಹಾಗಾಯಿತು. ಮುಕ್ತನಾಗುವವನು ಬ್ರಹ್ಮಜ್ಞಾನವನ್ನು ಹೊಂದಿಯೇ ತೀರಬೇಕು ಎಂದು ಅರ್ಥವೇ ಹೊರತು ಬ್ರಹ್ಮಜ್ಞಾನಕ್ಕೂ ಮುಕ್ತಿಗೂ ಮಧ್ಯೇ ಹರಿಭಕ್ತಿಯೂ, ಈಶ್ವರಪ್ರಸಾದವೂ ಅಪೇಕ್ಷಿತವಲ್ಲವೆಂದು ಅಲ್ಲಿ ಹೇಳಿರುವುದಿಲ್ಲ. ಮತ್ತು "ಯಮೇವೈಷ ವೃಣುತೇ" ಇತ್ಯಾದಿಶ್ರುತಿಗಳಲ್ಲಿ ಮುಕ್ತಿಯು ಹರಿಪ್ರಸಾದದಿಂದಲೇ ಮುಖ್ಯವಾಗಿ ಲಭ್ಯವಾಗತಕ್ಕದ್ದೆಂದು ಹೇಳಿರುವುದು.

11. ಈ ವಿಷಯವು ಮುಕ್ತಿಸ್ವರೂಪಪರಾಮರ್ಶೆಯಿಂದಲೂ ನಿಶ್ಚಿತವಾಗುವುದು. ಮುಕ್ತಿಯು ಪರಬ್ರಹ್ಮನ ಪ್ರಾಪ್ತಿರೂಪವಾದುದೆಂದು ನಾವು ಹಿಂದೆಯೇ ನಿರೂಪಿಸಿರುತ್ತೇವೆ.* ಪರಬ್ರಹ್ಮನ ಪ್ರಸಾದವಿಲ್ಲದೆ ಪರಬ್ರಹ್ಮ

---

* ಬ್ರಹ್ಮಪ್ರಾಪ್ತಿಯೇ ಮುಕ್ತಿಪದಾರ್ಥವೆಂದು "ಪರಂಬ್ರಹ್ಮ ಅಧಿಗಚ್ಛತಿ", "ಬ್ರಹ್ಮೈವ ತೇನ ಗಂತವ್ಯಂ" ಇತ್ಯಾದಿ ಅನೇಕ ಗೀತಾವಾಕ್ಯಗಳಿಂದ ಪ್ರಸಿದ್ಧವಾಗಿರುವದು. ಪುಟ 296.

ನನ್ನು ಹೊಂದುವುದು ಹೇಗೆ? ಮಹಾರಾಜರ ಇಚ್ಛೆಯಿಲ್ಲದಿದ್ದರೂ ಕೇವಲ ಟಿಕೀಟಿನ ಸಾಮರ್ಥ್ಯದಿಂದ ದರ್ಬಾರಿಗೆ ಹೋಗಲಾಗುವುದೇ? ಟಿಕೀಟು ಕೊಡುವುದಕ್ಕೂ ಮಹಾರಾಜರ ಅನುಗ್ರಹವು ಬೇಕು. ಟಿಕೀಟುಕೊಟ್ಟ ಅನಂತರ ಟಿಕೀಟುಪಡೆದ ಅಧಿಕಾರಿಯು ನಮ್ಮ ದರ್ಬಾರಿಗೆ ಬಂದು ಸೇರಲಿ

---

ಪ್ರಥಮಭಾಗದಲ್ಲಿ ಇದು ವಿಶದವಾಗಿರುವುದು. ಅದ್ವೈತಮತದಲ್ಲಿ ಬ್ರಹ್ಮಪ್ರಾಪ್ತಿಯು ಮುಕ್ತಿಯಲ್ಲ. ಎಲ್ಲವೂ ಸುಳ್ಳೇ. ಉರ್ಕುಹಾರ್ಟ್ ಪಂಡಿತನು ತನ್ನ ಉಪಪಾದನೆಯ ಸಾಮರ್ಥ್ಯದಿಂದಲೇ ಈ ಮತವನ್ನು ಧಿಕ್ಕರಿಸುತ್ತಾನೆ:—

**Under such conditions, how is it possible to speak of a 'departing' or going to Brahman? Says Sankara .... .... "The reaching of another place is out of the question." So with great earnestness Sankara argues that the proper interpretation of Sutra IV. 2. 13. is that the soul does not depart."**

**—W. S. Urquhart, M. A. D.Litt.**

**ಅರ್ಥವು :—** "ಬ್ರಹ್ಮಾತಿರಿಕ್ತವಾಗಿ ಯಾವುದೂ ಇಲ್ಲದಿರುವುದರಿಂದ ಬ್ರಹ್ಮನನ್ನು ಕುರಿತು ಪ್ರಯಾಣಮಾಡುವುದೆಲ್ಲಿಂದ ಬಂತು? ಬ್ರಹ್ಮಪ್ರಾಪ್ತಿಯು ಎಲ್ಲಿಂದ ಬಂತು? ಶಂಕರಾಚಾರ್ಯರು ಹೇಳುತ್ತಾರೆ:– "ಸ್ಥಾನಾಂತರಪ್ರಾಪ್ತಿಯು ಇಲ್ಲವೇ ಇಲ್ಲ." ಹೀಗೆಹೇಳಿ ಬಹು ಅಭಿಸಂಧಿಪೂರ್ವಕವಾಗಿ, "ಚತುರ್ಥಾಧ್ಯಾಯದ 2. 13ನೆಯ ಸೂತ್ರಕ್ಕೆ ಜೀವನು ಲೋಕಾಂತರಕ್ಕೆ ಪ್ರಯಾಣಮಾಡುವದೇ ಇಲ್ಲ" ಎಂದು ಹೇಳುವುದೇ ಸರಿಯಾದ ಅರ್ಥವೆಂದು ಹೇಳಿರುತ್ತಾರೆ."

ಈರೀತಿ ಉಪಪಾದಿಸಿ ಈಪ್ರಕಾರವಾದ ಮೋಕ್ಷಸ್ವರೂಪಾದಿನಿರೂಪಣದಿಂದ ಮೋಕ್ಷಸಾಧನನಿರೂಪಣಾದಿಶಾಸ್ತ್ರಗಳಿಗೆ ಮೂಲದಲ್ಲಿಯೇ ಕುಠಾರವನ್ನು ಇಟ್ಟಂತೆ ಆಯಿತೆಂದು ಹೇಳಿರುತ್ತಾನೆ:–

**"Emphasis upon the identity conception is peculiarly disastrous in respect of the claim of Ethics to unrestricted jurisdiction and paramount importance in human life"**

**—W. S. Urquhart, M. A. D.Litt.**

**ಅರ್ಥವು :—** ಐಕ್ಯವಾದಕ್ಕೆ ಪ್ರಾಮುಖ್ಯತೆಯನ್ನು ಕೊಡೋಣವು ಮುಖ್ಯವಾಗಿ ಮೋಕ್ಷಸಾಧನಪ್ರತಿಪಾದಕಶಾಸ್ತ್ರಕ್ಕೆ ವಿನಾಶಕವಾಗಿರುತ್ತದೆ. ಇದರಿಂದ ಸಾಧನಶಾಸ್ತ್ರಕ್ಕೆ ಇರುವ ಮಾನುಷವ್ಯವಹಾರದಲ್ಲಿ ಧರ್ಮಾಧರ್ಮನಿರ್ಣಯವನ್ನು ಮಾಡುವ ಅಪರಿಮಿತವಾದ ಹಕ್ಕನ್ನೂ ಪ್ರಾಶಸ್ತ್ಯವನ್ನೂ ನಾಶಮಾಡಿದಂತಾಯಿತು.

ಎಂಬ ಇಚ್ಛೆಯೂ ಮಧ್ಯೇ ಕ್ಷುದ್ರಗಳಿಂದ ವಿಚ್ಛಿನ್ನವಾಗದೇ ಜಾಗರೂಕವಾಗಿರಬೇಕು. ಹಾಗಿಲ್ಲದೆ ಹೋದರೆ, ಟಿಕೀಟು ಹೊಂದಿದವನೂ ಸಹ ಮಹಾರಾಜರ ಇಚ್ಛೆಗೆ ಬರದಿದ್ದರೆ ಅವನ ಸಂಕೇತಮಾತ್ರದಿಂದ ಬಾಗಿಲಿನಲ್ಲಿಯೇ ತಡೆಯಲ್ಪಡುವನು. ಹೀಗಿರುವದರಿಂದ ಜ್ಞಾನವು ಮೋಕ್ಷಕಾರಣವೆಂದು ಒಪ್ಪುವವರೂ ಸಹ ಮುಕ್ತಿಯು ಬ್ರಹ್ಮಪ್ರಾಪ್ತಿರೂಪವಾದುದರಿಂದ ಪರಬ್ರಹ್ಮನ ಪ್ರಸಾದವೂ ಅತ್ಯವಶ್ಯಕವೆಂದು ಒಪ್ಪಲೇ ಬೇಕು. ಅಂಥಾ ಪರಬ್ರಹ್ಮನು ತನ್ನ ಲೋಕಕ್ಕೆ ಬರಬಹುದೆಂಬ ಜ್ಞಾನರೂಪವಾದ ಟಿಕೀಟನ್ನು ಜ್ಞಾನಿಗೆ ದಯಪಾಲಿಸುವಾಗ ಇನ್ನೂ ಕೆಲವು ದಿನಗಳ ಪರ್ಯಂತ ನನ್ನ ಸಂರಾಧನವನ್ನು ಮಾಡಿ ಪೂರ್ಣಭಕ್ತನಾಗಿ ನನ್ನನ್ನು ಬಂದು ಸೇರು ಎಂದೇ ಅಪ್ಪಣೆ ಕೊಟ್ಟಿರುತ್ತಾನೆ. ಇದರಿಂದ ಮುಕ್ತಿಗೆ ಬ್ರಹ್ಮಪ್ರಸಾದವು ಮುಖ್ಯಕಾರಣವೆಂದೂ ಜ್ಞಾನಾದಿಗಳು ಇತರ ನಿಮಿತ್ತ ಕಾರಣಗಳೆಂದೂ ಸಿದ್ಧವಾಗುವುದು. ಸರಕಾರದಲ್ಲಿಯೂ ಕೂಡ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಯೋಗ್ಯನೆಂದು ಪರೀಕ್ಷೆಯಲ್ಲಿ ನಿಶ್ಚಿತನಾದವನಿಗೂ ಸಹ ಎರಡು ವರ್ಷಗಳ ಪ್ರೊಬೇಷನ್ ಕೆಲಸವನ್ನು ಕೊಡುತ್ತಿರುವರಲ್ಲವೇ ? ಹೀಗೆ ಜ್ಞಾನಿಯೂ ಸ್ವಲ್ಪ ಕಾಲ ತನ್ನಿಂದ ದೃಷ್ಟನಾದ ಪರಮಾತ್ಮನನ್ನು ಉದ್ರಿಕ್ತವಾದ ಭಕ್ತಿಯಿಂದ ಆರಾಧನೆಮಾಡಿ, ಪೂರ್ಣಸಾಧನಸಂಪನ್ನನಾಗಿ, ಪರಮಾತ್ಮನ ಪರಮಪ್ರಸಾದಕ್ಕೆ ಪಾತ್ರನಾಗಿ ಮುಕ್ತನಾಗುವನೆಂಬುದರಲ್ಲಿ ಬಾಧಕವೇನು ?

12. ಶ್ರೀಕೃಷ್ಣನು ಜ್ಞಾನಿಯಿಂದ ಆಚರಿಸಲ್ಪಡಬೇಕಾದ ಕೆಲವು ವಿಶೇಷಧರ್ಮಗಳನ್ನೂ ಸಹ ವಿಧಿಸಿರುತ್ತಾನೆ :—

(1) **ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ।**
**ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥**
—(3. 20.)

(ಜ್ಞಾನಿಗಳಾದ) ಜನಕಾದಿಗಳೂ ಕೂಡ (ಜ್ಞಾನೋತ್ತರಕಾಲದಲ್ಲಿ ಅನುಷ್ಠಾನಮಾಡಿದ) ಕರ್ಮದಿಂದ ಪೂರ್ಣಸಿದ್ಧಿಯನ್ನು ಹೊಂದಿದರು. ಎಲೈ ಅರ್ಜುನನೇ! ಲೋಕಶಿಕ್ಷಣರೂಪವಾದ ಪ್ರಯೋಜನವೂ ಇರುವುದೆಂದು ತಿಳಿದು ನೀನು ಕರ್ಮವನ್ನು ಆಚರಿಸಬೇಕು.

(2) **ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ।**
**ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ ॥**

**ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ।**
**ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್॥**
—(3. 25—26.)

ಅಜ್ಞಾನಿಗಳು ಕರ್ಮಫಲದಲ್ಲಿ ಸ್ನೇಹದಿಂದ ಯುಕ್ತರಾಗಿ ಕರ್ಮಾನುಷ್ಠಾನವನ್ನು ಮಾಡುತ್ತಾರೆ. ಜ್ಞಾನಿಯು ಕರ್ಮಫಲಾಪೇಕ್ಷಾರಹಿತನಾಗಿ ಲೋಕಶಿಕ್ಷಣವನ್ನು ಇಚ್ಛಿಸಿ ಸರ್ವನಿತ್ಯನೈಮಿತ್ತಿಕಕರ್ಮಗಳನ್ನೂ ಕೂಡ ಅನುಷ್ಠಾನಮಾಡಬೇಕು. ಜ್ಞಾನಿಯು ತಾನು ನಿತ್ಯಕರ್ಮಪರಿತ್ಯಾಗವನ್ನುಮಾಡಿ ಅಜ್ಞಾನಿಗಳ ಮನಸ್ಸಿನಲ್ಲಿ "ಕರ್ಮದಿಂದೇನು ಪ್ರಯೋಜನ?" ಎಂಬ ವಿಪರೀತ ಬುದ್ಧಿಯನ್ನು ಹುಟ್ಟಿಸಬಾರದು; ಮತ್ತು ಪರಮಾತ್ಮನಲ್ಲಿ ಮನಸ್ಸನ್ನಿಟ್ಟು ಭಗವದರ್ಪಣಾದಿಯೋಗಸಹಿತನಾಗಿ ಸಕಲಕರ್ಮಗಳನ್ನೂ ಸಮೀಚೀನವಾಗಿ ಆಚರಿಸಬೇಕು.

(3) **ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥**
—(4—34.)

ತತ್ತ್ವ(ಬ್ರಹ್ಮ)ದರ್ಶಿಗಳಾದ ಅಪರೋಕ್ಷಜ್ಞಾನಿಗಳು ನಿನಗೆ ಜ್ಞಾತವ್ಯತತ್ತ್ವವನ್ನು ಉಪದೇಶಮಾಡುತ್ತಾರೆ.

(4) **ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥**
—(6. 3.)

ಯೋಗೋಪಾಯದ ಸಿದ್ಧಿಯನ್ನು ಹೊಂದಿದ ಬ್ರಹ್ಮಜ್ಞಾನಿಗೆ ಶಮವು ಎಂದರೆ, ನಿರಂತರ ಭಗವಂತನಲ್ಲಿ ಬುದ್ಧಿಯನ್ನಿಡೋಣವು ಎಂದರೆ ನಿತ್ಯಭಗವದ್ಧ್ಯಾನವು ಮೋಕ್ಷಸುಖಕ್ಕೆ ಕಾರಣವೆನ್ನಿಸುತ್ತದೆ.

ಈರೀತಿಯಾಗಿ ಜ್ಞಾನಿಯೂ ಲೋಕಶಿಕ್ಷಾರ್ಥವಾಗಿ ಸ್ಮೃತ್ಯುಕ್ತಕರ್ಮಗಳನ್ನು ಆಚರಿಸುತ್ತಾ, ಶರಣಾಗತರಾದವರಿಗೆ ಸಂಸಾರತಾರಕವಾದ ತತ್ತ್ವವನ್ನುಪದೇಶಿಸುತ್ತಾ, ಧ್ಯಾನದಲ್ಲಿ ವಿಶೇಷವಾಗಿ ಆಸಕ್ತನಾಗಿ ಇರಬೇಕೆಂದು ಶ್ರೀಕೃಷ್ಣನು ಹೇಳಿರುತ್ತಾನೆ. ಜ್ಞಾನದಿಂದಲೇ ತತ್ಕಾಲದಲ್ಲಿ ಸಾಕ್ಷಾನ್ಮೋಕ್ಷವು ಬರುವುದಾದರೆ ಈ ವಿಧಾನವು ವ್ಯರ್ಥವಾಗುವುದು. ಆದುದರಿಂದ ಭಗವಂತನ ಪ್ರಸಾದವಿಶೇಷಕ್ಕೆ ಕಾರಣವಾದ ಈ ಆಚರಣೆಗಳಿಂದ ಸಹಿತನಾಗಿ, ನಿಶ್ಚಿತವಾದ ಮುಕ್ತಿಫಲವುಳ್ಳವನಾಗಿ ಕೆಲವು ಕಾಲ ಜ್ಞಾನಿಯೂ ಸಂಸಾರದಲ್ಲಿರುವನೆಂದು ಸಿದ್ಧವಾಗುವುದು. ಆದುದರಿಂದ **"ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ।"** ಇತ್ಯಾದಿಗೀತಾವಾಕ್ಯಗಳು ನಿರವಕಾಶವಾಗಿ ಮುಕ್ತಿಗೆ ಭಗ

ವತ್ಪ್ರಸಾದವೇ ಪ್ರಧಾನಕಾರಣವೆಂದು ಬೋಧಿಸುತ್ತವೆ ಎಂಬುದು ಶಾಸ್ತ್ರ ಸಮ್ಮತವಾದ ನಿರ್ಣಯವು.

ಈರೀತಿಯಾಗಿ 1. ಜ್ಞಾನವೇ ಮೊದಲಾದ ಸಕಲಪದಾರ್ಥಗಳ ಸ್ವಾಭಾವಿಕ ಧರ್ಮಕ್ಕೂ ಪರಮಾತ್ಮನೇ ನಿಯಾಮಕನಾಗಿರುವುದರಿಂದಲೂ, 2. ಜ್ಞಾನಾ ನಂತರದಲ್ಲಿ ಜೀವನ್ಮುಕ್ತನು ಶ್ರೀಹರಿಯ ಪೂರ್ಣಪ್ರಸಾದಾರ್ಥವಾಗಿ ಉದ್ರಿಕ್ತ ಭಕ್ತಿಯಿಂದ ಭಗವದಾರಾಧನದಲ್ಲಿ ತತ್ಪರನಾಗಿ ಸಂಸಾರದಲ್ಲಿರುವುದು ಪ್ರಮಿತ ವಾಗಿರುವುದರಿಂದಲೂ, 3. ಅಪರೋಕ್ಷಜ್ಞಾನಿಗಳಾದ ಬ್ರಹ್ಮಾದಿದೇವತೆಗಳು ಇನ್ನೂ ಮುಕ್ತರಾಗದೆ, ಮುಕ್ತಿಯನ್ನು ನಿರೀಕ್ಷಿಸುತ್ತಿರುವುದರಿಂದಲೂ, 4. ವಿಶ್ವರೂಪದರ್ಶನಮಾಡಿ ಬ್ರಹ್ಮಜ್ಞಾನಿಯಾದ ಅರ್ಜುನನೂ ಸಹ ಇನ್ನೂ ಯುದ್ಧದಲ್ಲಿ ಆಸಕ್ತನಾಗಿರುವುದರಿಂದಲೂ, 5. ಶುಕ್ತಿಜ್ಞಾನದಿಂದ ಅಧ್ಯಸ್ತರಜ ತವು ಅದೃಶ್ಯವಾಗುವಂತೆ ಜಗದ್ಬಂಧವು ಕೇವಲ ಬ್ರಹ್ಮಜ್ಞಾನದಿಂದ ಮಾಯವಾ ಗದೆ ಸತ್ಯವಾಗಿ ಇರುವುದರಿಂದಲೂ, 6. ಚೇತನಾಪೇಕ್ಷೆಯಿಲ್ಲದೆ ಜ್ಞಾನವು **ಸಾಕ್ಷಾತ್** ವೈಕುಂಠಾದಿಲೋಕವಾಸರೂಪವಾದ ಮುಕ್ತಿಯನ್ನು ಕೊಡು ವುದು ಅಸಂಭಾವಿತವಾದುದರಿಂದಲೂ, 7. ಮುಕ್ತಿಯು ಪರಬ್ರಹ್ಮನ ಪ್ರಾಪ್ತಿ ರೂಪವಾದುದರಿಂದಲೂ, ಪರಬ್ರಹ್ಮನ ಪ್ರಸಾದವೇ ಮುಕ್ತಿಗೆ ಮುಖ್ಯಕಾರ ಣವು. ಜ್ಞಾನಾದಿಗಳು ಸ್ವತಂತ್ರನಾದ ಆತನ ಪ್ರಸಾದಾಭಿವ್ಯಕ್ತಿಗೆ ನಿಮಿತ್ತ ಗಳೆಂದು ಅಂಗೀಕರಿಸಬೇಕು. 8. ಲೋಕಸಂಗ್ರಹಾರ್ಥವಾಗಿ ಕರ್ಮಕರಣ, ಧ್ಯಾನ, ಪ್ರವಚನಾದಿಮಹಾಸಾಧನೆಗಳನ್ನು ಶ್ರೀಕೃಷ್ಣನು ಜ್ಞಾನಿಗೂ ಸಹ ವಿಧಿಸಿರುವುದರಿಂದ ಆತನ ಪರಿಪೂರ್ಣವಾದ ಮುಕ್ತಿಹೇತುಭೂತವಾದ ಪ್ರಸಾ ದವು ಅಪರೋಕ್ಷಜ್ಞಾನಾನಂತರದಲ್ಲಿ ಮಾಡಿದ ಭಕ್ತನ ಸೇವೆಯಿಂದಲೇ ಬರುವುದೇ ಹೊರತು ಜ್ಞಾನೋತ್ಪತ್ತ್ಯುತ್ತರಕ್ಷಣದಲ್ಲಿ ಮುಕ್ತಿಯಾಗುವುದು ಎಂಬುದು ಶ್ರೀಕೃಷ್ಣನಿಗೆ ಸರ್ವಥಾ ಸಮ್ಮತವಲ್ಲ. ಆದುದರಿಂದ **"ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ।"** ಇತ್ಯಾದಿ ಶ್ರೀಕೃಷ್ಣನ ವಾಕ್ಯ ಗಳು ನಿರವಕಾಶವಾಗಿ ಮುಕ್ತಿಗೆ ಭಗವತ್ಪ್ರಸಾದವೇ ಪ್ರಧಾನಕಾರಣವೆಂದು ಬೋಧಿಸುತ್ತವೆ ಎಂಬುದು ನಿರ್ಣೀತವಾದ ಶಾಸ್ತ್ರಾರ್ಥವು.

ಅದ್ವೈತಮತದ ರೀತ್ಯಾ ಈ ಪ್ರಕರಣಾರಂಭವೇ ಅನುಚಿತವು. ಅದ್ವೈತ ಮತದಲ್ಲಿ ಬ್ರಹ್ಮೈಕ್ಯರೂಪವಾದ ಮುಕ್ತಿಯು "ಬ್ರಹ್ಮಾತ್ಮಕಮೇವ" ಎಂದು ಶಂಕರಾಚಾರ್ಯರು ಹೇಳಿರುತ್ತಾರೆ. ಹಾಗಾದಮೇಲೆ ಬ್ರಹ್ಮನು ನಿತ್ಯೈಕ

ಸ್ವರೂಪಸಾದಂತೆ ಮುಕ್ತಿಯೂ ಹಿಂದೂ ಇದ್ದಿತು, ಈಗಲೂ ಇರುವುದು, ಮುಂದೂ ಇರುವುದು ಎಂದು ಅರ್ಥವಾಗುವುದು. ಮುಕ್ತಿಯು ಬ್ರಹ್ಮ ಪ್ರಸಾದಾದಿಸಾಧನಗಳಿಂದ ಪ್ರಾಪ್ಯವಾದ ಒಂದು ಅತಿಶಯವಲ್ಲ ಎಂದು ಸಿದ್ಧ ವಾಯಿತು. ಆದುದರಿಂದ ಈ ವಿವಕ್ಷೆಯಿಂದ ಮೋಕ್ಷಸಾಧನನಿರೂಪಣೆಯು ಅಸಂಗತವಾದ ಕಥನವೇ.

ಮುಕ್ತಿಯು ಬ್ರಹ್ಮಭಿನ್ನವಾದ ವಸ್ತುವಾದರೆ ಅದು ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇರಲಿಲ್ಲ, ಮುಂದೂ ಇರುವುದಿಲ್ಲ ಎಂದು ಅದ್ವೈತಸಿದ್ಧಾಂತವು. ಮಿಥ್ಯಾಭೂತವಾದ ಮುಕ್ತಿಗೋಸ್ಕರ ಸಾಧನವನ್ನು ಏತಕ್ಕೆ ಆಚರಿಸಬೇಕು? ತ್ರಿಕಾಲಾವೃತ್ತಿಯಾದ ಪದಾರ್ಥದ ಉದ್ದಿಶ್ಯ ಗುರುತಮವಾದ ಸಾಧನವನ್ನು ಭ್ರಾಂತರು ವಿಧಿಸಬಹುದು. ಪ್ರಾಮಾಣಿಕವಾದ ಶಾಸ್ತ್ರದಲ್ಲಿ ಮೋಕ್ಷಸಾಧನವೆಂದು ನಿರೂಪಣೆಯನ್ನು ಮಾಡುವುದು ಅತ್ಯಂತ ಹಾಸ್ಯಾಸ್ಪದವಾದ ವ್ಯಾಪಾರವೆನ್ನಿಸುವುದು. ಈ ವಿವಕ್ಷೆಯಿಂದಲೂ ಅದ್ವೈತ ಮತದ ರೀತ್ಯಾ ಸಾಧನವಿಚಾರೋಪಕ್ರಮವು ಉನ್ಮತ್ತಪ್ರಲಾಪವೇ ಆಗುವುದು.*

ಶ್ರೀಕೃಷ್ಣನಾದರೋ ಅಭಿಪ್ರಾಯಪೂರ್ವಕವಾಗಿ ಮೋಕ್ಷಸಾಧನೆಗಳನ್ನು ಕ್ರಮವಾಗಿ ಪುನಃ ಪುನಃ ನಿರೂಪಿಸಿರುವನು. ಆದುದರಿಂದ ಶ್ರೀಕೃಷ್ಣನು ಅದ್ವೈತದ್ವೇಷಿಯೆಂದು ನಿಶ್ಚಯಿಸಿ ಸರ್ವಕೃಷ್ಣಭಕ್ತರೂ ಆತನನ್ನು ಸರ್ವೋತ್ತಮತ್ವಜ್ಞಾನಪೂರ್ವಕವಾಗಿ ಸೇವಿಸಿ, ಸಾಕ್ಷಾನ್ಮೋಕ್ಷಸಾಧಕವಾದ ಆತನ ಪ್ರಸಾದಾತಿಶಯಕ್ಕೆ ಪಾತ್ರರಾಗಬೇಕೆಂದು ನಿರೂಪಿಸಿರುತ್ತೇವೆ.

---

* ಶ್ರೀಪಾದಂಗಳವರ ಈ ಅಭಿಪ್ರಾಯವು ಪ್ರಾಯೇಣ ಸಕಲ ಆಂಗ್ಲೇಯರಿಂದಲೂ ಅಂಗೀಕರಿಸಲ್ಪಟ್ಟಿರುವುದು. ಬಹುಕೀರ್ತಿಸಂಪನ್ನನಾದ ಮ್ಯಾಕ್ಸಮುಲ್ಲರ ಪಂಡಿತನು ಈರೀತಿ ಬರೆದಿರುತ್ತಾನೆ:—

**"It must be clear to every one who has once mastered the framework of the true Vedantha Philosophy as I have tried to explain it, that there is but little room in it for Psychology Cosmology, nay even for Ethics." —F. Max Muller, K. M.**

## 2. ಎರಡನೆಯ ಅಂಶವು

### ಅಪರೋಕ್ಷಜ್ಞಾನಾನಂತರ ಕೃತವಾದ ಭಕ್ತಿಗೆ ಸಾಕ್ಷಾತ್ ಮೋಕ್ಷಸಾಧನತ್ವಸಮರ್ಥನವು.

ಶ್ರೀಶ್ರೀಗಳವರು— 1. **'ಅಮಲಾ ಭಕ್ತಿಶ್ಚ ತತ್ಸಾಧನಂ'** ಎಂಬ ಶ್ರೀ ವ್ಯಾಸರಾಯರ ವಾಕ್ಯದಲ್ಲಿ ಕೆಲವು ಸೂಕ್ಷ್ಮವಾದ ಶಾಸ್ತ್ರಾರ್ಥಗಳು ಅಡಗಿರುವುವು.

ಯಥಾಹಿ:— ವಸ್ತುತಃ ಬ್ರಹ್ಮಾಪರೋಕ್ಷಜ್ಞಾನವೇ ಮೋಕ್ಷಕಾರಣವಾದ ಶ್ರೀಹರಿಪ್ರಸಾದಕ್ಕೆ ಮುಖ್ಯಸಾಧನವು. ಅಪರೋಕ್ಷಜ್ಞಾನಾನಂತರದಲ್ಲಿ ಜ್ಞಾನಿಯು ಭಕ್ತಿಯನ್ನು ಮಾಡದಿದ್ದರೂ ಮುಕ್ತನಾಗುವುದು ನಿಶ್ಚಯವು. ಶ್ರೀಕೃಷ್ಣನು ಹೇಳುತ್ತಾನೆ:—

**(1) ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ।**
**ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ॥**
—(13. 24.)

ಪುರುಷನನ್ನೂ, ಗುಣಗಳಿಂದ ಸಹಿತವಾದ ಪ್ರಕೃತಿಯನ್ನೂ ಯಾವ ಅಧಿಕಾರಿಯು ತಿಳಿಯುತ್ತಾನೆಯೋ ಅಂಥಾ ಬ್ರಹ್ಮಜ್ಞಾನಿಯು ಪ್ರಮಾದಾದಿಗಳಿಂದ

---

**ಅರ್ಥವು:—** ನನ್ನಿಂದ ಉಪಪಾದಿತವಾಗಿರುವ ರೀತಿಯಲ್ಲಿ ಅದ್ವೈತತತ್ತ್ವವನ್ನು ಅಭ್ಯಾಸಮಾಡಿದವರಿಗೆ ಈ ವಿಷಯವು ವಿಶದವಾಗಿರಬೇಕು; ಏನೆಂದರೆ ಅದ್ವೈತತತ್ವದಲ್ಲಿ ಪ್ರಮಾಣಶಾಸ್ತ್ರಕ್ಕೂ (ಮನಃಶಾಸ್ತ್ರಕ್ಕೂ), ಸೃಷ್ಟಿಯೇ ಮೊದಲಾದ ಸಕಲಪ್ರಪಂಚವಿಷಯವನ್ನು ಪ್ರತಿಪಾದಿಸುವ ಶಾಸ್ತ್ರಕ್ಕೂ ಮೋಕ್ಷಸಾಧನವನ್ನು ನಿರೂಪಿಸುವ ಶಾಸ್ತ್ರಕ್ಕೂ ಸ್ವಲ್ಪವೂ ಅವಕಾಶವಿರುವುದಿಲ್ಲ.

ಘನಹೊಂದಿದ ಕೀರ್ತಿಕರ್ ಪಂಡಿತನೂ ಹೀಗೆಯೇ ಹೇಳಿರುತ್ತಾನೆ. ಆತನು ಮುಕ್ತಿಯೇ ಮುಂತಾದ ಸಕಲಪ್ರಪಂಚವೂ ಮಿಥ್ಯಾ ಎಂಬ ಉಪಪಾದನೆಯ ಮೇಲೆ ತನ್ನ ಅಭಿಪ್ರಾಯವನ್ನು ಬರೆಯುತ್ತಾನೆ:—

**With reference to the world of Ethical action "Of what value is a toy-elephant to one who understands that it is only a toy."**
**—Kirtikar (106).**

**ಅರ್ಥವು:—** ಮೋಕ್ಷಸಾಧನಾನುಷ್ಠಾನಾವಶ್ಯಕತೆಯನ್ನು ವಿಚಾರಿಸಿದರೆ, ಆನೆಗೊಂಬೆಯ ವಿಷಯದಲ್ಲಿ ಇದು ಆಟದ ಆನೆಯು ಎಂದು ತಿಳಿದವನಿಗೆ ಆ ಆನೆಗೊಂಬೆಯು

ನಿಷಿದ್ಧಗಳನ್ನು ಆಚರಿಸಿದರೂ ಅವನು ಪುನರ್ಜನ್ಮವನ್ನು ಹೊಂದುವುದಿಲ್ಲ. ಅವನು ಮುಕ್ತನಾಗಿಯೇ ಆಗುತ್ತಾನೆಂದರ್ಥವು.

(2) **ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ।**
**ಹತ್ವಾಪಿ ಸ ಇಮಾಁಲ್ಲೋಕಾನ್ ನ ಹಂತಿ ನ ನಿಬಧ್ಯತೇ ॥**
—(18. 17.)

ಯಾವ ಅಧಿಕಾರಿಗೆ ನಾನೇ ಸ್ವತಂತ್ರನೆಂಬ ಅಭಿಮಾನವಿಲ್ಲವೋ, ಯಾವಾತನ ಬುದ್ಧಿಯು ಫಲಸ್ನೇಹಾದಿಗಳಿಂದ ಲಿಪ್ತವಾಗುವುದಿಲ್ಲವೋ, ಅಂಥಾ ಜ್ಞಾನಿಯು ಈ ಲೋಕಗಳನ್ನು ನಾಶಮಾಡಿದರೂ ಅವನು ಸಂಸಾರದಲ್ಲಿ ಬದ್ಧನಾಗುವುದಿಲ್ಲ. ಜ್ಞಾನಿಯು ಮುಕ್ತನಾಗಿಯೇ ಆಗುತ್ತಾನೆಂದು ಭಾವವು.

ಈ ವಾಕ್ಯಗಳಿಂದ ಅಪರೋಕ್ಷಜ್ಞಾನಿಯು ಸ್ವೇಚ್ಛಾಚಾರಿಯುತನಾಗಿದ್ದರೂ ಕೂಡ ಆತನಿಗೆ ತಪ್ಪದೆ ಮೋಕ್ಷವು ಆಗುವುದು ಎಂದು ಸಿದ್ಧವಾಗುವುದು.

---

ಏನು ಬೆಲೆಗೆ ತಾನೇ ಬರುವುದು?" ಸಕಲಮೋಕ್ಷಸಾಧನಪ್ರಯತ್ನಗಳೂ ಜಗತ್ತು ಮಿಥ್ಯಾ ಎಂದು ತಿಳಿದವರಿಗೆ ವ್ಯರ್ಥವೆಂದು ಭಾವವು.

ಸೂಕ್ಷ್ಮವಿಚಾರಶೀಲನಾದ ಉರ್ಕುಹಾರ್ಟ್ ಸಾಹೇಬನು ಅದ್ವೈತಮತದ ರೀತ್ಯಾ ಮೋಕ್ಷಸಾಧನನಿರೂಪಣೆಗೇ ಅವಕಾಶವಿಲ್ಲವೆಂದೂ ಬಹಳ ವಿಶದವಾಗಿ ಬರೆದಿರುತ್ತಾನೆ:—

**"Our main problem may be put in the form of an enquiry whether the Ethical life can be maintained in its fulness on the basis of that doctrine of abstract and unmodified identity between ourselves and the characterless absolute, which would seem to be the resultant of Sankara's interpretation of the Vedanta? .... .... .... .... .... .... ....**

**"Undoubtedly, the strict Vendantist would show a tendency to answer in the negative this question as to whether Ethics is compatible with a doctrine of abstract identity .... .... ...."**

**—W. S. Urquhart, M. A. D.Litt.**

**ಅರ್ಥವು :**—ನಾವು ನಮ್ಮ ಉಪಪಾದನೆಯನ್ನು ಒಂದು ಪ್ರಶ್ನರೂಪವಾಗಿ ನಿರೂಪಿಸಬಹುದು. ನಮಗೂ (ಜೀವನಿಗೂ) ಶಂಕರಾಚಾರ್ಯರಿಗೆ ಭಾಷ್ಯಾಭಿಪ್ರೇತವಾದ ನಿರ್ಗುಣಬ್ರಹ್ಮ

ಆದುದರಿಂದ ಅನ್ವಯವ್ಯತಿರೇಕಗಳಿಂದ ಮುಕ್ತಿಗೆ ಪ್ರಯೋಜಕವಾದ ಧರ್ಮಗಳಲ್ಲಿ ಬ್ರಹ್ಮಾಪರೋಕ್ಷಜ್ಞಾನವು ಮುಖ್ಯಕಾರಣವೆಂದು ಸಿಶ್ಚಿತವಾಗುವುದು.

**ಪ್ರಶ್ನೆ:—** ಹಾಗಿದ್ದರೆ 'ಭಕ್ತಿಶ್ಚ ತತ್ಸಾಧನಂ' ಎಂದು ವ್ಯಾಸರಾಯರು ಏತಕ್ಕೆ ಹೇಳಿದರು ?

ಶ್ರೀಶ್ರೀಗಳವರು–ಅದನ್ನೇ ಸಿರೂಪಿಸುತ್ತಿದ್ದೇವೆ. ಎರಡು ಮೂರು ಕಾರಣಗಳುಂಟು. 1. ಮುಕ್ತಿಯು ಬಂಧನಿವೃತ್ತಿಪೂರ್ವಕವಾದ ಸ್ವರೂಪಾನಂದಾವಿರ್ಭಾವವೆಂದು ನಾವು ಹೇಳಿರುತ್ತೇವೆ. ಆದರೆ ಮುಕ್ತಿಯಲ್ಲಿ ಪರಮಾತ್ಮನ ಪ್ರಸಾದವಿಶೇಷದಿಂದ ಪ್ರಾಪ್ತವಾದ ಆನಂದದ ಉನ್ನಾಹವೂ ಅನೇಕ ಜೀವರುಗಳಿಗೆ ಬರುತ್ತದೆ. ಈ ಆನಂದಾತಿಶಯದಿಂದ ಸಹಿತವಾದ ಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿಯು ಕೇವಲ ಬ್ರಹ್ಮಾಪರೋಕ್ಷಜ್ಞಾನದಿಂದ ಬರಲಾರದು. ಮುಕ್ತಿಯಲ್ಲಿರುವ ಸ್ವರೂಪಾನಂದಾವಿರ್ಭಾವಕ್ಕೆ

---

ನಿಗೂ ನಿರ್ಧರ್ಮಕವಾದ ಐಕ್ಯವನ್ನು ಪ್ರತಿಪಾದನೆಮಾಡುವ ಅದ್ವೈತತತ್ತ್ವದಲ್ಲಿ ಮೋಕ್ಷಸಾಧನ ನಿರೂಪಣೆಗೆ ಅವಕಾಶವು ಇರುವುದೇ ? .... .... ... ನಿಸ್ಸಂಶಯವಾಗಿಯೂ, ಅದ್ವೈತವಾದದ ರೀತಿಯಿಂದ ಮೋಕ್ಷಸಾಧನಾನುಷ್ಠಾನಕ್ಕೆ ಆನುಗುಣ್ಯವು ಇರುವುದೇ ಎಂಬ ಪ್ರಶ್ನೆಗೆ ಸರಿಯಾದ ಅದ್ವೈತವೇದಾಂತಿಯು **ಇಲ್ಲ** ಎಂದೇ ಉತ್ತರಕೊಡುವುದಕ್ಕೆ ಮನಃಪ್ರಾವಣ್ಯವನ್ನು ತೋರಿಸುವನು.

ಇದೇ ಗ್ರಂಥಕರ್ತನು ಮತ್ತೊಂದು ಕಡೆಯಲ್ಲಿ ನಿರ್ಗುಣಬ್ರಹ್ಮವಾದದಲ್ಲಿ ಮಾನುಷ ಸಾಧನಾದಿಪ್ರತಿಪಾದನೆಗೆ ಅವಕಾಶವಿರುವುದಿಲ್ಲವೆಂದು ಹೆಚ್ಚು ಸ್ಪಷ್ಟವಾಗಿ ಬರೆದಿರುತ್ತಾನೆ: —

**"Sankara leaves unresolved the dualism wich the doctrine suggests as to the relation between God and the World. He does not by transforming the doctrine bring the world into organic relation with the eternal nature of God, but turns away from the difficulty as from an unreal problem of an unreal world."**

**—W. S. Urquhart, M. A. D.Litt. (168.)**

**ಅರ್ಥವು :—** ಶಂಕರಾಚಾರ್ಯರು ತಮ್ಮ ಅದ್ವೈತವಾದದ ರೀತ್ಯಾ ಪರಬ್ರಹ್ಮನಿಗೂ ಪ್ರಪಂಚಕ್ಕೂ ಯಾವ ಸಂಬಂಧವೆಂಬ ಪ್ರಶ್ನೆಗೆ ಉತ್ತರವನ್ನು ಹೇಳದೆ, ಯೋಜನೆಮಾಡದೆಯೇ

ಬ್ರಹ್ಮಾಪರೋಕ್ಷಜ್ಞಾನವೂ, ಆನಂದೋನ್ಮಾಹಕ್ಕೆ ಅಪರೋಕ್ಷಜ್ಞಾನವಾದ ಅನಂತರ ಮಾಡಿದ ಭಕ್ತ್ಯತಿಶಯವೂ, ಧ್ಯಾನಪ್ರವಚನಾದಿವಿಶೇಷಸಾಧನೆಗಳೂ ಕಾರಣವಾಗುವುವು. ಇಂಥಾ ಆನಂದೋನ್ಮಾಹದಿಂದ ಸಹಿತವಾದ ವಿಶಿಷ್ಟಮುಕ್ತಿಗೆ "ಭಕ್ತಿಶ್ಚ ಸಾಧನಂ" ಅಪರೋಕ್ಷಜ್ಞಾನದಿಂದ ಸಹಿತವಾಗಿ ಮಾಡಿದ ವಿಮಲಭಕ್ತಿಯೇ ಕಾರಣವು ಎಂದು ವ್ಯಾಸರಾಜರ ತಾತ್ಪರ್ಯವು. "ಮುಕ್ತಿರ್ನೈಜಸುಖಾನುಭೂತಿಃ" ಎಂಬ ಶ್ಲೋಕಭಾಗವೇ ಈ ಸೂಕ್ಷ್ಮವನ್ನು ತಿಳಿಸಿಕೊಡುವುದು. ನೈಜಸುಖದ ಅನುಭವವು ಮುಕ್ತಿಯು ಎಂದು ಒಂದರ್ಥವು. ನೈಜಸುಖಕ್ಕೆ ಅನುಸರಿಸಿ ಅಧಿಕವಾಗಿ ಬಂದ ಐಶ್ವರ್ಯವು (ಆನಂದಾತಿಶಯವು) ಮುಕ್ತಿಯು ಎಂದು ಮತ್ತೊಂದರ್ಥವು. ಅಂತೂ ಸ್ವರೂಪಾನಂದಾವಿರ್ಭಾವ ಮತ್ತು ಆನಂದಾತಿಶಯ ಇವೆರಡರಿಂದ ಸಹಿತವಾದ ವಿಶಿಷ್ಟಮುಕ್ತಿಗೆ ಜ್ಞಾನೋತ್ತರಕಾಲೀನವಾದ ಭಕ್ತಿಯು ಸಾಧನವೆಂದು ಹೇಳಿದುದು ಯಥಾರ್ಥವೇ.

2. ಕಿಂಚ ಕೆಲವು ಚೇತನರು ಅಪರೋಕ್ಷಜ್ಞಾನಾನಂತರದಲ್ಲಿ ದುರಾಚರಣೆಗಳನ್ನು ಮಾಡಿದರೆ ಅವರುಗಳ ಸ್ವರೂಪಾನಂದವೂ ಸಹ ಸಮಗ್ರವಾಗಿ

---

ಭಿನ್ನವಾಗಿ ಎರಡು ವಾದಗಳನ್ನು ಹಾಗೆಯೇ ಬಿಟ್ಟಿರುತ್ತಾರೆ. ಅವರು ತಮ್ಮ (ನಿರ್ಗುಣಬ್ರಹ್ಮ) ವಾದವನ್ನು ಸ್ವಲ್ಪ ಬದಲಾಯಿಸಿ ಬ್ರಹ್ಮನಿಗೂ ಪ್ರಪಂಚಕ್ಕೂ ಶಕ್ಯನಿರೂಪಣವಾದ ಯಾವುದಾದರೂ ಸರಿಯಾದ ಸಂಬಂಧವನ್ನು ಉಪಪಾದಿಸಿ ಹೇಳಲಾರರು. ಅವರು ಮಿಥ್ಯಾಪ್ರಪಂಚಸಂಬಂಧಿಯಾದ ಮಿಥ್ಯಾಪ್ರಶ್ನೆಯಿಂದಲೋ ಎಂಬಂತೆ ಈ ತೊಂದರೆಯಿಂದ ಹಿಂತಿರುಗುತ್ತಾರೆ.

ಇದು ಇನ್ನೂ ಸ್ಫುಟವಾದ ನಿರೂಪಣೆಯು :—

**"In order that Ethics may reach its goal, the annihilation of the self, Ethics itself must disappear."**

**—W. S. Urquhart.**

**ಅರ್ಥವು :—** ಅದ್ವೈತಮತದಲ್ಲಿ ಮೋಕ್ಷಸಾಧನಪ್ರತಿಪಾದಕಶಾಸ್ತ್ರವು ತನ್ನಿಂದ ಪ್ರತಿಪಾದಿತವಾದ ಆತ್ಮನಾಶರೂಪವಾದ ಅಂತ್ಯಫಲವನ್ನು ಹೊಂದಬೇಕಾದರೆ ತಾನೇ (ಮೋಕ್ಷಸಾಧನೆಯನ್ನು ನಿರೂಪಿಸುವ ಶಾಸ್ತ್ರವೇ) ಅದೃಶ್ಯವಾಗಬೇಕು. (ಸಾಧನಾನುಷ್ಠಾನವನ್ನು ಮಾಡುವ ಶಾಸ್ತ್ರವನ್ನು ಒಪ್ಪಿದರೆ ಬ್ರಹ್ಮಭಿನ್ನನಾದ ಜೀವನು ಬ್ರಹ್ಮಪ್ರಾಪ್ತಿರೂಪಫಲದ ಉದ್ದಿಶ್ಯ ಕರ್ಮ ಮಾಡುವನೆಂದು ಪ್ರಾಪ್ತವಾಗುವುದು. ಆದುದರಿಂದ ಶಾಸ್ತ್ರವೇ ಇಲ್ಲ ಎಂದು ಹೇಳುವರು ಎಂದು ಭಾವವು.)

ಪರಮಾತ್ಮನಿಂದ ಪ್ರಕಟಿಸಲ್ಪಡುವುದಿಲ್ಲ. ಪರಮಾತ್ಮನು ತನ್ನ ಇಚ್ಛಾವರಣವನ್ನು ಅನಾದ್ಯನಂತಕಾಲಕ್ಕೂ ತೆಗೆಯುವುದೇ ಇಲ್ಲ. ಹೀಗಿದ್ದರೂ ದುಃಖನಿವೃತ್ತಿಯಿಂದ ಸಹಿತವಾಗಿ ಕಿಂಚಿದೂನವಾಗಿ ಆವಿರ್ಭೂತವಾದ ತಮ್ಮ ಸ್ವರೂಪಸುಖವನ್ನು ಅನುಭವಿಸುತ್ತಾ ನಿರ್ಮಲಚಿತ್ತರಾಗಿಯೇ ಇರುವರು. ಆದುದರಿಂದ ಕೆಲವರ ವಿಷಯದಲ್ಲಿ, ಅಪರೋಕ್ಷಜ್ಞಾನೋತ್ತರಕಾಲದಲ್ಲಿ ಮಾಡಿದ ಭಕ್ತಿಯೇ ಮುಕ್ತಿಗೆ ಎಂದರೆ ಸ್ವರೂಪಾನಂದಾವಿರ್ಭಾವಕ್ಕೆ ಕಾರಣವೆಂದು ಹೇಳಿದರೂ ಯಥಾರ್ಥವೇ ಆಗುವುದು.

3. ಅಥವಾ "ಭಕ್ತಿಶ್ಚ ತತ್ಸಾಧನಂ" ಎಂಬ ವ್ಯಾಸರಾಜರ ವಾಕ್ಯವು ಲಾಕ್ಷಣಿಕಪ್ರಯೋಗವು ಎಂದು ಇಟ್ಟುಕೊಂಡರೆ ಯಾವ ತೊಂದರೆಯೂ ಇರುವುದಿಲ್ಲ. ಭಕ್ತಿ ಎಂದರೆ ಬ್ರಹ್ಮಜ್ಞಾನಸಹಿತವಾದ ಸ್ನೇಹವೆಂದು ಮುಖ್ಯಾರ್ಥವು. ಬ್ರಹ್ಮಾಪರೋಕ್ಷಜ್ಞಾನವೆಂದು ಲಾಕ್ಷಣಿಕಾರ್ಥವು. ಲಾಕ್ಷಣಿಕಪ್ರಯೋಗಕ್ಕೆ ಕಾರಣವು ಉಂಟು. ದ್ವೈತಿಗಳು ಒಪ್ಪುವ ಬ್ರಹ್ಮಾಪರೋಕ್ಷಜ್ಞಾನವು ಅದ್ವೈತಿಗಳು ಹೇಳುವಂಥಾ ನಿಷ್ಪ್ರಕಾರವಾದ ಪ್ರೀತಿಪೂರ್ವಕವಲ್ಲದ ನಿರಾಕಾರವಾದ ಜ್ಞಾನವಲ್ಲ. ಅದು ಸಮಾಧಿಪರಿಪಾಕದಲ್ಲಿ ಅತಿಸ್ನೇಹಪೂರ್ವಕವಾದ ಭಗವಂತನ ದಿವ್ಯರೂಪದರ್ಶನವು. ಜ್ಞಾನವು ಮೋಕ್ಷಸಾಧನವೆಂದು ಹೇಳಿದರೆ ಎಲ್ಲಿ ಅದ್ವೈತಿಗಳಿಗೂ ದ್ವೈತಿಗಳಿಗೂ ಈ ವಿಷಯದಲ್ಲಿ ಸಾಮ್ಯವು ಉಂಟೆಂದು ಜನರು ಭ್ರಮಿಸುವರೋ ಎಂಬ ಶಂಕೆಯಿಂದ, ಜ್ಞಾನಿಶಿಖಾಮಣಿಗಳಾದ ಶ್ರೀವ್ಯಾಸರಾಜರು, ಪೂರ್ವೋಕ್ತಜ್ಞಾನವನ್ನೇ ಭಕ್ತಿಶಬ್ದದಿಂದ ನಿರ್ದೇಶಮಾಡಿ "ಭಕ್ತಿಶ್ಚ ತತ್ಸಾಧನಂ" ಎಂದು ಹೇಳಿಬಿಟ್ಟರು. ಅಪರೋಕ್ಷಜ್ಞಾನವು ಭಕ್ತಿಯಿಂದ ಪೂರ್ಣವಾದ ಅವಸ್ಥಾವಿಶೇಷವು. ಮತ್ತು ಭಕ್ತಿಪೂರ್ವಕವಾದ ಸಾಧನಗಳಿಂದಲೇ ಕ್ರಮವಾಗಿ ಪ್ರಾಪ್ತವಾದದ್ದು. ಆದುದರಿಂದ ಅಪರೋಕ್ಷಜ್ಞಾನವನ್ನು 'ಭಕ್ತಿ' ಎಂದು ಲಾಕ್ಷಣಿಕಪದದಿಂದ ನಿರ್ದೇಶಮಾಡಿರುವುದು ಚಂದ್ರಿಕಾದಿಗ್ರಂಥಕರ್ತರಾದ ವ್ಯಾಸರಾಜರ ಪದಪ್ರಯೋಗನಿಪುಣತೆಗೇ ನಿದರ್ಶನವಾಗಿರುತ್ತದೆ. 4. ಪರಂತು ನಮ್ಮ ಮತದಲ್ಲಿ ಮುಕ್ತಿಹೇತುಭೂತವಾದ ಪರಮಾತ್ಮನ ಪರಿಪೂರ್ಣಪ್ರಸಾದವನ್ನು ಸಂಪಾದಿಸುವುದಕ್ಕೆ ಅನೇಕ ಸಾಧನಸಂಪತ್ತಿಗಳು ಹೇಳಿರುವುವು. ಇವುಗಳಲ್ಲೆಲ್ಲಾ ಒಂದೊಂದು ಮೆಟ್ಟಲಿನಲ್ಲಿಯೂ ಭಕ್ತಿಯು ಆವಶ್ಯಕವು. ಅದ್ವೈತಮತ

ದಲ್ಲಿ ತತ್ತ್ವಮಸ್ಯಾದಿವಾಕ್ಯೋತ್ಥನಿಷ್ಪ್ರಕಾರಕಜ್ಞಾನವು ಬಂದರೆ ಸಾಕು. ಈ ಮುಖ್ಯವ್ಯತ್ಯಾಸವನ್ನು ನಾವು ಅಲ್ಲಲ್ಲಿ ನಿರೂಪಿಸಿ ತೋರಿಸುತ್ತೇವೆ.

2. ಇನ್ನು ಅಧಿಕಾರಿಯು ಪ್ರಯತ್ನಗೋಚರವಾದ ಅನೇಕಧರ್ಮಗಳಲ್ಲಿ ಸಾಕ್ಷಾನ್ಮೋಕ್ಷಸಾಧನವೆಂದು ಹೇಳಲ್ಪಟ್ಟಿರುವ ಭಕ್ತಿಯು ಎಂಥಾದ್ದು ಎಂಬುದನ್ನು ವಿವರಿಸುತ್ತೇವೆ. ಅಜ್ಞನು ಮಾಡುವ ಮೂಢಭಕ್ತಿಯಿಂದ ಅಥವಾ ಭ್ರಾಂತನ ಮೋಹದಿಂದ ಮುಕ್ತಿಯು ದೊರಕಲಾರದು. ಶ್ರೀಮದಾಚಾರ್ಯರು,

**"ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥"**

ಎಂಬ ಪ್ರಮಾಣಶ್ಲೋಕವನ್ನು ಉದಾಹರಿಸಿ ಭಕ್ತಿಶಬ್ದಾರ್ಥವನ್ನು ನಿರೂಪಿಸಿರುತ್ತಾರೆ. ಇದಕ್ಕೆ ಶ್ರುತ್ಯರ್ಥಗರ್ಭಿತವಾದ* ವಿವರಣವು ಇರುತ್ತದೆ:—

**"ನಿರವಧಿಕಾನಂತಾನವದ್ಯಕಲ್ಯಾಣಗುಣತ್ವಜ್ಞಾನಪೂರ್ವಕಃ ಸ್ವಸ್ವಾತ್ಮೀಯಸಮಸ್ತವಸ್ತುಭ್ಯೋಽನೇಕಗುಣಾಧಿಕಃ ಅಂತರಾಯಸಹಸ್ರೇಣಾಪ್ಯಪ್ರತಿಬದ್ಧಃ ಪ್ರೇಮಪ್ರವಾಹೋ ಭಕ್ತಿಃ"**

ಪ್ರತ್ಯೇಕವಾಗಿ ಒಂದೊಂದೂ ಅನಂತವಾದ ಅನಂತನಿರ್ದೋಷಶುಭಗುಣಗಳಿಂದ ಪರಮಾತ್ಮನು ಪರಿಪೂರ್ಣನು ಎಂಬ **ಜ್ಞಾನಪೂರ್ವಕವಾದ,** ತಾನು, ತನ್ನ ಸಂಬಂಧಿಯಾದ ದೇಹ, ಪ್ರಾಣ, ಮಾನ, ಧನ, ದಾರಾ, ಪುತ್ರ, ಮಿತ್ರ, ಗೇಹ ಮೊದಲಾದ ಸಕಲವಸ್ತುಗಳಲ್ಲಿ ತನಗಿರುವ ಪ್ರೀತಿಗಿಂತ ಅನಂತ ಮಡಿ ಗುಣಿಸಿದಷ್ಟು, ವಿಘ್ನಸಹಸ್ರಗಳು ಬಂದರೂ ಪ್ರತಿಬದ್ಧವಾಗದ ಪ್ರೇಮಪ್ರವಾಹವು ಭಕ್ತಿಯೆನ್ನಿಸುವುದು.

ಏವಂಚ ಯಥಾರ್ಥವಾದ ಪರಮಾತ್ಮನ ಸ್ವರೂಪಜ್ಞಾನವು ಮತ್ತು ನಿರವಧಿಕಪ್ರೀತಿಯು ಇವೆರಡು ದಳಗಳಿಂದ ಸಹಿತವಾದ ಪರಿಪೂರ್ಣಭಕ್ತಿಯು ಪರಮಾತ್ಮನ ಪರಿಪೂರ್ಣಪ್ರಸಾದಾವಿರ್ಭಾವಕ್ಕೆ ಕಾರಣವಾಗುತ್ತದೆ. ಈ ಲಕ್ಷಣವಾಕ್ಯಪರ್ಯಾಲೋಚನೆಯಿಂದಲೇ ಬ್ರಹ್ಮಾಪರೋಕ್ಷಜ್ಞಾನವಾದ

---

* "ತಸ್ಯ ಪುತ್ರಾತ್ಪ್ರೇಯಃ ವಿತ್ತಾತ್ಪ್ರೇಯಃ" ಇತ್ಯಾದಿಶ್ರುತಿಗಳಿಂದ ಪರಬ್ರಹ್ಮನೇ ಪರಮೇಷ್ಟನಾದ ವಸ್ತುವೆಂದು ಸಿದ್ಧವಾಗುವುದು.

ಹೊರತು ಇಂಥಾ ಸಮುಗ್ರಭಕ್ತಿಯು ಬರಲಾರದೆಂದು ನಿಶ್ಚಿತವಾಗುವುದು. ಶ್ರೀಕೃಷ್ಣನು ಅಪರೋಕ್ಷಜ್ಞಾನಿಗಿಂತಲೂ ಈರೀತಿ ನಿಷ್ಕಾಮಭಕ್ತಿಯನ್ನು ಮಾಡುವವನು ಶ್ರೇಷ್ಠನೆಂದು ದ್ವಾದಶಾಧ್ಯಾಯದಲ್ಲಿ ನಿರೂಪಿಸಿರುತ್ತಾನೆ:—

**(3) ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ।**
**ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ।**
**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ।**
**ಮಯ್ಯರ್ಪಿತಮನೋಬುದ್ಧಿರ್ಯೋ ಮದ್ಭಕ್ತಸ್ಸಮೇ ಪ್ರಿಯಃ॥**
**ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ।**
**ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸಚ ಮೇ ಪ್ರಿಯಃ।**
**ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ।**
**ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ॥**
**ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ।**
**ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಸ್ಸಮೇ ಪ್ರಿಯಃ॥**
**ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ।**
**ಶೀತೋಷ್ಣಸುಖದುಃಖೇಷು ಸಮಸ್ಸಂಗವಿವರ್ಜಿತಃ॥**
**ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್।**
**ಅನಿಕೇತಸ್ಥಿರಮತಿರ್ಭಕ್ತಿಮಾನ್ ಮೇ ಪ್ರಿಯೋ ನರಃ॥**
**ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ।**
**ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ॥**

—(12. 13—20.)

**ಅರ್ಥವು:**–ಯಾವಾತನು ಸರ್ವಪ್ರಾಣಿಗಳ ವಿಷಯದಲ್ಲಿಯೂ ದ್ವೇಷರಹಿತನಾಗಿ, ಕ್ಲೇಶಸ್ಥಾನವನ್ನು ತಿಳಿದು ಪರಿರಕ್ಷಿಸುವನಾಗಿ, ಕೃಪಾಯುಕ್ತನಾಗಿ ಮಮತಾಹಂಕಾರಗಳಿಂದ ರಹಿತನಾಗಿ, ಸಮದುಃಖಸುಖನಾಗಿ, ಸಹನಶೀಲನಾಗಿ, ಸರ್ವದಾ ಅಲಂಬುದ್ಧಿಯುಳ್ಳವನಾಗಿ, ಧ್ಯಾನಾದಿಯತ್ನಶೀಲನಾಗಿ, ವಿಷಯಗಳದೆಸೆಯಿಂದ ನಿವರ್ತಿಸಲ್ಪಟ್ಟ ಚಿತ್ತವುಳ್ಳವನಾಗಿ, ಅಪ್ರಾಮಾಣ್ಯಸಂದೇಹರಹಿತವಾದ ತತ್ವನಿಶ್ಚಯವುಳ್ಳವನಾಗಿ, ನನ್ನಲ್ಲಿ ಸಮರ್ಪಿತವಾದ ಮನಸ್ಸು ಬುದ್ಧಿ

ಯುಳ್ಳವನಾಗಿರುವನೋ ಅಂಥಾ ನನ್ನ ಭಕ್ತನು ನನಗೆ ಪ್ರಿಯನು. ಯಾವ ಜ್ಞಾನಿಯ ದೆಸೆಯಿಂದ ಜನವು ಭಯಪಡುವುದಿಲ್ಲವೋ (ಯಾವನು ಜನರಿಗೆ ಭಯಜನಕವಾದ ವ್ಯಾಪಾರವನ್ನು ಮಾಡುವುದಿಲ್ಲವೋ) ಮತ್ತು ಯಾವನು ಲೋಕವನ್ನು ನೋಡಿ ಭಯಪಡುವುದಿಲ್ಲವೋ, ಹರ್ಷವೆಂದರೆ ಅಧರ್ಮಾರ್ಥವಾಗಿ ಮನಃಪ್ರವೃತ್ತಿ, ಅಮರ್ಷ ಎಂದರೆ ಸಿಡಿಕಲು ಕೋಪ ಇವುಗಳಿಂದಲೂ ಮತ್ತು ಭಯ, ಉದ್ವೇಗಾದಿಗಳಿಂದಲೂ ಮುಕ್ತನೋ ಅಂಥಾ ನನ್ನ ಭಕ್ತನು ನನಗೆ ಪ್ರಿಯನು. ಯಾವಾತನು ಭಗವದ್ಭಕ್ತಿಜ್ಞಾನಾತಿರಿಕ್ತವಸ್ತುಗಳ ಅಪೇಕ್ಷಾ ರಹಿತನಾಗಿ, ಬಾಹ್ಯಾಂತಃಶುದ್ಧಿಯುಳ್ಳವನಾಗಿ, ಭಗವತ್ಕರ್ಮಾನುಷ್ಠಾನದಲ್ಲಿ ಪಟುವಾಗಿ, ಕ್ಷುದ್ರವಿಷಯಗಳಲ್ಲಿ ಉದಾಸೀನನಾಗಿ, ಪರಕೃತವಾದ ಅಪಕಾರಾದಿಗಳಿಂದ ಮನಃಕ್ಲೇಶಗಳನ್ನು ಹೊಂದದವನಾಗಿ, ಸರ್ವಾರಂಭಪರಿತ್ಯಾಗೀ–ಎಂದರೆ ಸರ್ವಪ್ರಾಪಂಚಿಕ ಉದ್ಯೋಗಗಳನ್ನೂ ಪರಿತ್ಯಾಗಮಾಡಿದವನಾಗಿ ಇರುವನೋ ಅಥವಾ ಸರ್ವ ಉದ್ಯೋಗವನ್ನೂ ಪರಮಾತ್ಮನಲ್ಲಿ ಅರ್ಪಿಸಿದವನಾಗಿ ಇರುವನೋ ಅಂಥಾ ನನ್ನ ಭಕ್ತನು ನನಗೆ ಪ್ರಿಯನು. ಯಾವಾತನು ಸರ್ವದಾ ಅಧರ್ಮಾರ್ಥವಾಗಿ ಮನಃಪ್ರವೃತ್ತಿರಹಿತನಾಗಿ, ಸರ್ವದಾ ಪರರಿಗೆ ಅನಿಷ್ಟವನ್ನು ಆಚರಿಸದವನಾಗಿ, ಶೋಕರಾಗಗಳಿಂದ ರಹಿತನಾಗಿ, ಶುಭಾಶುಭ ಪರಿತ್ಯಾಗಿ– ಎಂದರೆ ಸ್ವರ್ಗಾದ್ಯುದ್ದೇಶಕವಾದ ಶುಭಗಳನ್ನೂ, ವಿಧಿವಿರುದ್ಧವಾದ ಅಶುಭಗಳನ್ನೂ ಪರಿತ್ಯಾಗ ಮಾಡುವವನಾಗಿ ಇರುವನೋ ಅಂಥಾ ಭಕ್ತಿಪೂರ್ಣನಾದ ಜ್ಞಾನಿಯು ನನಗೆ ಪ್ರಿಯನು.

ಯಾವಾತನು ಶತ್ರುಮಿತ್ರರುಗಳಲ್ಲಿ ಸಮನಾಗಿ* ಮಾನಾಪಮಾನ, ಶೀತೋಷ್ಣ, ಸುಖದುಃಖ ಇವೇ ಮುಂತಾದ ದ್ವಂದ್ವಗಳನ್ನೂ ಸಹಿಸುವವನಾಗಿ,

---

* 1. ಶತ್ರುಮಿತ್ರರ ಭಗವದ್ವೇಷಾದಿಗಳನ್ನು ಅನುಸರಿಸಿ ಅವರ ಯೋಗ್ಯತಾನುಗುಣವಾದ ದ್ವೇಷಪ್ರೀತಿಗಳನ್ನು ಮಾಡುವುದು ಒಂದುವಿಧವಾದ ಸಮತ್ವವು; 2. ಶತ್ರುವು ದ್ವೇಷಮಾಡಿದರೂ ಪ್ರತಿದ್ವೇಷಮಾಡದೆ ಮಿತ್ರನು ಲೌಕಿಕವಿವಕ್ಷೆಯಿಂದ ಪ್ರೀತಿಸಿದರೂ ಪ್ರತಿಪ್ರೀತಿಯನ್ನು ಮಾಡದೆ ಅವರವರ ಭಕ್ತ್ಯಾದಿಗುಣಗಳಿಗನುಗುಣವಾಗಿ ಅವರನ್ನು ತಿಳಿಯುವದು ಒಂದು ವಿಧವಾದ ಸಮತ್ವವು. 3. ಶತ್ರುವು ಮನೆಯನ್ನು ಹಾಳುಮಾಡಿದರೂ ಆತನು ಸ್ವತಂತ್ರನಲ್ಲ, ನನ್ನ ಕರ್ಮಗಳನ್ನು ನಿಮಿತ್ತಮಾಡಿ ಪರಮಾತ್ಮನು ಅವನಲ್ಲಿ ನಿಂತು ಫಲವನ್ನು ಕೊಟ್ಟಿರುವನೆಂದು ತಿಳಿದು, ಮಿತ್ರರು ಉಪಕಾರಮಾಡಿದರೆ ಆ ಪರಮಾತ್ಮನು ಅವರಲ್ಲಿ ನಿಂತು ನನಗೆ ಉಪಕಾರಮಾಡಿರುವನೆಂದೂ ತಿಳಿದು

ದುಸ್ಸಂಗರಹಿತನಾಗಿ, ನಿಂದಾಸ್ತುತಿಗಳಲ್ಲಿ ಸಮನಾಗಿ, ಮನನಶೀಲನಾಗಿ, ವಿಷಯಗಳಲ್ಲಿ ಅಪೇಕ್ಷಾರಹಿತನಾಗಿ ಎಷ್ಟು ಪ್ರಾಪ್ತವಾದರೆ ಅಷ್ಟರಿಂದಲೇ ಅಲಂಬುದ್ಧಿಯುಳ್ಳವನಾಗಿ, (ಅಭಿಮಾನೋತ್ಪತ್ತಿಗೆ ಕಾರಣವಾಗುವುದರಿಂದ) ನಿಯತಸ್ಥಳದಲ್ಲಿ ವಾಸರಹಿತನಾಗಿ, ಕುತರ್ಕಗಳಿಂದ ಚಾಂಚಲ್ಯರಹಿತವಾದ ಜ್ಞಾನವುಳ್ಳವನಾಗಿರುವನೋ ಅಂಥಾ ಪೂರ್ಣಭಕ್ತನಾದ ಪುರುಷನು ನನಗೆ ಪ್ರಿಯನು ಧರ್ಮ್ಯಾಮೃತಂ– ಎಂದರೆ ಧಾರಕನಾದ ವಿಷ್ಣುವಿನ ಪ್ರತ್ಯಕ್ಷಸಾಧಕವಾದ ಮತ್ತು ಮೋಕ್ಷಹೇತುಭೂತವಾದ ಈ ಯಾವತ್ತು ಧರ್ಮಗಳನ್ನು ಅನುಷ್ಠಾನ

---

ಸ್ವತಂತ್ರಭಗವಂತನಲ್ಲಿ ಪ್ರೀತಿಮಾಡಿ ಅಸ್ವತಂತ್ರಜನವರ್ಗವು ನಿಮಿತ್ತಮಾತ್ರವೆಂದು ತಿಳಿದು ಅವರಲ್ಲಿ ತನಗೆ ಉಪಕಾರಮಾಡಿದುದರ ನಿಮಿತ್ತದಿಂದ ಪ್ರೀತಿಸದೆ, ಅಪಕಾರಮಾಡಿದುದರ ನಿಮಿತ್ತದಿಂದ ದ್ವೇಷಿಸದೆ ಅವರ ಭಗವದ್ಭಕ್ತ್ಯಾದಿಗುಣಗಳಿಗನುಗುಣವಾಗಿಯೇ ಅವರನ್ನು ಪ್ರೀತಿಮಾಡುವುದು ಒಂದುವಿಧವಾದ ಸಮತ್ವವು. 4. ಭಗವಚ್ಛತ್ರುಗಳು ಉಪಕಾರಮಾಡಿದರೂ ಅದು ಅವರಿಗೆ ಆಗಂತುಕಧರ್ಮವೆಂದು ತಿಳಿದು ಅವರಲ್ಲಿ ಪ್ರೀತಿಮಾಡದೆ ಅವರ ಸ್ವಭಾವವನ್ನು ತಿಳಿದು ದ್ವೇಷವನ್ನೇ ಮಾಡಿ, ಭಗವನ್ಮಿತ್ರರು ಕೆಟ್ಟ ಕೆಲಸವನ್ನು ಮಾಡಿದರೂ ಅದು ಆಗಂತುಕಧರ್ಮವಾದುದರಿಂದ ಅದು ನಿವೃತ್ತವಾಗುವದೆಂದು ತಿಳಿದು ಅವರ ಸ್ವಭಾವವನ್ನು ತಿಳಿದು ಅವರನ್ನು ಪ್ರೀತಿಮಾಡುತ್ತಲೇ ಇರುವುದು ಒಂದು ವಿಧವಾದ ಸಮತ್ವವು. 5. ಶತ್ರುವಿನ ಅಪಕಾರದಿಂದ ಕುಗ್ಗದೆ ಮಿತ್ರನ ಸ್ತುತಿವಚನದಿಂದ ಹಿಗ್ಗದೆ ಏಕಪ್ರಕಾರವಾಗಿ ಪರಮಾತ್ಮನಲ್ಲಿ ರತಿಮಾಡುವುದು ಒಂದು ವಿಧವಾದ ಸಮತ್ವವು. 6. ಶತ್ರುವು ಮೋಕ್ಷವಿರೋಧಿಯಾದುದರಿಂದ ಹೇಗೆ ತ್ಯಾಜ್ಯನೋ ಹಾಗೆ ಲೌಕಿಕಮಿತ್ರರೆಲ್ಲರೂ ಮೋಕ್ಷವಿರೋಧಿಗಳಾದುದರಿಂದ ಅವರ ಸಂಗವೂ ಪರಿತ್ಯಾಜ್ಯವೆಂದು ನಿಶ್ಚಯಿಸಿ ಉಭಯರೂ ಅನಿಷ್ಟವೆಂದು ತಿಳಿಯುವುದು ಮತ್ತೊಂದು ವಿಧವಾದ ಸಮತ್ವವು 7. ಶತ್ರುಮಿತ್ರರುಗಳಲ್ಲಿರುವ ಪರಮಾತ್ಮನು ಸಮನು ಎಂದು ತಿಳಿಯುವುದೂ ಒಂದು ವಿಧವಾದ ಸಮತ್ವವು. ಇದಕ್ಕೆ ಭಿನ್ನವಾದ ಸಮತ್ವಜ್ಞಾನವು ಎಂದರೆ ಶತ್ರುವೂ ಮಿತ್ರನೂ ಸಮನೇ ಎಂದು ತಿಳಿಯೋಣವು ದೊಡ್ಡ ಭ್ರಾಂತಿಯು, ಅದು ಜ್ಞಾನಿಗೆ ಇರುವುದಿಲ್ಲ.

ಇದೇ ನ್ಯಾಯದಿಂದ ಈ ಪ್ರಕರಣದಲ್ಲಿ ಪರರನ್ನು ದ್ವೇಷಮಾಡದೆ ಎಂದರೆ ಸಜ್ಜನರನ್ನು ದ್ವೇಷಮಾಡದೆ ಎಂದೂ, ಸರ್ವರಿಗೂ ಹಿತಕರನಾಗಿ ಎಂದರೆ ಸರ್ವಸಜ್ಜನರಿಗೂ ಹಿತಕರನಾಗಿ ಎಂದೂ, ಎಲ್ಲರನ್ನೂ ಪ್ರೀತಿಮಾಡುವವನಾಗಿ ಎಂದರೆ ಎಲ್ಲಾ ಒಳ್ಳೆಯವರಲ್ಲೂ ಪ್ರೀತಿಯುಳ್ಳವನಾಗಿ ಎಂದೂ, ಸರ್ವರನ್ನೂ ಪರಿತ್ಯಜಿಸಿ ಎಂದರೆ ಸರ್ವಮೋಕ್ಷಾನುಪಯುಕ್ತ ಪದಾರ್ಥಗಳನ್ನೆಲ್ಲಾ ಪರಿತ್ಯಜಿಸಿ ಎಂದೂ ಅರ್ಥವನ್ನು ತಿಳಿದುಕೊಳ್ಳಬೇಕು.

ಮಾಡುವವರಾಗಿ, ಶ್ರದ್ಧಾಪೂರ್ಣರಾಗಿ, ನಾನೇ (ಶ್ರೀಕೃಷ್ಣನೇ) ಸರ್ವೋತ್ತಮನೆಂದು ತಿಳಿದು ನನ್ನನ್ನು ಯಾರು ನಿರಂತರ ಉಪಾಸನೆ ಮಾಡುತ್ತಾರೆಯೋ ಅಂಥಾ ನನ್ನ ಭಕ್ತರು ನನಗೆ ಅತ್ಯಂತಪ್ರಿಯರು.

ಕೇವಲ ಅಪರೋಕ್ಷಜ್ಞಾನಿಗಿಂತ ನಿರಂತರ ಭಗವದಾರಾಧನದಲ್ಲಿ (ಧ್ಯಾನ, ಪ್ರವಚನ, ಲೋಕಶಿಕ್ಷಾರ್ಥವಾದ ಕರ್ಮಾಚರಣಗಳಲ್ಲಿ) ತತ್ಪರನಾದ ಭಕ್ತನು ಪರಮಾತ್ಮನ ಹೆಚ್ಚು ಪ್ರೀತಿಗೆ ಆಸ್ಪದನೆಂಬುದು ಶ್ರೀಕೃಷ್ಣನ ವಾಕ್ಯಗಳ ಸ್ವಾರಸ್ಯಪರ್ಯಾಲೋಚನೆಯಿಂದಲೇ ತಿಳಿದುಬರುವುದು :—

**(4) ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ।**
—(7. 17.)

ಜ್ಞಾನಿಗೆ ನಾನು ಅತ್ಯಂತಪ್ರೀತಿವಿಷಯನು. ಅವನೂ ಸಹ ನನಗೆ ಪ್ರೀತಿವಿಷಯನು ಎಂದು ಶ್ರೀಕೃಷ್ಣನು ಜ್ಞಾನಿಯನ್ನು ಪ್ರಶಂಸನೆಮಾಡಿದನು. ಭಕ್ತನನ್ನು ಪ್ರಶಂಸನೆಮಾಡುವಾಗ :—

**(5) ಶ್ರದ್ಧಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ।**
—(12. 20.)

ಎಂದರೆ ನನ್ನ ಭಕ್ತರು ನನಗೆ **ಅತ್ಯಂತಪ್ರೀತಿವಿಷಯರು** ಎಂದು ಹೇಳಿದನು. ಅಪರೋಕ್ಷಜ್ಞಾನಿಯು ಪ್ರೀತಿವಿಷಯನು; ಅಪರೋಕ್ಷಜ್ಞಾನವನ್ನು ಹೊಂದಿದಮೇಲೂ ಉನ್ಮತ್ತನಾಗದೆ ಭಗವದುಪಾಸನೆಯಲ್ಲಿ ತತ್ಪರನಾದ ಭಕ್ತನು ಅತ್ಯಂತಪ್ರೀತಿವಿಷಯನು. ಇಂಥಾ ಭಕ್ತನಿಗೇ ಜ್ಞಾನೋಪದೇಶರೂಪವಾದ ವಿಶಿಷ್ಟಕರ್ಮದಲ್ಲಿ ಮುಖ್ಯಾಧಿಕಾರವು. ಇಂಥವನನ್ನೇ ಶ್ರೀಕೃಷ್ಣನು ಹದಿನೆಂಟನೆಯ ಅಧ್ಯಾಯದಲ್ಲಿ ಸ್ತುತಿಸಿರುತ್ತಾನೆ:—

**(6) ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ।**
**ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥**
**ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ।**
**ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ ॥**
—(18. 68-69.)

ಅತಿಗೋಪ್ಯವಾದ ಈ ಗೀತಾತತ್ವವನ್ನು ಯಾವ ಜ್ಞಾನಿಯು ನನ್ನ ಭಕ್ತರಿಗೆ ಉಪದೇಶಮಾಡುತ್ತಾನೆಯೋ ಆತನು ನನ್ನಲ್ಲಿ ಇನ್ನೂ ಅಧಿಕವಾದ ಭಕ್ತಿಯನ್ನು ಮಾಡಿ ಸಂಶಯವಿಲ್ಲದೆ ನನ್ನನ್ನೇ ಹೊಂದುತ್ತಾನೆ. ಅಂಥಾ

ಗೀತಾರಹಸ್ಯಾರ್ಥವನ್ನು ಉಪದೇಶಮಾಡುವವನಿಗಿಂತಲೂ ನನಗೆ ಇಷ್ಟವಾದ ಕಾರ್ಯವನ್ನುಮಾಡಿದ ಮನುಷ್ಯರಲ್ಲಿ ಯಾವ ಒಬ್ಬನೂ ಶ್ರೇಷ್ಠನು ಇಲ್ಲ. ಅವನೇ ನನಗೆ ಅತ್ಯಂತ ಇಷ್ಟಕಾರ್ಯವನ್ನು ಮಾಡಿದವನೆಂದರ್ಥವು. ಅತನಿಗಿಂತ ನನಗೆ ಅತ್ಯಂತಪ್ರೀತಿವಿಷಯನು ಮತ್ತೊಬ್ಬನು ಈಗ ಇಲ್ಲ, ಉತ್ತರಕಾಲದಲ್ಲಿ ಇರುವುದಿಲ್ಲ, ಹಿಂದೂ ಇರಲಿಲ್ಲ.

ಈ ವಾಕ್ಯದಿಂದಲೇ ತಮ್ಮ ಸ್ವಾಭಿಪ್ರಾಯವನ್ನು ಗೀತಾವಾಕ್ಯಗಳಿಗೆ ಆರೂಢವಾಗುವಂತೆ ಮಾಡದೇ "ಗೀತಾರ್ಥಂ ವಕ್ಷ್ಯಾಮಿ ಲೇಶತಃ" ಎಂದು ಪ್ರತಿಜ್ಞೆಮಾಡಿ, ಗೀತಾವಾಕ್ಯಗಳಿಗಿದ್ದ ಶ್ರೀಕೃಷ್ಣನ ಅಭಿಪ್ರಾಯಗಳನ್ನೇ ಅನಂತಶ್ರುತಿಸ್ಮೃತಿಗಳ ಬಲದಿಂದ ಪ್ರದರ್ಶನಮಾಡಿದ ನಮ್ಮ ಶ್ರೀಮದಾಚಾರ್ಯರು ಶ್ರೀಕೃಷ್ಣನ ಭಕ್ತೋತ್ತಮರು ಎಂದು ಸಿದ್ಧವಾಗುವುದು.* ಗೀತೆಯ ಯಥಾರ್ಥತತ್ವವನ್ನು ಅವರೊಬ್ಬರೇ ಯಥಾರ್ಥವಾಗಿ ತಿಳಿಸಿರುವುದರಿಂದ ಅವರೇ ಪರಮಾತ್ಮನ ಅತ್ಯಂತ ಇಷ್ಟವಾದ ಕಾರ್ಯವನ್ನು

---

* ಗೀತಾರ್ಥವನ್ನೇ ಶ್ರೀಮದಾಚಾರ್ಯರು ಹೇಳಿರುವರೆಂದು ಶ್ರೀಪಾದಂಗಳವರು ನಿರೂಪಿಸಿರುತ್ತಾರೆ. ಶಂಕರಾಚಾರ್ಯರು ತಮ್ಮ ಅರ್ಥವನ್ನು ಗೀತೆಗೆ ಬಲಾತ್ಕಾರವಾಗಿ ತುರುಕಿರುವರೆಂದು ಮ್ಯಾಕ್ಡೊನೆಲ್ ಸಾಹೇಬನೇ ಮುಂತಾದ ಅನೇಕ ಆಂಗ್ಲೇಯಪಂಡಿತರು ಹೇಳಿರುತ್ತಾರೆ. ಇದು ಮ್ಯಾಕ್ಡೊನೆಲ್ ಪಂಡಿತನ ವಾಕ್ಯವು :—

**"From the Gita he tries to adduce proofs for his own doctrine" —A. C. Macdonell.**

ಶಂಕರಾಚಾರ್ಯರು ತಮ್ಮ ಸ್ವಂತ ತತ್ವಕ್ಕೆ ಗೀತೆಯಿಂದ ರುಜುವಾತುಗಳನ್ನು ಸಂಗ್ರಹಿಸುವುದಕ್ಕೆ ಯತ್ನಮಾಡುತ್ತಾರೆ ಎಂದು ಅರ್ಥವು. ಜ್ಞಾನಿಗೆ ಕರ್ಮಪರಿತ್ಯಾಗ, ಅಜ್ಞಾನಿಗೆ ಕರ್ಮಪರಿತ್ಯಾಗ, ಜೀವನ ಬ್ರಹ್ಮತ್ವ ಇವೇ ಮೊದಲಾದ ಬಹುವಿಷಯ ಚರ್ಚೆಯನ್ನು ಮಾಡಿದ ಅನಂತರ ಸುಪ್ರಸಿದ್ಧನಾದ ಆರ್. ಸಿ. ಬೋಸ್‌ನಾಮಕ ಪಂಡಿತನಿಗೆ ಅದ್ವೈತವಾದದ ವಿಷಯದಲ್ಲಿ ಬಹು "ಜುಗುಪ್ಸೆ"ಯು ಪ್ರಾಪ್ತವಾಗಿರುವುದು. ಆತನು ತನ್ನ ಕ್ರೂರನಿಶ್ಚಯವನ್ನು ನಿರವಕಾಶವಾಣಿಯಿಂದ ನಿರೂಪಿಸಿರುತ್ತಾನೆ:—

**"The system has proved a refuge of lies to many a hardened sinner. The perplexed minds which have found shelter in its solution of the problem of existence are few in-**

ಮಾಡಿದವರು, ಮತ್ತು ಪರಮಾತ್ಮನ ಅತ್ಯಂತಪ್ರೀತಿಗೆ ವಿಷಯರಾದವರು. ಅವರಿಂದ ತಿಳಿದ ತತ್ವವನ್ನು ಭಕ್ತರಿಗೆ ಉಪದೇಶಮಾಡುವ ಇತರಜ್ಞಾನಿಗಳೂ ಯಥಾಯೋಗ್ಯವಾಗಿ ಪರಮಾತ್ಮನ ಅತ್ಯಂತಪ್ರೀತಿಗೆ ವಿಷಯರಾಗುವುದರಲ್ಲಿ ಸಂದೇಹವಿಲ್ಲ. ಅಂತೂ ಈ ವಾಕ್ಯಗಳಿಂದ ಧ್ಯಾನಪ್ರವಚನಾದಿಗಳಿಂದ ಸಹಿತನಾದ, ನಿಷ್ಕಾಮನಾದ ಜ್ಞಾನಿಯು (ಭಕ್ತನು) ಅಪರೋಕ್ಷಜ್ಞಾನವನ್ನು ಮೊದಲೇ ಹೊಂದಿರುವನು, ಮತ್ತು ಕೇವಲ ಅಪರೋಕ್ಷಜ್ಞಾನಿಗಿಂತ ಪರಮಾತ್ಮನ ಹೆಚ್ಚು ಪ್ರೀತಿಗೆ ಪಾತ್ರನು; ಈತನು ಮಾಡುವ ಭಕ್ತಿಯು ಮುಕ್ತಿಗೆ ಅವ್ಯವಹಿತಪೂರ್ವದಲ್ಲಿ ಇರುವ ಅವಸ್ಥೆಯು. ಇದರಿಂದ ಪರಿಪೂರ್ಣವಾದ ಭಗವಂತನ ಪ್ರಸಾದವು ಪ್ರಾಪ್ತವಾಗುವುದು. ತದನಂತರ ಸಕಲ ಜ್ಞಾನಿಗಳೂ ಲಿಂಗಭಂಗವನ್ನು ಹೊಂದಿ ಸ್ವಯೋಗ್ಯತಾನುಸಾರವಾಗಿ ಮೋಕ್ಷಸುಖವನ್ನು ಅನುಭವಿಸುವರು ಎಂದು ಸಿದ್ಧವಾಗುವುದು. ಹಾಗಿರುವುದರಿಂದಲೇ ಅಪರೋಕ್ಷಜ್ಞಾನಿಯಾದ ಅರ್ಜುನನಿಗೂ ಸಹ ಶ್ರೀಕೃಷ್ಣನು ಯುದ್ಧಾದಿ ಸ್ವವಿಹಿತಕರ್ಮದಲ್ಲಿ ಪುನಃ ಪುನಃ ಪ್ರೇರಿಸುತ್ತಿರುವನು.

ಶ್ರೀಕೃಷ್ಣನ ಚತುರ್ದಶಾಧ್ಯಾಯದ ಶ್ಲೋಕವು ಭಕ್ತಿಯೇ ಸಾಕ್ಷಾನ್ಮೋಕ್ಷಸಾಧನವೆಂಬುದರಲ್ಲಿ ಸ್ಪಷ್ಟವಾಗಿರುತ್ತದೆ:—

(7) **ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।**
**ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ॥**
—(14. 26.)

---

**deed, but the number of wicked hearts which have been composed to sleep by the opiate of its false hope is incalculable" —Hindu Philosophy by R. C. Bose.**

**ಅರ್ಥವು:—** ಅದ್ವೈತವಾದವು ಬಹುಕ್ರೂರಪಾಪಿಗಳಿಗೆ ಉಪಯೋಗವಾಗುವ ಅನೃತಗಳ ನಿವಾಸವಾಗಿರುತ್ತದೆ. ತತ್ವವಿಷಯದಲ್ಲಿ ಸಂದಿಗ್ಧಚೇತಸ್ಕರಾಗಿದ್ದು ಈ ವಾದದಿಂದ ನಿವೃತ್ತಸಂಶಯರಾಗಿ ಮನಶ್ಶಾಂತಿಯನ್ನು ಹೊಂದಿದವರು ನಿಜವಾಗಿಯೂ ಅತಿವಿರಳರೇ. ಆದರೆ ಈ ವಾದದಲ್ಲಿ ತೋರಿಸಿರುವ (ಬ್ರಹ್ಮತ್ವ, ಕರ್ಮಪರಿತ್ಯಾಗ ರೂಪವಾದ)ದುರಾಶೆಯೆಂಬ ಅಫೀಮಿನಿಂದ ನಿದ್ರೆಗೆ ವಶಮಾಡಲ್ಪಟ್ಟ ದುರಾತ್ಮರ ಸಂಖ್ಯೆಯು ಅಸಂಖ್ಯಾತವಾದುದು.

ಯಾರು ಅವ್ಯಭಿಚರಿತಭಕ್ತಿಯೋಗದಿಂದ* ನನ್ನನ್ನು ಸೇವಿಸುತ್ತಾರೆಯೋ, ಅವರು ಈ ಸತ್ವರಜಸ್ತಮೋಗುಣಗಳನ್ನುದಾಟಿ ಮುಕ್ತರಾಗುವುದಕ್ಕೆ ಸಮರ್ಥರಾಗುತ್ತಾರೆ.

ಮತ್ತೊಂದು ವಿಷಯವನ್ನು ಉಪಪಾದಿಸಿ ಈಚರ್ಚೆಯನ್ನು ಉಪಸಂಹರಿಸುವೆವು. ಅದ್ವೈತಮತದ ರೀತಿಯಿಂದ ಭಕ್ತ್ಯಾದಿಸಾಧನಪ್ರತಿಪಾದನೆಯು ನಿರರ್ಥಕವೇ. ಭಕ್ತ್ಯನುಷ್ಠಾನಕ್ಕೆ ಅತ್ಯವಶ್ಯಕವಾದ ಎರಡು ಮೂರು ಕಾರಣಗಳು ಅದ್ವೈತವಾದದಲ್ಲಿ ಇಲ್ಲವೇ ಇಲ್ಲ. ಭಕ್ತಿವಿಷಯವಾದ ಒಂದು ವಸ್ತುವು ಇಲ್ಲ. ನಿರ್ಗುಣಚಿನ್ಮಾತ್ರನು ಭಕ್ತಿಗಮ್ಯನಲ್ಲ. ಜೀವನೂ ನಿರ್ಗುಣಬ್ರಹ್ಮನೇ ಆಗಿರುವನು. ನಿರ್ಗುಣಬ್ರಹ್ಮನು ಪ್ರಾಪ್ಯನಲ್ಲ. ಈಶ್ವರಾದಿಗಳು ಭಕ್ತಿಗೆ ಯೋಗ್ಯವಿಷಯರಲ್ಲ. ಭ್ರಾಂತರು ಈಶ್ವರಾದಿಗಳ ಪೂಜೆಯನ್ನು ಮಾಡಬಹುದು. ಈಶ್ವರಾದಿಗಳು ಮಿಥ್ಯಾ, ಭಕ್ತಿಯೋಗ್ಯರಲ್ಲ ಎಂದು ನಿಶ್ಚಯವನ್ನು ತಿಳಿದ ಅದ್ವೈತಜ್ಞಾನಿಯು ಇವರುಗಳನ್ನು ಪ್ರೀತಿಸುವುದು ಅಯುಕ್ತವೇ. ಕಿಂಚ ಜೀವಚೇತನನೂ ನಿಷ್ಕ್ರಿಯಬ್ರಹ್ಮನೇ. ನಿಷ್ಕ್ರಿಯಚೇತನನು ಭಕ್ತಿಮಾಡುವುದೂ ಅಸಂಭಾವಿತವೇ.‡ ಪರಂತು ಭಕ್ತಿಯಿಂದ ಪ್ರಾಪ್ಯವಾದ ಫಲವು ಯಾವುದೂ ಅದ್ವೈತಮತದಲ್ಲಿ ನಿರೂಪಿಸುವುದಕ್ಕೆ ಬರುವುದಿಲ್ಲ. ಮತ್ತು ಭಕ್ತ್ಯುತ್ಪತ್ತಿಗೆ ನಿಮಿತ್ತ

---

* ಈ ಶ್ಲೋಕವನ್ನು ಅಪರೋಕ್ಷಜ್ಞಾನಾನಂತರ ಮಾಡಲ್ಪಡುವ ಭಕ್ತಿಪರವಾಗಿಯೂ, ಅಪರೋಕ್ಷಜ್ಞಾನಾರ್ಥವಾಗಿ ಮಾಡಬೇಕಾದ ಭಕ್ತಿಪರವಾಗಿಯೂ ಸಹ ಅನ್ವಯಿಸಬಹುದು.

‡ ಚೇತನನು ನಿಷ್ಕ್ರಿಯನು ಎಂಬ ದುಷ್ಟವಾದವನ್ನು ಶಂಕರಾಚಾರ್ಯರು ಪರಿತ್ಯಾಗ ಮಾಡಿದ್ದರೆ ಭಕ್ತ್ಯನುಷ್ಠಾನವೂ, ಬ್ರಹ್ಮಪ್ರಾಪ್ತಿಯೂ ಸಂಭಾವಿತವಾಗುತ್ತಿತ್ತೆಂದು ಉರ್ಕುಹಾರ್ಟನು ಹೇಳುತ್ತಾನೆ:—

**"If greater stress had been laid on the principle of activity, Sankara might have approached more nearly to the position that union with the divine may be accomplished not so much by abstraction from .... .... experience as by emphasis on the idea that the human mind in its activity is reproducing the .... .... activities of the Divine mind."**

**— W. S. Urquhart, M. A. D. Litt.**

ಗಳಾದ ಉತ್ತಮಸಾಧನಾಭಾವವೂ ಇಲ್ಲದುದರಿಂದ ಅದ್ವೈತತತ್ತ್ವಜ್ಞನು ಸೇವಾದಿಗಳನ್ನು ಮಾಡುವುದೂ ಅಸಂಭಾವಿತವೇ.

ಅದ್ವೈತತತ್ತ್ವದ ಈ ಯಾವತ್ತೂ ನಿಶ್ಚಯಗಳು ಶ್ರೀಕೃಷ್ಣನಿಂದ ಅತ್ಯಂತ ಅಭಿಪ್ರಾಯಪೂರ್ವಕವಾಗಿ ತಿರಸ್ಕರಿಸಲ್ಪಟ್ಟಿರುತ್ತವೆ. ಶ್ರೀಕೃಷ್ಣನು ತಾನೇ ಪರಬ್ರಹ್ಮನೆಂದೂ,ಜೀವನು ಸಕ್ರಿಯನಾದ, ಸಂಸಾರದಲ್ಲಿ ಬದ್ಧನಾದ ಚೇತನನೆಂದೂ, ಜ್ಞಾನಾನಂತರದಲ್ಲಿಯೂ ಸೇವೆಯಿಂದ ಬ್ರಹ್ಮಪ್ರಸಾದಾತಿಶಯರೂಪವಾದ ಮಹಾಫಲವು ದೊರೆಯುವುದೆಂದೂ, ಭಕ್ತನು ತನಗೆ ಅತ್ಯಂತಪ್ರೀತಿವಿಷಯನೆಂದೂ ಹೇಳಿರುವನು. ಭಕ್ತಿಯು ಅಜ್ಞನಿಂದ ಅನುಷ್ಠೇಯವಾದ, ಭ್ರಾಂತಿರಹಿತನಾದ ಜ್ಞಾನಿಯಿಂದ ಪರಿತ್ಯಾಜ್ಯವಾದ ಧರ್ಮವಾಗಿದ್ದರೆ, ಸರ್ವಜ್ಞತಮನಾದ, ಕೇವಲಪರಮಾತ್ಮಕಜ್ಞಾನಪರಿಪೂರ್ಣನಾದ ಶ್ರೀಕೃಷ್ಣನು, ಭಕ್ತನು ನನಗೆ ಅತ್ಯಂತಪ್ರೀತಿವಿಷಯನು ಎಂದು ಏತಕ್ಕೆ ಹೇಳುತ್ತಿದ್ದನು? ಮಿಥ್ಯಾಜ್ಞಾನಪೂರ್ಣನಾದ, ನಿಷ್ಪ್ರಯೋಜಕವಾದ ಆಚರಣೆಗಳಲ್ಲಿ ರತನಾದ ವಿಮೂಢನನ್ನು ಪೂರ್ಣನಾದ ವಿಷ್ಣುವು ನನಗೆ ಅತ್ಯಂತಪ್ರೀತಿಪಾತ್ರನೆಂದು ಶ್ಲಾಘಿಸುವುದು ಅಸಂಭಾವಿತವು. ಪರಮಾತ್ಮನಾದ ಶ್ರೀಕೃಷ್ಣನು ಶ್ಲಾಘಿಸಿರುವನು. ಆದುದರಿಂದ ಜ್ಞಾನಾನಂತರದಲ್ಲಿ ಭಕ್ತಿಯಿಂದ ಭಗವದಾರಾಧನದಲ್ಲಿ ತತ್ಪರರಾದವರು ಯಥಾರ್ಥವಿಜ್ಞಾನಸಂಪನ್ನರೇ ಮತ್ತು ಭಕ್ತ್ಯನುಷ್ಠಾನವು ಈಶ್ವರಪ್ರೀತಿಸಂಪಾದನೆಗೆ ಕಾರಣವಾದ, ಸತ್ಯವಾದ, ಅತ್ಯುತ್ತಮವ್ಯಾಪಾರವೇ ಎಂದು ಸಿದ್ಧವಾಗುವುದು. ಶ್ರೀಕೃಷ್ಣನುಹೇಳುತ್ತಾನೆ:—

(8) **ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥**
—(18. 68.)

(ಬ್ರಹ್ಮಜ್ಞಾನಾನಂತರದಲ್ಲಿ) ಉತ್ತಮಭಕ್ತಿಯನ್ನು ಮಾಡಿ ಜ್ಞಾನಿಯು ನನ್ನನ್ನೇ ಹೊಂದುತ್ತಾನೆ.

---

**ಅರ್ಥವು :—** ಚೇತನವು ಸಕ್ರಿಯವು ಎಂಬ ಅಭಿಪ್ರಾಯಕ್ಕೆ ಶಂಕರಾಚಾರ್ಯರು ಪ್ರಾಶಸ್ತ್ಯವನ್ನು ಕೊಟ್ಟಿದ್ದರೆ, ಶಂಕರಾಚಾರ್ಯರ ತತ್ತ್ವವು ಸಕಲವ್ಯವಹಾರನಿವೃತ್ತಿರೂಪವಾದ ಐಕ್ಯವನ್ನು ಪರಿತ್ಯಾಗಮಾಡಿ ಬೇರೆವಿಧವಾದ ಬ್ರಹ್ಮೈಕ್ಯವು ಸಂಭವಿಸುವದೆಂದು ಹೇಳುವ - ಎಂದರೆ ಜೀವಚೇತನನು ಬ್ರಹ್ಮಚೇತನನ ಮನೋವ್ಯಾಪಾರಗಳಿಗೆ ಸದೃಶವಾದ ವ್ಯಾಪಾರ ಉಳ್ಳವನಾಗುವನು ಎಂದು ಹೇಳುವ ವಾದವಾಗುತ್ತಿತ್ತು.

# 3. ಮೂರನೆಯ ಅಂಶವು.

## ಅಪರೋಕ್ಷಜ್ಞಾನಕ್ಕೆ ಮೋಕ್ಷಸಾಧನತ್ವ ಸಮರ್ಥನವು.

ಶ್ರೀಶ್ರೀಗಳವರು:—**1. ಪೂರ್ವೋಕ್ತವಾದ** ಭಗವಂತನ ಅತ್ಯರ್ಥಪ್ರಸಾದದ ಅಭಿವ್ಯಕ್ತಿಗೆ ಕಾರಣವಾದ ದ್ವಿದಳಾತ್ಮಕವಾದ ಉದ್ರಿಕ್ತಭಕ್ತಿಯು ಭಗವದಪರೋಕ್ಷಜ್ಞಾನದಿಂದ ಉತ್ಪನ್ನವಾಗುವುದು. ಹಾಗೆ ಹೇಳಿದುದರಿಂದ ಭಗವತ್ಪ್ರಸಾದವು ಪರಮಭಕ್ತಿಯ ಉತ್ಪತ್ತ್ಯರ್ಥವಾಗಿ ಬೇಕಿಲ್ಲವೆಂದು ತಿಳಿಯ ಕೂಡದು. ಭಕ್ತಿಯ ಉತ್ಪತ್ತಿಗೂ ಪರಮಾತ್ಮನ ಪ್ರಸಾದವೇ ಮುಖ್ಯ ಕಾರಣವು. ಅಪರೋಕ್ಷಜ್ಞಾನವು ಅಮುಖ್ಯಕಾರಣವು. ಆದರೆ ಪರಮಾತ್ಮನು ವಸ್ತುಗಳ ಸ್ವಭಾವವನ್ನು ನಾಶಮಾಡದೆ, ಬೀಜಾಂಕುರ, ಕುಲಾಲಘಟ, ಔಷಧರೋಗ ಪರಿಹಾರ, ವಹ್ನಿಸಂಯೋಗ ಭಸ್ಮೀಕರಣ ಇತ್ಯಾದಿ ದ್ವಂದ್ವಗಳಿಗಿರುವ ಕಾರ್ಯಕಾರಣಭಾವಗಳನ್ನು ನಾಶಮಾಡದೆ, ಅವುಗಳನ್ನು ನಿಮಿತ್ತಮಾಡಿಯೇ ತನ್ನ ಸಕಲನಿಯಮನ ವ್ಯಾಪಾರಗಳನ್ನೂ ನಡೆಯಿಸುವನು. ಬ್ರಹ್ಮನಲ್ಲಿ ಭಕ್ತ್ಯುದ್ರೇಕವನ್ನು ಹುಟ್ಟಿಸುವುದು ಬ್ರಹ್ಮಾಪರೋಕ್ಷಜ್ಞಾನದ ಸ್ವಭಾವವು. ಶ್ರೀಹರಿಯು ಪ್ರಸನ್ನನಾಗಿ ಅಪರೋಕ್ಷಜ್ಞಾನಸ್ವಭಾವಕ್ಕೂ ಪ್ರೇರಕನಾಗಿ ನಿಯಾಮಕನಾಗಿರುವುದರಿಂದ, ಆತನೇ ಅಪರೋಕ್ಷಜ್ಞಾನವನ್ನು ನಿಮಿತ್ತ ಮಾಡಿ, ಅದರ ಸ್ವಭಾವಕ್ಕೂ ಪ್ರೇರಕನಾಗಿ ಭಗವದ್ಭಕ್ತಿಯನ್ನು ವೃದ್ಧಿಮಾಡುವನು ಎಂದು ಹೇಳುವುದು ಸರಿಯಾದ ಶಾಸ್ತ್ರಾರ್ಥವು. ಇದೇ ವಿದ್ವದ್ವ್ಯವಹಾರವು. ಕೆಲವು ವೇಳೆ ಸರ್ವಪ್ರೇರಕನಾದ ಪರಮಾತ್ಮನ ನಿಯಾಮಕತೆಯನ್ನು ವಿವರಿಸದೆ ಔಷಧಾದಿಪದಾರ್ಥಗಳೇ ರೋಗಪರಿಹಾರಾದಿಕಾರ್ಯಗಳಲ್ಲಿ ಕಾರಣಗಳೆಂದು ನಿರೂಪಿಸುವುದುಂಟು. ಇಂಥಾ ಸಂದರ್ಭಗಳಲ್ಲಿ ಅಧ್ಯಾಹಾರದಿಂದ ನಿಜವಾದ ಅರ್ಥವನ್ನು ತಿಳಿಯಬೇಕು. ಪರಮಾತ್ಮನಿಯಮ್ಯವಾದ ಸ್ವಭಾವ ಮತ್ತು ಕಾರ್ಯಕಾರಣಭಾವವುಳ್ಳ ಔಷಧವು ಆತನ ಅನುಗ್ರಹದಿಂದ ರೋಗವನ್ನು ಪರಿಹಾರಮಾಡಿರುವುದು ಎಂಬುದೇ ಫಲಿತವಾದ ಶಾಸ್ತ್ರಾರ್ಥವು. **"ಏತೇನ ಹವಾಪಯೋ ಮುಂಡಂ ಭವತಿ", "ನದ್ಯಃ ಸ್ಯಂದಂತೇ", "ನ ಋತೇ ತ್ವತ್ಕ್ರಿಯತೇ ಕಿಂಚನಾರೇ", "ಸರ್ವಸ್ಯ ವಶೀ ಸರ್ವಸ್ಯೇಶಾನಃ"** ಇತ್ಯಾದಿಶ್ರುತಿಗಳಿಂದ ಈ ಅರ್ಥವು ಸಿದ್ಧವಾಗಿರುವುದು. **''ಯತಃ ಪ್ರವೃತ್ತಿರ್ಭೂತಾನಾಂ'', ''ಮತ್ತಃ ಸರ್ವಂ ಪ್ರವರ್ತತೇ'',**

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।**
**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**
—(18. 61.)

ಇತ್ಯಾದಿಗೀತಾಶ್ಲೋಕಗಳೂ ಈ ವಿಷಯದಲ್ಲಿ ಪ್ರಮಾಣವಾಗಿರುವುವು.

(1) **ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ।**
—(18. 58.)

ಎಂಬ ಶ್ರೀಕೃಷ್ಣನ ವಾಕ್ಯದಿಂದ ಒಂದೊಂದು ಮೋಕ್ಷಸಾಧನಸಂಪಾದನೆಯೆಂಬ ದುರ್ಗವೂ ಪರಮಾತ್ಮನ ಪ್ರಸಾದದಿಂದಲೇ ದಾಟಲ್ಪಡಬೇಕಾದುದೆಂದು ನಿಶ್ಚಿತವಾಗುವುದು. ಆದುದರಿಂದಲೇ ಹದಿನೈದನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಪರಾಪರತತ್ವಗಳನ್ನು ನಿರೂಪಣೆಮಾಡಿ, ಇವುಗಳನ್ನು ಜ್ಞಾನದಿಂದ ಸಾಕ್ಷಾತ್ತಾಗಿ ತಿಳಿದವನು ಮುಕ್ತನಾಗುವನು ಎಂದು ಹೇಳಿ, ಅಂಥಾ ಮೋಕ್ಷಸಾಧನೋಪಾಯವೂ ಮತ್ತು ಮೋಕ್ಷಸಾಧನೋಪಾಯವನ್ನು ಸಂಪಾದಿಸುವುದರಲ್ಲೂ ಮುಖ್ಯ ಉಪಾಯವೂ **ಪರಮಾತ್ಮನಲ್ಲಿ ಶರಣಾಗತಿಯು** ಎಂದು ನಿರೂಪಿಸಿರುತ್ತಾನೆ:—

(2) **ತಮೇವ ಚಾದ್ಯಂ ಪುರುಷಂ ಪ್ರಪದ್ಯೇ**
**ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥** —(15. 4.)

ಪುರಾತನವಾದ ಜನನಾದಿಪ್ರವಾಹವು ಯಾರಿಂದ ಪ್ರವರ್ತಿಸಲ್ಪಟ್ಟಿತೋ ಅಂಥಾ ಆದಿಯಲ್ಲಿದ್ದ ಪರಮಾತ್ಮನನ್ನೇ ಶರಣುಹೊಂದಬೇಕು.

ಪುನಃ ಏಳನೆಯ ಅಧ್ಯಾಯದಲ್ಲಿಯೂ ಕೂಡ,

(3) **ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ।**
—(7. 14.)

ಎಂದು ಹೇಳಿರುತ್ತಾನೆ. ಹೀಗೆ ಹೇಳಿದುದರಿಂದ ವೈರಾಗ್ಯಾದಿ ಇತರ ಗುಣಗಳ ಸಂಪಾದನೆಯು ಅನವಶ್ಯಕವೆಂದಲ್ಲ, ಭಗವಂತನ ಪ್ರಸಾದವೇ ಮುಖ್ಯಕಾರಣವು. ಸದ್ಗುಣಗಳು ಆತನ ಅನುಗ್ರಹದಿಂದ ಮನಸ್ಸಿನಲ್ಲಿ ಉತ್ಪನ್ನವಾಗುವುವು. ಮತ್ತು ಅವುಗಳ ಸ್ವಭಾವಕ್ಕೂ ಅವು ಮೋಕ್ಷೋಪಯೋಗಿಯಾಗುವುದಕ್ಕೂ ಪರಮಾತ್ಮನೇ ನಿಯಾಮಕನು. ಆದುದರಿಂದ ಅವನ ಪ್ರಸಾದವನ್ನು ಕೋರಿ, ಇತರ ಗುಣಗಳನ್ನು ಸಂಪಾದಿಸುವುದಕ್ಕೆ ಅಧಿಕಾರಿಗಳು ಯತ್ನಮಾಡಬೇಕೆಂದು ತಾತ್ಪರ್ಯವು. ಆದುದರಿಂದಲೇ ಜೀವೋತ್ತಮಾವತಾರರಾದ ಹನುಮಂತದೇವರೂ ಸಹ **"ಕ್ಷಣೇ ಕ್ಷಣೇ ಭಕ್ತಿರಲಂ ವಿವರ್ಧತಾಂ"** ಎಂದು ಶ್ರೀರಾಮ

ಚಂದ್ರನನ್ನೇ ಬೇಡಿಕೊಂಡರು. **"ಸ ಹಿ ಸರ್ವಮನೋವೃತ್ತಿಪ್ರೇರಕಃ ಸಮುದಾಹೃತಃ"** ಎಂಬ ಶ್ರೀಮದಾಚಾರ್ಯರು ಉದಾಹರಿಸಿರುವ ಪ್ರಮಾಣ ವಚನವೂ ಸಹ ಸಾಕ್ಷಾನ್ಮೋಕ್ಷಪೂರ್ವಭಾವಿಯಾದ ಭಕ್ತಿಯೂ ಶ್ರೀಪರಮಾತ್ಮನ ಅನುಗ್ರಹದಿಂದಲೇ ಬರುವುದೆಂದುಬೋಧಿಸುತ್ತದೆ.

(4) **ಬುದ್ಧಿರ್ಜ್ಞಾನಮಸಂಮೋಹಃ .... .... .... ।**
—(10. 4.)

**ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥**
—(10. 5.)

ಇತ್ಯಾದಿ ಶ್ಲೋಕಗಳಲ್ಲಿ ಭಕ್ತ್ಯಾದಿಸರ್ವಗುಣಗಳಿಗೂ ತಾನೇ ಕಾರಣನೆಂದು ಶ್ರೀಕೃಷ್ಣನೂ ಹೇಳಿರುತ್ತಾನೆ.

ಈ ವಿಮರ್ಶೆಯಿಂದ ಸಿದ್ಧವಾದ ಹೆಚ್ಚು ವಿಷಯವೇನೆಂದರೆ, ಮುಕ್ತ್ಯರ್ಥವಾಗಿ ಶ್ರವಣ, ಮನನ, ಧ್ಯಾನ, ಬ್ರಹ್ಮಾಪರೋಕ್ಷಜ್ಞಾನ, ಪರಮಭಕ್ತಿಯೇ ಮುಂತಾದ ಅನೇಕಸಾಧನಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುವು; ಈ ಒಂದೊಂದು ಸಾಧನವು ಅಧಿಕಾರಿಗೆ ಪ್ರಾಪ್ತವಾಗಬೇಕಾದರೂ ಪರಮಾತ್ಮನ ಪ್ರತ್ಯೇಕ ಪ್ರತ್ಯೇಕ ಪ್ರಸಾದವು ಬೇಕು. ಜೀವನ ಪ್ರತ್ಯೇಕ ಪ್ರತ್ಯೇಕ ಭಕ್ತಿಯೂ ಅವಶ್ಯಕವು. ಹೇಗೆಂದರೆ, ಶ್ರವಣಮಾಡುತ್ತಾ ಸ್ವಲ್ಪ ಭಕ್ತಿಯಿಂದ ಪರಮಾತ್ಮನನ್ನು ತೃಪ್ತಿಪಡಿಸಿದರೆ, ಪರಮಾತ್ಮನು ಆತನಲ್ಲಿ ಸ್ವಲ್ಪ ಪ್ರಸಾದವನ್ನು ಮಾಡಿ ಸಾತ್ವಿಕವಾದ ಮನನಸಾಮರ್ಥ್ಯವನ್ನು ದಯಪಾಲಿಸುವನು. ಮನನಮಾಡುತ್ತಾ ಭಕ್ತಿಯಿಂದ ಪರಮಾತ್ಮನನ್ನು ಶರಣುಹೊಂದಿದರೆ, ಹೆಚ್ಚು ಪ್ರಸಾದವನ್ನುಅಭಿವ್ಯಕ್ತಿಮಾಡಿ ಪರಮಾತ್ಮನು ಮೋಕ್ಷೋಪಯೋಗಿಯಾದ ಧ್ಯಾನಾಧಿಕಾರವನ್ನು ದಯಪಾಲಿಸುವನು. ಧ್ಯಾನದಿಂದ ಸಮನ್ವಿತನಾಗಿ ಪರಮಾತ್ಮನಲ್ಲಿ ಇನ್ನೂ ಹೆಚ್ಚುಭಕ್ತಿಮಾಡಿದರೆ, ಪರಮಾತ್ಮನು ಮತ್ತೂ ಪ್ರಸಾದಾತಿಶಯದಿಂದ ತನ್ನ ದರ್ಶನರೂಪವಾದ ಬ್ರಹ್ಮಾಪರೋಕ್ಷಜ್ಞಾನವನ್ನು ದಯಪಾಲಿಸುವನು. **ಸಂಗಾತ್ಸಂಜಾಯತೇ ಕಾಮಃ"** ಎಂಬಂತೆ ಪರಮಾತ್ಮದರ್ಶನದಿಂದ ಜನಿತವಾದ ಉದ್ರಿಕ್ತಭಕ್ತಿಯಿಂದ ಆತನನ್ನು ಭಜನೆಮಾಡಿದರೆ, ಆತನು ಆಯಾಯ ಜೀವನ ಯೋಗ್ಯತಾನುಗುಣವಾಗಿ ತನ್ನ ಪೂರ್ಣಪ್ರಸಾದವನ್ನು ಪ್ರದರ್ಶನಮಾಡಿ ಜೀವನನ್ನು ಮುಕ್ತನನ್ನಾಗಿ ಮಾಡುವನು. ಹೀಗೆ ಒಂದೊಂದು ಮೋಕ್ಷಸಾಧನ ಸಂಪಾದನೆಯಲ್ಲಿಯೂ ತರತಮಭಾವಾಪನ್ನವಾದ ಜೀವಭಕ್ತಿ, ಹರಿಪ್ರಸಾದಗಳು ಅವಶ್ಯಕವಾಗಿರುವುವು. ಇಷ್ಟು ವಿಚಾರವು ಮನಸ್ಸಿನಲ್ಲಿದ್ದರೆ, ಜ್ಞಾನಕ್ಕೆ

ಧ್ಯಾನವು ಸಾಕ್ಷಾತ್ಕಾರಣವು ಇತ್ಯಾದಿ ರೀತಿಯಲ್ಲಿ ನಾವು ಮುಂದೆ ಮಾಡುವ ನಿರೂಪಣೆಯಲ್ಲಿ ಕೆಲವು ವಿಷಯಗಳು ಅಧ್ಯಾಹೃತವಾಗಿರುವುವೆಂಬುದನ್ನು ಸುಲಭವಾಗಿ ತಿಳಿದುಬರುವುದು.

2. ಇನ್ನು ಬ್ರಹ್ಮಾಪರೋಕ್ಷಜ್ಞಾನದ ಸ್ವರೂಪ, ಮತ್ತು ಲಕ್ಷಣಗಳನ್ನು ಸ್ವಲ್ಪ ವರ್ಣಿಸುತ್ತೇವೆ.

ಅಪರೋಕ್ಷಜ್ಞಾನವು ಅಲೌಕಿಕವಾದ ಮಾನಸಪ್ರತ್ಯಕ್ಷರೂಪವೆಂದು ಶ್ರೀಕೃಷ್ಣನು ಹೇಳಿರುತ್ತಾನೆ:—

(1) **ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಂ ॥**
—(15. 11.)

ಅಪರೋಕ್ಷಜ್ಞಾನೋಪಾಯವನ್ನು ಅನುಷ್ಠಾನಮಾಡುವ ಯೋಗಿಗಳು ಶ್ರವಣಮನನಧ್ಯಾನಾದಿ ಪ್ರಯತ್ನಗಳನ್ನು ಮಾಡಿದವರಾಗಿ ತಮ್ಮ ಮನಸ್ಸಿನಲ್ಲಿ ಸ್ಥಿತನಾದ ಪರಮಾತ್ಮನನ್ನು ನೋಡುತ್ತಾರೆ.

(2) **ಧ್ಯಾನೇನಾತ್ಮನಿ ಪಶ್ಯಂತಿ** .... .... .... ॥ —(13. 24.)

ಕೆಲವರು ಧ್ಯಾನರೂಪಪ್ರಯತ್ನ(ಪ್ರಾಚುರ್ಯ)ದಿಂದ ಪರಮಾತ್ಮನನ್ನು ತಮ್ಮ ಮನಸ್ಸಿನಲ್ಲಿ ನೋಡುತ್ತಾರೆ.

(3) **ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ।**
**ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥**
—(4.38.)

ಬ್ರಹ್ಮಾಪರೋಕ್ಷಜ್ಞಾನಕ್ಕೆ ಸದೃಶವಾದ ಪಾಪಪರಿಹಾರಕವಾದ ಪದಾರ್ಥವು ಇರುವುದಿಲ್ಲ. ಅಂಥಾ ಜ್ಞಾನವನ್ನು ಯೋಗಾರೂಢನು ಬಹುಕಾಲದ ಮೇಲೆ ಮನಸ್ಸಿನಲ್ಲಿ ಹೊಂದುತ್ತಾನೆ.

(4) **ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ ಆತ್ಮನಿ ತುಷ್ಯತಿ।**
—(6. 20.)

ಸಮಾಧಿಪರಿಪಾಕಾವಸ್ಥೆಯಲ್ಲಿ ಮನಸ್ಸಿನಲ್ಲಿ ಮನಸ್ಸಿನಿಂದ ಪರಮಾತ್ಮನನ್ನು ನೋಡುತ್ತಾ, ಪರಮಾತ್ಮದರ್ಶನದಿಂದ ಆನಂದವನ್ನು ಹೊಂದಿ, ಇತರ ವಿಷಯಗಳಲ್ಲಿ ಅಲಂಬುದ್ಧಿಯುಳ್ಳವನಾಗುತ್ತಾನೆ.

(5) .... .... .... **ಪಶ್ಯಂತಿ ಜ್ಞಾನಚಕ್ಷುಷಃ।** —(15. 10.)

ಜ್ಞಾನನೇತ್ರವುಳ್ಳವರು ಪರಮಾತ್ಮನನ್ನು ನೋಡುತ್ತಾರೆ,

ಈ ವಾಕ್ಯಗಳಿಂದ ಅತೀಂದ್ರಿಯದರ್ಶನದಲ್ಲಿ ಸಾಮರ್ಥ್ಯೋಪೇತವಾದ ಮನೋ ಇಂದ್ರಿಯದಿಂದ ಮನಸ್ಸಿನಲ್ಲಿ * ಶ್ರೀಪರಮಾತ್ಮನನ್ನು ಸಾಕ್ಷಾದ್ದರ್ಶನ ಮಾಡುವುದು ಅಪರೋಕ್ಷಜ್ಞಾನವೆನ್ನಿಸುವುದು ಎಂದು ಸಿದ್ಧವಾಗುವುದು. ಅದರಲ್ಲಿಯೂ ಕೆಲವರಿಗೆ ಅಪರೋಕ್ಷಜ್ಞಾನವು ಆಗುವಾಗಲೇ ವ್ಯಾಪ್ತವಾದ ಭಗವದ್ರೂಪವೂ ಕಾಣುವುದೆಂದು ಷಷ್ಠಾಧ್ಯಾಯದ ವರ್ಣನೆಯಿಂದ ವಿದಿತ ವಾಗುವುದು.

(6) **ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।**
**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥**
—(6. 29.)

ಸರ್ವತ್ರ ಸಮದರ್ಶಿಯಾದ, ಯೋಗೋಪಾಯವನ್ನು ಪೂರ್ಣವಾಗಿ ಸಂಪಾದಿಸಿದ ಜ್ಞಾನಿಯು ಪರಮಾತ್ಮನನ್ನು ಸರ್ವಪ್ರಾಣಿಗಳಲ್ಲಿಯೂ ಸರ್ವ ಪ್ರಾಣಿಗಳನ್ನು ಪರಮಾತ್ಮನಲ್ಲಿಯೂ ನೋಡುತ್ತಾನೆ.

ಅರ್ಜುನನ ಅಪರೋಕ್ಷಜ್ಞಾನಪರಾಮರ್ಶದಿಂದಲೂ ಸಹ ಈ ವಿಷಯ ಗಳೆಲ್ಲವೂ ಸಿದ್ಧವಾಗುವುವು. ಅರ್ಜುನನ ಪ್ರಾರ್ಥನೆಯೇ ಬ್ರಹ್ಮಾಪರೋಕ್ಷ ಜ್ಞಾನವು ಭಗವತ್ಪ್ರತ್ಯಕ್ಷರೂಪವೆಂದು ನಿಶ್ಚಯಮಾಡುವುದರಲ್ಲಿ ಆಧಾರವಾಗು ತ್ತದೆ:—

(7) **ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ।**
**ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ।**
**ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಾಮವ್ಯಯಂ॥**
—(11. 3-4.)

ಎಲೈ ಪುರುಷೋತ್ತಮನೇ! ನಿನ್ನ ಈಶ್ವರಸಂಬಂಧಿಯಾದ ರೂಪವನ್ನು ನೋಡಬೇಕೆಂದು ಇಚ್ಛಿಸುತ್ತೇನೆ. ಹೇ ಪ್ರಭೋ! ಯೋಗೇಶ್ವರ! ನನ್ನಿಂದ ಅದು ನೋಡಲ್ಪಡುವುದಕ್ಕೆ ಶಕ್ಯವಾಗುವುದಾದರೆ ನೀನು ನಿನ್ನ ಅವ್ಯಯವಾದ ಸ್ವರೂಪವನ್ನು ತೋರಿಸು.

---

* **"ಮನಸೈವೇದಮಾಪ್ತವ್ಯಂ", "ಮನಸೈವಾನುದ್ರಷ್ಟವ್ಯಂ", "ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ", "ಶುದ್ಧೇನ ಮನಸಾ ಸದಾ"** ಇತ್ಯಾದಿ ಶ್ರುತಿಗಳಿಂದ ಪರಮಾತ್ಮನ ದರ್ಶನವು ಮನಸ್ಸಿನಿಂದಲೇ ಆಗುವುದೆಂದೂ ಬ್ರಹ್ಮನು ಅಜ್ಞೇಯನಲ್ಲ

(8) **ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ**
—(11. 5.)

ಎಲೈ ಪಾರ್ಥನೆ! ಶತಶಃ ಮತ್ತು ಸಹಸ್ರಶಃ ನನ್ನ ರೂಪಗಳನ್ನು ನೋಡು.

ಅಪರೋಕ್ಷಜ್ಞಾನವು ನಮ್ಮ ಸಾಮಾನ್ಯ ಇಂದ್ರಿಯಗಳಿಂದಾಗಲೀ, ಸಾಮಾನ್ಯಮನಸ್ಸಿನಿಂದಾಗಲೀ ಉತ್ಪನ್ನವಾದುದಲ್ಲ. ಸಂಸ್ಕೃತವಾದ, ಅಲೌಕಿಕ ಪದಾರ್ಥಗಳನ್ನೂ ನೋಡುವುದಕ್ಕೆ ಪ್ರಯೋಜಕವಾದ ಶಕ್ತಿವಿಶೇಷದಿಂದ ಸಹಿತವಾದ ಮನೋ ಇಂದ್ರಿಯದಿಂದ ಉತ್ಪನ್ನವಾದುದು ಎಂದು ಶ್ರೀಕೃಷ್ಣನೇ ಹೇಳುತ್ತಾನೆ:—

(9) **ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ।**
**ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ ॥**
—(11. 8.)

---

ವೆಂದೂ ಸಿದ್ಧವಾಗುವುದು. ಶಂಕರಾಚಾರ್ಯರೂ ಕೂಡ (2. 21.) ಗೀತಾಭಾಷ್ಯದಲ್ಲಿ ಮನಸೈವಾನುದ್ರಷ್ಟವ್ಯಂ'' ಎಂಬ ಶ್ರುತಿಯನ್ನು ಉದಾಹರಿಸಿ ಬ್ರಹ್ಮನು ಕರಣಾಗೋಚರನಲ್ಲ ಮತ್ತು ಮನಸ್ಸಿಗೆ ಗೋಚರನಾಗುವನೆಂದು ನಿರ್ಣಯಮಾಡಿರುತ್ತಾರೆ. ಯದ್ಯಪಿ ಬ್ರಹ್ಮನು ಮನಸ್ಸಿಗೆ ಅಗೋಚರನು, ಆದರೆ ಶ್ರುತಿಯು ಹೇಳುವುದರಿಂದ ತಿರಸ್ಕರಿಸಲಾಗುವುದಿಲ್ಲ ಎಂದು ತೀರ್ಮಾನ ಮಾಡಿರುತ್ತಾರೆ. ಇದೇ ಶ್ರುತಿಗೌರವದಿಂದ ಬ್ರಹ್ಮನು ಜ್ಞೇಯನು ಎಂದು ತೀರ್ಮಾನಮಾಡಿದ್ದರೆ ವಿರೋಧವು ಶಾಂತವಾಗುತಿತ್ತು. ಈಗಲಾದರೋ ಬ್ರಹ್ಮನು ಅಜ್ಞೇಯನು ಎಂದು ಒಪ್ಪಿ, ಬ್ರಹ್ಮನು ಮನಸ್ಸಿಗೆ ಗೋಚರನು ಎಂದು ಹೇಳಿದುದರಿಂದ ವಿರುದ್ಧವಾದವನ್ನು ಅವಲಂಬಿಸಿದಂತಾಯಿತು.

ಶ್ರುತಿಯಾದರೋ ನಾರಾಯಣನನ್ನೇ ಪರಬ್ರಹ್ಮನೆಂದು ಹೇಳಿ ಆತನೇ ''ಮಹಾಜ್ಞೇಯಂ'' ಎಂದರೆ ಅತ್ಯುತ್ತಮಜ್ಞೇಯನೆಂದು ಹೇಳಿರುವುದು. ಗೀತೆಯಲ್ಲಿಯೂ ಕೂಡ **''ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ । ಅನಾದಿಮತ್ಪರಂ ಬ್ರಹ್ಮ .... .... .... ॥"** ಎಂದು ಜ್ಞೇಯವಸ್ತುವೇ ಪರಬ್ರಹ್ಮನೆಂದು ಶ್ರೀಕೃಷ್ಣನು ಹೇಳಿರುತ್ತಾನೆ.

ಅದ್ವೈತಮತದಲ್ಲಿ ಬ್ರಹ್ಮಜ್ಞಾನವು ಅಸಾಧ್ಯವು ಎಂಬುದೇ ನಿಜವಾದ ಸ್ಥಿತಿಯೆಂದು ಉರ್ಕುಹಾರ್ಟನು ಹೇಳುತ್ತಾನೆ:—

**"(Shankara's) method conceals both from himself and from others the true conclusion that the quest is really a**

ಎಲೈ ಅರ್ಜುನನೇ! ನೀನು ನಿನ್ನ ಸ್ವಕೀಯವಾದ ಚಕ್ಷುಸ್ಸಿನಿಂದ ನನ್ನನ್ನು ನೋಡುವುದಕ್ಕೆ ಸಮರ್ಥನಲ್ಲ. ಆದುದರಿಂದ ನಾನು ನಿನಗೆ ಅಲೌಕಿಕ ವಾದ ದರ್ಶನಶಕ್ತಿಯನ್ನು ಕೊಡುತ್ತೇನೆ. ಅಚಿಂತ್ಯವಾದ ನನ್ನ ಸಾಮರ್ಥ್ಯ ವನ್ನು ನೋಡು.

"ದಿವ್ಯಚಕ್ಷುರ್ಮನಃ ಸ್ಮೃತಂ" ಇತ್ಯಾದಿಪ್ರಮಾಣಾನುಸಾರವಾಗಿ ದಿವ್ಯದೃಷ್ಟಿಯೆಂಬುದು ಮನಸ್ಸಿಗೆ ಪ್ರಾಪ್ತವಾದ ಒಂದು ಶಕ್ತಿವಿಶೇಷವೇ ಹೊರತು ಒಂದು ನೂತನವಾದ ಇಂದ್ರಿಯವೆಂದು ತಿಳಿಯುವುದಕ್ಕೆ ಕಾರಣವಿಲ್ಲ. ಶ್ರವಣಾ ದಿಗಳಿಂದ ಸಂಸ್ಕೃತವಾದ ಮನಸ್ಸಿಗೇ ಪರಮಾತ್ಮನ ಅನುಗ್ರಹದಿಂದ ಇಂಥಾ ಸಾಮರ್ಥ್ಯವು ಬರುವುದು. "ದೃಶ್ಯತೇ ತ್ವಗ್ರ್ಯಯಾಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ" ಎಂಬ ಶ್ರುತಿಯೂ ಸಹ ಈ ಅರ್ಥದಲ್ಲಿಯೇ ಅನುಕೂಲ ವಾಗಿರುವುದು.

ಅರ್ಜುನನು ನೋಡಿದ ರೂಪವು ಸ್ವದೇಹದಲ್ಲಿ ಮತ್ತು ಸರ್ವತ್ರ ವ್ಯಾಪ್ತ ವಾದ ಭಗವದ್ರೂಪವಾದುದರಿಂದ ಈತನು ವ್ಯಾಪ್ತದರ್ಶಿಯಾದ ಉತ್ತಮ ಯೋಗೀಶ್ವರರಲ್ಲಿ ಸೇರಿದವನೆಂದು ಸಿದ್ಧವಾಗುವುದು.

ಇಂಥಾ ಭಗವದ್ದರ್ಶನವು ಸಕಲಪಾಪಗಳಿಗೆ ಅಗ್ನಿಯಂತೆ ಇರುವುದು. ಶ್ರೀಕೃಷ್ಣನು ಹೇಳುತ್ತಾನೆ. :—

---

**hopeless one. The empirical investigator is practically told that he has failed because he has been searching in the wrong place. And in addition to this, the higher knowledge also encourages him in his abstract view, for there is associated with it the idea of vagueness rather than of definiteness and even he who has attained to it has to be content with the abstract and the negative and the undefined."**

**—W. S. Urquhart M. A. D.Litt.**

**ತಾತ್ಪರ್ಯವು :—**ಶಂಕರಾಚಾರ್ಯರ ಉಪಪಾದನೆಯು ಅದ್ವೈತಮತದಲ್ಲಿ ಬ್ರಹ್ಮಜ್ಞಾನಾ ರ್ಥವಾದ ಮಾರ್ಗಣವು ನಿಷ್ಫಲವೆಂಬ ನಿಜವಾದ ಸ್ಥಿತಿಯನ್ನು ತಮಗೂ ಮತ್ತೂ ಇತರರಿಗೂ ತಿಳಿಯ

(10) ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥
ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ।
ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥
—(4. 36-37.)

ಎಲೈ ಅರ್ಜುನನೇ! ಸರ್ವಪಾಪಿಗಳಿಗಿಂತಲೂ ನೀನು ಅಧಿಕಪಾಪ ಮಾಡಿದವನಾಗಿದ್ದರೂ, ಸಮಸ್ತ ಪಾಪವನ್ನೂ ನೀನು ಜ್ಞಾನವೆಂಬ ನಾವೆಯಿಂದ ದಾಟುತ್ತೀಯೆ. ಪ್ರದೀಪ್ತವಾದ ಅಗ್ನಿಯು ಕಾಷ್ಠಗಳನ್ನು ಭಸ್ಮ ಮಾಡುವಂತೆ ಬ್ರಹ್ಮಾಪರೋಕ್ಷವೆಂಬ ಜ್ಞಾನಾಗ್ನಿಯು ಸಕಲಪ್ರಾರಬ್ಧೇತರ ಅನಿಷ್ಟಕರ್ಮಗಳನ್ನೂ ಭಸ್ಮವನ್ನಾಗಿ ಮಾಡುತ್ತದೆ.

ಪುನಃ ಶ್ರೀಕೃಷ್ಣನು ಹೇಳುತ್ತಾನೆ:—

(11) ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥
—(4. 19.)

ಬ್ರಹ್ಮಜ್ಞಾನವೆಂಬ ಅಗ್ನಿಯಿಂದ ದಹಿಸಲ್ಪಟ್ಟ ಪಾಪವುಳ್ಳವನನ್ನು ಪಂಡಿತನೆಂದು (ಬ್ರಹ್ಮಜ್ಞಾನಿಯೆಂದು) ಬುಧರು ಹೇಳುತ್ತಾರೆ.

(12) ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ॥
—(2.50.)

ಅಪರೋಕ್ಷಜ್ಞಾನಿಯು ಪ್ರಾರಾಭ್ಧೇತರ ಅನಿಷ್ಟ ಪುಣ್ಯಪಾಪಗಳನ್ನು ಪರಿತ್ಯಜಿಸುತ್ತಾನೆ.

ಅಪರೋಕ್ಷಜ್ಞಾನವು ಸಕಲ ಕರ್ಮಗಳಿಗೂ ಫಲರೂಪವಾದ ಅವಸ್ಥೆಯೆಂದೂ ಶ್ರೀಕೃಷ್ಣನ ಚತುರ್ಥಾಧ್ಯಾಯದ ನಿರೂಪಣೆಯಿಂದಲೇ ತಿಳಿದುಬರುತ್ತದೆ. ಶ್ರೀಕೃಷ್ಣನು ಹನ್ನೊಂದು ವಿಧವಾದ ಯಜ್ಞಗಳನ್ನೂ ನಿರೂಪಿಸಿ,

---

ದಂತೆ ಮರೆಮಾಡಿರುತ್ತದೆ. ವ್ಯಾವಹಾರಿಕಪ್ರಪಂಚದಲ್ಲಿ ಹುಡುಕುವವನಿಗಂತೂ "ನೀನು ಅಸ್ಥಾನದಲ್ಲಿ ಹುಡುಕುತ್ತೀ. ಆದ್ದರಿಂದ ನಿನ್ನ ಪ್ರಯತ್ನವು ನಿಷ್ಫಲವು" ಎಂದು ಹೇಳಲ್ಪಟ್ಟಿರುವುದು. ಇದಲ್ಲದೆ ಪರವಿದ್ಯೆಯೂ ಕೂಡ ಬ್ರಹ್ಮನನ್ನು ನಿಷ್ಕೃಷ್ಟವಾಗಿ ತಿಳಿಯುವುದರಲ್ಲಿ ಉಪೋದ್ಬಲಕವಲ್ಲ. ಏತಕ್ಕೆಂದರೆ ಅವನ ವಿಷಯವಾದುದೆಲ್ಲಾ ನಿರ್ವಿಷಯವೂ, ಅಸ್ಪಷ್ಟವೂ, ಹೀಗೆ ಇದೆ ಎಂದು ಹೇಳಲಿಕ್ಕೆ ಬರದಂತೆ ಅನಿರ್ವಚನೀಯವೂ ಆಗಿರುತ್ತದೆ. ಯಾವ ಪ್ರಕಾರದಿಂದಲೂ ಬ್ರಹ್ಮನನ್ನು ತಿಳಿಯುವುದಕ್ಕಾಗುವುದಿಲ್ಲವೆಂದು ಭಾವವು.

ಇವೆಲ್ಲಾ ಕರ್ಮದಿಂದ ಉತ್ಪನ್ನವಾದವು; ಇವುಗಳಿಗೆಲ್ಲಾ ಅಪರೋಕ್ಷ ಜ್ಞಾನವೇ ಫಲವು ಎಂದು ಹೇಳಿರುತ್ತಾನೆ. :—

**(13) ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ।**
**ಕರ್ಮಜಾನ್ ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ॥**
**ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ।**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥**
—(4. 32-33.)

ಬ್ರಹ್ಮೋಪಾಸನೆ, ಅಗ್ನಿಪೂಜೆ, ಇಂದ್ರಿಯನಿಗ್ರಹ, ವಿಷಯಸಮರ್ಪಣ, ಮನೋನಿಗ್ರಹ, ದ್ರವ್ಯದಾನ, ತಪಸ್ಸು, ಯೋಗಧ್ಯಾನ, ಸ್ವಾಧ್ಯಾಯ, ಶ್ರವಣಮನನಾದಿಗಳು, ಪ್ರಾಣಾಯಾಮ ಇವೇ ಮುಂತಾದ ಅನೇಕಪ್ರಕಾರ ವಾದ ಯಜ್ಞಗಳು ಪರಮಾತ್ಮನ ಮುಖದಲ್ಲಿ ವಿಸ್ತೃತವಾಗಿರುವುವು. ಎಲೈ ಪಾರ್ಥನೇ! ಇವೆಲ್ಲವೂ ಕರ್ಮಜನ್ಯವೆಂದೇ ತಿಳಿ. ಈರೀತಿ ತಿಳಿದು ಕರ್ಮಗಳನ್ನು ಆಚರಿಸಿದರೆ ನೀನು ಮುಕ್ತನಾಗುತ್ತೀಯೆ. ಎಲೈ ಪರಂ ತಪನೇ! ಪ್ರಧಾನವಾದ ಯಜ್ಞಗಳ ದೆಸೆಯಿಂದ ಜ್ಞಾನಯಜ್ಞವು ಶ್ರೇಷ್ಠವು. ಏತಕ್ಕೆಂದರೆ ಸಕಲಕರ್ಮವೂ ಅಪರೋಕ್ಷಜ್ಞಾನರೂಪಫಲದಲ್ಲಿ ಅಂತರ್ಭವಿ ಸುತ್ತದೆ.

ಶ್ರವಣ, ಮನನ, ಪ್ರತ್ಯಾಹಾರ, ಧ್ಯಾನಾದಿ ಸಕಲಯೋಗಾನುಷ್ಠಾನ ಗಳಿಗೂ ಅಪರೋಕ್ಷಜ್ಞಾನವು ಸಿದ್ಧಿಭೂಮಿಯೆಂದೂ, ಪರಬ್ರಹ್ಮನ ವಿಷಯ ಕವಾದ ಸಕಲಸಂಶಯವಿಪರ್ಯಯಗಳನ್ನು ಮತ್ತೂ ಸಕಲಮಾನಸಿಕವಿಕಲ್ಪ ಗಳನ್ನೂ ನಿಶ್ಶೇಷವಾಗಿ ನಾಶಮಾಡತಕ್ಕ ಅವಸ್ಥೆಯೆಂದೂ ಶ್ರೀಕೃಷ್ಣನ ವಾಕ್ಯ ಗಳಿಂದ ಗೊತ್ತಾಗುತ್ತದೆ.

**(14) ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ।**
**ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥**
**ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ।**
**ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥**
—(6. 7-8.)

**ಅರ್ಥವು :—** ಜಿತಮನಸ್ಕನಿಗೆ ಪ್ರಶಾಂತಿಯು ಬರುವುದು; ಎಂದರೆ ಮನಸ್ಸು ಸ್ವತಏವ ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲ. ಪ್ರಶಾಂತನ ಹೃದಯ

ದಲ್ಲಿ ಪರಮಾತ್ಮನು ಸನ್ನಿಹಿತನಾಗುತ್ತಾನೆ. (ಎಂದರೆ ಧ್ಯಾನವಿಷಯನಾಗಿ ಅನಂತರ ಅಪರೋಕ್ಷಜ್ಞಾನವಿಷಯನಾಗುತ್ತಾನೆ. ಎಂದು ಭಾವವು.) ಜ್ಞಾನಿಯು ಶೀತೋಷ್ಣ, ಸುಖದುಃಖ, ಮಾನಾಪಮಾನರೂಪ ದ್ವಂದ್ವಗಳು ಬಂದೊದಗಿದರೂ ನಿರ್ವಿಕಾರನಾಗಿರುವನು. ಏಕೆಂದರೆ ಜ್ಞಾನಿಯು ಪರಾಪರತತ್ವವಿಷಯಕವಾದ ಮನಸ್ಸುಳ್ಳವನಾಗಿ, ಜಿತೇಂದ್ರಿಯನಾಗಿ, ಅತಏವ ನಿರ್ವಿಕಾರವಾದ ಚಿತ್ತವುಳ್ಳವನಾಗಿ, ಕಾಂಚನವನ್ನು ಮಣ್ಣುಹೆಂಟೆಕಲ್ಲುಗಳಿಗೆ ಸಮವಾಗಿ ತಿಳಿದು ಧ್ಯಾನವನ್ನಾಚರಿಸುವನು. ಅವನು ಯೋಗಪೂರ್ತಿಯುಳ್ಳವನೆಂದು ಹೇಳಲ್ಪಡುತ್ತಾನೆ.

(15) **ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ।**
**ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥**
**ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ।**
**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥**
—(2. 52-53.)

ನಿನ್ನ ಮನಸ್ಸು ಮಿಥ್ಯಾಜ್ಞಾನವೆಂಬ ಮೋಹವನ್ನು ಯಾವಾಗ ಬಿಡುತ್ತದೋ ಆಗ ನಿನ್ನಿಂದ ಇದುವರೆವಿಗೆ ಶ್ರುತವಾದ ಮತ್ತು ಶ್ರೋತವ್ಯವಾದ ಸಕಲ ಕರ್ಮಗಳ ಅತ್ಯಂತಲಾಭವನ್ನೂ ನೀನು ಹೊಂದುತ್ತೀಯೆ.

(16) **ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ।**
**ಯೇನ ಭೂತಾನ್ಯಶೇಷಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥**
—(4. 35.)

ಜ್ಞಾನಿಗಳ ಉಪದೇಶದಿಂದ ಪರಮಾತ್ಮನನ್ನು ತಿಳಿದ ಮೇಲೆ (ಅಪರೋಕ್ಷಜ್ಞಾನವಾದರೆ), ನೀನು ಪುನಃ ಇಂಥಾ ಬಂಧುವಿಷಯಕವಾದ ಮೋಹವನ್ನು ಹೊಂದುವುದಿಲ್ಲ. ಯಾವ ಜ್ಞಾನದಿಂದ ಸರ್ವಾಂತರ್ಯಾಮಿಯಾದ ನನ್ನಲ್ಲಿ ಸರ್ವಪ್ರಾಣಿಗಳೂ ಇರುವುವೆಂದು ತಿಳಿಯುವೆಯೋ ಅಂತಹ ಜ್ಞಾನವನ್ನು ನಿನಗೆ ಉಪದೇಶಮಾಡುತ್ತೇನೆ.

(17) ........**ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥** —(2.59.)

ವಿಷಯಾಭಿಲಾಷೆಯು ಬ್ರಹ್ಮಾಪರೋಕ್ಷಜ್ಞಾನದಿಂದ ಪೂರ್ಣವಾಗಿ ನಿವೃತ್ತವಾಗುವುದು.

(18) **ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ।**
**ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ।**
**ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಂ ॥**
—(5. 25-26.)

ಜೀವಸ್ವರೂಪಜ್ಞಾನವು ಅವಿದ್ಯೆಯಿಂದ ಆವೃತವಾಗಿರುವುದು. ಆದುದರಿಂದ ಪ್ರಾಣಿಗಳು ಮೋಹಿತರಾಗುವರು. ಯಾವಾತನ ಅಜ್ಞಾನವು ಶಾಸ್ತ್ರಜನ್ಯಜ್ಞಾನದಿಂದ ನಾಶಹೊಂದುವುದೋ ಅಂಥಾವರಿಗೆ ಉತ್ಪನ್ನವಾದ ಬ್ರಹ್ಮಾಪರೋಕ್ಷಜ್ಞಾನವು ಆದಿತ್ಯಪ್ರಕಾಶವು ಘಟಾದಿಪದಾರ್ಥಗಳನ್ನು ಪ್ರಕಾಶಪಡಿಸುವಂತೆ ಪರಮಾತ್ಮನನ್ನು ಸಾಕ್ಷಾತ್ಕರಿಸುತ್ತದೆ.

ಇದರಲ್ಲಿ ಯುಕ್ತಿಯೂ ಇರುವುದು. ಶ್ರವಣಮನನಗಳಿಂದ ಜನಿತವಾದ ಜ್ಞಾನವು ಎಷ್ಟೇ ಶುದ್ಧವಾದರೂ ಸ್ಫುಟವಾಗಲಾರದು. ನಮ್ಮ ಶ್ರೀರಾಮದೇವರ ಮೂರ್ತಿಯನ್ನು ಮತ್ತೊಬ್ಬರು ಹತ್ತುದಿವಸಗಳು ವರ್ಣಿಸಿದರೂ ಸಹ ದೇವರನ್ನು ನೀವು ಸಾಕ್ಷಾತ್ತಾಗಿ ನೋಡಿದಷ್ಟು ಸ್ಪಷ್ಟವಾದ ಜ್ಞಾನವು ಉಂಟಾಗಲಾರದು. ಪ್ರತ್ಯಕ್ಷಜ್ಞಾನವು ಶ್ರವಣಾದಿಗಳಿಂದ ತಿಳಿಯುವುದಕ್ಕೆ ಅಶಕ್ಯವಾದ, ವಸ್ತುವಿನ ಅನೇಕ ವಿಶೇಷಧರ್ಮಗಳನ್ನು ಅತಿಸುಲಭವಾಗಿ ವಿಷಯೀಕರಿಸುತ್ತದೆ. ಆದುದರಿಂದ ಸಕಲಸಂಶಯವಿಪರ್ಯಯಗಳನ್ನೂ ಪ್ರತ್ಯಕ್ಷವು "ಝಡಿತಿ" ನಾಶಮಾಡುತ್ತದೆ. ಹೀಗೆಯೇ ವೇದಾದಿಗಳಿಂದ ಪರಬ್ರಹ್ಮನ ರೂಪಲಾವಣ್ಯಗಳನ್ನೂ, ಹೃದಯದಲ್ಲಿ ಅವನು ಇರುವ ಸ್ಥಾನವಿಶೇಷವು, ಜಗತ್ತಿಗೂ ಅವನಿಗೂ ಇರುವ ಸಂಬಂಧವಿಶೇಷವು ಇವುಗಳನ್ನೆಲ್ಲಾ ಪರೋಕ್ಷವಾಗಿ ತಿಳಿದಿದ್ದರೂ, ಆ ಜ್ಞಾನವು ಪರಮಾತ್ಮನ ರೂಪವಿಶೇಷದ ಸಾಕ್ಷಾತ್ಪ್ರತ್ಯಕ್ಷವಾದಷ್ಟು ಸಮಗ್ರವೂ, ಸ್ಪಷ್ಟವೂ, ಸಕಲಸಂಶಯನಿವಾರಕವೂ, ಮತ್ತು ಸುಖಾತಿಶಯಹೇತುವೂ ಆಗಲಾರದು. ಹೀಗೆ ಸರ್ವಾಧಾರನೂ, ಸರ್ವಸ್ವತಂತ್ರನೂ, ದರ್ಶನಮಾತ್ರದಿಂದ ನಿರವಧಿಕಾನಂದಪ್ರದನೂ ಆದ ಪರಮಾತ್ಮನನ್ನು ಸಾಕ್ಷಾತ್ತಾಗಿ ಘಟಪಟಾದಿಗಳನ್ನು ನಾವು ನೋಡುವಂತೆ ನೋಡುವ ಜ್ಞಾನಿಯು ಸಕಲಮಿಥ್ಯಾಜ್ಞಾನವನ್ನೂ ಪರಿಹರಿಸಿಕೊಳ್ಳುವನು ಎನ್ನುವುದರಲ್ಲಾಗಲೀ, ಅಂಥಾ ಪರಮಾತ್ಮದರ್ಶನವನ್ನು ಬಿಟ್ಟು ಕ್ಷುದ್ರವಾದ ಲೌಕಿಕಕರ್ಮಗಳನ್ನು ಮಾಡುವುದಿಲ್ಲವೆನ್ನುವುದರಲ್ಲಾಗಲೀ ಆಶ್ಚರ್ಯವೇನು? ಪ್ರಾಯೇಣ ಸಕಲ ವಿಷಯಕಾಂಕ್ಷಾರಾಹಿತ್ಯವು ಅಪರೋಕ್ಷಜ್ಞಾನಿಯ ಲಕ್ಷಣವೆಂದು ನಾವು

ಹಿಂದೆಯೇ ನಿರೂಪಿಸಿರುತ್ತೇವೆ. ಅಪರೋಕ್ಷಜ್ಞಾನವು ಬಹುಸುಖರೂಪವಾದ ಅವಸ್ಥೆಯೆಂದೂ, ಅದನ್ನು ಹೊಂದಿದವನು, ಬ್ರಹ್ಮದರ್ಶನವನ್ನು ಪರಿತ್ಯಾಗ ಮಾಡಿ, ಅವಶ್ಯಕವಾಗಿ ಮಾಡಬೇಕಾದ ಕರ್ಮವು ಒಂದೂ ಇಲ್ಲವೆಂದೂ ಶ್ರೀ ಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ:—

(19) ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥
ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ।
ನಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥*
—(3.17-18.)

(20) ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ।
ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಮತೀಂದ್ರಿಯಂ ॥
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ।
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ।
ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಂ†॥
—(6. 20-23.)

(21) ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಂ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಂ ॥
ಯುಂಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥
—(6. 27-28.)

ವಿಷಯಗಳಲ್ಲಿ ಸ್ವತಃ ಅಪ್ರವೃತ್ತಮನಸ್ಸುಳ್ಳ ನಿವೃತ್ತರಜೋಗುಣನಾದ ಬ್ರಹ್ಮನಲ್ಲಿ ಸ್ಥಿತಮನಸ್ಸುಳ್ಳ, ಕಾಮಾದಿದೋಷರಹಿತನಾದ ಧ್ಯಾನಯೋಗಿಯನ್ನು ಉತ್ತಮಸುಖವು ಬಂದು ಸೇರುತ್ತದೆ. ಆ ಸುಖವು ಎಂಥಾದ್ದು ಎಂಬುದನ್ನು ಶ್ರೀಕೃಷ್ಣನು ಹೇಳುತ್ತಾನೆ:— ರಾಗಾದಿದೋಷರಹಿತನಾದ ಧ್ಯಾನಯೋ

---

* ಪ್ರಥಮಭಾಗದಲ್ಲಿ ಪುಟ 68 ರಲ್ಲಿ ವ್ಯಾಖ್ಯಾತವಾಗಿರುವುದು.

† ಪ್ರಥಮಭಾಗದಲ್ಲಿ ಪುಟ 159ರಲ್ಲಿ ವ್ಯಾಖ್ಯಾತವಾಗಿರುವುದು,

ಗಿಯೂ ಸರ್ವದಾ ಪರಮಾತ್ಮನನ್ನು ಧ್ಯಾನಮಾಡತಕ್ಕವನಾಗಿ ಪರಬ್ರಹ್ಮ ಸಂಸ್ಪರ್ಶಜನಿತವಾದ ಅತಿಶಯಿತವಾದ ಸುಖವನ್ನು ಹೊಂದುತ್ತಾನೆ.

ಈ ರೀತಿ ಯೋಗಾರೂಢನಾದ ಅಪರೋಕ್ಷಜ್ಞಾನಿಯೇ ಸಂಪೂರ್ಣವಾದ ಶಾಸ್ತ್ರೋಕ್ತಸಮದೃಷ್ಟಿಯುಳ್ಳವನು, ಅವನೇ ಸಂಪೂರ್ಣವಾಗಿ ತನ್ನ ಅಸ್ವಾತಂತ್ರ್ಯಜ್ಞಾನವುಳ್ಳವನು. ಆದುದರಿಂದಲೇ ಅವನಿಗೆ ಜ್ಞಾನಾನಂತರದಲ್ಲಿ ಮಾಡಿದ ಕರ್ಮಲೇಪಗಳು ಇರುವುದಿಲ್ಲ. ಪ್ರಮಾದದಿಂದ ಮಾಡಿದ ಸಾಮಾನ್ಯ ಪಾಪಗಳೂ ಕೂಡ ಜ್ಞಾನಿಗೆ ಹಾನಿಕರವಾಗಲಾರವು ಎಂದು ಶ್ರೀಕೃಷ್ಣನು ಹೇಳುತ್ತಾನೆ:—

(22) **ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।**
**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥**
**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ।**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥**
**ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ।**
**ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥**
**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ।**
**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥**
—(6. 29-32.)

ಧ್ಯಾನಯೋಗನಿರತನಾದ ಜ್ಞಾನಿಯು ಸಮದರ್ಶನನಾಗಿ ಎಂದರೆ ಬ್ರಹ್ಮಾದಿತೃಣಾಂತವ್ಯಾಪ್ತನಾದ ಪರಮಾತ್ಮನು ಸರ್ವ ಅಧಿಷ್ಠಾನಗಳಲ್ಲೂ ಸಮವಾದ ಐಶ್ವರ್ಯಾದಿಗಳಿಂದ ಪೂರ್ಣನಾಗಿ ಅಭಿನ್ನನಾಗಿರುವನು ಎಂದು ತಿಳಿದು ಪರಮಾತ್ಮನು ಸರ್ವಾಂತರ್ಯಾಮಿಯೆಂದೂ, ಸರ್ವವೂ ಪರಮಾತ್ಮನಲ್ಲಿ ಇರುವುದೆಂದೂ ನೋಡುತ್ತಾನೆ. ಸರ್ವಭೂತಗಳಲ್ಲಿ ಪ್ರತ್ಯೇಕ ಅನಂತರೂಪದಿಂದ ಇರುವ ನನ್ನನ್ನು ಅತ್ಯಂತ ಅಭಿನ್ನನೆಂದು ತಿಳಿದು ಭಜನೆಮಾಡುವ ಜ್ಞಾನಿಯು ಪ್ರಮಾದದಿಂದ ಅನ್ಯಾಯದಲ್ಲಿ ಪ್ರವೃತ್ತನಾದರೂ ನನ್ನಲ್ಲಿ ಸ್ಥಿತಿರೂಪವಾದ ಮುಕ್ತಿಯನ್ನು ಹೊಂದುತ್ತಾನೆ. ಎಲೈ ಅರ್ಜುನನೇ! ತನ್ನಂತೆ ಇತರ ಭಗವದ್ಭಕ್ತರಿಗೂ ದುಃಖವಾಗದೆ ಸುಖವಾಗಬೇಕು ಎಂದು ತಿಳಿಯುವ ಸಮಜ್ಞಾನಿಯು ಅತ್ಯಂತಶ್ರೇಷ್ಠನು.

(23) **ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಂ।**
**ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥**
—(4. 41.)

ಎಲೈ ಧನಂಜಯನೇ! ಭಗವಂತನಲ್ಲಿ ಮನೋಯೋಗದಿಂದ ಸರ್ವ ಕರ್ಮಗಳನ್ನೂ ಪರಮಾತ್ಮನಲ್ಲಿ ಅರ್ಪಿಸಿದ, ಜ್ಞಾನದಿಂದ ನಿವೃತ್ತಸಂಶಯವುಳ್ಳ ಪರಮಾತ್ಮನ ಭಕ್ತನನ್ನು ಕರ್ಮಗಳು ಬಂಧಿಸುವುದಿಲ್ಲ. ಜ್ಞಾನಿಯು ಮುಕ್ತನಾಗುತ್ತಾನೆ ಎಂದರ್ಥವು.

(24) **ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ।**
—(9. 28.)

(ಜ್ಞಾನಿಯಾದ ನಂತರ) ಶುಭಾಶುಭಫಲಗಳನ್ನು ಕೊಡುವ ಸರ್ವಕರ್ಮಬಂಧನಗಳಿಂದಲೂ ಮುಕ್ತನಾಗುತ್ತೀಯೆ.

(25) **ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ।**
**ಹತ್ವಾಪಿ ಸ ಇಮಾನ್ ಲೋಕಾನ್ ನ ಹಂತಿ ನ ನಿಬಧ್ಯತೇ ॥**
—(18. 17.)

ಸ್ವಾತಂತ್ರ್ಯಾಭಿಮಾನರಹಿತನಾದ ಕರ್ಮಫಲದಲ್ಲಿ ಸ್ನೇಹರಹಿತವಾದ ಬುದ್ಧಿಯುಳ್ಳ ಅಪರೋಕ್ಷಜ್ಞಾನಿಯು ಈ ಯಾವತ್ತು ಲೋಕಗಳನ್ನೂ ಸಂಹರಿಸಿದರೂ ಕರ್ಮಬದ್ಧನಾಗುವುದಿಲ್ಲ. ಮುಕ್ತನಾಗುತ್ತಾನೆ ಎಂದರ್ಥವು.

ಈರೀತಿಯಾಗಿ ಅಪರೋಕ್ಷಜ್ಞಾನವು ಸರ್ವಮೋಕ್ಷಸಾಧನೆಗಳಲ್ಲೂ ಅತಿಶ್ರೇಷ್ಠವಾದುದರಿಂದಲೇ ಜ್ಞಾನಫಲವು ಸಕಲ ಕರ್ಮಫಲಗಳಿಗಿಂತಲೂ ಅಧಿಕವೆಂದೂ ಶ್ರೀಕೃಷ್ಣನು ಹೇಳಿರುತ್ತಾನೆ:—

(26) **ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ।**
**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ* ॥**
—(2. 47.)

(27) **ವೇದೇಷು ಯಜ್ಞೇಷು ತಪಸ್ಸು ಚೈವ**
**ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಂ।**
**ಅತ್ಯೇತಿ ತತ್ಸರ್ವಮಿದಂ ವಿದಿತ್ವಾ**
**ಯೋಗೀ ಪರಂ ಸ್ಥಾನಮುಪೈತಿ ಚಾದ್ಯಂ§ ॥** —(8. 28.

* ಪುಟ 99 ಪ್ರಥಮಭಾಗದಲ್ಲಿ ವ್ಯಾಖ್ಯಾತವಾಗಿರುವುದು.

§ ಪುಟ 99 ಪ್ರಥಮ ಭಾಗದಲ್ಲಿ ವ್ಯಾಖ್ಯಾತವಾಗಿರುವುದು.

3. ಪರೋಕ್ಷಜ್ಞಾನಕ್ಕಿಂತ ಅತ್ಯಂತಭಿನ್ನವಾದ ಅಪರೋಕ್ಷಜ್ಞಾನವೆಂಬ ಪದಾರ್ಥವೇ ಇಲ್ಲವೆಂದು ರಾಮಾನುಜರು ಹೇಳುವರು. ಅವರ ರೀತಿಯಲ್ಲಿ ನಿರಂತರಚಿಂತನರೂಪವಾದ ಧ್ಯಾನವೇ ಪರಮಪಾಟವವನ್ನು ಹೊಂದಿ, ವಸ್ತುವು ಎದುರಿಗೆ ಇದ್ದರೆ ಹೇಗೋ ಹಾಗೆಯೇ ಅತಿಸ್ಪಷ್ಟವಾಗಿ ಪ್ರತ್ಯಕ್ಷತುಲ್ಯವಾಗುವುದು; ಇದರಿಂದ ಅಪರೋಕ್ಷಜ್ಞಾನವೆಂದು ಆ ಸಮಾಧ್ಯವಸ್ಥೆಗೆ ಹೆಸರೇ ಹೊರತು ಅತೀಂದ್ರಿಯನಾದ, ಅವ್ಯಕ್ತನಾದ ಪರಬ್ರಹ್ಮನನ್ನು ಮನಸ್ಸಿನಿಂದ ಸಾಕ್ಷಾತ್ ನೋಡುವುದು ಅಸಂಭಾವಿತವು ಎಂದು ಹೇಳುತ್ತಾರೆ. ಲೋಕದಲ್ಲಿ ಕಾಮುಕರು ಕಾಮಿನೀಚಿಂತೆಯಿಂದ ಆಕೆಯಲ್ಲಿಯೇ ಲಗ್ನವಾದ ಚಿತ್ತವುಳ್ಳವರಾಗಿ, ಇತರ ವಿಷಯಗಳಲ್ಲಿ ಮನಸ್ಸಿಡದೆ ಪುನಃ ಪುನಃ ಮಾಡಲ್ಪಟ್ಟ ಸ್ತ್ರೀಧ್ಯಾನಪ್ರಭಾವದಿಂದ ಆಕೆಯು ಎದುರಿಗೇ ಇರುವಳೋ ಎಂಬಂತೆ ಭ್ರಮಕ್ಕೆ ವಶರಾಗುತ್ತಾರೆ. ಪುರೂರವಸು ಊರ್ವಶಿಯನ್ನು ಕಳೆದುಕೊಂಡು ಪ್ರಣಯಮೋಹದಿಂದ ಪರವಶನಾಗಿ ಉನ್ಮಾದಾವಸ್ಥೆಯನ್ನು ಹೊಂದಿ ಪ್ರತಿಯೊಂದು ವನದಲ್ಲಿಯೂ, ವೃಕ್ಷದಲ್ಲಿಯೂ, ಪೊದೆಯಲ್ಲಿಯೂ ತನ್ನ ರಮಣಿಯನ್ನು ನೋಡಿ ನೋಡಿದವನಂತೆ ಪ್ರಲಪಿಸುತ್ತಿದ್ದನು. ರಾಮಾನುಜರ ಮತದಲ್ಲಿ ಅಪರೋಕ್ಷಜ್ಞಾನವೂ ಇಂಥಾ ಒಂದು ಅವಸ್ಥಾವಿಶೇಷವು. ಧ್ಯಾನಭಿನ್ನವಾದ ಪ್ರತ್ಯಕ್ಷಾತ್ಮಕವಾದ ಒಂದು ಜ್ಞಾನವಿಶೇಷವಲ್ಲ.

ಈ ವಾದವು ಬಹು ದೋಷಗಳಿಂದ ಯುಕ್ತವಾದುದು. ಇವರ ರೀತಿಯಲ್ಲಿ ವಿಚಾರ ಮಾಡಿದರೆ (1) ಜ್ಞಾನಿಯು ಮದ್ಯಪಾನಮಾಡಿದ ಉನ್ಮತ್ತನಂತೆ ವೃಥಾ ಭ್ರಾಂತಪುರುಷನಾಗುವನು. ಆತನು ವಸ್ತುತಃ ಪರಮಾತ್ಮನನ್ನು ಹೃದಯದಲ್ಲಿ ಕಾಣಲಿಲ್ಲ. ಆತನ ಸಾಕ್ಷಾತ್ಪಾದವನ್ನು ಪರಿರಂಭಣಮಾಡಿಕೊಂಡು ಸುಖವನ್ನು ಪಡೆಯಲಿಲ್ಲ. ಎಲ್ಲವೂ ಕಲ್ಪಿತವೇ! ಪರಮಾತ್ಮನು ನನ್ನ ಮನಸ್ಸಿನಲ್ಲಿ ಇರುತ್ತಾನೆ, ಇಗೋ ಅವನು ಈಗ ಬಂದನು ಇತ್ಯಾದಿ ರೀತಿಯಲ್ಲಿ ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು ಕಲ್ಪಿತದರ್ಶನದಿಂದ ಜನಿತವಾದ ಸುಖವನ್ನು ಜ್ಞಾನಿಯು ಅನುಭವಿಸುವನು ಎಂದು ಪ್ರಾಪ್ತವಾಯಿತು. (2) ಹೀಗಾಗುವುದಾದರೆ, ಅಪರೋಕ್ಷಜ್ಞಾನವು ಯಾದೃಚ್ಛಿಕವಾಗಿ, ಸಮಾಧಿಯೂ ಯಾದೃಚ್ಛಿಕವಾಗಿ ಧ್ಯೇಯನಾದ ಪರಮಾತ್ಮನ ಚಿಂತೆಯು ಬಂದ ಒಡನೆಯೇ ಇಗೋ ಇಲ್ಲಿ ಪರಮಾತ್ಮನು ಎಂಬ ಜ್ಞಾನವು ಪ್ರಾಪ್ತವಾಗಿ ಅದಕ್ಕೇ ಸಮಾಧಿ

ಯೆಂದು ಹೆಸರು ಬರಬೇಕಾಗುವುದು. ಅದರ ಪ್ರಾಪ್ತ್ಯರ್ಥವಾಗಿ ಷಷ್ಠಾಧ್ಯಾಯದಲ್ಲಿ ಶ್ರೀಕೃಷ್ಣನು ನಿರೂಪಿಸಿರುವ ಆಸನಪ್ರತ್ಯಾಹಾರಾದಿನಿಯಮಗಳು ಅನಾವಶ್ಯಕವಾಗುವುವು. ಕಾಮುಕನಿಗೆ ಕಾಮಿನೀಚಿಂತೆಯು ಬಂದ ಒಡನೆಯೇ ಬಾಹ್ಯವಿಸ್ಮೃತಿಯು ಬರುವುದು; ಹಾಗೆಯೇ ಜ್ಞಾನಿಗೆ ಪರಮಾತ್ಮನ ಸ್ಮೃತಿಯು ಪ್ರಾಪ್ತವಾದ ಒಡನೆಯೇ ಬಾಹ್ಯವಸ್ತುಗಳಲ್ಲಿ ಅನಾಸಕ್ತಿಯು ಬಂದು ಇಗೋ ಇಲ್ಲಿ ಪರಮಾತ್ಮನು ಎಂದು ಪರಮಾತ್ಮನನ್ನು ಸಾಕ್ಷಾತ್ಕಂಡವನಂತೆ ಕುಣಿಯುವುದಕ್ಕಾರಂಭಿಸಬೇಕಾಗುವುದು. (3) ಇದೂ ಅಲ್ಲದೆ, ಈ ರೀತಿಯಾಗಿ ಪರಮಾತ್ಮವಿಷಯಕವಾದ ಪಾಟವಾಪನ್ನವಾದ ಧ್ಯಾನವೇ ಅಪರೋಕ್ಷಜ್ಞಾನವಾಗುವುದಾದರೆ ಜ್ಞಾನಿಯು ಮದ್ಯಪಾನಮಾಡಿದವನಂತೆ, ಅಥವಾ ಪ್ರಣಯಮೋಹದ ಅಂತ್ಯಾವಸ್ಥೆಯನ್ನು ಹೊಂದಿದ ಕಾಮುಕನಂತೆ ವಿಹ್ವಲಿತಚಿತ್ತವುಳ್ಳವನೆಂದು ಪ್ರಾಪ್ತವಾಗುವುದರಿಂದ ಅವರುಗಳಂತೆ ಪ್ರಲಾಪಮಾಡುವುದಕ್ಕೆ ಆರಂಭಿಸಬೇಕಾಗುವುದು. ಅವನು ಸಾಕ್ಷಾತ್ಪರಮಾತ್ಮನ ಜಗನ್ಮಂಗಳ ವಿಗ್ರಹವನ್ನು ನೋಡಲಿಲ್ಲ. ಸಾಕ್ಷಾತ್ಪರಮಾತ್ಮನು ಅವನ ಸಂಗಡ ಮಾತಾಡಲಿಲ್ಲ. ಹಾಗಿದ್ದರೂ ಅವನು ತನ್ನ ಧ್ಯಾನಪ್ರಭಾವದಿಂದ ಆತನು ಎದುರಿಗೆ ಇರುವನೋ ಎಂಬಂತೆ ತಿಳಿಯುವುದೇ ಜ್ಞಾನವೆಂದೆನ್ನಿಸುವುದಾದರೆ, ಅವನ ಉದ್ರಿಕ್ತಪ್ರೀತಿಯು ಪ್ರಯತ್ನಕ್ಕೆ ಸೀಮಾಭೂಮಿಯಾದ ಸಾಕ್ಷಾತ್ಪರಮಪುರುಷನ ದರ್ಶನವಾಗುವವರೆವಿಗೂ ತೃಪ್ತಿಹೊಂದದೆ ಅವನು ಕ್ಷಣಕ್ಷಣದಲ್ಲಿಯೂ, ಇನ್ನೂ ಪರಮಾತ್ಮನು ನನಗೆ ದರ್ಶನಕೊಡಲಿಲ್ಲವಲ್ಲಾ ಎಂದು ಅಳುತ್ತಲೇ ಇರಬೇಕಾಗುವುದು. (4) ಮತ್ತು ಪರೋಕ್ಷಚಿಂತಾಮೂರ್ತಿಯು ಮಾತಾಡುವುದೆಲ್ಲಿಂದ ಬಂತು? ಜ್ಞಾನಿಯು ತನ್ನ ಹೃದಯಕಮಲದಲ್ಲಿ ಪರಮಾತ್ಮನನ್ನು ನೋಡುವನು. ಅವನು ಪ್ರಸನ್ನನಾಗಿ ಮಂದಹಾಸದಿಂದ ಯುಕ್ತವಾದ ತನ್ನ ಮುಖಕಮಲದಿಂದ ದಿವ್ಯವಾದ ಮಧುರಶಬ್ದಗಳಿಂದ ಭಕ್ತನ ಸಂತಾಪವನ್ನು ಪರಿಹರಿಸುವುದೂ ಉಂಟೆಂದು ಪ್ರಮಾಣಗಳಿಂದ ಪ್ರಮಿತವಾಗಿರುವುದು. ಪರೋಕ್ಷಚಿಂತಾಮೂರ್ತಿಯೇ ಈ ವ್ಯಾಪಾರಗಳನ್ನೆಲ್ಲಾ ಮಾಡುವುದು, ಅದನ್ನೇ ಪರಮಪುರುಷನ ವ್ಯಾಪಾರವೆಂದು ಭಕ್ತನು ತನ್ನ ಪ್ರಣಯಮೋಹಪ್ರಭಾವದಿಂದ ತಿಳಿಯುವನು ಎಂದು ಹೇಳುವುದಾದರೆ ಜ್ಞಾನಿಗೂ ಉನ್ಮತ್ತನಾದ, ಅಯಥಾರ್ಥಜ್ಞಾನಿಯಾದ ಕಾಮುಕನಿಗೂ ವ್ಯತ್ಯಾಸವೇನಿರುವುದು? (5) ಪರಂತು ಧ್ಯಾನಾರೂಢನಾದ ಯೋಗಿಗೆ ಸಾಕ್ಷಾತ್

ಷಡ್ಗುಣೈಶ್ವರ್ಯಸಂಪನ್ನನಾದ ಪರಮಾತ್ಮನು ಸ್ವಯಂ ತನ್ನ ರೂಪವಿಶೇಷವನ್ನು ಪ್ರದರ್ಶನಮಾಡಿ ಆನಂದಪಡಿಸುವನೆಂದು ಹೇಳುವುದರಲ್ಲಿ ಬಾಧಕವೇನು? ಜ್ಞಾನಿಯು "**ಬ್ರಹ್ಮಸಂಸ್ಪರ್ಶಂ ಸುಖಮಶ್ನುತೇ**" ಎಂದರೆ ಪರಮಾತ್ಮನ ಸಂಸರ್ಗಜನಿತಸುಖವನ್ನು ಅನುಭವಿಸುತ್ತಾನೆ ಎಂದು ಶ್ರೀಕೃಷ್ಣನ ಮಾತುಗಳೂ ಈ ಅರ್ಥಕ್ಕೆ ಅನುಕೂಲವಾಗಿರುವುವು. (6) ಅವ್ಯಕ್ತಸ್ವರೂಪನಾದ ಶ್ರೀಪರಮಾತ್ಮನು ಸಾಕ್ಷಾದ್ದರ್ಶನಕೊಡುವುದು ಹೇಗೆಂದು ಚಿಂತಿಸಬೇಕಾದುದಿಲ್ಲ. ಭಕ್ತವತ್ಸಲನಾದ ಪರಮಾತ್ಮನಿಗೆ ಅಚಿಂತ್ಯಶಕ್ತಿಯೂ ಇರುವುದು. ಆತನೇ ತನ್ನ ಇಚ್ಛಾಮಾತ್ರದಿಂದ ಪೂರ್ವದಲ್ಲಿಯೇ ಇದ್ದ ತನ್ನ ರಾಮಕೃಷ್ಣಾದಿ ರೂಪಗಳನ್ನು ಸಹ ಈಗ ಪ್ರಾದುರ್ಭೂತವಾದುದೆಂಬಂತೆ ತನ್ನ ಅಚಿಂತ್ಯಶಕ್ತಿಯಿಂದ ಪ್ರಕಟಿಸಿರುವಂತೆ, ಜ್ಞಾನಿಯ ಹೃದಯಕಮಲದಲ್ಲಿಯೂ, ಆತನಿಗೆ ಪ್ರಸನ್ನನಾಗಿ ಆತನ ಹೃದಯದಲ್ಲಿಯೇ ಅನಾದಿಕಾಲದಿಂದಲೂ ಸುಹೃದ್ರೂಪೇಣ ಇದ್ದ ತನ್ನ ರೂಪದಿಂದಲೇ ದರ್ಶನಕೊಟ್ಟು ಅವನ ಭವವೇದನೆಯನ್ನು ಪರಿಹರಿಸಿ, ಅವನಿಗೆ ಅತ್ಯುತ್ತಮಸುಖವನ್ನು ಕೊಡುವನೆಂದು ಹೇಳುವುದು ಸರ್ವಪ್ರಮಾಣಗಳಿಗೂ ಅನುಕೂಲವಾಗಿರುವುದು. **"ಜನ್ಮ ಕರ್ಮ ಚ ಮೇ ದಿವ್ಯಂ"** ಎಂದಷ್ಟೇ ಶ್ರೀಕೃಷ್ಣನು ಹೇಳಿರುವನು.

ಶ್ರೀಕೃಷ್ಣನು ಹೇಳುತ್ತಾನೆ:—

(1) ....... **ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ।**

—(2. 59.)

ವಿಷಯಕಾಮನೆಯು ಬ್ರಹ್ಮನ ಸಾಕ್ಷಾತ್ಕಾರದಿಂದ ನಾಶವಾಗುತ್ತದೆ.

(2) **ಯುಂಜನ್ನೇವ ಸದಾತ್ಮಾನಂ ಯೋಗೀ ವಿಗತಕಲ್ಮಷಃ।**
**ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥**

—(6. 28.)

ವಿಷಯಧ್ಯಾನರಹಿತವಾದ ಮನಸ್ಸುಳ್ಳ, ಸದಾ ಪರಮಾತ್ಮನನ್ನು ಧ್ಯಾನಮಾಡುವ ಜ್ಞಾನಿಯು ಅನಾಯಾಸವಾಗಿ ಬ್ರಹ್ಮಸಂಸ್ಪರ್ಶಜನಿತವಾದ ಅತ್ಯುತ್ತಮಸುಖವನ್ನು ಹೊಂದುತ್ತಾನೆ.

7. ಜ್ಞಾನಿಯಾದ ಅರ್ಜುನನೂ ಸಹ ನಾನಾವರ್ಣಗಳಿಂದ ಸಹಿತವಾದ ಭಗವಂತನ ಅನಂತರೂಪಗಳನ್ನು ಕಂಡನು; **"ನಾನಾರೂಪಾಣಿ ದಿವ್ಯಾನಿ ನಾನಾವರ್ಣಾಕೃತೀನಿ ಚ"**

8. ಶ್ರೀಕೃಷ್ಣನು ಭಕ್ತಿಯುಳ್ಳವರು ತನ್ನನ್ನು ಸಾಕ್ಷಾತ್ ನೋಡುವರೆಂದು ತಿಳಿಸುವುದಕ್ಕಾಗಿ, ಅಪರೋಕ್ಷಾರ್ಥವಾದ 'ದೃಶಿರ್' ಧಾತುವಿನಿಂದ ಉತ್ಪನ್ನವಾದ "**ಪಶ್ಯ.... .... ರೂಪಾಣಿ**" ಮತ್ತು "**ದ್ರಷ್ಟುಂ**" ಎಂಬ ಪದಗಳನ್ನು ಉಪಯೋಗಿಸಿರುತ್ತಾನೆ:—

**ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ।**
**ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥**
—(11. 54.)

**ಅರ್ಥವು**:— ಎಲೈ ಪರಂತಪನೇ! ಈ ರೀತಿಯಾಗಿ ನನ್ನನ್ನು ಯಥಾರ್ಥವಾಗಿ ತಿಳಿಯುವುದಕ್ಕೂ ನೋಡುವುದಕ್ಕೂ ಅನಂತರ ಮುಕ್ತಿಯಲ್ಲಿ ಪ್ರವೇಶಿಸುವುದಕ್ಕೂ ಅನನ್ಯವಾದ ಭಕ್ತಿಯಿಂದಲೇ ಶಕ್ಯವಾಗುವುದು.

ಈ ವಾಕ್ಯದಲ್ಲಿ "ತತ್ತ್ವೇನ ಜ್ಞಾತುಂ, ತತ್ವೇನ ದ್ರಷ್ಟುಂ" ಎಂಬ ಅನ್ವಯಸಾಮರ್ಥ್ಯದಿಂದ ಜ್ಞಾನಿಯ ಬ್ರಹ್ಮದರ್ಶನವು ಯಥಾರ್ಥವಾದ ಬ್ರಹ್ಮಸ್ವರೂಪದರ್ಶನವೇ ಹೊರತು ಚಿಂತಾಮೂರ್ತಿದರ್ಶನರೂಪವಾದ ಭ್ರಾಂತಿಯುಲ್ಲವೆಂದು ಸಿದ್ಧವಾಗುವುದು.

4. ಇನ್ನು ನಿಷ್ಪ್ರಕಾರಕವಾದ ಬ್ರಹ್ಮಜ್ಞಾನವೇ ಚರಮಾಪರೋಕ್ಷವೃತ್ತಿಯೆಂದು ಹೇಳುವ ಅದ್ವೈತಿಗಳ ಮತವನ್ನು ಸ್ವಲ್ಪ ವಿಚಾರಮಾಡೋಣ. ವಸ್ತುತಃ ಇಲ್ಲಿ ಹೆಚ್ಚು ವಿಚಾರಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ. 1. "ಸತಿ ಕುಡ್ಯೇ ಚಿತ್ರಕರ್ಮ". ನಿಷ್ಪ್ರಕಾರಕವಾದ ಬ್ರಹ್ಮಜ್ಞಾನವು ಶಶವಿಷಾಣದಂತೆಯೂ ವಂಧ್ಯಾಪುತ್ರನಂತೆಯೂ ಅಪ್ರಸಿದ್ಧವಾಗಿರುವುದು.* 2. ಕಿಂಚ ನಿರ್ವಿಶೇಷಚಿನ್ಮಾತ್ರವೆಂಬ ವಸ್ತುವೂ ಗಗನಾರವಿಂದದಂತೆ ಅಪ್ರಸಿದ್ಧವೇ. ಸಕಲಕಲ್ಯಾಣಗುಣಭರಿತನಾದ ರಮಾನಾಥನೇ ಪರಬ್ರಹ್ಮನೆಂದು ಭಗವದ್ಗೀತೆಯಲ್ಲಿ ಪುನಃ ಪುನಃ ಉಕ್ತ

---

* ಅದ್ವೈತಮತದಲ್ಲಿ ಮೋಕ್ಷಹೇತುಭೂತವಾದ ಅಪರೋಕ್ಷಜ್ಞಾನವು ದುರ್ನಿರೂಪವೇ. ತತ್ತ್ವಮಸ್ಯಾದಿವಾಕ್ಯಜನ್ಯವಾದ ನಿಷ್ಪ್ರಕಾರಕಜ್ಞಾನವು ಮೋಕ್ಷಕಾರಣವೆಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಇದು ಹೇಗೆ ಸಾಧ್ಯವಾಗುವುದು? ಜ್ಞಾನಿಯು ಸಗುಣಬ್ರಹ್ಮನನ್ನು ಸಾಕ್ಷಾತ್ಕರಿಸುವನೇ? ಅಥವಾ ನಿರ್ಗುಣಬ್ರಹ್ಮನನ್ನೇ? ಸಗುಣಬ್ರಹ್ಮಜ್ಞಾನದಿಂದ ಮೋಕ್ಷವಾಗುವುದು ಅಸಂಭಾವಿತವು. ಮಿಥ್ಯಾಭೂತನಾದ ಸಗುಣಬ್ರಹ್ಮನ ಜ್ಞಾನದಿಂದ ಮೋಕ್ಷವಾಗುವುದಾದರೆ ಘಟಜ್ಞಾನದಿಂದಲೂ ಮೋಕ್ಷವು ಏತಕ್ಕೆ ಆಗಬಾರದೆಂದು ಪ್ರಶ್ನೆಯು ಬರುವುದು. ಅದ್ವೈತಿಗಳು

ವಾಗಿರುವುದು. ಕಲ್ಯಾಣಗುಣಪೂರ್ಣನಾದ ಬ್ರಹ್ಮವಿಷಯಕಜ್ಞಾನವು ಸಪ್ರಕಾರಕವಾಗುವುದೇ ಹೊರತು ನಿಷ್ಪ್ರಕಾರಕವಾಗಲಾರದು. 3. ಕಿಂಚ ಜನ್ಮಾದಿಕರ್ತನಾದ ಪರಬ್ರಹ್ಮನ ಧರ್ಮಗಳು ಮಿಥ್ಯಾಭೂತವಾಗಿದ್ದರಲ್ಲವೇ ಕಥಂಚಿತ್ ನಿರ್ವಿಕಲ್ಪಕವಾದ ಧರ್ಮಿಜ್ಞಾನವು ಬರುವುದು ಎಂದು ಹೇಳಬಹುದು. "**ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ**" ಇತ್ಯಾದಿಶ್ರುತಿಗಳಲ್ಲಿ ಪರಮಾತ್ಮನ ಜ್ಞಾನಬಲಕ್ರಿಯಾದಿಗಳು ಪರಮಾತ್ಮನ ಸ್ವರೂಪಭೂತವಾದುವುಗಳು, ಅವನಂತೆಯೇ ನಿತ್ಯವೂ ಸತ್ಯವೂ ಆದವುಗಳು ಎಂದು ಹೇಳಲ್ಪಟ್ಟಿರುವುದು. 4. ಶ್ರೀಕೃಷ್ಣನೂ ಸಹ ತನ್ನ ಸ್ವರೂಪ, ವ್ಯಾಪ್ತಿ ಮತ್ತು ಸ್ವಾಭಾವಿಕಧರ್ಮಾದಿಗಳನ್ನು ಯಥಾರ್ಥವಾಗಿ ತಿಳಿದರೇನೇ ಮುಕ್ತಿಯಾಗುವುದೆಂದು ಹೇಳಿರುತ್ತಾನಾದುದರಿಂದ ಮೋಕ್ಷಹೇತುಭೂತವಾದ ಅಪರೋಕ್ಷಜ್ಞಾನವು ಸಪ್ರಕಾರಮೋಕ್ಷವೆಂದೇ (ವಿಶೇಷಣ ಅಥವಾ ಧರ್ಮಗಳಿಂದ ಸಹಿತವಾದುದೆಂದೇ) ಸಿದ್ಧವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ:—

**(1) ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥**
(11—4. 9.)

---

ಅದನ್ನು ಅಂಗೀಕರಿಸುವುದೂ ಇಲ್ಲ. ಪರಮಾರ್ಥತತ್ತ್ವವಿಜ್ಞಾನದಿಂದಲೇ ಮೋಕ್ಷವಾಗಬೇಕು. ಆದರೆ ನಿರ್ಗುಣಬ್ರಹ್ಮಜ್ಞಾನದಿಂದ ಮೋಕ್ಷವಾಗುವುದು ಅಸಂಭಾವಿತವು; ಹೇಗೆಂದರೆ ನಿರ್ಗುಣಬ್ರಹ್ಮನು ಅಜ್ಞೇಯನು ಚರಮಾಪರೋಕ್ಷವೃತ್ತಿಯಲ್ಲಿ ಅವನ ಸ್ಫುರಣವು ಆಗುವುದಕ್ಕೆ ಕಾರಣವಿಲ್ಲ. ಯಾವುದರ ಜ್ಞಾನವು ಶಕ್ಯವೋ ಅದು ಮೋಕ್ಷಹೇತುವಾಗದ (ಮಿಥ್ಯಾಭೂತವಾದ) ಪದಾರ್ಥವು. ಯಾವುದು ಮೋಕ್ಷಹೇತುಭೂತವಾದ ಪರಮಾರ್ಥತತ್ವವೋ ಅದರ ಜ್ಞಾನವು ಉತ್ಪನ್ನವಾಗುವುದೇ ಇಲ್ಲ. ಉರ್ಕುಹಾರ್ಟ್‌ಪಂಡಿತನು ಈ ದೋಷವನ್ನು ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಬರೆದಿರುತ್ತಾನೆ:—

**"His (Sankara's) method conceals both from himself and from others that the quest is really a hopeless one"**
**—W. S. Urquhart, M. A. D. Litt.**

**ಅರ್ಥವು :—** ಶಂಕರಾಚಾರ್ಯರ ಉಪಪಾದನೆಯು ಅವರ ಬ್ರಹ್ಮಸ್ವರೂಪಮಾರ್ಗಣವು ಅಸಾಧ್ಯವೆಂದು (ನಿರ್ಗುಣಬ್ರಹ್ಮನ ಅಪರೋಕ್ಷಜ್ಞಾನಾದಿಗಳು ಬರುವುದಿಲ್ಲವೆಂದು) ತಿಳಿಸಿ ಕೊಡದಂತೆ ವಸ್ತುತತ್ತ್ವವನ್ನು ಮುಚ್ಚಿ ಬಿಡುತ್ತದೆ.

ಎಲೈ ಅರ್ಜುನನೇ! ಈ ರೀತಿಯಾಗಿ ನನ್ನ ಜನ್ಮಕರ್ಮಗಳು ಲೋಕವಿಲಕ್ಷಣವು ಮತ್ತು ಯಥಾರ್ಥವೆಂದು ಯಾವಾತನು ಯಥಾರ್ಥವಾಗಿ ತಿಳಿಯುತ್ತಾನೆಯೋ ಆ ಜ್ಞಾನಿಯು ದೇಹತ್ಯಾಗಾನಂತರ ಪುನರ್ಜನ್ಮವನ್ನು ಹೊಂದುವುದಿಲ್ಲ ಮತ್ತು ನನ್ನನ್ನು ಹೊಂದುತ್ತಾನೆ.

(2) **ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ।**
**ಅಸಮ್ಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥**
—(10. 3.)

ಮನುಷ್ಯರಲ್ಲಿ ಯಾವಾತನು ನಾನು ಅಜನು ಮತ್ತು ಪ್ರಾಣದೇವರಿಗೂ ಸೃಷ್ಟಿಕರ್ತನು ಮತ್ತು ಸಕಲಲೋಕಗಳಿಗೂ ಮುಖ್ಯಸ್ವಾಮಿಯು ಎಂದು ಅಸಮ್ಮೂಢಃ = ಎಂದರೆ ನನ್ನ ಮಹಿಮೆಗಳು ಮಿಥ್ಯಾ ಎಂದು ಭ್ರಾಂತನಾಗದೆ ಯಥಾರ್ಥವೆಂದು ತಿಳಿಯುವನೋ ಅಂಥಾ ಜ್ಞಾನಿಯು ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ.

(3) **ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ ॥**
—(18.55.)

---

ಉರ್ಕುಹಾರ್ಟನು ಅದ್ವೈತಮತದ ರೀತ್ಯಾ ಅಪರೋಕ್ಷಜ್ಞಾನಿಯ ಸ್ಥಿತಿಯು ಹಾಸ್ಯಾಸ್ಪದವಾಗುವುದೆಂದು ಪ್ರೊಫೆಸರ್ ಲೇರ್ಡನಾಮಕ ಪಂಡಿತನ ಸಮ್ಮತಿಯನ್ನು ಕೊಟ್ಟು ಪ್ರದರ್ಶನಮಾಡಿರುವನು :—

**He (the seer) is apt to fall into the error of those who as Prof. Laird puts it, "mistake a useless spectre for the last word in profundity and often advance the extraordinary doctrine that truth is an incomprehensible reality while the thing that we know is a comprehensible unreality."**

**ಅರ್ಥವು :—** ಅದ್ವೈತಮತದಲ್ಲಿ ಜ್ಞಾನಿಯು, ಮಹಾವಿದ್ವಾಂಸನಾದ ಲೇರ್ಡನು ಹೇಳುವಂತೆ "ನಿಷ್ಪ್ರಯೋಜನವಾದ ನೆರಳನ್ನು ಪರಮಾರ್ಥತತ್ತ್ವವೆಂದು ಭ್ರಮಿಸಿ, ಪರಮಾರ್ಥಸ್ವರೂಪವು ದುರ್ಜ್ಞೇಯವಾದ ವಸ್ತುವೆಂದೂ, ಮತ್ತು ನಾವು ತಿಳಿದಿರುವ ವಸ್ತುವು ಜ್ಞೇಯವಾದ ಮಿಥ್ಯಾಪದಾರ್ಥವೆಂದೂ ವಿಪರೀತವಾದವನ್ನು ಹೇಳುವಂಥಾ"ವರು ಬೀಳುವಂಥಾ ತಪ್ಪಿಗೆ ಬೀಳುವನು.

ಭಕ್ತಿಯಿಂದ ಸಹಿತನಾಗಿ ನಾನು (ಶ್ರೀಕೃಷ್ಣನು) ದೇಶತಃ, ಕಾಲತಃ, ಗುಣತಃ ವ್ಯಾಪ್ತನೆಂದು ತತ್ತ್ವತಃ =ಎಂದರೆ ನನ್ನವ್ಯಾಪ್ತಿಯು ಮಿಥ್ಯಾಭೂತ ವಲ್ಲವೆಂದು ಯಥಾರ್ಥವಾಗಿ ತಿಳಿದು, ನಂತರ ಭಕ್ತಿಯಿಂದಲೇ ನನ್ನನ್ನುಯಥಾರ್ಥವಾಗಿ ನೋಡಿ, (ಕೇವಲ ಧ್ಯಾನಪೂರ್ತಿಯನ್ನಾಗಲೀ ಸಗುಣಬ್ರಹ್ಮನನ್ನಾಗಲೀ ನೋಡದೆ, ಅನುಗ್ರಹದಿಂದ ದರ್ಶನವನ್ನು ಕೊಟ್ಟ ಪರಮಾತ್ಮನನ್ನು ಮನಸ್ಸಿನಲ್ಲಿ ನೋಡಿ), ಅನಂತರದಲ್ಲಿ (ಪರಮಭಕ್ತಿಯಿಂದ ಸ್ತುತಿಸಿದ ಅನಂತರ ಪ್ರಾರಬ್ಧಕರ್ಮಕ್ಷಯವಾದ ಅನಂತರ), ನನ್ನನ್ನು ಪ್ರವೇಶಿಸುತ್ತಾನೆ. (ಮುಕ್ತನಾಗುತ್ತಾನೆ ಎಂದರ್ಥವು.)

ಈ ವಾಕ್ಯಗಳಿಂದ ಸರ್ವವ್ಯಾಪ್ತನಾದ ಲೋಕಮಹೇಶ್ವರನಾದ ಪ್ರಾಣಪತಿಯಾದ ಪರಮಾತ್ಮನ ಜ್ಞಾನವೇ ಅಪರೋಕ್ಷಜ್ಞಾನವೆಂದು ಸಿದ್ಧವಾಗುವುದು. ಶ್ರೀಕೃಷ್ಣನು ಅಸಮ್ಮೂಢನಾಗಿ ನನ್ನನ್ನು ತಿಳಿಯಬೇಕೆಂದು ಇಲ್ಲಿಯೂ ಮತ್ತು ಹದಿನೈದನೆಯ ಮುಂತಾದ ಅಧ್ಯಾಯಗಳಲ್ಲಿಯೂ ಎಚ್ಚರಿಸಿರುತ್ತಾನೆ. ಪರಮಾತ್ಮನ ಸ್ವರೂಪವು ನಿರ್ಗುಣವು ಎಂದಾಗಲೀ, ಅವನ ಗುಣಗಳು ಕಲ್ಪಿತವೆಂದಾಗಲೀ, ಮೋಹವನ್ನು ಎಂದರೆ ಮಿಥ್ಯಾಜ್ಞಾನವನ್ನುಹೊಂದದೆ, 'ತತ್ತ್ವೇನ' ಎಂದರೆ ಪರಮಾತ್ಮನೂ ಅವನ ಮಹಾವಿಭೂತಿಗಳೂ ಅತ್ಯಂತಯಥಾರ್ಥವಾದುವುಗಳು ಎಂದು ಸಪ್ರಕಾರಕವಾಗಿಯೇ ತಿಳಿಯ ಬೇಕೆಂದು ವಿಧಿಸಿರುತ್ತಾನೆ.

5. ಇನ್ನು ಅಪರೋಕ್ಷಜ್ಞಾನೋತ್ಪತ್ತಿನಿರೂಪಣದಲ್ಲಿಯೂ ಸಹ ಅದ್ವೈತಮತದಲ್ಲಿರುವ ಒಂದು ಪ್ರಬಲವಾದ ದೋಷವನ್ನು ತೋರಿಸಿ ಯಥಾರ್ಥವಾದ ಅಪರೋಕ್ಷಜ್ಞಾನೋತ್ಪತ್ತಿ ಪ್ರಕಾರವನ್ನು ನಿರೂಪಿಸುತ್ತೇವೆ. ಶಬ್ದಾಪರೋಕ್ಷಜ್ಞಾನವಾದಿಗಳಾದ ಕೆಲವರು ಅದ್ವೈತಿಗಳು ತತ್ತ್ವಮಸಿ ಎಂಬ ವಾಕ್ಯಶ್ರವಣದಿಂದಲೇ ( ನಾನು ನಿರ್ವಿಶೇಷಚಿನ್ಮಾತ್ರಬ್ರಹ್ಮನು ಎಂಬ ) **ಪ್ರತ್ಯಕ್ಷರೂಪವಾದ** ಚರಮಾಪರೋಕ್ಷವೃತ್ತಿಯು ಹುಟ್ಟುವುದು ಎಂದು ಹೇಳಿರುತ್ತಾರೆ. ಇದರಲ್ಲಿ ಒಂದು ದೃಷ್ಟಾಂತವೂ ಇರುವುದಂತೆ. ಹತ್ತು ಜನ ಗಾಂಪರೊಡೆಯರ ಶಿಷ್ಯರು ಒಂದು ನದಿಯನ್ನುದಾಟಿ ನಾವು ಹತ್ತು ಜನರೂ ಸರಿಯಾಗಿರುವೆವೋ ಇಲ್ಲವೋ ಎಂದು ಗಣನೆಮಾಡಲಾರಂಭಿಸಿ ಒಬ್ಬೊಬ್ಬರೂ ತನ್ನನ್ನು ಬಿಟ್ಟು ಸ್ವವ್ಯತಿರಿಕ್ತವಾದ ಇತರ ಒಂಭತ್ತು ಜನರನ್ನೇ ಎಣಿಸುತ್ತಾ ಒಂಭತ್ತೇ ಜನರು ಇರುವರಲ್ಲಾ, ಹತ್ತನೆಯವನೇನಾದನು ಎಂದು ಪರಿ

ತಪಿಸುತ್ತಿರಲು ಗಣಿತಜ್ಞನಾದ ಒಬ್ಬ ಪಥಿಕನು ಅಲ್ಲಿಗೆ ಬಂದು ತನ್ನನ್ನು ಬಿಟ್ಟು ಇತರರನ್ನು ಮಾತ್ರ ಪರಿಗಣನೆಮಾಡಿದ ಆ ಮಂಕುಶಿಷ್ಯನನ್ನು ಕುರಿತು ಎಲೈ ಮೂಢನೇ! "ದಶಮಸ್ತ್ವಮಸಿ" ನೀನು ಹತ್ತನೆಯವನು ಎಂದು ಹೇಳಿದನು. ಆಗ ಆ ಶಿಷ್ಯನಿಗೆ ಪಥಿಕನ ವಾಕ್ಯದಿಂದ ತಾನು ಹತ್ತನೆಯವನೆಂಬ ಪ್ರತ್ಯಕ್ಷರೂಪ ವಾದ ಜ್ಞಾನವು ಹುಟ್ಟಿತಂತೆ. ಇದರಂತೆ ಗುರುವಿನಿಂದ ತತ್ವಮಸ್ಯಾದಿ ಮಹಾ ವಾಕ್ಯವನ್ನು ಶ್ರವಣಮಾಡುವ ಶಿಷ್ಯನಿಗೆ ತಾನು ಚಿನ್ಮಾತ್ರನೆಂಬ ಪ್ರತ್ಯಕ್ಷಾತ್ಮಕ ವಾದ ಜ್ಞಾನವೇ ಆ ವಾಕ್ಯದಿಂದಲೇ ಸಾಕ್ಷಾತ್ ಹುಟ್ಟುವುದಂತೆ.

ಇದು ಅನುಭವವಿರುದ್ಧವಾದ ಕಟ್ಟುಕಥೆಯೇ ಹೊರತು ಶಾಸ್ತ್ರಾರ್ಥವಲ್ಲ. ಶಬ್ದದಿಂದ ವಸ್ತುವಿನ ಅಪರೋಕ್ಷವು ಸಾಕ್ಷಾತ್ತಾಗಿ ಆಗಲಾರದು. ಇದು ಘಟ ಎಂಬ **ಶಬ್ದದಿಂದ** ಘಟಪ್ರತ್ಯಕ್ಷವು ಹೇಗಾಗುವುದು? ಘಟಪ್ರತ್ಯಕ್ಷವು ಇಂದ್ರಿಯಸನ್ನಿಕರ್ಷದಿಂದ ಆಗುವುದು. ಹೀಗೆಯೇ ನೀನು ಹತ್ತನೆಯವನು ಎಂಬ ಶಬ್ದದಿಂದ ನಾನು ಹತ್ತನೆಯವನು ಎಂಬ ಶಬ್ದಜನ್ಯವಾದ ಪರೋಕ್ಷಜ್ಞಾನವು ಉಂಟಾಗುವುದು. ಅನಂತರ ಶಬ್ದಜನ್ಯಜ್ಞಾನವು ನಿಮಿತ್ತಕಾರಣವಾಗಿ ಇಂದ್ರಿಯಸನ್ನಿಕರ್ಷದಿಂದ ನಾನು ಹತ್ತನೆಯವನು ಎಂಬ ಅಪರೋಕ್ಷವೃತ್ತಿಯು ಹುಟ್ಟಬಹುದು. ಅಷ್ಟೇ ಹೊರತು ಶಬ್ದದಿಂದಲೇ ಸಾಕ್ಷಾದ್ವಸ್ತುಪ್ರತ್ಯಕ್ಷವು ಉತ್ಪನ್ನವಾಗಲಾರದು. ಇದೇ ರೀತಿ ತತ್ತ್ವಮಸಿವಾಕ್ಯದಿಂದ ಚಿನ್ಮಾತ್ರಬ್ರಹ್ಮನ ಪತ್ಯಕ್ಷವು ಉಂಟಾಗುವುದಿಲ್ಲ. ತತ್ವಮಸಿವಾಕ್ಯದಿಂದ ಪರೋಕ್ಷಜ್ಞಾನವು ಮಾತ್ರವೇ ಉಂಟಾಗುವುದು. ಆದುದರಿಂದ ಸಾಕ್ಷಾತ್ ಶಬ್ದಾಪರೋಕ್ಷವಾದವು ಅಪ್ರಮಾಣಿಕವೂ, ಅನುಭವವಿರುದ್ಧವೂ ದೃಷ್ಟಾಂತರಹಿತವೂ ಆಗಿರುವುದು. ಅಪರೋಕ್ಷಜ್ಞಾನವು ಧ್ಯಾನಾದಿ ಜನಿತವಾದ ಹರಿಭಕ್ತಿಯಿಂದ ಪ್ರಸನ್ನನಾದ ಪರಮಾತ್ಮನ ಪ್ರಸಾದದಿಂದಲೇ ಉಂಟಾಗುವುದೆಂಬ ಶ್ರೀಮದಾಚಾರ್ಯರ ನಿರ್ಣಯವು ಸಕಲಗೀತಾವಾಕ್ಯಗಳಿಗೂ ಶ್ರುತಿ ಸ್ಮೃತ್ಯಾದಿ ಇತರ ಪ್ರಮಾಣಗಳಿಗೆ ಅನುಗುಣವಾಗಿಯೂ, ಯುಕ್ತ್ಯವಿರುದ್ಧವಾಗಿಯೂ ಇರುವುದು.

## 4. ನಾಲ್ಕನೆಯ ಅಂಶವು.

### ಭಗವದ್ಧ್ಯಾನಕ್ಕೆ ಮೋಕ್ಷಸಾಧನತ್ವಸಮರ್ಥನೆಯು.

1. ಶ್ರೀಶ್ರೀಗಳವರು :— ಮೋಕ್ಷಹೇತುಭೂತವಾದ ಅಪರೋಕ್ಷಜ್ಞಾನಸಾಧನೆಯನ್ನು ಶ್ರೀಕೃಷ್ಣನು ಹದಿನೆಂಟನೆಯ ಅಧ್ಯಾಯದಲ್ಲಿ ಸಂಕ್ಷೇಪವಾಗಿ ವಿವರಿಸಿರುತ್ತಾನೆ. ದ್ವಾದಶಾಧ್ಯಾಯದಲ್ಲಿಯೂ, ಷಷ್ಠಾಧ್ಯಾಯದಲ್ಲಿಯೂ ಸಹ ಪ್ರಕಾರಾಂತರದಿಂದ ಮೋಕ್ಷಸಾಧನೆಗಳ ತರತಮಭಾವವನ್ನು ತೋರಿಸುವುದರ ಮೂಲಕ, ಯಾವ ಸಾಧನಾನುಷ್ಠಾನಾನಂತರ ಯಾವ ಸಾಧನೆಯನ್ನು ಕೈಕೊಳ್ಳಬೇಕೆಂಬುದನ್ನೂ ಸೂಚಿಸಿರುತ್ತಾನೆ. ಆ ಶ್ಲೋಕಾರ್ಥಗಳನ್ನು ವಿವರಿಸಿ, ಅನಂತರ ಕ್ರಮವಾಗಿ ಒಂದೊಂದು ಸಾಧನವಿಶೇಷವನ್ನೂ ಲಕ್ಷಣಪೂರ್ವಕವಾಗಿ ವಿವರಿಸುತ್ತೇವೆ.

(1) ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಽಪ್ನೋತಿ ನಿಬೋಧ ಮೇ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ॥
ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾಽತ್ಮಾನಂ ನಿಯಮ್ಯ ಚ।
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ॥
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ॥
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ।
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ॥
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ।
ಸಮಸ್ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ॥
ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ॥
—(18. 50-55.)

**ಅರ್ಥವು :—** ಎಲೈ ಕುಂತೀಪುತ್ರನೇ! ಉತ್ತಮಜ್ಞಾನಲಕ್ಷಣಸ್ಥಿತಿರೂಪವಾದ ಬ್ರಹ್ಮಜ್ಞಾನವೆಂಬ ಸಿದ್ಧಿಯನ್ನು ಹೇಗೆ ಜೀವನು ಪಡೆಯುವನು,

ಅಂಥಾ ಜ್ಞಾನವನ್ನು ಹೊಂದಿದವನು ಬ್ರಹ್ಮನನ್ನು ಹೇಗೆ ಹೊಂದುವೆನು ಎಂಬ ವಿಷಯದಲ್ಲಿ ನಾನು ಸಂಕ್ಷೇಪವಾಗಿ ಹೇಳುವ ಪ್ರಕಾರವನ್ನು ನೀನು ನನ್ನಿಂದ ಕೇಳು. —50.

ವಿಷಯಾಸಕ್ತಿರಹಿತವಾದ ಬುದ್ಧಿಯಿಂದ ಕೂಡಿದವನಾಗಿ, ಧೃತಿಯಿಂದ ಮನಸ್ಸನ್ನು ವಿಷಯಗಳಲ್ಲಿ ಹೋಗದಂತೆ ನಿಗ್ರಹಿಸಿ, ಶಬ್ದಾದಿವಿಷಯಭೋಗದ ಇಚ್ಛೆಯನ್ನು ಬಿಟ್ಟು, ಕಾಮಕ್ರೋಧಗಳನ್ನು ಪರಿತ್ಯಾಗಮಾಡಿ, ವಿವಿಕ್ತಸೇವೀ =ಎಂದರೆ ದುರ್ಜನಸಂಘರಹಿತವಾದ ದೇಶದಲ್ಲಿ ವಾಸವುಳ್ಳವನಾಗಿ, ಮಿತವಾದ ಆಹಾರವುಳ್ಳವನಾಗಿ, ಸದ್ವಿಷಯದಲ್ಲಿಯೇ ನಿಯಮಿಸಲ್ಪಟ್ಟ ವಾಗಿಂದ್ರಿಯ, ಶರೀರ, ಮತ್ತು ಮನಸ್ಸನ್ನುಳ್ಳವನಾಗಿ, ಸರ್ವದಾ ಧ್ಯಾನಯೋಗದಲ್ಲಿ ರತನಾಗಿ, ವಿಷಯಗಳಲ್ಲಿ ಅಸಾರತ್ವಜ್ಞಾನರೂಪವಾದ ವೈರಾಗ್ಯವನ್ನು ಹೊಂದಿದವನಾಗಿ, ಅಹಂಕಾರವನ್ನು ಎಂದರೆ ಸ್ವಾತಂತ್ರ್ಯಾಭಿಮಾನವನ್ನೂ, ಬಲಂ ಎಂದರೆ ನಾನು ಸ್ವತಂತ್ರಸಮರ್ಥನು ಎಂಬ ದುರಭಿಮಾನವನ್ನೂ, ದರ್ಪವನ್ನೂ, ಕಾಮಕ್ರೋಧಗಳನ್ನೂ, ಪರಿಗ್ರಹಂ ಎಂದರೆ ದುಷ್ಟಪದಾರ್ಥಗಳ ಸಂಗ್ರಹೇಚ್ಛೆಯನ್ನೂ ಸಂಪೂರ್ಣವಾಗಿ ಬಿಟ್ಟು, ನಿರ್ಮಮಃ =ಎಂದರೆ ಸ್ವದೇಹಧನದಾರಾಪುತ್ರಮಿತ್ರಾದಿಗಳಲ್ಲಿ ಮಮತೆಯನ್ನು ತ್ಯಾಗಮಾಡಿ, ಶಾಂತಃ ಎಂದರೆ ಬುದ್ಧಿಯನ್ನು ಭಗವಂತನಲ್ಲಿ ಇಡೋಣವೆಂಬ ಶಮಗುಣಾನ್ವಿತನಾದರೆ, ಬ್ರಹ್ಮಭೂಯಾಯ ಕಲ್ಪತೇ =ಎಂದರೆ ಸರ್ವದಾ ಬ್ರಹ್ಮನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗುವುದಕ್ಕೆ ಸಮರ್ಥನಾಗುತ್ತಾನೆ. —53.

ಈ ರೀತಿ ಬ್ರಹ್ಮನಲ್ಲಿ ಲಗ್ನವಾದ ಚಿತ್ತವುಳ್ಳವನು, ಪ್ರಸನ್ನಾತ್ಮಾ ಎಂದರೆ ಸ್ವಭಾವತಃ ವಿಷಯಗಳಲ್ಲಿ ಪ್ರವರ್ತಿಸದಿರುವ ಮನಸ್ಸುಳ್ಳವನಾಗಿ, ಯಾವ ನಿಮಿತ್ತದಿಂದಲೂ ಶೋಕಪಡುವುದಿಲ್ಲ, ಯಾವ ವಿಷಯವನ್ನೂ ಅಪೇಕ್ಷಿಸುವುದಿಲ್ಲ. ಸರ್ವಪ್ರಾಣಿಗಳ ವಿಷಯದಲ್ಲಿಯೂ ರಾಗದ್ವೇಷರಹಿತನಾಗಿ, ಉತ್ತಮವಾದ ನನ್ನ ಭಕ್ತಿಯನ್ನು ಹೊಂದುತ್ತಾನೆ. —54.

ಅನಂತರ (ಧ್ಯಾನಜನ್ಯಭಕ್ತಿಸಾಮರ್ಥ್ಯದಿಂದ,) ನನ್ನ ಯಥಾರ್ಥಸ್ವರೂಪವನ್ನೂ, ಮತ್ತು ಯಾವಾನ್ =ನಾನು ದೇಶಕಾಲಗುಣಗಳಿಂದ ಹೇಗೆ ವ್ಯಾಪ್ತನಾಗಿರುವೆನು, ಯಾವ ನಾಮರೂಪವುಳ್ಳವನು ಇತ್ಯಾದಿ ನನ್ನ ಪರಮಾ

ರ್ಥಪ್ರಭಾವವನ್ನು ಯೋಗ್ಯತಾನುಸಾರವಾಗಿ ತಿಳಿಯುತ್ತಾನೆ. ಎಂದರೆ ಅಪರೋಕ್ಷಜ್ಞಾನದಿಂದ ನನ್ನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ. ಈ ರೀತಿ ನನ್ನನ್ನು ಯಥಾರ್ಥವಾಗಿ ತಿಳಿದನಂತರ, ಭಕ್ತ್ಯಾ ಎಂದರೆ ಪುನಃ ಉದ್ರಿಕ್ತಭಕ್ತಿಯಿಂದಲೇ ನನ್ನನ್ನು ಉಪಾಸನೆಮಾಡಿ, ತದನಂತರಂ ವಿಶತೇ– ಪ್ರಾರಬ್ಧಕರ್ಮಾದಿಗಳು ಕಳೆದನಂತರ ನನ್ನನ್ನು ಪ್ರವೇಶಿಸುತ್ತಾನೆ (ಮುಕ್ತನಾಗುತ್ತಾನೆ ಎಂದರ್ಥವು).

ಈ ಶ್ಲೋಕಗಳಲ್ಲಿ ನೈಷ್ಕರ್ಮ್ಯಸಿದ್ಧಿಯು ಎಂದರೆ ನಿಷ್ಕಾಮಕರ್ಮರೂಪವಾದ ಉಪಾಯದಿಂದ ಬುದ್ಧಿವಿಶುದ್ಧತೆ ಎಂದರೆ ವಿಷಯವಿರಕ್ತಿ ಪ್ರಾಪ್ತಿಯು; ಅನಂತರ (ಶ್ರವಣಾದಿಗಳಿಂದ) ಧ್ಯಾನಯೋಗದಲ್ಲಿ ರತಿಯು; ಅನಂತರ ನಿರಂತರ ಧ್ಯಾನವು, ಅನಂತರ ಭಕ್ತಿವಿವೃದ್ಧತೆಯಿಂದ ಅಪರೋಕ್ಷಜ್ಞಾನವು; ಪುನಃ ಭಕ್ತ್ಯುದ್ರೇಕದಿಂದ ಪರಮಾತ್ಮನ ಅಭಿಜ್ಞಾನವು ಎಂದರೆ ವಿಶೇಷೋಪಾಸನೆಯು; ಅನಂತರ ಪರಮಾತ್ಮಪ್ರವೇಶರೂಪವಾದ ಮುಕ್ತಿಯೂ ಕ್ರಮವಾಗಿ ಮೋಕ್ಷಸಾಧನೆಗಳೆಂದು ನಿರೂಪಿಸಲ್ಪಟ್ಟಿರುತ್ತವೆ.

ಹನ್ನೆರಡನೆಯ ಅಧ್ಯಾಯದಲ್ಲಿಯೂ ಇದೇ ಕ್ರಮವೇ ಸೂಚಿಸಲ್ಪಟ್ಟಿರುವುದು :—

(2) ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥
ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಂ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥
ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮ ಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥
ಅಥೈದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ॥
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥
ಶ್ರೇಯೋ ಹಿ ಜ್ಞಾನಮಭ್ಯಾಸಾತ್ ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಂ ॥

—(12. 8-12.)

**ಅರ್ಥ :—** ನನ್ನಲ್ಲಿಯೇ (ಶ್ರೀಕೃಷ್ಣನಲ್ಲಿಯೇ) ಮನಸ್ಸನ್ನು ದೃಢವಾಗಿ ಇಡು; ಇದು ಲಭಿಸದಿದ್ದರೆ ನನ್ನ ವಿಷಯಕವಾದ ತತ್ವಜ್ಞಾನವನ್ನು ಶ್ರವಣಮನನಗಳಿಂದ ಸಂಪಾದಿಸು; ಈ ರೀತಿ ನನ್ನ ವಿಷಯಕಜ್ಞಾನವನ್ನು ಹೊಂದಿ, ನನ್ನ ಉಪಾಸನೆಯನ್ನು ದೃಢವಾಗಿ ಮಾಡಿ, ನನ್ನ ಅಪರೋಕ್ಷ್ಯವಾದನಂತರ ಭಕ್ತಿಮಾಡಿದ ಮೇಲೆ, ಮಯಿ ನಿವಸಿಷ್ಯಸಿ= ನೀನು ನನ್ನಲ್ಲಿಯೇ ನಿರ್ದುಃಖಾನಂದಾನುಭವಾತ್ಮಕವಾದ ಸ್ಥಿತಿಯನ್ನು ಹೊಂದುತ್ತೀಯೆ.

ಅಥ=(ಈ ಪದವು ಪಕ್ಷಾಂತರದ್ಯೋತಕವು) ಅಥವಾ, ನನ್ನಲ್ಲಿಯೇ ಸ್ಥಿರವಾಗಿ ಇಡಲ್ಪಟ್ಟ ಚಿತ್ತದಿಂದ ನಿರಂತರಧ್ಯಾನವನ್ನು ಮಾಡುವುದಕ್ಕೆ ನೀನು ಅಶಕ್ತನಾದರೆ, ಇಂಥಾ ಧ್ಯಾನವನ್ನು ಪ್ರತ್ಯಾಹಾರಾದಿರೂಪವಾದ ಯೋಗಾಭ್ಯಾಸದಿಂದ ಹೊಂದಿ ನನ್ನನ್ನು ತಿಳಿಯುವುದಕ್ಕೆ ಯತ್ನಮಾಡು. ವಿಷಯಾಂತರಗಳಲ್ಲಿ ಸಂಚರಿಸುವ ಮನಸ್ಸನ್ನು ಹಿಂತಿರುಗಿಸಿ ನನ್ನಲ್ಲಿ ಪುನಃ ಪುನಃ ತಂದು ನಿಲ್ಲಿಸುವುದೆಂಬ ಪ್ರತ್ಯಾಹಾರರೂಪವಾದ ಅಭ್ಯಾಸವೂ ನಿನಗೆ ಸಾಧ್ಯವಾಗದಿದ್ದರೆ, ನನ್ನ ಪ್ರೀತಿಕರವಾದ ಕರ್ಮವನ್ನು ಮಾಡು. ನನ್ನ ಪ್ರೀತ್ಯುದ್ದೇಶಕರವಾದ ಕರ್ಮವನ್ನು ಆಚರಿಸುವವನಾಗಿ ನೀನು ಜ್ಞಾನದ್ವಾರಾ ಮುಕ್ತನಾಗುತ್ತೀಯೆ. ಸರ್ವಕರ್ಮಗಳನ್ನೂ ನನ್ನ ಪ್ರೀತ್ಯರ್ಥವಾಗಿ ಮಾಡುವುದೂ ನಿನಗೆ ಕಷ್ಟವಾದರೆ, ದೇವತಾಂತರಪೂಜಾದಿಗಳನ್ನು ಮಾಡಿದರೂ ನನ್ನ ವಿಷಯಕವಾದ ಯೋಗವನ್ನು ಆಶ್ರಯಿಸು ಎಂದರೆ ಅಂತ್ಯದಲ್ಲಿ ಆ ಕರ್ಮಗಳನ್ನಾದರೂ ನನಗೆ ಸಮರ್ಪಿಸು; ಅದರಿಂದ ನಿಯಮಿಸಲ್ಪಟ್ಟ ಮನಸ್ಸುಳ್ಳವನಾಗಿ ಸರ್ವಕರ್ಮಫಲಗಳನ್ನೂ ನನ್ನಲ್ಲಿಯೇ ಸಮರ್ಪಿಸುವವನಾಗು.

ಅಜ್ಞಾನಪೂರ್ವಕವಾದ ಪ್ರತ್ಯಾಹಾರಾದಿರೂಪವಾದ ಅಭ್ಯಾಸಕ್ಕಿಂತ (ಶ್ರವಣಮನನಜನಿತ) ತತ್ತ್ವಜ್ಞಾನವು ಶ್ರೇಷ್ಠವು. ಕೇವಲ ಶ್ರವಣಮನನಜನಿತ ತತ್ವಜ್ಞಾನಕ್ಕಿಂತಲೂ ಜ್ಞಾನಪೂರ್ವಕವಾಗಿ, ಪ್ರತ್ಯಾಹಾರಾದಿಜನಿತಧ್ಯಾನವು ಶ್ರೇಷ್ಠವು. ಧ್ಯಾನದಲ್ಲಿ ಸಕಾಮಧ್ಯಾನಕ್ಕಿಂತಲೂ ಸರ್ವಕರ್ಮಫಲಾಪೇಕ್ಷಾನಿವೃತ್ತಿಪೂರ್ವಕವಾದ ನಿಷ್ಕಾಮಧ್ಯಾನವು ಶ್ರೇಷ್ಠವು. ತ್ಯಾಗಾತ್ ಎಂದರೆ ನಿಷ್ಕಾಮಪೂರ್ವಕವಾದ ಧ್ಯಾನಕ್ಕಿಂತಲೂ ಅಪರೋಕ್ಷಜ್ಞಾನವು ಶ್ರೇಷ್ಠವು ಅನಂತರಂ=ಅಪರೋಕ್ಷಜ್ಞಾನಾನಂತರ (ಭಕ್ತಿಪೂರ್ವಕವಾದ ಉಪಾಸನೆಯು ಆದ ಅನಂತರ, ಪ್ರಾರಬ್ಧಕರ್ಮಾದಿಗಳು ನಷ್ಟವಾದ ಅನಂತರ), ಶಾಂತಿಃ=ಮುಕ್ತಿಯು ಪ್ರಾಪ್ತವಾಗುವುದು.

ಏವಂಚ ಈ ಶ್ಲೋಕಗಳಲ್ಲಿ ಪ್ರತ್ಯಾಹಾರಾದಿಪ್ರಯತ್ನಸಾಪೇಕ್ಷಿಗಳಾಗಿ ಮನನಾದಿಗಳಿಂದ ಭಗವದಪರೋಕ್ಷಜ್ಞಾನವನ್ನು ಹೊಂದತಕ್ಕ ಚೇತನರು ಕೆಲವರು; ಪ್ರತ್ಯಾಹಾರಾದಿಸಂಪತ್ತಿರಹಿತರಾದರೂ ಮನನಪ್ರಭಾವದಿಂದಲೇ ಅಪರೋಕ್ಷಜ್ಞಾನವನ್ನುಹೊಂದುವವರು ಕೆಲವು ಚೇತನರು; ಈ ಉಭಯರೂ ಬ್ರಹ್ಮಾಪರೋಕ್ಷಾರ್ಥವಾಗಿ ಕ್ರಮವಾಗಿ ಮಾಡಬೇಕಾದ ಪ್ರಯತ್ನವಿಶೇಷವನ್ನು ಶ್ರೀಕೃಷ್ಣನು ನಿರೂಪಿಸಿರುತ್ತಾನೆ.

ಇದೇ ರೀತಿಯಾದ ತಾರತಮ್ಯವನ್ನೇ ಷಷ್ಠಾಧ್ಯಾಯದ ಅಂತ್ಯಶ್ಲೋಕಗಳಲ್ಲಿ ಸಂಕ್ಷೇಪವಾಗಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ:—

(3) **ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।**
**ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥**
**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥**
—(6. 46-47.)

(ಅಪರೋಕ್ಷಜ್ಞಾನಕ್ಕೆ ಸಾಕ್ಷಾತ್ಸಾಧಕವಾದ) ಧ್ಯಾನಯೋಗದಲ್ಲಿ ರತನಾದವನು ಕೃಚ್ಛ್ರಚಾಂದ್ರಾಯಣಾದಿ ತಪಸ್ಸುಮಾಡುವವರಿಗಿಂತಲೂ ಅಧಿಕನು; ಮತ್ತು ಧ್ಯಾನರಹಿತವಾದ ಕೇವಲ ಪರೋಕ್ಷಜ್ಞಾನವುಳ್ಳವನಿಗಿಂತಲೂ ಶ್ರೇಷ್ಠನು; ಮತ್ತು ಕೇವಲ ಕರ್ಮಾಚರಣೆಯುಳ್ಳವನಿಗಿಂತಲೂ ಶ್ರೇಷ್ಠನು. ಆದುದರಿಂದ ಎಲೈ ಅರ್ಜುನನೇ! ನೀನು ಧ್ಯಾನಯೋಗದಲ್ಲಿ ನಿರತನಾಗು. ಅಂಥಾ ಧ್ಯಾನವಂತರಲ್ಲಿಯೂ ಶ್ರದ್ಧೆಯಿಂದ ಎಂದರೆ ಅಧಿಕಭಕ್ತಿಯಿಂದ ನನ್ನಲ್ಲಿಯೇ ಇಡಲ್ಪಟ್ಟ ಮನಸ್ಸುಳ್ಳವನಾಗಿ ಕೇವಲ ನಿಷ್ಕಾಮತೆಯಿಂದ ಉಪಾಸನೆಮಾಡುವವನು ಯುಕ್ತತಮನು ಎಂದರೆ ಯೋಗಿಗಳಲ್ಲಿ ಉತ್ತಮನು. (ಇವನಿಗೇ ಸಾಧನಾಂತರಾಪೇಕ್ಷೆಯಿಲ್ಲದೆ ಅಪರೋಕ್ಷಜ್ಞಾನವು ಆಗುವುದು.)

2. ಇಲ್ಲಿ ಒಂದೆರಡು ಸೂಕ್ಷ್ಮವಿಷಯಗಳನ್ನು ನಿರೂಪಿಸಬೇಕಾಗಿದೆ. ಕರ್ಮಿಗಳಿಗಿಂತ ತತ್ತ್ವಜ್ಞಾನಿಯು ಶ್ರೇಷ್ಠನು, ತತ್ತ್ವಜ್ಞಾನಿಗಿಂತ ಧ್ಯಾನಮಾಡುವವನು ಶ್ರೇಷ್ಠನು. ಧ್ಯಾನಯೋಗಿಗಿಂತ ಅತ್ಯಂತನಿಷ್ಕಾಮಧ್ಯಾನಯೋಗಿಯು ಶ್ರೇಷ್ಠನು, ಅವನಿಗಿಂತ ಅಪರೋಕ್ಷಜ್ಞಾನಿಯು ಶ್ರೇಷ್ಠನು ಇತ್ಯಾದಿ ನಮ್ಮ ನಿರೂಪಣೆ

ಯಿಂದ ಮೋಕ್ಷಸಾಧನೆಯ ಒಂದು ಮೇಲಿನ ಸೋಪಾನವನ್ನು ಏರಿದವನು ಕೆಳಗಿನ ಅಭ್ಯಾಸಗಳನ್ನು ಪರಿತ್ಯಾಗಮಾಡಬಹುದೆಂದು ಭ್ರಮಿಸಕೂಡದು. ಎಂದರೆ ತತ್ತ್ವಜ್ಞಾನಿಯು ಅಥವಾ ಧ್ಯಾನಯೋಗಿಯು ಕರ್ಮವನ್ನು ಪರಿತ್ಯಾಗ ಮಾಡಬಹುದೆಂದಾಗಲೀ, ಧ್ಯಾನಮಾಡುವವನು ಮನನಾದಿಗಳನ್ನು ಮತ್ತು ವಿಹಿತಕರ್ಮವನ್ನು ಮಾಡಬೇಕಾದುದಿಲ್ಲವೆಂದಾಗಲೀ ತಾತ್ಪರ್ಯವಲ್ಲ. ವಿಹಿತ ಕರ್ಮಾಚರಣೆಯು, ತತ್ತ್ವಜ್ಞಾನವು, ನಿರಂತರ ಮನನವು ಅಥವಾ ಅಭ್ಯಾಸ ಸಹಿತವಾದ ನಿರಂತರ ಧ್ಯಾನಯೋಗವು ಇವು ಮೂರೂ ಅಪರೋಕ್ಷಜ್ಞಾನ ಪರ್ಯಂತವೂ ಅವಶ್ಯಕವೇ. ಆದರೆ ಮನನಶೀಲನು ಕರ್ಮಸಂಕೋಚವನ್ನು ಮಾಡಬಹುದು; ಧ್ಯಾನಯೋಗಿಯು ಸಹ ವಿಹಿತಕರ್ಮವನ್ನು ಸಂಕುಚಿತ ವಾಗಿ ಆಚರಿಸುತ್ತಲೇ, ಶ್ರವಣಮನನಗಳನ್ನೂ ಸಹ ಮೊದಲೇ ಮಾಡಿರುವ ನಾದುದರಿಂದ ತನ್ನಿಂದ ಸಂಗೃಹೀತವಾದ ಭಗವದ್ಗುಣಧ್ಯಾನದಲ್ಲಿ ಹೆಚ್ಚು ಆಸಕ್ತನಾಗುವನು. ಹಾಗೆಯೇ ನಿಷ್ಕಾಮತೆಯೂ ಕರ್ಮಮಾಡುವ ವನಿಗೂ, ಜ್ಞಾನಸಂಪಾದಿಸುವವನಿಗೂ, ಧ್ಯಾನಯೋಗಿಗೂ ಅವಶ್ಯಕವು. ಮತ್ತು ಅಪರೋಕ್ಷವನ್ನು ಕ್ಷಿಪ್ರದಲ್ಲಿ, ಸಾಧನಾಂತರವನ್ನು ಮಾಡದಂತೆ, ಸಾಕ್ಷಾತ್ ಹೊಂದಲು ಯೋಗ್ಯನಾದ ಧ್ಯಾನಯೋಗಿಯು ವಿಶೇಷತಃ ನಿಷ್ಕಾ ಮನಾಗಬೇಕು. ಕರ್ಮವೂ ಜ್ಞಾನಸಾಧನಗಳೂ ಜೊತೆಯಾಗಿಯೇ ಅಪ ರೋಕ್ಷಜ್ಞಾನಕ್ಕೆ ಕಾರಣವಾಗುವುವು.

3. ಮೋಕ್ಷಸಾಧನವನ್ನು ನಿರೂಪಣೆಮಾಡುವ ಶಾಸ್ತ್ರದ ಮುಖ್ಯ ಸಾರಾಂಶವು ಇದು–"**ದೈವೀಸಂಪದ್ವಿಮೋಕ್ಷಾಯ**" ಎಂಬ ಶ್ರೀಕೃಷ್ಣನ ವಚ ನಾನುಸಾರವಾಗಿ ಮುಕ್ತಿಯೋಗ್ಯಚೇತನನು ಅತ್ಯುತ್ತಮಸುಖಾನುಭವರೂಪ ವಾದ ಮೋಕ್ಷವನ್ನು ಹೊಂದುವುದು ನಿಶ್ಚಯವು. ಕಾಲಕರ್ಮಗಳು ಪರಿಪಕ್ವ ವಾಗದ ಸ್ಥಿತಿಯಲ್ಲಿ ಆತನು ತನ್ನ ಅವಿದ್ಯಾಕಾಮಕರ್ಮಾದಿಗಳಿಂದ ವಿಶೇ ಷತಃ ಪ್ರತಿಬದ್ಧನಾಗಿ, ನಾನಾದೇಶಗಳಲ್ಲಿ ನಾನಾವಿಧವಾದ ದುರ್ಯೋನಿಗಳನ್ನು ಹೊಂದುತ್ತಾ, ಸಂಸಾರದಲ್ಲಿ ಅಲೆಯುತ್ತಿರುವನು. ಅನಿಮಿತ್ತಕೃಪಾಸಿಂಧುವಾದ ಶ್ರೀಪರಮಾತ್ಮನು ತಿಬೇಟಿನಲ್ಲೋ, ಚೀನಾದೇಶದಲ್ಲೋ, ಹೂಣದೇಶಗಳಲ್ಲೋ ಎಲ್ಲೋ ಅಲೆಯುತ್ತಿರುವ ಸಾತ್ವಿಕಜೀವನನ್ನು ಅವನ ಯಾವುದಾದರೂ ಒಂದು

ಸ್ವರೂಪಾನುಗುಣವಾದ ಸಾತ್ವಿಕಕರ್ಮವನ್ನು ನಿಮಿತ್ತವಮಾಡಿ, ಉತ್ತಮ ಕರ್ಮಸಾಧಸಭೂಮಿಯಲ್ಲಿ ಜನ್ಮವನ್ನು ಕೊಟ್ಟು, ಭಗವದ್ಭಕ್ತರ ಸಂಗವನ್ನು ಕೊಡುವನು. ಸತ್ಸಂಗದಿಂದ ಜೀವಜಡಾತ್ಮಕವಾದ ಪ್ರಪಂಚಕ್ಕಿಂತ ಅತ್ಯಂತ ವಿಲಕ್ಷಣನಾದ ನಾರಾಯಣನು ತನಗೆ ಸ್ವಾಮಿಯೆಂದು ತಿಳಿದೊಡನೆಯೇ ಮುಕ್ತಿಯೋಗ್ಯನು ಅಂಥಾ ಪರಮಪುರುಷನನ್ನು ನೋಡಿ ನಿರಂತರದುಃಖಪ್ರದ ವಾದ ಸಂಸಾರಬಂಧವನ್ನು ಅವನ ಪ್ರಸಾದದಿಂದ ಕಳೆದುಕೊಳ್ಳಬೇಕೆಂಬ ಊರ್ಜಿ ತಾಪೇಕ್ಷೆಯಿಂದ ಯುಕ್ತನಾಗಿ,* ತದರ್ಥವಾದ ವಿಧಿವಿಹಿತವಾದ ಸಿಷ್ಕಾಮಕರ್ಮ ಗಳನ್ನು ಆಚರಿಸುತ್ತಾ ಅವುಗಳಿಂದ ಶುದ್ಧಾಂತಃಕರಣವುಳ್ಳವನಾಗುವನು. ಅನಂತರ ಅಭಿವೃದ್ಧವಾದ ತತ್ತ್ವಬುಭುತ್ಸೆಯುಳ್ಳವನಾಗಿ, ಸಜ್ಜನರ ಮುಖದಿಂದ ವಿಧ್ಯುಕ್ತರೀತಿಯಲ್ಲಿ ಶ್ರೀಭಗವದ್ಗುಣಗಳನ್ನು ಶ್ರವಣಮಾಡಿ ಸಂಶಯನಿವೃತ್ಯರ್ಥ ವಾಗಿ ಮನನಮಾಡುವನು. ಅನಂತರ ಪರಿಪೂರ್ಣವಾದ ವೈರಾಗ್ಯದಿಂದ ಸಹಿತ ನಾಗಿ, ನಿತ್ಯಸುಖಪ್ರದನಾದ ಶ್ರೀಪರಮಾತ್ಮನನ್ನು ನಿರಂತರಮನನರೂಪವಾದ ಉಪಾಯದಿಂದಲೋ, ಪ್ರತ್ಯಾಹಾರಾದಿ ಅಭ್ಯಾಸದಿಂದ ಸಹಕೃತವಾದ ಧ್ಯಾನ ಯೋಗರೂಪವಾದ ಉಪಾಯದಿಂದಲೋ, ವಿಹಿತಕರ್ಮಗಳನ್ನೂ ಮಾಡುತ್ತಲೇ ಉಪಾಸನೆಮಾಡುವನು. ಭಕ್ತಿಪೂರ್ವಕವಾದ ಇಂಥಾ ಉಪಾಸನೆಯಿಂದ ಶ್ರೀ ಪರಮಾತ್ಮನು ಪ್ರಸನ್ನನಾಗಿ ಉಪಾಸಕನ ಹೃದಯಕಮಲದಲ್ಲಿ ಅವನ ಯೋಗ್ಯ ತಾನುಗುಣವಾಗಿ ದರ್ಶನಕೊಡುವನು. ಇದಕ್ಕೇ ಅಪರೋಕ್ಷಜ್ಞಾನವೆಂದು ಹೆಸರು. ಅಪರೋಕ್ಷಜ್ಞಾನಿಯು ನಿಶ್ಚಿತಮುಕ್ತನು. ಜ್ಞಾನಿಯು ಪೂರ್ಣವಾದ ಜ್ಞಾನಭಕ್ತಿವಿರಕ್ತಿಗಳಿಂದ ಪರಮಾತ್ಮನನ್ನು ಉಪಾಸನೆಮಾಡಿ, ಪರಮಾತ್ಮನ ಅತ್ಯರ್ಥಪ್ರಸಾದವನ್ನುಹೊಂದಿ ತನ್ನ ಯೋಗ್ಯತಾನುಸಾರಿಯಾದ ಮುಕ್ತಿಪದ ವಿಯನ್ನು ಹೊಂದುತ್ತಾನೆ.

---

* ಇನ್ನು ಕೆಲವು ಉತ್ತಮಮುಕ್ತಿಯೋಗ್ಯಚೇತನರು ಶಾಸ್ತ್ರಾದಿಗಳಿಂದ ಪರಮಾತ್ಮನ ಜ್ಞಾನವು ಬಂದ ಹಾಗೆಲ್ಲಾ ಮುಕ್ತಿಯೇ ಮುಂತಾದ ಯಾವ ಫಲದಲ್ಲಿಯೂ ದೃಷ್ಟಿಯಿಡದೆ ಕೇವಲ ಪರಮಾತ್ಮನ ದರ್ಶನಾರ್ಥವಾಗಿ ಮತ್ತು ಆತನ ಪ್ರಸಾದಮಾತ್ರದ ವೃದ್ಧಿಗಾಗಿ ಅತ್ಯುತ್ಸಾಹ ಪೂರ್ವಕವಾದ ಯತ್ನವನ್ನು ಮಾಡುವರು.

ಆದುದರಿಂದ ಮುಕ್ತಿಯೋಗ್ಯನು ಪ್ರಥಮತಃ ಸಾಮಾನ್ಯಜ್ಞಾನಭಕ್ತಿ ವಿರಕ್ತಿಗಳಿಂದ ವಿಶೇಷವಾಗಿ ಕರ್ಮಮಾರ್ಗದಲ್ಲಿ ಪ್ರವೃತ್ತನಾಗುತ್ತಾನೆ. ಅನಂತರ ವಿಶೇಷಜ್ಞಾನಭಕ್ತಿವಿರಕ್ತಿಗಳಿಂದ ಕರ್ಮಸಂಕೋಚವನ್ನು ಮಾಡಿಕೊಂಡು ಶ್ರವಣಾದಿರೂಪವಾದ ಜ್ಞಾನಸಾಧನದಲ್ಲಿ ಪ್ರವಿಷ್ಟನಾಗುತ್ತಾನೆ. ಅನಂತರ, ಪ್ರಾಪ್ತವಾದ ಜ್ಞಾನದಿಂದ ಪಕ್ವವಾದ ಚಿತ್ತವುಳ್ಳವನಾಗಿ ವಿಶೇಷಜ್ಞಾನಭಕ್ತಿ ವಿರಕ್ತಿಗಳಿಂದ ಸಹಿತನಾಗಿ ಧ್ಯಾನದಲ್ಲಿ ಪ್ರವೃತ್ತನಾಗುವನು. ಧ್ಯಾನದಿಂದ ಅಪರೋಕ್ಷಜ್ಞಾನವು ಪ್ರಾಪ್ತವಾಗಿ ಸ್ವಯೋಗ್ಯತಾನುಗುಣವಾದ ಜ್ಞಾನ ಭಕ್ತಿವಿರಕ್ತಿಗಳು ಮೂರೂ ಪೂರ್ಣವಾಗುವುವು. ಹೀಗೆ ಇರುವುದರಿಂದ ಕೆಲವು ಕಡೆ ಶಾಸ್ತ್ರಗಳಲ್ಲಿ, ಹಾಗೂ ಹದಿನೆಂಟನೆಯ ಅಧ್ಯಾಯಾದಿಗಳಲ್ಲಿ ಶ್ರೀಕೃಷ್ಣನ ಮಾತುಗಳಲ್ಲಿಯೂ ಸಹ, ಮೊದಲು ವಿರಕ್ತಿಯನ್ನು ಹೊಂದಬೇಕು, ಅನಂತರ ಜ್ಞಾನೋಪಾಯವು, ಅನಂತರ ಭಕ್ತಿಯು ಇತ್ಯಾದಿ ರೀತಿಯಲ್ಲಿ ತತ್ತ್ವವು ನಿರೂಪಿತವಾಗಿದ್ದರೂ, ಪೂರ್ವದಲ್ಲಿದ್ದುದಕ್ಕಿಂತ ಹೆಚ್ಚು ಜ್ಞಾನಭಕ್ತಿವಿರಕ್ತಿಗಳಿಂದ ಉತ್ತಮಸಾಧನದಲ್ಲಿ ಉಪಾಸಕನು ಆಸಕ್ತನಾಗಬೇಕು ಎಂದು ಅರ್ಥಮಾಡ ಬೇಕು. ಅಷ್ಟೇ ವಿನಹ ವಿರಕ್ತಿಯನ್ನು ಬಿಟ್ಟು ಜ್ಞಾನವನ್ನೂ, ಜ್ಞಾನವನ್ನು ಬಿಟ್ಟು ಭಕ್ತಿಯನ್ನೂ ಹೊಂದಬಹುದೆಂದಾಗಲೀ, ವಿರಕ್ತನಿಗೆ ಜ್ಞಾನಭಕ್ತಿಗಳು ಬೇಕಿಲ್ಲ, ಜ್ಞಾನಿಗೆ ಭಕ್ತಿಯು ಬೇಕಿಲ್ಲವೆಂದಾಗಲೀ ಅರ್ಥಮಾಡಬಾರದು.

4. ಇನ್ನೊಂದು ಅವಶ್ಯವಕ್ತವ್ಯವಾದ ಎಚ್ಚರೋಕ್ತಿಯನ್ನು ಹೇಳಿ ಧ್ಯಾನ ಯೋಗದ ಸ್ವರೂಪಲಕ್ಷಣಾದಿಗಳನ್ನು ನಿರೂಪಿಸುತ್ತೇವೆ. ಯದ್ಯಪಿ ನಿಷ್ಕಾಮ ಧ್ಯಾನವು ಅಪರೋಕ್ಷಜ್ಞಾನಕ್ಕೆ ಕಾರಣವಾಗುವುದು. ಆದರೂ ವಿಧ್ಯುಕ್ತ ರೀತಿಯಲ್ಲಿ ನಡೆಯುತ್ತಾ ನಿಷಿದ್ಧಪರಿತ್ಯಾಗಗಳಿಂದ ಸಹಿತನಾಗಿ ನಿಯತರೀತಿಯಲ್ಲಿ ಉಪದೇಶಾದಿಗಳನ್ನು ಹೊಂದಿ ಮಾಡಿದ ಧ್ಯಾನವೇ ಸಾಕ್ಷಾದಪರೋಕ್ಷ ಜ್ಞಾನವನ್ನು ಹುಟ್ಟಿಸುವುದು. ಅನ್ಯಥಾ ಅಪರೋಕ್ಷಜ್ಞಾನವು ಉಂಟಾಗ ಲಾರದು.

**ಪ್ರಶ್ನೆ—**ಸ್ವಾಮಿ! ಇದು ಆಶ್ಚರ್ಯವು; ತೃಣವನ್ನು ಸುಡುವುದರಲ್ಲಿ ಅಗ್ನಿಯು ಕಾರಣವು. ಬಟ್ಟೆಯನ್ನು ತೋಯಿಸುವುದಕ್ಕೆ ಜಲವು ಕಾರಣವು.

ಹೀಗೆಯೇ ಜ್ಞಾನಕಾರಣವಾದ ಧ್ಯಾನವು ಹುಟ್ಟಿದ ಮೇಲೆ ಅಪರೋಕ್ಷ ಜ್ಞಾನವು ಹುಟ್ಟದೇ ಇರುವುದು ಹೇಗೆ? ಮತ್ತು ಧ್ಯಾನಕಾರಣವಾದ ತತ್ತ್ವ ಜ್ಞಾನವು ಶಾಸ್ತ್ರವ್ಯಾಸಂಗದಿಂದ ಬರುವುದು. ಇನ್ನು ವ್ಯಾಸಂಗವು ನಿಯತ ರೀತಿಯಿಂದಲೇ ನಡೆಯಬೇಕೆಂದು ನಿರ್ಬಂಧವೇನು? ಅಥವಾ ಶಾಸ್ತ್ರ ವ್ಯಾಸಂಗದಿಂದ ಜ್ಞಾನವು ಬರುವುದೆಂದು ಅನುಭವಸಿದ್ಧವಾಗಿರುವುದರಿಂದ ತದರ್ಥವಾಗಿ ವಿಧ್ಯುಕ್ತಕರ್ಮಾಚರಣೆಯು ಏತಕ್ಕೆ?

ಶ್ರೀಶ್ರೀಗಳವರು— ಅಂತಃಕರಣಶುದ್ಧ್ಯರ್ಥವಾದ ಕರ್ಮಾಚರಣೆಯು, ತತ್ತ್ವಜ್ಞಾನಾರ್ಥವಾದ ಶ್ರವಣಮನನಗಳು, ಧ್ಯಾನಾರ್ಥವಾದ ಮನನ ಯೋಗಾಭ್ಯಾಸಾದಿಗಳು ಇವಿಷ್ಟೂ ವಿಧಿವಿಹಿತವಾದ ರೀತಿಯಲ್ಲಿ ಅಧಿಕಾರಾನು ಸಾರವಾಗಿ ನಡೆದರೇನೇ ಅಪರೋಕ್ಷಜ್ಞಾನೋತ್ಪತ್ತಿಗೆ ಕಾರಣವಾಗುವುವು. ಹಾಗಿಲ್ಲದೆ ಮಹಾಫಲವಾದ ಬ್ರಹ್ಮದರ್ಶನವು ಉಂಟಾಗಲಾರದು. ಯದ್ಯಪಿ ನೀವು ಹೇಳಿದಂತೆ ಅಗ್ನಿಯು ಕಾಷ್ಠವನ್ನು ಸುಡುವುದು ನಿಜವು. ಅಗ್ನಿಯಿಂದ ಪಾಕವು ಉಂಟಾಗುವುದು. ಆದರೆ ಹಸೀಕಟ್ಟಿಗೆಗಳಿಂದ ಧೂಮಪೂರ್ಣವಾದ ಮಂದವಾದ ಅಗ್ನಿಯಿಂದ ಸಹಸ್ರಬ್ರಾಹ್ಮಣಭೋಜನಾರ್ಥವಾದ ದೊಡ್ಡ ಅಡಿಗೆಯನ್ನು ಮಾಡುವುದು ಸಾಧ್ಯವೇ? ಅಥವಾ ಸರೋವರದ ಮಧ್ಯದಲ್ಲಿ ನೀರಿನ ಮೇಲೆ ಅಗ್ನಿಯನ್ನು ಇಟ್ಟು ಅಡಿಗೆ ಮಾಡುವುದಕ್ಕೆ ಶಕ್ಯವಾಗುವುದೇ? ಬೀಜವು ಧಾನ್ಯೋತ್ಪತ್ತಿಗೆ ಕಾರಣವಾಗುವುದು. ಆದರೆ ಬಂಡೆಯ ಕಲ್ಲಿನ ಮೇಲೆ ಎರಚಲ್ಪಟ್ಟರೆ ಅಥವಾ ಕೊಳೆತುಹೋಗಿದ್ದರೆ ಅದು ಅಂಕುರವನ್ನು ಹೇಗೆತಾನೇ ಹುಟ್ಟಿಸುವುದು? ದಂಡವು ಘಟನಿರ್ಮಾಣದಲ್ಲಿ ಒಂದು ಕಾರಣವಾದರೂ, ಅದು ದೃಢವಾಗಿ ಚಕ್ರಸಂಬಂಧದ ಅಭಿಘಾತವನ್ನು ತಡೆಯುವಷ್ಟು ಶಕ್ತಿಯುಳ್ಳದ್ದಾಗಿರಬೇಕು. ಹೀಗೆಯೇ ಧ್ಯಾನವು ಅಪರೋಕ್ಷಕ್ಕೆ ಕಾರಣವಾದರೂ ವಿಧ್ಯುಕ್ತ ರೀತಿಯಲ್ಲಿ ನಡೆಯದೇ ಇದ್ದರೆ, ಅಪರೋಕ್ಷಜ್ಞಾನಜನಕವಾದ ಹರಿಪ್ರಸಾದ ವನ್ನು ಹುಟ್ಟಿಸಲಾರದು. ಹಾಗೆಯೇ ಶ್ರವಣಮನನಗಳು ವಿಧ್ಯುಕ್ತರೀತಿ ಯಲ್ಲಿ ನಡೆಯದೇ ಇದ್ದರೆ ಮೋಕ್ಷಕಾರಣವಾದ ಧ್ಯಾನವನ್ನು ಹುಟ್ಟಿಸಲಾರವು. ವಿಧ್ಯುಕ್ತಕರ್ಮಾನುಷ್ಠಾನಪರಿತ್ಯಾಗವೂ ಸಹ ಮೋಕ್ಷಕಾರಣವಾದ ಅಪರೋ ಕ್ಷಜ್ಞಾನೋತ್ಪತ್ತಿಗೆ ಪ್ರತಿಬಂಧಕವಾಗಿ ಪರಿಣಮಿಸಿ ಅತ್ಯಂತ ಅನರ್ಥಕರವೇ ಆಗುವುದು.

ಅಪರೋಕ್ಷಜ್ಞಾನವು ಧ್ಯಾನಜನಿತಹರಿಭಕ್ತಿಯಿಂದ ಪ್ರಾಪ್ತವಾದ ಶ್ರೀ ಪರಮಾತ್ಮನ ಪ್ರಸಾದದಿಂದ ಉಂಟಾಗುವುದು ಎಂಬ ವಿಷಯವನ್ನು ನೀವು ಮನಸ್ಸಿನಲ್ಲಿಟ್ಟರೆ, ಕೆಲವು ಧ್ಯಾನಗಳು, ಕೆಲವು ಶ್ರವಣಮನನಗಳು, ಕೆಲವು ಕರ್ಮಗಳು ಮೋಕ್ಷೋಪಯೋಗಿಯಾಗದಿರುವುದಕ್ಕೂ, ಕೆಲವು ಮೋಕ್ಷೋಪಯೋಗಿಯಾಗುವುದಕ್ಕೂ ಕಾರಣವು ಸ್ಫುಟತರವಾಗಿ ಗೊತ್ತಾಗುವುದು. ಲೌಕಿಕದೃಷ್ಟಾಂತದಿಂದಲೂ ಈ ವಿಷಯವನ್ನು ಚೆನ್ನಾಗಿ ತಿಳಿಯಬಹುದು. ಇಷ್ಟು ಗ್ರಂಥಗಳನ್ನು ಓದಿ ಈ ರೀತಿಯಾಗಿ ವ್ಯಾಖ್ಯಾನಕೌಶಲ್ಯವನ್ನು ಪಡೆದವನಿಗೆ ಎಂ.ಎ. ಬಿರುದನ್ನು ಕೊಡಬೇಕೆಂದು ನಿಮ್ಮ ವಿಶ್ವವಿದ್ಯಾನಿಲಯದ ಮಹಾಧಿಕಾರಿಯು ನಿಶ್ಚಯಿಸಿರುತ್ತಾನೆ. ಹೀಗಿದ್ದರೂ, ಮನೆಯಲ್ಲಿಯೇ ಓದಿ ಅಷ್ಟು ಸಾಮರ್ಥ್ಯವನ್ನು ಸಂಪಾದಿಸಿದವನಿಗಾಗಲೀ, ಅಥವಾ ಕೆಳಗಿನ ತರಗತಿಯ ಪರೀಕ್ಷೆಗಳಾದ ಬಿ.ಎ. ಮುಂತಾದ ಸರ್ಟಿಫಿಕೇಟನ್ನು ಹೊಂದದವರಿಗಾಗಲೀ ಆತನು ಎಂ.ಎ. ಬಿರುದನ್ನು ಕೊಡಲಾರನು. ಮತ್ತು ಸರ್ಕಾರದಲ್ಲಿ ಕೆಲಸವನ್ನು ಕೊಡಲಾರರು. ಪ್ರಭುಪ್ರಸಾದವು ವಿಧ್ಯುಕ್ತರೀತಿಯಲ್ಲಿ ನಡೆದವನ ಮೇಲೆಯೇ ಬರುವುದು. ವಿಧ್ಯತಿಕ್ರಮಮಾಡಿದವನ ಮೇಲೆ ವಿಧಿನಿಯಾಮಕನು ಹೇಗೆ ತಾನೇ ಒಲಿಯುವನು? ಈ ಅಭಿಪ್ರಾಯವನ್ನೆಲ್ಲಾ ಮನಸ್ಸಿನಲ್ಲಿಟ್ಟೇ "**ನಿಯತ ಧ್ಯಾನಜಜ್ಞಾನಯೋಗಾದ್ಗಮ್ಯಂ**" ಎಂದು ಟೀಕಾಕೃತ್ಪಾದರು ಪರಬ್ರಹ್ಮನನ್ನು ಸ್ತುತಿಸಿರುತ್ತಾರೆ.

---

## 5. ಐದನೆಯ ಅಂಶವು.

### ಬ್ರಹ್ಮಾಪರೋಕ್ಷದ ಸಾಕ್ಷಾತ್ಸಾಧನದ ವಿಶೇಷವಿಮರ್ಶೆಯು. ಧ್ಯಾನಸ್ವರೂಪಾದಿವರ್ಣನೆಯು.

1. ಶ್ರೀಶ್ರೀಗಳವರು :— ಇನ್ನು ಮೇಲೆ ಅಪರೋಕ್ಷಜ್ಞಾನಕ್ಕೆ ಸಾಕ್ಷಾತ್ಸಾಧನವು ಯಾವುದೆಂಬುದನ್ನು ಸ್ವಲ್ಪ ವಿಶೇಷವಾಗಿ ವಿಚಾರಮಾಡೋಣ.

ಆರಂಭದಲ್ಲಿಯೇ ಒಂದು ವಿಶೇಷನಿರ್ಣಯವನ್ನು ಸೂಚನೆಮಾಡಿ ಬಿಡುವೆವು. ಅಪರೋಕ್ಷಜ್ಞಾನೋತ್ಪತ್ತಿಯಲ್ಲಿಯೂ ಸಹ ಅಪರೋಕ್ಷಜ್ಞಾನಜನಕವಾದ ವಿಷ್ಣುಪ್ರಸಾದವೇ ಮುಖ್ಯಕಾರಣವು.

ಶ್ರೀಕೃಷ್ಣನು ಹೇಳುತ್ತಾನೆ.:—

(1) **ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ।**
—(18. 58.)

ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾದರೆ ಸರ್ವದುರ್ಗಗಳನ್ನೂ ನನ್ನ ಪ್ರಸಾದದಿಂದಲೇ ನೀನು ದಾಟುತ್ತೀಯೆ.

ಇದರಿಂದ ಧ್ಯಾನವನ್ನು ಸಂಪಾದನೆಮಾಡಿ ಅಪರೋಕ್ಷಜ್ಞಾನಾರ್ಥವಾಗಿ ಅಧಿಕಾರಿಯು ಹೊಂದುವ ಮಹಾಸಂಕಟರೂಪವಾದ ದುರ್ಗವನ್ನೂ ಸಹ ಶ್ರೀಕೃಷ್ಣನು ತನ್ನ ಪ್ರಸಾದದಿಂದಲೇ ದಾಟಿಸುವನೆಂದು ಸಿದ್ಧವಾಗುವುದು. ಸ್ಪಷ್ಟವಚನವೂ ಇರುವುದು:—

(2) **ಬುದ್ಧಿರ್ಜ್ಞಾನಮಸಂಮೋಹಃ ಕ್ಷಮಾ ಸತ್ಯಂ ದಮಃ ಶಮಃ ॥**
**ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥**
— (10.4-5)

ಜ್ಞಾನವು, ಅಪರೋಕ್ಷಜ್ಞಾನವು, ಮಿಥ್ಯಾಜ್ಞಾನನಾಶವು, ಕ್ಷಮಾ ಸತ್ಯದಮಶಮಾದಿಸರ್ವಗುಣಗಳೂ ಪ್ರಾಣಿಗಳಿಗೆ ನನ್ನಿಂದಲೇ ಬರುವುವು.

(3) **.... .... ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ।** —(15.15.)

ನನ್ನಿಂದಲೇ ಸ್ಮೃತಿಯು, ಪರೋಕ್ಷಾಪರೋಕ್ಷಜ್ಞಾನವು, ಜ್ಞಾನತಿರೋಧಾನವು ಇವೆಲ್ಲಾ ಬರುತ್ತವೆ.

ಹೀಗಿರುವುದರಿಂದ ಧ್ಯಾನವು ಅಪರೋಕ್ಷಜ್ಞಾನಜನಕವಾದ ಹರಿಪ್ರಸಾದಕ್ಕೆ ಕಾರಣವಾಗಿ, ಅದರಿಂದ ಪರಮಾತ್ಮದರ್ಶನವು ಆಗುವುದೆಂದು ನಿಶ್ಚಯಿಸಬೇಕು. ಇಷ್ಟೇ ಅಲ್ಲ. ಧ್ಯಾನವೂ ಸಹ ಸಾಕ್ಷಾತ್ ಹರಿಪ್ರಸಾದವನ್ನು ಹುಟ್ಟಿಸಲಾರದು. ಧ್ಯಾನಜನಿತವಾದ ಅಧಿಕಾರಿಯ **ಭಕ್ತಿಯೇ** ಅಪರೋಕ್ಷಜ್ಞಾನಜನಕವಾದ ಹರಿಪ್ರಸಾದಕ್ಕೆ ಸಾಕ್ಷಾತ್ ಕಾರಣವು. ಅಥವಾ ಧ್ಯಾನವೇ ಕಾರಣವೆಂದು ಹೇಳುವುದಾದರೆ ಭಕ್ತಿಯನ್ನು ಸನ್ನಿಕರ್ಷರೂಪವಾದ ಅವಾಂತರ

ವ್ಯಾಪಾರವೆಂದಾದರೂ ಭಾವಿಸಬಹುದು. ಅಂತೂ ಅಪರೋಕ್ಷಜ್ಞಾನಜನಕವಾದ ಭಕ್ತಿಯು ಧ್ಯಾನದಿಂದ ಸಾಕ್ಷಾದುತ್ಪನ್ನವಾಗುವುದು. ಅಥವಾ **"ಧ್ಯಾನಂ ಭಕ್ತಿಸಮನ್ವಿತಃ"** ಎಂಬ ಪ್ರಮಾಣವಚನಾನುಸಾರ ಭಕ್ತಿಸಹಿತವಾದ ಧ್ಯಾನವು ಕಾರಣವೆಂದಾದರೂ ಹೇಳಬಹುದು. ಅಂತೂ ಧ್ಯಾನಜನ್ಯವಾದ ಭಕ್ತಿಯು ಅಥವಾ ಭಕ್ತಿಸಹಿತವಾದ ಧ್ಯಾನವು ಪರಮಾತ್ಮದರ್ಶನಕ್ಕೆಸಾಕ್ಷಾತ್ಕಾರಣವು.

ಶ್ರೀಕೃಷ್ಣನು ಹೇಳುತ್ತಾನೆ:—

(4) **ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ।**
**ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥**
—(11.54.)

ಎಲೈ ಅರ್ಜುನನೇ! ಅನನ್ಯವಾದ ಭಕ್ತಿಯಿಂದ ನನ್ನ ಸ್ವರೂಪವನ್ನು ತಿಳಿಯುವುದಕ್ಕೂ, ನೋಡುವುದಕ್ಕೂ, ಮುಕ್ತಿಯಲ್ಲಿ ಪ್ರವೇಶಿಸುವುದಕ್ಕೂ ಸಾಧ್ಯವಾಗುವುದು.

(5) **ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।**
—(18. 55.)

ಅಧಿಕಾರಿಯು ಭಕ್ತಿಯಿಂದಲೇ ನನ್ನವ್ಯಾಪ್ತಿಯನ್ನೂ ಯಥಾರ್ಥಸ್ವರೂಪವನ್ನೂ ಸರಿಯಾಗಿ ತಿಳಿಯುತ್ತಾನೆ.

2. ಅಪರೋಕ್ಷಜ್ಞಾನಕಾರಣವಾದ ಧ್ಯಾನಸ್ವರೂಪವನ್ನು ಸಾಂಗವಾಗಿ ಶ್ರೀಕೃಷ್ಣನು ಐದನೆಯ ಮತ್ತು ಆರನೆಯ ಅಧ್ಯಾಯಗಳಲ್ಲಿ ನಿರೂಪಿಸಿರುತ್ತಾನೆ. ಧ್ಯಾನವೆಂದರೆ ಭಗವದ್ಗೀತೆಯಲ್ಲಿ ದ್ವಿತೀಯ ಷಟ್ಕದಲ್ಲಿ ಉಕ್ತವಾಗಿರುವ ಗುಣಗಣಾನುಸಂಧಾನಪೂರ್ವಕವಾಗಿ ಭಗವಂತನನ್ನು ಶ್ರವಣಮನನಾದಿಜನಿತ ಸಂಸ್ಕಾರಾತ್ಮಕವಾದ ಭಗವದ್ವಿಗ್ರಹದಲ್ಲಿ ಮನಸ್ಸಿನಿಂದಲೇ ಸದಾ ಚಿಂತಿಸುತ್ತಿರುವುದು. ಅಂಥಾ ವಾಸನಾಮಯಪ್ರತಿಮೆಯಲ್ಲಿ ಶ್ರೀಪರಮಾತ್ಮನ ಸಾನ್ನಿಧ್ಯವು ಬಾಹ್ಯಪ್ರತಿಮೆಗಳಲ್ಲಿರುವುದಕ್ಕಿಂತಲೂ ಅತ್ಯತಿಶಯವಾಗಿರುವುದು. ಇಂಥಾ ಅಂತಃಕರಣದಲ್ಲಿ ಸನ್ನಿಹಿತವಾದ ಹರಿಪ್ರತಿಮೆಯ ನಿರಂತರಾವಲೋಕನವು ಕೆಲವರಿಗೆ ಆಸನ, ಪ್ರಾಣಾಯಾಮ, ವಾಯುಜಯಾದಿ ಉಪಾಯಗಳಿಂದ ಕ್ಷಿಪ್ರವಾಗಿ ಸಾಧ್ಯವಾಗುವುದು. ಇಂಥಾ ಯೋಗೋಪಾಯರಹಿತರಾದವರಿಗೆ,

(1) **ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಂ।** —(13. 11.)

ಎಂಬ ಶ್ಲೋಕೋಕ್ತವಾದ ಭಗವದ್ವಿಷಯಕವಾದ ತತ್ತ್ವಜ್ಞಾನದಲ್ಲಿ ಆಸಕ್ತಿಯೂ ಮತ್ತು ಅಪರೋಕ್ಷಜ್ಞಾನಾರ್ಥವಾಗಿ ಶಾಸ್ತ್ರಪರ್ಯಾಲೋಚನೆಯೂ ಇವುಗಳೇ ಅಪರೋಕ್ಷಜ್ಞಾನಕ್ಕೆ ಮುಖ್ಯಸಾಧನವಾಗುವುವು.

(2) **ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ।**

—(13. 10.)

ಎಂಬಲ್ಲಿ ಹೇಳಿರುವ ಭಕ್ತಿಯೂ ಮಾತ್ರ ಸರ್ವರಿಗೂ ಅಪೇಕ್ಷಿತವು.

ಧ್ಯಾನಸ್ವರೂಪವನ್ನು ಶ್ರೀಕೃಷ್ಣನು ಸಂಕ್ಷೇಪವಾಗಿ ಪಂಚಮಾಧ್ಯಾಯದಲ್ಲಿ ನಿರೂಪಿಸಿರುತ್ತಾನೆ:—

(3) **ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ।**
**ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ॥**
**ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ।**
**ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ॥**

—(5. 27-28.)

ಪ್ರತ್ಯಾಹಾರದಿಂದ ಶಬ್ದಾದಿವಿಷಯಗಳನ್ನು ಶ್ರೋತ್ರಾದಿ ಇಂದ್ರಿಯಗಳಿಗೆ ಅವಿಷಯಗಳನ್ನಾಗಿ ಮಾಡಿ (ಅಥವಾ ಅಭಿಮಾನಪರಿತ್ಯಾಗದಿಂದ ಸುಖದುಃಖಸಂಪಾದಕವಾಗದಂತೆ ಮಾಡಿ, ಸರ್ವಥಾ ವಿಷಯಾಭಿಲಾಷೆಯನ್ನು ಬಿಟ್ಟು,) ಭ್ರೂಮಧ್ಯದಲ್ಲಿ ದೃಷ್ಟಿಯನ್ನಿಟ್ಟು, ಪ್ರಾಣಾಪಾನಗಳನ್ನು ಸಿರ್ವಿಕಾರವಾಗಿ ನಾಸಾಂತಃಪ್ರದೇಶದಲ್ಲಿಯೇ ಸಂಚರಿಸುವಂತೆ ಮಾಡಿ (ಕುಂಭಕದಲ್ಲಿ ಸ್ಥಾಯಿಯಾಗಿ ನಿಲ್ಲಿಸಿ), ನಿಗೃಹೀತವಾದ ಇಂದ್ರಿಯ ಮತ್ತು ಮನೋಬುದ್ಧಿಗಳುಳ್ಳವನಾಗಿ, ಮನನಶೀಲನಾಗಿ, ಮೋಕ್ಷವೆಂಬ ಪುರುಷಾರ್ಥದಲ್ಲಿಯೇ ಆಸಕ್ತನಾಗಿ ವಿಷಯೇಚ್ಛೆ, ಭಯ, ಕ್ರೋಧಾದಿಗಳಿಂದ ಯಾವಾತನು ರಹಿತನಾಗಿರುವನೋ ಆತನು ಮುಕ್ತಸದೃಶನು. ಕ್ಷಿಪ್ರದಲ್ಲಿ ಜ್ಞಾನವನ್ನು ಹೊಂದಿ ಮುಕ್ತನಾಗುವನು ಎಂದು ಭಾವವು.

ಷಷ್ಠಾಧ್ಯಾಯದ ಧ್ಯಾನಪ್ರಕಾರದ ವರ್ಣನೆಯು ವಿಸ್ತೃತವಾದುದು :—

(4) **ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ।**
**ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ॥**

**ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ।**
**ನಾತ್ಯುಚ್ಛ್ರಿತಂ ನಾತಿನೀಚಂ ಚೇಲಾಜಿನಕುಶೋತ್ತರಂ ॥**
**ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ।**
**ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥**
**ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ।**
**ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥**
**ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ।**
**ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ॥**
**ಯುಂಜನ್ನೇವ ಸದಾತ್ಮಾನಂ ಯೋಗೀ ನಿಯತಮಾನಸಃ।**
**ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥**

—(6. 10-15.)

ಧ್ಯಾನಯೋಗಿಯು ನಿರಂತರದಲ್ಲಿಯೂ ಜನಸಂಘರಹಿತವಾದ ಸ್ಥಳದಲ್ಲಿ ಸ್ಥಿತನಾಗಿ, ಏಕಾಕಿಯಾಗಿ, ಜಿತವಾದ ಮನಸ್ಸು ಮತ್ತು ದೇಹಗಳುಳ್ಳವನಾಗಿ, ಆಶಾರಹಿತನಾಗಿ ಮತ್ತು ವಿಷಯಸಂಗರಹಿತನಾಗಿ ತನ್ನ ಮನಸ್ಸನ್ನು ಪರಮಾತ್ಮನಲ್ಲಿ ಯೋಗಮಾಡಬೇಕು. ಇಂಥಾ ಧ್ಯಾನಾನುಷ್ಠಾನಪ್ರಕಾರವನ್ನು ಶ್ರೀಕೃಷ್ಣನು ಹೇಳುತ್ತಾನೆ:— ನಿರ್ಮಲವಾದ ಎಂದರೆ ಮನಃಪ್ರಸಾದಜನಕವಾದ ಸ್ಥಳದಲ್ಲಿ, ವಸ್ತ್ರ, ವ್ಯಾಘ್ರಚರ್ಮ ಅಥವಾ ದರ್ಭೆಗಳೇ ಮೇಲಾಗಿ ಉಳ್ಳಂಥಾ ಮತ್ತು ಅತಿ ಎತ್ತರವೂ ಅತಿತಗ್ಗೂ ಅಲ್ಲದಂಥಾ ಆಸನವನ್ನು ಸ್ಥಿರವಾಗಿ ಪ್ರತಿಷ್ಠಾ ಅದರಲ್ಲಿ ಕುಳಿತು, ನಿಗೃಹೀತವಾದ ಚಿತ್ತ ಮತ್ತು ಇಂದ್ರಿಯವ್ಯಾಪಾರವುಳ್ಳವನಾಗಿ ಏಕಾಗ್ರಮನಸ್ಕನಾಗಿ ಮನೋಗತವಾದ ಸಕಲದೋಷಗಳ ಪರಿಹಾರಾರ್ಥವಾಗಿ ಅಥವಾ ಸಕಲ ಸಂಸಾರದೋಷನಿವೃತ್ತ್ಯರ್ಥವಾಗಿ ಧ್ಯಾನಯೋಗವನ್ನು ಆರಂಭಿಸಬೇಕು. ದೇಹ, ಶಿರಸ್ಸು, ಕಂಠ ಇವುಗಳನ್ನು ರುಜುವಾಗಿ ಎಂದರೆ ಅಳ್ಳಾಡದಂತೆ ಸ್ಥಿರವಾಗಿ ನಿಲ್ಲಿಸಿ, ಸ್ವನಾಸಾಗ್ರವನ್ನು ನೋಡುತ್ತಾ, ನಾನಾ ದಿಕ್ಕುಗಳನ್ನು ತಿರುಗಿನೋಡದೆ, ಸ್ವತಃ ವಿಷಯಗಳಲ್ಲಿ ಪ್ರವೃತ್ತಿರಹಿತವಾದ ಮನಸ್ಸುಳ್ಳವನಾಗಿ, ನಿರ್ಭಯನಾಗಿ, ಬ್ರಹ್ಮಚಾರಿವ್ರತದಲ್ಲಿ ಸ್ಥಿತನಾಗಿ, ಮನಸ್ಸನ್ನು ವಿಷಯಧ್ಯಾನಮಾಡದಂತೆ ನಿಗ್ರಹಿಸಿ, ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗಿ, ನಾನೇ ಸರ್ವೋತ್ತಮನೆಂದು ತಿಳಿದು, ಯುಕ್ತ ಆಸೀತ= ಸಮಾಧಿ

ಸಂಪನ್ನನಾಗತಕ್ಕದ್ದು. ಈರೀತಿಯಾದ, ಸದಾ ಪರಮಾತ್ಮನಲ್ಲಿ ಮನಸ್ಸನ್ನು ಲಗ್ನವನ್ನಾಗಿ ಮಾಡುವ, ಜಿತಮನಸ್ಕನಾದ ಯೋಗಿಯು ಶರೀರೋತ್ಕ್ರಾಂತ್ಯನಂತರದಲ್ಲಿ ಪ್ರಾಪ್ತವಾಗುವ ನನ್ನಲ್ಲಿ (ಶ್ರೀಕೃಷ್ಣನಲ್ಲಿ) ಸ್ಥಿತಿರೂಪವಾದ ಮುಕ್ತಿಯನ್ನು ಹೊಂದುತ್ತಾನೆ.

ಧ್ಯಾನಯೋಗನಿಷ್ಠನಾದವನಿಗೆ ಕೆಲವು ಆಹಾರಾದಿನಿಯಮಗಳನ್ನು ಹೇಳಿ, ಯೋಗಸಂಪೂರ್ತಿಸ್ವರೂಪವನ್ನು ಶ್ರೀಕೃಷ್ಣನು ವರ್ಣಿಸುತ್ತಾನೆ:—

(5) **ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ।**
**ನಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥**
**ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು।**
**ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥**
**ಯದಾ ವಿನಿಯತಂ ಚಿತ್ತಮಾತ್ಮನ್ಯೇವ ವಶಂ ನಯೇತ್।**
**ನಿಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ ॥**
**ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ।**
**ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥**
**ಯತ್ರೋಪರಮತೇ ಚಿತ್ತಂ ನಿಷಿದ್ಧಂ ಯೋಗಸೇವಯಾ।**
**ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥**
—(6. 16-20.)

ಎಲೈ ಅರ್ಜುನನೇ! ಜೀರ್ಣಶಕ್ತಿಯನ್ನು ಮೀರಿ ಅತ್ಯಾಹಾರವನ್ನು ಭಕ್ಷಣೆಮಾಡುವಂಥಾ, ತನ್ನ ಸಹನಸಾಮರ್ಥ್ಯವನ್ನು ಮೀರಿ ಸರ್ವಥಾ ಭೋಜನವೇ ಮಾಡದಂಥಾ, ಅತಿ ನಿದ್ರಾಪರತನಾದಂಥಾ ಮತ್ತು ತನ್ನ ಸಾಮರ್ಥ್ಯವನ್ನು ಮೀರಿ ನಿದ್ರೆಗೆಡುವಂಥಾ ಪುರುಷನಿಗೆ ಧ್ಯಾನಯೋಗವು ಲಭಿಸಲಾರದು. ಧ್ಯಾನೋಪಯೋಗಿಯಾಗುವಷ್ಟು ಆಹಾರವಿಹಾರಗಳುಳ್ಳಂಥಾ, ಕರ್ಮಗಳಲ್ಲಿ ಯೋಗಪ್ರತಿಘಾತವಾಗದಷ್ಟು ಇಂದ್ರಿಯ ವ್ಯಾಪಾರವನ್ನು ಮಾಡುವಂಥಾ, ಯೋಗೋಪಯೋಗವಾಗುವಷ್ಟು ಮಾತ್ರ ನಿದ್ರಾಜಾಗೃದವಸ್ಥಾದಿಗಳನ್ನು ಉಳ್ಳಂಥಾ ಪುರುಷನಿಗೆ ದುಃಖನಾಶಕರವಾದ ಧ್ಯಾನಯೋಗವು ಉಂಟಾಗುವುದು. ಯಾವಾಗ ಯೋಗಿಯು ವಿಷಯಗಳಿಂದ ಪ್ರತ್ಯಾ

ಹೃತವಾದ ಸ್ವವಶವಾದ ತನ್ನ ಮನಸ್ಸನ್ನು ಸರ್ವವಿಷಯಾಪೇಕ್ಷಾರಹಿತನಾಗಿ ಪರಮಾತ್ಮನಲ್ಲಿಯೇ ಇಡುತ್ತಾನೆಯೋ ಆಗ ಆತನು ಯೋಗಸಂಪೂರ್ತಿಯುಳ್ಳವನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ವಾಯುಶೂನ್ಯ ಪ್ರದೇಶದಲ್ಲಿರುವ ದೀಪವು ಹೇಗೆ ಚಲಿಸುವುದಿಲ್ಲವೋ ಹಾಗೆ ಇರುವ ಸ್ಥಿತಿಯು ಭಗವಂತನಲ್ಲಿ ಮನೋಯೋಗವನ್ನು ಆಚರಿಸುವ ಯತಚಿತ್ತನಾದ (ಜಿತಮನಸ್ಕನಾದ) ಯೋಗಿಗೆ ಉಪಮಾನವು (ದೃಷ್ಟಾಂತವು). ಇಂಥಾ ಸಮಾಧಿಯಲ್ಲಿ, ಧ್ಯಾನವೆಂಬ ಉಪಾಯದಿಂದ ಬಾಹ್ಯವ್ಯಾಪಾರಗಳಿಂದ ನಿರೋಧಿಸಲ್ಪಟ್ಟ ಮನಸ್ಸು ಉಪರಮತೇ=ಪರಮಾತ್ಮನ ಪಾದಮೂಲದಲ್ಲಿಯೇ ವಿಶೇಷವಾಗಿ ಕ್ರೀಡಿಸುತ್ತದೆ. ಮತ್ತು ಈ ಅವಸ್ಥೆಯಲ್ಲಿ ಧ್ಯಾನಶೀಲನು ಮನಸ್ಸಿನಿಂದ ಭಗವಂತನನ್ನು ನೋಡುವವನಾಗಿ ಸ್ವದೇಹದಲ್ಲಿಯೇ ಸಂತೋಷವನ್ನು ಹೊಂದುತ್ತಾನೆ. ಧ್ಯಾನಾರ್ಥವಾಗಿ ಮನಸ್ಸು ನಿಶ್ಚಲವಾಗದಿದ್ದರೆ ಯೋಗಿಯು ಅವಶ್ಯ ಆಚರಿಸಬೇಕಾದ ಪ್ರತ್ಯಾಹಾರ ಕ್ರಮವನ್ನು ಶ್ರೀಕೃಷ್ಣನು ನಿರೂಪಿಸುತ್ತಾನೆ:—

(5) **ಸಂಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ।**
**ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥**
**ಶನೈಃಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ।**
**ಆತ್ಮಸಂಸ್ಥಂ ಮನಃಕೃತ್ವಾ ನ ಕಿಂಚಿದಪಿ ಚಿಂತಯೇತ್ ॥**
**ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಂ ।**
**ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥**
—(6. 24-26.)

**ಅರ್ಥವು :—** ಈ ಫಲದ ಉದ್ದಿಶ್ಯ ಈ ಕರ್ಮವನ್ನು ಮಾಡುತ್ತೇನೆಂದು ಸಂಕಲ್ಪಪೂರ್ವಕವಾದ ಆಚರಣೆಗಳಿಂದ ಜನಿತವಾದ ಸಕಲವಿಷಯಭೋಗಗಳನ್ನೂ ಸಂಪೂರ್ಣವಾಗಿ ಪರಿತ್ಯಾಗಮಾಡಿ, ಮನಸ್ಸಿನಿಂದ ಸಕಲ ಇಂದ್ರಿಯ ಸಮೂಹವನ್ನೂ ವಿಷಯಗಳ ದೆಸೆಯಿಂದ ನಿಯಮಿಸಿ, ಧೈರ್ಯೋಪೇತವಾದ ಧಾರಣೆಯಿಂದ ಸಹಿತವಾದ ವಶೀಕೃತವಾದ ಬುದ್ಧಿಯಿಂದ ಮೆಲ್ಲಮೆಲ್ಲಗೆ ಮನಸ್ಸು ವಿಷಯಗಳನ್ನು ಕುರಿತು ಪ್ರವರ್ತಿಸದಂತೆ ಮಾಡಬೇಕು. ಮನಸ್ಸನ್ನು ಭಗವನ್ನಿಷ್ಠವನ್ನಾಗಿ ಮಾಡಿ ಭಗವದನ್ಯವಾದ ಯಾವ ವಿಷಯವನ್ನೂ ಚಿಂತಿಸ

ಬಾರದು. ಚಂಚಲವೂ ಮತ್ತು ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯಗಳನ್ನು ಕುರಿತು ಪ್ರವರ್ತಿಸುತ್ತದೆಯೋ ಆಯಾ ವಿಷಯಗಳಿಂದ ಅದನ್ನು ಹಿಂತಿರುಗಿಸಿ ಪರಮಾತ್ಮನಲ್ಲಿಯೇ ಅಧೀನವಾಗಿ ಇಡಬೇಕು.

ಪ್ರತ್ಯಾಹಾರಾದಿಸಾಧನರಹಿತರಾದವರು ತಮ್ಮ ಮನನಭಕ್ತಿಗಳು ಪರಿಪಕ್ವವಾದ ಅನಂತರ ಧ್ಯಾನದಲ್ಲಿ ಶಕ್ತರಾಗಿ, ಸ್ವತಏವ ವಿಷಯಗಳಲ್ಲಿ ಪ್ರವೃತ್ತಿರಹಿತವಾದ ಮನಸ್ಸನ್ನು ಸಂಸ್ಕಾರೋಪಾದಾನಕವಾದ ಭಗದ್ವಿಗ್ರಹದಲ್ಲಿಟ್ಟು ಪರಮಾತ್ಮನ ಗುಣಗಣಗಳನ್ನು ನಿರಂತರಧ್ಯಾನಮಾಡಿ, ಹಾಗಾಗದಿದ್ದರೆ ನಿರಂತರಶಾಸ್ತ್ರವಿಮರ್ಶೆಮಾಡುತ್ತಲೇ ಅಪರೋಕ್ಷವನ್ನು ಹೊಂದುವರೆಂದು ತಿಳಿಯಬೇಕು.*

3. ಶ್ರೀಶ್ರೀಗಳವರು — ಇಲ್ಲಿ ಒಂದೆರಡು ಸೂಕ್ಷ್ಮವಿಷಯಗಳನ್ನು ನಿರೂಪಿಸಿ ಧ್ಯಾನಕಾರಣವಾದ ಮನನಸ್ವರೂಪವನ್ನು ಹೇಳುವೆವು. ಶ್ರವಣ, ಮನನ, ಧ್ಯಾನಾದಿರೂಪವಾದ ಉಕ್ತಪ್ರಣಾಡಿಯನ್ನು, (ಮಾರ್ಗವನ್ನು) ಅತಿಕ್ರಮಿಸಿ ಪರಮಾತ್ಮನನ್ನು ಹೊಂದುವ ಕ್ಷುದ್ರ ಉಪಾಯಗಳು ಯಾವುದೂ ಇರುವುದಿಲ್ಲ. ಹೀಗಿದ್ದರೂ ರಾಮಾನುಜರು ಕೇವಲ ಪ್ರಪತ್ತಿ ಎಂದರೆ ಮೂಢ

---

* ಕೇವಲ ಮನನದಿಂದ ಎಂದರೆ ಸತತಶಾಸ್ತ್ರವಿಮರ್ಶೆಯಿಂದ ಅಪರೋಕ್ಷಜ್ಞಾನವನ್ನು ಹೊಂದುವವರಿಗೂ ಪ್ರತ್ಯಾಹಾರಾದಿ ಉಪಾಯಸಹಕೃತಧ್ಯಾನದಿಂದ ಅಪರೋಕ್ಷಜ್ಞಾನವನ್ನು ಹೊಂದುವವರಿಗೂ ಉತ್ಕ್ರಾಂತಿವಿಷಯದಲ್ಲಿಯೂ ಕೂಡ ಸ್ವಲ್ಪ ತಾರತಮ್ಯವುಂಟು. "…. …. **ಯೋಗಬಲೇನ ಚೈವ। …. …. ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್॥" ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಂ।**" ಇತ್ಯಾದಿ ರೀತಿಯಲ್ಲಿ ಅಷ್ಟಮಾಧ್ಯಾಯದಲ್ಲಿ ನಿರೂಪಿತವಾದ ಉತ್ಕ್ರಾಂತಿಪ್ರಕಾರವು ಧ್ಯಾನಯೋಗರೀತ್ಯಾ ಅಪರೋಕ್ಷಜ್ಞಾನವನ್ನು ಹೊಂದಿದವರಿಗೇ ಎಂದು ಶಾಸ್ತ್ರದಲ್ಲಿ ನಿಶ್ಚಿತವಾಗಿರುವುದು. ಇವರು ತಮ್ಮ ವಾಯುಜಯಪ್ರಭಾವದಿಂದ ತಮ್ಮ ಯೋಗ್ಯತಾಪೂರ್ಣವಾಗುವಷ್ಟು ಭಕ್ತಿಪರಿಪಾಕವು ಆಗುವುದಕ್ಕೆ ಸ್ವಲ್ಪ ಮುಂಚೆಯೇ ಉತ್ಕ್ರಾಂತಿಯನ್ನು ಹೊಂದಿ ಮಹರಾದಿಲೋಕಗಳಲ್ಲಿ ಪೂರ್ಣಸಾಧನಸಂಪನ್ನರಾಗಿ ವೈಕುಂಠಲೋಕಕ್ಕೆ ತೆರಳುವರು. ಇತರರು ಸ್ವಯೋಗ್ಯಭಕ್ತ್ಯಾದಿಸಾಧನ ಪೂರ್ತಿಯಾದ ನಂತರವೇ ಉತ್ಕ್ರಾಂತಿಯನ್ನು ಹೊಂದುವರು.

ಭಕ್ತಿಪೂರ್ವಕವಾದ ಶರಣಾಗತಿಮಾತ್ರದಿಂದಲೂ ಮುಕ್ತಿಯು ಕರಗತವಾಗುವುದೆಂದು ಹೇಳುವರು. ಅನನ್ಯವಾದ ಭಕ್ತಿಯಿಂದ ಪ್ರಪನ್ನನಾದ ದೀನನಮೇಲೆ ಕೃಪಾಸಿಂಧುವಾದ ಕಮಲಾನಾಥನು ಕಾರುಣ್ಯವನ್ನು ತೋರಿಸಿ, ಶರಣಾಗತನಾದತನ್ನ ಮೂಢಭಕ್ತನನ್ನೂ ಸಹ ಶ್ರವಣಾದಿ ರೂಪವಾದ ಭಯಂಕರವಾದ ಕಡಿದಾದ ದಾರಿಯಲ್ಲಿ ಕರೆದುಕೊಂಡು ಬಂದು ಕಷ್ಟಪಡಿಸದೆ, ತನ್ನ ಬಲವಾದ ಹಸ್ತಲಾಘವವನ್ನು ಕೊಟ್ಟು, ಥಟ್ಟನೆ ಸಂಸಾರಾಟವಿಯಿಂದ ತನ್ನ ಮುಕ್ತರಾಜಧಾನಿಗೆ ಸೆಳೆದು ಕೊಂಡುಬಿಡುವನು ಎಂದು ಹೇಳುವರು. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬ ಗೀತಾಶ್ಲೋಕವೂ ಆಪಾತತಃ ಈ ವಾಕ್ಯಾರ್ಥಕ್ಕೆ ಸಹಾಯಕವಾಗಿರುವಂತೆ ತೋರುವುದು.

ಆದರೆ ಇದು ಸರ್ವ ಪ್ರಮಾಣಗಳಿಗೂ ಅತ್ಯಂತ ವಿರುದ್ಧವಾದ ನೀಚವಾದವು. ಮತ್ತು ಸ್ವರೂಪತಃ ಸರ್ವ ಜೀವರೂ ಸಮರು ಎಂದು ಒಪ್ಪಿರುವ ರಾಮಾನುಜಮತದಲ್ಲಿ ಇದರ ಪ್ರವೇಶವು ಅತ್ಯಂತ ಅಸಂಗತವು. 1. ಜ್ಞಾನಾದಿ ಕಠಿಣಪ್ರಯತ್ನರಹಿತವಾದ ಶರಣಾಗತಿಮಾತ್ರದಿಂದ ಮುಕ್ತಿಸ್ಥಾನವು ಪ್ರಾಪ್ತವಾಗುವುದಾದರೆ, ಇನ್ನುಮೇಲೆ ಸಕಲಮುಮುಕ್ಷುಗಳೂ ಶ್ರವಣಮನನಾದಿಗಳನ್ನು ಪರಿತ್ಯಾಗಮಾಡಿ, ದಂಡಪ್ರಣಾಮಪೂರ್ವಕವಾದ ಕೈಂಕರ್ಯವನ್ನು ಮಾತ್ರ ಅವಲಂಬಿಸಿ ಮುಕ್ತಿಯನ್ನು ಹೊಂದಲು ಯತ್ನಿಸಬೇಕು. ಲಘೂಪಾಯವಾದ ಪ್ರಪತ್ತಿಮಾತ್ರದಿಂದ ಮೋಕ್ಷವಾಗುವುದಾದರೆ ಗುರುತಮವಾದ, ದೀರ್ಘವಾದ ಮತ್ತು ಕಠಿಣವಾದ ಮನನಾದಿಗಳನ್ನೂ, ತಪಶ್ಚರ್ಯೆಗಳನ್ನೂ ಅನುಷ್ಠಾನಮಾಡುವುದು ಅವಿವೇಕವೆಂದೇ ಪ್ರಾಪ್ತವಾಗುವುದು. 2. ಕಿಂಚ ವಿಭಿನ್ನಸಾಧನಗಳಿಂದ ವಿಷಮಫಲವಾದರೂ, ಪ್ರಮಾಣಪ್ರಮಿತವಾಗಿದ್ದರೆ ಕೇವಲಪ್ರಪನ್ನರು ಅಲ್ಪಮುಕ್ತಿಭಾಗಿಗಳು, ಶ್ರವಣಾದಿಗಳಿಂದ ಸಂಸ್ಕೃತರಾದ ದೀರ್ಘತಪಸ್ವಿಗಳು ಉತ್ತಮಫಲಭಾಗಿಗಳು ಎಂದು ಮನಸ್ಸಮಾಧಾನವನ್ನು ಹೊಂದಬಹುದಾಗಿತ್ತು. ರಾಮಾನುಜಮತದಲ್ಲಿ ಮುಕ್ತಿಯಲ್ಲೂ ಎಲ್ಲರೂ ಸಮಾನವಾದ ಆನಂದಭೋಗವುಳ್ಳವರೆಂದು ಸಿದ್ಧಾಂತವು. ಹೀಗಿರುವುದರಿಂದ ಪ್ರಪನ್ನನಿಗೆ ಪ್ರಾಪ್ತವಾಗುವುದಕ್ಕೆ ಸಮವಾದ ಆನಂದಾದಿ ಫಲಕ್ಕಾಗಿ ಆತನಿಗಿಂತ ಹೆಚ್ಚು ಪ್ರಯತ್ನವನ್ನು ಮಾಡುವ ಜ್ಞಾನಯೋಗಿಯು ಮೂಢನೆಂದು

ನಿಸ್ಸಂಶಯುವಾಗಿ ಸಿದ್ಧವಾಗುವುದು. 3. ಕಿಂಚ ಈರೀತಿಯಾದ ರಾದ್ಧಾಂತವು ಪರಮಾತ್ಮನಲ್ಲಿ ಪ್ರಬಲವಾದ ವೈಷಮ್ಯನೈರ್ಘೃಣ್ಯರೂಪದೋಷವನ್ನು ಆರೋಪಿಸಿ ದೈವದ್ರೋಹಕ್ಕೂ ಭಾಗಿಯಾಗುವುದು. ಬಹುದೀರ್ಘಕಾಲ ಉಗ್ರವಾದ ತಪಶ್ಚರ್ಯೆಯಲ್ಲಿ ರತರಾಗಿ ಸರ್ವಪ್ರಕಾರದಿಂದ ಪರಮಾತ್ಮನ ಮಹಿಮಾಚಿಂತನಪೂರ್ವಕವಾಗಿ ಶರಣಾಗತರಾದವರಿಗೂ ಪ್ರಯತ್ನರಹಿತರಾದ ಪ್ರಪನ್ನರಿಗೂ ಸಮಾನದರ್ಶನ ಮತ್ತು ಮುಕ್ತಿಯಲ್ಲಿ ಸಮಾನಭೋಗವನ್ನು ಪರಮಾತ್ಮನು ಕೊಡುವನೆಂದು ಹೇಳುವುದು ವಿಷ್ಣುವಿನಲ್ಲಿ ಪ್ರಬಲವಾದ ದೋಷಾರೋಪಣೆಯಾಗಿ ಪರ್ಯವಸಾನವಾಗುವುದು. 4. ಪರಂತು ಇದು ಅಸಂಭಾವಿತವೇ. ಸರ್ವಪ್ರಕಾರದಿಂದಲೂ ಪರಮಾತ್ಮನನ್ನು ನಂಬಿ, ನಿವೃತ್ತವಾದ ಅಭಿಮಾನವುಳ್ಳ, ಅಹಂಕಾರಮಮತೆಗಳಿಂದ ರಹಿತನಾದ ದಾಸನನ್ನಷ್ಟೇ ಪರಮಾತ್ಮನು ಓಡಿಬಂದು ಕರಾವಲಂಬನವನ್ನು ನೀಡಿ ಕಾಪಾಡುವನು! ಇದು ನಮಗೂ ಸಮ್ಮತವೇ. ಆದರೆ ಅಜ್ಞಾನಿಯಾದ ಮೂಢನಿಗೆ ಅಥವಾ ತನ್ನ ಯೋಗ್ಯತಾನುಸಾರ ಪೂರ್ಣವಾಗಿ ಶ್ರವಣಮನನಗಳನ್ನು ಮಾಡದ ಸಾಮಾನ್ಯ ಪುರುಷನಿಗೆ ಇಂಥಾ ಅಂತಃಕರಣಪರಿಪಾಕವು ಉಂಟಾಗುವುದೇ ಇಲ್ಲ. ಆದುದರಿಂದಲೇ ಶ್ರೀಕೃಷ್ಣನು—

(1) **ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ।**
—(7. 19.)

ಎಂದರೆ ಅನೇಕಜನ್ಮಗಳಲ್ಲಿ ಸಾಧನಾನುಷ್ಠಾನವಾದ ಅನಂತರ ಅಪರೋಕ್ಷಜ್ಞಾನವನ್ನು ಹೊಂದಿದವನು ನನ್ನಲ್ಲಿ ಪ್ರಪನ್ನನಾಗುತ್ತಾನೆ (ನನ್ನನ್ನು ಹೊಂದುತ್ತಾನೆ) ಎಂದು ಹೇಳಿದನು. ಮತ್ತೊಂದು ಸ್ಥಳದಲ್ಲಿಯೂ ಸಹ

(2) **ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ॥** —(6. 45.)

ಎಂದರೆ ಅನೇಕ ಜನ್ಮಗಳ ಸಾಧನದಿಂದ ಜ್ಞಾನಸಿದ್ಧಿಯನ್ನು ಹೊಂದಿದವನು ಅನಂತರದಲ್ಲಿ ಉತ್ತಮ ಗತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ ಎಂದು ಹೇಳಿರುತ್ತಾನೆ. ಏವಂಚ ಭಗವದ್ದರ್ಶನದಿಂದ ನಷ್ಟವಾದ ಮನೋಮಾಲಿನ್ಯವುಳ್ಳವನಿಗೇ ಕಾಪಟ್ಯರಹಿತವಾದ ಕೈಂಕರ್ಯಭಾವವು ಪ್ರಾಪ್ತವಾಗುವುದು. ಅಂಥಾ ಪ್ರಪನ್ನನನ್ನು ಭಗವಂತನು ಗಜೇಂದ್ರನನ್ನು ರಕ್ಷಿಸಿದಂತೆ ರಕ್ಷಿಸುವನೆಂದು ಹೇಳುವುದು ಯುಕ್ತ್ಯನುಕೂಲವಾಗಿಯೂ, ಶಾಸ್ತ್ರಸಮ್ಮತ

ನಾಗಿಯೂ ಇರುವುದು. "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬ ಶ್ಲೋಕಭಾಗವು ಈ ಅರ್ಥವನ್ನೇ ರಕ್ಷಣೆಮಾಡುವುದು. **ಪ್ರಿಯ ತಾತ್ಮನಾದ** ಭಕ್ತನ ಪುಷ್ಪಪತ್ರಗಳನ್ನು ನಾನು ಸ್ವೀಕರಿಸುವೆನೆಂದು ಶ್ರೀ ಕೃಷ್ಣನು ಪ್ರತಿಜ್ಞೆಮಾಡಿರುವನು. ಸರ್ವಧರ್ಮಗಳನ್ನು ಪರಿತ್ಯಾಗಮಾಡಿದ ಭ್ರಷ್ಟನನ್ನು ಶರಣುಹೊಂದಿದ ಕ್ಷಣವೇ ಆಲಿಂಗಿಸಿಕೊಂಡು ವೈಕುಂಠಮಂದಿರದಲ್ಲಿಟ್ಟು ನಿರಂತರಾನಂದವನ್ನು ಹೊಂದಿಸುವೆನೆಂದು ಎಲ್ಲೂ ಹೇಳಿರುವುದಿಲ್ಲ. ಧರ್ಮಪಾಲಕನೆಂದು ಪರಮಾತ್ಮನು ಪ್ರಸಿದ್ಧನಾಗಿರುವನು; ಭ್ರಷ್ಟಪಾಲಕನೆಂದು ಅವನನ್ನು ಕರೆಯುವುದಕ್ಕೆ ಯಾರಿಗೆತಾನೆ ಬಾಯಿಬರುವುದು? ಆದುದರಿಂದ ಈ ಶ್ಲೋಕಾರ್ಥವನ್ನು ಪ್ರಾಮಾಣಿಕವಾದ ರೀತಿಯಲ್ಲಿ ಯೋಜನೆ ಮಾಡಿದರೆ ಈ ಅರ್ಥವು ಬರುವುದು. (i) ಸರ್ವ **ಅವೈಷ್ಣವ**ಧರ್ಮಗಳನ್ನೂ ಪರಿತ್ಯಾಗಮಾಡಿ ನನ್ನಲ್ಲಿ ನಿಷ್ಕಾಮನಾಗಿ ಶರಣುಹೊಂದು ಎಂದರೆ ಕೇವಲ ನನ್ನ ಪ್ರೀತ್ಯರ್ಥವಾಗಿಯೇ ಸಕಲಕರ್ಮಗಳನ್ನೂ ಮಾಡು. **'ಸರ್ವಾರಂಭಪರಿತ್ಯಾಗೀ', 'ಯತ್ಕರೋಷಿ ಯದಶ್ನಾಸಿ........ತತ್ಕುರುಷ್ವ ಮದರ್ಪಣಂ'** ಇತ್ಯಾದಿ ಶ್ಲೋಕಗಳು ಈ ಅರ್ಥಮಾಡುವುದರಲ್ಲಿ ಸಹಾಯಕವಾಗಿರುತ್ತವೆ. (ii) ಅಥವಾ ಕಾಮ್ಯವಾದ ಸ್ವರ್ಗಪ್ರಾಪಕವಾದ ಸರ್ವಕ್ಷುದ್ರಧರ್ಮಗಳನ್ನು ಪರಿತ್ಯಾಗಮಾಡಿ ನಿಷ್ಕಾಮಹೃದಯದಿಂದ ನನ್ನನ್ನು ಶರಣುಹೊಂದು. ಈ ಅರ್ಥಮಾಡುವುದರಲ್ಲಿ "**ಶುಭಾಶುಭಪರಿತ್ಯಾಗೀ**" ಇತ್ಯಾದಿ ಶ್ಲೋಕಗಳು ಸಹಾಯಕವಾಗಿರುತ್ತವೆ. (iii) ಅಥವಾ ಸರ್ವಧರ್ಮಗಳನ್ನೂ ನನ್ನ ಪಾದಮೂಲದಲ್ಲಿ ಸಮರ್ಪಿಸಿ, ಅವುಗಳ ಫಲವನ್ನು ಮನಸ್ಸಿನಿಂದ ಪರಿತ್ಯಾಗಮಾಡಿ ನನ್ನನ್ನು ಶರಣುಹೊಂದು. "**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂದರೆ ನಿನ್ನ ಸರ್ವಪುಣ್ಯಗಳನ್ನೂ, ಸೇವೆಗಳನ್ನೂ ಸ್ವೀಕರಿಸಿದ ನಾನು ನಿನ್ನನ್ನು ಪಾಪಗಳಿಂದ ಬಿಡಿಸಿಬಿಡುತ್ತೇನೆ. **'ಸರ್ವಕರ್ಮಾಣಿ ಮನಸಾ ಸಂನ್ಯಸ್ಯ'** ಇತ್ಯಾದಿ ಶ್ಲೋಕಗಳು ಈ ಅರ್ಥವನ್ನು ಮಾಡುವುದರಲ್ಲಿ ಸಹಾಯಕರವಾಗಿರುತ್ತವೆ. ಈ ರೀತಿಯಾದ ಶರಣಾಗತಿಯು ಶ್ರವಣಾದಿಸಂಸ್ಕೃತಿರಹಿತವಾದ ಮನಸ್ಸುಳ್ಳ ಅಜ್ಞಾನಿಯಿಂದ ಸಾಧ್ಯವಲ್ಲ. 6. ಮತ್ತು ಧ್ಯಾನಜ್ಞಾನಾದಿಗಳಿಲ್ಲದೆ ಕೇವಲ ಪ್ರಪತ್ತಿಯಿಂದ ಮೋಕ್ಷವನ್ನು ಇದುವರೆವಿಗೆ ಯಾರೂ ಹೊಂದಿಲ್ಲ. ಗಜೇಂದ್ರಾದಿಗಳು

**"ಪ್ರಾಗ್ಜನ್ಮನ್ಯನುಶಿಕ್ಷಿತಃ"** ಇತ್ಯಾದಿ ವಚನಾನುಸಾರವಾಗಿಯೂ **"ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಂ"** ಇತ್ಯಾದಿ ಗೀತಾ ವಚನಾನುಸಾರವಾಗಿಯೂ, ಜನ್ಮಾಂತರದಲ್ಲಿ ಅಭ್ಯಸ್ತವಾದ ಜ್ಞಾನದ ಸ್ಮೃತಿಯನ್ನು ಪಡೆದವರಾಗಿ ಪರಮಾತ್ಮನನ್ನು ಸ್ತುತಿಸಿ ಜ್ಞಾನದ್ವಾರಾ ಮುಕ್ತಿಯನ್ನು ಹೊಂದಿದವರೇ ಹೊರತು ಮೂಢಭಕ್ತಿಯಿಂದ ಕೈಮುಗಿದು ಕೈವಲ್ಯವನ್ನು ಒಟ್ಟಿಗೆ ಸಂಪಾದಿಸಲಿಲ್ಲ. 7. ಇದೂ ಅಲ್ಲದೆ ಈ ಮತವು **"ನಾನ್ಯಃ ಪಂಥಾ ಅಯನಾಯ ವಿದ್ಯತೇ"** **"ಜ್ಞಾನೇನಾಮೃತೀ ಭವತಿ"** ಇತ್ಯಾದಿ ಶ್ರುತಿವಿರೋಧದಿಂದಲೂ ಅನೇಕ ಗೀತಾವಚನವಿರೋಧದಿಂದಲೂ ನಷ್ಟವೀರ್ಯವಾಗಿ ಮೃತಪ್ರಾಯವಾಗಿರುವುದು. ಶ್ರೀಕೃಷ್ಣನು ಹೇಳುತ್ತಾನೆ:—

(3) **ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥**

—(4.39.)

ಶ್ರದ್ಧಾವಂತನು ಅಪರೋಕ್ಷಜ್ಞಾನವನ್ನು ಹೊಂದಿ ಶೀಘ್ರದಲ್ಲಿ ಮೋಕ್ಷವನ್ನು ಹೊಂದುತ್ತಾನೆ.

(4) **ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥**

—(4. 36.)

ನೀನು ಸರ್ವಪಾಪಗಳನ್ನೂ ಜ್ಞಾನರೂಪವಾದ ನಾವೆಯಿಂದಲೇ ದಾಟುತ್ತೀಯೆ. (ಮೌಢ್ಯಮೂಲಕವಾದ ಪ್ರಪತ್ತಿಯಿಂದ ದಾಟಲಾಗುವುದಿಲ್ಲ ಎಂದು ವಿವಕ್ಷಿತಾರ್ಥವು.)

(5) **ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ॥**

—(4.38.)

ಜ್ಞಾನಕ್ಕೆ ಸದೃಶವಾದ ಪಾಪನಾಶಕಸಾಮಗ್ರಿಯು ಇರುವುದಿಲ್ಲ. (ಮೂಢಪ್ರಪತ್ತಿಯು ಜ್ಞಾನಕ್ಕೆ ಸದೃಶವಲ್ಲವೆಂದು ಭಾವವು.)

8. ಪರಂತು ಉಗ್ರವಾದ ಮನನಾದಿಗಳನ್ನು ಮಾಡದಿದ್ದರೆ ಜೀವನ ಅಜ್ಞಾನವಿಪರ್ಯಯಗಳು ನಾಶವಾಗುವುದಕ್ಕೆ ಉಪಾಯವೇ ಇರುವುದಿಲ್ಲ. "ಸಂಶಯಾತ್ಮಾ ವಿನಶ್ಯತಿ" ಎಂಬ ಶ್ರೀಕೃಷ್ಣನ ವಚನದ ರೀತ್ಯಾ ಮೂಢನು ಸಂಶಯಗ್ರಸ್ತನಾಗಿ ಕ್ಷಿಪ್ರದಲ್ಲಿ ದುಃಖವನ್ನು ಹೊಂದುವನು. ಅಥವಾ ಪರಮಾತ್ಮನಲ್ಲಿ ಶರಣಾಗತನಾದರೆ ಪರಮಾತ್ಮನು ಉತ್ತಮಗುರುಗಳನ್ನು ಸಂಯೋಗಮಾಡಿ ಜ್ಞಾನಪ್ರಾಪ್ತಿಯಲ್ಲಿ ಅನುಕೂಲನಾಗುವನು. ಅಷ್ಟೇ ಹೊರತು

ನಿಮಿಷಮಾತ್ರದಲ್ಲಿ ಜ್ಞಾನಪ್ರಾಪ್ತಿಯನ್ನಾಗಲೀ, ಕೇವಲ ಮನಸಸಾಧ್ಯವಾದ ಶರಣಾಗತಿಗೂ ಪ್ರಯೋಜಕವಾದ ವಿಷ್ಣುಸರ್ವೋತ್ತಮತ್ವನಿಶ್ಚಯವನ್ನಾಗಲೀ ಜ್ಞಾನಸಾಧನರಹಿತನಾದ ಮೂಢನು ಹೊಂದುವನೆಂದು ಹೇಳುವುದು ಶ್ರುತಿ ತಾತ್ಪರ್ಯಾಪರಿಜ್ಞಾನದಿಂದ ಜನಿತವಾದ ಬಹು ಮೌಢ್ಯವಿಜೃಂಭಿತವಾದ ವಾದ ವಾಗುವುದು. ಮತ್ತು ಕೃತಪ್ರಣಾಶ ಅಕೃತಾಭ್ಯಾಗಮಾದಿ ಬಹುದೋಷಗಳಿಗೂ ಆಕರವಾಗುವುದು. 9. ಮತ್ತು ಸಾಧನವೈಚಿತ್ರ್ಯವನ್ನು ನಿರೂಪಿಸುವ ಅವಸರ ದಲ್ಲಿ ಧ್ಯಾನಪ್ರಚುರವಾದ ಸಾಧನಸಂಪನ್ನರು ಕೆಲವರು; ಕೆಲವರು ಸ್ವಪ್ರತಿಭೆ ಯಿಂದಲೇ ಪ್ರಾಪ್ತಜ್ಞಾನರಾದ ಮಹಾಯೋಗಿಗಳು; ಕರ್ಮಯೋಗಿಗಳು ಕೆಲ ವರು; ಹೀಗೆ ನಾನಾವೈಚಿತ್ರ್ಯಗಳನ್ನು ಶ್ರೀಕೃಷ್ಣನು ಹೇಳಿದ್ದರೂ ಕೇವಲ ಪ್ರಪ ತ್ತಿಮಾತ್ರದಿಂದ ಪರಮಪದಪ್ರಾಪ್ತಿಯು ಬರುವುದೆಂದು ನರನಾಥನಾದ ಶ್ರೀ ಪತಿಯು ಹೇಳಲಿಲ್ಲ. ಆದುದರಿಂದ ಸರ್ವ ಮುಮುಕ್ಷುಗಳೂ ತಮ್ಮ ಯಥಾ ಯೋಗ್ಯತಾನುಸಾರವಾಗಿ ಶ್ರವಣಮನನಾದಿರೂಪವಾದ ಸಾಧನಾನುಷ್ಠಾನ ಗಳನ್ನು ವಿಧ್ಯುಕ್ತಪದ್ಧತಿಯಲ್ಲಿ ಆಚರಿಸಿ ಮೋಕ್ಷಪದವಿಯನ್ನು ಹೊಂದಬೇಕೇ ಹೊರತು, ಆಲಸ್ಯಕ್ಕೆ ವಶರಾಗಿ ಅಪ್ರಾಮಾಣಿಕವಾದ "ದೃಪ್ತಪ್ರಪತ್ತಿ" ಅಥವಾ "ಆರ್ತಪ್ರಪತ್ತಿ"ಯೇ ಮುಂತಾದ ಕ್ಷುದ್ರೋಪಾಯಗಳಲ್ಲಿ ಭರವಸೆಯನ್ನಿಡ ಬಾರದು.

4. ಇದೇ ಸಂದರ್ಭದಲ್ಲಿ ದ್ವೇಷಯುತವಾದ ಭಗವದ್ಧ್ಯಾನದಿಂದ ಸಹ ಮುಕ್ತರಾಗಬಹುದೆಂಬ ರಾಮಾನುಜವಾದದ ದುರಂತದೋಷಗಳನ್ನು ಅವಶ್ಯ ವಾಗಿ ತೋರಿಸಬೇಕಾಗಿರುವುದು. ಬಹ್ವಾಯಾಸಪೂರ್ವಕವಾದ ತೀರ್ಥ ಯಾತ್ರೆಯನ್ನು ಕೈಗೊಂಡು ಪಾದದಿಂದಲೇ ಭೂಮಿಯನ್ನು ನಡೆದು, ತೀರ್ಥ ವನ್ನು ಸೇರಿದನಂತರ, ಪಿಶಾಚಬುದ್ಧಿಯಿಂದ ಗ್ರಸ್ತನಾಗಿ ತೀರ್ಥನಿಂದೆಯನ್ನು ಮಾಡಿ ಸಕಲಪುಣ್ಯಗಳನ್ನು ನಾಶಮಾಡಿಕೊಂಡು ಪಾಪಫಲಕ್ಕೆ ಭಾಗಿಯಾಗುವ ಮಂದನಂತೆ, ರಾಮಾನುಜರು ಸಕಲ ಶಾಸ್ತ್ರಗಳನ್ನೂ ಹೆಜ್ಜೆಹೆಜ್ಜೆಗೂ ಪರವಾದಿ ಗಳ ಸಂಗಡ ವಾಕ್ಯಾರ್ಥಮಾಡಿ ಜಯಿಸಿ, ಅಂತ್ಯದಲ್ಲಿ ಆತ್ಮಘಾತಕವಾದ ಕೆಲವು ದೋಷಗಳನ್ನು ಒಪ್ಪಿ, ತಮ್ಮ ಯಾವತ್ತು ಸಿದ್ಧಾಂತವನ್ನು ಖಂಡನಕಾರರ ಬಾಯಿಗೆ ತುತ್ತುಮಾಡಿಟ್ಟಿರುವರು. ಜ್ಞಾನದಿಂದಲೇ ಮುಕ್ತಿಯಾಗುವುದೆಂದು ಒಪ್ಪಿ ಪ್ರಪತ್ತಿವಾದವನ್ನು ಉಪಪಾದನೆ ಮಾಡಿದರು. ಈಶ್ವರನು ಗುಣಗಣಾರ್ಣ ವನೆಂದು ಹೇಳಿ ನಿಶ್ಶಂಕವಾಗಿ ಅವನು ಭಿನ್ನವಾದ ಧರ್ಮಭೂತಜ್ಞಾನದಿಂದಲೇ

ವಿಷಯಗಳನ್ನು ತಿಳಿಯುವನೆಂದು ಹೇಳಿದರು. ಪರಮಾತ್ಮನು ಸರ್ವೋತ್ತಮ ನೆಂದು ಹೇಳಿ ಸರ್ವ ಜೀವರೂ ಸ್ವರೂಪತಃ ಪರಸ್ಪರ ಸಮರೆಂದೂ, ಈಶ್ವರನಿಗೆ ಸಮಾನವಾದ ಆನಂದವನ್ನು ಮುಕ್ತಿಯಲ್ಲಿ ಅನುಭವಿಸುವರೆಂದೂ ಪ್ರತಿಪಾದಿಸಿದರು. ಶಾಶ್ವತಕೈಂಕರ್ಯಭಾವವು ಶಾಸ್ತ್ರಪ್ರಮಿತಧರ್ಮವೆಂದು ಪ್ರತಿಪಾದಿಸಿ ದಾಸ್ಯಭಾವವು ಔಪಾಧಿಕವೆಂದು ಒಪ್ಪಿದರು. ಸರ್ವರೂ ಸಮರೆಂದು ಹೇಳಿ ಕೆಲವರು ನಿತ್ಯಸಂಸಾರಿಗಳೆಂದು ಪ್ರತಿಪಾದಿಸಿದರು. ಪ್ರಕೃತದಲ್ಲಿಯೂ ಸಹ ನಿಯತ ಸಾಧನಗಳಿಂದಲೇ ಮುಕ್ತಿಯಾಗುವುದೆಂದು ಒಪ್ಪಿ ನಿರಂತರ ದ್ವೇಷದಿಂದಲೂ ಮುಕ್ತಿಯಾಗುವುದೆಂದು ಪ್ರತಿಪಾದಿಸಿದರು. ಈ ವಾದದ ದೋಷಗಳು ಸ್ಪಷ್ಟವಾಗಿರುವುವು. ಕೆಲವುಗಳನ್ನು ಮಾತ್ರ ಸೂಚಿಸುವೆವು. 1. ನಿರಂತರ ದ್ವೇಷದಿಂದ ಮುಕ್ತಿಯಾಗುವುದಾದರೆ ಸರ್ವದಾ ವೇದವಿರುದ್ಧ ಕರ್ಮಗಳಲ್ಲಿ ಸರ್ವರೂ ತತ್ಪರರಾಗಿ **"ಶ್ರುತಿಸ್ಮೃತೀ ಹರೇರಾಜ್ಞೇ"** ಎಂಬಲ್ಲಿ ಹೇಳಲ್ಪಟ್ಟಿರುವ ವೇದಾದಿಶಾಸ್ತ್ರಗಳನ್ನು ನಿರಂತರವೂ ಉಲ್ಲಂಘಿಸುವುದರಲ್ಲಿ ಯತ್ನವನ್ನು ಮಾಡಬಹುದೆಂದು ಒಪ್ಪಬೇಕಾಗುವುದು. ಇದರಿಂದ ಸರ್ವಲೋಕನಾಶವೂ, ಸರ್ವಸಾಂಕರ್ಯವೂ ಕ್ಷಿಪ್ರದಲ್ಲಿ ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲ. 2. ಕಿಂಚ ನಿರಂತರದ್ವೇಷದಿಂದ ಪರಮಾತ್ಮನು ಎದುರಿಗೆ ಬಂದು ಕೊಂದುಬಿಡುವನೋ ಏನೋ ಎಂಬ ಭಯವು ಅಂಕುರಿಸಿ ಪ್ರತಿನಿಮಿಷವೂ ಪರಮಾತ್ಮನ ಸ್ಮೃತಿಯು ಬರುವುದರಿಂದ ಮುಕ್ತಿಯಾಗುವುದರಲ್ಲಿ ಸಂಶಯವಿಲ್ಲವೆಂದು ರಾಮಾನುಜರು ಹೇಳುವರು. ಹಾಗಿದ್ದರೆ ತ್ರೈರಾಶಿಲೆಖ್ಖಕ್ಕೆ ಅನುಗುಣವಾಗಿ ಸ್ವಲ್ಪ ಪರಮಾತ್ಮದ್ವೇಷದಿಂದ ಯಮದೇವರು ಎಲ್ಲಿ ನರಕಕ್ಕೆ ಹಾಕುವರೋ ನನ್ನ ಗತಿ ಏನಾಗುವುದೋ ಎಂಬ ಭಯವೂ ದೇವತಾಸ್ಮೃತಿಯೂ ಸ್ವಲ್ಪಬರುವುದರಿಂದ ಸ್ವಲ್ಪಪಾಪಿಗೆ ಸ್ವರ್ಗಾದಿಲೋಕಗಳಾದರೂ ಆಗಬೇಕಾಗುವುದು. ಪೂರ್ಣಭಕ್ತಿಯನ್ನು ಮಾಡಿದವನಿಗೆ ಪೂರ್ಣಮುಕ್ತಿಯೂ, ಸ್ವಲ್ಪಭಕ್ತಿಯನ್ನು ಮಾಡಿದವನಿಗೆ ಸ್ವರ್ಗಾದಿಲೋಕಗಳಪ್ರಾಪ್ತಿಯೂ ನಿಯತವಾಗಿರುವಂತೆ, ಸ್ವಲ್ಪದ್ವೇಷದಿಂದ ಮತ್ತು ವಿದ್ವ್ಯತಿಕ್ರಮಣದಿಂದ ಸ್ವರ್ಗಾದಿಲೋಕವು ಪ್ರಾಪ್ತಿಯಾಗುವುದೆಂದು ರಾಮಾನುಜರು ಒಪ್ಪಬೇಕಾಗುವುದು. 3. ಈ ರೀತಿ ಅಂಗೀಕಾರ ಮಾಡುವದಾದರೆ, ಈ ವಾದದ ರೀತ್ಯಾ ಯಮದೇವರ ಸೃಷ್ಟಿಯು, ನರಕಾದಿಗಳ ಉತ್ಪತ್ತಿಯು, ವೇದಶಾಸ್ತ್ರಗಳ ಪ್ರವೃತ್ತಿಯು ಇವೆಲ್ಲವೂ ಅನಿರ್ವಚನೀಯವೇ ಆಗುವುದು. ಶ್ರೀಕೃಷ್ಣನಾದರೋ,

(1) **ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ।**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥**

—(16. 23.)

ಎಂದರೆ ಶಾಸ್ತ್ರವಿಧಿಯನ್ನು ಅತಿಕ್ರಮಿಸಿ ಸ್ವೇಚ್ಛಾನುಸಾರವಾಗಿ ಆಚರಿಸುವವನು ಜ್ಞಾನರೂಪವಾದ ಸಿದ್ಧಿಯನ್ನು ಹೊಂದುವುದಿಲ್ಲ; ಸ್ವರ್ಗಾದಿ ಸುಖವನ್ನು ಹೊಂದುವುದಿಲ್ಲ; ಎಂದು ಹೇಳಿರುತ್ತಾನೆ. 4. ಪರಂತು ಮುಕ್ತಿಪ್ರಾಪ್ತಿಪ್ರಕಾರದ ಪರಾಮರ್ಶೆಯಿಂದಲೇ ದ್ವೇಷಯುತವಾದ ಧ್ಯಾನವು ಮೋಕ್ಷಸಾಧನವಾಗಲಾರದೆಂದು ನಿರ್ಣೀತವಾಗುವುದು. ಮುಕ್ತಿಯು ಭಗವಂತನ ಅತ್ಯರ್ಥಪ್ರಸಾದದಿಂದ ಪ್ರಾಪ್ತವಾಗುವ ಉತ್ತಮೋತ್ತಮವಾದ ಸ್ಥಿತಿಯೆಂದು ನಾವು ನಿರೂಪಿಸಿರುತ್ತೇವೆ. ಇದು ರಾಮಾನುಜಮತದಲ್ಲಿಯೂ ಅಂಗೀಕೃತವೇ ಆಗಿರುವುದು. ಸರ್ವೋತ್ತಮಚೇತನನು ಅವರವರ ಕರ್ಮಾನುಗುಣವಾಗಿ ತನ್ನಲ್ಲಿ ಪ್ರೀತಿಮಾಡುವವರಿಗೆ ಸುಖವನ್ನೂ, ದ್ವೇಷಮಾಡುವವರಿಗೆ ದುಃಖವನ್ನೂ ಕೊಡುವುದು ನಿಷ್ಪಕ್ಷಪಾತವಾದ ವ್ಯಾಪಾರವಾಗಿರುವುದು. ಶ್ರೀಕೃಷ್ಣನು ಇಂಥಾದ್ದೇ ತನ್ನ ಸ್ವಭಾವವೆಂದು ವರ್ಣಿಸಿರುತ್ತಾನೆ:—

(2) **ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ॥**

—(4. 11.)

ಯಾರುಯಾರು ನನ್ನನ್ನು ಯಾವಯಾವ ಭಾವಗಳಿಂದ ಭಜಿಸುತ್ತಾರೆಯೋ ಅವರಿಗೆ ನಾನು ಅವರ ಭಜನಾನುಗುಣವಾಗಿ ಫಲವನ್ನು ಕೊಡುತ್ತೇನೆ ಎಂದು ಭಾವವು. ದ್ವೇಷಿಗಳಿಗೆ ಅವರ ದ್ವೇಷಾನುಗುಣವಾದ ದುಃಖವನ್ನೂ ಪ್ರೀತಿಮಾಡುವವರಿಗೆ ಅವರ ಪ್ರೀತಿಫಲವಾದ ಸುಖವನ್ನೂ ಕೊಡುವುದು ಸಮವಾಗ ನಡೆವಳಿಕೆಯೆಂದು ಲೋಕಪ್ರಸಿದ್ಧವಾಗಿರುವುದು. ವಿಷಮವಾದ ಮತ್ತು ತಾರತಮ್ಯೋಪೇತವಾದ ಭಜನಾನುಸಾರವಾಗಿ ಪರಮಾತ್ಮನು ವಿಷಮವಾದ ಮತ್ತು ತಾರತಮ್ಯೋಪೇತವಾದ ಫಲವನ್ನು ವಿತರಿಸುವನೆಂದು ಹೇಳುವುದು ಸಕಲಶಾಸ್ತ್ರಗಳಿಂದಲೂ ಮಾನ್ಯವಾದ ನಿಶ್ಚಯವಾಗಿರುತ್ತದೆ. 5. ಯಾವ ರೀತಿಯಿಂದಲಾದರೂ ಸರಿಯೇ (ಪ್ರೀತಿಯಿಂದಾಗಲೀ, ದ್ವೇಷದಿಂದಾಗಲೀ) ನಿರಂತರ ಸ್ಮೃತಿಮಾತ್ರದಿಂದ ಪರಮಾತ್ಮನು ಪ್ರಸನ್ನನಾಗುವನು ಮತ್ತು ಸಮಾನವಾದ ಮೋಕ್ಷಫಲವನ್ನು ಕೊಡುವನು ಎಂದು ಹೇಳುವುದು ಲೋಕ

ವಿರುದ್ಧನ್ಯಾಯವಾಗಿರುವುದು ಮತ್ತು ಶ್ರೀಕೃಷ್ಣನ ವಾಕ್ಯಗಳಿಗೂ ವಿರುದ್ಧವಾಗಿರುವುದು. ಪುಷ್ಪದಿಂದ ಪ್ರಹಾರಮಾಡಿದರೂ ಕತ್ತಿಯಿಂದ ಪ್ರಹಾರಮಾಡಿದರೂ ಸಮವೆಂದು ಯಾರಾದರೂ ತಿಳಿಯುವರೇ? ದ್ವೇಷದಿಂದ ರಾಜಸಂಹಾರವನ್ನು ಮಾಡಲೆಣಿಸಿ ಹಗಲೂ ಇರುಳೂ ರಾಜಸಂಹಾರಪ್ರಕಾರವನ್ನು ಚಿಂತಿಸುವ ರಾಜದ್ರೋಹಿಯು ಪ್ರೀತಿಪಾತ್ರನಾದ ಅಮಾತ್ಯನಿಗೆ ಸಮನಾದ ಫಲವನ್ನು ಹೊಂದುವನೆಂದು ಹೇಳುವುದಕ್ಕಿಂತ ಹೆಚ್ಚು ಹಾಸ್ಯಾಸ್ಪದವಾದ ಪ್ರಕ್ರಿಯೆಯು ಎಲ್ಲಿರುವುದು? ದ್ವೇಷಿಯಾದ ದುರ್ಯೋಧನನ ಸನ್ಮಾನವನ್ನೇ ಶ್ರೀಕೃಷ್ಣನು ಸರ್ವಥಾ ಸ್ವೀಕರಿಸಲಿಲ್ಲ.*

ಭಗವದ್ಗೀತೆಯಲ್ಲಿಯೂ ಸಹ ದ್ವೇಷಯುಕ್ತರಾಗಿ ತನ್ನನ್ನು ನಿಂದಿಸುವವರಿಗಾಗುವ ಪರಿಣಾಮವನ್ನು ಶ್ರೀಕೃಷ್ಣನು ಹೇಳಿರುತ್ತಾನೆ:—

**(3) ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ।**
**ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ॥**

---

* ಶ್ರೀಕೃಷ್ಣನು ರಾಯಭಾರಿಯಾಗಿ ಹಸ್ತಿನಾವತಿಗೆ ಬಿಜಯಮಾಡಿದ್ದಾಗ ದುರ್ಯೋಧನನು ತನ್ನ ಮನೆಗೆ ಬಂದು ತನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಬಹುಪ್ರಕಾರವಾಗಿ ಶ್ರೀಕೃಷ್ಣನನ್ನು ಪ್ರಾರ್ಥಿಸಿದನು. ಶ್ರೀಕೃಷ್ಣನು ಕ್ರೋಧಪೂರ್ವಕವಾಗಿ ಅಸಂದಿಗ್ಧಮಾತುಗಳಿಂದಲೇ ಪ್ರತ್ಯುತ್ತರವನ್ನು ಹೇಳಿ ಅವನ ಆತಿಥ್ಯವನ್ನು ತಿರಸ್ಕರಿಸಿದನು:—

**ದ್ವಿಷದನ್ನಂ ನ ಭೋಕ್ತವ್ಯಂ ದ್ವಿಷಂತಂ ನೈವ ಭೋಜಯೇತ್ ।**
**ಪಾಂಡವಾನ್ ದ್ವಿಷಸೇ ರಾಜನ್ ಮಮ ಪ್ರಾಣಾ ಹಿ ಪಾಂಡವಾಃ ॥**

ಎಲೈ ದುರ್ಯೋಧನನೇ! ದ್ವೇಷಿಗಳ ಅನ್ನವನ್ನು ಭೋಜನ ಮಾಡಬಾರದು. ದ್ವೇಷಿಗಳನ್ನು ಆದರ ಪೂರ್ವಕವಾಗಿ ಕರೆದು ಅವರಿಗೆ ಭೋಜನವನ್ನೂ ಮಾಡಿಸಬಾರದು. ಹೇ ರಾಜನ್! ನೀನು ಪಾಂಡವರ ದ್ವೇಷವನ್ನು ಮಾಡುತ್ತೀ. ಪಾಂಡವರು ನನ್ನ ಪಂಚಪ್ರಾಣಗಳಿಗೆ ಸಮಾನರು.

ಹೀಗೆ ದ್ವೇಷಿಗಳಿಗೆ ಭೋಜನ ಮಾಡಿಸಬಾರದೆಂದು ಹೇಳುವ ಮಧುಸೂದನನು ನಿರಂತರದ್ವೇಷಿಗಳನ್ನು ತನ್ನ ವೈಕುಂಠಲೋಕಕ್ಕೆ ಕರೆದುಕೊಂಡು ಹೋಗಿ ದಿವ್ಯಭೋಗ್ಯದ್ರವ್ಯಗಳನ್ನು ದಾನಮಾಡುವುದು ಸಂಭಾವಿತವೇ? ದ್ವೇಷಿಗಳ ಅನ್ನವನ್ನೇ ತಿರಸ್ಕರಿಸಿದ ನಾರಾಯಣನು ದ್ವೇಷಿಗಳ ಧ್ಯಾನವನ್ನು ಪೂಜಾರೂಪೇಣ ಅಂಗೀಕರಿಸಿ ಸತ್ಫಲಗಳನ್ನು ಕೊಡುವುದು ಸಂಭಾವಿತವೇ?

**ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು।**
**ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ॥**
**ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ॥**

—(16. 18-23.) *

6. ಕಿಂಚ ಈ ರೀತಿಯಾಗಿ ನಿರಂತರ ದ್ವೇಷಮಾಡಿ ಮುಕ್ತಿಯನ್ನು ಹೊಂದಿದವರು ಒಬ್ಬರೂ ಇಲ್ಲ. ಶಿಶುಪಾಲಾದಿಗಳು ಪೂರ್ವದಲ್ಲಿ ಮಹಾಭಕ್ತ ರಾಗಿದ್ದರು. ಶಾಪಪ್ರಭಾವದಿಂದ ದುರ್ಬುದ್ಧಿಗೆ ವಶರಾಗಿ ಪರಮಾತ್ಮನ ದ್ವೇಷವನ್ನು ಸ್ವಲ್ಪಕಾಲ ಮಾಡಿದರು. ಕರುಣಾಸಾಂದ್ರನಾದ ಶ್ರೀಹರಿಯು ಅವರ ಪೂರ್ವಕೃತವಾದ ಮಹಾಸೇವೆಯನ್ನು ಮನಸ್ಸಿನಲ್ಲಿಟ್ಟು, ಅವರ ದ್ವೇಷ ಕಾರ್ಯಗಳನ್ನು ಮನ್ನಿಸಿ ಕ್ಷಮಿಸಿದನು. ನಿರಂತರ ದ್ವೇಷಿಗಳಾದ ದುರ್ಯೋಧನ, ಜರಾಸಂಧಾದಿಗಳನ್ನು ಅಂಧಂತಮಸ್ಸಿಗೆ ಹಾಕಿ ನಿತ್ಯದುಃಖವನ್ನು ಕೊಡು ವನೆಂದು ಶಾಸ್ತ್ರಗಳು ಹೇಳುತ್ತಿವೆ. ಆದುದರಿಂದ ಯಾವಪ್ರಕಾರದಿಂದಲಾದರೂ ಪರಮಾತ್ಮನ ಧ್ಯಾನವು ಫಲಪ್ರದವಾದುದೆಂದು ಭ್ರಮಿಸದೆ, ನೀವೆಲ್ಲರೂ ಕೇವಲ ಭಕ್ತಿಪೂರ್ವಕವಾದ ನಿಯತಧ್ಯಾನವೇ ಮೋಕ್ಷೋಪಯೋಗಿಯೆಂದು ತಿಳಿಯಬೇಕು. ಪ್ರಪತ್ತಿವಾದವು ಮತ್ತು ದ್ವೇಷಯುತಧ್ಯಾನವು ಮೋಕ್ಷ ಸಾಧನವೆಂಬ ವಾದವು ಇವೆರಡು ವಾದಗಳೂ ಶ್ರೀಕೃಷ್ಣನ ಒಂದೇ ವಾಕ್ಯ ರೂಪವಾದ ಕುಠಾರದಿಂದ ಸಮೂಲವಾಗಿ ಛಿನ್ನವಾಗಿರುವುವು:—

(4) **ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ ॥**

—(18. 55.)

ಅಧಿಕಾರಿಯು **ತನ್ನ ಭಕ್ತಿಯಿಂದ** ನನ್ನ ದೇಶತಃ, ಕಾಲತಃ, ಗುಣತಃ ವ್ಯಾಪ್ತಿಯನ್ನು ತಿಳಿಯುತ್ತಾನೆ; ನನ್ನ ಯಥಾರ್ಥಸ್ವರೂಪವನ್ನು ತಿಳಿಯು ತ್ತಾನೆ; ಆರೀತಿ **ಯಥಾರ್ಥವಾಗಿ ನನ್ನನ್ನು ತಿಳಿದನಂತರ** ಮುಕ್ತನಾಗು ತ್ತಾನೆ.

---

* ಈ ಶ್ಲೋಕಗಳು ಪೂರ್ವ (ಪುಟ 119 ಪೂರ್ವಭಾಗ)ದಲ್ಲಿಯೇ ವ್ಯಾಖ್ಯಾತವಾಗಿ ರುವುವು.

ನನ್ನನ್ನು ತಿಳಿದನಂತರವೇ ಮುಕ್ತನಾಗುತ್ತಾನೆ ಎಂದು ಶ್ರೀಕೃಷ್ಣನು ಹೇಳಿರುವುದರಿಂದ ಕೇವಲ ಪ್ರೀತಿಯು ಸಾಕ್ಷಾತ್ ಮೋಕ್ಷಕಾರಣವಲ್ಲವೆಂದು ಸಿದ್ಧವಾಯಿತು. ಭಕ್ತಿಯಿಂದ ನನ್ನನ್ನು ತಿಳಿದನಂತರ ಮೋಕ್ಷವನ್ನು ಹೊಂದುತ್ತಾನೆಂದು ಹೇಳಿರುವುದರಿಂದ ದ್ವೇಷಯುಕ್ತವಾದ ಧ್ಯಾನಮಾತ್ರವು ಮೋಕ್ಷೋಪಯೋಗಿಯಲ್ಲವೆಂದು ಸಿದ್ಧವಾಯಿತು.

5. "**ಸೋऽಹಮಸ್ಮಿ**" ಎಂಬ ಅದ್ವೈತಿಗಳ ಆತ್ಮಧ್ಯಾನವು ಮೋಕ್ಷಪ್ರಾಪಕವಲ್ಲವೆಂದು ಬಹುಸ್ಥಳಗಳಲ್ಲಿ ನಾವು ನಿರೂಪಿಸಿರುತ್ತೇವೆ. ಪ್ರಕೃತದಲ್ಲಿ ಸಂಗ್ರಹರೂಪವಾಗಿ ಒಂದೆರಡು ವಿಷಯಗಳನ್ನು ಸೂಚಿಸುವೆವು. ಅಹಂ ಬ್ರಹ್ಮಾಸ್ಮಿ, ಸೋऽಹಮಸ್ಮಿ ಮುಂತಾದ ಧ್ಯಾನಪ್ರಕಾರಗಳು ಅದ್ವೈತಮತದ ರೀತಿಯಿಂದಲೇ ವಿಚಾರಮಾಡಿದರೆ ಒಂದು ವಿವಕ್ಷೆಯಿಂದ ನಿರರ್ಥಕವಾದ ಶುದ್ಧ ಪಿಟಿಪಿಟಿ ಜಪದಂತೆ ಅರ್ಥರಹಿತವಾದ ಉಪಾಸನೆಗಳಾಗುವವು. ಹೇಗೆಂದರೆ ಸೋऽಹಮಸ್ಮಿ ಎಂದರೆ "ನಾನು ಆ ಬ್ರಹ್ಮನು" ಎಂದರ್ಥವು. ಇಲ್ಲಿ "ನಾನು" ಎಂಬ ಜ್ಞಾನಕ್ಕೆ ವಿಷಯವಾದ ವಿಶಿಷ್ಟಜೀವಪದಾರ್ಥವು ಅದ್ವೈತಮತದ ರೀತ್ಯಾ ಮಿಥ್ಯಾ. ಬ್ರಹ್ಮನೆಂದರೆ ನಿರ್ಗುಣಬ್ರಹ್ಮನು ಅಥವಾ ಸೃಷ್ಟ್ಯಾದಿಕರ್ತನಾದ ಸಗುಣಬ್ರಹ್ಮನು. ಆದುದರಿಂದ "ನಾನು ಆ ಬ್ರಹ್ಮನು" ಎಂದರೆ ಮಿಥ್ಯಾಭೂತವಾದ ಜೀವಪದಾರ್ಥವು ಸೃಷ್ಟ್ಯಾದಿಕರ್ತನಾದ ಸಗುಣಬ್ರಹ್ಮನು ಎಂದು ಅರ್ಥವಾಗುವುದು; ಅಥವಾ ಮಿಥ್ಯಾಭೂತವಾದ ಜೀವಪದಾರ್ಥವು ನಿರ್ಧರ್ಮಕ ಶುದ್ಧಚೈತನ್ಯನು ಎಂದು ಅರ್ಥವಾಗುವುದು. ಉಭಯ ವಿಧವಾದ ಉಪಾಸನೆಯೂ ದುರರ್ಥದ ಆಧಾರದ ಮೇಲೆ ಜನಿತವಾದ ನಿರರ್ಥಕ ಮನೋವಿಭ್ರಮವೇ, "ಅಹಂ" ಪದಾರ್ಥವಾದ ಜೀವನು ಸೃಷ್ಟ್ಯಾದಿಕರ್ತನಾದ ಸಗುಣಬ್ರಹ್ಮನು ಎಂಬ ಉಪಾಸನೆಯು ಘೋರನರಕಕ್ಕೆ ಕಾರಣವಾಗುವ ದೈವದ್ರೋಹವೇ ಸರಿ. ಮತ್ತು ಮಿಥ್ಯಾಭೂತವಾದ ಪದಾರ್ಥವು ಶುದ್ಧಚೈತನ್ಯನೆಂದು ಹೇಳುವುದು ಅಶಕ್ಯವೆಂದು ನ್ಯಾಯಪ್ರಾಪ್ತವಾಗಿರುವುದು. 2. ಜೀವೋಪಲಕ್ಷಿತವಾದ ಚೈತನ್ಯವೇ ಬ್ರಹ್ಮಚೈತನ್ಯವು ಎಂದು ಅದ್ವೈತಿಗಳು ಹೇಳುವುದಾದರೆ ಅಂಥಾ ಶುದ್ಧಬ್ರಹ್ಮನು ಧ್ಯೇಯವಸ್ತುವೇ ಆಗಲಾರನು. ಹೇಗೆಂದರೆ ಶುದ್ಧಚೈತನ್ಯನು "ನಾನು" "ನಾನು" ಎಂಬ ಪ್ರತೀತಿಯಲ್ಲಿ ವಿಷಯನಾಗಲಾರನು. "ನಾನು" ಎಂಬ ಪದಾರ್ಥವು ಬ್ರಹ್ಮವಸ್ತುವಲ್ಲ ಎಂದು ಅದ್ವೈತಮತದ ರೀತಿಯಿಂದಲೇ ಸಿದ್ಧವಾಯಿತು. "ನನ್ನ"

ಅನುಭವಕ್ಕೆ ಬರದಿರುವ ಯಾವುದೋ ಒಂದು ಬ್ರಹ್ಮವಸ್ತುವು ಇದ್ದರೆ ತಾನೆ ಏನು? ಇಲ್ಲದಿದ್ದರೆ ತಾನೆ ಏನು? ನಿರ್ಧರ್ಮಕ ಶುದ್ಧಚೈತನ್ಯನು "ನಾನು" ಎಂಬ ಪ್ರತೀತಿಗೆ ವಿಷಯನಾದ ಜೀವನಿಗೆ ಅಜ್ಞೇಯನಾಗಿರುವುದರಿಂದ ಅವನು ಧ್ಯೇಯನಾಗಲಾರನು. ಧ್ಯೇಯವಸ್ತುರಹಿತವಾದ ಧ್ಯಾನವು ಅಸಂಭಾವಿತವು.* 3. ಪರಂತು ನಿರ್ಧರ್ಮಕಬ್ರಹ್ಮನು ಶಶವಿಷಾಣದಂತೆ ಅಪ್ರಸಿದ್ಧನೆಂದು ನಾವು ಬಹುಸ್ಥಳಗಳಲ್ಲಿ ನಿರೂಪಿಸಿರುತ್ತೇವೆ. 4. ಪರಮಾತ್ಮನಾದ ವಾಸುದೇವನೇ ಪರಬ್ರಹ್ಮನು. ಅವನೂ ಅವನ ಮಹಿಮೆಗಳೂ ಅತ್ಯಂತ ಸತ್ಯವಾದವುಗಳೆಂದೂ, ಜೀವನು ಅಲ್ಪಜ್ಞತ್ವಾದಿ ಅನೇಕ ಸ್ವಾಭಾವಿಕಧರ್ಮಗಳಿಂದ ಸಹಿತನಾಗಿ ನಿತ್ಯನೂ, ಸತ್ಯನೂ ಆಗಿರುವನೆಂದೂ ನಾವು ನಿರೂಪಿಸಿರುತ್ತೇವೆ. ಹೀಗಿರುವಲ್ಲಿ ಜೀವನಿಗೆ ತನ್ನಿಂದ ಸ್ವರೂಪತಃ ಭಿನ್ನವಾದ ಯಾವ ಮತ್ತೊಂದು ವಸ್ತುವಿನಿಂದಲೂ ಅಭೇದಪ್ರಾಪ್ತಿಗೆ ಅವಕಾಶವಿರುವುದಿಲ್ಲ. 5. ಶ್ರೀಕೃಷ್ಣನು "ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ" ಇತ್ಯಾದಿ ಬಹುಸ್ಥಳಗಳಲ್ಲಿ ಧ್ಯೇಯನಾದ ಪರಬ್ರಹ್ಮನು ರೂಪವತ್ಪದಾರ್ಥವೆಂದು ಸ್ಪಷ್ಟವಾಗಿ ನಿರೂಪಿಸಿರುತ್ತಾನೆ. ಪೂರ್ಣನಾದ ಧ್ಯಾನಗೋಚರನಾದ ಪರಬ್ರಹ್ಮನು ಧ್ಯಾನಕರ್ತನಾದ ಯೋಗಿಜೀವನಿಗಿಂತ ಅತ್ಯಂತ ಭಿನ್ನನೆಂದು ನೂತನವಾಗಿ ನಿರೂಪಿಸಬೇಕಾದುದಿಲ್ಲ.

---

* ಸಗುಣಬ್ರಹ್ಮನೇ "ನಾನು" ಎಂಬ ಜೀವವಸ್ತುವು ಎಂದು ಹೇಳುವುದು ದೌರಾತ್ಮ್ಯದ ಪರಾಕಾಷ್ಠತೆಯೇ ಸರಿಯೆಂದು ಒಬ್ಬ ಅಮೆರಿಕಾ ಗ್ರಂಥಕರ್ತನು ಬರೆದಿರುತ್ತಾನೆ :—

**For a sinful man to call himself Brahma is the height of deceit and wickedness :—**

**Xian Writer.**

**ಅರ್ಥ :—**ಪಾಪಿಯಾದ ಮನುಷ್ಯನು ನಾನು ಬ್ರಹ್ಮನು ಎಂದು ಹೇಳಿಕೊಳ್ಳುವುದು ದ್ರೋಹದ ಮತ್ತು ದುರಾತ್ಮತೆಯ ಪರಾಕಾಷ್ಠತೆಯೇ.

ನಾನು ಎಂಬ ಪದಾರ್ಥವು ಅಜ್ಞೇಯವಾದ ನಿರ್ಗುಣಬ್ರಹ್ಮನು ಎಂಬ ಉಪಾಸನೆಯು ಅವಿವೇಕಮೂಲಕವಾದುದು. ಚಿನ್ಮಾತ್ರಬ್ರಹ್ಮನು ಸರ್ವಥಾ ಅಜ್ಞೇಯನು. ಅವನು "ನಾನು" ಎಂಬ ಪ್ರತೀತಿಗೆ ಗೋಚರನಲ್ಲ. ಅವನು ನಮ್ಮ ವ್ಯವಹಾರದಲ್ಲಿ ಎಲ್ಲೂ ಬರುವುದಿಲ್ಲ. ಅಂಥಾ ಅಜ್ಞೇಯವಸ್ತುವೇ ನಾನು ಎಂದು ಹೇಳಿಕೊಳ್ಳುವುದು ಅಸಂಭಾವಿತವೇ. ಅಥವಾ ಶಶವಿಷಾಣವು

6. ಅದ್ವೈತಮತದಲ್ಲಿ ಯಾವ ರೀತಿಯಿಂದ ವಿಚಾರಮಾಡಿದರೂ ಧ್ಯಾನ ಮಾಡುವುದಕ್ಕೆ ಕಾರಣವೇ ಇರುವುದಿಲ್ಲ. ಈ ವಿಷಯವನ್ನು ಅದ್ವೈತಿಗಳೂ ಬಲ್ಲರು. ಆದರೆ ಈ ದೋಷೋಲ್ಲಂಘನೆಯನ್ನು ಮಾಡುವುದಕ್ಕೆ ಒಂದು ಕೇವಲ ಹಾಸ್ಯಾಸ್ಪದವಾದ ಕುಕಲ್ಪನೆಯನ್ನು ಮಾಡಿರುವರು. ಇದು ಅವರ ನಿರೂಪಣಪ್ರಕಾರವು :—"ಯದ್ಯಪಿ ಶುದ್ಧಬ್ರಹ್ಮನ ಧ್ಯಾನಾದಿಗಳು ಅಸಂಭಾವಿತವು ; ಸಾಧ್ಯವೂ ಅಲ್ಲ. ಆದರೆ ಪ್ರತೀಕಾದಿಗಳಲ್ಲಿ ಪರಬ್ರಹ್ಮದೃಷ್ಟಿಯಿಂದ ಧ್ಯಾನವು ವಿಹಿತವಾಗಿರುವುದು. "ನಾಮಬ್ರಹ್ಮೇತ್ಯುಪಾಸೀತ" ಇತ್ಯಾದಿ ಛಾಂದೋಗ್ಯಶ್ರುತಿಯಲ್ಲಿ ನಾಮಾದಿ ಪ್ರಾಣಪರ್ಯಂತವಾಗಿ ಅನೇಕ ಪ್ರತೀಕಗಳು ಹೇಳಲ್ಪಟ್ಟಿರುವುವು. ಈ ಪ್ರತೀಕಗಳಲ್ಲಿ ನಾಮವೇ ಪರಬ್ರಹ್ಮವು, ಪ್ರಾಣನೇ ಪರಬ್ರಹ್ಮನು, ವಿಷ್ಣುವೇ ಪರಬ್ರಹ್ಮನು ಇತ್ಯಾದಿ ರೀತಿಯಾದ ಅಭೇದೋಪಾಸನೆಯು ಉಕ್ತವಾಗಿರುವುದು. ಬ್ರಹ್ಮದೃಷ್ಟಿರುತ್ಕರ್ಷಾತ್ ಇತ್ಯಾದಿ ಸೂತ್ರಗಳಿಂದಲೂ ವಿಹಿತವಾಗಿರುವುದು.

---

ನಾನು ಎಂದು ಹೇಳಿಕೊಂಡಂತೆಯೇ. ಅದ್ವೈತಮತದಲ್ಲಿರುವ ಈ ದೋಷವನ್ನು ಪ್ರೊಫೆಸರ್ ಸರ್ಕಾರ್ ನಾಮಕಪಂಡಿತನು ಚೆನ್ನಾಗಿ ವಿವರಿಸಿರುತ್ತಾನೆ:—

**" Indeed, the Absolute has been made so much transcendental that we may even conceive the continuity of a psychological or scientific relativity side by side with the Absolute without any harm or detriment to its Absolute character, and philosophy can be satisfied in teaching this much that in the continuity of self-conscious experience nowhere do we come across the Absolute." —Mahendranath Sircar, M.A., Ph.D.**

**ಅರ್ಥ** :—ಅದ್ವೈತಮತದಲ್ಲಿ ಬ್ರಹ್ಮನು ಅತ್ಯಂತ ಪ್ರಮಾಣಾತೀತನಾಗಿರುವುದರಿಂದ ಪ್ರಮಿತವಾದ ನಮ್ಮ ಜಗತ್ಪ್ರವಾಹವು ಅಜ್ಞೇಯಬ್ರಹ್ಮನ ಸಂಬಂಧವೇ ಇಲ್ಲದೇ ಭಿನ್ನವಾಗಿ ಸರ್ವದಾ ಅನುವರ್ತಿಸುತ್ತಿರುವುದೆಂದು ಹೇಳುವುದರಲ್ಲಿ ಬಾಧಕವಿಲ್ಲ. ಯಾತಕ್ಕೆಂದರೆ "ನಾನು" ಎಂಬ ಪ್ರತೀತಿಸಿದ್ಧರಾದ ಜೀವರುಗಳ ಅನುಭವದಲ್ಲಿ ಯಾವಾಗಲೂ ಎಲ್ಲೂ ಚಿನ್ಮಾತ್ರಬ್ರಹ್ಮನು ವಿದಿತನಾಗಲಾರನು. ಇಷ್ಟನ್ನು (ಬ್ರಹ್ಮನು ನಿಮಗೆ ಎಲ್ಲೂ ಸಿಕ್ಕುವುದಿಲ್ಲವೆಂದು) ಹೇಳೋಣದರಿಂದಲೇ ಅದ್ವೈತಶಾಸ್ತ್ರವು ತೃಪ್ತಿಯನ್ನು ಹೊಂದಬಹುದು.

"ಯದ್ಯಪಿ ನಾಮ, ಪ್ರಾಣ, ಈಶ್ವರ, ವಿಷ್ಣ್ವಾದಿಗಳೊಬ್ಬರೂ ಪರಬ್ರಹ್ಮ ವಸ್ತುವಲ್ಲ. ಪರಿದೃಶ್ಯಮಾನವಾದುದೆಲ್ಲಾ ಮಿಥ್ಯಾ. ಆದರೂ ಶಾಖಾಚಂದ್ರ ನ್ಯಾಯದಿಂದಲೋ, ಅಥವಾ ಸ್ಥೂಲಾರುಂಧತೀ ನ್ಯಾಯದಿಂದಲೋ ಸಗುಣ ವಸ್ತುವನ್ನೇ ನಿರ್ಗುಣ ಪರಬ್ರಹ್ಮನೆಂದು ಧ್ಯಾನಮಾಡುವವನಿಗೆ ಮನಸ್ಸು ನಿಶ್ಚಲವಾಗಿ ತತ್ತ್ವಮಸ್ಯಾದಿ ವಾಕ್ಯಗಳಿಂದ ಯಥಾರ್ಥವಿಜ್ಞಾನವು ಪ್ರಾಪ್ತವಾದಾಗ ನಾಮಾದಿಗಳೆಲ್ಲವೂ ಮಿಥ್ಯಾ, ಪರಬ್ರಹ್ಮನಲ್ಲಿ ಆರೋಪಿತವು ಎಂದು ಸ್ಪಷ್ಟವಾಗುವುದು. ಶುಕ್ತಿರಜತಭ್ರಮೆಯನ್ನು ಹೊಂದಿದವನು ತನ್ನ ಜ್ಞಾನಕ್ಕೆ ಗೋಚರವಾದ ರಜತವನ್ನೇ ಇದು ಶುಕ್ತಿಯು, ಶುಕ್ತಿಯು ಎಂದು ಧ್ಯಾನ ಮಾಡುತ್ತಾ ಇದ್ದರೆ ಭ್ರಮವು ನಿವೃತ್ತಿಯಾದನಂತರ ಅಲ್ಲಿ ಶುಕ್ತಿಯೇ ಇರುವುದರಿಂದ ಅಲ್ಲಿರುವ ಶುಕ್ತಿಯು ಹೇಗೆ ಪ್ರತೀತವಾಗಿ ಭ್ರಾಂತನು ಮಾಡಿದ ಮಿಥ್ಯೋಪಾಸನೆಯೂ ಹೇಗೆ ಫಲಕಾರಿಯಾಗಿ ಪರಿಣಾಮಹೊಂದುವುದೋ, ಹಾಗೆಯೇ ಈಶ್ವರನನ್ನೋ, ವಿಷ್ಣುವನ್ನೋ, ಗಣೇಶನನ್ನೋ, ಅಂಬಿಕೆಯನ್ನೋ ನೀನೇ ಶುದ್ಧಬ್ರಹ್ಮನು, ನೀನೇ ಶುದ್ಧಬ್ರಹ್ಮನು ಹೀಗೆ ಧ್ಯಾನಮಾಡುತ್ತಾ ಇದ್ದರೆ ತತ್ತ್ವಮಸ್ಯಾದಿವಾಕ್ಯದಿಂದ ಯಥಾರ್ಥಜ್ಞಾನೋದಯವಾದನಂತರ ಗಣೇಶತ್ವ ಅಂಬಿಕಾತ್ವ, ಶಂಖಚಕ್ರಾದಿಮತ್ತ್ವಾದಿ ಆರೋಪಿತ ಧರ್ಮಗಳೆಲ್ಲಾ ಅದೃಶ್ಯವಾಗಿಹೋಗಿ ಶುದ್ಧಬ್ರಹ್ಮಸಾಕ್ಷಾತ್ಕಾರವೇ ಆಗುವುದು. ನೀನೇ ಬ್ರಹ್ಮನು ಎಂದು ಮಾಡಿದ ಧ್ಯಾನವು ಸಫಲವೂ ಸತ್ಯವೂ ಆಗಿ ಪರಿಣಮಿಸುವುದು" ಎಂದು ಹೇಳುವರು. ಸೂತಸಂಹಿತೆಯಲ್ಲಿ ಇಂಥಾ ಧ್ಯಾನಪ್ರಕಾರವನ್ನು ಅದ್ವೈತಿಗಳು ವಿಸ್ತಾರವಾಗಿ ವರ್ಣಿಸಿರುವರು.

**ಪ್ರಶ್ನೆ**—ಸ್ವಾಮಿ! ಇದರಲ್ಲಿ ದೋಷಗಳೇನು?

**ಶ್ರೀಶ್ರೀಗಳವರು**—ಈ ನಿರೂಪಣವು ಬಂಜೆಗೆ ಪುತ್ರೋತ್ಪತ್ತಿಯಾಗುವುದೆಂದು ಗ್ರಾಮಗಳಲ್ಲಿ ಬುಡುಬುಡಿಕೆಯವರು ವಿಧಾನಮಾಡುವ ಪ್ರಕ್ರಿಯೆಗೆ ಸದೃಶವಾಗಿರುವುದು. ಪ್ರತೀಕಬ್ರಹ್ಮೋಪಾಸನೆಯ ಮುಖ್ಯವಾದ ಕೆಲವು ದೋಷಗಳನ್ನು ನಿರೂಪಿಸುವೆವು.

1. **ಅದ್ವೈತಮತದ ರೀತಿಯಿಂದಲೂಕೂಡ** ಪ್ರತೀಕಬ್ರಹ್ಮೋಪಾಸನೆಗೂ ನಿರ್ಗುಣಬ್ರಹ್ಮಸಾಕ್ಷಾತ್ಕಾರೋತ್ಪತ್ತಿಗೂ ಕಾರ್ಯಕಾರಣಭಾವವು ಯಾವುದೂ ಇರುವುದಿಲ್ಲ. ಪ್ರತೀಕವನ್ನು ನೋಡುತ್ತಾ ನೀನೇ ನಿರ್ಗುಣ

ಬ್ರಹ್ಮನು! ನೀನೇ ನಿರ್ಗುಣಬ್ರಹ್ಮನು! ಎಂದು ಉಪಾಸನೆಮಾಡುವುದರಿಂದ ನಿರ್ಗುಣಬ್ರಹ್ಮಜ್ಞಾನವು ಉಂಟಾಗುವುದಿಲ್ಲ. ನಿರ್ಗುಣಬ್ರಹ್ಮಜ್ಞಾನವು ತತ್ತ್ವಮಸ್ಯಾದಿ ವಾಕ್ಯಾರ್ಥಜ್ಞಾನದಿಂದ ಸ್ಫುರಿಸುವುದೇ ಹೊರತು ಧ್ಯಾನಾದಿಗಳು ಪರಬ್ರಹ್ಮಜ್ಞಾನೋತ್ಪತ್ತಿಯಲ್ಲಿ ಅವಶ್ಯಕವಲ್ಲ* ಮತ್ತು ಸ್ವಲ್ಪ ಪ್ರತಿಬಂಧಕವೂ ಆಗುವುವು. ಶುಕ್ತಿರಜತದೃಷ್ಟಾಂತದಲ್ಲಿಯೂ ಹೀಗೆಯೇ ತಿಳಿಯಬೇಕು. ಭ್ರಮಕಾಲದಲ್ಲಿ ರಜತವನ್ನು ನೋಡುತ್ತಾ ಇದು ಶುಕ್ತಿಯು ಎಂದು ಸಹಸ್ರ ವರ್ಷಗಳ ಪರ್ಯಂತ ಧ್ಯಾನಮಾಡಿದರೂ ಶುಕ್ತಿಜ್ಞಾನವು ಬರಲಾರದು. ಹತ್ತಿರ ಹೋಗಿ ಬಗ್ಗಿನೋಡಿದರೆ, ಎಂದರೆ ಯಥಾರ್ಥಜ್ಞಾನಕಾರಣವಾದ ಸಮೀಚೀನ ಸನ್ನಿಕರ್ಷವು ಉತ್ಪನ್ನವಾದ ಕ್ಷಣವೇ, ಯಥಾರ್ಥಶುಕ್ತಿಜ್ಞಾನವು ಉಂಟಾಗುವುದು. ರಜ್ಜುಸರ್ಪಭ್ರಮದಲ್ಲಿಯೂ ಹೀಗೆಯೇ ತಿಳಿಯಬೇಕು. 2. ಕಿಂಚ ಈಶ್ವರ ವಿಷ್ಣ್ವಾದಿಗಳು ಮಿಥ್ಯಾ ಅಲ್ಲ. ಅವರ ಪರಿದೃಶ್ಯಮಾನವಾದ ಧರ್ಮ

---

ಇದೇ ಅದ್ವೈತಮತದ ಪ್ರಕ್ರಿಯೆಯು; ಅದ್ವೈತತತ್ತ್ವೋಪಪಾದನೆಯ ರೀತಿಯಿಂದಲೇ ಧ್ಯಾನಾದಿಗಳು ಮೋಕ್ಷಕ್ಕೆ ಕಾರಣವಾಗುವುದಿಲ್ಲ. ಈ ವಿಷಯವನ್ನು ಉಭಯವಿದ್ಯಾಪಾರಂಗತರಾದ ದಾಸಗುಪ್ತರು ಸಮೀಚೀನವಾಗಿ ನಿರೂಪಿಸಿರುತ್ತಾರೆ:—

**"Sankara's main point was that the Upanishads revealed the highest truth as the Brahman. No meditation or worship or action of any kind was required; but one reached absolute wisdom and emancipation when the truth dawned on him that the Brahman or self was the ultimate reality."**

**—S. Das Gupta M.A., Ph.D.**

**ಅರ್ಥವು :—** ಉಪನಿಷತ್ತುಗಳು ಬ್ರಹ್ಮನೇ ಪರಮಾರ್ಥತತ್ತ್ವವೆಂದು ತೋರಿಸುವುವೆನ್ನುವುದು ಶಂಕರಾಚಾರ್ಯರ ಮುಖ್ಯಪ್ರಾತಿಪಾದಿತತತ್ತ್ವವು. ಯಾವ **ಧ್ಯಾನವೂ** ಆರಾಧನೆಯೂ ಕರ್ಮಾದ್ಯನುಷ್ಠಾನವೂ ಅವಶ್ಯಕವಿರುವುದಿಲ್ಲ ಪರಂತು ಅಧಿಕಾರಿಯು ಶುದ್ಧಬ್ರಹ್ಮನು ಅಥವಾ ಆತ್ಮನೇ ಅಂತ್ಯತತ್ತ್ವವೆಂದು ತಿಳಿದಕ್ಷಣವೇ ಪೂರ್ಣವಿಜ್ಞಾನವನ್ನೂ ಮತ್ತು ಬಂಧನಿವೃತ್ತಿಯನ್ನೂ ಹೊಂದಿಬಿಡುವನು.

ಏವಂಚ ಧ್ಯಾನಾದಿಗಳು ಮೋಕ್ಷೋಪಯೋಗಿಯಲ್ಲ. ಅದು ಮುಂದರ ಆಚರಣೆಯು ಎಂದು ಸಿದ್ಧವಾಯಿತು.

ಗಳೂ ಮಿಥ್ಯಾ ಅಲ್ಲ, ಎಂದು ನಾವು ಅನೇಕ ಕಾರಣಗಳಿಂದ ನಿರೂಪಿಸುತ್ತೇವೆ. ಹೀಗಿರುವಲ್ಲಿ ಸತ್ಯಧರ್ಮಗಳಿಂದ ಸಹಿತನಾದ ವಿಷ್ಣುಚೇತನನನ್ನು ನೀನು ನಿರ್ಗುಣಬ್ರಹ್ಮನೆಂದು ಧ್ಯಾನಮಾಡಿದರೆ ಪ್ರಬಲವಾದ ದೈವದ್ರೋಹವು ಪ್ರಾಪ್ತವಾಗುವುದು. 3. ಪರಂತು ಮಿಥ್ಯೋಪಾಸನೆಯು ಮೋಕ್ಷಸಾಧಕನೆಂದು ಅಂಗೀಕರಿಸುವುದು ಅತ್ಯಂತ ಸಾಹಸಪ್ರಕ್ರಿಯೆಯು. ಯಥಾರ್ಥಜ್ಞಾನವು ಮತ್ತು ಉಪಾಸನೆಯು ಮೋಕ್ಷಸಾಧಕವೆಂದೂ, ಅಯಥಾರ್ಥಜ್ಞಾನವು ಮತ್ತು ಉಪಾಸನಾದಿಗಳು ಸಂಸಾರಕಾರಣವೆಂದೂ ಶಾಸ್ತ್ರದಲ್ಲಿ ನಿಶ್ಚಿತವಾಗಿರುವುದು. ಯಥಾರ್ಥೋಪಾಸನೆಯು ಸಾತ್ವಿಕವಾದುದರಿಂದ ಮೋಕ್ಷಸಾಧಕವಾಗಬಹುದು. ಅಯಥಾರ್ಥೋಪಾಸನೆಯು ತಾಮಸಗುಣಜನ್ಯವಾದ ವಿಪರೀತನಿಶ್ಚಯಾತ್ಮಕವಾದುದರಿಂದ ನಿರಯಪ್ರದನಾಗುವುದೆಂದು ಯುಕ್ತಿಯೂ ಸ್ವರಸವಾಗಿರುವುದು. 4. ಲೋಕದೃಷ್ಟಾಂತವೂ ಹೀಗೆಯೇ ಇರುವುದು. ಚಂಡಾಲನನ್ನು ಕುರಿತು ನೀನು ರಾಜನು ಎಂದು ಅಭಿಪ್ರಾಯಪುರಸ್ಸರವಾಗಿ ಸ್ತುತಿಸಿ ರಾಜೋಪಚಾರಗಳಿಂದ ಪೂಜಿಸತೊಡಗಿದರೆ, ರಾಜನು ಕುಪಿತನಾಗಿ ರಾಜದ್ರೋಹರೂಪವಾದ ದೋಷಭಾಗಿಯಾದ ಅಂಥಾ ನಿಂದಕನನ್ನು ಸಂಹರಿಸುವನು. ಇದೇ ರೀತಿಯಲ್ಲಿ ನಾಮಾದಿ ಪ್ರತೀಕಗಳನ್ನು ಉದ್ದೇಶಮಾಡಿ ನೀವುಗಳೇ ಉಪನಿಷತ್ಪ್ರತಿಪಾದ್ಯನಾದ ಪರಬ್ರಹ್ಮವಸ್ತುವು ಎಂದು ಉಪಾಸನೆ ಮಾಡಿದರೆ, ಪರಬ್ರಹ್ಮನು ಕುಪಿತನಾಗಿ ತನ್ನ ಮಹಾಗುಣಗಳನ್ನು ಅಲ್ಪರಾದ ಪ್ರತೀಕಗಳಲ್ಲಿ ಆರೋಪಿಸುವ ವಿಪರೀತೋಪಾಸಕನನ್ನು ನಿತ್ಯ ದುಃಖಕ್ಕೆ ಗುರಿಮಾಡುವನೆಂದು ಹೇಳಬಹುದು. 5. ಪರಬ್ರಹ್ಮವಸ್ತುವು ನಿರ್ಗುಣಚಿನ್ಮಾತ್ರನು, ಅದು ಕೋಪಿಸಿಕೊಂಡು ಶಿಕ್ಷಾದಿಗಳನ್ನು ಮಾಡತಕ್ಕ ವೀರಭದ್ರಮೂರ್ತಿಯಲ್ಲವೆಂದು ಅದ್ವೈತಿಗಳು ವಾದಿಸಬಹುದು. ಆದರೆ, ಶ್ರೀಕೃಷ್ಣನೇ ವೇದೈಶ್ಚ ಸರ್ವೈರಹಮೇವ ವೇದ್ಯಃ ಇತ್ಯಾದಿ ಬಹುಪ್ರಮಾಣವಚನಾನುಗುಣವಾಗಿ ಸರ್ವವೇದಪ್ರತಿಪಾದ್ಯನಾದ ಪರಬ್ರಹ್ಮವಸ್ತುವು. ಶ್ರೀಕೃಷ್ಣನು ಸತ್ವಾದಿಗುಣರಹಿತನಾದುದರಿಂದ ನಿರ್ಗುಣನೆನ್ನಿಸುವನು ಮತ್ತು ಅನಂತಕಲ್ಯಾಣಗುಣಗಳಿಂದ ಸದಾ ಪರಿಪೂರ್ಣನಾದುದರಿಂದ ಪರಬ್ರಹ್ಮನೆನ್ನಿಸುವನು. ಆತನಿಗಿಂತ ಅತಿರಿಕ್ತವಾದ ನಿರ್ವಿಶೇಷಚಿನ್ಮಾತ್ರರೂಪವಾದ ನಿರ್ಗುಣವಸ್ತುವು ವೇದಪ್ರತಿಪಾದ್ಯವಾಗಿರುವುದಿಲ್ಲ ಮತ್ತು ಶಶವಿಷಾಣದಂತೆ ಅಪ್ರಸಿದ್ಧವಾಗಿರುವುದೆಂದು

ನಾವು ಹಿಂದೆಯೇ ನಿರೂಪಿಸಿರುತ್ತೇವೆ. ಆದುದರಿಂದ ನಾಮಾದಿ ಪ್ರತೀಕಗಳಲ್ಲಿ ಬ್ರಹ್ಮತ್ವಬುದ್ಧಿಯಿಂದ ಉಪಾಸನೆಮಾಡಿದರೆ ಪರಬ್ರಹ್ಮನಾದ ಶ್ರೀಕೃಷ್ಣನು ಕುಪಿತನಾಗಿ ಪೌಂಡ್ರಕ ವಾಸುದೇವಾದಿಗಳಿಗೆ ಮಾಡಿದಂಥಾ ಶಿಕ್ಷೆಯನ್ನೇ ಮಾಡುವುದು ನಿಶ್ಚಯವು. 6. ಪರಂತು ನಾಮಾದಿ ಪ್ರತೀಕರೂಪರಾದ ದೇವತೆಗಳಿಗೂ ಈ ಉಪಾಸನೆಯು ಇಷ್ಟಕರವಲ್ಲ. ಪತಿವ್ರತೆಯಾದ ಸ್ತ್ರೀಯನ್ನು ನೀನು ಸ್ವತಂತ್ರಪುರುಷಳು, ಈ ಮನೆಗೆ ನೀನೇ ಯಜಮಾನಿತಿಯಾಗಿರುತ್ತೀ ಎಂದು ಸ್ತುತಿಸಿದರೆ ಆಕೆಯು ಸಂತುಷ್ಟಿಯನ್ನು ಹೊಂದಲಾರಳು. ನಿಜಭೃತ್ಯನನ್ನು ಕುರಿತು ನೀನು ಮಹಾರಾಜನೆಂದು ಸ್ತುತಿಸಿದರೆ ಕುಪಿತನಾಗುವನು. ಹಾಗೆಯೇ ಪರಬ್ರಹ್ಮನಾದ ಶ್ರೀಕೃಷ್ಣನ ಪಾದಗಳಲ್ಲಿ ಅನನ್ಯಭಾವದಿಂದ ಶರಣಾಗತರಾದ ಬ್ರಹ್ಮಾದಿ ದೇವತೆಗಳಲ್ಲಿ ಪರಬ್ರಹ್ಮದೃಷ್ಟಿಯನ್ನಿಟ್ಟು ಉಪಾಸನೆಯನ್ನು ಮಾಡಿದರೆ ಅವರು ಸಂತೋಷವನ್ನು ಹೊಂದಲಾರರು ಮತ್ತು ಸಹಜವಾದ ಕ್ರೋಧಕ್ಕೆ ವಶರಾಗಿ ಅಂಥಾ ದುರುಪಾಸಕನನ್ನು ದಂಡಿಸುವುದರಲ್ಲಿ ಸಂಶಯವಿಲ್ಲ. 7. ಮಿಥ್ಯೋಪಾಸನೆಯಾದರೂ, ಐಕ್ಯಜ್ಞಾನೋತ್ಪತ್ತಿಯಲ್ಲಿ ಸಾಕ್ಷಾತ್ಸಾಧನವಲ್ಲದಿದ್ದರೂ, ಪ್ರತೀಕದಲ್ಲಿ ಬ್ರಹ್ಮದೃಷ್ಟಿಯಿಂದ ಉಪಾಸನೆಮಾಡುವುದರಿಂದ ಚಿತ್ತೈಕಾಗ್ರತೆಯು ಬರುವುದು ಎಂದು ಕೆಲವರು ಅದ್ವೈತಿಗಳು ಹೇಳುವರು. ಈ ವಿವಕ್ಷೆಯಿಂದಲೂ ಮಿಥ್ಯೋಪಾಸನೆಯು ಉಚಿತವಲ್ಲ. ಚಿತ್ತೈಕಾಗ್ರತೆಯನ್ನು ಹೊಂದುವುದಕ್ಕೆ ಅದ್ವೈತಮತದ ರೀತಿಯಿಂದಲೇ ನೀನು ಮಿಥ್ಯಾ ಎಂದು ಪ್ರತೀಕವನ್ನು ಉಪಾಸನೆ ಮಾಡಿದರೆ ಸಾಕು. ನೀನು ಪರಬ್ರಹ್ಮನು ಎಂದು ನಿರರ್ಥಕವಾದ ಮತ್ತು ವಿರುದ್ಧಫಲಜನಕವಾದ ಅಸದುಪಾಸನೆಯನ್ನು ಮಾಡುವುದಕ್ಕೆ ಕಾರಣವಿರುವುದಿಲ್ಲ.

**ಪ್ರಶ್ನೆ**—ಸ್ವಾಮಿ! ಪ್ರತೀಕದಲ್ಲಿ ಬ್ರಹ್ಮದೃಷ್ಟಿಯನ್ನಿಟ್ಟು ಧ್ಯಾನಮಾಡುವುದು ಮಿಥ್ಯೋಪಾಸನೆಯೇ ಹೌದು. ಆದರೆ ಅದು ನಿರರ್ಥಕವು ಹೇಗೆ ಆಗುವುದು? ನಾನು ಒಂದು ಕಲ್ಲನ್ನು ದೇವರೆಂದು ನಂಬಿಕೊಂಡರೆ ನಮ್ಮ ಭಾಗಕ್ಕೆ ಅದು ದೇವರೇ ಆಗುವುದು.

**ಉತ್ತರ—ಶ್ರೀಶ್ರೀಗಳವರು**—ಇದು ಸ್ವಲ್ಪ ಮೋಹಕವಾದ ಉಪಪಾದನೆಯು. 8. ವಸ್ತುತತ್ತ್ವವೇನೆಂದರೆ, ಯಾವನಾದರೂ ಒಬ್ಬ ಪುರುಷನು ಒಂದು ಕಲ್ಲನ್ನು ಭಂಗಾರದ ತುಂಡೆಂದು ನಂಬಿದರೆ ಆ ಭ್ರಮಜ್ಞಾನದಿಂದ ಆತ

ನಿಗೇನೋ ಮನೆಯಲ್ಲಿ ಭಂಗಾರವು ಇದ್ದಿದ್ದರೆ ಎಷ್ಟು ಸಂತೋಷವೋ ಅಷ್ಟು ಸಂತೋಷವು ಉಂಟಾಗುವುದು. ಈ ಸಂತೋಷೋತ್ಪತ್ತಿಯು ಭ್ರಮಜ್ಞಾನದ ಸಾಮರ್ಥ್ಯವು, ಕಲ್ಲಿನ ಸಾಮರ್ಥ್ಯವಲ್ಲ. ಯಾತಕ್ಕೆಂದರೆ ಪುರುಷನ ಸಂಬಿಕೆಯಿಂದ ಕಲ್ಲು ಕರಗಿ ಭಂಗಾರರೂಪವಾಗಿ ಪರಿಣಾಮವನ್ನು ಹೊಂದಲಾರದು. ಕಲ್ಲು ಇದ್ದಂತೆಯೇ ಇರುವುದು. ಹೀಗಿದ್ದರೂ ಕಲ್ಲು ಭಂಗಾರವೆಂಬ ಭ್ರಮಜ್ಞಾನವು ಸುಖಜನಕವಾಗುವುದು. ಆದರೆ ಅದೇ ಪುರುಷನು ಮನೆಯಲ್ಲಿ ವಿವಾಹೋತ್ಸವವು ಪ್ರಾಪ್ತವಾದಾಗ ಚಿನ್ನದ ಡಾಬನ್ನು ಮಾಡಿಸಬೇಕೆಂಬ ಉದ್ದೇಶದಿಂದ ಅಂಗಡಿಗೆ ತನ್ನಲ್ಲಿಟ್ಟುಕೊಂಡಿದ್ದ ಕಲ್ಲುಗಟ್ಟಿಯನ್ನು ತೆಗೆದುಕೊಂಡುಹೋದರೆ ಸಕಲರೂ ಅವನನ್ನು ಹುಚ್ಚನೆಂದು ಕರೆಯುವರು. ಅವನ ಇಷ್ಟಾರ್ಥ ಪ್ರಾಪ್ತಿಯೂ ಆಗಲಾರದು.

ಇದೇ ರೀತಿಯಲ್ಲಿ ಪ್ರತೀಕದಲ್ಲಿ ಬ್ರಹ್ಮತ್ವಾರೋಪರೂಪವಾದ ಭ್ರಮಜ್ಞಾನದಿಂದ ತಾಮಸ ಸುಖವು ಉತ್ಪನ್ನವಾಗುವುದು. ಆದರೆ ಬ್ರಹ್ಮನ ಪ್ರಸಾದಪ್ರಾಪ್ತಿಯಾಗಲೀ, ಪರಿಣಾಮಫಲರೂಪವಾದ ಮುಕ್ತ್ಯಾದಿ ಪುರುಷಾರ್ಥವಾಗಲೀ ಪ್ರಾಪ್ತವಾಗಲಾರದು. ವಿಷವನ್ನು ಹಾಲೆಂದು ಭ್ರಾಂತಿಯಿಂದ ತಿಳಿದರೆ, ತೃಷಾರ್ತನು ಇನ್ನೇನು ನನ್ನ ದಾಹನಿವೃತ್ತಿಯಾಯಿತೆಂದು ನಂಬಿ ಸಂತೋಷಪಡುವನು. ಆದರೆ ಪಾನಮಾಡಿದರೆ ಮರಣವು ಸಿದ್ಧವಾಗಿರುವುದು. ಹೀಗೆಯೇ ಭಯಂಕರವಾದ ಅಸದಾರೋಪದಿಂದ ಪ್ರಾಪ್ತವಾದ ತಾಮಸ ಸುಖವು ಪರಿಣಾಮದಲ್ಲಿ ಪರಬ್ರಹ್ಮನ ದ್ರೋಹದಿಂದ ಸಂಭವಿಸುವ ನಿತ್ಯನರಕ ಪ್ರಾಪ್ತಿಯಲ್ಲಿ ಪರ್ಯವಸಾನವನ್ನು ಹೊಂದುವುದು. ಅಭಕ್ಷ್ಯಭಕ್ಷಣಗಳಿಂದ ಸುಖವು ಉತ್ಪನ್ನವಾಗುವುದು. ಹೀಗೆಯೇ ಮಿಥ್ಯಾಜ್ಞಾನದಿಂದಲೂ ಕ್ವಚಿತ್ ತಾತ್ಕಾಲಿಕಸುಖವು ಉಂಟಾಗುವುದು. ಆದರೆ ಶಾಸ್ತ್ರಮಾರ್ಗದಲ್ಲಿ ಪ್ರವೃತ್ತರಾದ ಮುಮುಕ್ಷುಗಳು ನಿಷಿದ್ಧಗಳಾದ ಈ ಹೇಯಸುಖಗಳು ಪರಿಣಾಮದಲ್ಲಿ ನರಕ ಕಾರಣವಾಗುವುವೆಂದು ನಿಶ್ಚಯಿಸಿ ಅವುಗಳನ್ನು ಸರ್ವಥಾ ಅಪೇಕ್ಷಿಸಬಾರದು. ಪ್ರತೀಕ ಬ್ರಹ್ಮತ್ವಧ್ಯಾನವು ಶ್ರುತಿಸ್ಮೃತಿಗಳಿಂದ ನಿಷೇಧಿಸಲ್ಪಟ್ಟ ಭ್ರಮಜ್ಞಾನವಾದುದರಿಂದ ಅಂಥಾ ಉಪಾಸನೆಯಿಂದ ಪ್ರಾಪ್ತವಾಗುವ ತಾತ್ಕಾಲಿಕ ಕ್ಷುದ್ರ ಸುಖವನ್ನು ಮುಮುಕ್ಷುವು ಅಪೇಕ್ಷಿಸಬಾರದು. 9. "ಯ ಆತ್ಮನಿ ತಿಷ್ಠನ್" "ಸರ್ವಭೂತೇಷು ಗೂಢಃ" ಇತ್ಯಾದಿ ಅನೇಕ ಶ್ರುತಿಗಳಲ್ಲಿಯೂ, "ಅಂತರ್ಯಾ

ವ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್'' ಇತ್ಯಾದಿ ಅನೇಕ ಬ್ರಹ್ಮಸೂತ್ರಗಳಲ್ಲೂ ಪರಬ್ರಹ್ಮನು ಸರ್ವಪ್ರತೀಕಗಳಲ್ಲಿಯೂ ಅಂತರ್ಗತನಾಗಿರುವನೆಂದೇ ಹೇಳಲ್ಪಟ್ಟಿರುತ್ತದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಪುನಃ ಪುನಃ ಚೇತನಾಚೇತನಾತ್ಮಕವಾದ ಸಕಲ ಜಗತ್ತೂ ತನಗೆ ಪ್ರತೀಕಮಾತ್ರವೇ ಎಂದು ನಿರೂಪಿಸಿರುತ್ತಾನಾದುದರಿಂದ ಚಿತ್ತೈಕಾಗ್ರತೆಯನ್ನು ಅಪೇಕ್ಷಿಸುವವನೂ ಸಹ ಸರ್ವತ್ರ ಪರಮಾತ್ಮನು ಅಂತರ್ಯಾಮಿಯಾಗಿರುವನೆಂದು ಉಪಾಸನೆಯನ್ನು ಮಾಡಬೇಕೇ ಹೊರತು ತಾದಾತ್ಮ್ಯದೃಷ್ಟಿಯಿಂದ ಧ್ಯಾನವನ್ನು ಮಾಡಬಾರದು.* ತಾಮ್ರಾದಿಗಳಿಂದ ರಚಿತವಾದ ಅಚೇತನಪ್ರತೀಕಗಳಾಗಲೀ, ಇಂದ್ರಾದಿ ಚೇತನಪ್ರತೀಕಗಳಾಗಲೀ ಸ್ವಭಾವತಃ ಪರಬ್ರಹ್ಮವಸ್ತುವಲ್ಲ. ಮತ್ತು ನಾವು ಅವರುಗಳನ್ನು ಬ್ರಹ್ಮದೃಷ್ಟಿಯಿಂದ ಧ್ಯಾನಮಾಡಿದರೆ ಅವುಗಳ ಜಡತ್ವ, ಜೀವತ್ವಾದಿ ಸ್ವಾಭಾವಿಕಧರ್ಮಗಳು ನಷ್ಟವಾಗಿ ಪರಬ್ರಹ್ಮತ್ವಪ್ರಾಪ್ತಿಯು ಅವುಗಳಿಗೆ ಬರಲಾರದು. ಹೀಗಿರುವಲ್ಲಿ ಯಾವ ರೀತಿಯಿಂದ ತಾನೇ ಪರಬ್ರಹ್ಮಪ್ರಸಾದವು ಪ್ರತೀಕ ಬ್ರಹ್ಮದೃಷ್ಟಿಯುಳ್ಳವನಿಗೆ ಬರುವುದು? ಆದುರಿಂದ ನಿತ್ಯವ್ಯಕ್ತವಾದ ನಿರವಧಿಕ ಮಹೈಶ್ವರ್ಯಗಳಿಂದ ಪರಿಪೂರ್ಣನಾದ ಶ್ರೀಪರಮಾತ್ಮನನ್ನು ಶ್ರವಣಮನನಾದಿಗಳಿಂದ ಶುದ್ಧವಾದ ಮನಸ್ಸಿನಿಂದ ಸ್ವದೇಹದಲ್ಲಿಯೂ ಮತ್ತು ಇತರ ಉತ್ತಮ

---

* **ಸರ್ವಭೂತಸ್ಥ ಮಾತ್ಮಾನಂ** —(6. 29); **ಯೋ ಮಾಂ ಪಶ್ಯತಿ ಸರ್ವತ್ರ** —(6. 30); **ಸರ್ವಭೂತಸ್ಥಿತಂ ಯೋ ಮಾಂ ಭಜತಿ** —(7. 31.) **ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ** —(11.40); **ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಂ** —(13. 27); **ಸರ್ವತ್ರಸಮವಸ್ಥಿತಮೀಶ್ವರಂ** —(13. 28.); **ಮಾಮಾತ್ಮಪರದೇಹೇಷು** —(16. 18); **ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ** —(18. 20); **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ** —(18. 61.) ಇತ್ಯಾದಿ ಬಹು ಸ್ಥಳಗಳಲ್ಲಿ ಪರಬ್ರಹ್ಮನಾದ ಶ್ರೀಕೃಷ್ಣನು ತನ್ನ ಸರ್ವಾಂತರ್ಯಾಮಿತ್ವವನ್ನೇ ಸ್ಪಷ್ಟವಾಗಿ ಉದ್ಘೋಷಿಸಿರುತ್ತಾನೆ. **ವಾಸುದೇವಸ್ಸರ್ವಮಿತಿ, ರಸೋಽಹಮಪ್ಸು ಕೌಂತೇಯ, ಪಾಂಡವಾನಾಂ ಧನಂಜಯಃ** ಇತ್ಯಾದಿವಾಕ್ಯಗಳು ಪ್ರತೀಕಬ್ರಹ್ಮತಾದಾತ್ಮ್ಯವನ್ನು ಬೋಧಿಸುವುದಿಲ್ಲವೆಂದು ಹಿಂದೆಯೇ ನಿರೂಪಿಸಲ್ಪಟ್ಟಿರುತ್ತದೆ. ಇನ್ನು ಪುನಃ ದಶಮಾಧ್ಯಾಯದ ಅರ್ಥವಿಸ್ತರವು ಮಾಡಲ್ಪಡುವುದು.

ಅಧಿಷ್ಠಾನಗಳಲ್ಲಿಯೂ ಸ್ವಯೋಗ್ಯತಾನುಸಾರವಾಗಿ ಪೂರ್ಣವಾದ ಜ್ಞಾನಭಕ್ತಿಗಳಿಂದ ಧ್ಯಾನಮಾಡುವುದೇ ಸಾಕ್ಷಾದಪರೋಕ್ಷಜ್ಞಾನಸಾಧನವಾಗಿ ಮುಕ್ತಿಫಲಪ್ರದವಾದ ಉಪಾಸನೆಯು. ಕೇವಲ ಪ್ರಪತ್ತಿಯಾಗಲೀ, ದ್ವೇಷಯುಕ್ತಧ್ಯಾನವಾಗಲೀ, ಪ್ರತೀಕದಲ್ಲಿ ಬ್ರಹ್ಮದೃಷ್ಟಿಯಾಗಲೀ ಶಾಸ್ತ್ರದಿಂದ ಅಂಗೀಕರಿಸಲ್ಪಟ್ಟಿಲ್ಲವಾದುದರಿಂದ ಸ್ವಕಪೋಲಕಲ್ಪಿತವಾದ ಮೋಹಕವಾದಗಳೆಂದು ಸಿದ್ಧವಾಗುವುದು.

---

## 6. ಆರನೆಯ ಅಂಶವು.

### ಧ್ಯಾನಕಾರಣಸಾಮಗ್ರೀವಿಮರ್ಶೆಯು.

### (ಮನನದಿಂದ ತತ್ತ್ವನಿಶ್ಚಯವು — ಶ್ರವಣವು.)

1. **ಪ್ರಶ್ನೆ —** ಸ್ವಾಮಿ! ಅಪರೋಕ್ಷಜ್ಞಾನಹೇತುವಾದ ಧ್ಯಾನವು ಯಾವ ಸಾಧನಗಳಿಂದ ಹುಟ್ಟುವುದು?

**ಶ್ರೀಶ್ರೀಗಳವರು—**ಷಷ್ಠಾಧ್ಯಾಯದ ಶ್ರೀಕೃಷ್ಣಾರ್ಜುನರ ಪ್ರಶ್ನೋತ್ತರ ಪರಾಮರ್ಶದಿಂದಲೇ ಈ ವಿಷಯವು ತಿಳಿದುಬರುವುದು:—

**ಅರ್ಜುನ ಉವಾಚ:—**

**(1) ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ**
**ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಂ ॥**
**ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ।**
**ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ॥**

**ಶ್ರೀಭಗವಾನುವಾಚ:—**

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥**
**ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ।**
**ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಯೋಗತಃ ॥**

—(6. 32-36.)

ಅರ್ಜುನನು ಹೇಳುತ್ತಾನೆ:— ಎಲೈ ಮಧುಸೂದನನೇ! ಸಾಮ್ಯಜ್ಞಾನ ರೂಪವಾದ ಯಾವ ಧ್ಯಾನಯೋಗೋಪಾಯವು ನಿನ್ನಿಂದ ಹೇಳಲ್ಪಟ್ಟಿತೋ ಅಂಥಾ ಯೋಗಕ್ಕೆ, ಮನಸ್ಸು ಚಂಚಲವಾಗಿರುವ ನಿಮಿತ್ತದಿಂದ, ದೃಢವಾದ ಸ್ಥಿತಿಯನ್ನು ಕಾಣೆನು. (ಅದರ ಪ್ರಾಪ್ತಿಯೇ ಅಸಂಭಾವಿತವೆಂದು ಭಾವವು.) ಎಲೈ ಕೃಷ್ಣನೇ! ಮನಸ್ಸು ಅತಿಚಂಚಲವಾದುದು, ದೇಹೇಂದ್ರಿಯಾದಿಗಳಿಗೆ ಬಹಳ ಕ್ಷೋಭಕರವಾದುದು, ಬಲಿಷ್ಠವಾದುದು (ಜಯಿಸುವುದಕ್ಕೆ ಅಶಕ್ಯವು) ಮತ್ತು ದೃಢವಾಗಿರುವುದು (ಅನಾದಿವಿಷಯವಾಸನೆಯಿಂದ ಬೇರೂರಿರುವುದು). ಆಕಾಶದಲ್ಲಿರುವ ಗಾಳಿಯನ್ನು ವಸ್ತ್ರಾದಿಗಳಿಂದ ನಿರೋಧಿಸುವುದು ಹೇಗೆ ಅಶಕ್ಯವೋ ಹಾಗೆಯೇ ಇಂಥಾ ಮನಸ್ಸಿನ ನಿಗ್ರಹವು ಅತ್ಯಂತ ದುಷ್ಕರವಾದುದು. ಶ್ರೀಕೃಷ್ಣನು ಹೇಳುತ್ತಾನೆ:— ಎಲೈ ಮಹಾಬಾಹುವೇ! ಮನಸ್ಸು ಚಂಚಲವು, ನಿಗ್ರಹಿಸುವುದು ಕಷ್ಟವೆಂಬುದರಲ್ಲಿ ಸಂಶಯವಿಲ್ಲ. ಹಾಗಿದ್ದರೂ, ಎಲೈ ಕೌಂತೇಯನೇ! (ಶಾಸ್ತ್ರಶ್ರವಣಮನನಾದಿಗಳಿಂದ ಪರಮಾತ್ಮನ ಉತ್ತಮತ್ವವನ್ನೂ, ವಿಷಯಗಳಲ್ಲಿ ಅಸಾರತೆಯನ್ನೂ ತಿಳಿದು,) ಅಸಾರವಾದ ವಿಷಯಗಳ ಭೋಗತ್ಯಾಗರೂಪವಾದ **ವೈರಾಗ್ಯದಿಂದಲೂ,** ಶಾಸ್ತ್ರಾವರ್ತಿರೂಪವಾದ ಅಥವಾ ಪುನಃ ಪುನಃ ವಿಷಯಗಳಲ್ಲಿ ಸಂಚರಿಸುವ ಮನಸ್ಸನ್ನು ಹಿಂತೆಗೆದುಕೊಂಡು ಬಂದು ಪರಮಾತ್ಮನ ಪಾದಮೂಲದಲ್ಲಿ ಇಡೋಣವೆಂಬ **ಅಭ್ಯಾಸದಿಂದಲೂ** ಅದು ಜಯಿಸಲ್ಪಡುತ್ತದೆ. ಅಭ್ಯಾಸ ವೈರಾಗ್ಯಗಳಿಂದ ಮನೋನಿಗ್ರಹವನ್ನು ಮಾಡದವನಿಗೆ ಧ್ಯಾನಯೋಗಪ್ರಾಪ್ತಿಯು ಅಸಾಧ್ಯವೆಂದು ನನ್ನ ನಿಶ್ಚಯವು. ಅಭ್ಯಾಸಾದಿಗಳಿಂದ ವಶೀಕೃತವಾದ ಮನಸ್ಸಿನಿಂದ ಯತ್ನ ಮಾಡುವವನಿಗೆ ಧ್ಯಾನಯೋಗವು ಆಸನ ಆಹಾರ ನಿಯಾಮಾದ್ಯುಪಾಯಗಳಿಂದ ಹೊಂದುವುದಕ್ಕೆ ಶಕ್ಯವಾಗುವುದು.

ಈ ವಾಕ್ಯಗಳಿಂದ ನಿಶ್ಚಲವಾದ ಧ್ಯಾನಕ್ಕೆ ವೈರಾಗ್ಯವೂ ಅಭ್ಯಾಸವೂ ಕಾರಣವೆಂದು ನಿಶ್ಚಿತವಾಗುವುದು. ಅಭ್ಯಾಸವೆಂದರೆ ಪ್ರತ್ಯಾಹಾರಾದಿ ಯೋಗ ಪ್ರಯತ್ನಗಳ ಪುನಃ ಪುನಃ ಆವರ್ತನವು; ಮತ್ತು ಗುರುಮುಖದಿಂದ ಶ್ರುತವಾದ ಶಾಸ್ತ್ರವನ್ನು ಪುನಃ ಪುನಃ ಆವರ್ತಿಮಾಡುವುದು ಎಂದು ಅರ್ಥವು. ವೈರಾಗ್ಯವೆಂದರೆ ಅಂತಃಕರಣಶುದ್ಧಿಯು, ಎಂದರೆ, ಮನಸ್ಸಿನಲ್ಲಿ ದುರ್ವಿಷಯಗಳ

ಅಭಿಲಾಷಾರಾಹಿತ್ಯವು • ಮತ್ತು ಪರಮಾತ್ಮನಲ್ಲಿ ರತಿಯು. ಈ ರೀತಿಯಾದ ಭಕ್ತಿವಿರಕ್ತಿಗಳಿಂದ ಸಹಿತವಾದ ಉಪಾಯದಿಂದ ಒಡಗೂಡಿದ ವಿಧಿವಿಹಿತ ಮನನ ಜನಿತವಾದ ಅಖಂಡಸ್ಮೃತಿಯೇ ಧ್ಯಾನವು.

ಇಲ್ಲಿಯೂ ನಾವು ಪೂರ್ವದಲ್ಲಿ ನಿರೂಪಿಸಿರುವ ಪ್ರಮೇಯಗಳ ಅನುಸಂಧಾನವು ಅವಶ್ಯಕವು. ವಿಧಿವಿಹಿತವಿಶಿಷ್ಟಮನನವು ಧ್ಯಾನಕ್ಕೆ ಕಾರಣವು ಎಂದು ಹೇಳಿದರೂ ಮನನಜನಿತಭಕ್ತಿಯಿಂದ ಪ್ರಾಪ್ತವಾದ ಶ್ರೀಹರಿಯ ಪ್ರಸಾದವೇ ಧ್ಯಾನೋತ್ಪತ್ತಿಯಲ್ಲಿ ಮುಖ್ಯ ಸಾಧನವೆನ್ನಿಸುವುದು.

ಧ್ಯಾನಕ್ಕೆ ವೈರಾಗ್ಯ ಮತ್ತು ವಾಯುಜಯಾದಿಗಳಿಂದ ಶುದ್ಧವಾದ ಅಂತಃಕರಣವು ಕಾರಣವೆಂಬ ವಿಷಯದಲ್ಲಿ ಶ್ರೀಕೃಷ್ಣನ ಸಮ್ಮತಿಯನ್ನು ಮುಂದೆ ತೋರಿಸುತ್ತೇವೆ. ಶಾಸ್ತ್ರಮನನದಿಂದ ಪ್ರಾಪ್ತವಾದ ನಿಶ್ಚಯಾತ್ಮಕವಾದ ತತ್ವಜ್ಞಾನವು ಅವಶ್ಯಕವೆಂಬುದು ಸಪ್ತಮಾಧ್ಯಾಯದ ಆದ್ಯಶ್ಲೋಕದಿಂದಲೇ ತಿಳಿದು ಬರುವುದು. ಶ್ರೀಕೃಷ್ಣನು ಹೇಳುತ್ತಾನೆ:—

(2) **ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ ಮದಾಶ್ರಯಃ।**
**ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥**
**ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ।**
**ಯದ್ಜ್ಞಾತ್ವಾ ನೇಹ ಭೂಯೋಽನ್ಯದ್ಜ್ಞಾತವ್ಯಮವಶಿಷ್ಯತೇ ॥**
—(7. 1-2.)

ಎಲೈ ಪಾರ್ಥನೇ! ನನ್ನಲ್ಲಿ ಅತ್ಯಂತ ಸ್ನೇಹಯುಕ್ತವಾದ ಮನಸ್ಸುಳ್ಳವನಾಗಿ, ನಾನೇ (ಶ್ರೀಪರಮಾತ್ಮನೇ) ಆಶ್ರಯನು ಎಂದು ತಿಳಿದು ಧ್ಯಾನಯೋಗವನ್ನು ಆಚರಿಸುವವನಾದ ನೀನು, ಸಂದೇಹವಿಲ್ಲದಿರುವಂತೆ ಭಗವತ್ಸ್ವರೂಪವನ್ನು ನೀನು ಹೇಗೆ ತಿಳಿಯುವೆಯೋ ಹಾಗೆ ತತ್ವೋಪದೇಶವನ್ನು ಮಾಡುತ್ತೇನೆ. ಕೇಳು (ಮತ್ತು ಕೇಳಿ ಉಕ್ತಗುಣಗಳ ಜ್ಞಾನಪೂರ್ವಕವಾಗಿ ಭಗವದುಪಾಸನೆಯನ್ನು ಮಾಡು ಎಂದುಭಾವವು). ಎಲೈ ಪಾರ್ಥನೇ! ನಾನು ನಿನಗೆ ವಿಶೇಷ ತಿಳಿಯಲ್ಪಡಬೇಕಾದ ನನ್ನ ಮಹಿಮೆಯಿಂದ ಸಹಿತವಾಗಿ, ಸಾಮಾನ್ಯವಾಗಿ ತಿಳಿಯಬೇಕಾದ ನನ್ನ ಮಹಿಮೆಯನ್ನೂ ಸಹ ಸಂಪೂರ್ಣವಾಗಿ ತಿಳಿಸುತ್ತೇನೆ. ನಾನು ಹೇಳಿದ ತತ್ವವನ್ನು ತಿಳಿದನಂತರ ಪುನಃ ಲೋಕದಲ್ಲಿ ತಿಳಿಯಲ್ಪಡಬೇಕಾದ ಅವಶ್ಯಜ್ಞಾತವ್ಯವಿಷಯವು ಇರುವುದಿಲ್ಲ.

ಈ ವಾಕ್ಯಗಳ ಪರ್ಯಾಲೋಚನೆಯಿಂದ, ಧ್ಯಾನಮಾಡುವವನಿಗೆ ಭಗವನ್ಮಹಿಮಾಜ್ಞಾನವು ಆವಶ್ಯಕವೆಂದೂ, ಅದು ಕೃಷ್ಣನೇ ಆದಿಯಾದಂಥಾ ಸಂಶಯೋಚ್ಛೇದನ ಮಾಡುವುದರಲ್ಲಿ ಸಮರ್ಥರಾದ ಗುರುಗಳ ಮುಖದಿಂದ ಶ್ರವಣ ಮಾಡುವುದರಿಂದ ಬರಬೇಕೆಂದೂ ಮತ್ತು ಶ್ರುತವಾದ ತತ್ತ್ವವು ಮನನ ಪ್ರಭಾವದಿಂದ ನಿಸ್ಸಂಶಯವಾಗುವಂತೆ ಯೋಗಿಯ ಜ್ಞಾನಕ್ಕೆ ವಿಷಯವಾಗಿರಬೇಕೆಂದೂ ಸಿದ್ಧವಾಗುವುದು. ಸಂಶಯವಿದ್ದರೆ ಚಿತ್ತೈಕಾಗ್ರತೆಯು ಬರುವುದಿಲ್ಲ; ಮತ್ತು ಮನಸ್ಸು ಡೋಲಾಯಮಾನವಾಗುವುದಕ್ಕೆ ಆರಂಭವಾಗುವುದು.

ಈ ರೀತಿಯಾಗಿ ಭಗವನ್ಮಹಿಮೋಪದೇಶರೂಪವಾದ ಶ್ರೀಕೃಷ್ಣನ ಪ್ರವೃತ್ತಿಯೇ ಧ್ಯಾನಾದಿಗಳಿಗೆ ಶ್ರವಣಮನನಜನಿತ ತತ್ತ್ವನಿಶ್ಚಯವು ಆವಶ್ಯಕವೆಂದು ತೋರಿಸುವುದು. ಆದುದರಿಂದಲೇ ಶ್ರೀಕೃಷ್ಣನು ಪುನಃ ಪುನಃ ಭಗವನ್ಮಹಿಮೆಯನ್ನು ಉಪದೇಶಮಾಡುತ್ತೇನೆಂದು ಪ್ರತಿಜ್ಞೆಮಾಡಿರುತ್ತಾನೆ ಮತ್ತು ಯುಕ್ತಿಗಳಿಂದ ಸಹಿತವಾಗಿ ಪ್ರತಿಪಾದಿಸಿರುತ್ತಾನೆ:—

**(3) ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ।**
**ಜ್ಞಾನಂ ವಿಜ್ಞಾನಸಹಿತಂ ಯದ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥**
—(9. 1.)

ಎಲೈ ಪಾರ್ಥನೇ! ಯಾವುದನ್ನು ತಿಳಿಯುವುದರಿಂದ ಜ್ಞಾನದ್ವಾರಾ ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದಲ್ಪಡುವಿಯೋ ಅಂಥಾ ಇಗೋ! ಅತಿ ಗೋಪ್ಯವಾದ ಸಾಮಾನ್ಯಜ್ಞಾತವ್ಯತತ್ತ್ವವನ್ನೂ ವಿಶೇಷಜ್ಞಾತವ್ಯತತ್ತ್ವಗಳನ್ನೂ ಅಸೂಯಾರಹಿತನಾದ ನಿನಗೋಸ್ಕರ ಉಪದೇಶಮಾಡುತ್ತೇನೆ.

ಪುನಃ ತಾನು ಹೇಳುವ ತತ್ತ್ವವು ವೇದಸಮ್ಮತವೆಂದೂ, ಬ್ರಹ್ಮಸೂತ್ರೋಕ್ತಯುಕ್ತಿಗಳಿಂದ ನಿರ್ಣಯಮಾಡಲ್ಪಟ್ಟಿರುವುದೆಂದೂ ಶ್ರೀಕೃಷ್ಣನು ಪ್ರಶಂಸನೆ ಮಾಡಿರುತ್ತಾನೆ:—

**(4) ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್।**
**ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತಂ ॥**
—(13. 5.)

ಹೇ ಕೌಂತೇಯ! ನಾನು ನಿರೂಪಿಸುವ ಕ್ಷೇತ್ರಾದಿಸ್ವರೂಪವು ಪೂರ್ವದಲ್ಲಿ ಸರ್ವಜ್ಞರಾದ ಋಷಿಗಳಿಂದ ಬಹುವಿಧವಾಗಿ ನಿರೂಪಿಸಲ್ಪಟ್ಟಿರುವುದು. ನಾಲ್ಕು ವೇದಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದು. ಮತ್ತು ಹೇತು (ಯುಕ್ತಿ, ಅನುಮಾನ, ಕಾರಣ)ಗಳಿಂದ ಸಹಿತವಾದ ಬ್ರಹ್ಮಸೂತ್ರಗಳಿಂದಲೂ ನಿರ್ಣಯಮಾಡಲ್ಪಟ್ಟಿರುವುದು.

ಶ್ರೀಕೃಷ್ಣನ ಈ ವಾಕ್ಯಗಳಿಂದ, ನಿಶ್ಚಿತವಾದ ಶಾಸ್ತ್ರಾರ್ಥವು ಧ್ಯಾನಕ್ಕೆ ಅತ್ಯವಶ್ಯಕವೆಂದು ಸಿದ್ಧವಾಯಿತು. ಶ್ರೀಕೃಷ್ಣನು ತನ್ನ ಮಾತು ಪ್ರಮಾಣವೆನ್ನುವುದರಲ್ಲಿ ಋಷಿಪರಂಪರೆಯಿಂದ ತಾನು ಹೇಳುವ ತತ್ವವು ಉಪದಿಷ್ಟವಾಗಿರುವುದೆಂದೂ, ನಾಲ್ಕು ವೇದಗಳಲ್ಲೂ ಪ್ರತಿಪಾದಿತವಾಗಿರುವುದೆಂದೂ ಮತ್ತು ಬ್ರಹ್ಮಸೂತ್ರದಲ್ಲಿ ಯುಕ್ತಿಗಳಿಂದ ನಿಶ್ಚಿತವಾಗಿರುವುದೆಂದೂ ಮೂರು ಯುಕ್ತಿಗಳನ್ನು ಉಪಯೋಗಿಸಿರುತ್ತಾನೆ.

ಇದರಿಂದ ಬ್ರಹ್ಮಸೂತ್ರೋಕ್ತಯುಕ್ತಿಗಳಿಂದ ತತ್ವನಿರ್ಣಯವನ್ನು ಮಾಡಿಕೊಳ್ಳುವುದು ಕೃಷ್ಣನಿಗೆ ಅತಿಸಮ್ಮತವೆಂದು ಸಿದ್ಧವಾಯಿತು. ನಾನೂ ಸಹ ಅಲ್ಲಿ ನಿರ್ಣೀತವಾದ ಶಾಸ್ತ್ರಾರ್ಥವನ್ನು ಮಾತ್ರ ನಿನಗೆ ಉಪದೇಶಮಾಡುತ್ತೇನೆ ಎಂದು ಅರ್ಜುನನಿಗೆ ಹೇಳಿರುತ್ತಾನಾದುದರಿಂದ ಬ್ರಹ್ಮಸೂತ್ರೋಕ್ತರೀತಿಯಲ್ಲಿ ಮನನವೇ ಸಕಲಸಂಶಯನಿವರ್ತಕವಾದ ಸಮಗ್ರಶಾಸ್ತ್ರಜ್ಞಾನಸಾಧನವೆಂದೂ ಸಿದ್ಧವಾಗುವುದು.

"ಮನನಂ ಯುಕ್ತಿಭಿರನುಚಿಂತನಂ" ಎಂದು ಹೇಳಿರುವಮೇರೆಗೆ ಮನನವೆಂದರೆ ಶ್ರುತವಾದ ವಾಕ್ಯಾರ್ಥವು ಸರಿಯೋ ಅಲ್ಲವೋ ಎಂದು ಸಂಶಯವು ಬಂದರೆ ಸಾಧಕಗಳಾದ ಅನುಮಾನಗಳಿಂದ ತನಗೆ ಉಪದಿಷ್ಟವಾದ ತತ್ವವು ಅತ್ಯಂತ ಪ್ರಾಮಾಣಿಕವೆಂದು ನಿಶ್ಚಯಿಸುವುದು. ಸಂಶಯವು ಧ್ಯಾನಕ್ಕೆ ಪ್ರತಿಬಂಧಕವು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ:—

(5) **ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ।**
**ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥**

—(4—40.)

ಜ್ಞಾನಹೀನನು, ಶ್ರದ್ಧಾವಿರಹಿತನು, ಮತ್ತು ತತ್ವವಿಷಯಕವಾದ ಸಂಶಯಮನಸ್ಕನಾದವನು ನರಕಾದಿಗಳನ್ನು ಹೊಂದುತ್ತಾನೆ, ಸಂಶಯಪೂರ್ಣವಾದ ಮನಸ್ಸುಳ್ಳವನಿಗೆ ಇಹಲೋಕದಲ್ಲಿ ಸುಖವಿಲ್ಲ, ಪರಲೋಕಪ್ರಾಪ್ತಿಯೂ ಇಲ್ಲ.

ಆದುದರಿಂದ, "ಧ್ಯಾನಂ ನಿಶ್ಚಿತತತ್ತ್ವಸ್ಯ" ಎಂದು ಹೇಳಿರುವಂತೆ, ಮನನಮಾಡಿ ತತ್ವನಿಶ್ಚಯದಿಂದ ಸಂಶಯವನ್ನು ಪರಿಹರಿಸಿಕೊಳ್ಳಬೇಕೆಂದು ಶ್ರೀಕೃಷ್ಣನು ವಿಧಿಸುತ್ತಾನೆ:—

(6) **ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾತ್ಮನಃ।**
**ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥**

—(4. 42.)

ಎಲೈ ಅರ್ಜುನನೇ! ತತ್ವಜ್ಞಾನವಿಲ್ಲದಿರುವುದರಿಂದ ಉಂಟಾದ ಮನೋಗತವಾದ ಸಂಶಯವನ್ನು ಪರೋಕ್ಷಜ್ಞಾನವೆಂಬ ಖಡ್ಗದಿಂದ ಛೇದನಮಾಡಿ ಅಪರೋಕ್ಷಜ್ಞಾನೋಪಾಯರೂಪವಾದ ಧ್ಯಾನವನ್ನಾಚರಿಸು. *

ಮನನಜನ್ಯವಾದ ಪರೋಕ್ಷತತ್ವಜ್ಞಾನವು ಧ್ಯಾನಕ್ಕೆ ಅತ್ಯವಶ್ಯಕವಾದುದರಿಂದಲೇ, ಧ್ಯಾನಯೋಗವನ್ನಾಚರಿಸುವವನು "ಜ್ಞಾನವಿಜ್ಞಾನತೃಪ್ತಾತ್ಮಾ" ಎಂದರೆ ಸಾಮಾನ್ಯತತ್ವಜ್ಞಾನ ವಿಶೇಷತತ್ವಜ್ಞಾನಗಳಿಂದ ಪೂರ್ಣವಾದ ಮನಸ್ಸುಳ್ಳವನಾಗಬೇಕು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ.

"ಅಧ್ಯಾತ್ಮಜ್ಞಾನನಿತ್ಯತ್ವಂ ತತ್ವಜ್ಞಾನಾರ್ಥದರ್ಶನಂ" ಎಂದೂ "ಅಧ್ಯಾತ್ಮನಿತ್ಯಾಃ" ಎಂದೂ "ಬುದ್ಧ್ಯಾ ವಿಶುದ್ಧಯಾ ಯುಕ್ತೋ" ಎಂದೂ ಶ್ರೀಕೃಷ್ಣನು ಅಲ್ಲಿ ಅಲ್ಲಿ ಮನನಾದಿಗಳಲ್ಲಿ ಮುಮುಕ್ಷುವು ಆಸಕ್ತನಾಗಿರಬೇಕೆಂದು ಉಪದೇಶಮಾಡಿರುತ್ತಾನೆ. ಶಾಸ್ತ್ರಮನನವು ಮೋಕ್ಷಸಾಧಕವಾದ ಪ್ರಯತ್ನಗಳಲ್ಲಿ ಅತ್ಯಂತ ಪ್ರಶಸ್ತವೆಂಬುದನ್ನು ಶ್ರೀಕೃಷ್ಣನು ಉತ್ಕೃಷ್ಟಫಲಕಥನಪೂರ್ವಕವಾಗಿ ಈ ವಾಕ್ಯದಲ್ಲಿ ಸೂಚಿಸಿರುತ್ತಾನೆ:—

* ಈ ಶ್ಲೋಕಕ್ಕೆ ಮತ್ತೊಂದು ಅರ್ಥವು ಹಿಂದೆಯೇ ನಿರೂಪಿತವಾಗಿರುತ್ತದೆ. ಅಪರೋಕ್ಷಜ್ಞಾನವೆಂಬ ಖಡ್ಗದಿಂದ ಸಕಲಸೂಕ್ಷ್ಮವಾದ ಸಂಶಯಗಳನ್ನೂ ಸಂಹರಿಸಿ ವಿಷ್ಣುಸೇವಾರೂಪವಾದ ಕರ್ಮವನ್ನಾಚರಿಸು ಎಂದಾದರೂ ಅರ್ಥವನ್ನು ಮಾಡಬಹುದು.

(7) **ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ।** —(6.44.)

ಮೋಕ್ಷಸಾಧನಶಾಸ್ತ್ರವನ್ನು ವಿಚಾರಮಾಡುವವನೂ ಕೂಡ ವಿಧಿನಿಷೇಧ ರೂಪವಾದ ಬಂಧವನ್ನು ದಾಟುತ್ತಾನೆ (ಎಂದರೆ ಕ್ರಮವಾಗಿ ಮುಕ್ತನಾಗುತ್ತಾನೆ. ಹೀಗಿರುವಲ್ಲಿ ಮೋಕ್ಷಸಾಧನವನ್ನು ಸಂತತವಾಗಿ ಅನುಷ್ಠಾನಮಾಡುವವನು ಮುಕ್ತನಾಗುವನೆಂದು ಹೇಳುವುದರಲ್ಲಿ ಸಂಶಯವೇನು ಎಂದು ಭಾವವು.)

2. **ಶ್ರವಣವು** ಮನನಕಾರಣವೆಂದು ಪೂರ್ವೋಕ್ತ ಅನೇಕ ವಾಕ್ಯಗಳಿಂದಲೇ ನಿಶ್ಚಿತವಾಗುವುದು, ಶ್ರೀಕೃಷ್ಣನು ಸ್ಪಷ್ಟವಾಗಿಯೂ ಹೇಳಿರುತ್ತಾನೆ:—

(1) **ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥**
—(4.34.)

ಎಲೈ ಪಾರ್ಥನೇ! ಆದುದರಿಂದ ದಂಡಪ್ರಣಾಮ, ಪುನಃಪುನಃ ಪ್ರಶ್ನೆ ಮತ್ತು ಸೇವೆಗಳನ್ನು ಮಾಡಿ ಜ್ಞಾತವ್ಯತತ್ತ್ವವನ್ನು ಜ್ಞಾನಿಗಳಾದ ಗುರುಗಳಿಂದ ಸಂಪಾದಿಸು. ಅಪರೋಕ್ಷಜ್ಞಾನಿಗಳು ನಿನ್ನ ಸೇವಾದಿಗಳಿಂದ ಪ್ರಸನ್ನರಾಗಿ ನಿನಗೆ ತತ್ವಜ್ಞಾನವನ್ನು ಉಪದೇಶಮಾಡುವರು.

(2) **ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ॥**
—(10. 1.)

ಎಲೈ ಮಹಾಬಾಹುವೇ! ಪುನಃ ನಾನು ಹೇಳುವ ಉತ್ತಮವಾಕ್ಯವನ್ನು ಕೇಳು.

ಈ ರೀತಿಯಾದ ಶ್ರೀಕೃಷ್ಣನ ವಚನಪೂರ್ವಕವಾದ ಪ್ರವೃತ್ತಿಯಿಂದಲೂ ಶ್ರವಣವು ಜ್ಞಾನಸಾಧನವೆಂದು ನಿಶ್ಚಿತವಾಗುತ್ತದೆ. ಪುನಃ,

(3) **ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।**
**ಕಚ್ಚಿದಜ್ಞಾನಸಂಮೋಹಃ ಪ್ರಣಷ್ಟಸ್ತೇ ಧನಂಜಯ ॥**
—(18. 72.)

ಎಲೈ ಅರ್ಜುನನೇ! ನನ್ನ ತತ್ತ್ವೋಪದೇಶವು ಏಕಾಗ್ರಮನಸ್ಸಿನಿಂದ ನಿನ್ನಿಂದ ಶ್ರುತವಾಯಿತೇ? ನಿನ್ನ ಅಜ್ಞಾನಮಿಥ್ಯಾಜ್ಞಾನಗಳು ನಿವೃತ್ತವಾದವೇ?

ಎಂಬ ಶ್ರೀಕೃಷ್ಣನ ಪ್ರಶ್ನೆಯಿಂದ ಶ್ರವಣವು ಅಜ್ಞಾನವನ್ನೂ ವಿಪರೀತ ಜ್ಞಾನವನ್ನೂ ನಾಶಮಾಡುವುದರಲ್ಲಿ ಸಮರ್ಥವೆಂದು ತೋರುತ್ತದೆ. ವಸ್ತುತಃ ಶ್ರವಣವು ಅಜ್ಞಾನನಾಶಕವು; ಮನನವು ಸಂಶಯವಿಪರ್ಯಯನಾಶಕವು. ಹೀಗಿರುವುದರಿಂದ ಅರ್ಜುನನಿಗೆ ಶ್ರೀಕೃಷ್ಣನ ಉಪದೇಶದಿಂದ ಶ್ರವಣಮನನ ಗಳೆರಡರ ಫಲವೂ ಆಗಿರುವುದೆಂದು ಸಿದ್ಧವಾಗುವುದು. ಇದು ಯುಕ್ತವೇ. ಶ್ರೀಕೃಷ್ಣನು ವೇದಾಂತಸೂತ್ರೋಕ್ತಹೇತುಗಳ ಉಪನ್ಯಾಸಪೂರ್ವಕವಾಗಿಯೇ ಪದೇಪದೇ ಶಾಸ್ತ್ರಾರ್ಥವನ್ನು ನಿರೂಪಣೆಮಾಡಿರುವನು. ಆದುದರಿಂದ ಗೀತೆಯು ತತ್ವನಿರೂಪಕವಾದ ಗ್ರಂಥವಾಗಿರುವುದಲ್ಲದೆ ಬ್ರಹ್ಮಮೀಮಾಂಸಾ ಶಾಸ್ತ್ರದಂತೆ ಯುಕ್ತಿಪ್ರತಿಪಾದಕವಾಗಿಯೂ ಇರುವುದು.

3. ಶ್ರವಣ ಮನನಗಳು ಧ್ಯಾನಕ್ಕೆ ಸಾಕ್ಷಾತ್ಕಾರಣವೆಂಬಲ್ಲಿ ಯುಕ್ತಿಯೂ ಇರುವುದು. ಚಿತ್ತೈಕಾಗ್ರತೆಯಿಂದ ನಿರಂತರ ಮಾನಸಿಕಭಗವನ್ಮೂರ್ತ್ಯವಲೋಕನವು ಧ್ಯಾನವು. ಅದು ಭಗವದ್ಭಕ್ತಿರಹಿತವಾದರೆ ಅಸಾಧ್ಯವು ಮತ್ತು "ಧ್ಯಾನಂ ಭಕ್ತಿಸಮನ್ವಿತಃ" ಇತ್ಯಾದಿ ಗೀತಾವಾಕ್ಯಗಳ ಬಲದಿಂದ ಭಕ್ತಿಪೂರ್ವಕವಾಗಿದ್ದರೇನೇ ಫಲಪ್ರದವಾಗುವುದು. ಅಂಥಾ ಭಗವದ್ಭಕ್ತಿಯು ಮಾಹಾತ್ಮ್ಯ ಜ್ಞಾನದಿಂದಲೇ ಬರಬೇಕು. ಭಗವನ್ಮಹಿಮೆಯ ಜ್ಞಾನವು ಭಗವಂತನನ್ನು ಪ್ರತಿಪಾದನೆಮಾಡುವ ವೇದಗಳಿಂದಲೂ ತದನುಸಾರಿಯಾದ ಗ್ರಂಥಗಳ ಶ್ರವಣದಿಂದಲೂ ಬರುವುದು. "ವೇದೈಶ್ಚ ಸರ್ವೈರಹಮೇವ ವೇದ್ಯಃ" ಎಂದು ಶ್ರೀಕೃಷ್ಣನೇ ಹೇಳಿರುತ್ತಾನಷ್ಟೆ! ವೇದಾದಿಗಳಿಂದ ಶ್ರುತವಾದ ಅರ್ಥದಲ್ಲಿ (ವಿಷ್ಣುವೇ ಸರ್ವೋತ್ತಮನೆಂಬ ವಿಷಯದಲ್ಲಿ) ಅದ್ವೈತಾದಿ ತಾಮಸ ಶಾಸ್ತ್ರಗಳಿಂದ ಆಹಿತವಾದ ಸಂಶಯವು ಉಪಕ್ರಮಾದಿ ಲಿಂಗಗಳ ಪರ್ಯಾಲೋಚನೆಯಿಂದಲೂ, ವೇದಾದಿಗಳಿಗೇ ಪಾಶುಪತಾದಿ ಶಾಸ್ತ್ರಾಪೇಕ್ಷಯಾ ಪ್ರಾಬಲ್ಯಸಾಧಕವಾದ ಹೇತುಗಳ ಪರ್ಯಾಲೋಚನೆಯಿಂದಲೂ ನಿವೃತ್ತವಾಗಿ "ವ್ಯವಸಾಯಾತ್ಮಿಕಾ ಬುದ್ಧಿಃ" ಎಂದರೆ ಮೋಕ್ಷೋಪಯೋಗಿಯಾದ ಸತ್ತತ್ವ ನಿಶ್ಚಯವು ಉಂಟಾಗುವುದು. ಇದೇ ಮನನವು. ಇದರಿಂದ ಭಗವಂತನ ಮಹಿಮೆಯು ನಿಶ್ಚಿತವಾಗಿ ಭಕ್ತಿಯು ವೃದ್ಧಿಯಾಗುವುದರಿಂದ ಹರಿಪ್ರಸಾದದಿಂದ ಮಾನಸಿಕಧ್ಯಾನವು ಉತ್ಪನ್ನವಾಗುವುದು.

4. ಶ್ರವಣಮನನಗಳು ವಿಧ್ಯುಕ್ತವಾಗಿ ನಡೆದರೇನೇ ಉತ್ಪನ್ನವಾದ ಪರೋಕ್ಷಜ್ಞಾನವು ಮೋಕ್ಷೋಪಯೋಗಿಯಾಗುವುದು. "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ" ಇತ್ಯಾದಿ ವಿಧಿವಾಕ್ಯಗಳ ಬಲದಿಂದಲೂ, ಹದಿನೆಂಟನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಮಾಡಿರುವ ಗೀತೋಪದೇಶಕ್ಕೆ ಅರ್ಹರಾದ ಅಧಿಕಾರಿಗಳ ವರ್ಣನೆಯಿಂದಲೂ ಈ ವಿಷಯವು ಸಿದ್ಧವಾಗುವುದು.

5. ಸಾತ್ವಿಕಜ್ಞಾನವನ್ನು ಶ್ರೀಕೃಷ್ಣನು ನಿರೂಪಿಸಿರುತ್ತಾನೆ:—

(1) **ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ।**
**ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ವಿಕಂ ॥**
—(18.20.)

ಪರಸ್ಪರ ಭಿನ್ನವಾದ ಅನಂತ ಪ್ರಾಣಿಗಳಲ್ಲಿಯೂ, ಜಡವಸ್ತುಗಳಲ್ಲಿಯೂ ಒಬ್ಬನೇ ನಿತ್ಯನಾದ, ಅಧಿಷ್ಠಾನವು ನಾಶಹೊಂದಿದರೂ ತಾನು ನಾಶಹೊಂದದ, ತನ್ನ ಅನಂತ ರೂಪಗಳಲ್ಲಿ ಪರಸ್ಪರ ಭೇದವಿಲ್ಲದ ಪರಮಾತ್ಮನು ಇರುವನೆಂದು ಯಾವ ಜ್ಞಾನದಿಂದ ತಿಳಿಯುವನೋ ಅದು ಸಾತ್ವಿಕಜ್ಞಾನವು.

ಶ್ರವಣಮನನಗಳಿಂದ ಬರುವ ಪರಮಾತ್ಮವಿಷಯಕವಾದ ಸಾಮಾನ್ಯಜ್ಞಾನವು ಮತ್ತು ವಿಶೇಷಜ್ಞಾನವೂ ಇವುಗಳ ಪ್ರಕಾರವೂ ಸಪ್ತಮ ಮತ್ತು ನವಮೋಧ್ಯಾಯಗಳಲ್ಲಿಯೂ, ದ್ವಿತೀಯ ಮತ್ತು ತ್ರಯೋದಶಾಧ್ಯಾಯಗಳಲ್ಲಿಯೂ ಸಹ ನಿರೂಪಿತವಾಗಿರುವುದು. ಶ್ರೀಕೃಷ್ಣನ ಅಭಿಪ್ರಾಯಾನುಸಾರವಾದ ನಿಜತತ್ವವನ್ನು ಸಂಕ್ಷೇಪವಾಗಿ ಉಪಪಾದಿಸಿ ತೋರಿಸಿರುತ್ತೇವೆ. ಮುಂದೆ ಇನ್ನೂ ಸ್ವಲ್ಪ ವಿಶದವಾಗಿ ನಿರೂಪಿಸುವೆವು.

---

## 7. ಏಳನೆಯ ಅಂಶವು.

### ಧ್ಯಾನಕಾರಣಸಾಮಗ್ರೀವಿಮರ್ಶೆಯು—ವೈರಾಗ್ಯವು.

1. **ಶ್ರೀಶ್ರೀಗಳವರು—** ಧ್ಯಾನಕ್ಕೆ ಪ್ರಧಾನಾಂಗರೂಪವಾದ ಶ್ರವಣಮನನಗಳು ನಮ್ಮಿಂದ ನಿರೂಪಿತವಾದವು. ಇನ್ನು ಅಂತಃಕರಣಶುದ್ಧಿ

ಮನೋಜಯ, ವೈರಾಗ್ಯ, ಸಂನ್ಯಾಸ, ಮನಃಪ್ರಸಾದಾದಿ ಅನೇಕ ನಾಮ ಗಳಿಂದ ಕರೆಯಲ್ಪಡುವ ಅವಶ್ಯವಾದ ದ್ವಿತೀಯಾಂಗದ ಸ್ವರೂಪವನ್ನು ಅದರ ಉತ್ಪತ್ತಿಕಾರಣದಿಂದ ಸಹಿತವಾಗಿ ನಿರೂಪಿಸುತ್ತೇವೆ.

ಸೂಕ್ಷ್ಮವಾಗಿ ವಿಚಾರಮಾಡಿದರೆ ಭಕ್ತಿವಿರಕ್ತಿಗಳಿಂದ ಸಹಿತವಾದ ಚಿತ್ತ ವೃತ್ತಿಯೇ ಶುದ್ಧಾಂತಃಕರಣವೆನ್ನಿಸುವುದು. ಇದರಿಂದ ಸಮನ್ವಿತವಾದ ಸಂತತಭಗವನ್ಮಹಿಮಾಚಿಂತನೆಯೇ ಅಪರೋಕ್ಷಜ್ಞಾನಜನಕವಾದ ಧ್ಯಾನವು.

**ಪ್ರಶ್ನೆ** — ಸ್ವಾಮಿ! ಇಂಥಾ ಶುದ್ಧಾಂತಃಕರಣವೂ ಸಹ ಶ್ರವಣ ಮನನಗಳಿಂದಲೇ ಬರಬಹುದಷ್ಟೆ? ಶ್ರವಣಮನನಗಳಿಂದ ಪರಮಾತ್ಮನ ಸರ್ವೋತ್ತಮತ್ವವು ತಿಳಿದಮೇಲೆ, ಜಗತ್ತು ಅಸಾರವು, ಅನಿತ್ಯವು ಎಂಬ ಜ್ಞಾ ನವೂ ಸಹಜವಾಗಿಯೇ ಶಾಸ್ತ್ರಗಳಿಂದ ಹುಟ್ಟುವುದು. ಅದರಿಂದ ಪ್ರಪಂಚ ದಲ್ಲಿ ವಿರಕ್ತಿಯೂ, ಪರಬ್ರಹ್ಮನಲ್ಲಿ ಪ್ರೀತಿಯೂ ಉದಯಿಸುವುವು. ಯದ್ಯಪಿ ಇಂದ್ರಿಯನಿಗ್ರಹವು, ರಾಗದ್ವೇಷರಾಹಿತ್ಯಾದಿಗಳು, ನಿಷ್ಕಾಮಕರ್ಮಾನು ಷ್ಠಾನವೂ ಸಹ ಚಿತ್ತಶುದ್ಧಿಗೆ ಕಾರಣವಾಗುವುವು. ಆದರೆ ಇವುಗಳೆಲ್ಲವೂ ಶ್ರವಣಮನನಗಳಿಂದಲೇ ಬರುವುವು. ಶ್ರವಣಮನನಗಳಿಂದ ಪರಮಾತ್ಮ ನೊಬ್ಬನೇ ಸರ್ವಶ್ರೇಷ್ಠನಾದ ನಿತ್ಯಸುಖಪ್ರದನಾದ ಪರಬ್ರಹ್ಮನೆಂದೂ ಲೌಕಿಕ ವಿಷಯಗಳು ಪ್ರತಿಬಂಧಕಗಳು ಮತ್ತು ಪರಮಾತ್ಮನ ಪ್ರಾಪ್ತಿಗೆ ವಿರೋಧಿಗ ಳೆಂದೂ ತಿಳಿದಮೇಲೆ ಯಾವನು ತಾನೇ ವಿಷರೂಪವಾದ ಶಬ್ದಸ್ಪರ್ಶಾದಿಗಳನ್ನು ಆಕಾಂಕ್ಷೆಮಾಡುವನು? ಮತ್ತು ಯಾವ ಪ್ರಾಜ್ಞನು ತನ್ನ ಇಂದ್ರಿಯಗಳಿಂದ ಬಂಧಕವಾದುದೆಂದು ಜ್ಞಾತವಾಗಿರುವ ವಿಷಯಭೋಗಗಳನ್ನು ಮಾಡು ವನು? ಆದುದರಿಂದ ರಾಗದ್ವೇಷರಾಹಿತ್ಯರೂಪವಾದ ಸಂನ್ಯಾಸವೂ, ಇಂದ್ರಿಯ ನಿಗ್ರಹವೂ ಸಹ ಶ್ರವಣಮನನಗಳಿಂದಲೇ ಬರುವುವು. ಹೀಗೆಯೇ ನಿಷ್ಕಾಮವಾದ ಭಗವದಾರಾಧನೆಯಲ್ಲಿ ರತಿಯೂ ಕೂಡ ಶ್ರವಣಮನನಗಳಿಂದ ಪರಾಪರತತ್ವ ಜ್ಞಾನವುಳ್ಳವನಿಗೆ ಸಹಜವಾಗಿಯೇ ಬರುವುದು. ಆದುದರಿಂದ ಸರ್ವಪ್ರಕಾರ ದಲ್ಲೂ ಶ್ರವಣಮನನಗಳು ಭಕ್ತಿಗೆ ಕಾರಣವಾಗುವುವು; ಭಕ್ತಿಯು ಧ್ಯಾನ ಜನಕವಾದ ಹರಿಪ್ರಸಾದಕ್ಕೆ ಕಾರಣವಾಗುವುದು; ಅದರಿಂದ ಧ್ಯಾನವು ಉತ್ಪ ನ್ನವಾಗುವುದು. ಹೀಗೆ ಹೇಳಿದರೆ ತಮ್ಮ ಉಪಪಾದನೆಗೂ ಅವಿರುದ್ಧವೇ ಆಗಿರು ವುದು, "ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ" ಎಂಬ ಶ್ರುತಿಗೂ

ಅನುಕೂಲವಾಗಿರುವುದು. ಹೀಗಿರುವಲ್ಲಿ ಧ್ಯಾನೈಕದಳವಾದ ಚಿತ್ತಶುದ್ಧಿಗೆ ಶ್ರವಣಮನನಾತಿರಿಕ್ತವಾದ ಬೇರೆ ಕಾರಣಾನ್ವೇಷಣಾರ್ಥವಾಗಿ ತಾವು ವಿಚಾರ ವನ್ನು ಆರಂಭಿಸಿದುದು ಏತಕ್ಕೆ? ತಮ್ಮ ಉಪಪಾದನೆಯನ್ನು ನೋಡಿದರೆ ಶ್ರವಣ ಮನನವೂ, ಚಿತ್ತಶುದ್ಧಿಗೆ ಕಾರಣವಾದ ಇಂದ್ರಿಯಜಯಾದಿ ಕೆಲವು ಸಾಮ ಗ್ರಿಗಳೂ ಸೇರಿ ಸಮುಚ್ಚಿತವಾಗಿ ಧ್ಯಾನಕ್ಕೆ ಕಾರಣವೆಂದು ತೋರಿಬರುವುದು.

**ಉತ್ತರ—ಶ್ರೀಶ್ರೀಗಳವರು—**ಹೌದು! ನಮ್ಮ ಅಭಿಪ್ರಾಯವು ಸ್ವಲ್ಪ ಹಾ ಗೆಯೇ ಇರುವುದು. ಆದರೂ ನಿಮ್ಮ ವಾಕ್ಯಾರ್ಥವು ಸರ್ವಥಾ ನಿರಾಕರಣೀಯ ವಾದುದಲ್ಲ. ಅರ್ಧಾಂಗೀಕಾರದಿಂದ ನಿಮ್ಮ ಪೂರ್ವಪಕ್ಷವನ್ನು ಪರಿಹರಿಸುವೆವು. 1. ಧ್ಯಾನಕಾರಣೈಕದೇಶವಾದ ಅಂತಃಕರಣಶುದ್ಧಿಗೆ ಅಥವಾ ಮನಃ ಪ್ರಸಾ ದಕ್ಕೆ ಕಾಮಾದಿವರ್ಜನರೂಪವಾದ ಸಂನ್ಯಾಸವು, ಇಂದ್ರಿಯ ನಿಗ್ರಹವು, ಮತ್ತು ಕೆಲವು ಚೇತನರ ವಿವಕ್ಷೆಯಿಂದ ವಾಯುಜಯಾದಿ ರೂಪವಾದ ಪ್ರಯತ್ನಾ ಭ್ಯಾಸವು ಮತ್ತು ದ್ವಂದ್ವಸಹನವೇ ಮುಂತಾದ ಕೆಲವು ಧರ್ಮಗಳೂ ಸಹ ಕಾರಣವೆನ್ನಿಸುವುವು. ಯದ್ಯಪಿ ಇವುಗಳೆಲ್ಲಾ ಮನನದಿಂದಲೇ ಹುಟ್ಟುವು ವೆಂದು ನೀವು ಹೇಳಿದಂತೆಯೇ ಒಪ್ಪಿಕೊಂಡರೂ, ಮನನದಿಂದ ಈ ಧರ್ಮಗಳು ಮನಸ್ಸಿನಲ್ಲಿ ಉತ್ಪನ್ನವಾಗಿ ಅನಂತರ ಮನನವು ನಿಂತುಹೋಗಿ, ಮುಂದೆ ಇಂದ್ರಿ ಯಜಯಾದಿಗಳಿಂದ ಉತ್ಪನ್ನವಾದ ನಿರ್ಮಲಚಿತ್ತವೇ ಧ್ಯಾನಕ್ಕೆ ಸಾಕ್ಷಾತ್ಕಾ ರಣವೆಂದು ಹೇಳುವುದು ಕೇವಲ ಅಪ್ರಾಮಾಣಿಕವೂ, ಪ್ರಮಾಣವಿರುದ್ಧವೂ ಆಗುವುದು. ಮತ್ತೇನೆಂದರೆ ಭಗವದ್ಗುಣಗಳ ಮನನವೂ ಇಂದ್ರಿಯಜಯಾದಿ ಗುಣಗಳೂ ಸಮುಚ್ಚಿತವಾಗಿ ಇದ್ದೇ ಅಪರೋಕ್ಷಜ್ಞಾನಹೇತುವಾದ ಭಕ್ತಿ ಸಹಿತವಾದ ವಿಶಿಷ್ಟಧ್ಯಾನಕ್ಕೆ ಕಾರಣವಾಗುವುವು; ಮನನವು ಇಂದ್ರಿಯ ಜಯಾದಿಗಳನ್ನು ಹುಟ್ಟಿಸಿ ತಾನು ನಿವೃತ್ತವಾಗುವುದಿಲ್ಲ. ಮನನವು ಸಾಕ್ಷಾತ್ ಧ್ಯಾನಕ್ಕೆ ಕಾರಣವಾಗುವುದು. ಇಂದ್ರಿಯಜಯ, ರಾಗದ್ವೇಷಾದಿರಾಹಿತ್ಯ ರೂಪವಾದ ಸಂನ್ಯಾಸವು, ಪ್ರತ್ಯಾಹಾರಾದಿಪ್ರಯತ್ನರೂಪ ಅಭ್ಯಾಸಗಳು, ಸ್ವಲ್ಪ ನಿಷ್ಕಾಮಕರ್ಮಾಚರಣೆಯು ಇತ್ಯಾದಿಗಳೂ ಸಹ ಮನನದಂತೆಯೇ ಸಾಕ್ಷಾತ್ ಧ್ಯಾನಕ್ಕೆ ಕಾರಣವಾಗುವುವು. ಈ ಧರ್ಮಗಳೂ ಮತ್ತು ಮನ ನವೂ ಪ್ರತ್ಯೇಕವಾಗಿ ಧ್ಯಾನಕ್ಕೆ ಸಾಕ್ಷಾತ್ಕಾರಣವಾಗುವುವೆಂಬುದು

ಶ್ರೀಕೃಷ್ಣನ ಉಪಪಾದನೆಯಿಂದಲೇ ತಿಳಿದುಬರುವದು. ಶ್ರೀಕೃಷ್ಣನು ಹೇಳುತ್ತಾನೆ. —

(1) **ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥
ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತಿ ॥
ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ ॥**

—(2. 64-66.)

ರಾಗದ್ವೇಷಗಳಿಂದ ರಹಿತವಾದ ಮನಸ್ಸಿನಿಂದ ಪ್ರೇರಿತವಾದ ಅತಏವ ಸ್ವಾಧೀನವಾದ ಇಂದ್ರಿಯಗಳಿಂದ ಕೇವಲ ವಿಧಿವಿಹಿತವಾದ ದೇಹಧಾರಣಮಾತ್ರೋಪಯೋಗಿಯಾದ ವಿಷಯಗಳನ್ನು ಅನುಭವಿಸುವಂಥಾ ಜಿತಮನಸ್ಸುಳ್ಳವನು **ಮನಃಪ್ರಸಾದವನ್ನು** (ಎಂದರೆ ಪ್ರಯತ್ನವಿಲ್ಲದೇನೇ ದುರ್ವಿಷಯಗಳಲ್ಲಿ ಮನಸ್ಸು ಹೋಗದಿರುವ ಸ್ಥಿತಿಯನ್ನು) ಹೊಂದುತ್ತಾನೆ. ಇಂಥಾ ಮನಃಪ್ರಸಾದವು ಬಂದರೆ ಶೀಘ್ರದಲ್ಲಿಯೇ (ಮನನಜನಿತ ಧ್ಯಾನದಿಂದಲೇ) ಅಪರೋಕ್ಷ ಜ್ಞಾನವು ಪ್ರಾಪ್ತವಾಗುವುದು. ಅದರಿಂದ ಸಕಲ ದುಃಖಪರಿಹಾರವೂ ಆಗುತ್ತದೆ. ಇಂದ್ರಿಯಜಯ ಮತ್ತು ಮನೋನಿಗ್ರಹಾದಿಜನಿತಚಿತ್ತನಿರೋಧರೂಪವಾದ ಉಪಾಯರಹಿತನಾದವನಿಗೆ **ಭಾವನಾ** ಎಂದರೆ ಧ್ಯಾನವು ಉಂಟಾಗುವುದಿಲ್ಲ. ಅಭಾವಯತಃ ಬುದ್ಧಿರ್ನಾಸ್ತಿ=ಧ್ಯಾನರಹಿತನಾದವನಿಗೆ ಅಪರೋಕ್ಷಜ್ಞಾನವು ಉಂಟಾಗಲಾರದು. *

ಈ ವಚನಗಳಿಂದ ಚಿತ್ತನಿರೋಧವೂ ಮನನದಂತೆ ಸಾಕ್ಷಾತ್ ಧ್ಯಾನಕಾರಣವೆಂದೂ ಮತ್ತು ರಾಗದ್ವೇಷಾಭಾವ, ಇಂದ್ರಿಯಜಯ, ಮನೋಜಯಾದಿ ನಿಯತಕಾರಣಗಳಿಂದ ಅದು ಹುಟ್ಟುವುದೆಂದೂ ಸಿದ್ಧವಾಗುವುದು.

---

* **ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ** ॥ ಎಂಬ ಶ್ಲೋಕದಲ್ಲಿ ಅಯುಕ್ತಸ್ಯ ಬುದ್ಧಿರ್ನಾಸ್ತಿ ಎಂದು ಹೇಳಿ ಅದಕ್ಕೆ ಕಾರಣವೇನೆಂದು ಆಶಂಕೆ ಬಂದರೆ ಅಯುಕ್ತಸ್ಯ ಭಾವನಾ ನಾಸ್ತಿ ಎಂದು ಪರಿಹಾರವು ಉತ್ತರಾರ್ಧದಲ್ಲಿ ಹೇಳಲ್ಪಟ್ಟಿರುವುದು. ಆದುದರಿಂದ ಸಮಗ್ರಯೋಜನೆಯು "ಅಯುಕ್ತಸ್ಯ ಭಾವನಾ ನಾಸ್ತಿ; ಅಭಾವಯತಃ ಬುದ್ಧಿರ್ನಾಸ್ತಿ" ಎಂದು ಆಗುವುದು.

**(2) .... .... .... ಯೋಗಂ ಯುಂಜನ್ ಮದಾಶ್ರಯಃ ।**
**ಅಸಂಶಯಂ ಸಮಗ್ರಂ ಮಾಂ ಯಥಾಜ್ಞಾಸ್ಯಸಿ ತಚ್ಛೃಣು ॥** —(7. 1.)

**(3) ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಂ ॥** —(13. 11.)

ಇತ್ಯಾದಿ ವಾಕ್ಯಗಳಿಂದ ಮನನಜನಿತವಾದ ಪರಾಪರತತ್ತ್ವಜ್ಞಾನವೂ ಧ್ಯಾನಕ್ಕೆ ಅವಶ್ಯಕವೆಂದು ನಿಶ್ಚಿತವಾಗುವುದು.

ಮನಃಪ್ರಸಾದವು ಮನನವನ್ನು ಉತ್ಪತ್ತಿಮಾಡಿ ತಾನು ಸ್ವಯಂ ನಿವೃತ್ತವಾಗುವುದೆಂದು ಹೇಳಲು ಆಗುವುದಿಲ್ಲ. ಏತಕ್ಕೆಂದರೆ ಅಂತಃಕರಣ ಪ್ರಸಾದರಹಿತವಾದ ಕೇವಲ ಮನನವು ಧ್ಯಾನಜನಕವಾಗಲಾರದು. ಆದುದರಿಂದ ಇಂದ್ರಿಯ ಜಯಾದಿಗಳೂ, ಮನನವೂ, ಉಭಯವೂ ಸಮುಚ್ಚಿತವಾಗಿಯೇ ಧ್ಯಾನಜನಕವು ಎಂದು ಅಂಗೀಕರಿಸಬೇಕು.

ಶ್ರೀಕೃಷ್ಣನ ಹದಿನೈದನೆಯ ಅಧ್ಯಾಯದ ಶ್ಲೋಕವು ಈ ವಿಷಯವನ್ನು ಸ್ಫುಟವಾಗಿ ವಿವರಿಸುವುದು :—

**(4) ಅಶ್ವತ್ಥಮೇನಂ ಸುವಿರೂಢಮೂಲಂ ಅಸಂಗಶಸ್ತ್ರೇಣ ದೃಢೇನ ಛಿತ್ವಾ।**
**ತತಃ ಪರಂ ತತ್ಪರಿಮಾರ್ಗಿತವ್ಯಂ.... .... .... .... ॥** —(15. 3-4.)

ಅಶ್ವತ್ಥವೆಂಬ ಜಗದ್ವೃಕ್ಷವನ್ನು ವೈರಾಗ್ಯವೆಂಬ ಶಸ್ತ್ರದಿಂದ ಸಹಿತವಾದ ಮನನಜನಿತ ದೃಢವಾದ ತತ್ತ್ವಜ್ಞಾನವೆಂಬ ಖಡ್ಗದಿಂದ ಛೇದನಮಾಡಿ ಎಂದರೆ ಚೆನ್ನಾಗಿ ತಿಳಿದುಕೊಂಡು ಪರಮಾತ್ಮನನ್ನು ಹುಡುಕಬೇಕು.

ಇದರಿಂದಲೂ ವೈರಾಗ್ಯಾದಿಗಳೂ ಮನನವೂ ಎರಡೂ ಧ್ಯಾನಕ್ಕೆ ಕಾರಣವೆಂದು ಸಿದ್ಧವಾಗುವುದು.

2. ಪರಂತು ನೀವು ಹೇಳಿದಂತೆ ಧ್ಯಾನಕಾರಣವಾದ ಮನಃಪ್ರಸಾದಕ್ಕೆ ಬೇಕಾದ ಇಂದ್ರಿಯಜಯ, ಪ್ರತ್ಯಾಹಾರಾದಿ ಅಭ್ಯಾಸಗಳೆಲ್ಲವೂ ಮನನದಿಂದಲೇ ಹುಟ್ಟುವುವೆಂದು ಹೇಳುವುದು ಸ್ವಲ್ಪ ಕಠಿಣವಾಗುವುದು. ವಿಷಯಸ್ನೇಹರಾಹಿತ್ಯಾದಿ ಕೆಲವು ಧರ್ಮಗಳೇನೋ ಮನನಪ್ರಭಾವದಿಂದ ಬರುವುವು ಆದರೂ ನಿರಾಹಾರತ್ವ, ಪ್ರತ್ಯಾಹಾರಾದಿ ಯತ್ನಗಳೇ ಮುಂತಾದ ಕೆಲವು

ಧರ್ಮಗಳು ಕೇವಲ ಮನನದಿಂದ ಹುಟ್ಟದೇ ವಿಶೇಷವಾದ ಕರ್ಮೇಂದ್ರಿಯ ಗಳ ಪ್ರವೃತ್ತಿಯನ್ನೂ ಅಪೇಕ್ಷಿಸುವುವು. ಉಪೋಷ್ಯಗಳಿಂದಲೂ, ಪ್ರತ್ಯಾಹಾರ ಗಳಿಂದಲೂ ಆಗುವ ಮನಶ್ಶುದ್ಧಿಗೂ ಮನನವೇ ಸರ್ವಪ್ರಕಾರದಿಂದಲೂ ಕಾರ ಣವು ಎಂದು ಹೇಳುವುದು ಸ್ವಲ್ಪ ಸರಿಯಾಗಿ ತೋರುವುದಿಲ್ಲ. ಬಹು ಮುಷ್ಕರ ಮಾಡಿದರೆ ನಾವು ಅದಕ್ಕೂ ಒಪ್ಪಿಬಿಡುವೆವು. ಏತಕ್ಕೆಂದರೆ ಭಗವದುತ್ಕರ್ಷ ಜ್ಞಾನಪೂರ್ವಕವಾಗಿ ಪುನಃ ಪುನಃ ಮನಸ್ಸನ್ನು ಪರಮಾತ್ಮನಲ್ಲಿ ಯೋಜಿಸು ವುದೇ ಇಂದ್ರಿಯಜಯಾದಿಗಳಿಗೆ ಪ್ರಧಾನಕಾರಣವೆಂದು ಶಾಸ್ತ್ರನಿಶ್ಚಿತಾರ್ಥವು. "ಜ್ಞಾನನಿರ್ಧೂತಕಲ್ಮಷಾಃ" ಇತ್ಯಾದಿ ವಾಕ್ಯಗಳೂ ಈ ವಿಷಯದಲ್ಲಿ ಸಂ ವಾದರೂಪವಾಗಿರುವುವು. ಆದುದರಿಂದ ಸಾಕ್ಷಾತ್ತಾಗಿಯೋ ಅಥವಾ ಪರಂ ಪರೆಯಿಂದಲೋ ಮನಃಪ್ರಸಾದಕಾರಣವಾದ ಸರ್ವಧರ್ಮಗಳೂ ಮನನದಿಂ ದಲೇ ಬಂದರೂ ಸಹ ಮನನವು ಪ್ರಧಾನಕಾರಣವು; ಇಂದ್ರಿಯಜಯ ಭಕ್ತಿವಿರ ಕ್ತ್ಯಾದಿಗಳು ಅಪ್ರಧಾನಕಾರಣವು ಎಂದು ಏರ್ಪಟ್ಟಿತು. ಅಂತೂ ಎರಡೂ ಮಿಳಿತವಾಗಿಯೇ ಧ್ಯಾನಕ್ಕೆ ಕಾರಣವಾಗುವುವು.

3. ಆದರೆ ಸೂಕ್ಷ್ಮವಾದ ತತ್ತ್ವಾರ್ಥವೇನೆಂದರೆ, ಮನನವೂ ಭಕ್ತಿವಿರಕ್ತಿ ರೂಪವಾದ ಚಿತ್ತಪ್ರಸಾದವೂ ಪ್ರತ್ಯೇಕವಾಗಿ, ಪರಸ್ಪರ ಪ್ರಯೋಜ್ಯಪ್ರಯೋ ಜಕಭಾವರಹಿತವಾಗಿ, ಧ್ಯಾನಕಾರಣಗಳೆಂದು ನಮ್ಮ ಆಶಯವಲ್ಲ. ಮತ್ತೇನೆಂ ದರೆ ಸ್ವಲ್ಪ ಮನನದಿಂದ ವಿಷ್ಣುವೇ ಸರ್ವೋತ್ತಮನೆಂಬ ಸಾಮಾನ್ಯನಿಶ್ಚಯವು ಹುಟ್ಟಿದರೆ ಅಧಿಕಾರಿಯು ಸ್ವಲ್ಪ ವಿಷಯಗಳ ಭೋಗದಲ್ಲಿ ಸಂಕೋಚವನ್ನು ಮಾಡುವನು ಮತ್ತು ಹರಿಯಲ್ಲಿ ಪ್ರೀತಿಮಾಡುವನು. ಆ ಪ್ರೀತಿಯಿಂದ ಪ್ರೇರಿತನಾಗಿ ಪುನಃ ವಿಷಯಭೋಗಗಳ ಸಂಕೋಚವನ್ನು ಮಾಡಿ ಹೆಚ್ಚು ಮನನಕಾರ್ಯದಲ್ಲಿ ಆಸಕ್ತನಾಗುವನು. ಈ ಮನನದಿಂದ ಅಪನ ವಿಷ್ಣೂ ತ್ಕರ್ಷನಿಶ್ಚಯವು ದೃಢವಾದನಂತರ ಅವನು ಪರಮಾತ್ಮನಲ್ಲಿ ಇನ್ನೂ ಅಧಿಕ ಪ್ರೀತಿಯನ್ನು ಮಾಡಿ ವಿಷಯಭೋಗವನ್ನು ಕೇವಲ ದೇಹಧಾರಣಪೂರ್ತಿಯಾ ಗುವಷ್ಟು ಮಾಡುತ್ತಾ ಸಂತತ ಪರಮಾತ್ಮಚಿಂತನೆಯಲ್ಲಿ ಆಸಕ್ತನಾಗುವನು. ಹೀಗೆಯೇ ಜ್ಞಾನಭಕ್ತಿವಿರಕ್ತಿಗಳು ಪರಸ್ಪರ ಕಾರ್ಯಕಾರಣಭಾವಾಪನ್ನವಾಗಿ ಒಂದರಿಂದ ಒಂದು ವೃದ್ಧಿಯಾಗುತ್ತಾ ಧ್ಯಾನದಲ್ಲಿ ಮೂರೂ (ಅಥವಾ ಭಕ್ತಿ

ವಿರಕ್ತಿಗಳೆರಡನ್ನೂ ಒಂದು ಪದಾರ್ಥವಾಗಿ ಗಣನೆ ಮಾಡಿದರೆ ಎರಡೂ) ಕಾರಣವಾಗುವುವು. ಈ ಅಭಿಪ್ರಾಯದಿಂದಲೇ ನಿಮ್ಮ ಪೂರ್ವಪಕ್ಷವನ್ನು ಅರ್ಧಾಂಗೀಕಾರದಿಂದ ಪರಿಹರಿಸುತ್ತೇವೆಂದು ಪ್ರತಿಜ್ಞೆಮಾಡಿದೆವು. ಈ ಅಭಿಪ್ರಾಯಗಳೆಲ್ಲಾ ನಾವು ಪೂರ್ವದಲ್ಲಿ ಉದಾಹರಿಸಿರುವ ಹದಿನೆಂಟನೆಯ ಅಧ್ಯಾಯದ ಶ್ಲೋಕಗಳಿಂದಲೇ ತಿಳಿದುಬರುವುವು.

4. ಇದು ಮನನಾವಸ್ಥೆಯನ್ನು ಹೊಂದಿರುವವನ ಮಾತು. ಇನ್ನು ಶ್ರವಣವನ್ನುಆರಂಭಿಸಿರುವವನ ವಿಷಯದಲ್ಲಿ ತತ್ತ್ವಜ್ಞಾನದಿಂದಲೇ ಅಂತಃಕರಣಶುದ್ಧಿಯು ಬರಬೇಕೆಂಬ ನಿರ್ಬಂಧವು ಇಲ್ಲ. ಆಗ ಇಂದ್ರಿಯಜಯಾದಿಗಳಿಗೆ ನಿಷ್ಕಾಮಕರ್ಮವೇ ಮೊದಲಾದ ಭಗವದಾರಾಧನೆಗಳೇ ಕಾರಣವೆಂದು ಅವಶ್ಯವಾಗಿ ಒಪ್ಪಬೇಕು. 5. ಆದ್ದರಿಂದಲೇ ಒಂದು ವಿಷಯದಲ್ಲಿ ನಿಮ್ಮ ಉಪಪಾದನೆಯೂ ಅಂಗೀಕಾರಾರ್ಹವಲ್ಲ. ಶಾಸ್ತ್ರಜ್ಞಾನದಿಂದಲೇ ನಿಷ್ಕಾಮಕರ್ಮದಲ್ಲಿ ಪ್ರವೃತ್ತಿಯುಂಟಾಗುವುದು ಎಂದು ಹೇಳಿದರೆ ಶ್ರೀಕೃಷ್ಣನ ಅನೇಕ ವಾಕ್ಯಗಳಿಗೆ ವಿರುದ್ಧವಾಗುವುದು. "ಕರ್ಮಣಾ ಜ್ಞಾನಮಾತನೋತಿ" ಎಂಬ ಶ್ರುತಿವಿರೋಧವೂ ಬರುವುದು. ಆದುದರಿಂದ ನಿಷ್ಕಾಮಕರ್ಮದಿಂದ ಸಾಮಾನ್ಯವಾದ ಶುದ್ಧಾಂತಃಕರಣವನ್ನು ಹೊಂದಿದವನೇ ಶ್ರವಣಮನನಾದಿಗಳಲ್ಲಿ ಪ್ರವೃತ್ತನಾಗುವನೆಂದೂ, ಶ್ರವಣದಿಂದ ತತ್ತ್ವವನ್ನು ತಿಳಿದವನು ಕರ್ಮವನ್ನು ಸಂಕೋಚಮಾಡಿಕೊಂಡು ಮನನದಲ್ಲಿ ತತ್ಪರನಾಗಿ ಅದರಿಂದ ಪ್ರವೃದ್ಧವಾದ ಭಕ್ತಿವಿರಕ್ತಿಗಳಿಂದ ಪುನಃ ಊರ್ಜಿತವಾದ ಮನನವನ್ನು ಮಾಡಿ ಧ್ಯಾನಾವಸ್ಥೆಯನ್ನು ಹೊಂದುವನೆಂದೂ ನಿರ್ಣಯಮಾಡಬೇಕು. ನಿಷ್ಕಾಮಕರ್ಮಾನುಷ್ಠಾನವು ಶ್ರವಣಮನನಗಳಿಗೆ ಪೂರ್ವದಲ್ಲಿ ಅತ್ಯವಶ್ಯಕವೆಂದೂ ಮತ್ತು ಅಪರೋಕ್ಷಜ್ಞಾನಪರ್ಯಂತವೂ ಅದರ ಪರಿತ್ಯಾಗವು ಅನರ್ಥಪ್ರದವೆಂದೂ ಮುಂದೆ ನಾವು ನಿರೂಪಿಸುತ್ತೇವೆ.

2. **ಪ್ರಶ್ನೆ**—ಸ್ವಾಮಿ! ತಿಳಿಯಿತು. ಹಾಗಾದರೆ ಧ್ಯಾನೈಕದಳವಾದ ಅಂತಃಕರಣಶುದ್ಧಿಗೆ ಮನನಾತಿರಿಕ್ತವಾದ ಕಾರಣಗಳು ಯಾವುವು? ಇವುಗಳಲ್ಲಿ ತರತಮಭಾವವು ಇದ್ದರೆ ಅದನ್ನು ದಯಮಾಡಿ ತಿಳಿಸಬೇಕು.

**ಶ್ರೀಶ್ರೀಗಳವರು**— 1. ರಾಗದ್ವೇಷಪರಿತ್ಯಾಗವೂ, ಇಂದ್ರಿಯಜಯವೂ ಅವಶ್ಯಕವೆಂದು ದ್ವಿತೀಯಾಧ್ಯಾಯದ ಪೂರ್ವೋದಾಹೃತ ಶ್ಲೋಕಗಳಿಂದ

ನಿಶ್ಚಿತವಾಗುವುದು. ಪುನಃ ತೃತೀಯಾಧ್ಯಾಯದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ: —

(1) **ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ।**
**ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ ॥**

—(3. 34.)

ಚಕ್ಷುರಾದಿ ಇಂದ್ರಿಯಗಳಿಗೆ ರೂಪಾದಿ ವಿಷಯಗಳಲ್ಲಿ ಅನುಕೂಲವೆಂದು ತೋರಿದ ವಿಷಯಗಳಲ್ಲಿ ರಾಗವು, ಪ್ರತಿಕೂಲವೆಂದು ತೋರಿದ ವಿಷಯದಲ್ಲಿ ದ್ವೇಷವೂ ಅವಶ್ಯವಾಗಿ ಆಗುವುವು. ಅಂಥಾ ರಾಗದ್ವೇಷಗಳಿಗೆ ಮುಮುಕ್ಷುವು ವಶನಾಗಬಾರದು. ಅವೆರಡೂ ಅವನಿಗೆ ಮುಖ್ಯ ಶತ್ರುಗಳು.

ಪುನಃ ಇದೇ ಅಧ್ಯಾಯದಲ್ಲಿಯೇ ಕಾಮವು ಜ್ಞಾನವಿಜ್ಞಾನನಾಶಕವೆಂದು ಹೇಳಿ ಅದರ ಪರಿತ್ಯಾಗವನ್ನು ಶ್ರೀಕೃಷ್ಣನು ವಿಧಿಸುತ್ತಾನೆ :—

(2) **ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥**
**ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಮುಚ್ಯತೇ।**
**ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ ॥**
**ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ।**
**ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥**
.... .... .... .... .... ....
**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ।**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥**

—(3. 37-43.)

ಎಲೈ ಪಾರ್ಥನೇ! ಜೀವನಿಗೆ ಪಾಪಕರ್ಮದಲ್ಲಿ ಮುಖ್ಯ ಪ್ರವರ್ತಕವು ಕಾಮವು. ಇದೇ ಕ್ರೋಧವು ಎಂದರೆ ಕ್ರೋಧಕ್ಕೆ ಕಾರಣವು. (ತನ್ನಿಂದ ಇಷ್ಟವಾದ ವಿಷಯಪ್ರಾಪ್ತಿಯು ಪ್ರತಿರುದ್ಧವಾದರೆ ಪ್ರತಿರೋಧಮಾಡಿದವನ ವಿಷಯದಲ್ಲಿ ಕ್ರೋಧವು ಉಂಟಾಗುವುದು). ಈ ಕ್ರೋಧವು ರಜೋಗುಣ ಮೂಲಕವಾಗಿ ಉತ್ಪನ್ನವಾದುದು. ಬಹುಭೋಗಸಾಧನಗಳನ್ನು ವಿಷಯವನ್ನಾಗಿ ಉಳ್ಳದ್ದು. ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಕಾರಣವು. ಇದನ್ನೇ

(ಕಾಮಾಭಿಮಾನಿಯಾದ ಕಾಲನೇಮಿಯನ್ನೇ) ಮೋಕ್ಷಮಾರ್ಗಕ್ಕೆ ಶತ್ರುವೆಂದು ತಿಳಿ. ಈ ಕಾಮಾಖ್ಯ ಶತ್ರುವಿಗೆ ಇಂದ್ರಿಯಗಳೂ, ಮನಸ್ಸೂ, ಬುದ್ಧಿಯೂ ವಾಸಸ್ಥಾನಗಳು. ಈ ಕಾಮವು ಇವುಗಳಿಂದ (ಇಂದ್ರಿಯಮನೋಬುದ್ಧಿಗಳಿಂದ) ಜ್ಞಾನವನ್ನು ತಿರೋಧಾನಹೊಂದಿಸಿ ಎಂದರೆ ಕ್ವಚಿತ್ ಜ್ಞಾನವನ್ನೇ ಹುಟ್ಟಗೊಡಿಸದೆ, ಕ್ವಚಿತ್‌ಜ್ಞಾನವು ಹುಟ್ಟಿದರೂ ಅದು ಧ್ಯಾನೋಪಯೋಗಿಯಾಗದಂತೆ ವ್ಯರ್ಥಗೊಳಿಸಿ ಜೀವನನ್ನು ಮೋಹಿತನನ್ನಾಗಿ ಮಾಡುತ್ತದೆ (ವಿಷಯ ಪ್ರಪಂಚದಲ್ಲೇ ಬಂಧಿಸುತ್ತದೆ). ಆದುದರಿಂದ, ಎಲೈ ಭರತಶ್ರೇಷ್ಠನೇ! ನೀನು ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ (ನಿಷಿದ್ಧವಿಷಯಸನ್ನಿಕರ್ಷವಾಗದಂತೆ ಮಾಡಿ), ಕ್ರಮವಾಗಿ ಪರೋಕ್ಷಜ್ಞಾನ ಮತ್ತು ಅಪರೋಕ್ಷಜ್ಞಾನವನ್ನೂ ಸಹ ನಾಶಮಾಡುವಂಥಾ ಈ ಪಾಪಿಯನ್ನು ಸಂಹರಿಸು. ಎಲೈ ಮಹಾಬಾಹುವೇ! ಬುದ್ಧ್ಯಾದಿ ಸಕಲ ತತ್ವನಿಯಾಮಕರಾದ ಲಕ್ಷ್ಮ್ಯಾದಿ ದೇವತೆಗಳಿಗೂ ಉತ್ತಮನಾದ ಪರಮಾತ್ಮನನ್ನು ತಿಳಿದು, ಮನಸ್ಸನ್ನು ಬುದ್ಧಿಯಿಂದ ನಿಗ್ರಹಿಸಿ (ವಿಷಯಗಳಿಗೆ ಹೋಗದಂತೆ ನಿಶ್ಚಲವನ್ನಾಗಿ ಮಾಡಿ, ದುರಾಸದನಾದ (ಬಹು ಕಷ್ಟದಿಂದ ನಿವರ್ತನೀಯವಾದ) ಈ ಕಾಮಾಖ್ಯಶತ್ರುವನ್ನು ಸಂಹರಿಸು. (ಇಂದ್ರಿಯ, ಮನಸ್ಸು, ಬುದ್ಧಿಗಳೆಂಬ ಕಾಮನ ಅಧಿಷ್ಠಾನಗಳನ್ನು ಪರಮಾತ್ಮಜ್ಞಾನಾದಿಗಳಿಂದ ಸಂಸ್ಕೃತವಾದ ಚಿತ್ತದಿಂದ ವಿಷಯಗಳಿಗೆ ಹೋಗದಂತೆ ಮಾಡಿ ಕಾಮವನ್ನು ಅವುಗಳಿಂದ ಓಡಿಸು ಎಂದು ಭಾವವು.)

(3) **ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ।** —(6.2.)

ವಿಷಯಕಾಮಜನಿತವಾದ ಸಂಕಲ್ಪಗಳನ್ನು ಪರಿತ್ಯಾಗಮಾಡದವನು ಧ್ಯಾನಯೋಗಿಯಾಗಲಾರನು.

ದ್ವಂದ್ವಮೋಹಪರಿತ್ಯಾಗವೂ ಒಂದು ಮನಃಪ್ರಸಾದ ಕಾರಣವೆಂದು ಶ್ರೀಕೃಷ್ಣನು ಹೇಳುತ್ತಾನೆ:—

(4) **ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ।**
**ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ ॥**
**ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಂ।**
**ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥**
—(7. 27-28.)

ಅನುಕೂಲವೆಂದು ತೋರಿದ ವಿಷಯುಗಳಲ್ಲಿ ಇಚ್ಛೆಯೂ, ಪ್ರತಿಕೂಲವೆಂದು ತೋರಿದ ವಿಷಯುಗಳಲ್ಲಿ ದ್ವೇಷವು, ಇವುಗಳ ಅಭಿವೃದ್ಧಿಯಿಂದ ಉತ್ಪನ್ನವಾದ ದ್ವಂದ್ವಮೋಹದಿಂದ ಎಂದರೆ ಸುಖದುಃಖಲಾಭಾಲಾಭಾದಿಗಳ ವಿಷಯದಲ್ಲಿ ಮಿಥ್ಯಾಜ್ಞಾನದಿಂದ (ದುಃಖಾದಿಗಳಂತೆ ವೈಷಯಿಕ ಸುಖಗಳೂ ಮೋಕ್ಷ ವಿರೋಧಿಗಳಾಗಿದ್ದರೂ ಅವುಗಳು ಉಪಾದೇಯುಗಳೆಂಬ ಮಿಥ್ಯಾಜ್ಞಾನದಿಂದ) ಸರ್ವಪ್ರಾಣಿಗಳೂ ಸೃಷ್ಟಿಕಾಲದಿಂದ ಆರಂಭಿಸಿಕೊಂಡು ಸಮ್ಮೋಹವನ್ನು ಹೊಂದುತ್ತಾರೆ ಎಂದರೆ ಜೀವಬ್ರಹ್ಮರು ಅಭಿನ್ನರು, ನಾನೇ ಬ್ರಹ್ಮನು, ಸ್ವತಂತ್ರನು ಇತ್ಯಾದಿ ರೂಪವಾದ ವಿಪರೀತಜ್ಞಾನವನ್ನು ಹೊಂದುತ್ತಾರೆ. ಮತ್ತು ವಿಷಯುಗಳಲ್ಲಿ ಆಸಕ್ತರಾಗುತ್ತಾರೆ. ಯಾವ ಪುಣ್ಯಕರ್ಮಾನುಷ್ಠಾನರತರಾದ ಸಜ್ಜನರಿಗೆ ಪಾಪಗಳು ನಷ್ಟವಾಗಿರುವುವೋ ಅವರೇ ದ್ವಂದ್ವಮೋಹಗಳಿಂದ ನಿರ್ಮುಕ್ತರಾಗಿ ದೃಢವ್ರತರಾಗಿ ನನ್ನನ್ನು ಭಜನೆಮಾಡುತ್ತಾರೆ.

ತ್ರಯೋದಶಾಧ್ಯಾಯದಲ್ಲಿ ಅನೇಕ ಜ್ಞಾನಸಾಧನಗಳನ್ನು ಶ್ರೀಕೃಷ್ಣನು ಸಂಗ್ರಹಿಸಿರುತ್ತಾನೆ:—

(5) **ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಂ।**
**ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥**
**ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ।**
**ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಂ ॥**
**ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು।**
**ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥**
**ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ।**
**ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥**
**ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಂ।**
**ಏತದ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥**
—(13. 7-11.)

ಆತ್ಮಶ್ಲಾಘನೆಯ ರಾಹಿತ್ಯವು, ತಾನು ಅಲ್ಪನೆಂದು ತಿಳಿದಿದ್ದರೂ ಮಹತ್ವವನ್ನು ಪ್ರದರ್ಶನೆಮಾಡದಿರುವುದು, ಅಹಿಂಸೆಯೂ, ಸಹನಶೀಲತ್ವವು, ಆರ್ಜವವು

ಎಂದರೆ ಸನ್ಮಾರ್ಗದಲ್ಲಿ ಮನೋವಾಕ್ಕಾಯ ಕರ್ಮಗಳಲ್ಲಿ ವೈಪರೀತ್ಯವನ್ನು ಹೊಂದದಿರುವುದು, ಜ್ಞಾನಿಗಳ ಸೇವೆಯು, ಬಾಹ್ಯಾಂತರಶುದ್ಧಿಯು, ಸ್ಥೈರ್ಯವು ಎಂದರೆ ಭಯಬಂದರೂ ಸ್ವಧರ್ಮದಿಂದ ಚಲನರಾಹಿತ್ಯವು, ಮನೋನಿಗ್ರಹವು, ಇಂದ್ರಿಯ ವಿಷಯಗಳಲ್ಲಿ ಕಾಮರಾಹಿತ್ಯವು, ಅನಹಂಕೃತಿಯು ಎಂದರೆ ತನ್ನಲ್ಲಿ ಇಲ್ಲದೇ ಇರುವ ಗುಣಗಳನ್ನು ಆರೋಪಿಸಿಕೊಂಡು ಅಭಿಮಾನಹೊಂದದೇ ಇರೋಣವು, ಜನನಮರಣಜರಾವ್ಯಾಧಿಗಳಿಂದ ಉಂಟಾಗುವ ದುಃಖರೂಪವಾದ ದೋಷವನ್ನು ಸದಾ ತಿಳಿಯುತ್ತಿರುವುದು, ಪತ್ನೀ ಪುತ್ರ ಗೃಹಾದಿಗಳಲ್ಲಿ ಸ್ನೇಹ ತ್ಯಾಗವು ಮತ್ತು ಅತ್ಯಭಿಮಾನವನ್ನು ಮಾಡದೇ ಇರೋಣವು, ಇಷ್ಟಾನಿಷ್ಟ ಗಳು ಯಾವುವು ಪ್ರಾಪ್ತವಾದರೂ ಸರ್ವದಾ ನಿರ್ವಿಕಾರವಾದ ಚಿತ್ತವನ್ನು ಹೊಂದಿರುವುದು, ನನ್ನಲ್ಲಿ (ಶ್ರೀಕೃಷ್ಣನಲ್ಲಿ)ಅವ್ಯಭಿಚರಿತವಾದ (ಅನ್ಯರನ್ನುಸ್ವತಂ ತ್ರರೆಂದು ತಿಳಿಯದ) ಅನನ್ಯಭಕ್ತಿಯು, ಏಕಾಂತವಾಸವು, ಜನಸಮ್ಮರ್ದರಹಿತ ವಾದ ಶುದ್ಧದೇಶದಲ್ಲಿ ಸ್ಥಿತಿಯು, ಬ್ರಹ್ಮಜ್ಞಾನಾರ್ಥವಾಗಿ ಸದಾ ನಿಯತಪ್ರ ಯತ್ನಗಳನ್ನು ಮಾಡುತ್ತಿರುವುದು, ಅಪರೋಕ್ಷಜ್ಞಾನಾರ್ಥವಾಗಿ ಶಾಸ್ತ್ರ ಪರ್ಯಾಲೋಚನೆಯು ಇವೆಲ್ಲವೂ ಜ್ಞಾನಸಾಧನಗಳು. ಇದಕ್ಕೆ ಭಿನ್ನವಾದು ವುಗಳೆಲ್ಲಾ ಜ್ಞಾನಸಾಧನಗಳಲ್ಲ.

ಹದಿನೈದನೆಯ ಅಧ್ಯಾಯದಲ್ಲಿಯೂ ಸಹ ಈ ಧರ್ಮಗಳ ಅವಶ್ಯಕತೆಯು ಸ್ಪಷ್ಟವಾಗಿ ಪ್ರತಿಪಾದಿತವಾಗಿರುವುದು :—

(6) **ನಿರ್ಮಾನಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾವಿನಿವೃತ್ತ ಕಾಮಾಃ।**
**ದ್ವಂದ್ವೈರ್ವಿಮುಕ್ತಾಸ್ಸುಖದುಃಖಸಂಜ್ಞೈರ್ಗಚ್ಛಂತ್ಯಮೂಢಾಃ ಪದಮವ್ಯಯಂ ತತ್** ॥ —(15. 5.)

ಅಹಂಕಾರ ಮಿಥ್ಯಾಜ್ಞಾನಗಳಿಂದ ರಹಿತರಾದ, ಫಲಸ್ನೇಹರೂಪದೋಷ ವನ್ನು ಜಯಿಸಿದಂಥಾ, ಭಗವಚ್ಛ್ರವಣಾದಿಗಳಲ್ಲಿ ನಿರತರಾದ, ವಿಷಯತೃಷ್ಣಾ ರಹಿತರಾದಂಥಾ, ಸುಖದುಃಖಗಳೆಂಬ ದ್ವಂದ್ವರಹಿತರಾದಂಥಾ (ದುಃಖವು ಹೇಗೆ ಅನಿಷ್ಟವೋ ಹಾಗೆಯೇ ಮೋಕ್ಷವಿರೋಧಿಯಾದುದರಿಂದ ಲೌಕಿಕ ಸುಖವೂ ಅನಿಷ್ಟವೆಂದು ತಿಳಿದಿರುವಂಥಾ) ಜ್ಞಾನಿಗಳು ನಾಶರಹಿತನಾದಂಥಾ ಭಗವಂತನನ್ನು ಹೊಂದುತ್ತಾರೆ.

3. ಅನಂತಧರ್ಮಗಳು ಧ್ಯಾನಸಾಧನವಾಗಿ ಮೋಕ್ಷಕ್ಕೆ ಪ್ರಯೋಜಕವಾಗುವುವು. ದ್ವಿತೀಯಾಧ್ಯಾಯದಲ್ಲಿಯೇ "ವಿಷಯಾವಿನಿವರ್ತಂತೇ ನಿರಾಹಾರಸ್ಯ ದೇಹಿನಃ" ಎಂದು ಅಲ್ಪಾಹಾರಸೇವನೆ ರೂಪವಾದ ಪ್ರಯತ್ನವನ್ನೂ ಷಷ್ಠಾಧ್ಯಾಯದಲ್ಲಿ ಪ್ರಾಣಾಯಾಮ ಪ್ರತ್ಯಾಹಾರರೂಪವಾದ ಮಹಾಪ್ರಯತ್ನವನ್ನೂ ಸಹ ಇಂದ್ರಿಯಜಯದ್ವಾರಾ ಚಿತ್ತಶುದ್ಧಿಸಾಧನವನ್ನಾಗಿ ಶ್ರೀಕೃಷ್ಣನು ನಿರೂಪಿಸಿರುವುದು ನಿಜವು. ಆದರೆ ಮುಖ್ಯವಾದ ಮನಃಪ್ರಸಾದಸಾಧನವು ಪುನಃಪುನಃ ಭಗವಂತನ ಚರಣಾರವಿಂದದಲ್ಲಿ ಆತನ ಸರ್ವೋತ್ತಮತ್ವಜ್ಞಾನಪೂರ್ವಕವಾಗಿ ಮನಸ್ಸನ್ನು ಇಡುವುದು. ಮನಃಪ್ರಸಾದವನ್ನು ಹುಟ್ಟಿಸುವ ಸಾಧನಗಳಲ್ಲಿ ಪ್ರಧಾನವಾದ ಭಗವಚ್ಚರಣಾರವಿಂದಗಳಲ್ಲಿ ಮನೋಯೋಗದ ಸ್ವರೂಪವನ್ನು ದ್ವಿತೀಯಾಧ್ಯಾಯದಲ್ಲಿಯೇ ಶ್ರೀಕೃಷ್ಣನು ನಿರೂಪಿಸಿರುತ್ತಾನೆ:—

(1) **ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ।**
**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ॥**
—(2. 60-61.)

ಹೇ ಕೌಂತೇಯ! ಇಂದ್ರಿಯಗಳು ಸ್ವಭಾವತಃ ಕ್ಷೋಭಕಾರಿಗಳು. ಅವುಗಳು ಮನಸ್ಸನ್ನು ಬಲಾತ್ಕಾರವಾಗಿ ವಿಷಯಗಳಲ್ಲಿ ಆಸಕ್ತವಾಗುವಂತೆ ಮಾಡುವುವು. ಮುಮುಕ್ಷುವು ಆ ಸರ್ವ ಇಂದ್ರಿಯಗಳನ್ನೂ ವಿಷಯಗಳ ದೆಸೆಯಿಂದ ಉಪಸಂಹರಿಸಿ, ಮತ್ಪರಃ = ನಾನೇ (ಶ್ರೀಕೃಷ್ಣನೇ) ಸರ್ವೋತ್ತಮನೆಂದು ತಿಳಿದವನಾಗಿ, ಯುಕ್ತಆಸೀತ = ಪರಮಾತ್ಮನಲ್ಲಿ ಮನೋಯೋಜನೆಯನ್ನು ಮಾಡಿದವನಾಗಿ ನಿಲ್ಲಬೇಕು.

ಶರಣಾಗತನಾಗಿ ಹರಿಸ್ಮರಣೆಯನ್ನುಮಾಡುವವನಿಗೆ ಹೊಂದಲ್ಪಡದ ಭಾಗ್ಯವಿಲ್ಲ. ಶ್ರೀಕೃಷ್ಣನು ಹೇಳುತ್ತಾನೆ:—

(2) **ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥**
—(7. 14.)

ನನ್ನನ್ನೇ ಯಾರು ಶರಣುಹೊಂದುತ್ತಾರೆಯೋ ಅವರು ನನ್ನ ಬಂಧಕ ಪ್ರಕೃತಿಯನ್ನು ದಾಟುತ್ತಾರೆ.

(3) **ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ।**
**ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಂ॥**
—(7. 29.)

ಜರಾಮರಣರೂಪವಾದ ಸಂಸಾರದಿಂದ ಮೋಕ್ಷಾರ್ಥಿಗಳಾಗಿ ನನ್ನನ್ನು ಆಶ್ರಯಿಸಿ ಯಾರು ಸೇವಿಸುತ್ತಾರೆಯೋ ಅಂಥಾ ಸಜ್ಜನರು ಪರಬ್ರಹ್ಮನನ್ನು ತಿಳಿಯುವರು; ಸಕಲವಾದ ಅಧ್ಯಾತ್ಮವನ್ನು ತಿಳಿಯುವರು; ಜಗತ್ಸರ್ಜನಾದಿ ಭಗವತ್ಕರ್ಮಗಳನ್ನು ತಿಳಿಯುವರು.

(4) **ತಮೇವ ಚಾದ್ಯಂ ಪುರುಷಂ ಪ್ರಪದ್ಯೇ**
**ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ॥** —(15. 4.)

ಸಂಸಾರತಾರಕವಾದ ಜಗದ್ವೃಕ್ಷ ಛೇದನೋಪಾಯವನ್ನು (ಪರಾಪರ ತತ್ವಜ್ಞಾನೋಪಾಯವನ್ನು) ಶ್ರೀಕೃಷ್ಣನು ಹೇಳುತ್ತಾನೆ:—ಯಾರಿಂದ ಈ ಜನನಮರಣರೂಪವಾದ ಸಂಸಾರಪ್ರವರ್ತನವು ಉಂಟಾಯಿತೋ ಅಂಥಾ ಪುರಾತನನಾದ ಪರಮಾತ್ಮನನ್ನೇ ಶರಣುಹೊಂದಬೇಕು.

4. ಭಗವಂತನಲ್ಲಿ ಶರಣಾಗತಿರೂಪವಾದ ಮಹಾಸಾಧನೆಯನಂತರ ನಿಷ್ಕಾಮ ಕರ್ಮಾನುಷ್ಠಾನವೂ ಧ್ಯಾನಯೋಗಕ್ಕೆ ಒಂದು ಸಾಕ್ಷಾತ್ಸಾಧನವೆನ್ನಿಸುವುದು. ಇದು ಶ್ರವಣಮನನದಶಾದಲ್ಲಿಯೂ ಧ್ಯಾನೋತ್ಪತ್ತಿಗೆ ಪ್ರತ್ಯೇಕಕಾರಣವಾಗಿ ಅವಶ್ಯಕವೆನ್ನಿಸುವುದು. ಶ್ರವಣದಲ್ಲಿ ಪ್ರವೃತ್ತಿಯು ಉಂಟಾಗುವುದಕ್ಕೂ ನಿಷ್ಕಾಮಕರ್ಮಾನುಷ್ಠಾನವು ಒಂದೇ ಪ್ರಧಾನಕಾರಣವು. ನಿಷ್ಕಾಮಕರ್ಮದ ಸ್ವರೂಪವನ್ನು ಸ್ವಲ್ಪಮುಂದೆವಿವರಿಸುವೆವು. ಪ್ರಕೃತದಲ್ಲಿ ಪೂರ್ವೋಕ್ತವಾದ ಕೇವಲ ಮನನವೇ ಅಂತಃಕರಣ ಶುದ್ಧಿಯನ್ನು ಕೊಡಲಾರದೆಂಬಲ್ಲಿ ಕೆಲವು ಯುಕ್ತಿಗಳನ್ನು ಹೇಳಿ ಈ ವಿಚಾರವನ್ನು ಉಪರಮಹೊಂದಿಸುವೆವು.

5. ರಾಗದ್ವೇಷಾದಿಗಳಿಂದ ಕಲುಷಿತವಾದ ಅಭಿಮಾನಪೂರ್ಣವಾದ ಉಸ್ಮತ್ತನ ಹೃದಯದಲ್ಲಿ ಸಮಾಧಿಧ್ಯಾನೋಪಯೋಗಿಯಾದ ತತ್ವನಿಶ್ಚಯವು ಉಂಟಾಗುವುದಿಲ್ಲ. ಶ್ರೀಕೃಷ್ಣನೂ ಸಹ ದ್ವಿತೀಯಾಧ್ಯಾಯದಲ್ಲಿ ಕಾಮಾಸಕ್ತರಾದ ಸಂಸಾರಿಗಳನ್ನು ವರ್ಣಿಸಿ ಅವರಿಗೆ **"ವ್ಯವಸಾಯಾತ್ಮಿಕಾ**

**ಬುದ್ಧಿಃ ಸಮಾಧೌ ನ ವಿಧೀಯತೇ"** ಎಂದು ಹೇಳಿರುವನು. ಭೋಗೈಶ್ವರ್ಯಗಳಿಂದ ಅಪಹೃತವಾದ ಜ್ಞಾನವುಳ್ಳ ವಿಷಯಕಾಮುಕರಿಗೆ ಸಮಾಧಿಧ್ಯಾನಕ್ಕೆ ಕಾರಣವಾದ ತತ್ವನಿಶ್ಚಯವು ಉತ್ಪನ್ನವಾಗುವುದಿಲ್ಲವೆಂದು ಭಾವವು. ರಾಗದ್ವೇಷಾದಿಗಳು, ಅಭಿಮಾನವು, ಇಂದ್ರಿಯಲೋಲುತೆಯು, ಇವು "ಜ್ಞಾನವಿಜ್ಞಾನ" ನಾಶಕಗಳು ಎಂದರೆ ಜ್ಞಾನವು ಉಂಟಾಗುವುದಕ್ಕೆ ಪ್ರತಿಬಂಧಕಗಳು. ಕಥಂಚಿತ್ ಶ್ರವಣದಿಂದ ವಾಕ್ಯಜ್ಞಾನವು ಉಂಟಾದರೂ ಪ್ರಾಮಾಣ್ಯನಿಶ್ಚಯವು ಉಂಟಾಗದೆ "ಅವರು ಹೀಗೆ ಹೇಳುವರು, ಇವರು ಹೀಗೆ ಹೇಳುವರು, ಇದು ಅನರ ಅಭಿಪ್ರಾಯವು, ಇದು ನನ್ನ ಅಭಿಪ್ರಾಯವು" ಇತ್ಯಾದಿ ರೀತಿಯಲ್ಲಿ ವಿಶಕಲಿತವಾದ ನಾನಾ ಪ್ರಕಾರವಾದ ಜ್ಞಾನಗಳು ಹುಟ್ಟುವುವೇ ಹೊರತು ನಿರ್ಣೀತವಾದ ಶಾಸ್ತ್ರಾರ್ಥವು ತಿಳಿಯಲಾರದು. ಪಕ್ಷಪಾತರಹಿತವಾದ ಹೃದಯದಿಂದ ಚಿಂತನೆಮಾಡಿದರಷ್ಟೇ ಯಥಾರ್ಥನಿಶ್ಚಯವು ತಿಳಿದುಬರುವುದು! ರಾಗದ್ವೇಷಕಲುಷಿತವಾದ ಮನಸ್ಸು ಪಕ್ಷಪಾತದಿಂದ ಪೂರ್ಣವಾಗಿ ನಿಜತತ್ವವನ್ನು ತಿಳಿಯುವದಕ್ಕೂ ವಿಘ್ನವಾಗಿ ಪರಿಣಮಿಸುವುದು. *

ವಿಷ್ಣೂತ್ಕರ್ಷಜ್ಞಾನವು ಉತ್ಪನ್ನವಾದರೂ ಆ ಜ್ಞಾನವು ಸರ್ವವೇದಸಮ್ಮತವು ಮತ್ತು ಅತ್ಯಂತ ಸತ್ಯವೆಂದು ದೃಢನಿಶ್ಚಯವು ಬರದಿದ್ದರೆ ಧ್ಯಾನಾರ್ಥವಾಗಿನಿಶ್ಯಂಕಪ್ರವೃತ್ತಿಯು ಉಂಟಾಗಲಾರದು. ಏವಂಚ ಅಂತಃಕರಣಶುದ್ಧಿರಹಿತನಿಗೆ ನಾನಾ ಕಾಮ್ಯಕರ್ಮಗಳಲ್ಲೂ, ವಿಷಯಭೋಗಗಳಲ್ಲೂ ಮನಸ್ಸು ಪ್ರವೃತ್ತವಾಗಿ ಪ್ರಬಲವಾದ ಶಾಸ್ತ್ರಾಭ್ಯಾಸದಲ್ಲಿ ರತಿಯೇ ಉಂಟಾಗಲಾರದಾದುದರಿಂದ ಮನನವೇ ಸಂಭವಿಸಲಾರದು. ಕಥಂಚಿತ್ ಬುದ್ಧಿಪ್ರಭಾವದಿಂದ ಕೆಲವರು ಮನನದಲ್ಲಿ ಪ್ರವೃತ್ತರಾದರೂ ದೋಷಕಲುಷಿತಮನಸ್ಸಿಗೆ ವೇದಾದಿ

---

* ಪರಸ್ತ್ರೀಗಮನವು ದುಃಖಕರವೆಂಬ ನೀತಿಗೆ ಒಬ್ಬ ಕಾಮಿಯು ಉತ್ತಮರ ಪತ್ನೀಗಮನವು ದುಃಖಕರವು ಎಂದು ಅರ್ಥಮಾಡಿದನಂತೆ. ಇದೇ ರೀತಿಯಲ್ಲಿ ನಿಜತತ್ವಾಭಿಲಾಷೆಯಿಂದ ರಹಿತವಾದ ದುಷ್ಟಮನಸ್ಸಿನಿಂದ ಚಿಂತನೆಮಾಡಿದರೆ ಪ್ರಮಾಣಗಳ ಯಥಾರ್ಥ ಅಭಿಪ್ರಾಯವು ಸ್ಫುರಣವಾಗದೆ ಮನುಷ್ಯನು ಸ್ವಾಭಿಪ್ರಾಯಾನುಸಾರವಾಗಿ ಪ್ರಮಾಣಗಳನ್ನು ಯೋಜನೆಮಾಡುವುದಕ್ಕೆ ಯತ್ನಿಸುವನು. ಮತ್ತು ವಿರುದ್ಧಪ್ರಮಾಣಗಳನ್ನು ಮುಚ್ಚಿಡುವುದನಲ್ಲಿ ಆಸಕ್ತನಾಗುವನು. ಈ ರೀತಿಯಾಗಿಯಷ್ಟೇ ಅನಂತ ತಾಮಸವ್ಯಾಖ್ಯಾನಗಳು ಭಗವದ್ಗೀತೆಗೆ ಆಗಿರುವುವು!

ಪ್ರಮಾಣಗಳ ಯಥಾರ್ಥನಿಶ್ಚಯವು ಆಗಲಾರದು. ವಿಷ್ಣುದ್ವೇಷದಿಂದ ಸಹಿತ ವಾದ ಮನಸ್ಸು ವಿಷ್ಣೂತ್ಕರ್ಷ ಪ್ರತಿಪಾದಕ ವಾಕ್ಯಗಳಿಗೆ ಪ್ರಕಾರಾಂತರ ಅರ್ಥ ವನ್ನು ಕಲ್ಪಿಸುವುದು ಸಹಜವೇ! ಅಥವಾ ನಿಜವಾದ ತತ್ವಜ್ಞಾನವು ಉತ್ಪನ್ನ ವಾದರೂ ರಾಗದ್ವೇಷಗಳಿಂದ ಅದು ಪುನಃಪುನಃ ತಿರೋಧಾನವನ್ನು ಹೊಂದು ತ್ತಿರುವುದರಿಂದ ಕಷ್ಟಕರವಾದ ತಪೋಽನುಷ್ಠಾನಗಳೂ, ಧ್ಯಾನಾದಿ ಮಹಾ ಪ್ರಯತ್ನಗಳೂ ಹೇಗೆತಾನೇ ಸಾಧ್ಯವಾಗುವುವು?

ಲೌಕಿಕದೃಷ್ಟಾಂತವೂ ಇದೇ ಅರ್ಥವನ್ನು ಬೋಧಿಸುವುದು. ಬಂಡೆಯು ಕಲ್ಲಿನಮೇಲೆ ಬಿತ್ತಿದ ಬೀಜವು ಧಾನ್ಯವನ್ನು ಹುಟ್ಟಿಸುವುದೆಂತು? ಭೂಮಿಯು ಮೇಲೆ ಬೀಜವನ್ನು ಹಾಕಿದರೂ, ಭೂಮಿಯನ್ನು ಉತ್ತು, ಗೊಬ್ಬರವನ್ನು ಹಾಕಿ, ಸಸಿಗಳನ್ನು ನೆಟ್ಟರೆ, ಉತ್ಕೃಷ್ಟವಾದ ಪೈರುಗಳು ಬೆಳೆಯುವುದನ್ನು ನಾವು ನೋಡಿರುತ್ತೇವೆ. ಹಾಗಿಲ್ಲದೆ ಕಳೆಯಿಂದ ಪೂರ್ಣವಾದ ಮೈದಾನದಲ್ಲಿ ಕಬ್ಬುಬೀಜವನ್ನು ಬಿತ್ತಿದರೆ ಆ ಕಳೆಗಳೇ ಕಬ್ಬು ಬೀಜವನ್ನು ಕೊಂದು, ಅದನ್ನು ತಮಗೆ ಗೊಬ್ಬರದಂತೆ ಉಪಯೋಗಿಸಿಕೊಂಡು ತಾವೇ ಪ್ರವೃದ್ಧವಾಗಿ ಕಬ್ಬಿನ ಉತ್ಪತ್ತಿಗೇ ಅವಕಾಶಕೊಡಲಾರವು. ಕಥಂಚಿತ್ ಕಬ್ಬಿನ ಮೊಳಕೆಗಳು ಉತ್ಪನ್ನವಾದರೂ ಶಿಥಿಲವಾಗಿ ರಸರಹಿತವಾಗುವುದು. ಇದೇರೀತಿಯಲ್ಲಿ ಅಭಿ ಮಾನದಿಂದಲೂ ಕಾಮಕ್ರೋಧಗಳಿಂದಲೂ ಪೂರ್ಣವಾದ ಮನಸ್ಸಿನಲ್ಲಿ ಪ್ರಾಪ್ತ ವಾದ ಶಾಸ್ತ್ರಾರ್ಥವು ದುಷ್ಕರ್ಮಗಳಿಗೂ ಬ್ರಾಹ್ಮಣದ್ರೋಹಾದಿ ಮಹಾಪಾಪ ಗಳಿಗೂ ಕಾರಣವಾಗಿ ಮೋಕ್ಷಕ್ಕೆ ಪ್ರತಿಬಂಧಕವೇ ಆಗುವುದು. ಕಿಂಚ ಅಪಾರ ವಾದ ಬುದ್ಧಿಸಾಮರ್ಥ್ಯವುಳ್ಳವನಾಗಿ ಉತ್ತಮ ಸಂಗಪ್ರಭಾವದಿಂದ ಶಾಸ್ತ್ರದ ಯಥಾರ್ಥನಿಶ್ಚಯವನ್ನು ತಿಳಿದರೂ ಕೂಡ ರಾಗದ್ವೇಷಗಳಿಗೆ ವಶನಾದರೆ ಪದೇ ಪದೇ ಭಗವದ್ವಿಸ್ಮೃತಿರೂಪವಾದ ಮಹಾವ್ಯಾಧಿಯಿಂದ ಪೀಡಿತನಾಗಿ ಧ್ಯಾನ ಮಾಡುವುದರಲ್ಲಿ ಅಸಮರ್ಥನಾಗುವನು. ಆದುದರಿಂದ ಭಕ್ತಿವಿರಕ್ತಿಗಳಿಂದ ಯುಕ್ತವಾದ ಪ್ರಸನ್ನಚಿತ್ತವು ಮನನಮಾಡುವವನಿಗೂ ಅತ್ಯಂತ ಅವಶ್ಯಕವಾಗಿ ರುವುದು. ಇವೆರಡೂ ಮಿಳಿತವಾಗಿಯೇ ಧ್ಯಾನಕ್ಕೆ ಕಾರಣವಾಗುವುವು. ಶ್ರವಣವೂ ಕೂಡ ಶ್ರದ್ಧೆಯಿಂದ ವಿಧ್ಯುಕ್ತರೀತಿಯಲ್ಲಿ ನಡೆದರೇನೇ ಮೋಕ್ಷೋಪ ಯೋಗಿಯಾಗುವುದೆಂದು ಪೂರ್ವೋಕ್ತನ್ಯಾಯದಿಂದ ನಿಶ್ಚಯಿಸಬೇಕು.

## 8. ಎಂಟನೆಯ ಅಂಶವು

### ಪ್ರಕಾರಾಂತರದಿಂದ ಧ್ಯಾನಕಾರಣ ಸಾಮಗ್ರೀವಿಮರ್ಶೆಯು ಕರ್ಮಯೋಗವು.

1. **ಪ್ರಶ್ನೆ**—ಸ್ವಾಮಿ! ಶ್ರವಣಾದಿಗಳಿಂದ ಪರಂಪರೆಯಾಗಿ ಅಪರೋಕ್ಷ ಜ್ಞಾನವು ಉತ್ಪತ್ತಿಯಾಗುವುದೆಂದು ಇದುವರೆವಿಗೆ ತಮ್ಮಿಂದ ನಿರೂಪಿತವಾಯಿತು. ಆದರೆ ಕರ್ಮಯೋಗಕ್ಕೆ ಜ್ಞಾನೋತ್ಪತ್ತಿಯಲ್ಲಿ ಯಾವ ವಿಧವಾಗಿಯೂ ಕಾರಣತ್ವವು ಸಂಭವಿಸುವುದಿಲ್ಲವೆಂಬ ನಮ್ಮ ಸಂದೇಹವನ್ನು ತಾವು ಈ ದಿವಸ ದಯಮಾಡಿ ಪರಿಹರಿಸಬೇಕು.

**ಉತ್ತರ-ಶ್ರೀಶ್ರೀಗಳವರು**-ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಕರ್ಮಯೋಗ' ವನ್ನು **ಎರಡು ವಿಧವಾಗಿ** ಪ್ರತಿಪಾದಿಸಿರುತ್ತಾನೆ. ಒಂದು ಅರ್ಥದಲ್ಲಿ ಶ್ರವಣ ಮನನಗಳೂ ಸಹ ಕರ್ಮಪ್ರಭೇದಗಳೇ ಆಗಿರುವುವು. ಅಪರೋಕ್ಷಜ್ಞಾನಾರ್ಥವಾದ ಸಕಲ ವಾಚನಿಕ, ಮಾನಸಿಕ, ಶಾರೀರಕ ವ್ಯಾಪಾರಗಳೂ ಕರ್ಮವೆಂದೆನಿಸುವುವು. ಶಾಸ್ತ್ರಪಾರಾಯಣಾದಿಗಳು ವಾಗಿಂದ್ರಿಯಜನಿತ ಕರ್ಮಗಳು. ಶ್ರವಣಮನನಾದಿಗಳು ಮಾನಸಿಕ ಕ್ರಿಯೆಗಳು. ವಿಧ್ಯುಕ್ತ ಕರ್ಮಾನುಷ್ಠಾನಗಳು ಶಾರೀರಕ ಕ್ರಿಯೆಗಳು. ಕರ್ಮಯೋಗವೆಂದರೆ ರಾಗದ್ವೇಷವರ್ಜನ ರೂಪವಾದ ಸಂನ್ಯಾಸವೆಂಬ ಮನೋಧರ್ಮದಿಂದ ಸಹಿತವಾಗಿ, ಮತ್ತು ಭಗವಂತನ ಸ್ವಾತಂತ್ರ್ಯವೇ ಮೊದಲಾದ ಅನೇಕ ಕಲ್ಯಾಣಗುಣಗಳ ಜ್ಞಾನಪೂರ್ವಕವಾಗಿ, ವಿಷ್ಣುಭಕ್ತಿಯಿಂದ, ವಿಧ್ಯುಕ್ತವಾದ ಕರ್ಮಾನುಷ್ಠಾನವನ್ನು ನಿಷ್ಕಾಮವಾಗಿ ಮಾಡಿ ಅಂತ್ಯದಲ್ಲಿ, ಸರ್ವಕರ್ಮ ಫಲವನ್ನೂ ಭಗವಂತನಿಗೆ ಸಮರ್ಪಿಸುವುದು ಎಂದರ್ಥವು. ಇಂಥಾ ವಿಶಿಷ್ಟ ಕರ್ಮಯೋಗವು ಷಷ್ಠಾಧ್ಯಾಯದಲ್ಲಿ ಉಕ್ತವಾದ ಧ್ಯಾನಯೋಗಕ್ಕೆ ಸಾಕ್ಷಾತ್ಕಾರಣವಾಗಿ ಧ್ಯಾನದ್ವಾರಾ ಅಪರೋಕ್ಷಜ್ಞಾನವನ್ನು ಹುಟ್ಟಿಸುವುದು. ಈ ನಿರೂಪಣೆಯಲ್ಲಿ ಕರ್ಮವು ಜ್ಞಾನೋತ್ಪತ್ತಿಯಲ್ಲಿ ಹೇಗೆ ಕಾರಣವಾಗುವುದೆಂಬ ಪ್ರಶ್ನೆಗೇ ಅವಸರವಿಲ್ಲ. ಕೇವಲ ಶಾರೀರಕ ಕರ್ಮವು ಜ್ಞಾನವನ್ನು ಹುಟ್ಟಿಸುವುದು ಎಂದು ಹೇಳಿದ್ದರೆ ಸಂದೇಹಕ್ಕೆ ಅವಕಾಶವಿರುವುದರಿಂದ ಪ್ರಶ್ನೆಯು ಉಚಿತವಾಗುತ್ತಿತ್ತು. ಪ್ರಕೃತದಲ್ಲಿ

ಭಕ್ತಿಜ್ಞಾನಗಳಿಂದ ಸಹಿತವಾದ ನಿಷ್ಕಾಮಕರ್ಮದಿಂದ ಪರಮಾತ್ಮನು ಪ್ರಸನ್ನನಾಗಿ ಧ್ಯಾನಾಧಿಕಾರವನ್ನು ಕೊಡುವನು ಎಂಬ ಅರ್ಥವು ಸರ್ವಸಮ್ಮತವಾದುದು.

ಇಂಥಾ ವಿಶಿಷ್ಟ ಕರ್ಮಯೋಗವು ಚತುರಂಗರೂಪವಾದುದು. 1. ಭಗವದರ್ಪಣಬುದ್ಧಿಯಿಂದ ವಿಧ್ಯುಕ್ತಕರ್ಮಾನುಷ್ಠಾನರೂಪವಾದ **ಕರ್ಮ**ವೆಂದು ಹೆಸರುಳ್ಳಪ್ರಥಮಾಂಶವು. 2. ಶ್ರವಣಾದಿಜನಿತ ಪರಮಾತ್ಮನ ಜ್ಞಾನವು **ಸಾಂಖ್ಯ**ವೆಂದು ಕರೆಯಲ್ಪಡುವ ದ್ವಿತೀಯಾಂಶವು. 3. ರಾಗದ್ವೇಷಾದಿ ವರ್ಜನರೂಪವಾದ ಸಂನ್ಯಾಸವೆಂದು ಕರೆಯಲ್ಪಡುವ ತೃತೀಯಾಂಶವು. 4. ಅಂತ್ಯದಲ್ಲಿ ಸರ್ವಕರ್ಮಫಲಗಳನ್ನೂ ಪರಮಾತ್ಮನಲ್ಲಿ ಸಮರ್ಪಣಮಾಡೋಣವೆಂಬ **ತ್ಯಾಗ**ವೆಂದು ಹೆಸರುಳ್ಳ ಚತುರ್ಥಾಂಶವು. ಇವು ನಾಲ್ಕೂ ಮಿಳಿತವಾಗಿ ಧ್ಯಾನದ್ವಾರಾ ಸಾಕ್ಷಾದಪರೋಕ್ಷಜ್ಞಾನವನ್ನೇ ಹುಟ್ಟಿಸುವುವೆಂದು ಹೇಳುವುದು ಶ್ರೀಕೃಷ್ಣನಿಗೆ ಅತ್ಯಂತ ಸಮ್ಮತವಾದುದು. ಇವು ನಾಲ್ಕೂ ಮಿಳಿತವಾಗಿಯೇ ಜ್ಞಾನವನ್ನು ಹುಟ್ಟಿಸುವುವೆಂದು ಶ್ರೀಕೃಷ್ಣನು ಪ್ರಥಮಷಟ್ಕದಲ್ಲಿ ಸ್ಫುಟತರವಾಗಿ ಪ್ರತಿಪಾದಿಸಿರುತ್ತಾನೆ:—

(1) **ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ।**
**ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥**
—(2. 48.)

ಎಲೈ ಧನಂಜಯನೇ! ಕರ್ಮಫಲಸ್ನೇಹವನ್ನು ಪರಿತ್ಯಾಗಮಾಡಿ, ಜ್ಞಾನೋಪಾಯದಲ್ಲಿ ನಿರತನಾಗಿ, ಕರ್ಮಫಲಪ್ರಾಪ್ತಿ ಅಪ್ರಾಪ್ತಿಗಳಿಂದ ಮನೋವಿಕಾರರಹಿತನಾಗಿ ವಿಹಿತಕರ್ಮಾನುಷ್ಠಾನವನ್ನು ನೀನು ಮಾಡು. ಫಲಾಪೇಕ್ಷಾರಾಹಿತ್ಯವು ತ್ಯಾಗಸಹಿತವಾಗಿ ಮುಖ್ಯಜ್ಞಾನೋಪಾಯವೆನ್ನಿಸುತ್ತದೆ.

ಈ ವಾಕ್ಯದಲ್ಲಿ "ಸಂಗಂತ್ಯಕ್ತ್ವಾ" ಎಂದು ಹೇಳಿದುದರಿಂದ, ಕರ್ಮಫಲೇಚ್ಛಾರಾಹಿತ್ಯರೂಪವಾದ ಸಂನ್ಯಾಸವೂ, "ಕುರುಕರ್ಮಾಣಿ" ಎಂದು ಹೇಳಿದುದರಿಂದ ವಿಹಿತಕರ್ಮಾನುಷ್ಠಾನರೂಪವಾದ ಕರ್ಮವೂ, "ಯೋಗಸ್ಥಃ" ಎಂಬ ಮಾತಿನಿಂದ ಭಗವಂತನ ಸ್ಮೃತಿರೂಪವಾದ ಸಾಂಖ್ಯವೂ ಮತ್ತು ಅಂತ್ಯದಲ್ಲಿ ಕರ್ಮಫಲಸಮರ್ಪಣೆ ಎಂಬ ತ್ಯಾಗವೂ ಸೂಚಿಸಲ್ಪಟ್ಟಿರುವುವು.

ಸಾಂಖ್ಯನಾಮಕವಾದ ಭಗವತ್ತತ್ವನಿಶ್ಚಯವೂ ಫಲಸಮರ್ಪಣೆಯೆಂಬ ತ್ಯಾಗವೂ ಧ್ಯಾನಕಾರಣವಾದ ವಿಶಿಷ್ಟಕರ್ಮಯೋಗಕ್ಕೆ ಆವಶ್ಯಕವೆಂದು ಇಲ್ಲಿಯೇ ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ:—

(2) **ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ।**
**ಜನ್ಮಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಂ॥**

—(2.51.)

ಬುದ್ಧಿಯುಕ್ತಾಃ ಎಂದರೆ ಶಾಸ್ತ್ರಾಭ್ಯಾಸದಿಂದ ಉತ್ಪನ್ನವಾದ ಭಗವತ್ತತ್ವ ನಿಶ್ಚಯವುಳ್ಳವರು ಕರ್ಮಜನ್ಯಫಲವನ್ನು ಶ್ರೀಕೃಷ್ಣನಲ್ಲಿ ಅರ್ಪಣೆಮಾಡಿ (ಧ್ಯಾನದ್ವಾರಾ) ಅಪರೋಕ್ಷಜ್ಞಾನವನ್ನು ಹೊಂದಿ ಮುಕ್ತರಾಗುತ್ತಾರೆ.

ಚತುರ್ಥಾಧ್ಯಾಯದಲ್ಲಿಯೂ ಸಹ, ಈ ನಾಲ್ಕು ಅಂಗಗಳೂ ಮಿಳಿತವಾಗಿ ಧ್ಯಾನಕಾರಣವೆಂದು ಶ್ರೀಕೃಷ್ಣನು ನಿರೂಪಿಸುತ್ತಾನೆ :—

(3) **ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್॥**
**ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ।**
**ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ॥**
**ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ।**
**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ॥**
**ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ।**
**ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ॥**
**ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ।**
**ಸಮಸ್ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ॥**
**ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ।**
**ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ॥**

—(4. 18-23)

ಯಾವಾತನು ಕರ್ಮಾನುಷ್ಠಾನವನ್ನು ಮಾಡುವಾಗಲೂ ಕೂಡ ತಾನು ಅಸ್ವತಂತ್ರಕರ್ತನೆಂದು ತಿಳಿಯುವನೋ, ಮತ್ತು ಸ್ವಯಂ ಕರ್ಮರಹಿತನಾಗಿ

ಸುಷುಪ್ತ್ಯಾದಿ ಅವಸ್ಥೆಯಲ್ಲಿ ಇರುವಾಗಲೂಕೂಡ ಸ್ವತಂತ್ರಕರ್ತನಾದ ಭಗವಂತನ ವ್ಯಾಪಾರಗಳು ಉಂಟೆಂದು ತಿಳಿಯುತ್ತಾನೆಯೋ ಅಂಥಾ ಪುರುಷನು ಮನುಷ್ಯರಲ್ಲಿ ಜ್ಞಾನಿಯು* ಅವನೇ ಜ್ಞಾನೋಪಾಯವಂತನು. ಅವನೇ ಪೂರ್ಣವಾದ ಕರ್ಮಫಲವನ್ನು ಹೊಂದತಕ್ಕವನು. (ಇದರಿಂದ ಸಾಂಖ್ಯದ ಆವಶ್ಯಕತೆಯು ಹೇಳಲ್ಪಟ್ಟಂತಾಯಿತು.) ಯಾವಾತನ ಸರ್ವಕರ್ಮೋಪಕ್ರಮಗಳೂ ಕರ್ಮಫಲೇಚ್ಛೆಯೆಂಬ ರಾಗದಿಂದಲೂ ಮತ್ತು ಈ ಕರ್ಮವನ್ನು ಇಂಥಾ ಕ್ಷುದ್ರಫಲಾರ್ಥವಾಗಿ ಮಾಡುತ್ತೇನೆಂಬ ಸಂಕಲ್ಪದಿಂದಲೂ ರಹಿತವಾಗಿ ಜರುಗುವುವೋ ಅಂಥಾ, ಪರಮಾತ್ಮನೇ ಸ್ವತಂತ್ರಕರ್ತನು ಜೀವನು ಅಸ್ವತಂತ್ರಕರ್ತನೆಂಬ ಜ್ಞಾನಸರೂಪವಾದ ಅಗ್ನಿಯಿಂದ ದಹಿಸಲ್ಪಟ್ಟ ಪಾಪವುಳ್ಳವನನ್ನು ತತ್ತ್ವಜ್ಞಾನಿಯೆಂದು ಬುಧರು ಹೇಳುತ್ತಾರೆ. ಕರ್ಮಫಲಗಳಲ್ಲಿ ದೃಢವಾದ ಸ್ನೇಹವನ್ನು ಪರಿತ್ಯಾಗಮಾಡಿ (ಎಂದರೆ ಕರ್ಮದಲ್ಲಿ ನಾನು ಸ್ವತಂತ್ರಕರ್ತನೆಂಬ ಅಭಿಮಾನವನ್ನೂ ಕರ್ಮಜನ್ಯಫಲದಲ್ಲಿ ಅಪೇಕ್ಷಾರೂಪವಾದ ರಾಗವನ್ನೂ ಪರಿತ್ಯಾಗಮಾಡಿ), ನಿತ್ಯತೃಪ್ತನೂ ನಿರಾಶ್ರಯನೂ ಆದ ಪರಮಾತ್ಮನಿಗೆ ನಾನು ಪ್ರತಿಬಿಂಬನು ಎಂಬ ಜ್ಞಾನದಿಂದ ಸಹಿತನಾಗಿ, ಕರ್ಮದಲ್ಲಿ ವಿಶೇಷತಃ ಪ್ರವೃತ್ತನಾದರೂ ಅವನು ಕರ್ಮಬಂಧವನ್ನು ಸ್ವಲ್ಪವೂ ಹೊಂದುವುದಿಲ್ಲ. ಆಶಾರಹಿತನಾಗಿ ನಿಗೃಹೀತವಾದ ಮನೋವೃತ್ತಿಗಳುಳ್ಳವನು ಸ್ವದೇಹೇಂದ್ರಿಯಾದಿಗಳಲ್ಲಿ ಅಭಿಮಾನರಹಿತನಾಗುವನು. ಇಂಥಾ ಜ್ಞಾನಿಯು ಶರೀರಧಾರಣಾರ್ಥವಾಗಿ ಮಾತ್ರ ಪ್ರವೃತ್ತಿಕರ್ಮವನ್ನು ಆಚರಿಸಿದರೂ ಪಾಪವನ್ನು ಹೊಂದುವುದಿಲ್ಲ. ಈಶ್ವರೇಚ್ಛೆಯಿಂದ ಪ್ರಾಪ್ತವಾದುದರಿಂದ ತೃಪ್ತನಾಗಿ, ಸುಖದುಃಖ ಲಾಭಾಲಾಭಾದಿ ದ್ವಂದ್ವಗಳಿಂದ ವಿಕಾರರಹಿತನಾಗಿ, ಮಾತ್ಸರ್ಯರಹಿತನಾಗಿ, ಕರ್ಮಫಲಪ್ರಾಪ್ತಿ ಅಪ್ರಾಪ್ತಿಗಳಿಂದ ಉಚ್ಚತ್ವ ನೀಚತ್ವಗಳನ್ನು ಹೊಂದದೇ ಕರ್ಮವನ್ನಾಚರಿಸಿದರೂ ಕರ್ಮದಿಂದ ಬಂಧಿಸಲ್ಪಡುವುದಿಲ್ಲ. (ಇದರಿಂದ ಸಂನ್ಯಾಸ, ಸಾಂಖ್ಯ, ಕರ್ಮಾನುಷ್ಠಾನ ಈ ಮೂರು ಅಂಶಗಳ ಆವಶ್ಯಕತೆಯೂಹೇಳಲ್ಪಟ್ಟಂತಾಯಿತು). ಶ್ರೀಕೃಷ್ಣನು ಇಷ್ಟು ಪ್ರಮೇಯವನ್ನೂಸಂಗ್ರಹಿಸಿ ಒಂದೇ ಶ್ಲೋಕದಲ್ಲಿ ನಿರೂಪಿಸುತ್ತಾನೆ:—ಗತಸಂಗಸ್ಯ = ಫಲಸ್ನೇಹರಹಿತನಾದ, ಮುಕ್ತಸ್ಯ = ಸ್ವಾತಂತ್ರ್ಯಾದ್ಯಭಿಮಾನರಹಿತನಾದ, ಜ್ಞಾನಾವಸ್ಥಿತಚೇತಸಃ =ವಿಷ್ಣುನ

* ಇತರರು ಪಶುಸಮಾನರೆಂದು ಭಾವವು.

ರ್ಥ್ವೋತ್ತಮತ್ವಜ್ಞಾನದಲ್ಲಿ ನಿಶ್ಚಲವಾಗಿ ಸ್ಥಿತವಾದ ಚಿತ್ತವುಳ್ಳ ಮತ್ತು ಯಜ್ಞಾಯ ಕರ್ಮ ಆಚರತಃ = ಎಂದರೆ ಯಜ್ಞನಾಮಕವಿಷ್ಣುಪ್ರೀತ್ಯರ್ಥವಾಗಿ ಸಕಲ ಕರ್ಮಗಳನ್ನೂ ಆಚರಿಸತಕ್ಕಂಥಾ ಪುರುಷನ ಸಕಲ ಕರ್ಮಗಳೂ ಬಂಧಕಗಳಾಗುವುದಿಲ್ಲ. ಅವನು ತಾನು ಆಚರಿಸುವ ಕರ್ಮಗಳಿಂದ ಬದ್ಧನಾಗುವುದಿಲ್ಲ ಮತ್ತು ಸಕಲ ಪಾಪಸಂಕ್ಷಯವನ್ನೂ ಹೊಂದುತ್ತಾನೆ ಎಂದರ್ಥವು.

ಇದರಲ್ಲಿ ಗತಸಂಗಸ್ಯ ಎಂಬ ಶ್ಲೋಕ ಭಾಗದಿಂದ ಸಂನ್ಯಾಸವೂ, ಮುಕ್ತಸ್ಯ, ಜ್ಞಾನಾವಸ್ಥಿತಚೇತಸಃ ಎಂಬ ವಿಶೇಷಣಗಳಿಂದ ಸಾಂಖ್ಯವೂ, ಯಜ್ಞಾಯಾಚರತಃ ಕರ್ಮ ಎಂಬ ಶ್ಲೋಕಭಾಗದಿಂದ ಕರ್ಮಾನುಷ್ಠಾನರೂಪವಾದ ಯೋಗವೂ ಮತ್ತು ತ್ಯಾಗವೂ ಹೇಳಲ್ಪಟ್ಟಿರುವುವು. ಇದೇ ವಿಶಿಷ್ಟ ಕರ್ಮಯೋಗವು.

ಪಂಚಮಾಧ್ಯಾಯದಲ್ಲಿಯೂ ಸಹ ಶ್ರೀಕೃಷ್ಣನು ಸಾಂಖ್ಯ, ಸಂನ್ಯಾಸ, ಕರ್ಮಯೋಗ ಇವುಗಳೆಲ್ಲಾ ಮಿಳಿತವಾಗಿಯೇ ಧ್ಯಾನಕಾರಣವಾಗಿ ಅಪರೋಕ್ಷಜ್ಞಾನವನ್ನು ಹುಟ್ಟಿಸುವುವೆಂದು ಹೇಳಿರುತ್ತಾನೆ :—

(4) **ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।**

—(5. 2.)

ಕಾಮಾದಿ ವರ್ಜನರೂಪವಾದ ಸಂನ್ಯಾಸವು ಮತ್ತು ಭಗವದರ್ಪಣಬುದ್ಧಿಯಿಂದ ಕರ್ಮಾನುಷ್ಠಾನ ರೂಪವಾದ ಯೋಗವು, ಉಭೌ = ಇವೆರಡೂ ಸೇರಿಯೇ ಎಂದರೆ ಇವುಗಳೆರಡೂ ಮಿಳಿತವಾಗಿಯೇ ಮೋಕ್ಷಕಾರಣವಾಗುವುವು.

ಕರ್ಮಯೋಗ ಸಂನ್ಯಾಸಗಳ ಮೇಳನವು ಮತ್ತು ಸಾಂಖ್ಯವೂ ಧ್ಯಾನಾದಿದ್ವಾರಾ ಜ್ಞಾನೋತ್ಪತ್ತಿಯಲ್ಲಿ ಅತ್ಯವಶ್ಯಕವೆಂದು ಶ್ರೀಕೃಷ್ಣನು ಪುನಃ ಉಪಪಾದಿಸುತ್ತಾನೆ:—

(5) **ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।**
**ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ ॥**
**ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।**
**ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥**

—(5. 6-7.)

ಎಲೈ ಪಾರ್ಥನೇ! ಭಗವದರ್ಪಣ ಬುದ್ಧಿಯಿಂದ ಮಾಡಿದ ಕರ್ಮಾನುಷ್ಠಾನವೆಂಬ ಯೋಗವಿಲ್ಲದಿದ್ದರೆ ಕೇವಲ ಕಾಮಾದಿವರ್ಜನರೂಪವಾದ ಸಂನ್ಯಾಸವು ನರಕಾದ್ಯನರ್ಥಗಳಿಗೇ ಕಾರಣವಾಗುತ್ತದೆ. ಯೋಗಸಹಕೃತನಾಗಿ ಮನನಶೀಲನಾದ ಯತಿಯು ಕ್ಷಿಪ್ರದಲ್ಲಿ ಪರಬ್ರಹ್ಮನನ್ನು ಹೊಂದುತ್ತಾನೆ. ಭಗವದರ್ಪಣ ಬುದ್ಧಿಯಿಂದ ವಿಹಿತ ಕರ್ಮಾನುಷ್ಠಾನವೆಂಬ ಯೋಗದಿಂದ ಸಹಕೃತನಾಗಿ, ವಿಶುದ್ಧವಾದ ಮನಸ್ಸುಳ್ಳವನಾಗಿ, (ಎಂದರೆ ಫಲಸ್ನೇಹರಾಹಿತ್ಯ ರೂಪವಾದ ಸಂನ್ಯಾಸವನ್ನು ಹೊಂದಿ), ನಿಗೃಹೀತವಾದ ಮನಸ್ಸುಳ್ಳವನಾಗಿ, ಜಿತೇಂದ್ರಿಯನಾಗಿ, ಮತ್ತು ಸರ್ವ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನಲ್ಲಿ ಇಡಲ್ಪಟ್ಟ ಚಿತ್ತವುಳ್ಳವನಾಗಿ ಕರ್ಮವನ್ನು ಆಚರಿಸುವವನು ಕರ್ಮದಿಂದ ಬಂಧಿಸಲ್ಪಡುವುದಿಲ್ಲ.

ತತ್ತ್ವನಿಶ್ಚಯರೂಪವಾದ ಸಾಂಖ್ಯವೂ, ಸಂಕಲ್ಪತ್ಯಾಗರೂಪವಾದ ಸಂನ್ಯಾಸವೂ, ಪರಮಾತ್ಮನಲ್ಲಿ ಫಲಸಮರ್ಪಣರೂಪವಾದ ತ್ಯಾಗವೂ ಜ್ಞಾನೋತ್ಪತ್ತಿಯಲ್ಲಿ ಅತ್ಯವಶ್ಯಕವೆಂಬುದು ಶ್ರೀಕೃಷ್ಣನ ಮುಂದಿನ ವಾಕ್ಯಗಳಿಂದ ನಿಸ್ಸಂಶಯವಾಗುವಂತೆ ನಿಶ್ಚಿತವಾಗುವುದು.

(6) **ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।**
**ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥**
**ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।**
**ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥**
**ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥**
**ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।**
**ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥**
**ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿನೈಷ್ಠಿಕೀಂ ।**
**ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥**
**ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।**
**ನವದ್ವಾರೇ ಪುರೇ ದೇಹೀ ನೈವ ಕುರ್ವನ್ನಕಾರಯನ್ ॥**

**(5. 8-13.)**

ಯುಕ್ತಃ=ಭಗವದರ್ಪಣ, ಫಲತ್ಯಾಗ, ಭಗವತ್ಸ್ಮೃತಿಯೇ ಮುಂತಾದ ಉಪಾಯುಗಳಿಂದ ಸಹಿತನಾದ ವಿಶಿಷ್ಟ ಕರ್ಮಯೋಗಿಯು, ತತ್ವವಿತ್=ತತ್ತ್ವ ಜ್ಞಾನದಿಂದ ಕೂಡಿದವನಾಗಿ, ದರ್ಶನ, ಶ್ರವಣ, ಸ್ಪರ್ಶನ, ಆಸ್ವಾದನ, ಗಂಧ ಗ್ರಹಣಾದಿ ಜ್ಞಾನೇಂದ್ರಿಯ ವ್ಯಾಪಾರಗಳನ್ನು ಮಾಡುತ್ತಿದ್ದರೂ, ಭೋಜನ ಮಾಡುತ್ತಿದ್ದರೂ, ಗಮನಾಗಮನಾದಿ ಪಾದೇಂದ್ರಿಯವ್ಯಾಪಾರವನ್ನು ಮಾಡುತ್ತಿದ್ದರೂ, ನಿದ್ರಿಸಬೇಕಾದರೂ, ಶ್ವಾಸಬಿಡುತ್ತಿದ್ದರೂ, ಪ್ರಲಾಪಮಾಡುತ್ತಿದ್ದರೂ, ಮಲಾದಿ ವಿಸರ್ಜನೆಯನ್ನು ಮಾಡುತ್ತಿದ್ದರೂ, ಹಸ್ತದಿಂದ ಪದಾರ್ಥಗಳನ್ನು ಗ್ರಹಣಮಾಡುತ್ತಿದ್ದರೂ, ಕಣ್ಣುರೆಪ್ಪೆಗಳನ್ನು ತೆರೆಯುತ್ತಿದ್ದರೂ ಮುಚ್ಚುತ್ತಿದ್ದರೂ ಕೂಡ ಸಕಲ ಜ್ಞಾನೇಂದ್ರಿಯಕರ್ಮೇಂದ್ರಿಯಗಳೂ ತಮ್ಮ ತಮ್ಮ ವಿಷಯಗಳಲ್ಲಿ ಸ್ವತಂತ್ರನಾದ ಹರೀಚ್ಛೆಯಿಂದ ಪ್ರವರ್ತಿಸುತ್ತವೆ; ನಾನು ಸ್ವತಂತ್ರನಾಗಿ ಯಾವ ವ್ಯಾಪಾರವನ್ನೂ ಮಾಡುವುದಿಲ್ಲ ಎಂದು ಅನುಸಂಧಾನವನ್ನು ಮಾಡುತ್ತಾನೆ. ಯಾವಾತನು ಕರ್ಮಫಲದಲ್ಲಿ ಅಪೇಕ್ಷಾರಹಿತನಾಗಿ, ಕರ್ಮಫಲಗಳನ್ನು ಪರಬ್ರಹ್ಮನಲ್ಲಿ ಸಮರ್ಪಿಸುತ್ತಾ ಕರ್ಮಗಳನ್ನು ಆಚರಿಸುತ್ತಾನೆಯೋ, ಅವನು ಕಮಲಪತ್ರವು ಜಲದಲ್ಲಿ ನಿರ್ಲಿಪ್ತವಾಗಿರುವಂತೆ ತಾನು ಮಾಡಿದ ಕರ್ಮಗಳಿಂದ ಬಂಧಿಸಲ್ಪಡುವುದಿಲ್ಲ. ಸಾಂಪ್ರದಾಯಿಕ ಆಚಾರವೂ ಹೀಗೆಯೇ ಇರುವುದೆಂದು ಶ್ರೀಕೃಷ್ಣನು ಹೇಳುತ್ತಾನೆ:— ಯೋಗಿಗಳು ಆತ್ಮಶುದ್ಧ್ಯರ್ಥವಾಗಿ ಸ್ವಾತಂತ್ರ್ಯಾಭಿಮಾನರಹಿತರಾಗಿ ಶರೀರದಿಂದಲೂ, ಮನೋಇಂದ್ರಿಯದಿಂದಲೂ, ಬುದ್ಧಿಯಿಂದಲೂ, ಕರ್ಮಫಲದಲ್ಲಿ ಅಪೇಕ್ಷಾ ರಹಿತರಾಗಿ ಕರ್ಮವನ್ನು ಆಚರಿಸುತ್ತಾರೆ. ಕರ್ಮಫಲಾಪೇಕ್ಷಾರಹಿತನಾಗಿ ಭಗವದರ್ಪಣಾದಿ ಬುದ್ಧಿಯಿಂದ ಕರ್ಮಾನುಷ್ಠಾನವನ್ನು ಮಾಡುವವನು (ಜ್ಞಾನದ್ವಾರಾ) ಸ್ವಾಭಾವಿಕವಾದ ಎಂದರೆ ಸ್ವರೂಪಾನಂದಾವಿರ್ಭಾವರೂಪಾತ್ಮಕವಾದ ಮುಕ್ತಿಯನ್ನು ಹೊಂದುತ್ತಾನೆ. ಫಲಾಪೇಕ್ಷೆಯುಳ್ಳವನಾಗಿ ಭಗವದರ್ಪಣಾದಿ ಯೋಗರಹಿತನಾದ ಸ್ವೇಚ್ಛಾಚಾರಿಯು ನಿಬಧ್ಯತೇ=ಅತ್ಯಂತವಾಗಿ ಬಂಧಿಸಲ್ಪಡುತ್ತಾನೆ ಎಂದರೆ ನರಕಾದ್ಯನರ್ಥಗಳನ್ನು ಹೊಂದುತ್ತಾನೆ. ಯೋಗಿಯು ಸರ್ವಕರ್ಮಗಳನ್ನೂ ಅನುಷ್ಠಾನಮಾಡಿ ಮನಸಾ ಸಂನ್ಯಸ್ಯ= ಭಗವಂತನ ಪ್ರೇರಣೆಯಿಂದಲೇ ಅಸ್ವತಂತ್ರನಾದ ನಾನು ಕರ್ಮಗಳನ್ನು ಮಾಡಿ

ರುವೆನು ಎಂದು ಅನುಸಂಧಾನಮಾಡಿ ಕರ್ಮಫಲವನ್ನು ಪರಮಾತ್ಮನಲ್ಲಿ ಸಮರ್ಪಿಸಿ, ಜಿತಮನಸ್ಕನಾಗಿ ನವದ್ವಾರಾತ್ಮಕವಾದ ಈ ದೇಹದಲ್ಲೇ ಇದ್ದರೂ ಸ್ವಾತಂತ್ರ್ಯಜ್ಞಾನದಿಂದ ಯಾವುದನ್ನೂ ಆಚರಿಸದೆ ಮತ್ತು ಯಾವುದನ್ನೂ ಮಾಡಿಸದೆ ಸುಖವಾಗಿ ಇರುತ್ತಾನೆ.

ಚತುರ್ಥಾಧ್ಯಾಯದಲ್ಲಿ ಸಾಂಖ್ಯವೆಂಬ ಪರಬ್ರಹ್ಮವಿಷಯಕ ತತ್ತ್ವಜ್ಞಾನಸಹಿತವಾದ ವಿಶಿಷ್ಟ ಕರ್ಮಯೋಗದ ಸ್ವರೂಪವನ್ನು ಶ್ರೀಕೃಷ್ಣನು ಸ್ವಲ್ಪ ವಿಶೇಷವಾಗಿ ವರ್ಣಿಸಿರುತ್ತಾನೆ. ಮತ್ತು ಸಾಕ್ಷಾದಪರೋಕ್ಷಸಾಧನವಾದ ಧ್ಯಾನೋಪಯೋಗಿಯಾದ ಇಂಥಾ ಕರ್ಮಯೋಗವು ಅನೇಕಪ್ರಕಾರವಾಗಿರುವುವು ಎಂದೂ ಹೇಳುತ್ತಾನೆ:—

(7) ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ॥
ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ॥
ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ।
ಶಬ್ದಾದೀನ್ ವಿಷಯಾನನ್ಯೇ ಇಂದ್ರಿಯಾಗ್ನಿಷು ಜುಹ್ವತಿ॥
ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ॥
ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಶಂಸಿತವ್ರತಾಃ॥
ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ॥
ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ।
ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ॥
ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಂ।
ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ॥
—(4. 24-31.)

ಯಾವಾತನು ಹೋಮಸಾಧನವಾದ ದರ್ವೀಪಿಠರಾದಿಗಳು ಬ್ರಹ್ಮಾಧೀನವು, ಬ್ರಹ್ಮನಿಂದ ಅಧಿಷ್ಠಿತವಾದುದು; ಹೋಮದ್ರವ್ಯವಾದ ಹವಿಸ್ಸು ಬ್ರಹ್ಮಾಧೀನವು, ಬ್ರಹ್ಮನಿಂದ ಅಧಿಷ್ಠಿತವಾದುದು; ಅಗ್ನಿಯಲ್ಲಿ ಪರಬ್ರಹ್ಮನು ಇರುತ್ತಾನೆ, ಅಗ್ನಿನಿಯಾಮಕನು ಪರಮಾತ್ಮನು; ಸಮಾಧಿಯಿಂದ ಸಹಿತವಾದ ಸಕಲ ಕರ್ಮವೂ ಬ್ರಹ್ಮಾಧೀನವು ಮತ್ತು ಬ್ರಹ್ಮನಿಂದ ಅಧಿಷ್ಠಿತವಾದುದು ಎಂದು ತಿಳಿದು, ಬ್ರಹ್ಮನಿಂದ ಪ್ರೇರಿತನಾಗಿದ್ದೇನೆ ಎಂಬ ಅನುಸಂಧಾನಪೂರ್ವಕವಾಗಿ ಹೋಮವನ್ನು ಮಾಡುತ್ತಾನೆಯೋ, ಬ್ರಹ್ಮೈವತೇನಗಂತವ್ಯಂ =ಅಂಥಾ ಯೋಗಿಗೆ (ಜ್ಞಾನದ್ವಾರಾ) ಪರಬ್ರಹ್ಮನೇ ಪ್ರಾಪ್ಯನು. ಇಂಥವನು ಅಪರೋಕ್ಷಜ್ಞಾನವನ್ನು ಹೊಂದಿ ಮುಕ್ತನಾಗುತ್ತಾನೆ ಎಂದು ಅರ್ಥವು. ಈರೀತಿಯಾಗಿ ಯಾವ ಸಂಖ್ಯಾನುಸಂಧಾನದಿಂದ ಮುಕ್ತಿಯಾಗುವುದೋ ಅಂಥಾ ತತ್ತ್ವಜ್ಞಾನವನ್ನು ವಿವರಿಸಿ ಶ್ರೀಕೃಷ್ಣನು ಇಂಥಾ ವಿಶಿಷ್ಟ ಕರ್ಮಯೋಗವು ಅನೇಕ ಪ್ರಕಾರವಾಗಿರುವುದೆಂದು ನಿರೂಪಿಸಬೇಕಾಗಿ ಹನ್ನೊಂದು ಪ್ರಭೇದಗಳನ್ನು ನಾಮತಃ ನಿರ್ದೇಶಮಾಡಿ ವರ್ಣಿಸುತ್ತಾನೆ:— 1. ಕೆಲವು ಯೋಗಿಗಳು ಭಗವಂತನ ಉಪಾಸನೆಯನ್ನೇ ಯಜ್ಞರೂಪವಾಗಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. 2. ಮತ್ತು ಕೆಲವರು ಬ್ರಹ್ಮಾಧೀನವಾದ ಮತ್ತು ಬ್ರಹ್ಮನಿಂದ ಅಧಿಷ್ಠಿತವಾದ ಅಗ್ನಿಯಲ್ಲಿ ಯಜ್ಞನಾಮಕ ಭಗವಂತನನ್ನು ಉದ್ದೇಶಮಾಡಿ ಯಜ್ಞನಾಮಕ ಪರಮಾತ್ಮನ ಪ್ರೇರಣೆಯಿಂದಲೇ ಕರ್ಮಮಾಡುತ್ತೇನೆಂಬ ಜ್ಞಾನಪೂರ್ವಕವಾಗಿ ಹೋಮಮಾಡಿ ಅದನ್ನೇ ಪರಮಾತ್ಮನಿಗೆ ಅರ್ಪಿಸುತ್ತಾರೆ. 3. ಕೆಲವು ಯೋಗಿಗಳು ನಾನು ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆಂಬ ಅನುಸಂಧಾನಪೂರ್ವಕವಾಗಿ ಶ್ರೋತ್ರಾದಿ ಜ್ಞಾನೇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ನಿಗ್ರಹಮಾಡಿ ಅದನ್ನೇ ಯಜ್ಞವೆಂದು ಭಾವಿಸಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. 4. ಮತ್ತೆ ಕೆಲವರು ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆಂಬ ಜ್ಞಾನಪೂರ್ವಕವಾಗಿ ಶಬ್ದಾದಿ ವಿಷಯಗಳನ್ನು (ಹವಿಸ್ಸಾಗಿ ಚಿಂತಿಸಿ) ಶ್ರೋತ್ರಾದಿ ಇಂದ್ರಿಯಗಳೆಂಬ ಬ್ರಹ್ಮಾಧಿಷ್ಠಿತವಾದ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಎಂದರೆ ಪರಮಾತ್ಮಜ್ಞಾನಪೂರ್ವಕವಾಗಿ ವಿಷಯಾಪೇಕ್ಷಾರಹಿತರಾಗಿ ಭಗವತ್ಪೂಜಾತ್ವೇನ ವಿಷಯಭೋಗವನ್ನು ಮಾಡುತ್ತಾರೆ. 5. ಇನ್ನು ಕೆಲವರು ಯೋಗಿಗಳು ನಾನು

ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆಂದು ತಿಳಿದು ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂಬ ಸರ್ವಕರ್ಮೇಂದ್ರಿಯ ವ್ಯಾಪಾರಗಳನ್ನೂ ಮತ್ತು ಪ್ರಾಣಾಪಾನಾದಿ ಪಂಚವಾಯುಗಳ ವ್ಯಾಪಾರವನ್ನೂ ಪ್ರಜ್ವಲಿತವಾದ ಬ್ರಹ್ಮಜ್ಞಾನಪೂರ್ವಕವಾಗಿ ಮನಸ್ಸಿನಿಂದ ನಿಗ್ರಹಮಾಡೋಣವೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಎಂದರೆ ಪರಮಾತ್ಮನ ಜ್ಞಾನಪೂರ್ವಕವಾಗಿ ಕರ್ಮೇಂದ್ರಿಯವ್ಯಾಪಾರಗಳನ್ನೂ ಪಂಚವಾಯುವ್ಯಾಪಾರಗಳನ್ನೂ ಮನಸ್ಸಿನಿಂದ ನಿಯಮಿಸಿ, ಆ ನಿಯಮನ ಕರ್ಮವನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. 6. ಕೆಲವರು ನಾನು ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆಂಬ ಬುದ್ಧಿಪೂರ್ವಕವಾಗಿ, ಸತ್ಪಾತ್ರದಲ್ಲಿ ಈಶ್ವರಪ್ರೀತ್ಯರ್ಥವಾದ ಸರ್ವಸ್ವದಾನವೇ ಮೊದಲಾದ ದ್ರವ್ಯದಾನಗಳನ್ನು ಮಾಡಿ, ಅದನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. 7. ಕೆಲವರು ನಾನು ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆ, ಎಂಬ ಜ್ಞಾನಪೂರ್ವಕವಾಗಿ ಕೃಚ್ಛ್ರಚಾಂದ್ರಾಯಣ, ವಿಷ್ಣುಪಂಚಕ, ಭೀಷ್ಮಪಂಚಕ, ಧಾರಣಪಾರಣಾದಿ ತಪಸ್ಸುಗಳನ್ನು ಮಾಡಿ ಅದನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. 8. ಕೆಲವರು ನಾನು ಯಜ್ಞನಾಮಕ ಪರಮಾತ್ಮನಿಂದ ಪ್ರೇರಿತನಾಗಿದ್ದೇನೆ ಎಂಬ ಜ್ಞಾನಪೂರ್ವಕವಾಗಿ ಅಷ್ಟಾಂಗಸಹಿತವಾದ ಧ್ಯಾನವನ್ನು ಆಚರಿಸಿ ಅದನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಅರ್ಪಿಸುತ್ತಾರೆ. *

---

* ಅಷ್ಟಾಂಗಯೋಗಗಳು, ಪ್ರಾಣಾಯಾಮ, ಆಸನನಿಯಮಗಳು ಇವೇ ಮುಂತಾದ ವಿಷಯಗಳಲ್ಲಿ ಚರ್ಚೆನಡೆದಿದ್ದರೂ ಈ ಗ್ರಂಥದಲ್ಲಿ ಅದು ಉದ್ದೇಶಪೂರ್ವಕವಾಗಿ ವರ್ಣಿಸಲ್ಪಟ್ಟಿಲ್ಲ. ಆ ವಿಷಯಗಳು ಹೀಗೆಂದು ಬರೆಯಲ್ಪಟ್ಟರೆ, ಕ್ಷಿಪ್ರವಾದ ಉತ್ಸಾಹವನ್ನು ವೃದ್ಧಿಮಾಡಿ ನಿಜವಾದ ವೈರಾಗ್ಯರಹಿತರಾದ ಅಶಾಂತರ ಹೃದಯದಲ್ಲಿ ಸ್ವತಂತ್ರಪ್ರವೃತ್ತಿಗಳನ್ನು ಹುಟ್ಟಿಸಿ ಆ ವಿಧವಾದ ದುರ್ಯೋಗದಿಂದ ದೇಹಕ್ಷಯಕ್ಕೂ ಪಾಪವೃದ್ಧಿಗೂ ಕಾರಣವಾಗುವುವು. ಗುರುದೇವತೆಗಳ ಅನುಗ್ರಹದಿಂದ ಪರಂಪರಾಪ್ರಾಪ್ತವಾದ ರೀತಿಯಲ್ಲಿಯೇ ಅವುಗಳನ್ನು ಸೇವಾದ್ವಾರಾ ಪಡೆದು ಮುಮುಕ್ಷುವು ವಿಷಯಭೋಗಗಳನ್ನು ತೃಣವೆಂದು ಭಾವಿಸಿ ಧ್ಯಾನಮಾತ್ರದಿಂದ ಸುಖಿಯಾಗಿರಬೇಕು. ಇಲ್ಲಿ ಸೂಕ್ಷ್ಮಾಂಶವೇನೆಂದರೆ:— ಅಷ್ಟಾಂಗಯೋಗವೂ ಕೂಡ, ಶಾಸ್ತ್ರದಂತೆ ಮುಕ್ತಿಯೋಗ್ಯರ ಯೋಗವೆಂದೂ ತಮೋಯೋಗ್ಯರ ಯೋಗವೆಂದೂ ಎರಡು ಪ್ರಕಾರವಾಗಿರುವುದು. ಕ್ರಮಗಳೂ

9. ಕೆಲವರು ಯಜ್ಞನಾಮಕವಿಷ್ಣುವಿನಿಂದ ಪ್ರೇರಿತನಾಗಿದ್ದೇನೆಂಬ ಜ್ಞಾನಪೂರ್ವಕವಾಗಿ ಪಾರಾಯಣ, ವೇದಾಧ್ಯಯನಾದಿಗಳನ್ನು ಮಾಡಿ ಅದನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಸಮರ್ಪಿಸುತ್ತಾರೆ. ಈ ಸ್ವಾಧ್ಯಾಯ ಯಜ್ಞಕಾರಿಗಳು ಶ್ರವಣಮನನಾದಿ ಜ್ಞಾನಯಜ್ಞದಲ್ಲಿ ನಿರತರಾಗಿರುವುದರಿಂದ ತೀಕ್ಷ್ಣವ್ರತವುಳ್ಳವರು ಮತ್ತು ಯತ್ನಶೀಲರು 10. ಪ್ರಾಣಾಯಾಮಾಭ್ಯಾಸಶೀಲರಾದ ಕೆಲವರು ಯೋಗಿಗಳು ಯಜ್ಞನಾಮಕ ವಿಷ್ಣುವಿನಿಂದ ಪ್ರೇರಿತನಾಗಿದ್ದೇನೆಂಬ ಜ್ಞಾನಪೂರ್ವಕವಾಗಿ ಪ್ರಾಣಾಪಾನ ವಾಯುಗಳ ಸಂಚಾರವನ್ನು ನಿರೋಧಿಸಿ ಎಂದರೆ ಕುಂಭಕದಲ್ಲಿ ಸ್ಥಾಯಿಯಾಗಿ ನಿಲ್ಲಿಸಿ, ಪ್ರಾಣವಾಯುವಿನಲ್ಲಿ ಅಪಾನವಾಯುವನ್ನು ಪ್ರವೇಶಿಸುತ್ತಾರೆ ಮತ್ತು ಅಪಾನವಾಯುವಿನಲ್ಲಿ ಪ್ರಾಣವಾಯುವನ್ನು ಪ್ರವೇಶಿಸುತ್ತಾರೆ. 11. ಮತ್ತು ಕೆಲವು ಯೋಗಿಗಳು ಯಜ್ಞನಾಮಕಪರಮಾತ್ಮನಿಂದ ಪ್ರೇರಿತನಾಗಿದ್ದೇನೆಂಬ ಜ್ಞಾನಪೂರ್ವಕವಾಗಿ ದೇಹಧಾರಣೋಪಯೋಗಿಯಾಗುವಷ್ಟು ಮಾತ್ರ ಆಹಾರವನ್ನು ಸೇವಿಸಿ, (ನಿರಾಹಾರದಿಂದ ಇಂದ್ರಿಯಾದಿಗಳ ಶಕ್ತಿಯನ್ನು ಅಡಗಿಸಿ) ಇಂದ್ರಿಯವೃತ್ತಿಗಳನ್ನು ಇಂದ್ರಿಯಗಳಲ್ಲಿ ಹೋಮಮಾಡುತ್ತಾರೆ, ಎಂದರೆ ಅಲ್ಪಾಹಾರದಿಂದ ಇಂದ್ರಿಯಶಕ್ತಿಯನ್ನು ಕುಂಠನಮಾಡಿ, ಅವುಗಳನ್ನು ವಿಷಯಭೋಗದಲ್ಲಿ ಅಸಮರ್ಥವನ್ನಾಗಿಮಾಡಿ ಅಂಥಾ ಇಂದ್ರಿಯ ನಿಯಮನವನ್ನೇ ಯಜ್ಞವನ್ನಾಗಿ ಪರಮಾತ್ಮನಲ್ಲಿ ಸಮರ್ಪಿಸುತ್ತಾರೆ. ಇವರೆಲ್ಲರೂ ಯಜ್ಞಜ್ಞಾನವುಳ್ಳವರೇ ಮತ್ತು ಯಜ್ಞಾನುಷ್ಠಾನದಿಂದ ನಷ್ಟವಾದ ಪಾಪವುಳ್ಳವರೇ*.

---

ಸಿದ್ಧಿಗಳೂ ಎರಡು ಪ್ರಕಾರವಾಗಿಯೇ ಇರುವುವು. ಆದುದರಿಂದ ದ್ವೈತ ತತ್ವದಲ್ಲಿ ನಿಷ್ಠಾರಹಿತನಾದವನ ಯೋಗವು ತಾಮಸವೆಂದು ಸಿದ್ಧವು. ತಾಮಸಯೋಗವೂ ಕೂಡ ಬಲಪ್ರದವೂ ಸಿದ್ಧಿಪ್ರದವೆಂದು ತೋರಿದರೂ ಹೂಣವಿದ್ಯಾಭ್ಯಾಸದಂತೆ ಮೋಕ್ಷಕ್ಕೆ ವಿರೋಧಿಯೆಂದು ಸಾತ್ವಿಕರು ನಿಶ್ಚಯಿಸಬೇಕು.

ಸಾತ್ವಿಕಯೋಗವು ಉಪನಿಷತ್ತುಗಳಲ್ಲಿಯೇ ಹೇಳಲ್ಪಟ್ಟಿರುವುದು. ಕಾಲಾಂತರದಲ್ಲಿ ವಿವರಿಸುವೆವು. —[H. S.]

* ನಾಯಂ ಲೋಕೋಸ್ತ್ಯಯಜ್ಞಸ್ಯ-ಎಂಬ ಗೀತಾಶ್ಲೋಕದಿಂದಲೂ ಮತ್ತು ಇತರಪ್ರಮಾಣಗಳಿಂದಲೂ ಅಗ್ನಿಹೋತ್ರಾದಿ ಯಜ್ಞವಿಹೀನನಿಗೆ ಸದ್ಗತಿಯು ಇಲ್ಲವೆಂದು ಪ್ರಮಿತವಾಗಿರುವುದು.

ಅಮೃತವೆಂದು ಕರೆಯಲ್ಪಡುವ ಯಜ್ಞಶೇಷವನ್ನು ಭೋಗಮಾಡುವವನು ಅನಾದಿನಿತ್ಯನಾದ ಪರಿಪೂರ್ಣನಾದ ಪರಬ್ರಹ್ಮನನ್ನು ಹೊಂದುತ್ತಾನೆ. ಎಲೈ ಕುರುಶ್ರೇಷ್ಠನೇ! ಯಾವ ಯಜ್ಞವನ್ನೂ ಮಾಡದವನಿಗೆ ಈ ಲೋಕದಲ್ಲೇ ಸುಖವು ಇರುವುದಿಲ್ಲ. ಇನ್ನು ಉತ್ತಮ ಲೋಕಪ್ರಾಪ್ತಿಯು ಎಲ್ಲಿಂದ ಬರುವುದು?

ಈ ಯಜ್ಞಗಳ ಮಧ್ಯದಲ್ಲಿ ಉಕ್ತವಾಗಿರುವ ಶ್ರವಣಮನನ ಉಪಾಸನಾದಿಗಳನ್ನುಕೂಡ ಶ್ರೀಕೃಷ್ಣನು ಕರ್ಮವಿಶೇಷವೆಂದೇ ನಿರೂಪಣೆ ಮಾಡಿರುತ್ತಾನೆ. ಇದೇ ಸಮಾಧಿಧ್ಯಾನಕ್ಕೆ ಸಾಕ್ಷಾತ್ಕಾರಣವಾದ ವಿಶಿಷ್ಟಕರ್ಮಯೋಗವು. ಶ್ರೀಕೃಷ್ಣನು ಇವೆಲ್ಲಾ ಕರ್ಮವೆಂದೇ ಹೇಳುತ್ತಾನೆ:—

(8) **ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ।**
**ಕರ್ಮಜಾನ್ ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ॥**
**ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ।**
**ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ॥**
—(4. 32—33.)

ಈ ರೀತಿಯಾಗಿ ಅನೇಕ ಪ್ರಕಾರವಾದ ಯಜ್ಞಗಳು ಪರಮಾತ್ಮನ ಮುಖದಲ್ಲಿ ವಿಸ್ತೃತವಾಗಿರುವುವು. ಇವುಗಳೆಲ್ಲವೂ ಮಾನಸಿಕ, ಕಾಯಿಕ, ವಾಚನಿಕ ಭೇದದಿಂದ ಮಾಡಲ್ಪಟ್ಟ ಕರ್ಮಗಳಾದುದರಿಂದ) ಕರ್ಮರೂಪಗಳೆಂದೇ ತಿಳಿ. ಹೀಗೆ ತಿಳಿದು ಸ್ವವಿಹಿತ ಯುದ್ಧಕರ್ಮವನ್ನು ಮಾಡಿ ನೀನು ಮುಕ್ತನಾಗುತ್ತೀಯೆ.* ಉಕ್ತ ಯಜ್ಞಗಳಲ್ಲಿ ಯಾವುದು ಶ್ರೇಷ್ಠವೆಂದರೆ ಹೇಳುತ್ತಾನೆ:—

---

ಅಗ್ನಿಹೋತ್ರರಹಿತನಿಗೆ ನರಕಪ್ರಾಪ್ತಿಯು ಉಂಟೆಂದು ಹೇಳುವವಾಕ್ಯಕ್ಕೆ ಅಗ್ನಿಹೋತ್ರವೇ ಮೊದಲು ಮಾಡಿ ಇಲ್ಲಿ ಹೇಳಿರುವ ಹನ್ನೊಂದು ವಿಧವಾದ ಯಜ್ಞಗಳಲ್ಲಿ ಯಾವಯಜ್ಞವನ್ನೂ ಆಚರಿಸದವನು ಪತಿತನಾಗಿ ನರಕವನ್ನುಹೊಂದುತ್ತಾನೆ ಎಂದು ಅರ್ಥವನ್ನು ಮಾಡಬೇಕು.

* ಇದರಿಂದ ಕರ್ಮಾತ್ಮಕ ಯುದ್ಧದಿಂದೇನು ಪ್ರಯೋಜನವು. ನಾನು ಜ್ಞಾನಯೋಗವನ್ನು ಅವಲಂಬಿಸುತ್ತೇನೆ ಎಂಬ ಅರ್ಜುನನ ಪೂರ್ವಪಕ್ಷವು ನಿರಾಕೃತವಾಯಿತೆಂದು ತಿಳಿಯಬೇಕು. ಶ್ರವಣಮನನಾದಿ ಜ್ಞಾನಯೋಗಗಳೂ ಒಂದು ವಿಧವಾದ ಕರ್ಮವೇ ಎಂದು ಶ್ರೀಕೃಷ್ಣನ ಆಶಯವು.

ದ್ರವ್ಯತ್ಯಾಗಾದಿರೂಪವಾದ ಯಜ್ಞಗಳಿಗಿಂತ ಜ್ಞಾನಸಂಪಾದನರೂಪವಾದ ಯಜ್ಞವು ಶ್ರೇಷ್ಠವು. ಎಲೈ ಪಾರ್ಥನೇ! ಸಕಲ ಕರ್ಮಗಳೂ ಅಪರೋಕ್ಷ ಜ್ಞಾನೋತ್ಪತ್ತಿಯಾದರೆ ಸಫಲವಾಗುತ್ತವೆ. ಇಂಥಾ ವಿಶಿಷ್ಟ ಕರ್ಮಯೋಗದ ಪರಿಪಾಕವನ್ನೂ ಫಲವನ್ನೂ ಶ್ರೀಕೃಷ್ಣನು ಹೇಳುತ್ತಾನೆ:—

(9) **ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।**
**ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥**

—(5. 17.)

ಪರಮಾತ್ಮನಲ್ಲಿ ಪುನಃಪುನಃ ಇಡಲ್ಪಟ್ಟ ಬುದ್ಧಿಯುಳ್ಳವರಾದಂಥಾ, ಪರಮಾತ್ಮನೇ ನಮಗೆ ಸ್ವಾಮಿಯೆಂದು ತಿಳಿದಂಥಾ, ಆತನಲ್ಲಿಯೇ ಅಚಂಚಲವಾಗಿ ಸ್ಥಿತಿಯುಳ್ಳಂಥಾ, ಅವನೇ ನಮಗೆ ಮುಖ್ಯ ಆಶ್ರಯನು ಎಂದು ತಿಳಿದಂಥಾ ಪರೋಕ್ಷಜ್ಞಾನಿಗಳು, ಅಪರೋಕ್ಷಜ್ಞಾನದಿಂದ ಸಂಪೂರ್ಣವಾಗಿ ಬಿಡಲ್ಪಟ್ಟ ಪಾಪಗಳುಳ್ಳವರಾಗಿ, ಪುನರಾವೃತ್ತಿರಹಿತವಾದ ಮುಕ್ತಿಯನ್ನು ಹೊಂದುತ್ತಾರೆ.

ಇಲ್ಲಿ ಅಪರೋಕ್ಷಜ್ಞಾನಕ್ಕೆ ಸಮೀಪವಾದ ಪೂರ್ವಕಾಲದಲ್ಲಿ ಇರಬೇಕಾದ ಮನಸ್ಸಿನಸ್ಥಿತಿಯು ವರ್ಣಿಸಲ್ಪಟ್ಟಿರುವುದು. ಇದು ಸಾಂಗವಾದ ಕರ್ಮಯೋಗ ಪ್ರಭಾವದಿಂದ ಪ್ರಾಪ್ತವಾದುದೆಂದು ತಿಳಿಯಬೇಕು.

ಆರನೆಯ ಅಧ್ಯಾಯದಲ್ಲಿಯೂ ಸಹ ಶ್ರೀಕೃಷ್ಣನು ಸಂನ್ಯಾಸ ತತ್ವಜ್ಞಾನಾದಿಗಳೆಲ್ಲವೂ ಪೂರ್ವೋಕ್ತ ಚತುರಂಶ ಸಹಿತವಾದ ವಿಶಿಷ್ಟ ಕರ್ಮಯೋಗದಲ್ಲಿ ಅಂತರ್ಭೂತವೆಂದೇ ಹೇಳಿರುತ್ತಾನೆ:—

(10) **ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।**
**ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನಚಾಕ್ರಿಯಃ ॥**
**ಯಂ ಸಂನ್ಯಾಸ ಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।**
**ನಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥**

—(6. 1-2.)

ಯಾವಾತನು ಕರ್ಮಫಲವನ್ನು ಅಪೇಕ್ಷಿಸದೆ ಸ್ವವರ್ಣಾಶ್ರಮೋಚಿತವಾದ ಕರ್ತವ್ಯಕರ್ಮವನ್ನು ಮಾಡುತ್ತಾನೆಯೋ ಆತನೇ ಸಂನ್ಯಾಸಿಯು

ಮತ್ತು ಯೋಗಿಯು. ಅಗ್ನಿಪರಿತ್ಯಾಗಮಾಡಿದವನು ಸಂನ್ಯಾಸಿಯಲ್ಲ. ಕರ್ತವ್ಯ ಕರ್ಮ ಪರಿತ್ಯಾಗಮಾಡಿದವನು ಯೋಗಿಯಲ್ಲ. ಎಲೈ ಪಾಂಡವನೇ! ರಾಗ ದ್ವೇಷಾದಿ ವರ್ಜನರೂಪವಾದ ಯಾವ ಧರ್ಮವನ್ನು ಸಂನ್ಯಾಸವೆಂದು ಜನರು ಕರೆಯುವರೋ ಅದು (ಚತುರಂಶಸಹಿತವಾದ) ವಿಶಿಷ್ಟಕರ್ಮಯೋಗದಲ್ಲಿ ಅಂತರ್ಭೂತವೆಂದು ತಿಳಿ. (ಸಂನ್ಯಾಸವು ಯೋಗದ ಏಕದೇಶವು ಎಂದರ್ಥವು.) ಏತಕ್ಕೆಂದರೆ ಕರ್ಮ ಮಾಡುವಾಗ ಲೌಕಿಕ ಫಲಾಪೇಕ್ಷಾರೂಪವಾದ ಸಂಕಲ್ಪ ವನ್ನು ಪರಿತ್ಯಾಗ ಮಾಡದವನು (ಫಲವನ್ನು ಕೋರುವವನು) ವಿಶಿಷ್ಟ ಕರ್ಮ ಯೋಗಿಯು ಎಂದೆನಿಸಿಕೊಳ್ಳಲಾರನು.

ಸಮಗ್ರವಾದ ಕರ್ಮಯೋಗದಲ್ಲಿ ಶಾಸ್ತ್ರಜ್ಞಾನವೂ ಏಕದೇಶವೆಂದು ಕರ್ಮಯೋಗದ ಪರಿಪಾಕವನ್ನು ಹೊಂದಿದ ಯೋಗಿಯ ಧ್ಯಾನವರ್ಣನೆಯ ಪರಾಮರ್ಶದಿಂದ ತಿಳಿದುಬರುವುದು :—

(11) **ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।**
**ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥**
—(6. 8.)

ಧ್ಯಾನಯೋಗದ ಫಲವನ್ನು ಹೊಂದಿದ ಯೋಗಿಯು ವೇದಾದಿ ಶಾಸ್ತ್ರ ಜನಿತ ವಿಷ್ಣೂತ್ಕರ್ಷಜ್ಞಾನದಿಂದಲೂ ಮತ್ತು ಪರಮಾತ್ಮನ ವಿಶೇಷ ಮಾಹಾ ತ್ಮ್ಯಜ್ಞಾನದಿಂದಲೂ ತೃಪ್ತನಾಗಿ, ಶೀತೋಷ್ಣಾದಿ ದ್ವಂದ್ವಗಳು ಪ್ರಾಪ್ತ ವಾದರೂ ನಿರ್ವಿಕಾರನಾಗಿ, ಜಿತೇಂದ್ರಿಯನಾಗಿ, ಕಾಂಚನವನ್ನು ಕಲ್ಲಿಗೆ ಸಮ ವಾಗಿ ತಿಳಿಯುತ್ತಾನೆ. ಅವನೇ ಯೋಗಸಂಪೂರ್ತಿಯುಳ್ಳವನೆನ್ನಿಸುವನು.

**ಪ್ರಶ್ನೆ**—ಸ್ವಾಮಿ! ತಮ್ಮಿಂದ ಉದಾಹೃತವಾದ ಈ ವಾಕ್ಯಗಳಲ್ಲೆಲ್ಲಾ ಕರ್ಮಫಲೇಚ್ಛಾರಾಹಿತ್ಯ ಅಥವಾ ಕಾಮಾದಿ ದೋಷರಾಹಿತ್ಯವೆಂಬ ಸಂನ್ಯಾ ಸವು, ತತ್ವಜ್ಞಾನವೆಂಬ ಸಾಂಖ್ಯವು, ವಿಹಿತಕರ್ಮಾನುಷ್ಠಾನವೆಂಬ ಯೋಗವು ಹೀಗೆ ಮೂರೇ ಅಂಶಗಳು ಪ್ರತಿಪಾದಿತವಾಗಿರುವುವು. ಪರಮಾತ್ಮನಲ್ಲಿ ಕರ್ಮ ಫಲ ಸಮರ್ಪಣೆಯೆಂಬ (ತ್ಯಾಗವೆಂಬ) ಚತುರ್ಥಾಂಶವನ್ನು ಏತಕ್ಕೆ ನಿರೂ ಪಿಸಲಿಲ್ಲ?

**ಉತ್ತರ—ಶ್ರೀಶ್ರೀಗಳವರು**—ವಿಹಿತಕರ್ಮಗಳನ್ನು ಮಾಡಿ ಪರಮಾ ತ್ಮನಲ್ಲಿ ಕರ್ಮವನ್ನು ಸಮರ್ಪಿಸುವುದೇ ಕರ್ಮಾನುಷ್ಠಾನವು ಎಂದು ವಿವಕ್ಷೆ

ಮಾಡಿ ತ್ಯಾಗವನ್ನು ಪೃಥಕ್ ನಿರ್ದೇಶಮಾಡಲಿಲ್ಲ. ಸರ್ವಾಂಶಗಳಿಂದ ಸಹಿತವಾದ ಕರ್ಮವೇ ಪರಿಪೂರ್ಣವಾದ ಕರ್ಮಯೋಗವು ಎಂಬುದು ಶ್ರೀಕೃಷ್ಣನ ತೃತೀಯಾಧ್ಯಾಯದ ವಾಕ್ಯದಿಂದ ಸ್ಫುಟವಾಗಿ ಗೊತ್ತಾಗುವುದು.

(12) **ಮಯಿ ಸರ್ವಾಣಿ ಕರ್ಮಾಣಿ ಸಂನ್ಯಾಸ್ಯಾಧ್ಯಾತ್ಮಚೇತಸಾ।**
**ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥**
—(3.30.)

ನಾನೇ (ಶ್ರೀಕೃಷ್ಣನೇ) ಸರ್ವೋತ್ತಮಚೇತನನೆಂಬ ಜ್ಞಾನಪೂರ್ವಕವಾಗಿ, ಕರ್ಮಫಲದಲ್ಲಿ ಅಪೇಕ್ಷೆಯಿಲ್ಲದೆ, ಸಕಲ ವಿಹಿತಕರ್ಮಗಳನ್ನೂ ಅನುಷ್ಠಾನ ಮಾಡಿ, ನನ್ನಲ್ಲಿ ಸಮರ್ಪಿಸಿ, ಮಮತಾರಹಿತನಾಗಿ ಸಂತಾಪವನ್ನು ಹೊಂದದೆ ಯುದ್ಧಮಾಡು. ಈ ವಾಕ್ಯದಲ್ಲಿ 'ಸರ್ವಾಣಿ ಕರ್ಮಾಣಿ' ಎಂಬ ಪದಗಳಿಂದ ವಿಹಿತ ಕರ್ಮಾನುಷ್ಠಾನರೂಪವಾದ ಕರ್ಮಯೋಗವೂ, ಮಯಿ ಸಂನ್ಯಸ್ಯ ಎಂಬ ಪದಗಳಿಂದ ಫಲಸಮರ್ಪಣೆಯೆಂಬ ತ್ಯಾಗಾಂಶವೂ, ಅಧ್ಯಾತ್ಮಚೇತಸಾ ಎಂಬ ಪದದಿಂದ ತತ್ವನಿಶ್ಚಯರೂಪವಾದ ಸಾಂಖ್ಯಾಂಶವೂ, ನಿರಾಶೀರ್ನಿರ್ಮಮಃ ಎಂಬ ಪದಗಳಿಂದ ಫಲಸ್ನೇಹರಾಹಿತ್ಯ ಮತ್ತು ರಾಗಾಭಿಮಾನವರ್ಜನರೂಪವಾದ ಸಂನ್ಯಾಸಾಂಶವೂ ನಿರೂಪಿತವಾಗಿರುವುವು. ಇಂಥಾ ವಿಶಿಷ್ಟಕರ್ಮಯೋಗವೇ * ಧ್ಯಾನಕ್ಕೆ ಸಾಕ್ಷಾತ್ಕಾರಣವೂ ಕ್ಷಿಪ್ರದಲ್ಲಿ ಅಪರೋಕ್ಷಜ್ಞಾನ ಜನಕವೂ ಆಗಿರುವುದು.

---

* ಕರ್ಮಯೋಗ ಅಥವಾ ಯೋಗ ಎಂಬ ಪದಗಳನ್ನು ಶ್ರೀಕೃಷ್ಣನು ಎರಡು ಅರ್ಥಗಳಲ್ಲಿ ಪ್ರಯೋಗ ಮಾಡಿರುತ್ತಾನೆ. **"ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ"** ಇತ್ಯಾದಿ ಬಹು ಸ್ಥಳಗಳಲ್ಲಿ ಯೋಗ ಅಥವಾ ಕರ್ಮಯೋಗವೆಂದರೆ ಕರ್ಮಾನುಷ್ಠಾನ, ತ್ಯಾಗ, ಸಂನ್ಯಾಸ, ಸಾಂಖ್ಯಗಳೆಂಬ ಚತುರಂಶಗಳಿಂದ ಸಹಿತವಾದ ಸಮಗ್ರವಾದ ಸಾಕ್ಷಾತ್ ಜ್ಞಾನಸಾಧನವಾದ ಉಪಾಯವು ಎಂದರ್ಥವು.

**ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ।**

ಇತ್ಯಾದಿ ಕೆಲವು ಸ್ಥಳಗಳಲ್ಲಿ ಶ್ರೀಕೃಷ್ಣನು ಸ್ವವರ್ಣಾಶ್ರಮೋಚಿತ ವಿಹಿತಕರ್ಮಾನುಷ್ಠಾನ ಮಾತ್ರವನ್ನೇ ಕರ್ಮಯೋಗವೆಂದು ವಿವಕ್ಷೆಮಾಡಿ ಸಂಕುಚಿತಾರ್ಥವನ್ನು ಕೊಟ್ಟಿರುತ್ತಾನೆ. ಪ್ರಕರಣ ಪರ್ಯಾಲೋಚನೆಯಿಂದ ಅಲ್ಲಿ ಅಲ್ಲಿ ಅಭಿಪ್ರೇತವಾದ ಅರ್ಥವನ್ನು ತಿಳಿಯಬೇಕು,

2. ಶ್ರೀಕೃಷ್ಣನ ಈ ರೀತಿಯಾದ ಉಪಪಾದನೆಯು "**ಕರ್ಮಣಾ ಜ್ಞಾನಮಾತನೋತಿ**" ಎಂಬ ಶ್ರುತಿಗೂ ಅತ್ಯಂತ ಅನುಕೂಲವಾಗಿರುವುದು. ಈ ಶ್ರುತಿಯಲ್ಲಿರುವ "ಕರ್ಮ" ವೆಂಬ ಪದಕ್ಕೆ ಸಹಕಾರಿ ಸಾಮಗ್ರಿಗಳಿಂದ ವಿಶಿಷ್ಟವಾದ ಚತುರಂಶಗಳಿಂದಲೂ ಪೂರ್ಣವಾದ ಸಮಗ್ರಕರ್ಮಯೋಗವೆಂದು ಅರ್ಥಮಾಡಿದರೆ, ಇಂಥಾ ಕರ್ಮದಿಂದ ಅಪರೋಕ್ಷ ಜ್ಞಾನವು ಸಾಕ್ಷಾತ್ತಾಗಿಯೇ ಹುಟ್ಟುವುದರಿಂದ, ಶ್ರುತಿಗೆ ಮುಖ್ಯಾರ್ಥವನ್ನೇ ಹೇಳಿದಂತಾಯಿತು. ಬ್ರಹ್ಮಾಪರೋಕ್ಷಜ್ಞಾನೋತ್ಪತ್ತಿ ಪ್ರಕಾರವನ್ನು ಎರಡು ವಿಧವಾಗಿ ಉಪಪಾದಿಸಿ ಹೇಳಬಹುದು. ನಿತ್ಯನೈಮಿತ್ತಿಕ ಕರ್ಮಾನುಷ್ಠಾನ, ಶ್ರವಣಮನನಗಳು, ಧ್ಯಾನಾನುಷ್ಠಾನ, ನಂತರ ಅಪರೋಕ್ಷಜ್ಞಾನೋತ್ಪತ್ತಿ ಎಂಬುದು ಒಂದು ವಿಧವಾದ ನಿರೂಪಣೆಯು. ವಿಶಿಷ್ಟಕರ್ಮಯೋಗ, ಧ್ಯಾನಯೋಗ, ಅಪರೋಕ್ಷ ಜ್ಞಾನೋತ್ಪತ್ತಿ ಎಂದು ಮತ್ತೊಂದು ವಿಧವಾದ ನಿರೂಪಣೆಯು. ಪ್ರಮೇಯವು ಒಂದೇ. ಆದರೆ, ನಿರೂಪಣಪ್ರಕಾರವು ಸ್ವಲ್ಪವಿಲಕ್ಷಣವಾಗಿರುವುದು. ಭಗವದ್ಗೀತೆಯಲ್ಲಿ ನಮ್ಮಿಂದ ಇದುವರೆವಿಗೆ ಉಪಪಾದಿತವಾದ ದ್ವಿತೀಯನಿರೂಪಣಪ್ರಕಾರವೇ ಶ್ರೀಕೃಷ್ಣನಿಂದ ಸಾಂಗವಾಗಿ ಪ್ರಥಮ ಷಟ್ಕದಲ್ಲಿಯೂ, ದ್ವಿತೀಯ ಷಟ್ಕಗಳ ಅನೇಕ ಶ್ಲೋಕಗಳಲ್ಲಿಯೂ ಕಥಿತವಾಗಿರುವುದು. ಈರೀತಿಯಾದ ತತ್ತ್ವೋಪಪಾದನೆಯೇ ಶ್ರೀಕೃಷ್ಣನಿಗೆ ಹೆಚ್ಚು ಪ್ರಿಯವಾಗಿರುವಂತೆ ತೋರುವುದು.

ಇಂಥಾ ಉಪಪಾದನೆಯಿಂದ ಒಂದು ಅನುಕೂಲವುಂಟು. ಕರ್ಮಯೋಗಕ್ಕೆ ಅಪರೋಕ್ಷಜ್ಞಾನವೇ ಫಲವೆಂದು ಹೇಳಿದ ಮೇಲೆ, ಅಪರೋಕ್ಷಜ್ಞಾನೋತ್ಪತ್ತಿಪರ್ಯಂತವೂ ಅದನ್ನು ಅನುಷ್ಠಾನಮಾಡಬೇಕೆಂದು ಸಿದ್ಧವಾಯಿತು. ಆದುದರಿಂದ ವಿಹಿತಕರ್ಮಾನುಷ್ಠಾನವನ್ನು ಎಲ್ಲಿಯ ಪರ್ಯಂತ ಆಚರಣೆಮಾಡಬೇಕು? ಶ್ರವಣದಲ್ಲಿ ಆಸಕ್ತನಾದಾಗ ಪರಿತ್ಯಾಗಮಾಡಬಹುದೇ? ಇತ್ಯಾದಿ ರೀತಿಯಾದ ಪ್ರಶ್ನೆಗಳಿಗೆ ಅವಕಾಶವಿರುವುದಿಲ್ಲ. ಕರ್ಮಾನುಷ್ಠಾನದ ಅನಂತರ ಶ್ರವಣಮನನಗಳು, ಅವುಗಳಿಂದ ಅಪರೋಕ್ಷಜ್ಞಾನವು ಎಂದು ಹೇಳಿದರೆ ಕರ್ಮಾದಿಗಳಿಗೆ ಜ್ಞಾನೋತ್ಪತ್ತಿಯಲ್ಲಿ ಕಾರಣತ್ವವು ಹೇಗೆ ಎಂದು ಸಂದೇಹವು

ಅಂಕುರಿಸುವುದು. ಶ್ರವಣದಲ್ಲಿ ಪ್ರವೇಶಮಾಡುವವರೆವಿಗೂ ಕರ್ಮಾನು ಷ್ಠಾನಮಾಡಿ ಅನಂತರ ಕರ್ಮವನ್ನು ಪರಿತ್ಯಾಗಮಾಡಬಹುದೆಂಬ ಭ್ರಮವು ಬರುವುದು. ಸಂದೇಹಪರಿಹಾರೋಪಾಯವನ್ನು ಅವಶ್ಯಕವಾಗಿ ಹೇಳಬೇಕಾಗು ವುದು. ಚತುರಂಶಸಹಿತವಾದ ಸಮಗ್ರಕರ್ಮಯೋಗವನ್ನು ವಿಧ್ಯುಕ್ತರೀತಿ ಯಲ್ಲಿ ಅಪರೋಕ್ಷಜ್ಞಾನೋತ್ಪತ್ತಿಯಾಗುವ ಪರ್ಯಂತವೂ ಆಚರಿಸುತ್ತಲೇ ಇರಬೇಕು ಎಂದು ಹೇಳಿಬಿಟ್ಟರೆ ಇಂಥಾ ಶಂಕೋತ್ಪತ್ತಿಯೇ ಆಗಲಾರದು.

---

## 9. ಒಂಭತ್ತನೆಯ ಅಂಶವು.

### ಅದ್ವೈತಮತಾನುಸಾರಿಯಾದ ಸಾಂಖ್ಯೋಪದೇಶಕ್ಕೆ ಗೀತೆಯಲ್ಲಿ ಅಸಾಂಗತ್ಯಪ್ರದರ್ಶನವು.

1. **ಪ್ರಶ್ನೆ—** ಸ್ವಾಮಿ! ಸಾಂಖ್ಯ, ಸಂನ್ಯಾಸ, ತ್ಯಾಗ, ಕರ್ಮಾನುಷ್ಠಾನ ಈ ನಾಲ್ಕು ಅಂಶಗಳನ್ನೂ ಗೀತೋಕ್ತರೀತಿಯಿಂದಲೇ ಸ್ವಲ್ಪ ವಿವರಿಸಬೇಕು.

**ಶ್ರೀಶ್ರೀಗಳವರು:— "ಕೇವಲಂ ಭಗವದ್ಜ್ಞಾನಂ ಸಾಂಖ್ಯಮಿತ್ಯುಚ್ಯತೇ ಬುಧೈಃ"** ಇತ್ಯಾದಿ ಪ್ರಮಾಣವಚನಾನುಸಾರವಾಗಿ ವೇದಾರ್ಥತತ್ತ್ವ ನಿರ್ಣಯವೇ ಸಾಂಖ್ಯವೆನ್ನಿಸುವುದು. ಕಪಿಲರೂಪನಾದ ವಿಷ್ಣುವಿನ ಸಾಂಖ್ಯೋ ಪದೇಶವೂ ಇದೇ. ಆದುದರಿಂದ ನಿರೀಶ್ವರಸಾಂಖ್ಯವೆಂಬ ಪ್ರಸಿದ್ಧವಾದ ವಾದವು ಪರಮಾತ್ಮನಿಂದ ರಚಿತವಾದುದಲ್ಲ. ಮತ್ತೇನೆಂದರೆ **"ಕಪಿಲೋನ್ಯೋ ಜಗಾದ ಹ"** ಇತ್ಯಾದಿಪ್ರಮಾಣವಚನಾನುಸಾರವಾಗಿ ನಾರಾಯಣ ನಿಂದ ಆಜ್ಞಪ್ತರಾದ ಗೌತಮಾದಿ ಋಷಿಗಳಿಂದ ಪ್ರಣೀತವಾದ, ಅಪ್ರಾಮಾಣಿಕ ವಿಷಯಪ್ರಾಚುರ್ಯವಾದ, ನ್ಯಾಯಶಾಸ್ತ್ರ, ಯೋಗಶಾಸ್ತ್ರ ಮುಂತಾದ ಶಾಸ್ತ್ರ ಗಳಂತೆ ಅದೂ ಒಂದು ಕುಶಾಸ್ತ್ರವೆಂದು ಸಿದ್ಧವಾಗುವುದು. ಸಾಕ್ಷಾತ್ಪರ ಮಾತ್ಮನೇ ಕಪಿಲಾವತಾರದಲ್ಲಿ ಉಪದೇಶಮಾಡಿದ ಪ್ರಮೇಯಗಳು ಭಾಗವತದ

ತೃತೀಯಸ್ಕಂಧದಲ್ಲಿ ಇರುವುವು. ಅಲ್ಲಿಯೂ ಸಾಂಖ್ಯವೆಂದರೆ ಯಥಾರ್ಥತತ್ತ್ವ ವಿಜ್ಞಾನವು ಎಂದೇ ಅರ್ಥವು.*

ಭಗವದ್ಗೀತೆಯಲ್ಲಿಯೂ ಸಹ ಈ ಅರ್ಥದಲ್ಲಿಯೇ ಸಾಂಖ್ಯಶಬ್ದವನ್ನು ಶ್ರೀಕೃಷ್ಣನು ಉಪಯೋಗಿಸಿರುವನು. ಸಮಸ್ತ ಜ್ಞಾತವ್ಯತತ್ತ್ವಗಳನ್ನೂ "ಅಶೋಚ್ಯಾನನ್ವಶೋಚ್ಯಸ್ತ್ವಂ" ಎಂಬ ದ್ವಿತೀಯಾಧ್ಯಾಯದ ಹನ್ನೊಂದನೆಯ ಶ್ಲೋಕವನ್ನು ಮೊದಲುಗೊಂಡು ಮೂವತ್ತೆಂಟನೆಯ ಶ್ಲೋಕಪರ್ಯಂತವೂ ಸಂಕ್ಷೇಪವಾಗಿ ಹೇಳಿ, ಶ್ರೀಕೃಷ್ಣನು ಉಪಕ್ರಾಂತವಾದ ವಿಷಯೋಪಸಂಹಾರ ರೂಪವಾದ ಮೂವತ್ತೊಂಭತ್ತನೆಯ ಶ್ಲೋಕದಲ್ಲಿ,

**(1) ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು।**
—(2. 39.)

ಎಂದರೆ ತತ್ತ್ವಜ್ಞಾನವಿಷಯದಲ್ಲಿ ನನ್ನಿಂದ ಇಷ್ಟು ಮಾತುಗಳು ನಿರೂಪಿತ ವಾದುವು; ಮುಂದೆ ತತ್ತ್ವಜ್ಞಾನೋಪಾಯವನ್ನು ಹೇಳುವೆನು ಎಂದು ಹೇಳಿರುವನು. ಏವಂಚ ದ್ವಿತೀಯಾಧ್ಯಾಯದ ಹನ್ನೊಂದನೆಯ ಶ್ಲೋಕವನ್ನು ಮೊದಲುಮಾಡಿ ಮೂವತ್ತೆಂಟನೆಯ ಶ್ಲೋಕಪರ್ಯಂತವೂ ಶ್ರೀಕೃಷ್ಣನು ಹೇಳಿರುವ ವಾಕ್ಯಗಳು ಮೋಕ್ಷೋಪಯೋಗಿಯಾದ "ಸಾಂಖ್ಯ" (ತತ್ತ್ವಜ್ಞಾನ) ವನ್ನು ಉತ್ಪತ್ತಿಮಾಡುವುವು ಎಂದು ನಿಶ್ಚಿತವಾಯಿತು.

2. ನಿಖಿಲತತ್ತ್ವಸಂಗ್ರಹರೂಪವಾದ ದ್ವಿತೀಯಾಧ್ಯಾಯದ ಈ ಇಪ್ಪತ್ತೇಳು ಶ್ಲೋಕಗಳಿಗೆ ನಮ್ಮಿಂದ ಉಕ್ತವಾದ ಅರ್ಥವೇ ಯಥಾರ್ಥವೆಂಬಲ್ಲಿ ಉಪಪತ್ತಿಪ್ರದರ್ಶನಾರ್ಥವಾಗಿ ಅರ್ಜುನನ ಶಂಕೆಗಳನ್ನು ಪರಿಗಣನೆಮಾಡಿ

---

* ಶಂಕರಾಚಾರ್ಯರೂ ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಷಡ್ದರ್ಶನಗಳಲ್ಲಿರುವ ಸಾಂಖ್ಯ ಶಾಸ್ತ್ರವು ಅಪ್ರಾಮಾಣಿಕವಾದ ಬೇರೆ ಶಾಸ್ತ್ರವೆಂದು ಉಪಪಾದಿಸಿ ಅದನ್ನು ಖಂಡಿಸಿರುವರು. ಮತ್ತು ಸಾಂಖ್ಯಶಬ್ದಕ್ಕೆ ಪರಮಾರ್ಥತತ್ತ್ವಜ್ಞಾನವೆಂದೇ ಗೀತಾಭಾಷ್ಯದ ದ್ವಿತೀಯಾಧ್ಯಾಯದಲ್ಲಿ ಅರ್ಥ ಮಾಡಿರುವರು. ಆ ಸಾಂಖ್ಯವು–ಪರಮಾರ್ಥತತ್ತ್ವಜ್ಞಾನವು–ಅದ್ವೈತವೆಂದು ಅವರ ಮೋಹವು. ಅದ್ವೈತತತ್ತ್ವೋಕ್ತವಾದ ನಿರ್ಗುಣವಸ್ತುವು ಅಥವಾ ಅವಿಕ್ರಿಯಾತ್ಮನು ಗೀತೆಯಲ್ಲಿ ಎಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದಿಲ್ಲ. ಇದು ಉತ್ತರತ್ರ ಮಾಡುವ ವಿಚಾರದಿಂದಲೂ, ಪೂರ್ವಭಾಗದ ವಿಚಾರ ಪರಾಮರ್ಶೆಯಿಂದಲೂ ವಿದಿತವಾಗುವುದು.

ವಿವರಿಸುವೆವು. ಇದರಿಂದಲೇ ಈ ಶ್ಲೋಕಗಳಲ್ಲಿ ನಿರೂಪಿತವಾದ ಸಾಂಖ್ಯವು ಅದ್ವೈತಾತ್ಮಾವಗಾಹಿಯಾದುದೋ ಅಥವಾ ದ್ವೈತತತ್ತ್ವೋಪಪಾದಕವಾದುದೋ ಎಂಬುದನ್ನು ಸುಲಭವಾಗಿ ಮುಂದರೂ ಸಹ ತಿಳಿಯಬಹುದು. ಇಲ್ಲಿ ಉಕ್ತವಾಗಿರುವ ಸಾಂಖ್ಯೋಪದೇಶವು ಧರ್ಮಯುದ್ಧಕ್ರಿಯೆಗೆ ಪ್ರತಿಬಂಧಕವಾಗಿದ್ದ ಅರ್ಜುನನ ವಿಷಾದದ ಪರಿಹಾರಾರ್ಥವಾಗಿ ಶ್ರೀಕೃಷ್ಣನಿಂದ ಮಾಡಲ್ಪಟ್ಟಿರುವುದು. ಇದರ ಶ್ರವಣದಿಂದ ತನ್ನ ಮೋಹವು ನಷ್ಟವಾಯಿತೆಂದೂ ಯುದ್ಧದಲ್ಲಿ ಉದ್ಯುಕ್ತನಾಗುವೆನೆಂದೂ ಅಂತ್ಯದಲ್ಲಿ ಅರ್ಜುನನೂ ಒಪ್ಪಿರುವನು. ಆದುದರಿಂದ ಇಲ್ಲಿ ನಿರೂಪಿತವಾಗಿರುವ ತತ್ತ್ವವು ಅದ್ವೈತವೋ ದ್ವೈತವೋ ಯಾವುದಾದರೂ ಅರ್ಜುನನ ಶಂಕಾಪರಿಹಾರಕವಾಗಿಯೂ, ವಿಷಾದನಾಶಕವಾಗಿಯೂ, ಯುದ್ಧಕ್ರಿಯೆಗೆ ಪ್ರೋತ್ಸಾಹಕವಾಗಿಯೂ ಇರಬೇಕು. ಆದುದರಿಂದ ಇಲ್ಲಿ ದ್ವೈತಾದ್ವೈತಗಳಲ್ಲಿ ಯಾವುದಕ್ಕೆ ಆನುಗುಣ್ಯವು ಇರುವುದೆಂಬುದನ್ನು ನಿರ್ಣಯಿಸುವುದಕ್ಕಾಗಿ ಅರ್ಜುನನ ಪ್ರಶ್ನೆಗಳನ್ನೂ ಶ್ರೀಕೃಷ್ಣನ ಉತ್ತರರೂಪವಾದ ಸಾಂಖ್ಯೋಪದೇಶವನ್ನೂ ಕ್ರಮವಾಗಿ ನಿರೂಪಿಸುವೆವು.

**ಪ್ರಶ್ನೆ:—** ಸ್ವಾಮಿ! ನಮಗೆ ಇನ್ನೂ ಸ್ವಲ್ಪ ಕೂಲಂಕಷವಾಗಿಯೇ ಈ ವಿಷಯವನ್ನು ವಿಚಾರಮಾಡಬೇಕೆಂದು ಅಪೇಕ್ಷೆಯಿರುವುದು. ಮಹಾಜ್ಞಾನಿಯೆಂದು ಪ್ರಸಿದ್ಧನಾದ, ಕುರುವರ್ಷಾದಿಗಳಿಗೆ ದಂಡೆತ್ತಿ ಹೋಗಿ ಅಲ್ಲಿನ ದೇವತೆಗಳಿಂದಲೂ ಸಹ ಕಪ್ಪವನ್ನು ಪಡೆದುಬಂದುದರಿಂದ ಯೋಗೀಶ್ವರನೆಂದೂ ಚಿತ್ರರಥನೆಂಬ ದೇವಗಂಧರ್ವನಿಗೂ ಆಗ್ನೇಯಾಸ್ತ್ರೋಪದೇಶವನ್ನು ಮಾಡಿದುದರಿಂದ ಮಂತ್ರವಿದ್ಯಾಪಾರಂಗತನೆಂದೂ, ದೇವತೆಗಳಿಂದಲೂ ಲಾಲಿತನಾಗಿರುವುದರಿಂದಲೇ ಮತ್ತು ಊರ್ವಶ್ಯಾದಿಗಳ ಕುಹಕಗಳಿಗೂ ವಶನಾಗದುದರಿಂದಲೇ ಮಹಾಜಿತೇಂದ್ರಿಯನಾದ ಬ್ರಹ್ಮಜ್ಞಾನಿಯೆಂದೂ ಪ್ರಸಿದ್ಧನಾಗಿರುವ ಸಾಕ್ಷಾದಿಂದ್ರಪುತ್ರನಾದ ಅರ್ಜುನನಿಗೆ ಮೋಹವು ಬರಲು ಕಾರಣವೇನು? ಮೋಹವೆಂದರೆ ಮಿಥ್ಯಾಜ್ಞಾನವಷ್ಟೇ! ಅದು "ಪಾರ್ಥಾರ್ಷ್ಟಿಷೇಣ" ಇತ್ಯಾದಿ ಭಾಗವತದಲ್ಲಿ ಪರಿಗಣಿತರಾಗಿರುವ ಭ್ರಮರಹಿತರಾದ ಬ್ರಹ್ಮಜ್ಞಾನಿಗಳಲ್ಲಿ ಒಬ್ಬನಾದ ಅರ್ಜುನನಿಗೆ ಹೇಗೆ ತಾನೇ ಸಂಭವಿಸುವುದು?

**ಉತ್ತರ— ಶ್ರೀಶ್ರೀಗಳವರು :—** ಈ ಪ್ರಶ್ನೆಗೆ ಅದ್ವೈತಮತದಲ್ಲಿ ಉತ್ತರಕೊಡಲು ಸಾಧ್ಯವಿಲ್ಲ. ಅಷ್ಟೇ ಅಲ್ಲ! ಅರ್ಜುನನು ಮೊದಲು ಬ್ರಹ್ಮ ಜ್ಞಾನಶೂನ್ಯನಾದ ದಡ್ಡನು; ಶ್ರೀಕೃಷ್ಣನ ಉಪದೇಶವನ್ನು ಹೊಂದಿದ ಅನಂತರ ವೂ ಸಹ ಬ್ರಹ್ಮಜ್ಞಾನಶೂನ್ಯನಾದ ದಡ್ಡನು ಎಂದು ಹೇಳಬೇಕು. ಮತ್ತು ಅದ್ವೈತಿಗಳು ಹೇಳಿಯೂ ಹೇಳುವರು. ಅವರ ಮತದ ರೀತಿಯಿಂದ ಮೊದಲು ಅರ್ಜುನನು ದಡ್ಡನೆಂದು ಒಪ್ಪಿಕೊಳ್ಳದಿದ್ದರೆ, ಆತನ ಪ್ರಶ್ನೆಯೇ ಅನುಚಿತವಾಗು ವುದು. ಕಿಂಚ ಜ್ಞಾನಿಯಾಗಿದ್ದರೆ ಅದ್ವೈತಾತ್ಮನಲ್ಲಿ ಲೀನವಾಗುತ್ತಿದ್ದನೇ ಹೊರ ತು, ಕೃಷ್ಣನ ಪಾದಗಳನ್ನು ಆಶ್ರಯಮಾಡಿ ರಥಮಧ್ಯದಲ್ಲಿ ಘೋರತರವಾದ ಯುದ್ಧಾರ್ಥವಾಗಿ ಕುಳಿತುಕೊಳ್ಳುತ್ತಿರಲಿಲ್ಲ. ಆದುದರಿಂದ ಅರ್ಜುನನು ಅಜ್ಞಾನಿಯೆಂದೇ ನಿಶ್ಚಯಿಸುವುದಾದರೆ, "ಪಾರ್ಥಾರ್ಪಿರ್ಷೇಣ" ಇತ್ಯಾದಿ ಯಾದ ಅರ್ಜುನನು ಬ್ರಹ್ಮಜ್ಞಾನಿಯೆಂದು ಹೇಳುವ ಅನೇಕಪ್ರಮಾಣಗಳು ಕುಪಿತವಾಗುವುವು. ಉಪದೇಶಾನಂತರವೂ ಸಹ ಅರ್ಜುನನು ದಡ್ಡನಾಗಿ ಯೇ ಉಳಿದು ಹೋದನೆಂದು ಅದ್ವೈತಿಗಳು ಒಪ್ಪಿಕೊಳ್ಳಬೇಕು. ಅನ್ಯಥಾ ಅವರ ರೀತ್ಯಾ ಬ್ರಹ್ಮಜ್ಞಾನಿಯಾದ ಅರ್ಜುನನು ಐಕ್ಯಸಾಕ್ಷಾತ್ಕಾರವನ್ನು ಹೊಂದಿದವನಾಗಿ ಯುದ್ಧಭೂಮಿಯಿಂದ ಅದೃಶ್ಯನಾಗಿ ಹೋಗುತ್ತಿದ್ದನು. ಅಥವಾ ಕರ್ಮಸಂನ್ಯಾಸಿಯಾಗಿ ರಣಾಗ್ರದಿಂದ ಓಡುತ್ತಿದ್ದನು. ಆದು ದರಿಂದ ಅರ್ಜುನನು ಶ್ರೀಕೃಷ್ಣನ ಉಪದೇಶಾನಂತರವೂ ಸಹ ಅವಿದ್ಯಾವೃತನಾದ ಭ್ರಾಂತನೆಂದು ಹೇಳುವುದಾದರೆ, ಸಕಲಪ್ರಮಾಣಗಳೂ ದಂಡಾಹತವಾದ ಉರಗ ಗಳಂತೆ ಉಗ್ರವಾದ ಕೋಪವನ್ನು ತಾಳುವುವು. ಪರಂತು ಈ ಸಮಾಧಾನವು ಕೃಷ್ಣಾರ್ಜುನರ ಅವಜ್ಞಾರೂಪವಾಗಿರುವುದು. ಪರಬ್ರಹ್ಮನಾದ ವಿಷ್ಣುವು ತತ್ವವನ್ನು ಬೋಧಿಸಿದರೂ ಸಮೀಚೀನ ಜ್ಞಾನವು ಉತ್ಪನ್ನವಾಗಲಿಲ್ಲವೆಂದೂ, ಅಧಿಕಾರಿವರ್ಗಗಳಲ್ಲಿ ಅತ್ಯಂತ ಶ್ರೇಷ್ಠನಾದ ಶಿಷ್ಯನಾದ, ಮೊದಲೇ ಯೋಗೀ ಶ್ವರನಾಗಿದ್ದ ಅರ್ಜುನನು ವಿಸ್ತೃತವಾದ ಬುದ್ಧಿಯಿಂದ ಸಹಿತವಾಗಿ ಶ್ರವಣ ಮಾಡಿದರೂ ಸಹ ನಿಜತತ್ವವನ್ನು ಚೆನ್ನಾಗಿ ತಿಳಿಯಲಿಲ್ಲವೆಂದೂ ಹೇಳುವುದಕ್ಕಿಂತ ಹೆಚ್ಚು ಅವಜ್ಞೆಯನ್ನು ಗುರುಶಿಷ್ಯರಾದ ಕೃಷ್ಣಾರ್ಜುನರ ವಿಷಯದಲ್ಲಿ ಮಾಡು ವುದು ಅಶಕ್ಯವು. ಪರಂತು ವಿಶ್ವರೂಪದರ್ಶನವೂ ಸಹ ಕಲ್ಪಿತವಾಯಿತೆಂದೂ,

ಯೋಗೀಶ್ವರನಾದ ಶ್ರೀಕೃಷ್ಣನು ಹಳ್ಳಿಯ ಡೊಂಬರಂತೆ ಒಬ್ಬ ಕುಹುಕ ಪುರುಷನೆಂದೂ ಈ ಮತದ ರೀತ್ಯಾ ಪ್ರಾಪ್ತವಾಯಿತು. ಶಂಕರಾಚಾರ್ಯರೂ ಹಾಗೆಯೇ ಈಶ್ವರನು ಒಬ್ಬ ಐಂದ್ರಜಾಲಿಕಪುರುಷನೆಂದೇ ಹೇಳುವರು ಮತ್ತು ಇಂಥಾ ಮಹಾ ವಾದದಲ್ಲಿಯೇ ಯಥಾರ್ಥ ವಿಜ್ಞಾನವು ಉಂಟಾಗದ ಮೇಲೆ ಇನ್ನು ಲೋಕದಲ್ಲಿ ಯಾವ ಗುರುವಿನ ಅದ್ವೈತತತ್ವೋಪದೇಶದಿಂದಲೂ ಯಾವ ಶಿಷ್ಯನಿಗೂ ಸಹ ಅದ್ವೈತ ಜ್ಞಾನವು ಉಂಟಾಗುವುದಿಲ್ಲವೆಂದೂ ಕೈಮುತ್ಯ ನ್ಯಾಯದಿಂದ ಸಿದ್ಧವಾಯಿತು.

3. **ಪ್ರಶ್ನೆ**–ಸ್ವಾಮಿ! ಹೌದು. ಅರ್ಜುನನಿಗೆ ವಿಷಾದೋತ್ಪತ್ತಿಗೆ ಕಾರಣ ವನ್ನೂ ವಿಷಾದ ಪರಿಹಾರ ಪ್ರಕಾರವನ್ನೂ ಅದ್ವೈತ ಮತದ ರೀತ್ಯಾ ಉಪ ಪಾದಿಸುವುದಕ್ಕೆ ಅಶಕ್ಯವಾಗುವುದು. ದ್ವೈತಮತದಲ್ಲಿ ಈ ಪ್ರಶ್ನೆಗೆ ಉತ್ತ ರವು ಹೇಗೆ ಸುಲಭವಾಗಿರುವುದು ?

**ಉತ್ತರ– ಶ್ರೀಶ್ರೀಗಳವರು**—ಭಯಂಕರವಾದ ಅಮಾವಾಸ್ಯೆಯ ಕತ್ತ ಲೆಗೆ ನಾಶಕವಾದ ಕಿರಣ ಸಹಸ್ರಗಳಿಂದ ಸಹಿತನಾದ ಪ್ರಕಾಶಾತ್ಮಕನಾದ ಸೂರ್ಯನಂತೆ, ಸಕಲ ತತ್ವವಿಷಯಕವಾದ ಆಂತರ ಸಂಶಯವಿಪರ್ಯಯ ಪರಿ ಹಾರಕವಾದ ಉಜ್ಜ್ವಲಜ್ಞಾನಕಾಂತಿಗಳಿಂದ ಯುಕ್ತರಾದ ನಮ್ಮ ಶ್ರೀಮದಾ ಚಾರ್ಯರು ಸಂಕ್ಷಿಪ್ತಗ್ರಂಥಗಳಲ್ಲಿಯೇ ಅನಂತ ಸಂಶಯಗಳಿಗೂ ಉತ್ತರವನ್ನು ಸೂಚಿಸಿರುವರು. ಅರ್ಜುನನ ವಿಷಾದೋತ್ಪತ್ತಿಗೆ ಕಾರಣವನ್ನು ನಮ್ಮ ಮತದ ರೀತ್ಯಾ ಎರಡು ವಿಧವಾಗಿ ನಿರೂಪಿಸಬಹುದು.

1. ಯದ್ಯಪಿ ಸಕಲ ದೇವತೆಗಳೂ, ಇಂದ್ರಾವತಾರನೆಂದು ಮಹಾಭಾರತ ದಲ್ಲಿಯೇ ಸುಪ್ರಸಿದ್ಧನಾಗಿರುವ ಅರ್ಜುನನೂ ಸಹ, ಪರಬ್ರಹ್ಮಸಾಕ್ಷಾತ್ಕಾರ ವನ್ನು ಹೊಂದಿದ ಜ್ಞಾನಿಗಳೇ. ತ್ರಿಲೋಕರಕ್ಷಕನಾದ, ಮನಸ್ತತ್ವಾಭಿ ಮಾನಿಯಾಗಿ ಸಕಲರ ಹೃದಯದಲ್ಲಿಯೂ ಒಂದೊಂದು ಅಂಶದಿಂದ ನಿಯಾಮಕ ನಾಗಿ ವಾಸಮಾಡುವ, ಅನಂತಾಶಗಳಿಂದ ನಿಖಿಲಬ್ರಹ್ಮಾಂಡ ವ್ಯಾಪಿಯಾದ ಇಂದ್ರದೇವನು ಸರ್ವಜ್ಞನಲ್ಲವೆಂದು ಹೇಳುವುದು ಹೇಗೆ? **“ನೈವ ದೇವ ಪದಂ ಪ್ರಾಪ್ತಾ ಬ್ರಹ್ಮದರ್ಶನವರ್ಜಿತಾಃ”** ಇತ್ಯಾದಿ ಬಹು ಪ್ರಮಾಣ

ವಚನಗಳೂ ಆಯಾಯ ದೇವತೆಗಳ ಕಾರ್ಯಪರ್ಯಾಲೋಚನೆಯೂ ಸಹ ಅವರುಗಳ ಸರ್ವಜ್ಞತ್ವದಲ್ಲಿ ನಿಶ್ಚಾಯಕವಾಗಿರುತ್ತವೆ. ಈ ರೀತಿಯಾಗಿ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ಜ್ಞಾನಿಗಳಾಗಿದ್ದರೂ ಸಹ ಸಕಲ ದೇವತೆಗಳೂ ಪ್ರಾರಬ್ಧ ಕರ್ಮದಿಂದ ಯುಕ್ತರಾಗಿ, ಅದರ ಪರಿಹಾರಾರ್ಥವಾಗಿ ಭಗವಂತನಿಂದ ನಿಯತವಾದ ಅಧಿಕಾರಗಳಲ್ಲಿ ಸ್ಥಿತರಾಗಿ ಅಲ್ಲಲ್ಲಿ ತಾವು ಮಾಡಿದ ಸಕಲ ಸೇವೆಗಳನ್ನೂ ಭಗವಂತನಲ್ಲಿ ಅರ್ಪಣೆಮಾಡುತ್ತಾ ಸರ್ವೇಶ್ವರನಾದ ನಾರಾಯಣನನ್ನು ಸೇವಿಸುತ್ತಿರುತ್ತಾರೆ. **"ಭೀಷಾಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ"** ಇತ್ಯಾದಿ ಶ್ರುತಿಗಳೂ, ಭಾಗವತದಲ್ಲಿ ಹೇಳಿರುವ **"ಸರ್ವೇ ವಹಾಮೋ ಬಲಿಮೀಶ್ವರಾಯ"** ಇತ್ಯಾದಿ ಬ್ರಹ್ಮದೇವರ ವಚನಗಳೂ ಈ ವಿಷಯದಲ್ಲಿ ಆಧಾರವಾಗಿರುತ್ತವೆ. ಆತ್ಮಸಾಕ್ಷಾತ್ಕಾರವನ್ನು ಹೊಂದಿದವನಿಗೂ ಸಹ ಪ್ರಾರಬ್ಧ ಕರ್ಮವು ಇರುವುದೆಂದೂ, ಅದು ಭೋಗಾದಿಗಳಿಂದಲೂ ಪರಮಾತ್ಮನ ವಿಶೇಷಾನುಗ್ರಹದಿಂದಲೂ ಉಪಮರ್ದಿಸಲ್ಪಡುವುದೆಂದೂ, **"ಭೋಗೇನತ್ವಿತರೇಕ್ಷಪಯಿತ್ವಾಥ ಸಂಪತ್ಸ್ಯತೇ" "ಉಪಮರ್ದಂಚ"** ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ನಿರ್ಣೀತವಾಗಿರುವುದು. ಜ್ಞಾನಿಗೆ ಪ್ರಾರಬ್ಧ ಕರ್ಮವು ಅಸಂಭಾವಿತವೆಂದು ಹೇಳುವ ಶಂಕರಾಚಾರ್ಯರೂ ಸಹ,

> **"ಉತ್ಪನ್ನೇಪ್ಯಾತ್ಮವಿಜ್ಞಾನೇ ಪ್ರಾರಬ್ಧಂ ನೈವ ಮುಂಚತಿ"**
> **ಇತಿ ಯಚ್ಛ್ರೂಯತೇ ಶಾಸ್ತ್ರೇ।**

ಎಂಬ ಶ್ಲೋಕ ಭಾಗಗಳಲ್ಲಿ ಜ್ಞಾನಿಗಳಿಗೂ ಪ್ರಾರಬ್ಧ ಕರ್ಮವು ಬಿಡುವುದಿಲ್ಲವೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದೆಂದು ಒಪ್ಪಿರುತ್ತಾರೆ. ಆದರೆ ಇಷ್ಟನ್ನು ಹೇಳಿ, **"ತನ್ನಿರಾಕ್ರಿಯತೇಽಧುನಾ"** ಎಂದರೆ, ಶಾಸ್ತ್ರದಲ್ಲಿ ಹೇಳಿರುವ ಈ ವಿಷಯವನ್ನು ನಾವು ನಿರಾಕರಣೆ ಮಾಡುತ್ತೇವೆ, ಎಂದು ಪ್ರತಿಜ್ಞೆ ಮಾಡಿರುತ್ತಾರೆ. ಅವರ ಈ ನಿರಾಕರಣ ಪ್ರಕಾರವು ಅನುಚಿತವೂ ಮತ್ತು ಯುಕ್ತಿವಿರುದ್ಧವೂ ಆಗಿರುವುದೆಂದು ನಾವು ಪೂರ್ವದಲ್ಲಿಯೇ* ತೋರಿಸಿರುತ್ತೇವೆ. ಏವಂಚ ದೇವತೆಗಳೂ ಪ್ರಬಲವಾದ ಪ್ರಾರಬ್ಧ ಕರ್ಮಕ್ಕೆ ವಶರಾಗಿ ರಾಜಾ

---

* ಶ್ರೀಮತ್ಸತ್ಯಧ್ಯಾನತೀರ್ಥರ ಗೀತೋಪದೇಶಗಳು. ಪ್ರಥಮಭಾಗ ಪುಟ 126—127.

ಧೀನರಾದ ಸರ್ಕಾರದ ಸೌಕರರಂತೆ ನಾನಾ ಅಧಿಕಾರಗಳನ್ನು ವಹಿಸಿರುತ್ತಾರೆ. ಇಲ್ಲಿ ಮಾತ್ರ ಒಂದು ವಿಶೇಷವಿರುವುದು. ಗಣಿಯಲ್ಲಿ ಕೆಲಸವನ್ನು ಮಾಡುವ ದಿನಗೂಲಿಯೂ ರಾಜಮಂತ್ರಿಯೂ ಉಭಯರೂ ಕೂಲಿಯವರೇ. ಆದರೂ ದಿನ ಗೂಲಿ ಮಾಡುವವನು ತನ್ನ ಕರ್ಮಗಳಿಂದ ವೇತನವನ್ನು ಸಂಪಾದಿಸಿಕೊಂಡು ಆ ದಿವಸದ ತನ್ನ ಉದರ ಪೂರ್ತಿಯನ್ನು ಹೊಂದುತ್ತಾನೆ. ಆತನ ಕಾರ್ಯ ದಿಂದ ಪರಪ್ರಯೋಜನವು ಅತ್ಯಲ್ಪವು. ಮಂತ್ರಿಯ ಕೂಲಿಗೆಲಸವು ಮಂತ್ರಿಗೆ ಅಪರಿಮಿತವಾದ ಮಹದೈಶ್ವರ್ಯಕ್ಕೆ ಕಾರಣವಾಗುವುದಲ್ಲದೆ ಸಕಲ ದೇಶಕ್ಕೂ ಕ್ಷೇಮವನ್ನು ಉಂಟುಮಾಡುವುದು. ಇದೇ ರೀತಿಯಲ್ಲಿ ಲೋಕಪಾಲನ ವ್ಯಾಪಾರದಲ್ಲಿ ವಿಷ್ಣುವಿನಿಂದ ನಿಯುಕ್ತರಾದ ದೇವತೆಗಳ ಪ್ರಾರಬ್ಧ ಕರ್ಮವು ಸಕಲ ಮುಕ್ತಿಯೋಗ್ಯ ಸಂಸಾರಿಗಳ ಕರ್ಮಗ್ರಂಥಿಯ ವಿಮೋಚನೆಗೆ ಕಾರಣ ವಾಗಿರುವುದು. ಪ್ರಕೃತದಲ್ಲಿ ಉತ್ತಮಾಧಿಕಾರಿಯಾದ ಇಂದ್ರನ ಅರ್ಜುನ ರೂಪದಿಂದ ಅವತಾರವೂ, ಅವನ ಯುದ್ಧಾದಿ ಕಾರ್ಯಗಳೂ, ಯುದ್ಧೋಪಕ್ರ ಮದಲ್ಲಿ ಅವನ ಪ್ರಾರಬ್ಧ ಕರ್ಮದಿಂದ ಜನಿತವಾದ ವಿಷಾದವೂ ಸಹ ಭೂಭಾರ ಹರಣ, ಗೀತೋಪದೇಶಾದಿ ಮಹಾ ಕಾರ್ಯಗಳಿಗೆ ಅವಕಾಶಪ್ರದವಾಗುವುದರ ಮೂಲಕ ಲೋಕೋದ್ಧಾರಕ್ಕೆ ಕಾರಣವಾಯಿತು. ಮಹತ್ಪುಣ್ಯಕಾರಣ ವಾದ ಪ್ರಾರಬ್ಧಕರ್ಮವಿದ್ದುದರಿಂದಲೇ ಅರ್ಜುನನಿಗೆ ಮಹದ್ಯುದ್ಧಾರಂಭದಲ್ಲಿ, ಉಪದೇಶಿಸಲ್ಪಡುವ ತತ್ವದ ನೈಜಪ್ರಭಾವವನ್ನು ಪರೀಕ್ಷಿಸುವುದಕ್ಕೆ ಅನುಕೂಲ ವಾಗುವ ಧರ್ಮಸಂಕಟ ಕಾಲದಲ್ಲಿ, ತತ್ವೋಪದೇಶದಿಂದ ಭಿನ್ನವಾದ ಯಾವ ಲೌಕಿಕಉಪಾಯಗಳಿಂದಲೂ ನಿವೃತ್ತವಾಗದಿರುವ ಮಹಾವಿಷಾದವು ಪ್ರಾಪ್ತ ವಾಯಿತು. ಅರ್ಜುನನು ಹೇಳುತ್ತಾನೆ:—

(1) **ನಹಿ ಪ್ರಪಶ್ಯಾಮಿ ಮಮಾಪನುದ್ಯಾ**
**ದ್ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಂ ।**
**ಅವಾಪ್ಯ ಭೂಮಾವಸಪತ್ನಮೃದ್ಧಂ**
**ರಾಜ್ಯಂ ಸುರಾಣಾಮಪಿ ಚಾಧಿಪತ್ಯಂ ॥** —(2.8.)

ಎಲೈ ಹೃಷೀಕೇಶನೇ! ನನ್ನ ಸರ್ವೇಂದ್ರಿಯಗಳಿಗೂ ಶೋಷಣಕರವಾದ (ಅತಿ ಸಂತಾಪವನ್ನುಂಟುಮಾಡಿ ಶಕ್ತಿನಾಶಮಾಡುವಂಥಾ) ಈ ಶೋಕವನ್ನು

ನಿವಾರಣೆಮಾಡುವ ಉಪಾಯವನ್ನು ನಾನು ಕಾಣೆನು. ಯದ್ಯಪಿ ಶತ್ರುಗಳಿಂದ ರಹಿತವಾದ ಸಮೃದ್ಧವಾದ ರಾಜ್ಯವನ್ನಾದರೂ ಹೊಂದಿಯೇನು. ದೇವಲೋಕಾಧಿಪತ್ಯವನ್ನಾದರೂ ಪಡೆದೇನು. ಆದರೂ ಈ ವಿಷಾದಕ್ಕೆ ಪರಿಹಾರೋಪಾಯವನ್ನು ಕಾಣುವುದು ಅಶಕ್ಯವಾಗಿರುವುದು.

ಏವಂಚ ಲೋಕಾನುಗ್ರಹ ಕಾರ್ಯಕಾರಿಯಾದ ಅರ್ಜುನನ ಪ್ರಾರಬ್ಧ ಕರ್ಮದಿಂದ ಗೀತೋಪದೇಶವು ಯುದ್ಧಾಂಗಣದಲ್ಲಿ ಆರಬ್ಧವಾಯಿತೆಂದು ಒಂದು ಉತ್ತರವು. ಹೀಗೆ ಹೇಳಿದುದರಿಂದ ಜ್ಞಾನಿಶ್ರೇಷ್ಠನಾದ ಇಂದ್ರಾಂಶನಾದ ಅರ್ಜುನನಿಗೆ ದುಃಖರೂಪವಾದ ವಿಷಾದವು ಹೇಗೆ ಸಂಭವಿಸುವುದೆಂಬ ಪ್ರಶ್ನೆಗೂ ಕಾರಣವಿಲ್ಲ. ಯಾತಕ್ಕೆಂದರೆ, ಧೃತರಾಷ್ಟ್ರಾದಿ ಜ್ಞಾನಿಗಳಿಗೆ ಪ್ರಾರಬ್ಧವಶದಿಂದ ವಿಪರೀತಜ್ಞಾನವೇ ಬಂದಿತ್ತು. ಅರ್ಜುನನಿಗಾದರೋ ಸ್ವಲ್ಪ ಜ್ಞಾನತಿರೋಧಾನವು ಬಂದೊದಗಿತು. ರುದ್ರಾದಿ ಮಹಾದೇವತೆಗಳಿಗೂ ಸಹ ಕೆಲವು ಸಮಯಗಳಲ್ಲಿ ಅವರ ದೇವತಾದೇಹಗಳಲ್ಲಿಯೂ ಮತ್ತು ಅವರು ಮನುಷ್ಯರಾಗಿ ಅವತರಿಸಿರುವಾಗ ಮಾನುಷಾನ್ನಪ್ರಭಾವಾದಿಗಳಿಂದಲೂ ಪದೇಪದೇ ಪರಬ್ರಹ್ಮನ ವಿಸ್ಮೃತಿಯಿಂದ ಸಹಿತವಾದ ಕ್ಷಣಿಕವಾದ ಶೋಕಾದಿಗಳು ಪ್ರಾಪ್ತವಾಗುವುವು. ಇಂಥಾ ಪರಿಭವಕ್ಕೆ ಪ್ರಾರಬ್ಧಕರ್ಮದಿಂದ ಅವರುಗಳಿಗೆ ಪ್ರಾಪ್ತವಾಗುವ ಪರಬ್ರಹ್ಮನಾದ ವಿಷ್ಣುವಿನ ಅಪರೋಕ್ಷಜ್ಞಾನತಿರೋಧಾನವೇ ಕಾರಣವು. ಅರ್ಜುನನಿಗೂ ಪ್ರಾರಬ್ಧಕರ್ಮದಿಂದ ಆತ್ಮಸಾಕ್ಷಾತ್ಕಾರವು ತಿರೋಹಿತವಾಗಲು, ಆತನು ಬಂಧುಸ್ನೇಹಾದಿ ನಿಮಿತ್ತಗಳಿಂದ ಶೋಕವನ್ನುಹೊಂದಿ ಧರ್ಮಯುದ್ಧವನ್ನು ಅಧರ್ಮಕರವೆಂದು ಭ್ರಮಿಸಿ, ಮಿಥ್ಯಾಜ್ಞಾನದಿಂದ ಸಂತಪ್ತನಾಗಿ, ಯುದ್ಧಮಾಡಲಾರದೆ, "ರಥೋಪಸ್ಥ ಉಪಾವಿಶತ್" ರಥಮಧ್ಯದಲ್ಲಿ ಸುಮ್ಮನೆ ಕುಳಿತನು.

ಇದು ಒಂದು ಬಗೆಯ ಸಮಾಧಾನವು. 2. ಅಥವಾ ಕಲಿಯುಗದಲ್ಲಿ ಮುಂದೆ ಹುಟ್ಟುವ ಮಂದಭಾಗ್ಯರಲ್ಲಿ ಅನುಕಂಪಾವಿಶೇಷದಿಂದ ಸಹಿತನಾದ ಮುಕುಂದನೇ ಗೀತೋಪದೇಶವನ್ನು ಲೋಕದಲ್ಲಿ ಪ್ರಚಾರಮಾಡಬೇಕೆಂಬ ತನ್ನ ಸತ್ಯಸಂಕಲ್ಪವನ್ನು ನೆರವೇರಿಸಬೇಕೆಂದು ಇಚ್ಛಿಸಿ, "ನಾಪೃಷ್ಟಃ ಕಸ್ಯಚಿದ್ಬ್ರೂಯಾತ್" ಎಂಬ ನಿಯಮವಿರುವುದರಿಂದ ಪ್ರಶ್ನೋತ್ತರರೂಪವಾದ

ವೇದಾಂತವಾದಕ್ಕೆ ಅರ್ಜುನನ ಪ್ರಾರಬ್ಧಕರ್ಮಗಳನ್ನೂ ನಿಮಿತ್ತವಾಡಿ ಕೊಂಡು ತನ್ನ ಹೃಷೀಕೇಶತ್ವ (ಇಂದ್ರಿಯ ನಿಯಾಮಕತ್ವ) ವನ್ನು ಪ್ರಕಟನ ಮಾಡುವವನಾಗಿ ಅರ್ಜುನನ ಮನಸ್ಸಿನಲ್ಲಿ ಮಿಥ್ಯಾಜ್ಞಾನವನ್ನು ಹುಟ್ಟಿಸಿದ ನೆಂದು ತೋರುತ್ತದೆ. ಅನ್ಯಥಾ ಮಹಾ ಜ್ಞಾನಿಯಾದ ಅರ್ಜುನನಿಗೆ ಇಂಥಾ ದುರ್ಬುದ್ಧಿಯು ಹೇಗೆ ಬರುವುದು ?

ಅರ್ಜುನನು ಯುದ್ಧಾರಂಭಕ್ಕಿಂತ ಪೂರ್ವದಲ್ಲಿಯೇ ಯಥಾರ್ಥ ವಿಜ್ಞಾನ ದಿಂದ ಸಹಿತನಾದ ಪರಮಭಕ್ತನಾಗಿದ್ದನೆಂದು ಗೀತೋಪಕ್ರಮದ ಪೂರ್ವೋ ತ್ತರಪರಾಮರ್ಶದಿಂದಲೇ ತಿಳಿದುಬರುವುದು. ಅರಣ್ಯವಾಸದಲ್ಲಿರುವಾಗಲೇ, ದುರ್ಯೋಧನಾದಿಗಳು ದುರ್ಜನರೆಂದೂ, ಅವರನ್ನು ಅನುಸರಿಸುವವರೂ ಸಹ ಪಾಪಿಗಳೆಂದೂ, ಆದುದರಿಂದಲೇ ಸರ್ವರೂ ಪಾಂಡವರಿಂದ ಹನನಯೋಗ್ಯ ರೆಂದೂ, ಭೀಮಾರ್ಜುನ ಯುಧಿಷ್ಠಿರಾದಿ ಸಕಲ ಪಾಂಡವರೂ ನಿಶ್ಚಯಿಸಿ ದ್ದರು. ದೇವತಾಸ್ತ್ರಗಳಿಂದ ಉದ್ದೀಪ್ತಬಲವುಳ್ಳ ಕರ್ಣನ ಜಯವು ಅಶಕ್ಯ ವೆಂದು ಚಿಂತಿಸಿ ಪಾರ್ಥನು ಪಶುಪತಿಯನ್ನು ತಪಸ್ಸಿನಿಂದ ಮೆಚ್ಚಿಸಿ ಪಾಶು ಪತಾಸ್ತ್ರವೇ ಮುಂತಾದ ದಿವ್ಯಾಸ್ತ್ರಗಳನ್ನೂ ಸಂಪಾದಿಸಿದ್ದನು. ಧರ್ಮದರ್ಶಿ ಗಳಲ್ಲಿ ಅಗ್ರಗಣ್ಯನಾದ ಶ್ರೀಕೃಷ್ಣನಿಂದ ಶಿಕ್ಷಿತನಾಗಿ, ಬಕವೈರಿಯಾದ ಭೀಮನ ಅನುಜನಾದ ಅರ್ಜುನನು ಯುದ್ಧದಲ್ಲಿ ದುರ್ಯೋಧನಾದಿಗಳ ಹನನವು ವೃಷಾ ಕಪಿಯಾದ ಕೃಷ್ಣನಿಗೆ ತುಷ್ಟಿಕರವಾದ ಯಜ್ಞವೆಂದು ನಿಶ್ಚಯಿಸಿದ್ದನು. ತದರ್ಥ ವಾಗಿ ತನ್ನ ಕಲ್ಯಾಣಕಾರ್ಯದಲ್ಲಿ ಮಹತ್ವವನ್ನು ಸಂಪಾದಿಸುವುದಕ್ಕೋಸ್ಕರ ಯಜ್ಞಪತಿಯಾದ ನಾರಾಯಣನನ್ನೇ ಭಕ್ತಿಪಾಶದಿಂದ ಕಟ್ಟಿ ಸಾರಥ್ಯಕರ್ಮದಲ್ಲಿ ನಿಯೋಗಿಸಿದನು. ಯುದ್ಧಾಂಗಣದಲ್ಲಿಯೂ ಸಹ ದುರ್ಜನಹನನ ಕರ್ಮದಲ್ಲಿ ಕೃತನಿಶ್ಚಯನಾದ ವೀರನ ಮಾತುಗಳೇ ಆತನ ಮುಖಕಮಲಗಳಿಂದ ಹೊರಗೆ ಹೊರಟಿರುವುವು. ಮತ್ತು ನಾರಾಯಣದ್ವೇಷಿಯಾದ ದುರ್ಯೋಧನನೂ ಅವ ನನ್ನು ಅನುಸರಿಸಿದವರೂ ಸಹ ದುರ್ಬುದ್ಧಿಗಳೆಂದೇ ಅರ್ಜುನನು ಹೇಳಿರುವನು. ಸಂಜಯನ ಚರಿತ್ರಕಥನವೇ ಈ ವಿಷಯವನ್ನು ವಿಶದಪಡಿಸುತ್ತದೆ :—

(2) ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇಸ್ಥಿತೌ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥

**ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ।**
—(1. 14-15)

ದಿಕ್ಕುಗಳು ಶತ್ರುಗಳ ಶಂಖಧ್ವನಿಗಳಿಂದ ಮೊಳಗುವುದನ್ನು ನೋಡಿ ಶುಭ್ರವರ್ಣವುಳ್ಳ ಕುದುರೆಗಳಿಂದ ಯುಕ್ತವಾದ ಉತ್ತಮರಥದಲ್ಲಿ ಸ್ಥಿತರಾದ ಶ್ರೀಕೃಷ್ಣಾರ್ಜುನರಿಬ್ಬರೂ ದಿವ್ಯವಾದ ಶಂಖಗಳನ್ನು ಊದಿದರು. ಹೃಷೀಕೇಶನು ಪಾಂಚಜನ್ಯ ಶಂಖವನ್ನೂ ಧನಂಜಯನು ದೇವದತ್ತವೆಂಬ ಶಂಖವನ್ನೂ ನಾದಮಾಡಿದರು. ಪುನಃ,

(3) **ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ।**
**ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ ॥**
**ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ॥**

**ಅರ್ಜುನ ಉವಾಚ—**

**ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥**
**ಯಾವದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್।**
**ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ ರಣಸಮುದ್ಯಮೇ ॥**
**ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಾಃ।**
**ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ।**
—(1. 20-23.)

ಅನಂತರದಲ್ಲಿ ಕಪಿಧ್ವಜನಾದ ಅರ್ಜುನನು ಯುದ್ಧದಲ್ಲಿ ಕೃತನಿಶ್ಚಯರಾಗಿ ಸ್ಥಿತರಾಗಿರುವ ಧೃತರಾಷ್ಟ್ರಪುತ್ರರನ್ನು ನೋಡಿ, ಶಸ್ತ್ರಪ್ರಹಾರಗಳು ಆರಂಭವಾಗುವ ಸಮಯದಲ್ಲಿ, ಧನುಸ್ಸನ್ನು ಸಜ್ಜುಮಾಡಿ ಕೈಯಲ್ಲಿ ಎತ್ತಿ ಹಿಡಿದುಕೊಂಡು, ಹೃಷೀಕೇಶನನ್ನು ಕುರಿತು ಈ ವಾಕ್ಯವನ್ನು ಹೇಳಿದನು. ಅರ್ಜುನನು ಹೇಳಿದುದೇನೆಂದರೆ :—"ಎಲೈ ಅಚ್ಯುತನೇ! ಈ ರಣೋದ್ಯೋಗದಲ್ಲಿ ಯುದ್ಧಾರ್ಥಿಗಳಾಗಿ ಪ್ರಾಪ್ತರಾಗಿರುವ ಯೋಧರನ್ನೂ, ನಾನು ಯಾರ ಸಂಗಡ ಯುದ್ಧಮಾಡಬೇಕಾಗುವುದೋ ಅವರನ್ನೂ ನೋಡುವವರೆವಿಗೂ ಉಭಯಸೇನೆಯ ಮಧ್ಯಪ್ರದೇಶದಲ್ಲಿ ನನ್ನ ರಥವನ್ನು ನಿಲ್ಲಿಸು. ದುರ್ಬುದ್ಧಿಯಾದ ಧೃತರಾಷ್ಟ್ರಪುತ್ರನಿಗೆ ಯುದ್ಧದಲ್ಲಿ ಪ್ರಿಯವನ್ನು ಮಾಡಬೇಕೆಂಬ ಅಪೇಕ್ಷೆಯಿಂದ ಮಿಳಿತರಾಗಿರುವ ಈ ಯೋಧರನ್ನು ನಾನು ನೋಡುತ್ತೇನೆ.

ಇವು, ಸಮಗ್ರ ಸಂಹಾರವನ್ನು ಮಾಡಬೇಕೆಂದು ಕೃತನಿಶ್ಚಯನಾಗಿ, ಶತ್ರುಗಳ ಮರ್ಮಸ್ಥಾನಗಳನ್ನು ನೋಡಿ ತಿಳಿಯಲಿಚ್ಛಿಸಿದ ಪರಂತಪನ ವಾಕ್ಯಗಳು. ದುರ್ಯೋಧನನ ನಾಮಗ್ರಹಣವನ್ನೂ ಮಾಡದೆ, ಧೃತರಾಷ್ಟ್ರಪುತ್ರನೆಂದು ವ್ಯವಹರಿಸಿ, ಅವನನ್ನು ದುರ್ಬುದ್ಧಿಯೆಂದು ಕರೆದಿರುವುದರಿಂದಲೂ ಅರ್ಜುನನು ಯುದ್ಧಾರಂಭದಲ್ಲಿ ಬಂಧುಮೋಹರಹಿತನಾಗಿ, ತಾನು ಧರ್ಮಯುದ್ಧದಲ್ಲಿ ಪ್ರವಿಷ್ಟನಾಗಿರುವೆನೆಂದೇ ತಿಳಿದಿದ್ದನೆಂದು ನಿಶ್ಚಯಿಸಬಹುದು. ಯುದ್ಧಾರಂಭಕ್ಕೆ ಪೂರ್ವದಲ್ಲಿ ಅರ್ಜುನನು ಯಥಾರ್ಥಜ್ಞಾನದಿಂದ ಸಂಪನ್ನನಾಗಿದ್ದನೆಂಬುದು ಗೀತಾಂತ್ಯದಲ್ಲಿ ಆತನು ಹೇಳಿರುವ ಶ್ಲೋಕಗಳಿಂದಲೇ ತಿಳಿದುಬರುತ್ತದೆ:—

(4) **ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ॥**

—(18.73.)

ಎಲೈ ಅಚ್ಯುತನೇ ! ನನ್ನ ಮಿಥ್ಯಾಜ್ಞಾನವು ನಾಶಹೊಂದಿತು. ನಿನ್ನ ಪ್ರಸಾದದಿಂದ ನನ್ನ ಪೂರ್ವಜ್ಞಾನವು ಪ್ರಾಪ್ತವಾಯಿತು.

ಅರ್ಜುನನು ಈರೀತಿಯಾಗಿ ಉತ್ಸಾಹಯುಕ್ತನಾಗಿದ್ದುದರಿಂದಲೇ ಶ್ರೀಕೃಷ್ಣನೂ ಸಹ ಉಭಯಸೇನಾ ಮಧ್ಯಪ್ರದೇಶದಲ್ಲಿ ರಥವನ್ನು ನಿಲ್ಲಿಸಿ ಯುದ್ಧಾರ್ಥವಾಗಿ ಮಿಳಿತರಾಗಿರುವ ಯೋಧರನ್ನುನೋಡು ಎಂದು ಹೇಳಿದನು. ಸಂಜಯನು ಈ ವೃತ್ತಾಂತವನ್ನು ನಿರೂಪಿಸುತ್ತಾನೆ:—

**ಸಂಜಯ ಉವಾಚ:—**

(5) **ಏವಮುಕ್ತೋ ಹೃಷೀಕೇಶೋ ಗುಡಾಕೇಶನ ಭಾರತ ।**
**ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ ॥**
**ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಂ ।**
**ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ ॥**

—(1. 24-25.)

ಸಂಜಯನು ಹೇಳುತ್ತಾನೆ :—ಎಲೈ ಧೃತರಾಷ್ಟ್ರನೇ ! ಈರೀತಿಯಾಗಿ (ಉಭಯ ಸೇನೆಯ ಮಧ್ಯ ಪ್ರದೇಶದಲ್ಲಿ ರಥವನ್ನು ನಿಲ್ಲಿಸಬೇಕೆಂದು) ಜಿತನಿದ್ರನಾದ ಅರ್ಜುನನಿಂದ ಪ್ರಾರ್ಥಿಸಲ್ಪಟ್ಟ ಹೃಷೀಕೇಶನು ಉಭಯಸೇನಾ ಮಧ್ಯದಲ್ಲಿ, ಭೀಷ್ಮದ್ರೋಣರುಗಳ ಮತ್ತು ಸರ್ವ ರಾಜರುಗಳ ಪ್ರಮುಖದಲ್ಲಿ

ಯೂ ತನ್ನ ಉತ್ತಮರಥವನ್ನು ನಿಲ್ಲಿಸಿ, "ಎಲೈ ಪಾರ್ಥನೇ! ಯುದ್ಧಾರ್ಥವಾಗಿ ಮಿಳಿತರಾಗಿರುವ ಕುರುಗಳನ್ನು ನೋಡು" ಎಂದು ಹೇಳಿದನು.

ಶತ್ರುಗಳಾದ ದುರ್ಜನರನ್ನು ನೋಡು ಎಂದು ಕೃಷ್ಣನ ವಾಕ್ಯದ ಭಾವವು. ಅರ್ಜುನನೂ ಆ ಭಾವದಿಂದಲೇ ಶತ್ರುಪಕ್ಷವನ್ನು ದೃಷ್ಟಿಸಬೇಕಾಗಿತ್ತು. ಮೋಕ್ಷದಾಯಕನಾದ ಮುಕುಂದನು ಕೈಯಲ್ಲಿ ಚಾವಟಿಯನ್ನು ಹಿಡಿದುಕೊಂಡು ಯುದ್ಧರಂಗದಲ್ಲೇ ಪ್ರತ್ಯಕ್ಷನಾಗಿಬಂದು ನಿಂತಿದ್ದರೂ ಸಹ ಅವನನ್ನೂ ಲಕ್ಷಿಸದೆ, ಅವನ ವಿರೋಧಿಪಕ್ಷವನ್ನು ಅವಲಂಬಿಸಿ ರಾಜ್ಯಲೋಭಾದಿಗಳಿಂದ ಯುದ್ಧಾರ್ಥವಾಗಿ ಪ್ರಾಪ್ತರಾದ ಭೂಭಾರರೂಪರಾದ ದುಷ್ಟದೈತ್ಯರನ್ನು ನೋಡಿ ನ್ಯಾಯಪ್ರಾಪ್ತವಾದ ಮೋಕ್ಷೋಪಯೋಗಿಯಾದ ಕ್ರೋಧವೃದ್ಧಿಯನ್ನು ಅರ್ಜುನನು ಹೊಂದಬೇಕಾಗಿತ್ತು. ಆದರೆ ಇದು ದೈವವಿಲಾಸ! ಕೃಷ್ಣನು ಸಮವೇತರಾದ ಕುರುಗಳನ್ನು ನೋಡೆಂದನು. ಅರ್ಜುನನು ಮಿತ್ರಾದಿ ಬಂಧುಗಳನ್ನು ನೋಡಿದನು :-

(6) **ತತ್ರಾಪಶ್ಯತ್ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ ।**
**ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ॥**
**ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।**
**ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್ ॥**
**ಕೃಪಯಾ ಪರಯಾವಿಷ್ಟೋ ವಿಷೀದನ್ನಿದಮಬ್ರವೀತ್ ।**
—(1. 26-28.)

ಆಗ ಪಾರ್ಥನು ಯುದ್ಧಾರ್ಥವಾಗಿ ಮಿಳಿತವಾದ ಈ ಉಭಯ ಸೇನೆಯಲ್ಲಿ ಸ್ಥಿತರಾದ (ಭೂರಿಶ್ರವಾದಿ) ಪಿತೃಗಳನ್ನೂ, (ಭೀಷ್ಮಾದಿ) ಪಿತಾಮಹಂದಿರುಗಳನ್ನೂ, (ದ್ರೋಣಾದಿ) ಆಚಾರ್ಯರುಗಳನ್ನೂ, (ಶಲ್ಯಾದಿ) ಮಾತುಲರನ್ನೂ, (ದುರ್ಯೋಧನಾದಿ) ಭ್ರಾತೃಗಳನ್ನೂ, ಪುತ್ರರನ್ನೂ, ಪೌತ್ರರನ್ನೂ, ಮತ್ತು ಮಿತ್ರರನ್ನೂ, ಹೆಣ್ಣುಕೊಟ್ಟ ಮಾವಂದಿರುಗಳನ್ನೂ ಸುಹೃಜ್ಜನರನ್ನೂ ನೋಡಿದನು. ಯುದ್ಧಭೂಮಿಯಲ್ಲಿ ಸ್ಥಿತರಾದ ಸರ್ವಬಂಧುಗಳನ್ನೂ ಕೌಂತೇಯನಾದ ಅರ್ಜುನನು ನೋಡಿ ಅಧಿಕವಾದ (ತಾಮಸ) ಕೃಪೆಯಿಂದ ವ್ಯಾಪ್ತವಾದ ಮನಸ್ಸುಳ್ಳವನಾಗಿ ವಿಷಾದವನ್ನು ಹೊಂದಿ ಈರೀತಿ ಮಾತಾಡಿದನು.

†

ಅರ್ಜುನನು ವಿಳಿತರಾದ ಕೌರವರನ್ನು ಶ್ರೀಕೃಷ್ಣನ ಆಜ್ಞೆಯಂತೆ ಧರ್ಮಯಜ್ಞದಲ್ಲಿ ಉಪಕರಣಗಳಾದ ಪಶುದೃಷ್ಟಿಯಿಂದ ನೋಡದೆ, ಬಂಧುತ್ವೇನ ಎಂದರೆ ಬಂಧುದೃಷ್ಟಿಯಿಂದನೋಡಿ, ಮಮತಾದ್ಯಭಿಮಾನಗಳಿಗೆ ವಶನಾಗಿ, ತಿರೋಹಿತ ಯಥಾರ್ಥ ಜ್ಞಾನವುಳ್ಳವನಾಗಿ, ಶತ್ರುಭೂತವಾದ, ತಾಮಸಕೃಪಾತ್ಮಕವಾದ ದುರ್ದೇವತೆಯಿಂದ ಆವಿಷ್ಟನಾಗಿ ದುಃಖಗ್ರಸ್ತನಾದನು. ಅಸಾಧಾರಣವಿಜ್ಞಾನ ಸಂಪನ್ನನಾದ ಜಿತನಿದ್ರನಾದ ಗಾಂಡೀವಧನ್ವಿಯು ಈ ಸ್ಥಿತಿಯನ್ನು ಹೊಂದುವುದರಲ್ಲಿ ನಿಖಿಲ ಚೇತನರ ಮನಃಕರ್ಷಕನಾದ ಕೃಷ್ಣನೇ ಮುಖ್ಯಕಾರಣನು. ಇದು ಮನ ಆದಿ ಸರ್ವೇಂದ್ರಿಯ ಪ್ರೇರಕನಾದ ಹೃಷೀಕೇಶನ ವ್ಯಾಪಾರವು. ಅರ್ಜುನನ ಪ್ರಾರಬ್ಧ ಕರ್ಮಗಳು ಅಮುಖ್ಯ ನಿಮಿತ್ತಗಳು. ಅನ್ಯಥಾ ಅರ್ಜುನನ ಜ್ಞಾನತಿರೋಧಾನರೂಪಕಾರ್ಯವು ಅಸಂಭಾವಿತವಾಗುವುದು. ಸಂಜಯನೇ ಇದು ಆಶ್ಚರ್ಯವ್ಯಾಪಾರವೆಂದು ಸೂಚಿಸಿರುತ್ತಾನೆ:—

**ಸಂಜಯ ಉವಾಚ—**

**(7) ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ।**
**ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ॥**
—(2. 9.)

ಸಂಜಯನು ಹೇಳುತ್ತಾನೆ:—ಈ ರೀತಿ ಜಿತನಿದ್ರನಾದ, ಶತ್ರುಸಂತಾಪಕನಾದ ಅರ್ಜುನನು ಹೃಷೀಕೇಶನಾದ ಗೋವಿಂದನನ್ನು ಕುರಿತು ನಾನು ಯುದ್ಧ ಮಾಡುವುದಿಲ್ಲವೆಂದು ಹೇಳಿ ಮೌನವನ್ನು ಧರಿಸಿದನು. ಹ! ಏನು ಆಶ್ಚರ್ಯವು!

ಜಿತನಿದ್ರನಿಗೆ ಅಜ್ಞಾನವು ಪ್ರಾಪ್ತವಾದದ್ದೂ, ಪರಂತಪನು ಶತ್ರುಗಳಲ್ಲಿ ಪ್ರೀತಿಮಾಡಿದುದೂ ಆಶ್ಚರ್ಯವೇ! ಇಂಥಾ ಆಶ್ಚರ್ಯವ್ಯಾಪಾರವಾದುದರಿಂದಲೇ ಪರಬ್ರಹ್ಮನಾದ ಕೃಷ್ಣನಿಂದಲೇ ಇದು ನಡೆದಿರಬೇಕೆಂದು '**ಹೃಷೀಕೇಶಂ**' ಎಂಬ ವಿಶೇಷಣವು ಸೂಚಿಸುವುದು. (ಹೃಷೀಕಾಣಾಂ ಈಶಃ ಎಂಬ ವ್ಯುತ್ಪತ್ತಿಯಿಂದ) ಮನ ಆದಿ ಸರ್ವೇಂದ್ರಿಯಪ್ರೇರಕನೆಂದು ಹೃಷೀಕೇಶಶಬ್ದಾರ್ಥವು. ಕೃಷ್ಣನು ಅರ್ಜುನನ ಮನಸ್ಸನ್ನು ಇಂಥಾ ಸಂರಂಭ ಸಮಯದಲ್ಲಿ ವಿಷಾದಯುಕ್ತವನ್ನಾಗಿ ಮಾಡಿದುದಕ್ಕೆ ಕಾರಣವೂ ಸಹ **ಗೋವಿಂದಂ**

ಎಂಬ ಈ ಶ್ಲೋಕೋಕ್ತ ವಿಶೇಷಣವೇ ಸೂಚಿಸುವುದು. (ಗಾಃ ವೇದವಾಚಃ ವಿಂದತೇ ಪ್ರತಿಪಾದಕತ್ವೇನ ಲಭತೇ ಎಂಬ ವ್ಯುತ್ಪತ್ತಿಯಿಂದ) ಸಿಖಿಲವೇದ ವೇದಾಂತಗಳೆಂಬ ವಾಕ್ಕುಗಳಿಂದ ಪ್ರತಿಪಾದಿತಸ್ವರೂಪವುಳ್ಳವನೆಂದು ಗೋವಿಂದ ಶಬ್ದಾರ್ಥವು. ಅಂಥಾ ವೇದೋಕ್ತತತ್ವವನ್ನು ಉಪದೇಶ ಮಾಡುವುದಕ್ಕೋಸ್ಕರವೇ ಈ ಸಂರಂಭಸಮಯದಲ್ಲಿ ಹೃಷೀಕೇಶನಾದ ಶ್ರೀಕೃಷ್ಣನು ಅರ್ಜುನನ ವೇದಾಂತಪ್ರಶ್ನೆಗೆ ಅವಕಾಶವನ್ನು ಹುಟ್ಟಿಸುವುದಕ್ಕಾಗಿ ಅವನನ್ನು **"ಧರ್ಮಸಂಮೂಢಚೇತಾಃ"** ಎಂದರೆ ಧಾರ್ತರಾಷ್ಟ್ರಾದಿಗಳ ಹನನವು ಧರ್ಮಜನಕವೋ ಅಧರ್ಮಜನಕವೋ ಎಂಬದಾಗಿ ಸಂದಿಗ್ಧಮನಸ್ಕನಾಗುವಂತೆ ಮಾಡಿಬಿಟ್ಟನು. ಅರ್ಜುನನು ಹೇಳುತ್ತಾನೆ :—

(8) **ಕಾರ್ಪಣ್ಯದೋಷೋಪಹತಸ್ವಭಾವಃ**
**ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ।**
**ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ**
**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ॥** —(2. 7.)

ಎಲೈ ಅಚ್ಯುತನೇ ! ಕೃಪಾಪಾರವಶ್ಯದಿಂದ ಜನಿತವಾದ ಕೃಪಣತ್ವವೆಂಬ ಮನೋದೋಷದಿಂದ ಅಭಿಭೂತವಾದ ಶೌರ್ಯಸ್ವಭಾವ ಉಳ್ಳವನಾಗಿ ಧರ್ಮವಿಷಯದಲ್ಲಿ ಸಂದೇಹಯುಕ್ತವಾದ ಚಿತ್ತವುಳ್ಳವನಾಗಿ ನಾನು ನಿನ್ನನ್ನು ಪ್ರಶ್ನೆ ಮಾಡುತ್ತೇನೆ. ಯುದ್ಧವನ್ನು ಪರಿತ್ಯಾಗ ಮಾಡಿ ಭಿಕ್ಷಾಟನಾದಿಗಳಿಂದ ಜೀವನವನ್ನು ಕಳೆಯುವುದು ಧರ್ಮಕರವೇ ಅಥವಾ ಯುದ್ಧವನ್ನು ಮಾಡುವುದು ಧರ್ಮಕರವೇ? ಭಿಕ್ಷಾಟನ ಯುದ್ಧಗಳಲ್ಲಿ ಯಾವುದು ಶ್ರೇಯಸ್ಕರವೆಂಬುದನ್ನು ನನಗೆ ತಿಳಿಸು. ನಾನು ನಿನಗೆ ಶಿಷ್ಯನಾಗಿರುತ್ತೇನೆ. ಶರಣಾಗತನಾದ ನನ್ನನ್ನು ನೀನು ಶಿಕ್ಷಿಸು.

ರಣಶೌಂಡನಾದ ಪಾರ್ಥನಿಗೆ ಭಿಕ್ಷಾಟನದಲ್ಲಿ ಮನಸ್ಸು ಪ್ರವೃತ್ತವಾಯಿತು. ನಿಖಿಲ ಮನೋನಿಯಾಮಕನಾದ ಪರಮಾತ್ಮನೇ ಪ್ರಕಾರಾಂತರದಿಂದ ಅರ್ಜುನನನ್ನು ಅನುಗ್ರಹಿಸಬೇಕೆಂದು ಈ ರೀತಿಯಾದ ಚಿತ್ತವೈಕಲ್ಯವನ್ನುಂಟುಮಾಡಿದನೆಂಬಲ್ಲಿ ಶ್ರೀಕೃಷ್ಣನ ಅನೇಕ ವಾಕ್ಯಗಳು ಆಧಾರವಾಗಿರುತ್ತವೆ :—

(9) **ಮತ್ತಃ ಸರ್ವಂ ಪ್ರವರ್ತತೇ ।**

(10) **ಬುದ್ಧಿರ್ಜ್ಞಾನಮಸಂಮೋಹಃ ...... ಮತ್ತ ಏವ ಪೃಥಗ್ವಿಧಾಃ ॥**
(10. 4.)

(11) **ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ**
**ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ॥**
—(15. 15.)

ಪರಂತು ಈ ಪ್ರಕರಣದಲ್ಲೂ ಸಹ ಅರ್ಜುನನ ವಿಷಾದಪರಿಹಾರಾರ್ಥ ವಾಗಿ ಸಾಂತ್ವವಚನಗಳನ್ನಾಡುವುದಕ್ಕೆ ಉಪಕ್ರಮಿಸಿದ ಶ್ರೀಕೃಷ್ಣನನ್ನು ಸಂಜಯನು ವರ್ಣಿಸಿರುವ ರೀತಿಯಿಂದಲೇ ಅರ್ಜುನನ ಚಿತ್ತವೈಕಲ್ಯವು ಉದ್ದೇಶ ಪೂರ್ವಕವಾದ ದೈವತಂತ್ರವೆಂದು ನಿಶ್ಚಿತವಾಗುತ್ತದೆ:—

(12) **ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।**
**ಸೇನಯೋರುಭಯೋರ್ಮಧ್ಯೇ ವಿಷೀದಂತಮಿದಂ ವಚಃ ॥**
—(2. 10.)

ಎಲೈ ಧೃತರಾಷ್ಟ್ರನೇ! ಉಭಯಸೇನಾಮಧ್ಯದಲ್ಲಿ ಸ್ಥಿತನಾಗಿ ಶೋಕ ದಿಂದ ಪರಿತಪಿಸುತ್ತಿರುವ ಅರ್ಜುನನನ್ನು ಕುರಿತು ಸರ್ವೇಂದ್ರಿಯಪ್ರೇರಕನಾದ ಶ್ರೀಕೃಷ್ಣನು (ಅಪಹಾಸದ್ಯೋತಕವಾದ) ಮುಗುಳುನಗೆಯಿಂದ ಒಡಗೂಡಿದವನೋಪಾದಿಯಲ್ಲಿ ಈ ರೀತಿ ಹೇಳಿದನು.

'ಹೃಷೀಕೇಶಂ', "ಪ್ರಹಸನ್", ಮತ್ತು "ಇವ" ಎಂಬ ಪದಗಳು ಬಹ್ವರ್ಥಗರ್ಭಿತವಾಗಿವೆ. ಸರ್ವೇಂದ್ರಿಯನಿಯಾಮಕನಾದ ಸ್ವಾಮಿಯು ಅರ್ಜುನನ ಹೃದಯದಲ್ಲಿ ಧರ್ಮಸಂದೇಹವನ್ನು ಉಂಟುಮಾಡಿ, ಆತನು ಪ್ರಶ್ನೆ ಮಾಡಿದನಂತರ ತನ್ನ ಸ್ವಾತಂತ್ರ್ಯಾನುಸಂಧಾನವನ್ನು ಪ್ರಕಟಮಾಡುವವನಾಗಿ ಮಂದಹಾಸವನ್ನು ತೋರಿಸಿ, ಅರ್ಜುನನ ಸ್ವತಂತ್ರವೀರ್ಯ, ಪರಾಕ್ರಮಾದಿಗಳನ್ನೂ, ಉತ್ಪನ್ನವಾದ ದುರಭಿಮಾನವನ್ನೂ ನೋಡಿ ಅಪಹಾಸ್ಯಮಾಡಿರುತ್ತಾನೆ.

4. **ಪ್ರಶ್ನೆ** — ಸ್ವಾಮಿ! ಯಾವ ಉದ್ದೇಶದಿಂದ ವಿಜಯಸಖನಾದ ಶ್ರೀಕೃಷ್ಣನು ಯುದ್ಧಸಮಯದಲ್ಲಿ ಧರ್ಮಸಂದೇಹವನ್ನು ತಂದಿಟ್ಟನು?

**ಉತ್ತರ— ಶ್ರೀಶ್ರೀಗಳವರು—** ದುರ್ಜ್ಞೇಯವಾದ ಈಶ್ವರ ಚಿತ್ತವನ್ನು ತಿಳಿಯುವುದು ಅಶಕ್ಯವು. ಶಾಸ್ತ್ರಜ್ಞರು ಅನೇಕ ಪ್ರಕಾರವಾಗಿ ನಿರೂಪಿಸಿರುವರು. 1. ಸಜ್ಜನಲೋಕಾನುಗ್ರಹಾರ್ಥವಾಗಿ ಸತ್ತತ್ತ್ವೋಪದೇಶವನ್ನು ಮಾಡುವ ಉದ್ದೇಶದಿಂದ ತತ್ತ್ವೋಪದೇಶಕ್ಕೆ ಅವಸರವನ್ನು ಕಲ್ಪಿಸುವುದಕ್ಕಾಗಿ ಶ್ರೇಷ್ಠನಾದ ಅಧಿಕಾರಿಯಿಂದ ಶ್ರುತವಾದ ಮತ್ತು ಅನುಷ್ಠಿತವಾದ ತತ್ತ್ವವೇ ಪ್ರಚಯಾರ್ಹವೂ ಅನುಕರಣಾರ್ಹವೂ ಆದುದರಿಂದ, ಉತ್ತಮಾಧಿಕಾರಿಯಾದ ಅರ್ಜುನನ ಮನಸ್ಸರೋವರವನ್ನೇ ಕಲಕಿ ಧರ್ಮಸಂಶಯವನ್ನು ಹೃಷೀಕೇಶನು ತಂದಿಟ್ಟನೆಂದು ನಾವು ನಿರೂಪಿಸಿರುತ್ತೇವೆ. ಗೀತೋಪದೇಶವು ಅರ್ಜುನನನ್ನು ನಿಮಿತ್ತಮಾಡಿಕೊಂಡು ಲೋಕಾನುಗ್ರಹವನ್ನು ಮಾಡುವ ಉದ್ದೇಶದಿಂದ ಪ್ರವೃತ್ತವಾಯಿತೆಂದೇ ಶಂಕರಾಚಾರ್ಯರೂ ಒಪ್ಪಿರುತ್ತಾರೆ. ಅವರು ತಮ್ಮ ಗೀತಾಭಾಷ್ಯದ ಪ್ರಥಮಾಧ್ಯಾಯದಲ್ಲಿಯೇ "ಸರ್ವಲೋಕಾನುಗ್ರಹಾರ್ಥಮರ್ಜುನಂ ನಿಮಿತ್ತೀಕೃತ್ಯಾಹ ಭಾಗವಾನ್ ವಾಸುದೇವಃ" ಎಂದು ಬರೆದಿರುತ್ತಾರೆ.

ಅದರಲ್ಲಿಯೂ ತಾನು ನಿರೂಪಿಸುವ ಶಾಸ್ತ್ರವು ವ್ಯಾಸಂಗ ಮಾತ್ರೋಪಯೋಗಿಯಾದ ನಿಸ್ಸಾರವಾದ ತತ್ತ್ವವಲ್ಲ; ಮತ್ತೇನೆಂದರೆ ಕಲಿಗಾಲದಲ್ಲಿ ಧರ್ಮಸಂಕಟ ಸಮಯದಲ್ಲಿ ಪ್ರಾಪ್ತವಾಗುವ ಸಕಲಸಂಶಯಗಳಿಗೂ ನಿವರ್ತಕವಾದ ವಿಶ್ವತೋಮುಖವಾದ ಮತ್ತು ಸಜ್ಜನರ ದಿನಚರ್ಯೆಯಲ್ಲೂ ಅನುಷ್ಠೇಯವಾದ ನಿಜತತ್ತ್ವವೆಂದು ಸೂಚಿಸುವುದಕ್ಕಾಗಿ ಶ್ರೀಕೃಷ್ಣನು ಸಂಗ್ರಾಮಸಂರಂಭದಲ್ಲಿಯೇ ಉಪದೇಶಕ್ಕೆ ಅವಕಾಶವನ್ನು ಕಲ್ಪಿಸಿರುತ್ತಾನೆ. ಶ್ರೀಕೃಷ್ಣನು ಮಹತ್ಸಂಕಟವನ್ನು ನಿರ್ಮಾಣಮಾಡಿ ಆಧ್ಯಾತ್ಮಿಕಧರ್ಮಸಂಕಟಕ್ಕೆ ಔಷಧರೂಪವಾದ ತನ್ನ ತತ್ತ್ವವನ್ನು ಉಪದೇಶಮಾಡಿದುದರಿಂದ ಗೀತೆಯು ಸಂಕಟಪರಿಹಾರಕವಾದ ಉಪದೇಶವೆಂದು ವಿದಿತವಾಯಿತು.

ಸೂಕ್ಷ್ಮಜ್ಞರು ಇನ್ನೂ ಎರಡು ಮೂರು ಕಾರಣಗಳನ್ನು ನಿರೂಪಿಸುವರು. ಅರ್ಜುನನ ಪರಮೇಷ್ಟದೇವತೆಯಾದ ಶ್ರೀಕೃಷ್ಣನು ತನ್ನ ಭಕ್ತನಿಗೆ ಭೂಭಾರಹರಣದಿಂದ ಪ್ರಾಪ್ತವಾಗುವ ಮಹತ್ಫಲವನ್ನು ಇನ್ನೂ ಅಧಿಕಮಾಡಿಕೊಡಬೇಕೆಂದು ಇಚ್ಛಿಸಿದವನಾಗಿ, ಜ್ಞಾನಾಧಿಕ್ಯಾನುಗುಣವಾಗಿ ಕರ್ಮಫಲಕ್ಕೆ

ಆಧಿಕ್ಯವು ಬರುವುದೆಂದು ಶಾಸ್ತ್ರಪ್ರಮಿತವಾಗಿರುವುದರಿಂದ ಅರ್ಜುನನ ಜ್ಞಾನವನ್ನು ಪೂರ್ವಕ್ಕಿಂತಲೂ ಹೆಚ್ಚು ಅತಿಶಯೋಪೇತವಾದದ್ದನ್ನಾಗಿ ಮಾಡಲೋಸುಗ ಇದ್ದ ಜ್ಞಾನಕ್ಕೂ ತಿರೋಧಾನವನ್ನು ತಂದಿಟ್ಟು ಅರ್ಜುನನ ಶಿಷ್ಯಭಾವವನ್ನು ಸ್ವೀಕರಿಸಿದನು. ಭಯಂಕರವಾದ ಎಂಥಾ ಗಡಿಬಿಡಿಯಲ್ಲಿಯೂ ಸಹ ಪರಮಾತ್ಮನನ್ನು ಮರೆಯಬಾರದು ಮತ್ತು ಬ್ರಹ್ಮವಿಚಾರವನ್ನು ಬಿಡಬಾರದು ಎಂದು ಯುದ್ಧಕಾಲೀನವಾದ ಈ ಉಪದೇಶದಿಂದ ಸ್ಫುಟವಾಗಿ ಗೊತ್ತಾಗುವುದು.

ಅಥವಾ ಸಾಮಾನ್ಯಜ್ಞಾನದಿಂದ ಯುದ್ಧಮಾಡುವ ಅರ್ಜುನನಿಗೆ ರಣಮಧ್ಯದಲ್ಲಿ ಅಪರ್ಜನೀಯವಾಗಿ ಪ್ರಾಪ್ತವಾಗುವ ಮನಸ್ಸಿನ ಅನವಧಾನತೆಯಿಂದ (ಎಂದರೆ ಪ್ರಮಾದದಿಂದ) ಅಶ್ವತ್ಥಾಮಾದಿ ಉತ್ತಮರ ಸಂಗಡ ಪರಮಾತ್ಮನ ವಿಸ್ಮೃತಿಯಿಂದ ಸಹಿತವಾಗಿ ಯುದ್ಧಮಾಡಿದರೆ ಪ್ರಬಲವಾದ ಉತ್ತಮದ್ರೋಹವು ಬಂದುಬಿಡಬಹುದೆಂಬ ಶಂಕೆಯಿಂದ ಅದರ ನಿವಾರಣಾರ್ಥವಾಗಿ ಆತನಿಗೆ ದಿವ್ಯಜ್ಞಾನವನ್ನು ಅನುಗ್ರಹಿಸುವುದಕ್ಕೋಸ್ಕರ ಶ್ರೀಕೃಷ್ಣನು ಉಪದೇಶಕ್ಕೆ ಅವಕಾಶವನ್ನು ಕಲ್ಪಿಸಿದನೆಂದು ಹೇಳುವರು.

ಕಿಂಚ ಭಗವದ್ವಿಸ್ಮೃತಿಯಿಂದ ಸಾರಥಿಯಾದ ಶ್ರೀಕೃಷ್ಣನ ಅವಜ್ಞೆಯು ಪ್ರಾಪ್ತವಾಗಿ ಅರ್ಜುನನಿಗೆ ಪ್ರಬಲವಾದ ಆಮುಷ್ಮಿಕಹಾನಿಯು ಬಂದುಬಿಡುತ್ತಿತ್ತು. ಇಂಥಾ ಸಂಭವವು ಇದ್ದಿತೆಂದು ಅರ್ಜುನನ ಏಕಾದಶಾಧ್ಯಾಯದಲ್ಲಿ ನಿರೂಪಿತವಾಗಿರುವ ಕೃಷ್ಣಸ್ತುತಿಯಿಂದ ವಿದಿತವಾಗುವುದು :—

**(1) ಸಖೇತಿ ಮತ್ವಾ ಪ್ರಸಭಂ ಯದುಕ್ತಂ**
**ಹೇ ಕೃಷ್ಣ ಹೇ ಯಾದವ ಹೇ ಸಖೇತಿ।**
**ಅಜಾನತಾ ಮಹಿಮಾನಂ ತವೇದಂ**
**ಮಯಾ ಪ್ರಮಾದಾತ್ಪ್ರಣಯೇನ ವಾಪಿ ॥**
**ಯಚ್ಚಾಪಹಾಸಾರ್ಥಮಸತ್ಕೃತೋಽಸಿ**
**ವಿಹಾರಶಯ್ಯಾಸನಭೋಜನೇಷು।**
**ಏಕೋಽಥವಾಪ್ಯಚ್ಯುತ ತತ್ಸಮಕ್ಷಂ**
**ತತ್ಕ್ಷಾಮಯೇ ತ್ವಾಮಹಮಪ್ರಮೇಯಂ ॥**

**ಪಿತಾಸಿ ಲೋಕಸ್ಯ ಚರಾಚರಸ್ಯ**
**ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್।**
**ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ**
**ಲೋಕತ್ರಯೇಽಪ್ಯಪ್ರತಿಮಪ್ರಭಾವ ॥**

**ತಸ್ಮಾತ್ಪ್ರಣಮ್ಯ ಪ್ರಣಿಧಾಯ ಕಾಯಂ**
**ಪ್ರಸಾದಯೇ ತ್ವಾಮಹಮೀಶಮೀಡ್ಯಂ।**
**ಪಿತೇವ ಪುತ್ರಸ್ಯ ಸಖೇವ ಸಖ್ಯುಃ**
**ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಂ ॥**

—(11. 41-44.)

ಎಲೈ ಸ್ವಾಮಿಯೇ! ನಿನ್ನ ಈ ಮಹಿಮೆಯನ್ನು ತಿಳಿಯದೆ, ನಿನ್ನನ್ನು ಲೌಕಿಕಮಿತ್ರನೆಂದು ತಿಳಿದು, ಮರ್ಯಾದೆಯಿಲ್ಲದಂತೆ ನಿನ್ನನ್ನು ಕುರಿತು ಎಲೈ ಕೃಷ್ಣನೇ! ಹೇ ಯಾದವ! ಎಲೈ ಮಿತ್ರನೇ! ಇತ್ಯಾದಿರೀತಿಯಾಗಿ ಕ್ವಚಿತ್ ಪ್ರಮಾದದಿಂದಲೂ, ಕ್ವಚಿತ್ ಪ್ರೀತಿಯಿಂದಲೂ ನಾನು ಆಡಿದ ಮಾತುಗಳನ್ನು ನೀನು ಕ್ಷಮಿಸಬೇಕು. ಎಲೈ ಅಚ್ಯುತನೇ! ಸ್ವತಂತ್ರಕರ್ತನಾದ, ಸರ್ವೋತ್ತಮ ವಸ್ತುವಾದ, ಅಪಾರ ಮಹಿಮೋಪೇತನಾದ ನಿನ್ನನ್ನು ಕುರಿತು ವಿಹಾರ, ಶಯನ, ಆಸನ, ಭೋಜನಾದಿ ಸಮಯಗಳಲ್ಲಿ ಹಾಸ್ಯಾರ್ಥವಾಗಿ ನಾನು ಮಾಡಿದ ಅಸತ್ಕಾರಗಳನ್ನು ಕ್ಷಮಿಸಬೇಕೆಂದು ನಿನ್ನ ಎದುರಿಗೇ ಬೇಡಿಕೊಳ್ಳುತ್ತೇನೆ. ನೀನು ಸ್ಥಾವರಜಂಗಮಾತ್ಮಕವಾದ ಸರ್ವಪ್ರಪಂಚಕ್ಕೂ ತಂದೆಯು, ಜಗತ್ಪೂಜ್ಯನು, ಅತಿಶ್ರೇಷ್ಠನಾದ ಗುರುವು. ನಿರುಪಮೈಶ್ವರ್ಯವಂತನಾದ ಎಲೈ ಸ್ವಾಮಿಯೇ! ನಿನಗೆ ಸಮಾನನಾದವನು ಈ ಮೂರು ಲೋಕದಲ್ಲೂ ಇಲ್ಲ; ಇನ್ನು ನಿನಗಿಂತಲೂ ಅಧಿಕನಾದವನು ಬೇರೊಬ್ಬನು ಎಲ್ಲಿ ಇರುವನು? ಆದುದರಿಂದ, ಸರ್ವಜಗತ್ತಿಗೂ ಸ್ವಾಮಿಯಾದ, ಸರ್ವಜಗತ್ತಿನಿಂದಲೂ ಸ್ತುತ್ಯನಾದ ನಿನ್ನನ್ನು ದಂಡಪ್ರಣಾಮಮಾಡಿ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇನೆ. ಹೇ ದೇವ! ಮಗನ ಅಪರಾಧವನ್ನು ತಂದೆಯು ಕ್ಷಮಿಸುವಂತೆ, ಮಿತ್ರನ ಅಪರಾಧವನ್ನು ಮಿತ್ರನು ಕ್ಷಮಿಸುವಂತೆ, ಪತ್ನಿಯ ಅಪರಾಧವನ್ನು ಪತಿಯು ಕ್ಷಮಿಸುವಂತೆ, ನೀನು ನನ್ನ ಅಪರಾಧವನ್ನು ಕ್ಷಮಿಸಬೇಕು.

ಇಂಥಾ ವಿಶಿಷ್ಟಜ್ಞಾನವು ಕೃಷ್ಣನ ವಿಶೇಷಾನುಗ್ರಹದಿಂದ ಪ್ರಾಪ್ತವಾದುದರಿಂದಲೇ ಕುರುಕ್ಷೇತ್ರದಲ್ಲಿ ಅರ್ಜುನನು ಆಚರಿಸಿದ ಮಹಾಯುದ್ಧವು ರಾಜಸೂಯಯಾಗಾದಿಗಳಂತೆ ವಿಶೇಷ ಫಲಪ್ರದವಾಗಿ ಶ್ರೀಕೃಷ್ಣನ ಪ್ರೀತಿಕರವಾಯಿತು. ಇಂಥಾ ವಿಶಿಷ್ಟ ಜ್ಞಾನವು ಕೃಷ್ಣಾನುಗ್ರಹದಿಂದ ಹುಟ್ಟಿದುದರಿಂದಲೇ ಅರ್ಜುನನು ಅಭಿಮನ್ಯು ಘಟೋತ್ಕಚಾದಿಗಳ ವಧೆಯಿಂದಲೂ ಸಹ ಹೆಚ್ಚು ವಿಷಾದವನ್ನು ಹೊಂದದೆ ಧರ್ಮಯುದ್ಧದಲ್ಲಿ ಅಕುಂಠಿತ ಉತ್ಸಾಹದಿಂದ ಆಸಕ್ತನಾದನು. ಯುಧಿಷ್ಠಿರನಿಗೆ ಇಂತಹ ವಿಸ್ತೃತಜ್ಞಾನವು ಹುಟ್ಟಲಿಲ್ಲವಾದುದರಿಂದ ಯುದ್ಧೋಪಸಂಹಾರವಾದನಂತರ ತಾನು ಆಚರಿಸಿದ ಭೀಷ್ಮಾದಿಗಳ ಹನನವು ಪಾಪಫಲಪ್ರದವಾಗಬಹುದೆಂಬ ಸಂಶಯವು ಬಂದು ಪರಿತಪಿಸುವುದಕ್ಕಾರಂಭಿಸಿದನು.

ಏವಂಚ ವಿಷಾದಸಂವಿಗ್ನ ಮನಸ್ಕನಾದ, ಶರಣಾಗತನಾದ ಸ್ವಭಕ್ತನನ್ನು ಉದ್ಧಾರ ಮಾಡಬೇಕೆಂಬ ಇಚ್ಛೆಯಿಂದಲೂ ಮತ್ತು ಲೋಕಾನುಗ್ರಹೋದ್ದೇಶದಿಂದಲೂ ಶ್ರೀಕೃಷ್ಣನು ಕುರುಕ್ಷೇತ್ರ ಭೂಮಿಯಲ್ಲಿ ಉತ್ತಮಾಧಿಕಾರಿಯಾದ ಅರ್ಜುನನಿಗೆ ತತ್ತ್ವೋಪದೇಶವನ್ನು ಮಾಡಿದನು. ಕಿಂಚ ಇದೇ ಸಮಾರಂಭದಲ್ಲಿ ಶ್ರೀಕೃಷ್ಣನು ಪ್ರಸಂಗಾದ್ಯಾನುಕೂಲ್ಯವು ಪ್ರಾಪ್ತವಾದಾಗ ತತ್ತ್ವೋಪದೇಶವನ್ನು ಕೈಬಿಡಬಾರದೆಂದು ತನ್ನ ಉಪದೇಶಕಾರ್ಯರೂಪವಾದ ಉದಾಹರಣೆಯಿಂದಲೇ ನಮ್ಮಂಥವರೆಲ್ಲರಿಗೂ ತೋರಿಸಿರುವನು.

5. ಅದ್ವೈತಮತದ ರೀತ್ಯಾ ಗೀತೋಪದೇಶೋಪಕ್ರಮವೇ ಅಸಂಗತವಾಗುವುದು. ಪರಮಧರ್ಮ ಕಥನದಿಂದ **"ಧರ್ಮಸಂಮೂಢ"** ಮನಸ್ಕನಾದ ಅರ್ಜುನನ ಭ್ರಮವನ್ನು ಪರಿಹರಿಸಿ ಯುದ್ಧವು ಧರ್ಮ ಕಾರ್ಯವೆಂದು ನಿರೂಪಿಸುವುದು ಅವಶ್ಯಕವು. ಆದರೆ ಆತ್ಮೈಕ್ಯವಾದವು, ನಿರ್ಗುಣಬ್ರಹ್ಮವಾದವು, ಕರ್ಮಸಂನ್ಯಾಸದ ಅವಶ್ಯಕತಾಸಮರ್ಥನೆಯು, ವಿಶ್ವಮಿಥ್ಯಾತ್ವಸಮರ್ಥನೆಯು ಇವೇ ಮೊದಲಾದ ಅದ್ವೈತ ತತ್ತ್ವೋಪದೇಶಕ್ಕೆ ಈ ಭಾರತ ಯುದ್ಧ ಭೂಮಿಗಿಂತ ಅನುಚಿತವಾದ ಸ್ಥಳವಿಲ್ಲ. ಮತ್ತು ಶಸ್ತ್ರಸಂಪಾತವು ಸನ್ನಿಹಿತವಾಗಿರುವ ಯುದ್ಧಕಾಲಕ್ಕಿಂತ ಹೆಚ್ಚು ಅನುಚಿತವಾದ ಕಾಲವಿಲ್ಲ.

ಅದ್ವೈತ ತತ್ತ್ವೋಪದೇಶವು ಆ ದೇಶಕಾಲಗಳಿಗೆ ವಿರುದ್ಧವೂ, ಅನುಚಿತವೂ, ಅಯೋಗ್ಯವೂ ಆಗಿರುವುದು. ಮಂಗಳೋತ್ಸವ ಸಮಯದಲ್ಲಿ ಸೂತಕವು ಪ್ರಾಪ್ತವಾದಂತೆ, ಉರಿಯುವ ಬೆಂಕಿಗೆ ತಣ್ಣೀರನ್ನು ಎರಚಿದಂತೆ ಶಂಕರಾಚಾರ್ಯರ ಕರ್ಮಸಂನ್ಯಾಸವಾದವು ಕೃಷ್ಣಾರ್ಜುನರ ಸಂವಾದದಲ್ಲಿ ಪ್ರವೇಶಕ್ಕೆ ಅತ್ಯಂತ ಅನರ್ಹವಾದ ದುಸ್ತತ್ವವೆಂದು ವಿಚಾರ ಶೀಲರಿಗೆ ತೋರದಿರಲಾರದು. ತಮ್ಮ ಗೀತಾ ಭಾಷ್ಯದ ಆರಂಭದಲ್ಲಿಯೇ ಶಂಕರಾಚಾರ್ಯರು ಹೀಗೆ ಬರೆದಿರುವರು :—

"ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಂ ಪರಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯಾತ್ಯಂತೋಪರಮಲಕ್ಷಣಂ। ತಚ್ಚ ಸರ್ವಕರ್ಮಸಂನ್ಯಾಸಪೂರ್ವಕಾದಾತ್ಮಜ್ಞಾನನಿಷ್ಠಾರೂಪಾದ್ಧರ್ಮಾದ್ಭವತಿ॥"

**ಅರ್ಥವು :—** ಈ ಗೀತಾಶಾಸ್ತ್ರಕ್ಕೆ **(ಅವಿದ್ಯಾರೂಪ)** ಕಾರಣದಿಂದ ಸಹಿತವಾದ ಸಂಸಾರೋಪರಮರೂಪವಾದ ಮುಕ್ತಿಯೇ ಮುಖ್ಯ ಪ್ರಯೋಜನವು. ಅದು ಸರ್ವಕರ್ಮ ಸಂನ್ಯಾಸಪೂರ್ವಕವಾದ ಆತ್ಮಜ್ಞಾನ (ಬ್ರಹ್ಮೈಕ್ಯ ಜ್ಞಾನ)ದಲ್ಲಿ ಸ್ಥಿತಿರೂಪವಾದ ಧರ್ಮದಿಂದ ಬರುತ್ತದೆ.

ಪುನಃ ದ್ವಿತೀಯಾಧ್ಯಾಯದಲ್ಲಿ **"ಅಶೋಚ್ಯಾನನ್ವಶೋಚಸ್ತ್ವಂ"** ಎಂಬ ಗೀತೋಪದೇಶದ ಆರಂಭಶ್ಲೋಕ ವ್ಯಾಖ್ಯಾನಾವಸರದಲ್ಲೂ ಸಹ ಹೀಗೆ ಬರೆದಿರುತ್ತಾರೆ:—

"ಸಂಸಾರಬೀಜಭೂತೌ ಶೋಕಮೋಹೌ। ತಯೋಶ್ಚ ಸರ್ವಕರ್ಮಸಂನ್ಯಾಸಪೂರ್ವಕಾದಾತ್ಮಜ್ಞಾನಾನ್ನಾನ್ಯತೋ ನಿವೃತ್ತಿರಿತಿ॥ ತದುಪದಿದಿಕ್ಷುಃ ........ಆಹ........ಅಶೋಚ್ಯಾನಿತ್ಯಾದಿ"

**ಅರ್ಥವು :—** ಶೋಕಮೋಹಗಳು ಸಂಸಾರ ಬೀಜವಾದುವುಗಳು. ಅವುಗಳಿಗೆ ಸರ್ವಕರ್ಮ ಸಂನ್ಯಾಸಪೂರ್ವಕವಾದ ನಿರ್ಗುಣಬ್ರಹ್ಮಜ್ಞಾನದಿಂದಲೇ ಹೊರತು ಅನ್ಯೋಪಾಯಗಳಿಂದ ನಿವೃತ್ತಿಯಿಲ್ಲ. ಅಂಥಾ ಆತ್ಮಜ್ಞಾನವನ್ನು ಉಪದೇಶಿಸುವುದಕ್ಕಾಗಿ ಅಶೋಚ್ಯಾನಿತ್ಯಾದಿ ಶ್ಲೋಕಗಳನ್ನು ಶ್ರೀಕೃಷ್ಣನು ಉಪದೇಶ ಮಾಡುತ್ತಾನೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ನಿತ್ಯನೈಮಿತ್ತಿಕ ಕರ್ಮಗಳು ಜ್ಞಾನೋಪಯೋಗಿಯೆಂದೇ ನಿರೂಪಿಸಿರುತ್ತಾನೆ, ಕರ್ಮಸಂನ್ಯಾಸವನ್ನು ಉಪದೇಶ ಮಾಡಿರುವುದಿಲ್ಲ ಎಂದು ಹೇಳುವವರ ಅಭಿಪ್ರಾಯವನ್ನು ಶಂಕರಾಚಾರ್ಯರು ಅಲ್ಲಲ್ಲಿ ಖಂಡನೆ ಮಾಡಿರುತ್ತಾರೆ.

ಕರ್ಮಸಂನ್ಯಾಸವು ಮೋಕ್ಷೋಪಯೋಗಿಯಲ್ಲ ಮತ್ತು ಮೋಕ್ಷವಿರೋಧಿಯೆಂದೂ, ಆತ್ಮೈಕ್ಯಜ್ಞಾನವು ಮೋಕ್ಷೋಪಯೋಗಿಯಲ್ಲ ಮತ್ತು ಮೋಕ್ಷವಿರೋಧಿಯೆಂದೂ ನಾವು ತೋರಿಸುತ್ತೇವೆ. ಪ್ರಕೃತದಲ್ಲಿ ಇಷ್ಟು ಹೇಳಬೇಕಾಗಿರುವುದು. ಕರ್ಮಸಂನ್ಯಾಸವನ್ನು ಬೋಧಿಸುವ ಉದ್ದೇಶದಿಂದ ಶ್ರೀಕೃಷ್ಣನು ಗೀತೋಪದೇಶದಲ್ಲಿ ಪ್ರವರ್ತಿಸಿದನೆಂದು ಹೇಳುವುದು ಗುರುಶಿಷ್ಯರಾದ ಕೃಷ್ಣಾರ್ಜುನರಿಬ್ಬರಿಗೂ ಪ್ರಬಲವಾದ ದೋಷಾಪಾದನೆಗಳನ್ನು ಒಪ್ಪಬೇಕಾಗಿ ಮಹದವಜ್ಞೆಯನ್ನು ಅಂಗೀಕಾರಮಾಡಬೇಕಾಗುವುದು. ಹೇಗೆಂದರೆ, ಅಶೋಚ್ಯಾನನ್ವಶೋಚಸ್ತ್ವಂ ಎಂಬ ಶ್ಲೋಕದ ಮೊದಲುಗೊಂಡು ಶ್ರೀಕೃಷ್ಣನು ಉಪದೇಶಮಾಡಿದ "ಸಾಂಖ್ಯ"ವು ಕರ್ಮಸಂನ್ಯಾಸಪೂರ್ವಕವಾದ ಆತ್ಮಜ್ಞಾನದಲ್ಲಿ ಸ್ಥಿತಿರೂಪವಾದರೆ, "ಕುರು ಕರ್ಮೈವ ತಸ್ಮಾತ್ತ್ವಂ" ಇತ್ಯಾದಿ ರೀತಿಯಾಗಿ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಬೋಧಿಸಿದುದು ಅಸಂಬದ್ಧಪ್ರಲಾಪವಾಗುವುದು. ಕೃಷ್ಣನು ವಿಸ್ಮೃತಿಶೀಲನಾದ ಭ್ರಾಂತನಾಗಬೇಕು. ಅಥವಾ ವಿರುದ್ಧಸ್ವಭಾವವುಳ್ಳ ಲೌಕಿಕಗುರುವಿನಂಥಾ ಮೂರ್ಖಗುರುವಾಗಬೇಕು. ಹೇಗೆಂದರೆ ಮದ್ಯಪಾನವನ್ನು ಮಾಡಬಾರದು, ಟೀ ಮೊದಲಾದ ಮಾದಕದ್ರವ್ಯಗಳನ್ನು ಪಾನಮಾಡಬಾರದೆಂದು ಉದ್ದೇಶಪೂರ್ವಕವಾಗಿ ಉಪದೇಶಮಾಡುತ್ತಿರುವಾಗಲೇ ತಾನೇ ಸಭಿಕರಿಗೆ ಮದ್ಯವನ್ನೋ, ಟೀಯನ್ನೋ ಬಟ್ಟಲುಗಳಲ್ಲಿ ತುಂಬಿ ಅರ್ಪಣೆಮಾಡುವುದು ವಿರುದ್ಧಸ್ವಭಾವವುಳ್ಳ ದುರ್ಜನನಿಗೆ ಉಚಿತವೆಂದು ಲೋಕಸಮ್ಮತವಾಗಿರುತ್ತದೆ. ಹಾಗೆ ಕರ್ಮಸಂನ್ಯಾಸವನ್ನು ಉಪದೇಶಮಾಡಿದನಂತರ 'ಯುಧ್ಯಸ್ವ ಭಾರತ' ಎಂದು ಮೋಕ್ಷೋಪಯೋಗಿಯಲ್ಲದ ಯುದ್ಧದಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಪ್ರೇರಿಸುವನೆಂದು ಹೇಳುವುದಾದರೆ ಕೃಷ್ಣನ ಜ್ಞಾನದಲ್ಲಿ ಅಂಧತೆಯನ್ನು ಒಪ್ಪಬೇಕು ಅಥವಾ ಅವನನ್ನು ವಿರುದ್ಧಸ್ವಭಾವವುಳ್ಳ ದುರ್ಜನನೆಂದು ಒಪ್ಪಬೇಕು.

**ಪ್ರಶ್ನೆ—**ಸ್ವಾಮಿ! ಇದಕ್ಕೆ ಶಂಕರಾಚಾರ್ಯರು ಸಮಾಧಾನವನ್ನು ಯಾವ ರೀತಿಯಿಂದಲೂ ಹೇಳಿರುವುದಿಲ್ಲವೋ?

**ಉತ್ತರ—ಶ್ರೀಶ್ರೀಗಳವರು**—ಹೇಳಿರುವರು. ಸಮಾಧಾನ ಪ್ರಕಾರವನ್ನು ವಿಚಾರಮಾಡಿರಿ. ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯ ಜ್ಞಾನನಿಷ್ಠೆಯು ಪರಮಾರ್ಥ ಉಪದೇಶವು. ಹೀಗಿದ್ದರೂ ಕರ್ಮವನ್ನು ಮಾಡಬೇಕೆಂದು ಪುನಃಪುನಃ ಬೋಧಿಸಿರುವುದು ಮುಖ್ಯರಾದ ಮೋಕ್ಷೇಚ್ಛಾರಹಿತರಾದ ಕರ್ಮಯೋಗಿಗಳ ವಿವಕ್ಷೆಯಿಂದ ಎಂದು ಹೇಳಿರುವರು. ಇದು ಶಾಂಕರಗೀತಾಭಾಷ್ಯದ ದ್ವಿತೀಯಾಧ್ಯಾಯದಲ್ಲಿಯೇ ನಿರೂಪಿತವಾಗಿದೆ:—

"ಜ್ಞಾನಕರ್ಮನಿಷ್ಠಯೋರ್ವಿಭಾಗವಚನಾದುಬ್ಬುದ್ಧಿದ್ವಯಾಶ್ರಯಯೋಃ ಅಶೋಚ್ಯಾನಿತ್ಯಾದಿನಾ ಭಗವತಾ ಯಾವತ್ ಸ್ವಧರ್ಮಮಪಿ ಚಾವೇಕ್ಷ್ಯ ಇತ್ಯೇತದಂತೇನ ಗ್ರಂಥೇನ ಯತ್ಪರಮಾರ್ಥಾತ್ಮತತ್ತ್ವನಿರೂಪಣಂ ಕೃತಂ ತತ್ಸಾಂಖ್ಯಂ ತದ್ವಿಷಯಾ ಬುದ್ಧಿರಾತ್ಮನೋ ಜನ್ಮಾದಿಷಡ್ವಿಕ್ರಿಯಾಭಾವಾದಕರ್ತಾತ್ಮೇತಿ ಪ್ರಕರಣಾರ್ಥನಿರೂಪಣಾದ್ಯಾಜಾಯತೇ ಸಾ ಸಾಂಖ್ಯಬುದ್ಧಿಃ ಸಾ ಯೇಷಾಂ ಜ್ಞಾನಿನಾಮುಚಿತಾ ಭವತಿ ತೇ ಸಾಂಖ್ಯಾಃ. ಏತಸ್ಯಾ ಬುದ್ಧೇರ್ಜನ್ಮನಃ ಪ್ರಾಗಾತ್ಮನೋ ಮೋಕ್ಷಸಾಧನಾನುಷ್ಠಾನನಿರೂಪಣಲಕ್ಷಣೋ ಯೋಗಃ ತದ್ವಿಷಯಾ ಬುದ್ಧಿರ್ಯೋಗಬುದ್ಧಿಃ ಸಾ ಯೇಷಾಂ ಕರ್ಮಿಣಾಮುಚಿತಾ ಭವತಿ ತೇ ಯೋಗಿನಃ. ತಥಾಚ ವಿಭಕ್ತೇ ದ್ವೇ ಬುದ್ಧೀ ನಿರ್ದಿಷ್ಟೇ 'ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು' ಇತಿ............ಏವಂ ಸಾಂಖ್ಯಬುದ್ಧಿಂ ಯೋಗಬುದ್ಧಿಂ ಚಾಶ್ರಿತ್ಯ ದ್ವೇ ನಿಷ್ಠೇ ವಿಭಕ್ತೇ ಭಗವತೈವೋಕ್ತೇ"

**ಅರ್ಥವು:—** ಜ್ಞಾನನಿಷ್ಠೆ ಮತ್ತು ಕರ್ಮನಿಷ್ಠೆ ಎಂಬ ವಿಭಾಗವಚನದಿಂದ ತೋರಿಬರುವ ಎರಡು ಬುದ್ಧಿಗಳಲ್ಲಿ 'ಅಶೋಚ್ಯಾನನ್ವಶೋಚಸ್ತ್ವಂ' ಎಂಬ ಶ್ಲೋಕವನ್ನು ಮೊದಲುಮಾಡಿಕೊಂಡು ಸ್ವಧರ್ಮಮಪಿಚಾವೇಕ್ಷ್ಯ ಎಂಬ ಶ್ಲೋಕಪರ್ಯಂತವೂ ಹೇಳಲ್ಪಟ್ಟಿರುವ ಪರಮಾರ್ಥ ತತ್ವನಿರೂಪಣವು ಸಾಂಖ್ಯವೆನ್ನಿಸುವುದು; ತದ್ವಿಷಯಕವಾದ ಆತ್ಮನು ಜನ್ಮಾದಿಷಡ್ವಿಕಾರರಹಿತನು

ಅವನು ಅಕರ್ತನು ಎಂದು ಪ್ರಕರಣಾರ್ಥದಿಂದ ಉತ್ಪನ್ನವಾಗುವ ಬುದ್ಧಿಯು ಸಾಂಖ್ಯಬುದ್ಧಿಯು. ಅದನ್ನು ಅವಲಂಬಿಸುವ ಜ್ಞಾನಿಗಳು ಸಾಂಖ್ಯರು.

"ಇಂಥಾ ಸಾಂಖ್ಯಬುದ್ಧಿಯು ಹುಟ್ಟುವುದಕ್ಕೆ ಪೂರ್ವದಲ್ಲಿ (ಆಚರಿಸಲ್ಪಡಬೇಕಾದ) ಆತ್ಮನ ಮೋಕ್ಷಸಾಧನಾನುಷ್ಠಾನದ ನಿರೂಪಣೆಗೆ ಯೋಗವೆಂದು ಹೆಸರು. ತದ್ವಿಷಯಕವಾದ ಬುದ್ಧಿಯು ಯೋಗಬುದ್ಧಿಯು. ಅದನ್ನು ಆಚರಿಸುವ ಕರ್ಮಿಗಳು ಯೋಗಿಗಳು. ಹೀಗೆ ವಿಭಾಗಮಾಡಿ "ಏಷಾತೇಽಭಿಹಿತಾಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು" ಎಂಬಲ್ಲಿ ಎರಡು ಬುದ್ಧಿಗಳು ನಿರ್ದೇಶಮಾಡಲ್ಪಟ್ಟಿವೆ — ಹೀಗೆ ಸಾಂಖ್ಯಬುದ್ಧಿ ಮತ್ತು ಯೋಗಬುದ್ಧಿ ಎಂಬ ಎರಡು ಬುದ್ಧಿಗಳನ್ನು ಆಶ್ರಯಿಸಿ ಎರಡು ವಿಧವಾದ ಸ್ಥಿತಿಯು ವಿಭಕ್ತವಾಗಿ ಭಗವಂತನಿಂದಲೇ ಹೇಳಲ್ಪಟ್ಟಿವೆ."

ಅದರಲ್ಲಿ ಸಾಂಖ್ಯಬುದ್ಧಿಯನ್ನವಲಂಬಿಸಿ ಕರ್ಮಪರಿತ್ಯಾಗಮಾಡುವವರು ಜ್ಞಾನಿಗಳು ಮತ್ತು ಮುಮುಕ್ಷುಗಳು; ಕರ್ಮವನ್ನು ಮಾಡುವವನು ಅಜ್ಞಾನಿಯು ಮತ್ತು ಮೋಕ್ಷೇಚ್ಛಾರಹಿತನು ಎಂದು ಅವರ ವಾಕ್ಯದಿಂದಲೇ ನಿಶ್ಚಿತವಾಗುವುದು:—

"ಯಾನಿ ಕರ್ಮಾಣಿ ಶಾಸ್ತ್ರೇಣ ವಿಧೀಯಂತೇ ತಾನಿ ಅವಿದುಷೋ ವಿಹಿತಾನಿ .... .... .... ವಿದುಷಃ **ಮುಮುಕ್ಷೋಶ್ಚ** ಕರ್ಮಸಂನ್ಯಾಸೇ ಏವ ಅಧಿಕಾರಃ ॥"

**ಅರ್ಥ—** ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಕರ್ಮಗಳು (ಮೋಕ್ಷೇಚ್ಛಾರಹಿತನಾದ) ಅಜ್ಞನಿಗೆ ಹೇಳಲ್ಪಟ್ಟಿರುವವು .... .... .... ಜ್ಞಾನಿಗೂ, ಮೋಕ್ಷವು ಬೇಕೆಂಬ ಇಚ್ಛೆಯುಳ್ಳವನಿಗೂ ಸಕಲಕರ್ಮಪರಿತ್ಯಾಗದಲ್ಲಿಯೇ ಅಧಿಕಾರವು.

ಹೀಗೆ ಶಂಕರಾಚಾರ್ಯರು ಪರಮಾರ್ಥತತ್ತ್ವರೂಪವಾದ, ನಿತ್ಯನೈಮಿತ್ತಿಕಾದಿಸರ್ವಕರ್ಮಪರಿತ್ಯಾಗಪೂರ್ವಕವಾದ ಆತ್ಮಜ್ಞಾನದಲ್ಲಿ ಸ್ಥಿತಿಯೆಂಬ ಸಾಂಖ್ಯವನ್ನು ಉತ್ತಮವಾದ ಸಾಂಖ್ಯಬುದ್ಧಿಯನ್ನು ಅವಲಂಬಿಸಿ ಶ್ರೀಕೃಷ್ಣನು ಹೇಳಿರುವನೆಂದೂ, ವಿಹಿತಕರ್ಮಾನುಷ್ಠಾನರೂಪವಾದ ಯೋಗವನ್ನು ಅಜ್ಞರಿಗೆ ಉಚಿತವಾದ ಯೋಗಬುದ್ಧಿಯನ್ನು ಅವಲಂಬಿಸಿ ಹೇಳಿರುವನೆಂದೂ ಸ್ಪಷ್ಟವಾಗಿ

ಬರೆದಿರುತ್ತಾರೆ. ಆದುದರಿಂದ ನಾವು ಪೂರ್ವದಲ್ಲಿ ನಿರೂಪಿಸಿದಂತೆ, ಅದ್ವೈತ ಮತದ ರೀತ್ಯಾ ಸರ್ವಕರ್ಮಸಂನ್ಯಾಸರೂಪವಾದ ಸಾಂಖ್ಯವೇ ಪರಮ ತತ್ವವಾದರೆ ಕರ್ಮಯೋಗವನ್ನು ಶ್ರೀಕೃಷ್ಣನು ನಿರೂಪಿಸುವುದಕ್ಕೆ ಕಾರಣ ವಿರಲಿಲ್ಲ. ಅಂಥಾ ನಿರೂಪಣೆಯು ಅತ್ಯಂತ ಅನುಚಿತವೂ, ವಿರುದ್ಧವೂ, ಅಯೋಗ್ಯವೂ ಆಗುವುದಲ್ಲದೆ ಅತೀವ ಹಾಸ್ಯಾಸ್ಪದವಾದ ಉಪದೇಶಪ್ರಕಾರವೆನ್ನಿಸುವುದು.

**ಪ್ರಶ್ನೆ**:— ಸ್ವಾಮಿ! ವಿವಕ್ಷಾದ್ವಯಗಳನ್ನು ಇಟ್ಟುಕೊಂಡು ವಾದ ಮಾಡುವುದನ್ನು ನಾವು ಎಷ್ಟೋ ಸ್ಥಳಗಳಲ್ಲಿ ನೋಡಿಲ್ಲವೇ? ಹಾಗೆ ಪ್ರಕೃತ ದಲ್ಲಿಯೂ ಸಹ ಪರಮಾರ್ಥವಿವಕ್ಷೆಯಿಂದ ಕರ್ಮಸಂನ್ಯಾಸ ಪೂರ್ವಕವಾದ ಆತ್ಮೈಕ್ಯಜ್ಞಾನವೆಂಬ ಸಾಂಖ್ಯವನ್ನೂ, ವ್ಯಾವಹಾರಿಕವಿವಕ್ಷೆಯಿಂದ ಕರ್ಮಾನುಷ್ಠಾನರೂಪವಾದ ಯೋಗವನ್ನೂ ಶ್ರೀಕೃಷ್ಣನು ಹೇಳಿರುವನೆಂದು ಯಾತಕ್ಕೆ ತಿಳಿಯಕೂಡದು.

**ಶ್ರೀಶ್ರೀಗಳವರು**:— 1. ಅಣ್ಣತಮ್ಮಂದಿರು ಒಂದು ಮನೆಯಲ್ಲಿ ಕಲೆಯುವರು; ಅಗ್ನಿಹಿಮಗಳು ಒಂದುಕಡೆಯಲ್ಲಿ ಸೇರಲಾರವು. ಹಾಗೆಯೇ ಪ್ರಕೃತದಲ್ಲಿಯೂ ಸಹ ಪರಸ್ಪರವಿರುದ್ಧವಾದ ಎರಡು ವಿವಕ್ಷೆಗಳು ಒಬ್ಬ ಅಧಿಕಾರಿಗೆ ಒಂದು ಉಪದೇಶದಲ್ಲಿ ಪ್ರವೃತ್ತವಾಗುವುದು ಅಸಂಭಾವಿತವು. ಪರಸ್ಪರ ಅವಿರುದ್ಧವಾದ ಎರಡು ವಿವಕ್ಷೆಗಳಿಂದ ಒಂದು ಪದಾರ್ಥವನ್ನು ನಾವು ತಿಳಿಯಬಹುದು. ರೋಗಿಯ ವಿವಕ್ಷೆಯಿಂದ ಘೃತವು ಅನಿಷ್ಟವೆಂದೂ, ದೃಢಕಾಯನಾದ ವಿದ್ಯಾರ್ಥಿ ವಿವಕ್ಷೆಯಿಂದ ಘೃತವು ಇಷ್ಟಪದಾರ್ಥವೆಂದೂ ನಿಶ್ಚಯಿಸಬಹುದು. ಆದರೆ ಒಂದೇ ವ್ಯಭಿಚಾರಕರ್ಮವು ವ್ಯಭಿಚಾರಿಯ ವಿವಕ್ಷೆಯಿಂದ ಧರ್ಮವೆಂದೂ, ಶಾಸ್ತ್ರಜ್ಞರ ವಿವಕ್ಷೆಯಿಂದ ಅಧರ್ಮಕರವೆಂದೂ ಶಾಸ್ತ್ರವಾಕ್ಯಾರ್ಥದಲ್ಲಿ ನಿಶ್ಚಯಿಸುವುದು ಅಪ್ರಯೋಜಕವಾದ ವಿವಕ್ಷಾಕಲ್ಪನೆಯೆನ್ನಿಸುವುದು. ಪ್ರಕೃತದಲ್ಲಿ ಸಾಂಖ್ಯವಿವಕ್ಷೆಯಿಂದ ಅರ್ಜುನನಿಗೆ ಶ್ರೀಕೃಷ್ಣನು ಸರ್ವಕರ್ಮಸಂನ್ಯಾಸಪೂರ್ವಕವಾದ ಬ್ರಹ್ಮೈಕ್ಯಜ್ಞಾನವನ್ನು ಉಪದೇಶಮಾಡಿದ್ದರೆ, ಆತನು ಅಜ್ಞವಿವಕ್ಷೆಯಿಂದ ಎಂದರೆ ಸುಳ್ಳುವಿವಕ್ಷೆಯಿಂದ ಪ್ರವೃತ್ತವಾ

ಗುವ ಕರ್ಮಾನುಷ್ಠಾನವನ್ನು ಅರ್ಜುನಸಂಥಾ ಉತ್ತಮಾಧಿಕಾರಿಗೆ ಬೋಧಿಸುವುದಕ್ಕೇ ಅವಕಾಶವಿರಲಿಲ್ಲ. 2. ಕಥಂಚಿತ್ ಮೂಢರು ಹೀಗೆ ಮಾಡಬೇಕು ಎಂದು ಹೇಳಬಹುದಾದರೂ ಸಹ, "ಯುಧ್ಯಸ್ವ ವಿಗತಜ್ವರಃ", "ಆತಿಷ್ಠೋತ್ತಿಷ್ಠ ಭಾರತ", "ಕುರು ಕರ್ಮೈವ ತಸ್ಮಾತ್ತ್ವಂ" ಎಂದು ಪುನಃ ಪುನಃ ಯುದ್ಧದಲ್ಲಿ ಪ್ರೇರಿಸುವುದೂ, ತಾನೂ ಅಂಥಾ ಅಜ್ಞವಿವಕ್ಷೆಯಿಂದ ಪ್ರವೃತ್ತವಾಗುವ ವ್ಯಾಪಾರಕ್ಕೆ ಮುಖ್ಯಸಹಾಯಕನಾಗಿ ನಿಂತುಕೊಳ್ಳುವುದೂ ಅನುಚಿತವಾಗುವುದು. 3. ಅರ್ಜುನನು ಅಜ್ಞನು, ಆತನು ಸಾಂಖ್ಯಾಧಿಕಾರಿಯಲ್ಲವೆಂದು ಪರಮಾರ್ಥವಾದ ಸಾಂಖ್ಯವನ್ನು ಸ್ವಲ್ಪ ವಿವರಿಸಿ, ಅನಂತರ ಅರ್ಜುನನಿಂದ ಅನುಷ್ಠೇಯವಾದ ಯೋಗವನ್ನೇ ವಿಶೇಷವಾಗಿ ಶ್ರೀಕೃಷ್ಣನು ಹೇಳಿದನು ಎಂದು ಹೇಳುವುದಾದರೆ, ಕೃಷ್ಣನು ಅಜ್ಞನು, ಪರಮಾರ್ಥತತ್ತ್ವವಾದ ಕರ್ಮಸಂನ್ಯಾಸರೂಪವಾದ ಸಾಂಖ್ಯವನ್ನು ಅನುಷ್ಠಾನಮಾಡದೆ ಸೃಷ್ಟ್ಯಾದಿಕ್ರಿಯೆ, ಭೂಭಾರಹರಣ, ವಿಜಯಸಾರಥ್ಯಾದಿ ಕರ್ಮಯೋಗದಲ್ಲಿ ಪ್ರವೃತ್ತನಾದನೆಂದು ಒಪ್ಪಿಕೊಳ್ಳಬೇಕಾಗುವುದು. ಇದು ಮಹಾ ಕೃಷ್ಣಾವಜ್ಞೆಯೆನ್ನಿಸುವುದು. ಕಥಂಚಿತ್ ಕೃಷ್ಣನು ಅಜ್ಞವ್ಯಾಪಾರವನ್ನು ಅನುಕರಣೆ ಮಾಡಿದನೆಂದು ಹೇಳಿದರೂ ಸಹ, ಭಕ್ತನೂ ಮುಮುಕ್ಷುವೂ ಆದ ಅರ್ಜುನನಿಗೆ ಅಜ್ಞವಿವಕ್ಷೆಯಿಂದ ಪ್ರಾಪ್ತವಾದ ಯುದ್ಧಕಾರ್ಯದಲ್ಲಿ ಪ್ರೇರಿಸಿದನೆಂದು ಹೇಳುವುದು ಅಸಂಗತವಾಗುವುದು. 4. ಕಿಂಚ ಸಕಲ ಪ್ರಮಾಣಗಳಲ್ಲಿಯೂ ಅರ್ಜುನನು ಸಾಂಖ್ಯಾಧಿಕಾರಿಗಳಾದ ಸನಕಾದಿಗಳಿಗಿಂತ ಉತ್ತಮನಾದ ತ್ರಿಲೋಕವಂದಿತಚರಣನಾದ ದೇವೇಂದ್ರಾವತಾರನೆಂದು ಪ್ರಸಿದ್ಧನಾಗಿರುವುದರಿಂದ ಅತ್ಯುತ್ತಮ ಸಾಂಖ್ಯಾಧಿಕಾರಿಯೇ ಆಗಿರುವನು. ಮತ್ತು ಅರ್ಜುನನು ಸಾಮಾನ್ಯನಾಗಿದ್ದರೂ ಶ್ರೀಕೃಷ್ಣನ ಉಪದೇಶವೇ ಪ್ರಬಲವಾದ ಅಜ್ಞನನ್ನು ಸಾಂಖ್ಯನನ್ನಾಗಿ ನಿಮಿಷಮಾತ್ರದಲ್ಲಿ ಮಾಡುವುದಕ್ಕೆ ಸಮರ್ಥವಾಗಿರುವುದು. ಆದುದರಿಂದ ಅದ್ವೈತಮತದ ರೀತ್ಯಾ ಅರ್ಜುನನು ತನ್ನ ಯೋಗ್ಯತಾನುಗುಣವಾದ ಕರ್ಮಸಂನ್ಯಾಸವನ್ನು ವಿಧಿಸುವ ಸಾಂಖ್ಯೋಪದೇಶವನ್ನು ಶ್ರವಣ ಮಾಡಿದನಂತರ ನೀಚವಾದ ಮತ್ತು ಕ್ರೂರವಾದ ಕರ್ಮಯೋಗದಲ್ಲಿ ಪ್ರವೃತ್ತನಾಗುವುದಕ್ಕೆ ಕಾರಣವೇ ಇರಲಿಲ್ಲ. 5. ಪರಂತು ಶ್ರೀಕೃಷ್ಣನು ಬೋಧಿಸಿದ ಸಾಂಖ್ಯವು

ಕರ್ಮಸಂನ್ಯಾಸವನ್ನು ವಿಧಿಸತಕ್ಕದ್ದಲ್ಲವೆಂದು ಗೀತೆಯಿಂದಲೇ ವಿಶದವಾಗಿ ನಿಶ್ಚಿತವಾಗುವುದು. ಸಾಂಖ್ಯವನ್ನು ಶ್ರವಣಮಾಡಿದನಂತರವೂ ಸಹ ಕರ್ಮಯೋಗದಲ್ಲಿ ಪ್ರವೃತ್ತನಾದುದರಿಂದಲೇ ಅರ್ಜುನನು ಶ್ರವಣಮಾಡಿದ ಸಾಂಖ್ಯವು ಕರ್ಮಾನುಷ್ಠಾನಕ್ಕೆ ಉಪೋದ್ಬಲಕವೆಂದು ಸೂಚಿತವಾಗುವುದು. ಸಾಂಖ್ಯವನ್ನು ಉಪದೇಶಮಾಡಿದನಂತರ "ಕುರು ಕರ್ಮೈವ ತಸ್ಮಾತ್ತ್ವಂ" ಎಂದು ಶ್ರೀಕೃಷ್ಣನು ಕರ್ಮಾನುಷ್ಠಾನದಲ್ಲಿ ಪ್ರೇರಿಸುತ್ತಿರುವುದರಿಂದಲೂ ಶ್ರೀಕೃಷ್ಣನು ಉಪದೇಶಮಾಡಿದ ಸಾಂಖ್ಯವು ಕರ್ಮಾನುಷ್ಠಾನಕ್ಕೆ ಉಪೋದ್ಬಲಕವೇ ಹೊರತು ಕರ್ಮಸಂನ್ಯಾಸವನ್ನು ವಿಧಿಸತಕ್ಕದ್ದಲ್ಲವೆಂದು ನಿಶ್ಚಿತವಾಗುವುದು. ಮತ್ತು ಅರ್ಜುನನ ಅಂತ್ಯಶ್ಲೋಕಗಳೂ ಸಹ ಅರ್ಜುನನು ಶ್ರೀಕೃಷ್ಣನಿಂದ, ವಿಸ್ಮೃತವಾದ ತನ್ನ "ಸಾಂಖ್ಯ" ಜ್ಞಾನವನ್ನೇ ಪುನಃ ಪಡೆದು ಯುದ್ಧದಲ್ಲಿ ಉತ್ಸಾಹದಿಂದ ಪ್ರವೃತ್ತನಾದನೆಂದು ಬೋಧಿಸುವುವು. ಇದು ಅರ್ಜುನನ ವಾಕ್ಯವು:—

(1) **ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।**
**ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥**

—(18. 73.)

ಎಲೈ ಅಚ್ಯುತನೇ ! ನನ್ನ ವಿಪರೀತಜ್ಞಾನವು, (ಬಂಧುಸ್ನೇಹವು) ನಾಶವಾಯಿತು. ನನ್ನ ಪೂರ್ವಜ್ಞಾನವು ನಿನ್ನ ಅನುಗ್ರಹದಿಂದ ಪ್ರಾಪ್ತವಾಯಿತು. ಜ್ಞಾನಸಂಛಿನ್ನಸಂಶಯವುಳ್ಳವನಾಗಿರುತ್ತೇನೆ. ನಿನ್ನ ಅಪ್ಪಣೆಯನ್ನು ನೆರವೇರಿಸುತ್ತೇನೆ.

ಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯಜ್ಞಾನವನ್ನು ಹೊಂದಿರುತ್ತೇನೆ. ನಾನು ಯುದ್ಧಮಾಡುತ್ತೇನೆ ಎಂದು ಈ ಶ್ಲೋಕಾರ್ಥವನ್ನು ಮಾಡಿದರೆ ಅತ್ಯಂತ ವಿರುದ್ಧವಾಗುವುದು. ಮತ್ತು ನಿನ್ನ ಆಜ್ಞೆಯಂತೆ ನಡೆಯುತ್ತೇನೆಂದು ಶ್ರೀಕೃಷ್ಣನಿಗೆ ಹೇಳಿ ಅರ್ಜುನನು ಕರ್ಮಮಾರ್ಗದಲ್ಲೇ ಪ್ರವೃತ್ತನಾಗಿರುವುದರಿಂದ, ಕರ್ಮಮಾರ್ಗವೂ ಜ್ಞಾನಮಾರ್ಗವೂ ಪರಸ್ಪರ ವಿರುದ್ಧವಾದ ಒಬ್ಬ ಅಧಿಕಾರಿಯಲ್ಲಿ ಅಸಂಭಾವಿತವಾದ ವಸ್ತುದ್ವಯಗಳಲ್ಲವೆಂದು ಸಿದ್ಧವಾಗುತ್ತದೆ. ಅದ್ವೈತಮತದರೀತ್ಯಾ, ಕರ್ಮಮಾರ್ಗವೂ ಜ್ಞಾನಮಾರ್ಗವೂ ಒಬ್ಬನಲ್ಲಿ ಅಸಂಭಾವಿತವು. ಈ ವಿಷಯವನ್ನು ಶಂಕರಾಚಾರ್ಯರೇ ಒಪ್ಪಿರುತ್ತಾರೆ:—

"ಜ್ಞಾನಕರ್ಮಣೋಃ ಕರ್ತೃತ್ವಾಕರ್ತೃತ್ವೈಕತ್ವಾನೇಕತ್ವ ಬುದ್ಧ್ಯಾಶ್ರಯಯೋರೇಕಪುರುಷಾಶ್ರಯತ್ವಾಸಂಭವಂ ಪಶ್ಯತಾ (ದ್ವೇನಿಷ್ಠೇ ವಿಭಕ್ತೇ ಭಗವತೈವೋಕ್ತೇ)." ಶಾಂಕರಗೀತಾಭಾಷ್ಯ. ಅಧ್ಯಾಯ 2.

**ಅರ್ಥ—** ಕರ್ತೃತ್ವಬುದ್ಧಿಯನ್ನೂ ಅನೇಕತ್ವಬುದ್ಧಿಯನ್ನೂ ಆಶ್ರಯಿಸಿದ ಕರ್ಮಮಾರ್ಗಕ್ಕೂ, ಅಕರ್ತೃತ್ವಬುದ್ಧಿಯನ್ನೂ ಏಕತ್ವಬುದ್ಧಿಯನ್ನೂ ಆಶ್ರಯಿಸಿದ ಜ್ಞಾನಮಾರ್ಗಕ್ಕೂ ಒಬ್ಬ ಪುರುಷನಲ್ಲಿ ಅವಸ್ಥಾನವು ಅಸಂಭಾವಿತವೆಂದು ತಿಳಿದಂಥಾ ಶ್ರೀಕೃಷ್ಣನು ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯಜ್ಞಾನವೆಂಬ ಸಾಂಖ್ಯತತ್ವವನ್ನೂ ಕರ್ಮಾನುಷ್ಠಾನರೂಪವಾದ ಯೋಗವನ್ನೂ ವಿಭಾಗಮಾಡಿ ಬೇರೆಬೇರೆಯೇ ಉಪದೇಶಮಾಡಿರುತ್ತಾನೆ.

ಈರೀತಿಯಾಗಿ ಶಂಕರಾಚಾರ್ಯರ ಅಭಿಪ್ರಾಯಾನುಸಾರವಾಗಿ ಅರ್ಜುನನು ಜ್ಞಾನಿಯಾದರೆ ಯುದ್ಧಮಾಡಕೂಡದು. ಕರ್ಮಿಯಾದರೆ ಶ್ರೀಕೃಷ್ಣನ ಸಾಂಖ್ಯೋಪದೇಶವು, ಆತನಿಗೆ ಜ್ಞಾನೋತ್ಪತ್ತಿಗಾಗಿ ಮಾಡಿದ ಉಪದೇಶ, ತೋರಿಸಿದ ವಿಶ್ವರೂಪದರ್ಶನಾದಿಗಳೂ ಅಕಾಂಡತಾಂಡವವಾಗುವುವು. ಅಲ್ಲದೆ ಅದ್ವೈತಾತ್ಮಾವಗಾಹಿಯಾದ ಜ್ಞಾನವೇ ಸಾತ್ವಿಕವೆಂದು ಶಂಕರಾಚಾರ್ಯರು ಹದಿನೆಂಟನೆಯ ಅಧ್ಯಾಯದಲ್ಲಿ ಹೇಳಿರುವುದರಿಂದ ಕರ್ಮಿಯಾದ ಅರ್ಜುನನು ಅವರರೀತ್ಯಾ ಸಾತ್ವಿಕಜ್ಞಾನರಹಿತನಾದ ಮಂಕನಾಗಬೇಕು. *

---

* ಶ್ರೀಪಾದಂಗಳವರು ಈ ವಿಚಾರಾವಸರದಲ್ಲಿ ಬಹುಗೂಢವಾಗಿದ್ದ ಅದ್ವೈತತತ್ವದ ದೋಷವನ್ನು ಸಜ್ಜನರ ಜ್ಞಾನನೇತ್ರಕ್ಕೆ ವ್ಯಕ್ತಪಡಿಸಿರುವರು. ಇದೇ ಶಂಕರಮತವು. ಕರ್ಮಮಾಡುವವನು ವೇದಾಂತಗ್ರಂಥವನ್ನು ಮುಟ್ಟಕೂಡದು. ವೇದಾಂತವ್ಯಾಸಂಗಕ್ಕೆ **ಆರಂಭಿಸುವವನು** ಕರ್ಮವನ್ನು ಪರಿತ್ಯಾಗಮಾಡಬೇಕು. ಒಬ್ಬ ಪುರುಷನಲ್ಲಿ ಕರ್ಮಾನುಷ್ಠಾನವೂ ವೇದಾಂತವಿಚಾರವೂ (ಅಥವಾ ಜ್ಞಾನವು) ಪರಸ್ಪರ ವಿರೋಧಿಗಳಾದುದರಿಂದ ಇವೆರಡೂ ಇರಲಾರವು ಎಂದು ಸ್ಪಷ್ಟವಾಗಿ ಶಂಕರಾಚಾರ್ಯರೇ ಬರೆದಿರುತ್ತಾರೆ. **"ಅನುಷ್ಠೇಯವಿರೋಧಿತ್ವಾದವಿಕ್ರಿಯಾತ್ಮಜ್ಞಾನಸ್ಯ"** ಎಂದರೆ ಆತ್ಮನು ನಿಷ್ಕ್ರಿಯನು ಎಂಬ ವೇದಾಂತಜ್ಞಾನವು ಕರ್ಮಾನುಷ್ಠಾನಕ್ಕೆ ವಿರೋಧಿಯು ಎಂದು ಆನಂದಗಿರಿ ಟೀಕಾಕಾರರು ಬರೆದಿರುತ್ತಾರೆ. ಪ್ರೊಫೆಸರ್ ದಾಸಗುಪ್ತರೂ ಸಹ ಶಂಕರಾಚಾರ್ಯರ ಈ ಸಾಹಸವನ್ನು ಹೀಗೆಯೇ ಉಪಪಾದಿಸಿರುತ್ತಾರೆ:—

**Throughout his commentary on the "Bhagavadgita" Shankara tried to demonstrate that those who should follow**

6. ಪರಂತು ಏಷಾತೇಭಿಹಿತಾಸಾಂಖ್ಯೇ ಎಂಬ ದ್ವಿತೀಯಾಧ್ಯಾಯದ ಮೂವತ್ತೊಂಭತ್ತನೆಯ ಶ್ಲೋಕದ ಪೂರ್ವಭಾಗದ ಇಪ್ಪತ್ತೇಳು ಶ್ಲೋಕಗಳೂ ಸಾಂಖ್ಯವನ್ನು ಹೇಳುವುವೆಂದೂ, "ಬುದ್ಧಿರ್ಯೋಗೇತ್ವಿಮಾಂಶೃಣು" ಎಂಬ ಅದೇ ಶ್ಲೋಕವನ್ನು ಆರಂಭಿಸಿಕೊಂಡು ಮುಂದೆ ಹೇಳುವುದೆಲ್ಲಾ ಯೋಗಪರ

---

**the injunctions of the Veda and perform Vedic deeds, such as sacrifices, etc., belonged to a lower order. So long as they remained in that order they had no right to follow the higher teachings of the Upanishads. They were but karmins (performers of scriptural duties). When they ...... wanted to know the truth alone, they entered the jnanamarga (the way of wisdom) and had no duties to perform ... ... . Thus, the path of duties (karma) and the path of wisdom (jnana) were intended for different classes of persons or adhikarins. There could be no joint performance of the Vedic duties and the seeking of the highest truth as taught in the Upanishads.**

**—Surendranath Das Gupta, M.A., Ph.D.**

**ಅರ್ಥವು**:—ಅವರ ಸಮಗ್ರ ಗೀತಾಭಾಷ್ಯದಲ್ಲಿ ಶಂಕರಾಚಾರ್ಯರು ವೇದೋಕ್ತ ವಿಧಿಗಳನ್ನು ಆಚರಿಸುವವರೂ ಮತ್ತು ಯಜ್ಞಾದಿ ವೈದಿಕಕರ್ಮಗಳನ್ನು ಅನುಷ್ಠಾನ ಮಾಡುವವರೂ ಅಧಮತರಗತಿಗೆ ಸೇರಿದವರೆಂದೇ ತೋರಿಸುವುದಕ್ಕೆ ಪ್ರಯತ್ನಿಸಿದರು. ಅಂಥಾ ಕರ್ಮಿಗಳು ಈರೀತಿಯಾದ ಯಜ್ಞಾದ್ಯನುಷ್ಠಾನದಲ್ಲಿರುವವರೆಗೂ, ಉಪನಿಷತ್ತಿನ ಉಪದೇಶಸ್ವೀಕಾರದಲ್ಲಿ (ಬ್ರಹ್ಮವಿದ್ಯಾಭ್ಯಾಸದಲ್ಲಿ) ಅಧಿಕಾರವಿಲ್ಲದವರು; ಅವರು ಕೇವಲ ಕರ್ಮಿಗಳೇ. ಅವರೇನಾದರೂ ತತ್ವವನ್ನು ತಿಳಿಯಬೇಕಾದರೆ ಜ್ಞಾನಮಾರ್ಗವನ್ನು ಪ್ರವೇಶಮಾಡಬೇಕು ಮತ್ತು ಯಾವ ಕರ್ಮವನ್ನೂ ಮಾಡಬೇಕಾದುದಿಲ್ಲ. ಈರೀತಿಯಾಗಿ ಕರ್ಮಮಾರ್ಗವೂ, ಜ್ಞಾನಮಾರ್ಗವೂ ಬೇರೆ ಬೇರೆ ಯೋಗ್ಯತೆಯುಳ್ಳ ಅಧಿಕಾರಿಗಳಿಗೆ ನಿಯತವಾದುವು. ವೇದೋಕ್ತಕರ್ಮಾನುಷ್ಠಾನವೂ ಉಪನಿಷತ್ತುಗಳಲ್ಲಿರುವ ತತ್ವವಿಚಾರವೂ ಜೊತೆಯಲ್ಲಿ ಸಂಭವಿಸಲಾರವು. (ಜ್ಞಾನಮಾರ್ಗದವರು ಕರ್ಮಮಾಡಕೂಡದು. ಕರ್ಮಮಾರ್ಗದವರು ಜ್ಞಾನಾರ್ಥವಾಗಿ ವಿಚಾರಮಾಡಕೂಡದು. ಯಾವ ರೀತಿಯಿಂದಲೂ ಜ್ಞಾನಕರ್ಮಗಳಿಗೆ ಏಕಕಾಲದಲ್ಲಿ, ಏಕಪುರುಷನಲ್ಲಿ ಸಹಾವಸ್ಥಿತಿಯು ಇಲ್ಲ ಎಂದು ಶಂಕರಾಚಾರ್ಯರು ಪ್ರತಿಪಾದಿಸಿದರು ಎಂದು ಭಾವವು.)

ವೆಂದೂ ಶ್ರೀಕೃಷ್ಣನು ಉಪದೇಶಮಾಡಿರುತ್ತಾನೆ. ಇವುಗಳಲ್ಲಿ "ಸ್ವಧರ್ಮ ಮಪಿಚಾವೇಕ್ಷ್ಯ ನ ವಿಕಂಪಿತುಮರ್ಹಸಿ" (2. 31.) ಎಂಬ ಶ್ಲೋಕದ ಮೊದಲು ಗೊಂಡು,

(2) **ಸುಖದುಃಖೇ ಸಮೇಕೃತ್ವಾ ಲಾಭಾಲಾಭೌಜಯಾಜಯೌ ।**
**ತತೋಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ॥**
—(2. 28.)

ಎಂಬ ಶ್ಲೋಕಪರ್ಯಂತವಾದ ಎಂಟು ಶ್ಲೋಕಗಳಲ್ಲಿಯೂ ವಿಹಿತಕರ್ಮಾ ನುಷ್ಠಾನವನ್ನೇ ಬೋಧಿಸಿ, ಅನಂತರ "ಏಷಾ ತೇಽಭಿಹಿತಾಸಾಂಖ್ಯೇ" ಎಂದು ಇದೆಲ್ಲವನ್ನೂ ಸಾಂಖ್ಯದಲ್ಲಿ ಅಂತರ್ಭಾವವನ್ನು ಹೊಂದಿಸಿರುವನು. ಅದ್ವೈತ ಮತದರೀತ್ಯಾ ಸಾಂಖ್ಯಬುದ್ಧಿವಿರೋಧಿಯಾದ ಕರ್ಮವಿವಕ್ಷೆಯಿಂದ ಪ್ರವೃತ್ತ ವಾದ ಈ ಶ್ಲೋಕಗಳನ್ನು ಹೇಳಿ ಶ್ರೀಕೃಷ್ಣನು ಏಷಾತೇಽಭಿಹಿತಾಸಾಂಖ್ಯೇ ಎಂದು ಹೇಳಿದುದು ಅತ್ಯಂತ ಅಸಂಗತವೇ ಆಗುವುದು. ಸಾಂಖ್ಯಬುದ್ಧಿಯೂ ಕರ್ಮಬುದ್ಧಿಯೂ ಒಬ್ಬನಲ್ಲಿಯೇ ಇರಬಹುದಾದರೆ ಕಥಂಚಿತ್ ಈ ವಾಕ್ಯಗಳನ್ನು ಹೇಳಬಹುದಾಗಿತ್ತು. ಆದರೆ ಶಂಕರಾಚಾರ್ಯರು ಸಾಂಖ್ಯಬುದ್ಧಿಯೂ ಯೋಗ ಬುದ್ಧಿಯೂ ಒಬ್ಬನಲ್ಲಿ ಇರಲಾರದೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. ತತ್ತ್ವ ವನ್ನು ನಿರೂಪಣೆಮಾಡಿ ಸ್ವಧರ್ಮವಾದ ಯುದ್ಧವನ್ನು ಲಾಭಾಲಾಭಗಳಲ್ಲಿ ದೃಷ್ಟಿಯಿಡದೆ ನಡೆಯಿಸಬೇಕೆಂದು ಬೋಧಿಸಿ "ಏಷಾತೇಽಭಿಹಿತಾಸಾಂಖ್ಯೇ" ಎಂದರೆ ಇದು ಸಾಂಖ್ಯ ವಿಷಯದಲ್ಲಿ ನಿರೂಪಿಸಿದ ತತ್ತ್ವವು ಎಂದು ಹೇಳಿರುವು ದರಿಂದ ಸಾಂಖ್ಯವು ಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯಜ್ಞಾನವೆಂದು ಸಿದ್ಧಿಸುವುದಿಲ್ಲ.*

---

*ಶಂಕರಾಚಾರ್ಯರು "ಶೋಕಮೋಹಾಪನಯನಾಯ ಲೌಕಿಕೋನ್ಯಾಯಃ ಸ್ವಧರ್ಮ ಮಪಿಚಾವೇಕ್ಷ್ಯೇತ್ಯಾದ್ಯೈಃ ಶ್ಲೋಕೈರುಕ್ತೋ ನತು ತಾತ್ಪರ್ಯೇಣ" ಎಂದು ಧೈರ್ಯದಿಂದ ಬರೆದಿರುತ್ತಾರೆ.

**ಅರ್ಥ :—** ಅರ್ಜುನನ ದುಃಖಶಮನಾರ್ಥವಾಗಿ "ಸ್ವಧರ್ಮಮಪಿಚಾವೇಕ್ಷ್ಯ" ಮುಂತಾದ ಶ್ಲೋಕಗಳಲ್ಲಿ ಲೌಕಿಕನ್ಯಾಯವನ್ನು ಅವಲಂಬಿಸಿ ಶ್ರೀಕೃಷ್ಣನು ಮಾತಾಡಿದನೇ ಹೊರತು ತಾತ್ಪರ್ಯಪೂರ್ವಕವಾಗಿ ಸ್ವಧರ್ಮವನ್ನು ಆಚರಿಸು ಎಂದು ಹೇಳಲಿಲ್ಲ.

7. ಸಮುಚ್ಚಯಾರ್ಥಕವಾದ ಅಪಿ ಶಬ್ದದಿಂದ ಸಹಿತವಾದ,

(3) **ಸ್ವಧರ್ಮಮಪಿಚಾವೇಕ್ಷ್ಯ ನವಿಕಂಪಿತುಮರ್ಹಸಿ ।** —(2. 31.)

ಎಂಬ ಶ್ಲೋಕವೇ ಶ್ರೀಕೃಷ್ಣನು ಉಪದೇಶಮಾಡಿರುವ ಸಾಂಖ್ಯತತ್ವವು ಕರ್ಮಾನುಷ್ಠಾನವನ್ನೇ ಬೋಧಿಸುವುದೆಂದು ನಿಶ್ಚಯಿಸುವುದರಲ್ಲಿ ಸಹಾಯಕವಾಗಿರುವುದು. ಹೇಗೆಂದರೆ, ಎಲೈ ಅರ್ಜುನನೇ! ಸ್ವಧರ್ಮವೆಂಬ ದೃಷ್ಟಿಯಿಂದಲೂ ಸಹ ನೀನು ಯುದ್ಧಮಾಡುವುದರಲ್ಲಿ ಭಯಪಡಕೂಡದು ಎಂದು

---

ಪುನಃ **" ಯುಧ್ಯಸ್ವಭರತರ್ಷಭ "** ಎಂಬ ಶ್ಲೋಕವ್ಯಾಖ್ಯಾನಾವಸರದಲ್ಲಿ ಕೃಷ್ಣನಿಗೆ ಯುದ್ಧಮಾಡು ಎಂದು ವಿಧಿಸುವುದರಲ್ಲಿ ತಾತ್ಪರ್ಯವಿಲ್ಲವೆಂದು ನಿಷ್ಕಾರಣವಾಗಿ ಬರೆದಿರುತ್ತಾರೆ:—**" ಯುಧ್ಯಸ್ವೇತ್ಯನುವಾದ ಮಾತ್ರಂನವಿಧಿಃ "** ಎಂದರೆ ಯುದ್ಧಮಾಡು ಎಂಬ ವಾಕ್ಯವು ಲೌಕಿಕ ಅನುವಾದವೇ ಹೊರತು ವಿಧಿಯಲ್ಲ. ಇದರ ದೋಷವು ಗೀತೆಯನ್ನು ಸಾಮಾನ್ಯವಾಗಿ ಓದುವವರೂ ಸಹ ತಿಳಿಯುವರು. ಮತ್ತು **" ತತೋ ಯುದ್ಧಾಯಯುಜ್ಯಸ್ವ "** ಎಂಬ ಶ್ಲೋಕಭಾಗದ ವ್ಯಾಖ್ಯಾನ ಕಾಲದಲ್ಲಿ ಇದೆಲ್ಲಾ ಪ್ರಾಸಂಗಿಕವಾಗಿ ಎಂದರೆ, ಮಾತು ಬಂತಲ್ಲಾ ಎಂದು ಆಡಿದ್ದೇ ಹೊರತು ಕೃಷ್ಣನಿಗೆಯುದ್ಧಕರ್ಮವಿಧಾನದಲ್ಲಿ ತಾತ್ಪರ್ಯವಿಲ್ಲವೆಂದು ಹೇಳಿರುತ್ತಾರೆ. ಕರ್ಮಮಾರ್ಗದ ಉಪದೇಶಕ್ಕೆ ಗೀತೆಯಲ್ಲಿ ಸಂಗತಿಯೇ ಇಲ್ಲವೆಂದು ಅವರು ಖುದ್ದು ಒಪ್ಪಿಕೊಂಡಂತಾಯಿತು. ಇದು ಅವರ ಮಾತು :—

**ತತೋಯುದ್ಧಾಯ ಯುಜ್ಯಸ್ವ** .... .... .... ....।
.... .... .... **ಇತ್ಯೇಷ ಉಪದೇಶಃ ಪ್ರಾಸಂಗಿಕಃ ॥**

**ಅರ್ಥ—**ಆದ್ದರಿಂದ ಯುದ್ಧ ಮಾಡು ಎಂಬ ಶ್ರೀಕೃಷ್ಣನ ಉಪದೇಶವು ಪ್ರಾಸಂಗಿಕವು. (ತತ್ವೋಪದೇಶಕ್ಕೆ ಸಂಬಂಧ ವಿಲ್ಲದ ಸುಮ್ಮನೆ ಹೇಳಿದ ಮಾತು.)

ಗೀತೆಯು ಮುಮುಕ್ಷುವಿನಿಂದ ಸ್ವಧರ್ಮವು ಸರ್ವತ್ರ ಅತ್ಯನುಷ್ಠೇಯವಾದ ಕರ್ತವ್ಯವೆಂದು ಬೋಧಿಸುತ್ತಿರುವುದು. ಶಂಕರಾಚಾರ್ಯರ ಅರ್ಥವು ಸ್ವಕಪೋಲಕಲ್ಪಿತವಾದ ದುರರ್ಥವು. ಮ್ಯಾಕ್ಡೊನೆಲ್ ಸಾಹೇಬನೂ ಹಾಗೆ ಹೇಳುತ್ತಾನೆ:—

**" From the Gita he (Sankara) tries to adduce proofs for his own doctrine especially its exoteric part relating to the performance of social duties."**

**—A. A. Macdonell, M.A.**

ಈ ಶ್ಲೋಕಾರ್ಥವು. ಏವಂಚ ಇದುವರೆವಿಗೂ ನಾನು ಮಾಡಿರುವ ಸಾಂಖ್ಯೋಪದೇಶದಿಂದಲೂ ನೀನು ಯುದ್ಧದಿಂದ ಹಿಂತೆಗೆಯುವುದಕ್ಕೆ ಕಾರಣವಿಲ್ಲ; ಮತ್ತು ಯುದ್ಧವು ಸ್ವಧರ್ಮವೆಂಬ ಕರ್ಮಯೋಗಬುದ್ಧಿಯಿಂದಲೂ ಸಹ ನೀನು ಯುದ್ಧದಿಂದ ಹಿಂತೆಗೆಯುವುದಕ್ಕೆ ಕಾರಣವಿಲ್ಲ. ಎಷ್ಟು ಪ್ರಕಾರದಿಂದ ವಿಮರ್ಶೆಮಾಡಿದರೂ ಯುದ್ಧವು ನಿನ್ನಿಂದ ಅವಶ್ಯಕರ್ತವ್ಯವಾಗಿರುತ್ತದೆ ಎಂದು ಫಲಿತಾರ್ಥವು. ಇದರಿಂದ ಸಾಂಖ್ಯಬುದ್ಧಿಯೂ ಯೋಗಬುದ್ಧಿಯೂ ಎರಡೂ ವಿರೋಧವಿಲ್ಲದೆ ಒಬ್ಬನಲ್ಲಿಯೇ ಇದ್ದು ಉತ್ತಮವಾದ ಅನುಷ್ಠಾನಗಳಿಗೆ ಕಾರಣವಾಗಬಹುದೆಂದು ಸ್ಪಷ್ಟವಾಗಿ ಸಿಕ್ಷಿತವಾಗುತ್ತದೆ. ಈ ಸಾಂಖ್ಯೋಪದೇಶವನ್ನು ಉಪಸಂಹಾರಮಾಡುವ ಅಂತ್ಯಶ್ಲೋಕವೇ ಈ ಅಭಿಪ್ರಾಯಕ್ಕೆ ಉಪೋದ್ಬಲಕವಾಗಿರುವುದು :—

(4) **ಸುಖದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ ।**
**ತತೋಯುದ್ಧಾಯಯುಜ್ಯಸ್ವ** .... .... .... ॥ —(2. 38.)

ನನ್ನಿಂದ ಉಕ್ತವಾದ ಸಾಂಖ್ಯಾನುಸಂಧಾನದಿಂದ ಸುಖದುಃಖ, ಲಾಭಾಲಾಭ, ಜಯಾಪಜಯಗಳನ್ನು ಸಮವಾಗಿ ಎಣಿಸಿ, (ಎಂದರೆ ಲಾಭಾದಿಗಳಿಂದ ಹಿಗ್ಗದೆ, ನಷ್ಟಾದಿಗಳಿಂದ ಕುಗ್ಗದೇ), ಯುದ್ಧವನ್ನು ಮಾಡು.

---

**ಅರ್ಥ :—** ಶಂಕರಾಚಾರ್ಯರು ಗೀತೆಯಿಂದ ತಮ್ಮ ಸ್ವಂತ ತತ್ವಕ್ಕೆ ಅದರಲ್ಲಿಯೂ ಮುಖ್ಯವಾಗಿ ಕರ್ಮಾನುಷ್ಠಾನವಿಷಯದಲ್ಲಿ ತಮಗೆ ಅಭಿಪ್ರೇತವಾದ ವಾದಕ್ಕೆ (ಕರ್ಮಸಂನ್ಯಾಸವಾದಕ್ಕೆ) ಗೀತೆಯಿಂದ ರುಜುವಾತುಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.

ಇದು ಬಿರುದಾಂಕಿತನಾದ (ಪದಕವನ್ನೂ ಹೊಂದಿದ) ಒಬ್ಬ ಡೆನ್ಮಾರ್ಕ ಪಂಡಿತನ ಮಾತು :—

**"The key-note of the religion of the Gita is not non-activity but the right activity according to the injunctions of the scriptures (Dharma) having for its opposite Adharma."**

**—Paul Yevtic; B. Litt,, Ph.D.**

**ಅರ್ಥ :—** ಗೀತೆಯ ಪರಮತಾತ್ಪರ್ಯಕ್ಕೆ ವಿಷಯವಾದ ಮತವು ಕರ್ಮಾಕರಣವಲ್ಲ. ಮತ್ತೇನೆಂದರೆ ಅಧರ್ಮವನ್ನು ವಿರುದ್ಧವಾಗಿಟ್ಟುಕೊಂಡು ಶಾಸ್ತ್ರೋಕ್ತವಾದ ರೀತಿಯಲ್ಲಿ ಸರಿಯಾಗಿ ಧರ್ಮವನ್ನು ಆಚರಿಸಬೇಕೆಂಬುದೇ (ಗೀತೆಗೆ ಸಮ್ಮತವಾದ ಮತವು).

ಈ ವಾಕ್ಯದಲ್ಲಿ ಸಾಂಖ್ಯವನ್ನು ಉತ್ತಮಕರ್ಮಾನುಷ್ಠಾನದ ಪರಿಪೂರ್ತಿಗೆ ಅವಶ್ಯವಾದ ಒಂದು ಆಂತರ ಅಂಗವನ್ನಾಗಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ಆದುದರಿಂದ, ಈ ಸಾಂಖ್ಯವು ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯ ಜ್ಞಾನವಾದರೆ, ಸಾಂಖ್ಯಾನುಸಂಧಾನಪೂರ್ವಕವಾದ ಕರ್ಮಯೋಗವು ವಂಧ್ಯಾ ಪುತ್ರನಂತೆ ಅಪ್ರಸಿದ್ಧಪದಾರ್ಥವಾಗಿಹೋಗುವುದು. ಸರ್ವಕರ್ಮಸಂನ್ಯಾಸ ಪೂರ್ವಕವಾದ ಆತ್ಮೈಕ್ಯಜ್ಞಾನದಿಂದ ಸಂಪನ್ನನಾಗಿ ನಿವೃತ್ತದ್ವಂದ್ವನಾಗಿ ಯುದ್ಧವನ್ನು ಮಾಡು ಎಂಬ ಅದ್ವೈತೋಪದೇಶವು ವ್ಯಾಹತಿಗೆ ಪ್ರಸಿದ್ಧ ದೃಷ್ಟಾಂತವಾಗಿ ಪರಿಣಮಿಸುವುದು.

**ಪ್ರಶ್ನೆ**—ಸ್ವಾಮಿ! ದ್ವೈತಮತದಲ್ಲಿ ನಿವೃತ್ತದ್ವಂದ್ವನಾಗಿ ಯುದ್ಧವನ್ನು ಮಾಡು ಎನ್ನುವುದು ವಿರುದ್ಧವಲ್ಲವೋ?

**ಉತ್ತರ—ಶ್ರೀಶ್ರೀಗಳವರು**—ಯಾವ ವಿರೋಧವೂ ಇಲ್ಲ. ನಿವೃತ್ತ ದ್ವಂದ್ವನಾದರೆ ಸ್ವಾರ್ಥವಾದ ಲೌಕಿಕ ಅಪೇಕ್ಷೆಗಳು ನಾಶವಾಗಿ ಕೇವಲ ಭಗವತ್ಪ್ರೀತ್ಯರ್ಥವಾದ ನಿಷ್ಕಾಮಕರ್ಮಾನುಷ್ಠಾನವು ಸಂಭವಿಸುವುದು. ನಿರ್ದ್ವಂದ್ವನಲ್ಲದ ಪುರುಷನಿಗೆ ಮೋಕ್ಷಹೇತುಭೂತವಾದ ಸ್ವಧರ್ಮಾಚರಣೆಯೇ ಅಶಕ್ಯವಾಗುವುದು. ಆದುದರಿಂದ ಅದ್ವೈತಮತದಲ್ಲಿ, ಏಕಪುರುಷಾಶ್ರಿತವಾಗಿ ಉಭಯವೂ ಇರುವುದು ಅಸಂಭವವೆಂದು ಒಪ್ಪಿ ಸಾಂಖ್ಯವನ್ನೂ, ಕರ್ಮವನ್ನೂ ಒಬ್ಬ ಅರ್ಜುನನಿಗೆ ಸರ್ವಜ್ಞನಾದ ಶ್ರೀಕೃಷ್ಣನು ಉಪದೇಶಮಾಡಿದನೆಂದು ಹೇಳುವುದು; ಅರ್ಜುನನು ಸಾಂಖ್ಯೋಪದೇಶಕ್ಕೆ ಅರ್ಹನಲ್ಲವೆಂದು ಹೇಳುವುದು; ಅರ್ಜುನನು ಶ್ರುತವಾದ ಸಾಂಖ್ಯವನ್ನು ಅನುಷ್ಠಾನಮಾಡದ ಧರ್ಮಹೇಡಿ ಯು ಎಂದು ಹೇಳುವುದು; ಅರ್ಜುನನು ಯೋಗಬುದ್ಧಿಮಾತ್ರವನ್ನು ಆಶ್ರಯಿ ಸಿದ ಕರ್ಮಿಯು ಎಂದು ಹೇಳುವುದು; ಪರಬ್ರಹ್ಮನಾದ ಶ್ರೀಕೃಷ್ಣನು ಪ್ರಣ ತನಾದ ಶಿಷ್ಯನಿಗೆ ಉತ್ತಮವಾದ ಸಾಂಖ್ಯವನ್ನು ಉಪದೇಶಮಾಡಿ, ನಂತರ ಅದೇ ಕ್ಷಣದಲ್ಲಿ ಅದರಂತೆ ಅನುಷ್ಠಾನಮಾಡದೆ ಅಜ್ಞದೃಷ್ಟಿಯಿಂದ ಪ್ರಾಪ್ತ ವಾಗುವ ಕರ್ಮವನ್ನು ಮಾಡು, ಎಂದು ನೀಚವೆಂದು ಅಂಗೀಕೃತವಾದ ಆಚರಣೆ ಯನ್ನು ವಿಧಿಸುವನೆಂದು ಹೇಳುವುದು; ಅಥವಾ ಶ್ರೀಕೃಷ್ಣನು ಸರ್ವಕರ್ಮ ಪರಿತ್ಯಾಗಮಾಡೆಂದು ಹೇಳಿ ಉತ್ತರಕ್ಷಣದಲ್ಲಿ ಉನ್ಮತ್ತಪ್ರಲಾಪದಂತೆ ಧಾರ್ತ

ರಾಷ್ಟ್ರರ ಸಂಹಾರದಲ್ಲಿ ಅರ್ಜುನನನ್ನು ಪ್ರೇರಿಸುವನೆಂದು ಹೇಳುವುದು; ಸರ್ವ ಕರ್ಮಸಂನ್ಯಾಸಪೂರ್ವಕವಾದ ಆತ್ಮಜ್ಞಾನದಿಂದ ಸಹಿತನಾಗಿ ಯುದ್ಧಮಾಡು ಎಂದು ಶ್ರೀಕೃಷ್ಣನು ವಿರುದ್ಧೋಪದೇಶವನ್ನು ಮಾಡಿದನೆಂದು ಅಂಗೀಕರಿಸ ಬೇಕಾಗುವ ವಾದವನ್ನು ಮಾಡುವುದು; ಇವೇ ಮುಂತಾದ ಅನಂತದೋಷ ದುಷ್ಟವಾದ ಅದ್ವೈತಭಾಷ್ಯದರೀತ್ಯಾ, ಭಗವದ್ಗೀತೆಯಲ್ಲಿ ಸಾಂಖ್ಯತತ್ತ್ವೋಪ ದೇಶದ ಉಪಕ್ರಮವೇ ಅಸಮಂಜಸವಾಗುವುದು. ಏಕಪುರುಷನಲ್ಲಿ ಏಕಕಾಲ ದಲ್ಲಿ ಸಹಾವಸ್ಥಾನವನ್ನು ಹೊಂದಲಾರದ ಬುದ್ಧಿದ್ವಯಕಲ್ಪನೆಯು ಸ್ತೇನನ ಬುದ್ಧಿಯಿಂದ ಚೌರ್ಯವು ಧರ್ಮವು ಎಂಬಂತೆ ಅತ್ಯಂತ ಹಾಸ್ಯಾಸ್ಪದವಾದ ಪ್ರಕ್ರಿಯೆಯು.

5. **ಪ್ರಶ್ನೆ**—ಸ್ವಾಮಿ! ದ್ವೈತಮತದಲ್ಲೂ ಸಹ ಸಾಂಖ್ಯ, ಯೋಗ ಎಂಬ ಎರಡು ಪದಾರ್ಥಗಳು ಭಿನ್ನಭಿನ್ನವಾಗಿ ಪ್ರತಿಪಾದಿತವಾಗಿರುವುದಿಲ್ಲವೇ?

**ಶ್ರೀಶ್ರೀಗಳವರು**—ಪ್ರತಿಪಾದಿತವಾಗಿರುವುವು. ನಾವು ಪೂರ್ವದಲ್ಲಿ ನಿರೂಪಿಸಿದಂತೆ ಒಂದು ಮನೆಯಲ್ಲಿ ಏಕೋದರರು ನಾಲ್ಕು ಜನರು ಇರುವಂತೆ ಸಾಂಖ್ಯವು, ಕರ್ಮವು, ಆಶಾರಹಿತ್ಯರೂಪಸಂನ್ಯಾಸವು, ಮತ್ತು ಕರ್ಮಫಲ ಸಮರ್ಪಣೆಯೆಂಬ ತ್ಯಾಗವು ಇವು ನಾಲ್ಕು ಅಂಶಗಳು ಭಗವತ್ಪ್ರಾಪ್ತಿಹೇತು ಭೂತವಾದ ಬ್ರಹ್ಮಾಪರೋಕ್ಷಜ್ಞಾನಕ್ಕೆ ಒಟ್ಟಿಗೆ ಧ್ಯಾನದ್ವಾರಾ ಸಾಧನವಾಗಿ ರುತ್ತವೆ. ಅದನ್ನು ಹೇಳಬೇಕಾಗಿಯೇ ಪ್ರಥಮತಃ ಭಗವಂತನೇ ಪರಮನಿತ್ಯ ನಾದ ಸ್ವತಂತ್ರತತ್ತ್ವವು; ಜೀವರುಗಳು ಆತನ ಅಧೀನರಾದ ಅಸ್ವತಂತ್ರಚೇತ ನರು; ಅಭಿಮಾನವನ್ನು ಪರಿತ್ಯಾಗಮಾಡಿ ಪುಣ್ಯಕರ್ಮವನ್ನು ಮಾಡಿದರೆ "ಅಮೃತತ್ವಾಯಕಲ್ಪತೇ" ಜ್ಞಾನದ್ವಾರಾಜೀವನು ಮುಕ್ತಿಯನ್ನು ಹೊಂದು ತ್ತಾನೆ; ಇತ್ಯಾದಿರೀತಿಯಾಗಿ ಶ್ರೀಕೃಷ್ಣನು ಜೀವಪರಮಾತ್ಮಸ್ವರೂಪವನ್ನು ವಿಂಗಡಿಸಿಹೇಳಿ, ನಂತರ ಅಂಥಾ ಪರಮಾತ್ಮನಿಗೆ ಪ್ರಿಯವಾದ ಸ್ವಧರ್ಮ ವನ್ನು ನೀನು ಪರಿತ್ಯಾಗಮಾಡಬಾರದು ಎಂದು ಸಹೇತುಕವಾಗಿ ನಿರೂಪಿಸಿ, ಸಾಂಖ್ಯೋಪದೇಶವನ್ನು ಪರಿಸಮಾಪ್ತಿಮಾಡಿ, ಸಾಂಖ್ಯಸಹಿತವಾಗಿ ಮಾಡ ಲ್ಪಡಬೇಕಾದ ಕರ್ಮವನ್ನೇ ವಿಸ್ತಾರವಾಗಿ ತೃತೀಯಚತುರ್ಥಪಂಚಮಾ ಧ್ಯಾಯಗಳಲ್ಲಿ ನಿರೂಪಿಸಿರುತ್ತಾನೆ. ಮತ್ತು ಇಂಥಾ ಸಾಂಖ್ಯ ಮತ್ತು ಕರ್ಮಾ

ನುಷ್ಠಾನಗಳಿಂದ ಪ್ರಾಪ್ತವಾಗುವ ಧ್ಯಾನಯೋಗರೂಪವಾದ ಪರಿಪಾಕಾವಸ್ಥೆಯನ್ನು ಷಷ್ಠಾಧ್ಯಾಯದಲ್ಲಿ ನಿರೂಪಿಸಿರುತ್ತಾನೆ. ಜ್ಞಾನಿಯೂ ಸಹ ವಿಶೇಷ ಪ್ರೀತಿಯಿಂದ ವಿಶೇಷ ಆರಾಧನೆಯಲ್ಲೂ, ಆತ್ಮಧ್ಯಾನ, ಪ್ರಜಾಶಿಕ್ಷಣರೂಪವಾದ ಬಲವತ್ತರ ಕರ್ಮಯೋಗದಲ್ಲೂ ಸಹ ಆಸಕ್ತನಾಗುವನೆಂದು ಶ್ರೀಕೃಷ್ಣನು ಹೇಳಿರುವನೇ ಹೊರತು ಅತ್ಯಂತ ಅಸಂಭಾವಿತವಾದ ಸರ್ವಕರ್ಮಸಂನ್ಯಾಸವನ್ನು ಎಲ್ಲಿಯೂ ಹೇಳಿರುವುದಿಲ್ಲ. ಆತ್ಮೈಕ್ಯವು ಸಾಂಖ್ಯತತ್ವವಲ್ಲ ಮತ್ತು ವಿಷ್ಣು ಸರ್ವೋತ್ತಮತ್ವವೇ ಮತ್ತು ಜೀವಬ್ರಹ್ಮರ ಭೇದವೇ ಶ್ರೀಕೃಷ್ಣನು ಮಾಡಿರುವ ಸಾಂಖ್ಯೋಪದೇಶವೆಂದು ನಾವು ತೋರಿಸಿಯೇ ಇರುತ್ತೇವೆ. ಸರ್ವಕರ್ಮ ಸಂನ್ಯಾಸವನ್ನು ಶ್ರೀಕೃಷ್ಣನು ಎಲ್ಲಿಯೂ ಹೇಳಿಲ್ಲವೆಂಬುದನ್ನು ಕರ್ಮಾನುಷ್ಠಾನವಿಚಾರಪ್ರಕರಣದಲ್ಲಿ ವಿಶದಪಡಿಸುವೆವು. ಪ್ರಕೃತದಲ್ಲಿ ಇಷ್ಟು ಹೇಳುವೆವು. ಧರ್ಮಸಂಕಟದಲ್ಲಿ ಸಿಕ್ಕಿಬಿದ್ದಿರುವ ಅರ್ಜುನನಿಗೆ ಧರ್ಮೋಪದೇಶವನ್ನು ಮಾಡಬೇಕಾಗಿ "ಯುದ್ಧವು ಧರ್ಮಪ್ರಾಪಕವೆಂದು ತಿಳಿದು ಶತ್ರುಮರಣದಿಂದ ಪ್ರಸಕ್ತವಾದ ದುಃಖವನ್ನು ಪ್ರಬಲವಾದ ಪುಣ್ಯಲಾಭವನ್ನು ದೃಷ್ಟಿಯಲ್ಲಿರಿಸಿ ಮತ್ತು ದುರಭಿಮಾನತ್ಯಾಗದಿಂದ ಉತ್ಪನ್ನವಾಗದಂತೆ ಮಾಡಿದರೆ, ಪರಮಾತ್ಮತೋಷಣರೂಪವಾದ ಮಹಾ ಕೆಲಸವು ಆಗುವುದರಿಂದ, ಮೋಕ್ಷರೂಪವಾದ ಮಹಾಪುರುಷಾರ್ಥವು ಕರಗತವಾಗುವುದು; ಯುದ್ಧನಿವೃತ್ತಿರೂಪ ಕರ್ಮಸಂನ್ಯಾಸದಿಂದ ಪಾಪವು ಪ್ರಾಪ್ತವಾಗುವುದು" ಎಂದು ಶ್ರೀಕೃಷ್ಣನು ಹೇಳಬೇಕಾಗಿರುವುದರಿಂದ, ಧರ್ಮೋಪದೇಶದ ಸಮಯದಲ್ಲಿ ಆಕ್ಷಿಪ್ತವಾಗಿ ಅವಶ್ಯವಾಗಿ ಪರಮಾತ್ಮ, ಜೀವ, ಇವರುಗಳ ಸಂಬಂಧ ಇವುಗಳೇ ಮುಂತಾದ ಸಾಂಖ್ಯೋಪದೇಶವನ್ನು ಶ್ರೀಕೃಷ್ಣನು ಸಮಗ್ರವಾಗಿ ಮಾಡಬೇಕಾಯಿತು. ಆದುದರಿಂದ ಮಾಡಿರುವನು. ಅದ್ವೈತಮತದ ರೀತ್ಯಾ ಪಾರಮಾರ್ಥಿಕ ತತ್ತ್ವವನ್ನು ಬಚ್ಚಿಟ್ಟು, ವ್ಯಾವಹಾರಿಕ (ಸುಳ್ಳು) ಯೋಗಬುದ್ಧಿಯನ್ನು ಆಶ್ರಯಿಸಿ ಯುದ್ಧವು ಅಧರ್ಮಕರವಲ್ಲವೆಂದು ಹೇಳಿದ್ದರೆ ಸಾಕಾಗಿತ್ತು. ಕರ್ಮಸಂನ್ಯಾಸವನ್ನು ಬೋಧಿಸುವ ಅವರ ಸಾಂಖ್ಯೋಪದೇಶವು ಅವರ ರೀತಿಯಿಂದಲೇ ಅಕಾಂಡತಾಂಡವದಂತೆ ವಿರುದ್ಧಪ್ರಕ್ರಿಯೆಯೇ ಆಗಿರುವುದು.

ಇದೂ ಅಲ್ಲದೆ ಸಾಂಖ್ಯವನ್ನು ಅತಿ ಸ್ವಲ್ಪವಾಗಿ ದ್ವಿತೀಯಾಧ್ಯಾಯದ ಈ ಇಪ್ಪತ್ತು ಮೂವತ್ತು ಶ್ಲೋಕಗಳಲ್ಲಿ ಮಾತ್ರವೇ ಶ್ರೀಕೃಷ್ಣನು ಹೇಳಿರುವ ನೆಂದು ಹೇಳುವುದೂ ಅತ್ಯಂತ ಅಬದ್ಧೋಕ್ತಿಯು. ಪಂಚಮಾಧ್ಯಾಯದಲ್ಲಿ, ಷಷ್ಠಾಧ್ಯಾಯದಲ್ಲಿ, ಸಪ್ತಮಾಧ್ಯಾಯವೇ ಮೊದಲುಗೊಂಡು ಯಾವತ್ತೂ ದ್ವಿತೀಯ ಷಟ್ಕದಲ್ಲಿ, ಅದರಲ್ಲಿಯೂ ಮುಖ್ಯವಾಗಿ ದಶಮಏಕಾದಶಾಧ್ಯಾಯಗಳಲ್ಲಿ, ಸಮಗ್ರ ತ್ರಯೋದಶಾಧ್ಯಾಯ ಪಂಚದಶಾಧ್ಯಾಯಗಳಲ್ಲಿ ಮತ್ತು ಸಪ್ತದಶ ಮತ್ತು ಅಷ್ಟಾದಶ ಅಧ್ಯಾಯದ ಅನೇಕ ಶ್ಲೋಕಗಳಲ್ಲಿ ಪರಮಾತ್ಮ ಸ್ವರೂಪೋಪದೇಶರೂಪವಾದ ಸಾಂಖ್ಯತತ್ತ್ವವನ್ನು ಶ್ರೀಕೃಷ್ಣನು ವಿವರಿಸಿರುತ್ತಾನೆ. ಇತರ ಅಧ್ಯಾಯಗಳಲ್ಲಿಯೂ ಪ್ರಕೃತಿ ಪುರುಷವಿವೇಕಕ್ಕೆ ಬೇಕಾಗುವ ಗುಣತ್ರಯ ವಿಭಾಗವೇ ಮುಂತಾದ ಬಹು ಸಾಂಖ್ಯೋಪಯೋಗಿಯಾದ ಅಮೌಲ್ಯ ವಿಷಯಗಳನ್ನೇ ಶ್ರೀಕೃಷ್ಣನು ಹೇಳಿರುವನು. ಕರ್ಮಯೋಗವನ್ನು ಶ್ರೀಕೃಷ್ಣನು ಮೂರುನಾಲ್ಕು ಅಧ್ಯಾಯಗಳಲ್ಲಿಯೂ, ಬ್ರಹ್ಮಸ್ವರೂಪವನ್ನು ಅಲ್ಲಲ್ಲಿ ಸಮಗ್ರ ಹದಿನೆಂಟು ಅಧ್ಯಾಯಗಳಲ್ಲಿಯೂ ವಿಶೇಷವಾಗಿಯೇ ಉಪದೇಶ ಮಾಡಿರುತ್ತಾನೆ. ಹೀಗಿರುವುದರಿಂದ ಶ್ರೀಕೃಷ್ಣನ ಸಾಂಖ್ಯೋಪದೇಶವು ಧರ್ಮ ಸಂದೇಹಪರಿಹಾರಕ್ಕಾಗಿ ಅವಶ್ಯ ಆಕ್ಷಿಪ್ತವಾದ, ಧರ್ಮಾನುಷ್ಠಾನಕ್ಕೆ ಉಪೋದ್ಬಲಕವಾದ, ವೀರ್ಯವರ್ಧಕವಾದ, ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮೈಕ್ಯಕ್ಕಿಂತ ಭಿನ್ನವಾದ, ಮತ್ತು ಅದ್ವೈತವಿರೋಧಿಯಾದ ತತ್ತ್ವವೆಂದೂ, ಅತಏವ ಗೀತೆಯಲ್ಲಿ ಪ್ರವೇಶಾರ್ಹವೆಂದೂ ನಿಶ್ಚಿತವಾಗುವುದು. ಐಕ್ಯೋಪದೇಶವೂ, ಸರ್ವಕರ್ಮಸಂನ್ಯಾಸವಾದವೂ, ಮಂತ್ರಪೂತವಾದ ಯಜ್ಞಶಾಲೆಯಲ್ಲಿ ಪಿಶಾಚಿಯ ಪ್ರವೇಶದಂತೆ ಅನುಚಿತವೂ ಅಶಕ್ಯವೂ ಆಗಿರುವುದು.

# 10. ಹತ್ತನೆಯ ಅಂಶವು.

## ದ್ವೈತಮತಾನುಸಾರಿಯಾದ ಸಾಂಖ್ಯೋಪದೇಶದ ಔಚಿತ್ಯವು.

## ಅರ್ಜುನನ ಶೋಕಕಾರಣಗಳು.

1. **ಪ್ರಶ್ನೆ**—ಸ್ವಾಮಿ! ಅದ್ವೈತರೀತಿಯಿಂದ ಪ್ರತಿಪಾದಿತವಾದ ಸಾಂಖ್ಯಕ್ಕೆ ಗೀತೆಯಲ್ಲಿ ಪ್ರವೇಶವು ಅಸಾಧ್ಯವೆಂದೂ ದ್ವೈತರೀತಿಯಿಂದ ಉಪಪಾದಿತ ಸಾಂಖ್ಯೋಪದೇಶಕ್ಕೆ ಪ್ರಾಪ್ತಿಯು ಇರುವುದರಿಂದ ಅದರ ಉಪದೇಶವು ಸಂಗತವೆಂದೂ ನಿಷ್ಕೃಷ್ಟವಾಯಿತು. ಅರ್ಜುನನ ವಿಷಾದ ಕಾರಣಗಳನ್ನು ನಿರೂಪಿಸಿ ಶ್ರೀಕೃಷ್ಣನ ಸಾಂಖ್ಯೋಪದೇಶವು ಅವನ ಪ್ರಶ್ನೆಗಳಿಗೆ ಉತ್ತರರೂಪವಾಗಿರುವುದೆಂದು ತೋರಿಸಿದರೆ ಇದು ನಮಗೆ ವಿಶದವಾಗುವುದು. ಆದುದರಿಂದ ದಯಮಾಡಿ ಅರ್ಜುನನ ವಿಷಾದಕ್ಕೆ ಅಂತರಂಗ ಕಾರಣಗಳನ್ನು ನಿರೂಪಿಸಬೇಕು.

**ಉತ್ತರ—ಶ್ರೀಶ್ರೀಗಳವರು**—ಅರ್ಜುನನ ವಾಕ್ಯಗಳ ಪರಾಮರ್ಶದಿಂದಲೇ ಇದನ್ನು ನಿರ್ಣಯಮಾಡಿ ತೋರಿಸುವೆವು. ಇವು ಅರ್ಜುನನ ವಿಷಾದ ವಿವರಣಪರವಾದ ಶ್ಲೋಕಗಳು :—

(1) **ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ।**
**ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ॥**
**ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ।**
**ಗಾಂಡೀವಂ ಸ್ರಂಸತೇ ಹಸ್ತಾತ್ತ್ವಕ್ಚೈವ ಪರಿದಹ್ಯತೇ ॥**
**ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ ॥**
(1. 28-30.)

ಎಲೈ ಕೃಷ್ಣನೇ (ಪೂರ್ಣಾನಂದನೇ! ಜಗತ್ಕರ್ಷಕನೇ!) ಯುದ್ಧಾರ್ಥಿಗಳಾಗಿ ಸ್ಥಿತರಾಗಿರುವ ಈ ಬಂಧುಜನರನ್ನು ನೋಡಿ ನನ್ನ ಹಸ್ತಪಾದಾದ್ಯವಯವಗಳು ಪರಿತಪಿಸುತ್ತವೆ. ನನ್ನ ಮುಖವು ಬಾಡುತ್ತಿದೆ. ನನ್ನ ಶರೀರದಲ್ಲಿ ಕಂಪವೂ, ರೋಮಾಂಚನವೂ ಹುಟ್ಟುತ್ತಿದೆ. ಹಸ್ತದಿಂದ ಗಾಂಡೀವ ಧನುಸ್ಸು ಜಾರಿಬೀಳುತ್ತದೆ. ನನ್ನ ಚರ್ಮವೇ ಸರ್ವತ್ರ ಸುಡುತ್ತಿದೆ. ನಾನು ನಿಶ್ಚಲನಾಗಿ ಕುಳಿತುಕೊಳ್ಳುವುದಕ್ಕೇ ಸಮರ್ಥನಲ್ಲ. ನನ್ನ ಮನಸ್ಸು ಭ್ರಮಣ ಹೊಂದಿದೆಯೋ ಎಂಬಂತೆ ಅಸ್ವಸ್ಥವಾಗಿರುತ್ತದೆ.

(2) ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥

ಸಂಜಯ ಉವಾಚ—

ಏವಮುಕ್ತ್ವಾರ್ಜುನಸ್ಸಂಖ್ಯೇ ರಥೋಪಸ್ಥ ಉಪಾವಿಶತ್।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥

ಶತ್ರುಗಳಿಂದ ತಾಡಿತನಾದರೂ ಅವರಿಗೆ ಪ್ರತೀಕಾರಮಾಡದಿರುವವನಾಗಿ ಆಯುಧಗಳನ್ನು ತ್ಯಾಗಮಾಡಿ ಸುಮ್ಮನಿರುವ ನನ್ನನ್ನು ಶಸ್ತ್ರಪಾಣಿಗಳಾದ ಧೃತರಾಷ್ಟ್ರಪುತ್ರರು ರಣದಲ್ಲಿ ಸಂಹಾರಮಾಡಿದರೂ ಅದು ನನಗೆ ಅತ್ಯಂತ ಕ್ಷೇಮಕರವೇ ಆಗಿರುವುದು. ಸಂಜಯನು ಹೇಳುತ್ತಾನೆ:—
ಈ ಪ್ರಕಾರ ಅರ್ಜುನನು ಮಾತಾಡಿ, ಬಾಣಸಹಿತವಾದ ಧನುಸ್ಸನ್ನು ತ್ಯಾಗಮಾಡಿ, ಶೋಕಕಂಪಿತವಾದ ಮನಸ್ಸುಳ್ಳವನಾಗಿ, ಯುದ್ಧರಂಗದಲ್ಲಿ ರಥಮಧ್ಯಪ್ರದೇಶದಲ್ಲಿ ಕುಳಿತನು.

ಪುನಃ ಶ್ರೀಕೃಷ್ಣನ ಮುಂದವಾದ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳಿ ದುಸ್ಸಹವಾದ ವಿಷಾದದಿಂದ ತೂಷ್ಣೀಂಭಾವವನ್ನು ಹೊಂದಿರುತ್ತಾನೆ:—

(3) ಸಂಜಯ ಉವಾಚ:—

ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ।
ವಿಷೀದಂತಮಿದಂ ವಾಕ್ಯಮುವಾಚ ಮಧುಸೂಧನಃ ॥

ಶ್ರೀಭಗವಾನುವಾಚ:—

ಕುತಸ್ತ್ವಾಕಶ್ಮಲಮಿದಂ ವಿಷಮೇ ಸಮುಪಸ್ಥಿತಂ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥
ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥

ಅರ್ಜುನ ಉವಾಚ:—

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ
ದ್ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಂ।

**ಅವಾಪ್ಯ ಭೂಮಾವಸಪತ್ನಮೃದ್ಧಂ**
**ರಾಜ್ಯಂ ಸುರಾಣಾಮಪಿ ಚಾಧಿಪತ್ಯಂ ॥**

**ಸಂಜಯ ಉವಾಚ:—**

**ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ।**
**ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವ ಹ ॥**
—(2. 1-4. 8-9.)

**ಅರ್ಥವು:**—"ಸಂಜಯನು ಹೇಳುತ್ತಾನೆ:—ಈರೀತಿಯಾಗಿ ಕೃಪಾಯುಕ್ತನೂ, ಶೋಕಜನ್ಯಜಲಪೂರ್ಣವಾದ ವ್ಯಾಕುಲಿತ ನೇತ್ರವುಳ್ಳವನೂ ಆಗಿ ವಿಷಾದಪಡುವ ಅರ್ಜುನನನ್ನು ಕುರಿತು ಮಧುಸೂದನನು ಈ ಮಾತನ್ನು ಆಡಿದನು. ಭಗವಂತನು ಹೇಳುತ್ತಾನೆ:—ಎಲೈ ಅರ್ಜುನನೇ! ವಿಷಮಕಾಲದಲ್ಲಿ (ಅಕಾಲದಲ್ಲಿ, ವಿಷಾದಕ್ಕೆ ಯೋಗ್ಯವಲ್ಲದ ಕಾಲದಲ್ಲಿ) ಈ ವಿಷಾದವು ನಿನಗೇನು ಕಾರಣವುಂಟಾಯಿತು? ಇದು ಆರ್ಯರಿಂದ ಸೇವಿತವಲ್ಲ. ಸ್ವರ್ಗಪ್ರಾಪ್ತಿಗೆ ವಿರೋಧಿಯು ಮತ್ತು ಅಪಕೀರ್ತಿಕರವಾದುದು. ಎಲೈ ಪಾರ್ಥನೇ! ನೀನು ದೈನ್ಯವನ್ನು ಹೊಂದಬೇಡ. ಇದು ನಿನಗೆ ಯೋಗ್ಯವಲ್ಲ. ಎಲೈ ಪರಂತಪನೇ! ಲಾಘವಕರವಾದ ಮನೋದೌರ್ಬಲ್ಯವನ್ನು ಬಿಟ್ಟು ಯುದ್ಧಸನ್ನದ್ಧನಾಗು. ಅರ್ಜುನನು ಹೇಳುತ್ತಾನೆ:—

ಶತ್ರುರಹಿತವಾದ ಸಮಗ್ರ ರಾಜ್ಯವನ್ನೂ ಅಥವಾ ದೇವತಾಧಿಪತ್ಯವನ್ನೇ ಹೊಂದಿದರೂ ಕೂಡ ಇಂದ್ರಿಯಗಳಿಗೆ ಅತ್ಯಂತ ಶೋಷಕವಾದ ಈ ಶೋಕವನ್ನು ಯಾವುದು ಪರಿಹರಿಸುವುದೋ ಅಂತಹ ಉಪಾಯವನ್ನು ಕಾಣೆನು. ಸಂಜಯನು ಹೇಳುತ್ತಾನೆ:—ಹೃಷೀಕೇಶನನ್ನು ಕುರಿತು ಜಿತನಿದ್ರನೂ, ಪರಂತಪನೂ ಆದ ಅರ್ಜುನನು ಈ ಪ್ರಕಾರ ಮಾತಾಡಿ, ನಾನು ಯುದ್ಧಮಾಡುವುದಿಲ್ಲವೆಂದು ಗೋವಿಂದನಿಗೆ ಹೇಳಿ ಮೌನವನ್ನು ಧರಿಸಿದನು. ಆಶ್ಚರ್ಯವು!" **ಇದು ದುರಭಿಮಾನದ ಫಲವು.**

**2.** ಈ ಪ್ರಕಾರವಾದ ಮಹಾವಿಷಾದಕ್ಕೆ ಅಂತರಂಗಕಾರಣಗಳನ್ನು ಅರ್ಜುನನೇ ಹೇಳಿರುತ್ತಾನೆ. ಆದರೆ ಇಲ್ಲಿಯೂ ಕೂಡ ಅದ್ವೈತಮತದ ರೀತಿ

ಯಿಂದ ಅರ್ಜುನನಿಗೆ ವಿಷಾದೋತ್ಪತ್ತಿಗೆ ಅವಕಾಶವೇ ಇರುವುದಿಲ್ಲ. ಅರ್ಜುನನು ಚೇತನನು ಅದ್ವೈತಮತದರೀತ್ಯಾ ಹಿಂದೂ ಬ್ರಹ್ಮನಾಗಿದ್ದನು, ವಿಷಾದಕಾಲದಲ್ಲಿಯೂ ಬ್ರಹ್ಮನು, ಮುಂದೂ ಬ್ರಹ್ಮನು. ಇಂಥಾ ನಿತ್ಯೈಕಸ್ವರೂಪನಾದ ಬ್ರಹ್ಮನು ಅಳುವುದಕ್ಕೆ ಕಾರಣವೇನು?

ಅಂಧಕಾರದಂತಿರುವ ಅವಿದ್ಯಾಸಂಬಂಧದಿಂದ ಆವೃತನಾಗಿ ಬ್ರಹ್ಮನು ಜೀವಭಾವವನ್ನು ಹೊಂದಿ ವಿಷಾದಾದಿ ತಾಮಸ ಧರ್ಮಗಳಿಗೆ ವಶನಾದನೆಂದು ಹೇಳಲಾಗುವುದಿಲ್ಲ. ಸೂರ್ಯನಂತೆ ನಿತ್ಯಜ್ಞಪ್ತಿ ಸ್ವರೂಪನಾದ, **"ಅಸಂಗೋ ಹ್ಯಯಂಪುರುಷಃ"** ಎಂಬ ಶ್ರುತಿವ್ಯಾಖ್ಯಾನದಲ್ಲಿ ಬ್ರಹ್ಮನು ಅವಿದ್ಯಾದಿ ಸರ್ವಸಂಬಂಧರಹಿತನೆಂದು ಅದ್ವೈತಿಗಳಿಂದಲೇ ಅಂಗೀಕೃತನಾದ ಚಿನ್ಮಾತ್ರನಿರ್ಗುಣ ಬ್ರಹ್ಮನು ಅವಿದ್ಯೆಯಿಂದ ಆವೃತನಾಗಿ ವಿಷಾದಾದಿಗಳನ್ನು ಹೊಂದುವುದೂ ದುರ್ಘಟವೇ. ಅಂಧಕಾರವು ಸೂರ್ಯನನ್ನು ಆವರಿಸಲಾರದು; ಆದರೆ ಪ್ರಬಲವಾದ ವರ್ಷಾಕಾಲದ ನೀಲಮೇಘವು ಸೂರ್ಯತೇಜಸ್ಸನ್ನೂ ತಿರೋಹಿತವನ್ನಾಗಿ ಮಾಡುವುದು; ಹೀಗೆ ಅವಿದ್ಯೆಯೆಂಬ ಮೋಡದಿಂದ ತಿರಸ್ಕೃತವಾದ ಜ್ಞಾನಸ್ವರೂಪನಾದ ಬ್ರಹ್ಮನು ಜೀವಭಾವವನ್ನು ಹೊಂದಿ ವಿಷಾದವನ್ನು ಹೊಂದಿದನು ಎಂದು ಕೂಡ ಹೇಳಲಾಗುವುದಿಲ್ಲ. ನಿರ್ಧರ್ಮಕನಾದ ಸರ್ವಸಂಗರಹಿತನಾದ ಚಿನ್ಮಾತ್ರಬ್ರಹ್ಮನಿಗೆ "ಆವ್ರಿಯಮಾಣತ್ವ" ಎಂದರೆ ಅವಿದ್ಯೆಯಿಂದ ಆವರಿಸಲ್ಪಡೋಣವೆಂಬ ಗುಣವೇ ಇರುವುದಿಲ್ಲ.

ಪರಂತು ಅವಿದ್ಯೆಯೆಂಬ ಒಂದು ಪದಾರ್ಥವು ಸತ್ಯವಾಗಿ ಇದ್ದರಷ್ಟೇ ಬ್ರಹ್ಮನನ್ನು ಆವರಿಸಿ ಜೀವಭಾವವನ್ನು ಹೊಂದಿಸಿ ವಿಷಾದಾದಿಗಳನ್ನು ಉಂಟುಮಾಡುವುದು! ಅದ್ವೈತಮತದಲ್ಲಿ ಅವಿದ್ಯೆಯೂ ಮಿಥ್ಯಾ ಎಂದರೆ ಹಿಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೂ ಇರುವುದಿಲ್ಲ. ಇಂಥಾ ತ್ರಿಕಾಲದಲ್ಲಿಯೂ ಅವಿದ್ಯಮಾನವಾದ ಪದಾರ್ಥವು ಬ್ರಹ್ಮನನ್ನು ಆವರಿಸಿ ಜೀವಭಾವವನ್ನು ಹೊಂದಿಸಿ ಶೋಕಾದಿಗಳನ್ನು ಕಲ್ಪಿಸುವುದೆಂದು ಹೇಳುವುದು ಬಹು ಅನ್ಯಾಯವಾದ ಪ್ರಕ್ರಿಯೆಯು. ಆದುದರಿಂದ ಅದ್ವೈತಮತದಲ್ಲಿ ಜೀವಭಾವಗಳೂ, ಭ್ರಮವೂ, ವಿಷಾದಾದಿಗಳೂ, ಸಮಾಧಾನಗಳೂ ಕೂಡ ಸುಳ್ಳಿಂದೇ ಹೇಳ

ಬೇಕು. ಹಾಗೆಯೇ ಅದ್ವೈತಿಗಳೂ ಹೇಳಿಬಿಟ್ಟಿರುತ್ತಾರೆ.* ಇದು ಅದ್ವೈತ ಗ್ರಂಥವಾದ ಯೋಗವಾಸಿಷ್ಠದ ಶ್ಲೋಕವು:—

**ಯದಿದಂ ದೃಶ್ಯತೇಕಿಂಚಿತ್ತನ್ನಾಸ್ತಿ ಕಿಮಪಿಧ್ರುವಂ ।**
**ಯಥಾ ಗಂಧರ್ವನಗರಂ ಯಥಾ ವಾರಿ ಮರುಸ್ಥಳೇ ॥**

**ಅರ್ಥ—** ಏನೇನು ಜ್ಞಾನಕ್ಕೆ ವಿಷಯವಾಗುತ್ತದೆಯೋ ಅದೆಲ್ಲಾ ನಿಜವಾಗಿ ಇಲ್ಲವೇ ಇಲ್ಲ. ಗಂಧರ್ವನಗರದಂತೆ ಅಥವಾ ಮರುಭೂಮಿಯಲ್ಲಿ ಕಾಣುವ ಜಲದಂತೆ ಅವುಗಳು ಅಸತ್ಯವಾದುವುಗಳು.

---

* ನ ಭ್ರಮೋನಾಮಕಶ್ಚಿನ್ನಚಸಂಸಾರೋನಾಮ; ನ ಬಂಧೋ ನ ವೈಮುಮುಕ್ಷುರಿತ್ಯೇಷಾ ಪರಮಾರ್ಥತಾ ಇತ್ಯಾದಿ ಅದ್ವೈತಿಗಳ ವಾಕ್ಯಗಳು ಬಂಧ, ಮೋಕ್ಷ, ಭ್ರಮಾದಿಗಳು ಒಂದೂ ಇಲ್ಲವೇ ಇಲ್ಲವೆಂದು ಹೇಳುತ್ತವೆ. ಇದು ಅದ್ವೈತಮತದ ನ್ಯಾಯವಾದ ಫಲಿತಸ್ಥಿತಿಯು. ಆದರೆ ಅದ್ವೈತಿಗಳು ಯಾವಾಗಲೂ ಹೀಗೆಯೇ ಉತ್ತರವನ್ನು ಹೇಳುವಷ್ಟು ಶಾಂತಚಿತ್ತರಾಗಿರುವುದಿಲ್ಲ. **ಜಗತ್ತೂ ಇರುವುದು.** ಅದಕ್ಕೇನಾದರೂ ಒಂದು ಗತಿಯನ್ನು ಕಲ್ಪಿಸಬೇಕೆಂದು ಯೋಚಿಸಿ ಅವಿದ್ಯೆಯಿಂದ ಬ್ರಹ್ಮನೇ ಆವೃತನಾಗಿ ನಾನಾ ಪ್ರಪಂಚಾಕಾರನಾಗಿ ತೋರುವನು ಎಂದು ಹೇಳುವರು. ಆದರೆ ಇದು ಅಸಂಗತವಾದ ವಾದವು. ಬ್ರಹ್ಮನು ಒಬ್ಬನೇ ಇರುವನು ಎಂದು ಹೇಳಿ ಅವಿದ್ಯೆಯನ್ನು ಮಧ್ಯೇ ಶಾಸ್ತ್ರದಲ್ಲಿ ಪ್ರವೇಶಿಸುವುದು ಅನುಚಿತವು. ಘಾಟೆನಾಮಕ ಸುಪ್ರಸಿದ್ಧ ಪಂಡಿತನು ಅದನ್ನೇ ಕೇಳುತ್ತಾನೆ:—

**"But whence comes this Avidya, this primeval cause of ignorance, sin and misery? No satisfactory answer has been given to this question; or rather the qnestion itself must be regarded as inadmissible." —V. S. Ghate, M. A., Doctor of the University of Paris.**

**ಅರ್ಥ:—** ಆದರೆ ಅದ್ವೈತಮತದಲ್ಲಿ ಅಜ್ಞಾನ, ಪಾಪ, ದುಃಖಗಳಿಗೆ ಮೂಲಕಾರಣವಾದ ಈ ಅವಿದ್ಯೆಯು ಎಲ್ಲಿಂದ ಬಂತು? (ಬ್ರಹ್ಮನು ಒಬ್ಬನೇ ಇರುವನು ತದತಿರಿಕ್ತವಾಗಿ ಯಾವುದೂ ಇಲ್ಲ ಎಂದು ಹೇಳುವ ತತ್ವದಲ್ಲಿ ಇದನ್ನು ಒಪ್ಪುವುದು ಹೇಗೆ ಎಂದು ಭಾವವು.) ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವು ಅದ್ವೈತಿಗಳಿಂದ ಕೊಡಲ್ಪಟ್ಟಿಲ್ಲ. ಅಥವಾ ಈ ಪ್ರಶ್ನೆಯೇ ಅನುಚಿತವೆಂದು ಭಾವಿಸಲ್ಪಡುತ್ತದೆ.

ಸುಪ್ರಸಿದ್ಧ ಪಂಡಿತನಾದ ಪಾಲ್‌ಡಾಸೆರ್ ನಾಮಕಗ್ರಂಥಕರ್ತನೂ ಈ ದೂಷಣವನ್ನೇ ತೋರಿಸಿರುವನು :—

"In reality there is nothing else besides Brahman alone. If we imagine that we perceive a transformation (vikara) of him into the world, a division (bheda) of him into a plurality of individuals, this depends on avidya. But how does this happen? How do we manage to deceive ourselves into seeing a transformation and a plurality, where in reality Brahman alone is? On this question our authors give no information."

—Paul Deussen. (p. 302.)

**ಅರ್ಥ**:— "ನಿಜವಾಗಿ ಅದ್ವೈತಮತದಲ್ಲಿ ಬ್ರಹ್ಮಾತಿರಿಕ್ತವಾಗಿ ಒಂದೂ ಇಲ್ಲ. ಬ್ರಹ್ಮನೇ ನಾನಾ ವಿಕಾರಗಳನ್ನು ಹೊಂದಿ ನಾನಾ ಭೇದಗಳನ್ನೂ ನಾನಾ ಜೀವಭಾವಗಳನ್ನೂ ಹೊಂದುವನೆಂದು ನಾವು ತಿಳಿಯುವುದಾದರೆ ಅದು ಅವಿದ್ಯಾ ಮೂಲಕವು. ಆದರೆ ಇದು ಹೇಗೆ ಸಾಧ್ಯವಾಗುವುದು? ಒಂದೇ ಬ್ರಹ್ಮನು ಇರುವುದಾದರೆ ನಾನಾ ವಿಕಾರಗಳನ್ನೂ ಭೇದಗಳನ್ನೂ ತಿಳಿಯುವ ಭ್ರಮವು ಬರುವುದು ಹೇಗೆ? ಈ ಪ್ರಶ್ನೆಗೆ ನಮ್ಮ ಗ್ರಂಥಕಾರರು (ಅದ್ವೈತಿಗಳು) ಯಾವ ಉತ್ತರವನ್ನೂ ಕೊಡುವುದಿಲ್ಲ.

ತತ್ವವಿಚಾರದಲ್ಲಿ ಅತಿನಿಪುಣರಾದ ರಾಧಾಕೃಷ್ಣರೂ ಇದೇ ದೋಷವನ್ನು ತಾವು ನಿರೂಪಿಸಿ ಅದ್ವೈತಿಗಳು ಉತ್ತರಕೊಡದೇ ಇರುವುದರಲ್ಲಿ ಕಾರಣವನ್ನೂ ನಿರೂಪಿಸಿರುತ್ತಾರೆ:—

But how avidya and Brahman can coexist is just the problem for which we do not have any solution .................... They ("our authors" vide above Deussen's remarks) give us no information simply because "no information is possible."

—S. Radhakrishnan, M. A. D.Litt.

**ಅರ್ಥ**—ಅವಿದ್ಯೆಯೂ ಬ್ರಹ್ಮನೂ ಒಟ್ಟಿಗೆ ಇರುವುದು ಹೇಗೆ ಎಂಬ ಪ್ರಶ್ನೆಗೆ ಅದ್ವೈತಮತದಲ್ಲಿ ಸಮಾಧಾನವು ಕೊಡಲ್ಪಟ್ಟಿರುವುದಿಲ್ಲ. "ನಮ್ಮ ಗ್ರಂಥಕರ್ತರು" ಯಾವ ಉತ್ತರವನ್ನೂ ಕೊಡಲಿಲ್ಲ; ಯಾತಕ್ಕಂದರೆ ಯಾವ ಉತ್ತರವನ್ನು ಕೊಡಲೂ ಸಾಧ್ಯವಿಲ್ಲ.

ಇವು ಮ್ಯಾಕ್ಸಮುಲ್ಲರ್ ನಾಮಕ ಗ್ರಂಥಕರ್ತನ ಮಾತುಗಳು :—

"The Primeval Avidya is left unexplained. It is not to be accounted for as little as Brahman can be accounted for."

—F. Max Muller, K. M.

**ಅರ್ಥ**—ಅದ್ವೈತ ಮತದಲ್ಲಿ ಮೂಲಾವಿದ್ಯೆಯು ಉಪಪಾದನೆಯಿಲ್ಲದೆ ಹಾಗೆಯೇ ಬಿಡಲ್ಪಟ್ಟಿದೆ. ನಿರ್ಗುಣಬ್ರಹ್ಮವಿಷಯದಲ್ಲಿ ಹೇಗೆ ಯಾವುದನ್ನೂ ನಿರೂಪಿಸುವುದಕ್ಕೂ ಶಕ್ಯವಲ್ಲವೋ, ಹಾಗೆಯೇ ಅದ್ವೈತಮತದಲ್ಲಿ ಅವಿದ್ಯೆಯ ವಿಷಯಧಲ್ಲಿಯೂ ಯಾವ ನಿರೂಪಣೆಯನ್ನೂ ಮಾಡುವುದಕ್ಕಾಗುವುದಿಲ್ಲ.

'ಮಾಯಾ' ಅಥವಾ 'ಅವಿದ್ಯಾ' ವಾದವು ರಬೀಂದ್ರನಾಥಠಾಕೂರರವರಿಗೂ ಸಮಂಜಸವಾಗಿ ಕಾಣುವುದಿಲ್ಲ :—

"The word Maya is a mere name; it is no explanation."

—Rabhindranath Tagore.

**ಅರ್ಥ** :— ಮಾಯಾ ಎಂಬುದು ಒಂದು ಹೆಸರೇ ಹೊರತು ತತ್ವವಿಷಯಕ ಪ್ರಶ್ನೆಗೆ ಉತ್ತರವಾಗುವುದಿಲ್ಲ.

ಪ್ರೊಫೆಸರ್ ಮಾಲ್ಕಾನಿ ಎಂಬ ವಿದ್ವಾಂಸನಿಗೂ ಇದೇ ಅಭಿಪ್ರಾಯವು :—

"The theory of Maya (or Avidya) is conceived in the spirit of an ultimate explanation of things. It is not an explanation in the ordinary sense. For it expresses nothing. The why and the wherefore of the world remain as unanswerable as ever."

"A consistent non-dualist thinker will refuse, therefore, to admit any illusory appearance. For him, there is only one reality, the self, and what we call the world simply does not exist in it or outside it. The doctrine of illusory appearance or Maya is necessitated by the less consistent thinker pressing for a place in reality of something admitted to be different from it in nature.

—Prof. G. R. Malkani, M. A.

**ಅರ್ಥವು :—** ಮಾಯಾವಾದವು ತತ್ವವಿಷಯಕ ಪ್ರಶ್ನೆಗಳಿಗೆ ಉತ್ತರರೂಪವಾಗಿ ಅದ್ವೈತಿಗಳಿಂದ ಕಲ್ಪಿಸಲ್ಪಟ್ಟಿದೆ. ಆದರೆ ಅದು ಲೋಕರೀತಿಯಿಂದ ಉತ್ತರವಾಗಲಾರದು. ಯಾತಕ್ಕೆಂದರೆ ಅದು ಯಾವ ಪ್ರಶ್ನೆಗೂ ಉತ್ತರರೂಪವಾದ ನಿರೂಪಣವಲ್ಲ. ಒಬ್ಬನೇ ಬ್ರಹ್ಮನು ಇರುವಾಗ ಜಗತ್ತು ಯಾತಕ್ಕೆ ಬಂತು? ಎಲ್ಲಿಂದಬಂತು? ಎಂಬ ಪ್ರಶ್ನೆಗಳಿಗೆ ಮೊದಲಿನಂತೆ ಯಾವ ಸಮಾಧಾನವನ್ನು ಹೇಳುವುದಕ್ಕೂ ಆಗದಂತೆ ಉಳಿದುಹೋಗುವುದು.

ಪ್ರೊಫೆಸರ್ ಉರ್ಕುಹಾರ್ಟನೂ ಹಾಗೆಯೇ ಹೇಳುತ್ತಾನೆ:—

**"It (Maya) is something which cannot obviously be connected with the one great Being."**

**—W. S. Urquhart, M. A., D. Litt.**

**ಅರ್ಥ :—** ಬ್ರಹ್ಮನು ಒಬ್ಬನೇ ಸತ್ಯನೆಂದು ಒಪ್ಪಿದಮೇಲೆ ಈ ತತ್ವದಲ್ಲಿ ಅವನಿಗೆ ಮಾಯಾಸಂಬಂಧವನ್ನು ಯಾವರೀತಿಯಿಂದಲೂ ಯೋಜನೆಮಾಡುವುದಕ್ಕೆ ಆಗುವುದಿಲ್ಲ.

ಡಾಕ್ಟರ್ ಮಹೇಂದ್ರನಾಥ ಸರ್ಕಾರನೂ ಹೀಗೆಯೇ ಬರೆದಿರುತ್ತಾನೆ:—

**It (Nescience) has no raison d'etre in the Absolute.......... To Sankara the Absolute is the abstract identity........Sankara can find no room for the details of experience.**

**Prof. Mahendranath Sircar, M. A., Ph.D.**

**ಅರ್ಥ :—** ಅವಿದ್ಯೆಯು ಅದ್ವೈತಾತ್ಮನಲ್ಲಿ ಹೇಗೆ ಇರುವುದೆಂದು ನಿರೂಪಿಸುವುದಕ್ಕೆ ಶಕ್ಯವಾದ ಸ್ಥಿತಿಯನ್ನು ಹೊಂದಿಲ್ಲ. ಶಂಕರಾಚಾರ್ಯರ ಆತ್ಮನು ಸರ್ವಧರ್ಮನಾಶಕವಾದ ತಾದಾತ್ಮ್ಯವು. ಅಂಥಾ ಆತ್ಮವಾದದಲ್ಲಿ ಶಂಕರಾಚಾರ್ಯರು ನಮ್ಮ ವ್ಯವಹಾರಗೋಚರವಾದ ಪ್ರಪಂಚವಿಸ್ತೃತಿಗೆ ಸ್ಥಳವನ್ನು ಕೊಡಲಾರರು. (ಪ್ರಪಂಚವು ಹೇಗೆ ಬಂತೆಂಬ ಪ್ರಶ್ನೆಗೆ ಉತ್ತರವನ್ನು ಕೊಡಲಾರರೆಂದು ಭಾವವು.)

ವಾರ್ಮ್ಯಾನನು ಮಾಯಾವಾದವನ್ನು ಕ್ರೋಧಪೂರ್ವಕವಾಗಿ ನಿಂದಿಸಿರುತ್ತಾನೆ:—

**His (The Adwaitin's) Maya is inexplicable. It is the argument of one in darkness himself. This new vedantic theory has done and is doing more harm to the world than any other religious theory. It is a worse delusion than the delusion of Maya.** **—E. B. Warman, M. A.**

ಪ್ರಕೃತದಲ್ಲಿಯೂ ಅರ್ಜುನನು ವಿಷಾದಪಡಲೇ ಇಲ್ಲ. ಶ್ರೀಕೃಷ್ಣನು ಗೀತೆಯನ್ನು ಉಪದೇಶ ಮಾಡಲೇ ಇಲ್ಲ. ಶಂಕರಾಚಾರ್ಯರು ಗೀತಾಭಾಷ್ಯವನ್ನು ರಚಿಸಲೇ ಇಲ್ಲ ಎಂದು ಪ್ರಾಪ್ತವಾಯಿತು. ಈ ಅಭಿಪ್ರಾಯಗಳ ಪ್ರಮಾಣವಿರುದ್ಧತೆಯನ್ನು ಕುರುಬರೂ ತಿಳಿಯಬಹುದು.

ದ್ವೈತಮತದಲ್ಲಿ ಅಲ್ಪಜ್ಞಾನಾತ್ಮಕನಾದ ಅರ್ಜುನಜೀವನು ಮೋಡದಂತೆಯೋ ಅಥವಾ ಬೂದಿಯಂತೆಯೋ ಕವಿದುಕೊಂಡಿರುವ ಪ್ರಾರಬ್ಧಕರ್ಮಗಳಿಂದ ತಿರೋಹಿತವಾದ ತನ್ನ ಸ್ವರೂಪಜ್ಞಾನವುಳ್ಳವನಾಗಿ, ಬಂಧುಸ್ನೇಹವೆಂಬ ದುರಭಿಮಾನಕ್ಕೆ ವಶನಾಗಿ, ಪರಮಸಾತ್ವಿಕವಾದ ವಿಷ್ಣುಪ್ರೀತಿಕರವಾದ ಧರ್ಮಯುದ್ಧವನ್ನು ಅಧರ್ಮಕರವೆಂದು ತಿಳಿದನು ಎಂದು ಹೇಳಬಹುದು. ಈ ವಿಧವಾದ ಶಾಸ್ತ್ರಾರ್ಥನಿಶ್ಚಯವು ಸಕಲ ಪ್ರಮಾಣಗಳಿಗೂ ಅವಿರುದ್ಧವಾಗಿರುವುದೆಂದು ಯುಕ್ತಿಸಿದ್ಧವಾಗಿರುವುದು.

3. **ಪ್ರಶ್ನೆ**—ಸ್ವಾಮಿ! ಅರ್ಜುನನು ವಿಷಾದಹೊಂದಿ ತಾನು ಯುದ್ಧ ಮಾಡದೇ ಇರುವುದರಲ್ಲಿ ಎಷ್ಟು ಕಾರಣಗಳನ್ನು ಹೇಳಿರುವನು?

**ಶ್ರೀಶ್ರೀಗಳವರು**—ಬಂಧುಹನನದಿಂದ ಪಾಪವು ಪ್ರಾಪ್ತವಾಗಬಹುದೆಂಬ ಶಂಕೆಯಿಂದಲೂ, ಇಹಲೋಕದಲ್ಲಿ ಬಂಧುವಿಯೋಗದಿಂದ ಸೌಖ್ಯಹಾನಿಯೂ, ದುಃಖಪ್ರಾಪ್ತಿಯೂ ಉಂಟಾಗುವುದೆಂದೂ, ಮತ್ತು ಜಯವು ಸಂದಿಗ್ಧವೆಂದೂ ಮೂರು ಕಾರಣಗಳನ್ನು ವರ್ಣಿಸಿರುತ್ತಾನೆ. ಇದು ಸಾಮಾನ್ಯವಾದ ಪ್ರತಿಜ್ಞಾಶ್ಲೋಕವು:—

(1) **ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।**
**ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ॥**

—(1. 31.)

---

**ಅರ್ಥ**—ಆತನಿಗೆ (ಶಂಕರಾಚಾರ್ಯರಿಗೆ) ಮಾಯೆಯ ವಿಷಯದಲ್ಲಿ ಯಾವ ಸಾಮಾಧಾನಗಳನ್ನು ಹೇಳುವುದಕ್ಕೂ ಶಕ್ಯವಲ್ಲ. ಮಾಯಾಂಗೀಕಾರವು ಭ್ರಾಂತನ ವಾದವೇ ಸರಿ. ಈ ನವೀನ ವೇದಾಂತತತ್ತ್ವವು ಲೋಕದಲ್ಲಿನ ಇತರ ಯಾವ ಮತಕ್ಕಿಂತಲೂ ಜಗತ್ತಿಗೆ ಹೆಚ್ಚು ಕೇಡನ್ನು ಉಂಟುಮಾಡಿರುವುದು ಮತ್ತು ಈಗಲೂ ಮಾಡುತ್ತಿರುವುದು. ಅವಿದ್ಯಾ ಭ್ರಮಕ್ಕಿಂತ ಮಾಯೆಯನ್ನು ಶಾಸ್ತ್ರದಲ್ಲಿ ಉಪಪಾದನೆಮಾಡುವವನ ಭ್ರಮವು ಮತ್ತೂ ನೀಚವಾದುದು.

ಎಲೈ ಬ್ರಹ್ಮರುದ್ರಾದಿಗಳ ಪ್ರವರ್ತಕನಾದ ಸ್ವಾಮಿಯೇ! ದುರ್ನಿಮಿತ್ತಗಳನ್ನು ನೋಡುತ್ತಿದ್ದೇನೆ. ಸ್ವಜನರನ್ನು ಯುದ್ಧದಲ್ಲಿ ಸಂಹರಿಸುವುದರಿಂದ ಶ್ರೇಯಸ್ಸಾಗುವುದಿಲ್ಲ.

ಐಹಿಕಶ್ರೇಯಸ್ಸು ರಾಜ್ಯಾದಿಗಳಿಂದ ಸುಖವು; ಪಾರಲೌಕಿಕಶ್ರೇಯಸ್ಸು ಸ್ವರ್ಗಾದಿಪ್ರಾಪ್ತಿಯು. ಉಭಯವೂ ಆಗಲಾರದೆಂದು ಅರ್ಜುನನು ಕ್ರಮವಾಗಿ ಪ್ರತಿಪಾದಿಸಿರುತ್ತಾನೆ. ಮತ್ತೂ ಮೂರು ವಿಧವಾಗಿ ಪಾಪವು ಪ್ರಾಪ್ತವಾಗುವುದೆಂಬ ಭೀತಿಯನ್ನು ಅರ್ಜುನನ ವಾಕ್ಯಗಳು ವಿಶದಪಡಿಸುತ್ತವೆ:—

**(2) ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಸ್ಸ್ಯಾಜ್ಜನಾರ್ದನ ।**
**ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ॥**
**ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸ್ವಬಾಂಧವಾನ್ ।**
**ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥**
**ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ ।**
**ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಂ ॥**
**ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಂ ।**
**ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥**

—(1. 26-39.)

ಎಲೈ ಜನಾರ್ದನನೇ! (ಜನನಾದಿದೋಷರಹಿತನಾಗಿ ಭಕ್ತರ ಭವಪಾಶನಾಶಕನಾದ ಶ್ರೀಕೃಷ್ಣನೇ!) ಧೃತರಾಷ್ಟ್ರಪುತ್ರರನ್ನು ಸಂಹಾರಮಾಡುವುದರಿಂದ ನಮಗೆ ಏನು ಸುಖವು? (ಇಹಲೋಕದ ಸುಖವಾಗಲೀ ಪಾರತ್ರಿಕ ಸುಖವಾಗಲೀ ಇಲ್ಲವೆಂದು ಭಾವವು.) ಮತ್ತು ನಮಗೆ ಇವರ ವಧೆಯಿಂದ ಪಾಪವೇ ಬರುವುದು. ಯದ್ಯಪಿ ಇವರು ಆತತಾಯಿಗಳೇ. ಆದರೂ ನಮ್ಮಿಂದ ಈ ಧಾರ್ತರಾಷ್ಟ್ರರು ವಧಾರ್ಹರಲ್ಲ. ಎಲೈ ಮಾಧವನೇ! ಸ್ವಜನರನ್ನು ಸಂಹಾರಮಾಡಿ ಸುಖದಿಂದ ಹೇಗೆ ಇರುವುದಕ್ಕಾಗುವುದು? ಯದ್ಯಪಿ ಲೋಭದಿಂದ ತಿರಸ್ಕೃತಬುದ್ಧಿಯುಳ್ಳ ಈ ಕೌರವರು ಕುಲಕ್ಷಯದಿಂದ ಉಂಟಾಗುವ ದೋಷವನ್ನೂ, ಮಿತ್ರದ್ರೋಹದಿಂದ ಪ್ರಾಪ್ತವಾಗುವ ಪಾತಕವನ್ನೂ ತಿಳಿಯಲಾರರು. ಆದರೆ ಎಲೈ ಜನಾರ್ದನನೇ! ಕುಲಕ್ಷಯದಿಂದ ಉಂಟಾಗುವ

ಪ್ತಾಪವನ್ನು ತಿಳಿದ ನಾವು ಈ ಪಾಪಕರ್ಮವು ನಿವರ್ತಿಸಲ್ಪಡತಕ್ಕದ್ದು (ಎಂದರೆ ಅನುಷ್ಠಾನ ಮಾಡಲ್ಪಡಕೂಡದು) ಎಂದು ತಿಳಿಯದಿರುವುದು ಹೇಗೆ?

ಈ ರೀತಿಯಾಗಿ ಸ್ವಬಾಂಧವರ ಹನನನಿಮಿತ್ತಕವಾದ ಪಾಪವು, ಕುಲಕ್ಷಯಜನಿತಪಾಪವು, ಮಿತ್ರದ್ರೋಹನಿಮಿತ್ತಕಪಾಪವು ಹೀಗೆ ತ್ರಿವಿಧವಾದ ಪಾಪಗಳು ಪ್ರಸಕ್ತವಾಗುವುವೆಂದು ಅರ್ಜುನನು ವಿಷಾದವನ್ನು ಹೊಂದಿದನು. ಅದರಲ್ಲೂ ಕುಲಕ್ಷಯದಿಂದ ಸಂಭವಿಸುವ ದೋಷಗಳು ಅತ್ಯಂತ ಅನರ್ಥಕರವೆಂಬುದನ್ನು ಐದಾರು ಶ್ಲೋಕಗಳಿಂದ ವಿವರಿಸುತ್ತಾನೆ :—

(3) **ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।**
**ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ ॥**
**ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।**
**ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ।**
**ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।**
**ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥**
**ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।**
**ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥**
**ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।**
**ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥**
**ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ ।**
**ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥**
**—(1. 43-45.)**

ಕುಲಕ್ಷಯದಿಂದ ಅನಾದಿಪರಂಪರೆಯಿಂದ ಪ್ರಾಪ್ತವಾದ ಕುಲಧರ್ಮಗಳು ನಷ್ಟವಾಗುತ್ತವೆ.* ಮತ್ತು ಕುಲಧರ್ಮಗಳು ನಷ್ಟವಾದರೆ ಸಮಗ್ರ ಕುಲವೂ ಅಧರ್ಮಾಕ್ರಾಂತವಾಗುತ್ತದೆ. ಎಲೈ ಕೃಷ್ಣನೇ! ಅಧರ್ಮವ್ಯಾಪ್ತಿ

* ಉಪದೇಶಕರಾದ ಜ್ಞಾನವೃದ್ಧರಾದ ಕುಲವೃದ್ಧರ ನಾಶದಿಂದ ವರ್ಣಾಶ್ರಮಧರ್ಮಜ್ಞಾನವೇ ಬರುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸ್ವವರ್ಣಾಶ್ರಮೋಚಿತಧರ್ಮಗಳು ಅನುಷ್ಠಿಸಲ್ಪಡದೇ ಧರ್ಮಗಳೆಲ್ಲವೂ ನಾಶಹೊಂದುವುವು ಎಂದು ಭಾವವು.

ಯಿಂದ ಕುಲಸ್ತ್ರೀಯರು (ಪಾತಿವ್ರತ್ಯರಹಿತರಾಗುವುದರಿಂದ) ದೂಷಿತರಾಗುತ್ತಾರೆ. ಹೇ ವಾರ್ಷ್ಣೇಯ! ಸ್ತ್ರೀಯರು ದುಷ್ಟರಾದರೆ ವರ್ಣಸಾಂಕರ್ಯವು ಉಂಟಾಗುವುದು. (ಬ್ರಾಹ್ಮಣಾದಿವರ್ಣದ ಸ್ತ್ರೀಯರು ಭಿನ್ನವರ್ಣದ ಪುರುಷರ ಸಂಗಡ ಕ್ರೀಡಿಸಿ ಪುತ್ರರನ್ನು ಪಡೆಯುವುದರಿಂದ ಯಾವ ವರ್ಣಕ್ಕೂ ಸೇರದ ವರ್ಣಬಾಹ್ಯರು ಉತ್ಪನ್ನರಾಗಿ ಅವರೂ ಪ್ರಧಾನವಾದ ಚತುರ್ವರ್ಣಗಳಲ್ಲಿ ಬೆರೆತು ಇಂಥವರು ಇಂತಹ ವರ್ಣಕ್ಕೆ ಸೇರಿದವರು ಎಂಬ ವ್ಯವಸ್ಥೆಯೇ ಇಲ್ಲದೇ ಹೋಗುವುದರಿಂದ ವರ್ಣಸಾಂಕರ್ಯವು ಉತ್ಪನ್ನವಾಗುವುದು ಎಂದು ಭಾವವು.) ಈರೀತಿಯಾಗಿ ಉತ್ಪನ್ನನಾದ ಸಂಕರಪುತ್ರನು ಕುಲನಾಶಕನಿಗೂ ಮತ್ತು ತನ್ನ ಕುಲದವರಿಗೂ ನರಕಪ್ರದನಾಗುತ್ತಾನೆ. ಆದುದರಿಂದ ಈ ಸಂಕರಪುತ್ರರ ಪಿತೃಗಳು (ಪಿಂಡದಾನದಲ್ಲಿ ಅಧಿಕಾರಹೊಂದಿದ ಔರಸಪುತ್ರರು ತಮ್ಮ ಕ್ಷೇತ್ರದಲ್ಲಿ ಉತ್ಪನ್ನರಾಗದುದರಿಂದ) ಲುಪ್ತಪಿಂಡರಾಗಿ ಮತ್ತು ಲುಪ್ತೋದಕಕ್ರಿಯರಾಗಿ ನರಕದಲ್ಲಿ ಬೀಳುತ್ತಾರೆ. ವರ್ಣಸಂಕರಕಾರಕರಾದ ಕುಲಘ್ನರಿಂದ ಪ್ರಾಪ್ತವಾದ ಈ ದೋಷಗಳಿಂದ ಬ್ರಾಹ್ಮಣಾದಿಜಾತಿಧರ್ಮಗಳು ನಷ್ಟವಾಗುತ್ತವೆ. ಮತ್ತು ಪರಂಪರಾಪ್ರಾಪ್ತವಾದ ಕುಲಧರ್ಮಗಳು ನಾಶಹೊಂದುತ್ತವೆ. ಎಲೈ ಜನಾರ್ದನನೇ! ಸ್ವವರ್ಣೋಚಿತಧರ್ಮಗಳನ್ನೂ ಸ್ವಕುಲಧರ್ಮಗಳನ್ನೂ ತ್ಯಜಿಸಿದ ಮನುಷ್ಯರಿಗೆ ನರಕದಲ್ಲಿ ವಾಸವು ನಿಯತವೆಂದು ಕೇಳಿರುತ್ತೇವೆ. ಹಾ! ಕಷ್ಟ! ರಾಜ್ಯಲೋಭದಿಂದ ಸ್ವಜನಹನನವೆಂಬ ಅತ್ಯಂತಪಾಪಕರ್ಮವನ್ನು ಆಚರಿಸಲು ನಾವು ನಿಶ್ಚಯಮಾಡಿದ್ದೆವು.

ಎರಡುವಿಧವಾಗಿ ಸೌಖ್ಯಹಾನಿಯೂ ಮತ್ತು ದುಃಖಪ್ರಾಪ್ತಿಯೂ ಯುದ್ಧದಲ್ಲಿ ಬಾಂಧವಹನನದಿಂದ ಪ್ರಸಕ್ತವಾಗುವುದೆಂದು ಅರ್ಜುನನು ತೋರಿಸಿರುತ್ತಾನೆ. ಯಾರ ಉದ್ದೇಶದಿಂದ ಧನಾದಿಗಳನ್ನು ಆರ್ಜಿಸಿ ಸುಖಹೊಂದಬೇಕೆಂದು ಸರ್ವರೂ ಇಚ್ಛಿಸುತ್ತಾರೆಯೋ ಅಂಥಾ ಪ್ರಿಯರಾದ ಆಪ್ತಬಂಧುಗಳು ಯುದ್ಧದಲ್ಲಿ ಪ್ರಾಣಪರಿತ್ಯಾಗಮಾಡುತ್ತಾರೆ ಎಂದು ಅರ್ಜುನನು ಹೇಳುತ್ತಾನೆ:—

**(4) ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ॥**
**ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ।**

**ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥**
**ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ ।**
**ಮಾತುಲಾಃ ಶ್ವಶುರಾಃ ಪೌತ್ರಾಃ ಸ್ಯಾಲಾಃ ಸಂಬಂಧಿನಸ್ತಥಾ ॥**
**ಏತಾನ್ನಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।**
**ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥**
(1. 32-35.)

ಎಲೈ ಗೋವಿಂದನೇ! ಯಾರಿಗೋಸ್ಕರ ನಮಗೆ ರಾಜ್ಯವೂ, ಭೋಗ್ಯ ದ್ರವ್ಯಗಳೂ, ಇತರ ಸುಖ ಸಾಧನಗಳೂ ಅಪೇಕ್ಷಿತಗಳೋ ಅಂಥಾ ಆಚಾರ್ಯರು, ಪಿತೃಗಳು, ಪುತ್ರರು, ಪಿತಾಮಹಂದಿರುಗಳು, ಮಾತುಲರು, ಶ್ವಶುರರು, ಪೌತ್ರರು, ಭಾವಮೈದುನರು ಮತ್ತೂ ಇತರ ಸಂಬಂಧಿಗಳು ಪ್ರಾಣಗಳಲ್ಲಿ ಮತ್ತು ಧನಾದಿಗಳಲ್ಲಿ ಆಶೆಯನ್ನು ಪರಿತ್ಯಾಗಮಾಡಿ ಯುದ್ಧದಲ್ಲಿ ಸನ್ನದ್ಧರಾಗಿರುವುದರಿಂದ ಅವರನ್ನು ಸಂಹರಿಸಿ ಪ್ರಾಪ್ತವಾಗುವ ರಾಜ್ಯದಿಂದ ನಮಗೆ ಆಗುವುದೇನು? ಮತ್ತು ಇತರ ಭೋಗ್ಯದ್ರವ್ಯಪ್ರಾಪ್ತಿಯಿಂದ ಅಥವಾ ನಮ್ಮ ಜೀವನದಿಂದ ತಾನೇ ಏನು ಆಗುವುದು? ಎಲೈ ಮಧುಸೂದನನೇ! ನನ್ನನ್ನು ಸಾಯಿಸಿದರೂ ಚಿಂತೆಯಿಲ್ಲ, ನಾನು ಇವರನ್ನು ಸಂಹರಿಸುವುದಕ್ಕೆ ಇಚ್ಛಿಸುವುದಿಲ್ಲ. ಯುದ್ಧದಿಂದ ತ್ರೈಲೋಕ್ಯಸಾಮ್ರಾಜ್ಯವೇ ದೊರಕುವುದಾದರೂ ನಾನು ಇವರನ್ನು ಸಂಹರಿಸುವುಕ್ಕೆ ಇಚ್ಛಿಸುವುದಿಲ್ಲ. ಹೀಗಿರುವಲ್ಲಿ ಅಲ್ಪವಾದ ಭೂಮಂಡಲಾರ್ಥವಾಗಿ ಇವರನ್ನು ಸಂಹಾರ ಮಾಡಲಾರೆನೆಂದು ಹೇಳುವುದೇನು?

ಈ ವಾಕ್ಯಗಳಿಂದ ಆಪ್ತಬಂಧುಗಳು ಮೃತರಾದರೆ ಅವರ ದರ್ಶನ, ಸ್ಪರ್ಶನಾದ್ಯಭಾವದಿಂದ ಸುಖನಾಶವೂ, ಮತ್ತು ದುಃಖಪ್ರಾಪ್ತಿಯೂ ಉಭಯವೂ ಅವರ್ಜನೀಯವೆಂದು ಅರ್ಜುನನು ಶಂಕಿಸಿದನೆಂದು ಸ್ಪಷ್ಟವಾಗುವುದು. ದ್ವಿತೀಯಾಧ್ಯಾಯದಲ್ಲಿಯೂ ಪುನಃ ಅರ್ಜುನನು ಈ ಅಭಿಪ್ರಾಯವನ್ನೇ ಸಂಕ್ಷೇಪವಾಗಿ ಹೇಳಿರುತ್ತಾನೆ :—

(5) **ಯಾನೇವ ಹತ್ವಾ ನ ಜಿಜೀವಿಷಾಮ ।**
**ಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥** —(2. 6.

ಪ್ರಿಯಬಂಧುಗಳಾದ ಯಾವ ಧೃತರಾಷ್ಟ್ರನ ಪುತ್ರನನ್ನೂ ಅವನ ಅನುಯಾಯಿಗಳನ್ನೂ ಸಂಹರಿಸಿ ನಾವು ಪ್ರಾಣಧಾರಣೆ ಮಾಡಲಾರೆವೋ ಅಂಥಾ ದುರ್ಯೋಧನನೂ ಅವನ ಸಂಬಂಧಿಗಳಾದ ಭೀಷ್ಮಾದಿಗಳೂ ಯುದ್ಧದಲ್ಲಿ ಸನ್ನದ್ಧರಾಗಿರುತ್ತಾರೆ.

ಮತ್ತೊಂದು ವಿಧವಾಗಿ ದುಃಖಪ್ರಾಪ್ತಿಪ್ರಕಾರವನ್ನು ಅರ್ಜುನನು ನಿರೂಪಿಸುತ್ತಾನೆ:—

(6) **ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ।**
**ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥**
**ಗುರೂನಹತ್ವಾ ಹಿ ಮಹಾನುಭಾವಾನ್।**
**ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ॥**
**ಹತ್ವಾರ್ಥಕಾಮಾಂಸ್ತು ಗುರೂನಿಹೈವ।**
**ಭುಂಜೀಯ ಭೋಗಾನ್ರುಧಿರಪ್ರದಿಗ್ಧಾನ್॥** —(2. 4-5.)

ಎಲೈ ಮಧುಸೂದನನೇ! ನಾನು ಯುದ್ಧದಲ್ಲಿ ಎದುರಿಸಿ ಪೂಜಾರ್ಹರಾದ ಭೀಷ್ಮದ್ರೋಣರನ್ನು ಹೇಗೆ ಬಾಣಗಳಿಂದ ಹೊಡೆಯಲಿ? ಮಹಾನುಭಾವರಾದ ಎಂದರೆ ಭಗವದ್ಭಕ್ತಿ ತಪಸ್ಸು ಮುಂತಾದ ಮಹಾಗುಣಸಂಪನ್ನರಾದ, ವಿದ್ಯೋಪದೇಶಕರಾದ ಗುರುಗಳನ್ನು ಸಂಹರಿಸದೆ ಈ ಲೋಕದಲ್ಲಿ ಭಿಕ್ಷಾಟನದಿಂದಲಾದರೂ ಜೀವನ ಮಾಡುವುದು ಪಾರತ್ರಿಕಶ್ರೇಯಸ್ಸಾಧನವಾಗಿರುವುದು. ಮತ್ತು ಅರ್ಥಕಾಮರಾದ ಎಂದರೆ ಭೋಗ್ಯದ್ರವ್ಯಗಳನ್ನು ಅಪೇಕ್ಷಿಸಿ, ಬದುಕಬೇಕೆಂದಿರುವ ಗುರುಗಳನ್ನು ಸಂಹಾರ ಮಾಡಿ ಅವರ ರಕ್ತದಿಂದ ಲಿಪ್ತವಾದ (ಅವರುಗಳಿಂದ ಅನುಭವಿಸಲ್ಪಟ್ಟ) ರಾಜ್ಯಗೃಹಾದಿ ಭೋಗಗಳನ್ನು ಹೇಗೆ ಅನುಭವಿಸಲಿ?

ಜಯಸಂದೇಹವೂ ಯುದ್ಧದಲ್ಲಿ ಪ್ರತಿಬಂಧಕವಾಗಲು ಕಾರಣವೆಂದು ಅರ್ಜುನನು ನಿರೂಪಿಸಿರಬಹುದೆಂದು ಶ್ರೀಕೃಷ್ಣನ ಉತ್ತರದಿಂದ ತೋರಿಬರುವುದು. ಅರ್ಜುನನ ಸ್ವಂತ ವಾಕ್ಯವು (2. 6.) ಈ ವಿಷಯದಲ್ಲಿ ಅಷ್ಟು ಸ್ಪಷ್ಟವಾಗಿರುವುದಿಲ್ಲ.*

---

* ಈ ಉಭಯ ಪಕ್ಷದಲ್ಲಿ ಯಾವುದು ಶ್ರೇಷ್ಠವೆಂಬುದನ್ನು ನಾವು ತಿಳಿದಿಲ್ಲ ; ನಾವೇ ಜಯಿಸುವುದೆಂಬುದೋ ಅಥವಾ ಕೌರವರೇ ನಮ್ಮನ್ನು ಜಯಿಸುವುದೆಂಬುದೋ ನಾವು ತಿಳಿದಿಲ್ಲ

(7) **ನಚೈತದ್ವಿದ್ಮಃ ಕತರನ್ನೋ ಗರೀಯೋ ।**
**ಯದ್ವಾ ಜಯೇಮ ಯದಿ ವಾ ನೋ ಜಯೇಯುಃ ॥**

—(2. 6.)

ಇಷ್ಟೂ, ಬಂಧು ಸ್ನೇಹದಿಂದ ನಾರಾಯಣ ದ್ವೇಷಿಗಳ ಹನನ ರೂಪವಾದ ಮಹಾ ಯಜ್ಞದಲ್ಲಿ ಅಧರ್ಮಭ್ರಾಂತಿಯನ್ನು ಹೊಂದಿ ಪುಣ್ಯನಾಶಕವಾದ ಪರಿತಾಪಕ್ಕೆ ವಶನಾದ ಅರ್ಜುನನು ತಾನು ಯುದ್ಧಮಾಡುವುದಿಲ್ಲವೆಂಬಲ್ಲಿ ನಿರೂಪಿಸಿದ ಕಾರಣಗಳು.

---

## 11. ಹನ್ನೊಂದನೆಯ ಅಂಶವು.

### ಗೀತೆಯ ಸಾಂಖ್ಯೋಪದೇಶವು

1. **ಪ್ರಶ್ನೆ :**—ಸ್ವಾಮಿ! ಶ್ರೀಕೃಷ್ಣನು ನಿರೂಪಿಸಿದ ಸಾಂಖ್ಯತತ್ವವು ಯಾವುದು? ಮತ್ತು ಬಂಧು ಸ್ನೇಹವನ್ನು ಅದು ನಿವೃತ್ತಿ ಮಾಡುವುದರಲ್ಲಿ ಹೇಗೆ ಸಮರ್ಥವಾದುದು? ಈ ವಿಷಯವನ್ನು ಸಾವಧಾನವಾಗಿ ನಿರೂಪಿಸ ಬೇಕು.

---

ಎಂದು ಈ ಶ್ಲೋಕಾರ್ಥವು. ಇದು ಅರ್ಜುನನು ಯುದ್ಧ ಮಾಡಿದರೂ ಜಯವು ಸಂದೇಹವೆಂದು ತಿಳಿದಿದ್ದನು ಎಂದು ಹೇಳುವುದರಲ್ಲಿ ಸ್ಪಷ್ಟವಾದ ಸಾಧಕವಾಗಲಾರದು. ಆದರೂ ಅರ್ಜುನನಿಗೆ ಇಂಥಾ ಸಂದೇಹವೇ ಇಲ್ಲದಿದ್ದರೆ, "**ಹತೋ ವಾ ಪ್ರಾಪ್ಸ್ಯಸೇ ಸ್ವರ್ಗಂ ಜಿತ್ವಾ ವಾಭೋಕ್ಷ್ಯಸೇ ಮಹೀಂ**" ಎಂದು ದ್ವಿತೀಯಾಧ್ಯಾಯದಲ್ಲಿಯೂ, "**ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್**" ಎಂದು ಏಕಾದಶಾಧ್ಯಾಯದಲ್ಲಿಯೂ ಶ್ರೀಕೃಷ್ಣನು ಹೇಳಿರುವ ಮಾತುಗಳು ಅಸಂಗತವಾಗುವುವು. ಈ ಕಾರಣದಿಂದ "**ಯದ್ವಾ ಜಯೇಮ ಯದಿವಾ ನೋ ಜಯೇಯುಃ**" ಎಂದು ಹೇಳುವಾಗ ಅರ್ಜುನನು ಜಯ ಸಂದೇಹವನ್ನೂ ಈ ವಾಕ್ಯದಲ್ಲಿ ಗರ್ಭೀಕರಿಸಿ ಮಾತಾಡಿದ್ದನೆಂದು ನಿಶ್ಚಯಿಸಬೇಕು. ನಾವೇ ಗೆಲ್ಲುವೆವೋ ಅಥವಾ ಕೌರವರೇ ಜಯಿಸುವರೋ ಮತ್ತು ಜಯಪರಾಜಯಗಳೆಂಬ ಇವೆರಡರಲ್ಲಿ ಯಾವ ಪಕ್ಷವು ಶ್ರೇಷ್ಠವೋ ನನಗೆ ತಿಳಿಯದು ಎಂದು ಅರ್ಜುನನ ಭಾವವು.

**ಉತ್ತರ:—** ಅಂಧಕಾರ ನಿವರ್ತಕವಾದ ಸೂರ್ಯಪ್ರಕಾಶದಂತೆ, ಶ್ರೀಕೃಷ್ಣನಿಂದ ಉಪದಿಷ್ಟವಾದ ಸಾಂಖ್ಯತತ್ವವು ಅರ್ಜುನನ ದುರಭಿಮಾನ ವನ್ನು ಪರಿಹರಿಸಿರುವುದು. ಮತ್ತು ಈಗಲೂ ದುರ್ಜನಸ್ನೇಹದಿಂದ ಧರ್ಮ ಕಾರ್ಯದಲ್ಲಿ ಆಲಸರಾದ ಸಕಲ ಭ್ರಾಂತರಿಗೂ ವಿವೇಕವನ್ನು ಹುಟ್ಟಿಸಿ ಸ್ವಧ ರ್ಮದಲ್ಲಿ ನಿಷ್ಠತೆಯನ್ನು ಉಂಟುಮಾಡುತ್ತಿರುವುದು. ದುರ್ಜನಬಂಧು ಸ್ನೇಹಜನಿತ ವಿಷಾದವು ಅರ್ಜುನನ ಯುದ್ಧಕರಣದಲ್ಲಿ ಪ್ರತಿಬಂಧಕವಾ ಗಿತ್ತು. ತತ್ತ್ವೋಪದೇಶದಿಂದ ಬಂಧುಗಳಲ್ಲಿ ದುರಭಿಮಾನವು ನಿವೃತ್ತವಾದ ನಂತರ ಸ್ವವರ್ಣಾಶ್ರಮೋಚಿತ ಯುದ್ಧದಲ್ಲಿ ಅರ್ಜುನನು ಸಹಜವಾಗಿಯೇ ಪ್ರವೃತ್ತನಾದನು. ಭೀಷ್ಮಾದಿಗಳು ನನ್ನಿಂದ ಸಂಹೃತರಾಗುವರು, ಆದರಿಂದ ನನಗೆ ಐಹಿಕ ಪಾರಲೌಕಿಕ ದುಃಖವು ಪ್ರಾಪ್ತವಾಗುತ್ತದೆ ಎಂಬುದು ಅರ್ಜುನನ ಸಮಗ್ರವಾಕ್ಯಾರ್ಥವು. "ಭೀಷ್ಮಾದಿಗಳು ಸ್ವರೂಪತಃ ಸಂಹಾರಯೋಗ್ಯರೇ ಅಲ್ಲ. ದೇಹವಿಯೋಗ ರೂಪವಾದ ಕ್ಷುದ್ರಸಂಹಾರದಲ್ಲಿಯೂ ಕೂಡ ನೀನು ಸ್ವತಂತ್ರನಲ್ಲ. ಅವರು ಅಸ್ವತಂತ್ರನಾದ ನಿನ್ನನ್ನು ನಿಮಿತ್ತಮಾಡಿಕೊಂಡಿರುವ ಸ್ವತಂತ್ರನಾದ ಪರಬ್ರಹ್ಮನಾದ ವಿಷ್ಣುವಿನಿಂದ ದೇಹವಿಯೋಗವನ್ನು ಹೊಂದು ವರು. ಬಂಧುದರ್ಶನಾದ್ಯಭಾವದಿಂದ ನಿನಗೆ ದುಃಖವು ದುರಭಿಮಾನದಿಂದ ಬರುವುದು. ಆದನ್ನು ಪರಿತ್ಯಾಗಮಾಡಿ ಸ್ವವರ್ಣಾಶ್ರಮೋಚಿತವಾದ ಯುದ್ಧ ವನ್ನು ಮಾಡಿ ಪರಬ್ರಹ್ಮನಾದ ಶ್ರೀಕೃಷ್ಣನಿಗೆ ಅರ್ಪಣೆ ಮಾಡಿದರೆ ನಿನಗೆ ಮೋಕ್ಷರೂಪವಾದ ಮಹಾ ಪುರುಷಾರ್ಥವು ಸಂಭವಿಸುವುದು" ಎಂದು ಶ್ರೀ ಕೃಷ್ಣನು ಉಪದೇಶ ಮಾಡಿದ ಸಾಂಖ್ಯತತ್ವದ ಸಾರವು. **ಅದೇ ವೈಷ್ಣವಶಾಸ್ತ್ರ ವು.*** ಪರಬ್ರಹ್ಮಸ್ವರೂಪವು, ಜೀವಸ್ವರೂಪವು, ಅವರುಗಳ ಸಂಬಂಧಪ್ರಕಾರವು, ಪರಬ್ರಹ್ಮನ ಮಹಿಮಾವರ್ಣನೆಯೂ ಇವುಗಳನ್ನು ಬೋಧಿಸುವ ತತ್ವಭಾಗಕ್ಕೆ

---

* ಭಗವದ್ಗೀತೆಯ "ಸಾಂಖ್ಯವು" ಎಂದರೆ ಪರಮತತ್ವವು ವೈಷ್ಣವತತ್ವವೇ ಎಂದು ಕಣ್ಣಿದ್ದವರೆಲ್ಲರಿಗೂ ತೋರತಕ್ಕ ನಿಶ್ಚಯವು; ಉಭಯವಿದ್ಯಾಪಾರಂಗತನಾದ ಪ್ರೊಫೆಸರ್ ದಾಸ ಗುಪ್ತನೂ ಹಾಗೆಯೇ ಹೇಳುತ್ತಾನೆ:—

"The Srimadbhagavadgita is the canonical work of the ekanti (singularistic) Vaishnavas." ......."The proofs in sup-

ಸಾಂಖ್ಯವೆಂದು ಹೆಸರು. ದ್ವಿತೀಯ, ಸಪ್ತಮ, ನವಮ, ದಶಮ, ಏಕಾದಶ, ತ್ರಯೋದಶಾದಿ ಅಧ್ಯಾಯಗಳಲ್ಲಿರುವ ಈ ವಿಷಯ ಸಂಗ್ರಾಹಕವಾದ ಶ್ಲೋಕಗಳನ್ನು ಉದಾಹರಿಸಿ ಅರ್ಥವನ್ನು ಹೇಳುವೆವು. ಶ್ರೀಕೃಷ್ಣನು ಅರ್ಜುನನ ಶೋಕವು ಅವಿವೇಕಮೂಲಕವಾದುದೆಂದು ಹೇಳುತ್ತಾನೆ:—

(1) **ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।**
**ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥**

—(2. 11.)

**ಅರ್ಥವು :**—ಎಲೈ ಅರ್ಜುನನೇ! ಯಾರ ಸಂಹಾರವು ಶೋಕಾರ್ಹವಲ್ಲವೋ ಮತ್ತು ಸಂತೋಷಾರ್ಹವೋ ಅಂಥವರನ್ನು ಕುರಿತು (ಅವರನ್ನು ಸಂಹರಿಸುವುದು ಹೇಗೆಂದು) ನೀನು ಶೋಕಪಡುತ್ತಿದ್ದೀಯೆ ಮತ್ತು ಪ್ರಾಜ್ಞರಿಗೆ ಅಸಮ್ಮತವಾದ (ಅಪ್ರಾಮಾಣಿಕವಾದ) ಸ್ವಕಪೋಲಕಲ್ಪಿತವಾದ ಯುಕ್ತಿಗಳನ್ನು

---

**port of the view that the Bhagavadgita is a Vaisnava work will be discussed in the second volume........'**

**Surendra Nath Das Gupta, M. A., Ph. D.,**
**Professor of Sanskrit.**

**ಅರ್ಥ :**—ಶ್ರೀಮಭಗವದ್ಗೀತೆಯು ಏಕಾಂತಿ (ವಿಷ್ಣುಮಾತ್ರ ಸರ್ವೋತ್ತಮವಾದಿಗಳಾದ) ವೈಷ್ಣವರ ಶಾಸ್ತ್ರಗ್ರಂಥವಾಗಿರುತ್ತದೆ. ಭಗವದ್ಗೀತೆಯು ವೈಷ್ಣವಗ್ರಂಥವೆಂಬ ವಿಷಯದಲ್ಲಿ ರುಜುವಾತುಗಳು ಎರಡನೆಯ ವಾಲ್ಯೂಂನಲ್ಲಿ ವಿಮರ್ಶಿಸಲ್ಪಡುವುವು.

ಡಾಕ್ಟರ್ ಪಾಲ್ ಯವ್ಟಿಕ್ ಎಂಬಾತನೂಕೂಡ ಅನೇಕ ವಿದ್ವಾಂಸರು ಹೀಗೆಯೇ ಸಮ್ಮತಿಸಿರುತ್ತಾರೆಂದು ಸ್ವಾಭಿಪ್ರಾಯ ಪೂರ್ವಕವಾಗಿ ಹೇಳುತ್ತಾನೆ:—

**"Many scholars agree that the Bhagavadgita is a moksha-sastra produced in a Vaishnava Church descended from the Katha Upanishad."**

**Paul Yevtic, B. Litt. Ph. D.**

**ಅರ್ಥ :**—ಭಗವದ್ಗೀತೆಯು ಕಠೋಪನಿಷತ್ತಿನ ಆಧಾರದಮೇಲೆ ಪ್ರಾಪ್ತವಾಗಿರುವ, ವೈಷ್ಣವತತ್ವಜ್ಞರಿಂದ ರಚಿತವಾದ ಮೋಕ್ಷಶಾಸ್ತ್ರವೆಂದು ಅನೇಕ ವಿದ್ವಾಂಸರು ಸಮ್ಮತಿಸುತ್ತಾರೆ,

ನಿರೂಪಿಸಿರುತ್ತೀಯೆ. (ಆಸನ್ನವಿನಾಶರಾದ ಎಂದರೆ ಸ್ವಲ್ಪಹೊತ್ತಿನಲ್ಲಿಯೇ ಮರಣವನ್ನು ಹೊಂದುವ ಬಂಧುಗಳು ಹೇಗೆ ಶೋಕಾನರ್ಹರು ಎಂದರೆ ಹೇಳುತ್ತಾನೆ:—ಎಲೈ ಅರ್ಜುನನೇ! ಜ್ಞಾನಿಗಳು ಪ್ರಾಣದಿಂದ ಸಹಿತವಾಗಿ ಬದುಕಿರುವ ಬಂಧುಗಳನ್ನು ಕುರಿತು ಹೇಗೆ ಶೋಕಿಸುವುದಿಲ್ಲವೋ, ಹಾಗೆಯೇ ಮೃತ್ಯುವಿನ ಬಾಯಿಗೆ ಸಿಕ್ಕಿಬಿದ್ದು, ಆಸನ್ನವಿನಾಶರಾಗಿರುವವರನ್ನು ಕುರಿತು ಸಹ ಶೋಕವನ್ನು ಹೊಂದುವುದಿಲ್ಲ. (ತತ್ವಜ್ಞಾನಿಗಳು ಬದುಕಿದವರ ವಿಷಯದಲ್ಲಿಯೂ ಕೂಡ ಅವರು ಸತ್ತುಹೋಗುತ್ತಾರಲ್ಲಾ ಎಂದು ಶೋಕವನ್ನು ಹೊಂದುವುದಿಲ್ಲ ಎಂದು ಸಂಕ್ಷೇಪಾರ್ಥವು.)

ಇದು ಪ್ರತಿಜ್ಞಾಶ್ಲೋಕವು. ಇನ್ನುಮೇಲೆ ಭೀಷ್ಮದ್ರೋಣಾದಿಗಳ ಮರಣವು ಶೋಕಾನರ್ಹವೆಂಬಲ್ಲಿ ಪ್ರಾಮಾಣಿಕ ಯುಕ್ತಿಗಳನ್ನು ಶ್ರೀಕೃಷ್ಣನು ನಿರೂಪಿಸಬೇಕಾಗಿರುವುದು ಶ್ರೀಕೃಷ್ಣನು ಸಂಕುಚಿತವಾಣಿಯಿಂದಲೇ ಅನೇಕ ವಿಕಲ್ಪಗಳಿಗೆ ಉತ್ತರವನ್ನು ಕೊಟ್ಟಿರುವನು. ರಣಾಂಗಣದಲ್ಲಿ ಗಾಂಡೀವ ನಿರ್ಮುಕ್ತವಾದ ಬಾಣಗಳ ತಾಡನದಿಂದ ಭೀಷ್ಮಾದಿಗಳ ಜೀವಸ್ವರೂಪವೇ ನಷ್ಟವಾಗುವುದೆಂದು ಶೋಕವೇ? ಭೀಷ್ಮಾದಿಜೀವರುಗಳ ಬಾಹ್ಯಶರೀರವು ನಾಶವಾಗುವುದೆಂದು ಶೋಕವೇ? ಅಥವಾ ಈಗಿರುವ ಜೀವಶರೀರ ಸಂಯೋಗವು ನಾಶವಾಗುವುದರಿಂದ ಅವರ ದರ್ಶನಾದಿಗಳಿಗೆ ಅವಕಾಶವು ತಪ್ಪಿಹೋಗುವುದೆಂದು ಶೋಕವೇ? ಅಥವಾ ದೇಹಾತಿರಿಕ್ತವಾದ ಆತ್ಮವೇ ಇಲ್ಲದಿರುವುದರಿಂದ ಭೀಷ್ಮಾದಿಗಳ ದೇಹವು ನಾಶವಾದರೆ ಅವರು ಸರ್ವಪ್ರಕಾರದಿಂದಲೂ ನಷ್ಟರೇ ಆದರೆಂದು ಶೋಕವೇ? ಇತ್ಯಾದಿ ನಾನಾವಿಕಲ್ಪಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು, ಸರ್ವಜ್ಞನಾದ ಭಗವಂತನು ಇವುಗಳಿಗೆಲ್ಲಾ ಸ್ವಲ್ಪಮಾತಿನಿಂದಲೇ ಸಮಾಧಾನವನ್ನು ಹೇಳಿ, ಅರ್ಜುನನ ಮತ್ತು ಸಕಲ ಭಕ್ತಜನರ ಮೋಹವನ್ನು ಪರಿಹಾರಮಾಡಿರುವನು.

ಆದುದರಿಂದ ಪ್ರಥಮತಃ ಶ್ರೀಕೃಷ್ಣನು ಜೀವಾದಿಬಹುವಸ್ತುಗಳು ನಿತ್ಯವಾದುವುಗಳು ಎಂದು ಉಪದೇಶಮಾಡಿ, ನಿತ್ಯವಸ್ತುಗಳು ನಾಶಹೊಂದುವುದಿಲ್ಲವಾದುದರಿಂದ ಶೋಕಕ್ಕೆ ಸರ್ವಥಾ ಕಾರಣವೇ ಇರುವುದಿಲ್ಲವೆಂದು ಉಪಪಾದಿಸುತ್ತಾನೆ. ತಥಾಹಿ :—

(2) **ನತ್ವೇವಾಹಂ ಜಾತು ನಾಸಂ ನ ತ್ವಂನೇಮೇ ಜನಾಧಿಪಾಃ ।**
**ನುಚೈವ ನ ಭವಿಷ್ಯಾಮಃ ಸರ್ವೇ ವಯಮತಃಪರಂ ॥**

—(2. 12.)

ಎಲೈ ಪಾರ್ಥನೇ! ನಾನು ಹಿಂದೆ ಯಾವಾಗಲಾದರೂ ಇರಲಿಲ್ಲವೆಂದು ಅಲ್ಲ ಎಂದರೆ ನಾನು ಅನಾದಿಕಾಲದಿಂದಲೂ ಇದ್ದೇ ಇರುತ್ತೇನೆ. ನೀನು ಹಿಂದೆ ಇರಲಿಲ್ಲವೆಂದು ಅಲ್ಲ, ಎಂದರೆ ನೀನು ಅನಾದಿಕಾಲದಿಂದಲೂ ಇದ್ದೇಇರುತ್ತೀಯೆ. ಈ ಕ್ಷತ್ರಿಯರಾಜರು ಹಿಂದೆ ಇರಲಿಲ್ಲವೆಂದು ಅಲ್ಲ, ಎಂದರೆ ಇವರೆಲ್ಲರೂ ಹಿಂದೆ ಅನಾದಿಕಾಲದಿಂದಲೂ ಇದ್ದೇಇರುತ್ತಾರೆ. ನಾನು, ನೀನು, ಮತ್ತು ಈ ಜನಾಧಿಪರು ಇವರೆಲ್ಲರೂ ಉತ್ತರಕಾಲದಲ್ಲಿ ಇರುವುದಿಲ್ಲವೆಂದು ಅಲ್ಲ ಎಂದರೆ, ಉತ್ತರಕಾಲದಲ್ಲೂ ಇರುತ್ತಾರೆ.

ಈ ಶ್ಲೋಕದಿಂದ ಪರಮಾತ್ಮನಾದ ಶ್ರೀಕೃಷ್ಣನೂ ಮತ್ತು ಸಕಲ ಚೇತನರೂ ಅನಾದಿನಿತ್ಯರೆಂದು ಹೇಳಿದಹಾಗಾಯಿತು. ಮತ್ತು ನ ತ್ವೇವಾಹಂ ಎಂಬಲ್ಲಿ "ತು" ಎಂಬ ವಿಶೇಷ ಶಬ್ದಪ್ರಯೋಗದಿಂದ ಶ್ರೀಕೃಷ್ಣನು ವಿಶೇಷರೂಪವಾಗಿ ಅನಾದಿನಿತ್ಯನಾಗಿರುವನೆಂದೂ ಸೂಚಿಸಲ್ಪಟ್ಟಿರುವುದು. "ನಿತ್ಯೋನಿತ್ಯಾನಾಂ ಚೇತನಶ್ಚೇತನಾನಾಂ" ಎಂಬ ಶ್ರುತಿಯಿಂದ ಈವಿಶೇಷವು ಸಿದ್ಧವಾಗುವುದು. ಮುಂದೆ ಶ್ರೀಕೃಷ್ಣನೂ ಸಹ ತನಗೂ ಮತ್ತು ತನ್ನಂತೆ ನಿತ್ಯರಾದ ಇತರ ಚೇತನರಿಗೂ ಇರುವ ತಾರತಮ್ಯವನ್ನು ವಿಶದವಾಗಿ ನಿರೂಪಿಸಿರುತ್ತಾನೆ.

ಆದರೆ ಅನಾದಿನಿತ್ಯಪದಾರ್ಥಗಳು ಇರುವುದೆಂದರೇನು? ದೃಷ್ಟಾಂತವಿಲ್ಲದುದರಿಂದ ಇವೆಲ್ಲವೂ ಸ್ವಂತಕಲ್ಪನೆಯೆಂದು ಮಂದರು ಆಶಂಕಿಸುವರು. ಯುಕ್ತಿಶಾಸ್ತ್ರದಲ್ಲಿ ಪಾರಂಗತೆಯನ್ನು ಹೊಂದಿದ ಪರಾಪರ ನಿಖಿಲತತ್ವಜ್ಞನಾದ ಶ್ರೀಕೃಷ್ಣನು ಅನೇಕ ದೃಷ್ಟಾಂತಗಳನ್ನು ಉದಾಹರಿಸಿ ಅನೇಕ ನಿತ್ಯಪದಾರ್ಥಗಳು ಇರುವುವೆಂದು ತಿಳಿಸಿರುತ್ತಾನೆ:—

(3) **ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**
**ಉಭಯೋರಪಿ ದೃಷ್ಟೋಂತ ಸ್ತ್ವನಯೋ ಸ್ತತ್ವದರ್ಶಿಭಿಃ ॥**

—(2. 16.)

**ಅಸತಃ** = ( ಅವ್ಯಕ್ತಸ್ಯ ) ಅವ್ಯಕ್ತವಾದ ಜಗದುಪಾದಾನ ಕಾರಣವಾದ ಮೂಲಪ್ರಕೃತಿಗೂ, ಪ್ರಕೃತಿಗೆ ಅಭಿಮಾನಿಯಾದ ಚೇತನಪ್ರಕೃತಿಗೂ, ಅಭಾ

ವಃ ಎಂದರೆ ಹಿಂದಾಗಲೀ, ಉತ್ತರಕಾಲದಲ್ಲಾಗಲೀ ನಾಶವು ಇರುವುದಿಲ್ಲ. ಚೇತನಾಚೇತನ ಪ್ರಕೃತಿಗಳು ಅನಾದಿನಿತ್ಯಪದಾರ್ಥಗಳೆಂದು ತಾತ್ಪರ್ಯವು. ಸತಃ = ಪರಬ್ರಹ್ಮನಿಗೆ, ಅಭಾವವು ಎಂದರೆ ಹಿಂದಾಗಲೀ, ಉತ್ತರಕಾಲದಲ್ಲಾಗಲೀ ನಾಶವು ಇರುವುದಿಲ್ಲ. ಪರಬ್ರಹ್ಮನು ಅನಾದಿನಿತ್ಯನೆಂದು ತಾತ್ಪರ್ಯವು. ಪ್ರಕೃತಿಪರಬ್ರಹ್ಮರಿಬ್ಬರೂ ಅನಾದಿನಿತ್ಯರೆಂಬ ನಿರ್ಣಯವು ತತ್ವದರ್ಶಿಗಳಿಂದ ನಿಶ್ಚಯಿಸಲ್ಪಟ್ಟಿದೆ. *

ಪ್ರಕೃತಿಪರಮಾತ್ಮರಲ್ಲದೆ ಇನ್ನೂ ಅನೇಕ ನಿತ್ಯಪದಾರ್ಥಗಳಿರುವುವೆಂದು ಶ್ರೀಕೃಷ್ಣನು ಹೇಳುತ್ತಾನೆ:—

**(4) ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥**

**—(2. 17.)**

ಎಲೈ ಪಾರ್ಥನೇ ! ಯಾವುದು ಸರ್ವತ್ರ ವ್ಯಾಪ್ತವೋ ಅದೆಲ್ಲವೂ ಅವಿನಾಶಿಗಳು ಎಂದರೆ ಸ್ವಭಾವತಃ ವಿನಾಶರಹಿತವಾದವುಗಳು, ಎಂದರೆ ನಿತ್ಯವೇ ಎಂದು ವ್ಯಾಪ್ತಿಯಿರುವುದೆಂದು ನೀನು ತಿಳಿಯುವವನಾಗು. (ಇದರಿಂದ ಅಕಾರಾದಿ ವರ್ಣಗಳು, ಅವ್ಯಾಕೃತಾಕಾಶ, ಮುಂತಾದ ಅನೇಕ ಪದಾರ್ಥಗಳಿಗೆ ನಿತ್ಯತ್ವವು ಸಿದ್ಧವಾಯಿತು.) ಈ ವಾಕ್ಯದಿಂದ ಜೀವವು ನಿತ್ಯಪದಾರ್ಥವೆಂಬಲ್ಲಿ ಅನಂತ ದೃಷ್ಟಾಂತಗಳು ದೊರೆತರೂ, ಶಾಪಾದಿಪ್ರಯುಕ್ತವಾಗಿ ಸ್ವಾಭಾವಿಕವಾದ ಜೀವನಿತ್ಯತ್ವವೂಕೂಡ ಯಾತಕ್ಕೆ ನಾಶಹೊಂದಬಾರದು ಎಂಬ ಶಂಕೆಯನ್ನು ಶ್ರೀಕೃಷ್ಣನು ಇದೇ ಶ್ಲೋಕದ ಉತ್ತರಾರ್ಧದಿಂದಲೇ ಪರಿಹರಿಸುವನು:—ಎಲೈ ಪಾರ್ಥನೇ ! ನಿತ್ಯವಾದ ವಸ್ತುವಿನ ವಿನಾಶವನ್ನು ಯಾವನೂ ಮಾಡಲಾರನು.

---

* ತತ್ವದರ್ಶಿಭಿರಪಿದೃಷ್ಟಃ ಎಂದು ಯೋಜನೆಯನ್ನು ಮಾಡಿದರೆ ತತ್ವದರ್ಶಿಗಳಾದ ಮಹಾಜ್ಞಾನಿಗಳಿಂದಲೂ ನಿಶ್ಚಯಿಸಲ್ಪಟ್ಟಿದೆ ಎಂದು ಅರ್ಥವಾಗುವುದು. ಅದರಿಂದ "ಪ್ರಕೃತಿಃ ಪುರುಷಶ್ಚೈವನಿತ್ಯೌ ಕಾಲಶ್ಚ ಸತ್ತಮ" ಇತ್ಯಾದಿ ವಿಷ್ಣುಪುರಾಣಾದಿ ಆಗಮಗಳೂ ಈ ವಿಷಯದಲ್ಲಿ ಪ್ರಮಾಣವಾಗಿರುವುವು ಎಂದು ಸೂಚಿತವಾಗುತ್ತದೆ.

ಕಶ್ಚಿದಪಿ ಕರ್ತುಂ ನಾರ್ಹತಿ= ಚತುರ್ಮುಖಬ್ರಹ್ಮನೂ ಕೂಡ ಮಾಡಲಾರನು ಎಂದು ಅರ್ಥವು.*

ಈ ರೀತಿಯಾಗಿ ಪ್ರಕೃತಿ, ಪರಮಾತ್ಮ ವ್ಯಾಪ್ತವಾದ, ಗಗನಾದಿಗಳ ದೃಷ್ಟಾಂತದಿಂದ ಶ್ರೀಕೃಷ್ಣನು ಜೀವನಿತ್ಯತ್ವವನ್ನು ಸಮರ್ಥನೆಮಾಡಿರುವನು. ಇನ್ನೂ ಕೆಲವು ಶ್ಲೋಕಗಳಿಂದ ಶ್ರೀಕೃಷ್ಣನು ಜೀವನಿತ್ಯತ್ವವಿಷಯದಲ್ಲಿ ಪ್ರಕಾರಾಂತರದಿಂದ ಪ್ರಾಪ್ತವಾಗುವ ಶಂಕೆಗಳನ್ನು ಪರಿಹರಿಸಿ ಜೀವಸ್ವರೂಪವು ಸರ್ವಪ್ರಕಾರದಿಂದಲೂ ನಿತ್ಯವು ಎಂಬ ನಿರ್ಣಯವನ್ನು ತೋರಿಸಿರುವನು. ತಥಾಹಿ:—

ಯದ್ಯಪಿ ಜೀವನು ಸ್ವರೂಪತಃ ನಾಶರಹಿತನೆಂದು ಉಪಪಾದಿಸಲ್ಪಟ್ಟಿತು. ಆದರೂ **"ರೂಪಂ ರೂಪಂ ಪ್ರತಿರೂಪೋಬಭೂವ"** ಎಂಬ ಕಾಠಕಶ್ರುತಿಯಲ್ಲಿ ಜೀವನು ಪರಮಾತ್ಮನ ಪ್ರತಿಬಿಂಬನೆಂದು ನಿರೂಪಿಸಲ್ಪಟ್ಟಿರುವುದು. ಪ್ರತಿಬಿಂಬವು ಕನ್ನಡಿಯಲ್ಲಿ ಕಾಣುವ ಪ್ರತಿಮುಖದಂತೆ ಉಪಾಧಿಕೃತವೆಂದು ಲೋಕದಲ್ಲಿ ದೃಷ್ಟವಾಗಿರುವುದು. ದರ್ಪಣರೂಪವಾದ ಉಪಾಧಿಯಿಂದ ಪ್ರತಿಮುಖವು ಉತ್ಪನ್ನವಾಗುತ್ತದೆ. ಅದು ಅನಿತ್ಯವು. ಹೀಗೆಯೇ ಜೀವನು ಪ್ರತಿಬಿಂಬನಾಗುವುದಾದರೆ ದೇಹರೂಪವಾದ ಉಪಾಧಿಜನ್ಯನಾಗಬೇಕಾಗುವುದರಿಂದ ಜೀವನು ಉತ್ಪನ್ನನು ಮತ್ತು ವಿನಾಶಿಯು ಎಂದು ಪ್ರಾಪ್ತವಾಗುವುದು. ಜೀವರೂಪಪ್ರತಿಬಿಂಬಕ್ಕೆ ಕಾರಣವಾದ ಉಪಾಧಿಯು ಸ್ಥೂಲದೇಹವು; ಅದು ಅನಿತ್ಯವಾದುದರಿಂದ ಅನಿತ್ಯೋಪಾಧಿಜನ್ಯವಾದ ಜೀವಾಖ್ಯವಸ್ತುವೂ ಅನಿತ್ಯವೇ. ಹೀಗಿರುವಲ್ಲಿ ಸಕಲ ಜೀವರುಗಳೂ ನಿತ್ಯರು ಎಂದು ಹೇಳುವುದು ಹೇಗೆ ಎಂಬ ಶಂಕಾಶೂಲವನ್ನು ನಿರ್ಮೂಲಮಾಡುವ ಅಮೋಘವಾದ ವಾಙ್ಮಯಾಸ್ತ್ರವನ್ನು ಶ್ರೀಕೃಷ್ಣನು ಪ್ರಯೋಗಿಸಿರುತ್ತಾನೆ:—

(5) **ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।**
**ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವಭಾರತ ॥** (—2. 18.)

---

* ಅಥವಾ ಕಶ್ಚಿತ್ = ಅಚಿಂತ್ಯ ಪ್ರಭಾವವುಳ್ಳ ಪರಬ್ರಹ್ಮನೂಕೂಡ ತನ್ನ ಇಚ್ಛೆಯಿಂದಲೇ ನಿತ್ಯಪದಾರ್ಥಗಳ ನಿತ್ಯತ್ವವನ್ನು ನಾಶಮಾಡುವುದಿಲ್ಲ. 'ಕ'ಶಬ್ದವು ಪರಮಾತ್ಮವಾಚಕವೆಂದು ವಿಷ್ಣುಸಹಸ್ರನಾಮದಿಂದ ವಿದಿತವಾಗುವುದು.

ಎಲೈ ಅರ್ಜುನನೇ! ಸ್ವರೂಪತಃ ನಿತ್ಯರಾದ ಮತ್ತು ಶರೀರದಿಂದ ಸಹಿತರಾಗಿರುವ ಈ ಯೋಧರುಗಳ ಸ್ಥೂಲದೇಹಗಳು ನಾಶಹೊಂದತಕ್ಕವುಗಳೇ. (ಏವಂಚ ಜೀವನು ಪ್ರತಿಬಿಂಬನಾಗುದರಲ್ಲಿ ಸ್ಥೂಲದೇಹವು ಉಪಾಧಿಯಲ್ಲ. ಜೀವಚೇತನನು ವಿಲಕ್ಷಣ ಪದಾರ್ಥವು. ದರ್ಪಣಾದಿಗಳಿಂದ ಪ್ರತಿಮುಖವು ಉತ್ಪನ್ನವಾಗುವಂತೆ ಜೀವನು ದೇಹರೂಪವಾದ ಉಪಾಧಿಯಿಂದ ಉತ್ಪನ್ನನಾಗುವನಲ್ಲ. **ಚೇತನನೇ ಉಪಾಧಿಯು ಮತ್ತು ಚೇತನನೇ ಪ್ರತಿಬಿಂಬವು.** ಜೀವಸ್ವರೂಪಾತಿರಿಕ್ತವಾದ ಉಪಾಧಿಯು ಅನಿತ್ಯವಲ್ಲವಾದುದರಿಂದ ಪ್ರತಿಬಿಂಬನಾದ ಜೀವನು ಅನಿತ್ಯವಲ್ಲವೆಂದು ಭಾವವು.)

ಆದರೂ ಮತ್ತೊಂದು ಶಂಕೆಯು ಉಳಿದಿರುವುದು. ಪ್ರತಿಬಿಂಬವು ಉಪಾಧಿನಾಶದಿಂದ ನಾಶಹೊಂದಿ ಅನಿತ್ಯವಾಗುವುದು. ಬಿಂಬೋಪಾಧಿಗಳ ಸನ್ನಿಧಿನಾಶದಿಂದಲೂ ನಾಶಹೊಂದುವುದು. ಜೀವನಿಗೆ ಸ್ವರೂಪಾತಿರಿಕ್ತ ಉಪಾಧಿಯು ಇಲ್ಲವಾದುದರಿಂದ ಉಪಾಧಿನಾಶಪ್ರಯುಕ್ತ ಅನಿತ್ಯತ್ವವು ಪ್ರಾಪ್ತವಾಗಲಾರದು. ಆದರೆ ಬಿಂಬನಾಶಪ್ರಯುಕ್ತನಾಶವಾಗಲೀ ಅಥವಾ ಬಿಂಬೋಪಾಧಿಸನ್ನಿಧಿನಾಶಪ್ರಯುಕ್ತ ನಾಶವಾಗಲೀ ಯಾತಕ್ಕೆ ಆಗಬಾರದು ಎಂಬ ಪ್ರಶ್ನೆಗೂ **"ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ"** ಎಂಬ ಉತ್ತರಾರ್ಧದಿಂದ ಶ್ರೀಕೃಷ್ಣನು ಸಮಾಧಾನವನ್ನು ಹೇಳಿರುತ್ತಾನೆ. ಅದೇನೆಂದರೆ, ಎಲೈ ಅರ್ಜುನನೇ! ಅನಾಶಿಯಾದ ಎಂದರೆ ಸರ್ವಪ್ರಕಾರದಿಂದ ನಾಶರಹಿತನಾದ ಮತ್ತು ಅಪ್ರಮೇಯನಾದ ಎಂದರೆ ಸರ್ವತ್ರ ವ್ಯಾಪ್ತನಾದ ಶ್ರೀ ಪರಮಾತ್ಮನ ಪ್ರತಿಬಿಂಬನಾದ ಈ ಜೀವನಭೌತಿಕದೇಹಗಳು ಮಾತ್ರವೇ ನಾಶಹೊಂದುವುವು.

ಏವಂಚ, ಜೀವನು ಪರಮಾತ್ಮನ ಪ್ರತಿಬಿಂಬನು. ಆದರೆ ಸ್ವಸ್ವರೂಪಾತಿರಿಕ್ತವಾದ ಉಪಾಧಿಯಿಂದ ಜನ್ಯವಾದ ಪ್ರತಿಬಿಂಬವಲ್ಲ. ನಾಶಹೊಂದತಕ್ಕ ಸ್ಥೂಲದೇಹವು ಉಪಾಧಿಯೇ ಅಲ್ಲ. ಬಿಂಬನಾದ ಪರಬ್ರಹ್ಮನು ನಾಶರಹಿತನು. ಆದುದರಿಂದ ಬಿಂಬನಾಶಪ್ರಯುಕ್ತವಾದ ನಾಶವು ಪ್ರತಿಬಿಂಬಜೀವನಿಗಿರುವುದಿಲ್ಲ. ಮತ್ತು ಬಿಂಬನಾದ ಪರಮಾತ್ಮನು ಸರ್ವತ್ರವ್ಯಾಪ್ತನಾದುದ

ರಿಂದ ಬಿಂಬಸನ್ನಿಧಾನನಾಶಪ್ರಯುಕ್ತವಾದ ನಾಶವು ಪ್ರತಿಬಿಂಬನಾದ ಜೀವನಿಗಿರುವುದಿಲ್ಲ.*

ಹೀಗೆ ಶ್ರೀಕೃಷ್ಣನು ಜೀವನಿತ್ಯತ್ವವನ್ನು ಅನೇಕ ದೃಷ್ಟಾಂತಗಳಿಂದ ಉಪಪಾದಿಸಿ ಹೇಳಿ, ಪ್ರತಿಬಿಂಬನಾದ ಪ್ರಯುಕ್ತವಾಗಿ, ಜೀವನು ಅನಿತ್ಯನು ಯಾತಕ್ಕೆ ಆಗಬಾರದೆಂಬ ಶಂಕೆಯನ್ನೂ ಪರಿಹರಿಸಿರುತ್ತಾನೆ.

3. ಮತ್ತೊಂದು ವಿಧವಾಗಿಯೂ (ಶಸ್ತ್ರಶಾಪಾದಿಪ್ರಬಲನಿಮಿತ್ತದಿಂದಲೂ ಕೂಡ) ಜೀವನು ನಾಶಹೊಂದದ ಸ್ವರೂಪವುಳ್ಳ ನಿತ್ಯಪದಾರ್ಥನೆಂದು ಶ್ರೀಕೃಷ್ಣನು ಹೇಳಿರುತ್ತಾನೆ:—

**(6) ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।**
**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥**

—(2. 23.)

---

***ಅನಾಶಿನೋಽಪ್ರಮೇಯಸ್ಯ ಜೀವಸ್ಯ ದೇಹಾ ಅಂತವಂತಃ** ಎಂದರೆ **ಅನಾಶಿಬ್ರಹ್ಮಸದೃಶಸ್ಯ ಅಪ್ರಮೇಯಬ್ರಹ್ಮಸದೃಶಸ್ಯ ಜೀವಸ್ಯ ದೇಹಾ ಅಂತವಂತಃ** ಎಂದು ಅರ್ಥವನ್ನು ಮಾಡಬೇಕು.

ನಿತ್ಯಸ್ಯ ಎಂದು ಶ್ರೀಕೃಷ್ಣನು ಹೇಳಿರುವುದರಿಂದ ಪೌನರುಕ್ತ್ಯದೋಷಪರಿಹಾರಾರ್ಥವಾಗಿ ಅನಾಶಿಶಬ್ದವನ್ನು ಹೇತುಗರ್ಭವಾಗಿ ಸ್ವೀಕರಿಸಿ ಅನಾಶಿಬ್ರಹ್ಮಸದೃಶಸ್ಯ ಎಂದೂ, ಅಣುವಾದ ಜೀವನಲ್ಲಿ ಅಪ್ರಮೇಯತ್ವವು i. ಅಣುರ್ಹ್ಯೇಷ ಆತ್ಮಾ ಚೇತಸಾ ವೇದಿತವ್ಯೋ ಯಸ್ಮಿನ್ ಪ್ರಾಣಃ ಪಂಚಧಾ ಸಂವಿವೇಶ ; ii. ಅಣುರ್ವಾಹ್ಯೇಷ ಆತ್ಮಾ ಯಂವಾ ಏತೇ ನಿನೀತಃ iii. ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯಚ | ಭಾಗೋ ಜೀವಃ ಸವಿಜ್ಞೇಯಃ ಇತ್ಯಾದಿ ಶ್ರುತಿಗಳಿಗೂ iv. ಅಣುಶ್ಚ v. ಉತ್ಕ್ರಾಂತಿ ಗತ್ಯಾಗತೀನಾಂ ಇತ್ಯಾದಿ ಸೂತ್ರಗಳಿಗೂ ವಿರುದ್ಧವಾಗಿರುವುದರಿಂದ ಅತದ್ಭಾವೇಸಾಮಾನಾಧಿಕರಣ್ಯಂ ಸಾರೂಪ್ಯಂ ಗಮಯತಿ ಎಂಬ ನ್ಯಾಯಾನುಸಾರವಾಗಿ ಅಪ್ರಮೇಯಪರಬ್ರಹ್ಮಸದೃಶಸ್ಯ ಎಂದೂ ಅರ್ಥವನ್ನು ಮಾಡಬೇಕು. ಸಿಂಹೋ ಮಾಣವಕಃ ಇತ್ಯಾದಿ ಇಂಥಾ ಬಹು ಪ್ರಯೋಗಗಳು ಲೋಕದಲ್ಲಿ ಸಿದ್ಧವಾಗಿರುವುವು.

ಅನಾಶಿನೋಽಪ್ರಮೇಯಸ್ಯ ಎಂಬಲ್ಲಿರುವ ಷಷ್ಠೀವಿಭಕ್ತಿಪ್ರತ್ಯಯವೂ ಕೂಡ ಜೀವನು ಪರಮಾತ್ಮನ ಅಧೀನನು (ಪ್ರತಿಬಿಂಬನು) ಎಂಬ ಅರ್ಥವನ್ನು ಕೊಡುತ್ತದೆ.

ಈ ಜೀವನನ್ನು ಖಡ್ಗಾದಿಶಸ್ತ್ರಗಳು ಛೇದನಮಾಡಲಾರವು. ಅಗ್ನಿಯು ಸುಡುವುದಿಲ್ಲ. ಜಲವು ತೋಯಿಸುವುದಿಲ್ಲ. ಗಾಳಿಯು ಶೋಷಿಸುವುದಿಲ್ಲ (ಒಣಗಿಸಿ ಶೈಥಿಲ್ಯವನ್ನುಂಟುಮಾಡುವುದಿಲ್ಲ).

ಶ್ರೀಕೃಷ್ಣನು ಇದರಲ್ಲಿ ಕಾರಣವನ್ನೂ ಹೇಳುತ್ತಾನೆ:—

(7) **ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ।**
**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥**

—(2. 24.)

ಈ ಜೀವನು ಛೇದನಾರ್ಹವಾದ ಪದಾರ್ಥವಲ್ಲ. ದಾಹಾರ್ಹವಾದ ಪದಾರ್ಥವೇ ಅಲ್ಲ. ಒದ್ದೆಯಾಗತಕ್ಕ ಪದಾರ್ಥವಲ್ಲ. ಯಾತಕ್ಕೆಂದರೆ ಈತನು ಸರ್ವದಾ ಸರ್ವತ್ರವ್ಯಾಪ್ತನಾದ ನಿರ್ವಿಕಾರನಾದ ಪ್ರಾಕೃತಚಲನರಹಿತನಾದ ಪರಮಾತ್ಮನ ಪ್ರತಿಬಿಂಬನು, ಮತ್ತು ವಿಧಿನಿಷೇಧಬದ್ಧನು. ಅಥವಾ ಈ ಜೀವನು ಸದಾಸರ್ವತ್ರವ್ಯಾಪ್ತನಾದ ಹರಿಯಲ್ಲಿ ಸ್ಥಿತನಾಗಿರುವ ಅಣುಪದಾರ್ಥವು. ಯಾವ ನಿಮಿತ್ತಗಳಿಂದಲೂ ನಾಶಹೊಂದತಕ್ಕವನಲ್ಲ ಮತ್ತು ವಿಧಿಬದ್ಧನು. (ಈ ರೀತಿಯಾದ ಈ ಶ್ಲೋಕದ ದ್ವಿತೀಯಾರ್ಥವು **"ನಿತ್ಯಂ ಸರ್ವಗತೇ ವಿಷ್ಣಾವಣುರ್ಜೀವೋ ವ್ಯವಸ್ಥಿತಃ"** ಎಂಬ ವಿಷ್ಣುಪುರಾಣಶ್ಲೋಕದಿಂದಲೂ ಸಿದ್ಧವಾಗುವುದು.)

ಈ ರೀತಿಯಾಗಿ ಜೀವಾತ್ಮನು ನಿತ್ಯನೆಂದು ಶ್ರೀಕೃಷ್ಣನು ಮೂರು ಪ್ರಕಾರವಾಗಿ ಸಮರ್ಥಿಸಿರುವನು. ಆದುದರಿಂದ ಜೀವನು ಸ್ವರೂಪತಃ ನಷ್ಟನಾಗುವನೆಂಬ ಭೀತಿಯಿಂದ ಅರ್ಜುನನು ವಿಷಾದಪಡಲು ಕಾರಣವಿಲ್ಲವೆಂದು ತೋರಿಸಿದಹಾಗಾಯಿತು.

**2.** ಈ ಪ್ರಸಂಗದಲ್ಲಿ ಮತ್ತೊಂದು ಶಂಕೆಯು ಅವರ್ಜನೀಯವಾಗಿ ಪ್ರಾಪ್ತವಾಗುವುದು. ಜೀವನೂ ನಿತ್ಯನು; ಪರಮಾತ್ಮನೂ ನಿತ್ಯನು; ಹೀಗಿರುವಲ್ಲಿ, ಜೀವಪರಮಾತ್ಮರಿಗೆ ಸರ್ವಸಾಮ್ಯವೇ ಪ್ರಾಪ್ತವಾಯಿತಲ್ಲವೇ ಎಂಬ ಅರ್ಜುನನ ಮನಸ್ಸಿನಲ್ಲಿ ಉತ್ಪನ್ನವಾದ ಶಂಕೆಯನ್ನು ಪರಿಹರಿಸುವವನಾಗಿ, ಮತ್ತು ಯುದ್ಧಕರ್ಮದಲ್ಲಿ ಅರ್ಜುನನಿಗಿದ್ದ ಸ್ವಾತಂತ್ರ್ಯಭ್ರಮವನ್ನೂ ನಿವಾರಣೆ ಮಾಡುವವನಾಗಿ ಶ್ರೀಕೃಷ್ಣನು ಇದೇ ಶ್ಲೋಕಗಳಿಂದ ಪರಬ್ರಹ್ಮಸ್ವರೂಪ

ವನ್ನೂ ವರ್ಣನೆಮಾಡಿರುತ್ತಾನೆ. ತಥಾಹಿ:—"ನತ್ವೇವಾಹಂ ಜಾತು ನಾಸಂ" ಎಂಬಲ್ಲಿ "ತು" ಶಬ್ದದಿಂದ ಶ್ರೀಕೃಷ್ಣನು ಅರ್ಜುನಾದಿ ಚೇತನರಿಗಿಂತ ತನ್ನಲ್ಲಿ ಒಂದು ವೈಲಕ್ಷಣ್ಯವುಂಟೆಂದು ಸೂಚಿಸಿರುತ್ತಾನೆ. ಅದನ್ನೇ ಈಗ ವಿಸ್ತರಿಸುತ್ತಾನೆ:—

(1) **ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥**

(2. 17.)

ಈ ಪ್ರಮಿತವಾದ ಸರ್ವಜಗತ್ತೂ, ಕಾಲವೂ, ಸರ್ವಸದ್ಗುಣವೂ ಯಾವನಿಂದ ವ್ಯಾಪ್ತವಾಗಿರುವುವೋ ಎಂದರೆ ಯಾವನು ದೇಶತಃ ಕಾಲತಃ ಗುಣತಃ ಪರಿಪೂರ್ಣನೋ ಅಂಥಾ ಪರಬ್ರಹ್ಮನು ಅವಿನಾಶಿಯು ಎಂದರೆ ಚತುರ್ವಿಧನಾಶರಹಿತನು.* ಸರ್ವಪ್ರಕಾರದಿಂದ ನಾಶರಹಿತನಾದ ಪರಮಾತ್ಮನಿಗೆ ವಿನಾಶವನ್ನು ಉಂಟುಮಾಡಲು ಯಾರೂ ಸಮರ್ಥರಲ್ಲ.

ಜೀವರುಗಳು ಸ್ವರೂಪತಃ ನಾಶರಹಿತರಾದರೂ ದೇಹನಾಶಾದಿಗಳನ್ನು ಉಳ್ಳವರೆಂದು ಶ್ರೀಕೃಷ್ಣನು ಬೋಧಿಸುತ್ತಾನೆ:—

(2) **ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।**
**ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥**

—(2. 18.)

ಸ್ವರೂಪತಃ ನಿತ್ಯನಾದ ಈ ಶರೀರಿಯ ಪರಿದೃಶ್ಯಮಾನವಾದ ಭೌತಿಕ ದೇಹಗಳು ನಾಶಹೊಂದತಕ್ಕವುಗಳೇ. ಆದುದರಿಂದ ಎಲೈ ಭರತಕುಲೋತ್ಪ

---

* **ಅನಿತ್ಯತ್ವಂ ದೇಹಹಾನಿರ್ದುಃಖಪ್ರಾಪ್ತಿರಪೂರ್ಣತಾ ।**
**ನಾಶಶ್ಚತುರ್ವಿಧಃ ಪ್ರೋಕ್ತಸ್ತದಭಾವೋ ಹರೇಃ ಸದಾ ॥**

ಇತ್ಯಾದಿ ಪ್ರಮಾಣಾನುಸಾರವಾಗಿ ಶ್ರೀ ಪರಮಾತ್ಮನಿಗೆ ಸ್ವರೂಪನಾಶ, ದೇಹನಾಶ, ದುಃಖಪ್ರಾಪ್ತಿ, ಅಪೂರ್ಣತೆ ಎಂಬ ನಾಲ್ಕು ವಿಧವಾದ ನಾಶಗಳೂ ಇರುವುದಿಲ್ಲ. ದ್ವಿತೀಯಾಧ್ಯಾಯದ ಈ ಶ್ಲೋಕಗಳು ಸಂಕ್ಷೇಪವಾಗಿ ಅಧ್ಯಾತ್ಮತತ್ವವನ್ನು ಬೋಧಿಸುವುವಾದುದರಿಂದ ಕೆಲವು ಶ್ಲೋಕಗಳು ಜೀವಪರವಾಗಿಯೂ ಮತ್ತು ಪರಮಾತ್ಮಪರವಾಗಿಯೂ ಅರ್ಥವನ್ನು ಕೊಡುವುವು. ಆದುದರಿಂದ ಆಕಾಂಕ್ಷಾನುಸಾರವಾಗಿ ಮತ್ತು ನಿರವಕಾಶವಾದ ಪ್ರಮಾಣಾಂತರಗಳಿಗೆ ಅವಿರುದ್ಧವಾಗಿ ಅರ್ಥವನ್ನು ಮಾಡಬೇಕು.

ನ್ನನಾದ ಅರ್ಜುನನೇ! ಚತುರ್ವಿಧನಾಶರಹಿತನೂ, ದೇಶತಃ ಕಾಲತಃ ಗುಣತಃ ಅಪರಿಚ್ಛಿನ್ನನೂ (ಅನಂತನೂ) ಆದ ಪರಮಾತ್ಮನ ಪೂಜಾರ್ಥವಾಗಿ ನೀನು ಯುದ್ಧಮಾಡು.

ಏವಂಚ ಜೀವಪರಮಾತ್ಮರಿಬ್ಬರೂ ಸ್ವರೂಪತಃ ನಿತ್ಯರಾದರೂ ಪರಮಾತ್ಮನು ಪೂರ್ಣನಾದುದರಿಂದ ಸ್ವತಂತ್ರನು, ಚತುರ್ವಿಧನಾಶರಹಿತನು, ಮತ್ತು ಸರ್ವತ್ರವ್ಯಾಪ್ತನು. ಜೀವನು ಅಲ್ಪನು, ಅಸ್ವತಂತ್ರನು, ಮತ್ತು ದೇಹನಾಶರೂಪವಾದ ನಾಶವನ್ನು ಹೊಂದತಕ್ಕವನು ಎಂದು ಸಿದ್ಧವಾಯಿತು. ಪ್ರತಿಬಿಂಬನಾದುದರಿಂದಲೂ ಜೀವನು ಅಸ್ವತಂತ್ರನು ಎಂದು ಸಿದ್ಧವಾದ ವಿಷಯವೇ ಆಗಿರುತ್ತದೆ. ಬಿಂಬಾಧೀನವು ಪ್ರತಿಬಿಂಬವೆಂದು ಸರ್ವಸಮ್ಮತವಾದ ಪ್ರಮೇಯವು.

ಜೀವನಿತ್ಯತ್ವ ಪಾರತಂತ್ರ್ಯಗಳೆರಡನ್ನೂ ಶ್ರೀಕೃಷ್ಣನು ಒಂದೇ ಶ್ಲೋಕದಲ್ಲಿ ಸಂಗ್ರಹಿಸಿ ನಾನೇ ದುರ್ಯೋಧನಾದಿಗಳನ್ನು ಕೊಲ್ಲುವವನು ಎಂಬ ಅರ್ಜುನನ ಸ್ವಾತಂತ್ರ್ಯಭ್ರಮವನ್ನೂ ಪರಿಹರಿಸುತ್ತಾನೆ:—

**(3) ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ।**
**ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ॥**

—(2. 19.)

ಯಾವಾತನು ಒಬ್ಬ ಜೀವನು ಮತ್ತೊಬ್ಬನನ್ನು ಸ್ವತಂತ್ರವಾಗಿ ಕೊಲ್ಲುವನೆಂದು ತಿಳಿಯುವನೋ, ಮತ್ತು ಯಾವಾತನು ಶತ್ರುವಿನಿಂದ ಮರಣ ಹೊಂದಿದ ಜೀವನು ಸ್ವರೂಪೇಣ ನಾಶ ಹೊಂದಿದನೆಂದು ತಿಳಿಯುವನೋ ಇವರಿಬ್ಬರೂ ತಿಳಿಯದವರು. (ಸಾತ್ವಿಕಜ್ಞಾನಶೂನ್ಯರಾದ ಮೂಢರು ಎಂದು ತಾತ್ಪರ್ಯವು.) ವಸ್ತುತತ್ವವೇನೆಂದರೆ ಜೀವನು ಶತ್ರುವನ್ನು ಸಂಹಾರ ಮಾಡುವುದರಲ್ಲಿ ಸ್ವತಂತ್ರನಲ್ಲ ಮತ್ತು ಮರಣ ಹೊಂದಿದ ಶತ್ರುವು ಸ್ವರೂಪೇಣ ನಾಶವನ್ನು ಹೊಂದಲ್ಪಡುವವನಲ್ಲ.*

---

* ಕೊಲ್ಲುವ ಜೀವನು ಸಂಹಾರ ಮಾಡುತ್ತಾನೆಂದು ತಿಳಿಯುವವನೂ, ಶತ್ರುಜೀವನು ಹತನಾದನೆಂದು ತಿಳಿಯುವವನೂ ಇವರಿಬ್ಬರೂ ದಡ್ಡರು ಎಂದು ಇರುವುದರಿಂದ, ಸಂಹಾರ ಮತ್ತು ಮರಣ ಇವೆರಡೂ ಮಿಥ್ಯಾ ಎಂದು ಈ ಶ್ಲೋಕಕ್ಕೆ ಅರ್ಥಮಾಡುವುದು ಭಯಂಕರವಾದ ಪ್ರಮಾಣಗಳ

ಈ ಅಭಿಪ್ರಾಯವು ಮತ್ತೊಂದು ಶ್ಲೋಕದಿಂದಲೂ ವ್ಯಕ್ತವಾಗುವುದು :—

(4) **ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಂ।**
**ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಂ॥**
—(2. 21.)

ಎಲೈ ಪಾರ್ಥನೇ! ಯಾವನು, ಜೀವಸ್ವರೂಪವು ಉತ್ಪತ್ತಿ ಶೂನ್ಯವಾದುದು ನಾಶಶೂನ್ಯವಾದುದು, ಸ್ವರೂಪನಾಶಪ್ರಯೋಜಕವಾದ ವಿಕಾರರಹಿತವಾದುದು ಎಂದು ತಿಳಿದಿರುವನೋ ಮತ್ತು ಯಾವ ಜೀವನು ಏನಂ = ಪರಮಾತ್ಮ ಸ್ವರೂಪವನ್ನು ಸರ್ವಪ್ರಕಾರದಿಂದಲೂ ನಾಶರಹಿತವು, ಜನ್ಮ ವಿಕಾರಶೂನ್ಯವು, ಅನವರತ ಸ್ವತಂತ್ರವೆಂದು ತಿಳಿಯುವನೋ ಅಂಥಾ ಜ್ಞಾನಿಯು ಯಾರನ್ನು

---

ಅತಿಕ್ರಮರೂಪವಾಗಿರುವದಲ್ಲದೆ, ಶ್ರೀಕೃಷ್ಣನ ಸರ್ವವಾಕ್ಯಗಳಿಗೂ ಅತ್ಯಂತ ವಿರುದ್ಧರೂಪವಾಗಿರುವುದು. ಅರ್ಜುನಜೀವನು ಕರ್ಣನನ್ನು ಸಂಹಾರಮಾಡಿದುದು ಪ್ರತ್ಯಕ್ಷಸಿದ್ಧವಾಗಿರುವುದು. ಕರ್ಣನು ಮರಣಹೊಂದಿದುದೂ ಪ್ರತ್ಯಕ್ಷಸಿದ್ಧವಾಗಿರುವುದು. ಹೀಗಿರುವಲ್ಲಿ ಅರ್ಜುನನು ಕರ್ಣನನ್ನು ಸಂಹಾರ ಮಾಡಲಿಲ್ಲ, ಕರ್ಣನು ಹತನಾಗಲಿಲ್ಲ ಎಂದು ಹೇಳುವುದು ಅತ್ಯಂತಸುಳ್ಳು ಮತ್ತು ಅವಿವೇಕಿಗಳ ಮಾತೇ. ವಸ್ತುತತ್ವವೇನೆಂದರೆ, **"ಮತ್ತಃ ಸರ್ವಂ ಪ್ರವರ್ತತೇ" "ನಿಮಿತ್ತಮಾತ್ರಂ ಭವ ಸವ್ಯಸಾಚಿನ್" "ಮಯಾ ಹತಾಂಸ್ತ್ವಂ ಜಹಿ" "ಯತಃ ಪ್ರವೃತ್ತಿ ರ್ಭೂತಾನಾಂ"** ಇತ್ಯಾದಿ ಗೀತಾವಚನಗಳಿಂದ ಶ್ರೀಕೃಷ್ಣನು ಸ್ವತಂತ್ರಸಂಹಾರಕನು, ಅರ್ಜುನನು ನಿಮಿತ್ತಮಾತ್ರನು. ಮತ್ತು **"ನಿತ್ಯಸ್ಯೋಕ್ತಾಃ ಶರೀರಿಣಃ" "ನ ಜಾಯತೇ ಮ್ರಿಯತೇ ವಾ ಕದಾಚಿತ್" "ನೈನಂ ಛಿಂದಂತಿ ಶಸ್ತ್ರಾಣಿ"** ಇತ್ಯಾದಿ ಅನೇಕ ವಚನಗಳಿಂದ ಕರ್ಣಜೀವನೂ ಸ್ವರೂಪೇಣ ನಿತ್ಯನು. ಆದರೆ **"ತಥಾ ದೇಹಾಂತರಪ್ರಾಪ್ತಿಃ" "ಅಂತವಂತ ಇಮೇ ದೇಹಾಃ"** ಇತ್ಯಾದಿ ವಚನಗಳಿಂದ ಕರ್ಣನ ದೇಹವು ವಿಯೋಗರೂಪವಾದ ಮರಣಕ್ಕೆ ವಶವಾಗಿರುವುದು. ಆದುದರಿಂದ ಕರ್ಣನು ದೇಹನಾಶರೂಪವಾದ ಮರಣವನ್ನು ಹೊಂದಿರುವನು. ಆದರೆ ಆತನ ಸ್ವರೂಪವು ನಾಶವನ್ನು ಹೊಂದತಕ್ಕದ್ದಲ್ಲ. ಅರ್ಜುನನು ಸಂಹಾರ ಮಾಡುವುದರಲ್ಲಿ ಸ್ವತಂತ್ರನೆಂದು ತಿಳಿಯುವವನೂ, ಕರ್ಣನು ಸ್ವರೂಪತಃ ಹತನಾದನೆಂದು ತಿಳಿಯುವವನೂ ಇವರಿಬ್ಬರೂ ಮೂಢರು. ವಸ್ತುತಃ ಅರ್ಜುನನು ಸ್ವತಂತ್ರ ಸಂಹಾರಕನಲ್ಲ, ಕರ್ಣನು ಸ್ವರೂಪೇಣ ಸಂಹೃತನಾಗಲಿಲ್ಲ ಎಂದು ಸಮೀಚೀನವಾದ ಶ್ಲೋಕಾರ್ಥವು,

ಕೊಲ್ಲುವುದರಲ್ಲಿ ತಾನೇ ನಾನು ಸ್ವತಂತ್ರವಾಗಿ ಸಂಹಾರಮಾಡುತ್ತೇನೆ ಎಂದು ಅಭಿಮಾನಮಾಡುವನು, ಮತ್ತು ಜೀವನು ಸತ್ತನು ಎಂದು ತಾನೇ ಹೇಗೆ ಅಭಿಮಾನಮಾಡುವನು? (ಜ್ಞಾನಿಯು ಶತ್ರುಸಂಹಾರಕಾರ್ಯದಲ್ಲಿ ತಾನು ಸ್ವತಂತ್ರನೆಂದಾಗಲೀ, ಜೀವಸ್ವರೂಪವು ಹನನದಿಂದ ಸ್ವರೂಪೇಣ ನಾಶಹೊಂದತಕ್ಕದ್ದೆಂದಾಗಲೀ ತಿಳಿಯುವುದಿಲ್ಲ. ಈಶ್ವರನು ಸ್ವತಂತ್ರಸಂಹಾರಕನು ನಾನು ನಿಮಿತ್ತಮಾತ್ರನು ಎಂದರೆ ಅಸ್ವತಂತ್ರ ಸಂಹಾರಕನೆಂದೂ, ಶತ್ರುಜೀವನು ಸ್ವರೂಪತಃ ನಾಶಹೊಂದತಕ್ಕವನಲ್ಲ ಮತ್ತು ದೇಹವಿಯೋಗರೂಪವಾದ ನಾಶವನ್ನು ಮಾತ್ರ ಹೊಂದಿದನೆಂದೂ ತಿಳಿಯುವನು ಎಂದು ಭಾವವು.)

ಈಶ್ವರನು ಚತುರ್ವಿಧನಾಶರಹಿತನಾದುದರಿಂದ ಸ್ವತಂತ್ರನೆಂದು ಶ್ರೀಕೃಷ್ಣನ ಅಭಿಪ್ರಾಯವು. ಶ್ರೀ ಪರಮಾತ್ಮನು ಸರ್ವಪ್ರಕಾರದಿಂದಲೂ ಅವಿನಾಶಿಯು ಎಂಬುದನ್ನು ಮೂರು ನಾಲ್ಕು ಶ್ಲೋಕಗಳಿಂದ ಶ್ರೀಕೃಷ್ಣನು ನಿರೂಪಿಸಿ, ಪರಮಾತ್ಮನ ಅಚಿಂತ್ಯಶಕ್ತಿಯಿರುವುದರಿಂದಲೇ ಅವನು ಸ್ವತಂತ್ರನು ಮತ್ತು ಸರ್ವ ವಿಧವಾದ ವಿಕಾರರಹಿತನು ಎಂದು ಮುಖ್ಯಯುಕ್ತಿಯನ್ನೂ ಸಹ ಹೇಳುತ್ತಾನೆ :—

**(5) ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ।**
**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ॥**
**ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ।**
**ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ॥**
**ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ।**
**ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ॥**

—(2. 23-25.)

ಪರಬ್ರಹ್ಮನನ್ನು (ಸ್ವರೂಪವನ್ನೂ ಮತ್ತು ದೇಹವನ್ನೂ) ಖಡ್ಗಾದಿ ಶಸ್ತ್ರಗಳು ಛೇದನಮಾಡುವುದಿಲ್ಲ. ಅಗ್ನಿಯು ಪರಮಾತ್ಮನನ್ನು ಸುಡುವುದಿಲ್ಲ. ಜಲವು ಪರಮಾತ್ಮನನ್ನು ತೋಯಿಸುವುದಿಲ್ಲ. ವಾಯುವು ಪರಮಾತ್ಮನನ್ನು ಶೋಷಣ ಮಾಡುವುದಿಲ್ಲ. ಯಾತಕ್ಕೆಂದರೆ ಶ್ರೀಪರಮಾತ್ಮನು ಸ್ವರೂಪದಿಂದಲಾಗಲೀ, ದೇಹದಿಂದಲಾಗಲೀ ಛೇದನ ಯೋಗ್ಯನಲ್ಲ, ದಾಹಯೋಗ್ಯಪದಾರ್ಥವಲ್ಲ, ಒದ್ದೆಯಾಗತಕ್ಕ ವಸ್ತುವಲ್ಲ, ಒಣಗತಕ್ಕ ವಸ್ತುವಲ್ಲ. ಪರಮಾತ್ಮನು

ಸರ್ವಪ್ರಕಾರದಿಂದಲೂ ನಿತ್ಯನು. ಸರ್ವತ್ರ ವ್ಯಾಪ್ತನು; ನಿರ್ವಿಕಾರನು; ಪ್ರಾಕೃತಚಲನವರ್ಜಿತನು; ಮತ್ತು ಶಶ್ವದೇಕಪ್ರಕಾರವಾದ ಅನಾದಿ ವಸ್ತುವು. (ಆದುದರಿಂದ ಶ್ರೀ ಪರಮಾತ್ಮನು ಸರ್ವಸ್ವತಂತ್ರನು ಎಂದು ಭಾವವು.) ಹೀಗೆ ದೇಹವುಳ್ಳವನಾಗಿ ಸರ್ವಗತನಾಗಿರುವವನಾದರೆ ಶ್ರೀ ಪರಮಾತ್ಮನು ಯಾತಕ್ಕೆ ಗೋಚರನಾಗುವುದಿಲ್ಲ ಎಂಬ ಶಂಕೆಗೆ ಶ್ರೀಕೃಷ್ಣನು ಸಮಾಧಾನ ಮಾಡುತ್ತಾನೆ:— ಪರಮಾತ್ಮನು ಅವ್ಯಕ್ತ ಸ್ವರೂಪನು.*ಸರ್ವತ್ರ ಇದ್ದರೂ ಅವ್ಯಕ್ತನಾಗಿರುವುದು ಹೇಗೆಂದರೆ, ಆತನು ಅಚಿಂತ್ಯ ಶಕ್ತಿಯಿಂದ ಪರಿ

---

* **"ತದವ್ಯಕ್ತಮಾಹ ಹಿ"** ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ಪರಮಾತ್ಮನು ಅವ್ಯಕ್ತ ಸ್ವರೂಪನೆಂದು ಹೇಳಲ್ಪಟ್ಟಿರುವುದು. ಸರ್ವಥಾ ಪರಮಾತ್ಮನು ಅವ್ಯಕ್ತನಾದರೆ ಅವನು ಜ್ಞಾನಗೋಚರನಾಗುವನೆಂದು ಹೇಳುವುದು ಅಸಾಧ್ಯವಾಗುವುದು. ಆದುದರಿಂದ ಪರಮಾತ್ಮನು ಸ್ವಾನುಗ್ರಹವಿಲ್ಲದೆ ಸಾಮಾನ್ಯವಾಗಿ ವ್ಯಕ್ತವಾಗದ ಸ್ವರೂಪವುಳ್ಳವನು ಎಂದು ಅರ್ಥ ಮಾಡಬೇಕು **"ಅತೋಽನಂತೇನ ತಥಾ ಹಿ ಲಿಂಗಂ"** ಎಂಬ ಬ್ರಹ್ಮಸೂತ್ರದಲ್ಲಿ ಅನಂತನಾಮಕ ಪರಮಾತ್ಮನು ತನ್ನ ಪ್ರಸಾದದಿಂದಲೇ ಭಕ್ತಜೀವರುಗಳಿಗೆ ವ್ಯಕ್ತನಾಗುವನು ಎಂದು ಸೂತ್ರಕಾರರು ಸಿದ್ಧಾಂತಮಾಡಿರುತ್ತಾರೆ. ಆದುದರಿಂದ ಪರಮಾತ್ಮನು ಅವ್ಯಕ್ತನೆಂದರೆ; 1. ಲಕ್ಷ್ಮ್ಯಾದಿಗಳಿಗೂ ಕೂಡ ಗೋಚರವಾಗದಷ್ಟು ಸೂಕ್ಷ್ಮನಾಗಿರುವನೆಂದೂ, 2. ತನ್ನ ಪ್ರಸಾದಮಾತ್ರದಿಂದಲೇ ಭಕ್ತರಿಗೆ ಮತ್ತು ಲಕ್ಷ್ಮ್ಯಾದಿ ದೇವತೆಗಳಿಗೆ ಗೋಚರವಾಗುವನೇ ಹೊರತು ಘಟಪಟಗಳಂತೆ ಸಾಮಾನ್ಯವಾಗಿ ವ್ಯಕ್ತವಾಗುವ ಚೇತನನಲ್ಲವೆಂದೂ, 3. ತನ್ನ ಪ್ರಸಾದದಿಂದ ವ್ಯಕ್ತನಾದರೂ ಸಾಕಲ್ಯೇನ ವ್ಯಕ್ತನಾಗುವುದಿಲ್ಲವೆಂದೂ, 4. ಪ್ರಾಕೃತವ್ಯಕ್ತ ಪದಾರ್ಥಗಳಿಗಿಂತ ಅತಿ ವಿಲಕ್ಷಣವಾದ ಸ್ವರೂಪಉಳ್ಳವನೆಂದೂ ಅರ್ಥವನ್ನು ಮಾಡಬೇಕು.

ಸ್ವಭಾವತಃ ಅವ್ಯಕ್ತ ಸ್ವರೂಪನಾದ ಪರಮಾತ್ಮನಿಗೆ ವ್ಯಕ್ತಿಯು ತನ್ನ ಅಚಿಂತ್ಯ ಶಕ್ತಿಯಿಂದಲೇ ಆಗುವುದೇ ಹೊರತು ಮತ್ತೊಬ್ಬನ ಬಲಾತ್ಕಾರದಿಂದ ಆಗಲಾರದು ಮತ್ತು ಸರ್ವಗತನಾದರೂ ಪರಮಾತ್ಮನು ತನ್ನ ಅಚಿಂತ್ಯಶಕ್ತಿಯಿಂದಲೇ ಅವ್ಯಕ್ತನಾಗಿರುವನು. ಮಹಾಭಾರತದಲ್ಲಿ ಶ್ರೀಕೃಷ್ಣನೇ ತನ್ನ ಈ ಅದ್ಭುತ ಸಾಮರ್ಥ್ಯವನ್ನು ಹೇಳಿಕೊಂಡಿರುತ್ತಾನೆ:—

**ಏತತ್ತ್ವಯಾ ನ ವಿಜ್ಞೇಯಂ ರೂಪವಾನಿತಿ ದೃಶ್ಯತೇ।**
**ಇಚ್ಛನ್ ಮುಹೂರ್ತಾನ್ನಶ್ಯೇಯಮೀಶೋಽಹಂ ಜಗತಾಂ ಗುರುಃ॥**

ಪೂರ್ಣನು. ಮತ್ತು ಅವನ ಸ್ವರೂಪವು ಸರ್ವಪ್ರಕಾರದಿಂದಲೂ ವಿಕಾರ ರಹಿತವು ಎಂದು ಹೇಳಲ್ಪಡುತ್ತದೆ. ಈ ರೀತಿಯಾಗಿ, ಜೀವನು ನಿತ್ಯನು ; ಆದರೂ ಪರಮಾತ್ಮನ ಸಾಮ್ಯವು ಇಲ್ಲ ಎಂದು ತಿಳಿದು, ಜೀವನು ಅಸ್ವತಂತ್ರನಾದರೂ ಸ್ವರೂಪತಃ ನಿತ್ಯನಾದುದರಿಂದ, ನೀನು ಈಪರಿದೃಶ್ಯಮಾನರಾದ ಯೋಧರುಗಳು ಸರ್ವಪ್ರಕಾರದಿಂದಲೂ ನಾಶಹೊಂದುವರೆಂದು ಭ್ರಮಿಸಿ ಶೋಕಿಸಬೇಡ ಎಂದು ಅರ್ಥವು.

ಜೀವನು ಸ್ವರೂಪತಃ ನಿತ್ಯನು ಆದರೆ ದೇಹನಾಶರೂಪವಾದ ಮರಣವನ್ನೂ, ದೇಹಸಂಯೋಗರೂಪವಾದ ಜನ್ಮವನ್ನೂ ಉಳ್ಳವನೆಂದೂ, ಪರಮಾತ್ಮನು ಸರ್ವಪ್ರಕಾರದಿಂದಲೂ ಜನನಮರಣರಹಿತನೆಂದೂ ಶ್ರೀಕೃಷ್ಣನು ಮಂತ್ರವರ್ಣ (ಕಾಠಕೋಪನಿಷತ್ತು) ವಚನೋದಾಹರಣಪೂರ್ವಕವಾಗಿ ಸಮರ್ಥಿಸುತ್ತಾನೆ:—

(6) **ನ ಜಾಯತೇ ಮ್ರಿಯತೇ ವಾ ಕದಾಚಿನ್ನಾಯಂ ಭೂತ್ವಾ**
**ಭವಿತಾ ವಾ ನ ಭೂಯಃ ।**
**ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ**
**ಹನ್ಯಮಾನೇ ಶರೀರೇ॥**
(2. 20.)

ಈ ಶ್ಲೋಕವು ಜೀವಸ್ವರೂಪವನ್ನೂ ಪರಮಾತ್ಮಸ್ವರೂಪವನ್ನೂ ವಿಂಗಡಿಸಿ ತಿಳಿಸಿಕೊಡುವುದು. ಜೀವಪರವಾದ ಅರ್ಥವೇನೆಂದರೆ:—ಎಲೈ ಪಾರ್ಥನೇ! ಈ ಜೀವನು ಸ್ವರೂಪೇಣ ಯಾವಾಗಲೂ ಉತ್ಪನ್ನನಾಗುವುದಿಲ್ಲ. ಸ್ವರೂಪೇಣ ಯಾವಾಗಲೂ ಮರಣವನ್ನು ಹೊಂದುವುದಿಲ್ಲ. ಹಾಗಿದ್ದರೂ, ಭೂತ್ವಾಭವಿತವಾ ನ= ಪರಮಾತ್ಮನು ಪೂರ್ವದಲ್ಲಿಯೇ ಸಿದ್ಧವಾದ ರಾಮಕೃಷ್ಣಾದಿ ರೂಪಗಳನ್ನು ತನ್ನ ಅಚಿಂತ್ಯ ಶಕ್ತಿಯಿಂದ ಈಗ ಆವಿರ್ಭವಿಸಿದನೋ ಎಂಬಂತೆ ತೋರಿಸುವಂತೆ ಜೀವನು ಅಭಿವ್ಯಕ್ತನಾಗುವನಲ್ಲ. (ಜೀವನಿಗೆ ಒಂದು ವಿಧವಾದ ಉತ್ಪತ್ತಿಯೇ ಉಂಟು ಎಂದು ತಾತ್ಪರ್ಯವು.) ಜೀವ ಸ್ವರೂಪಕ್ಕೆ ಜನನ ಮರಣಗಳು ಯಾತಕ್ಕೆ ಇಲ್ಲವೆಂದರೆ:—ಜೀವನು ಸ್ವರೂಪತಃ ಉತ್ಪತ್ತಿ ಶೂನ್ಯನಾದ, ಸ್ವರೂಪತಃ ನಾಶಶೂನ್ಯನಾದ, ಶಶ್ವದೇಕಪ್ರಕಾರನಾದ ಭಗವಂತನ ಪ್ರತಿಬಿಂಬ

ನಾಗಿರುವನು. (ಹೀಗಿದ್ದರೂ) ಜೀವನು ಪುರಾಣನು =ಶರೀರದಿಂದ ಶರೀರಾಂತರವನ್ನು ಹೊಂದುತ್ತಲೇ ಇರುವನು. ಆದರೆ ಇವನ ಶರೀರವು ನಾಶವನ್ನು ಹೊಂದಿದರೂ ಜೀವನು ಸ್ವರೂಪೇಣ ನಾಶವನ್ನು ಹೊಂದುವುದಿಲ್ಲ.

ಪರಮಾತ್ಮಪರವಾದ ಅರ್ಥವೇನೆಂದರೆ :—ಎಲೈ ಅರ್ಜುನನೇ! ಅಯಂ ನಾ = ಸರ್ವಗತನಾದ ಪರಮಪುರುಷನು, ಯಾವಾಗಲೂ ಹುಟ್ಟುವುದಿಲ್ಲ. ಮರಣವನ್ನೂ ಹೊಂದುವುದಿಲ್ಲ. ಹಾಗಿದ್ದರೆ ರಾಮನು ಅವತರಿಸಿದನು, ಕೃಷ್ಣನು ಹುಟ್ಟಿದನು ಇತ್ಯಾದಿ ಉತ್ಪತ್ತಿವಿನಾಶಪ್ರಸಿದ್ಧಿಯು ಇರುವುದಕ್ಕೆ ಕಾರಣವೇನೆಂದರೆ, ಈ ಪರಮಾತ್ಮನು ರಾಮಕೃಷ್ಣಾದಿ ರೂಪಗಳಿಂದ ಸರ್ವದಾ ಇರುವವನಾಗಿಯೇ ಕಾಲವಿಶೇಷದಲ್ಲಿ ತನ್ನ ಅಚಿಂತ್ಯಶಕ್ತಿಯಿಂದ ಈಗ ಅವತರಿಸಿದನು ಇತ್ಯಾದಿ ಪ್ರತೀತಿಗಳಿಗೆ ವಿಷಯನಾಗುವನು. ಅಷ್ಟೇ ವಿನಾ, ನಭೂಯಃ =ಪ್ರಕಾರಾಂತರದಿಂದ ದೇಹಯೋಗ ವಿಯೋಗ ನಿಮಿತ್ತಕವಾದ ಜನಿಮೃತಿಗಳು ಪರಮಾತ್ಮನಿಗಿರುವುದಿಲ್ಲ.* ಈ ಜೀವನಾದರೋ ಅಜನು, ನಿತ್ಯನು ಎಂದರೆ ಉತ್ಪತ್ತಿ ನಾಶರಹಿತನು; ಮತ್ತು ಶಾಶ್ವತನು ಎಂದರೆ ಸರ್ವದಾ ಭಗವತ್ಪಾರ

---

* ಬ್ರಹ್ಮಾಂಡ ಪುರಾಣದ ಬ್ರಹ್ಮನಾರದಸಂವಾದದಿಂದಲೂ ಪರಮಾತ್ಮನಿಗೆ ಪ್ರಾಕೃತ ದೇಹವಿಯೋಗಾದಿಗಳು ಇಲ್ಲವೆಂದು ವಿಶದವಾಗುವುದು :—

**ನಾರದ ಉವಾಚ :—**

**ನಿರ್ದೋಷಶ್ಚೇತ್ಕಥಂ ವಿಷ್ಣುರ್ಮಾನುಷೇಷೂದಪದ್ಯತ।**

**ಬ್ರಹ್ಮೋವಾಚ :—**

**ಸ್ತ್ರೀಪುಂಮಲಾಭಿಯೋಗಾತ್ಮದೇಹೋ ವಿಷ್ಣೋರ್ನಜಾಯತೇ ॥**
**ಕಿಂತು ನಿರ್ದೋಷಚೈತನ್ಯಸುಖಾಂ ನಿತ್ಯಾಂ ಸ್ವಕಾಂ ತನುಂ।**
**ಪ್ರಕಾಶಯತಿ ಸೈವೇಯಂ ಜನಿರ್ವಿಷ್ಣೋರ್ನಚಾಪರಾ॥**
**ಪ್ರತ್ಯಕ್ಷತ್ವಂ ಹರೇರ್ಜನ್ಮ ನ ವಿಕಾರಃ ಕಥಂಚನ।**

**ಅರ್ಥವು:—** ವಿಷ್ಣುವು ನಿರ್ದೋಷನಾದರೆ ಮನುಷ್ಯರಲ್ಲಿ ಹುಟ್ಟಿದುದು ಹೇಗೆ? ಎಂದು ನಾರದರ ಪ್ರಶ್ನೆಯು. ಬ್ರಹ್ಮದೇವರು ಹೇಳುತ್ತಾರೆ:—ಸ್ತ್ರೀಪುರುಷರ ಶುಕ್ಲಶೋಣಿತಾದಿ ರೂಪವಾದ ಕಶ್ಮಲ ಸಂಬಂಧದಿಂದ ಉಂಟಾಗುವ ದೇಹವು ವಿಷ್ಣುವಿಗೆ ಹುಟ್ಟುವುದಿಲ್ಲ. ಮತ್ತೇನೆಂದರೆ, ನಿರ್ದೋಷಜ್ಞಾನಾನಂದಾತ್ಮಕವಾದ ನಿತ್ಯವಾದ ತನ್ನ ಸ್ವರೂಪಭೂತವಾದ ದೇಹವನ್ನು

ತಂತ್ರ್ಯರೂಪನಿಜಸ್ವಭಾವವುಳ್ಳವನು. ದೇಹದಿಂದ ದೇಹಾಂತರವನ್ನು ಕುರಿತು ಹೋಗುತ್ತಾ ಇರುವವನು. ಶರೀರನಾಶವನ್ನು ಹೊಂದಿದರೂ ಸ್ವರೂಪತಃ ನಾಶವನ್ನು ಹೊಂದುವುದಿಲ್ಲ.

ಪರಮಾತ್ಮನ ಸ್ವಾತಂತ್ರ್ಯ ಅಚಿಂತ್ಯ ಶಕ್ತಿಗಳನ್ನೂ, ಜೀವನಿತ್ಯತ್ವ ಪಾರತಂತ್ರ್ಯಗಳನ್ನೂ ತತ್ತ್ವೋಪಸಂಹಾರರೂಪವಾದ ಎರಡು ಶ್ಲೋಕಗಳಲ್ಲಿ ಶ್ರೀಕೃಷ್ಣನು ವಿಶದವಾಗಿ ನಿರೂಪಿಸಿರುತ್ತಾನೆ:—

**(7) ಆಶ್ಚರ್ಯವತ್ಪಶ್ಯತಿ ಕಶ್ಚಿದೇನಮಾಶ್ಚರ್ಯವದ್ವದತಿ**
**ತಥೈವ ಚಾನ್ಯಃ।**
**ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಽಪ್ಯೇನಂ ವೇದ ನ**
**ಚೈವ ಕಶ್ಚಿತ್॥**
—(2. 29.)

**ಕಶ್ಚಿತ್** = ಸಾತ್ವಿಕಸ್ವಭಾವಯುಕ್ತನಾದ ಜ್ಞಾನಿಯು ಪರಮಾತ್ಮನನ್ನು ಸರ್ವಸ್ವತಂತ್ರನಾದ ಅದ್ಭುತವಸ್ತುವನ್ನಾಗಿ ನೋಡುತ್ತಾನೆ. ಮತ್ತೊಬ್ಬ ಸಾತ್ವಿಕಾಧಿಕಾರಿಯು ಪರಮಾತ್ಮನೇ ಸಮಾಧಿಕರಹಿತನಾದ ಅದ್ಭುತವಸ್ತುವೆಂದು (ಶಿಷ್ಯರಿಗೆ) ಹೇಳುತ್ತಾನೆ. ಮತ್ತೊಬ್ಬ ಸಾತ್ವಿಕಪುರುಷನು ಸದೃಶಾಂತರವಸ್ತುರಹಿತನಾದ ಪರಮಾತ್ಮನೇ ಅದ್ಭುತವಾದ ಶ್ರೋತವ್ಯವಸ್ತುವೆಂದು ಶ್ರವಣಮಾಡುತ್ತಾನೆ. ಹೀಗೆ ನೋಡಿಯೂ, ಹೇಳಿಯೂ, ಕೇಳಿಯೂ ಕೂಡ ಅದ್ಭುತನಾದ ಪರಮಾತ್ಮನನ್ನು ಯಾವನೂ ಸಾಕಲ್ಯವಾಗಿ ತಿಳಿಯಲಾರನು.

ಜೀವನು ಸ್ವರೂಪತಃ ನಿತ್ಯನಾದರೂ ಅಚಿಂತ್ಯಾದ್ಭುತ ಶಕ್ತಿಯಿಂದ ಪೂರ್ಣನಾದ ಶ್ರೀಪರಮಾತ್ಮನು ಸ್ವಾಭಾವಿಕಧರ್ಮವನ್ನು ಯಾತಕ್ಕೆ ನಾಶಮಾಡಬಾರದು? ಅಥವಾ ಜೀವನಿತ್ಯತ್ವವು ಜೀವನಸ್ವಾಭಾವಿಕಧರ್ಮವಾದ್ದರಿಂದ, ಸ್ವಾಭಾವಿಕಧರ್ಮವಿಷಯದಲ್ಲಿ ಶ್ರೀಪರಮಾತ್ಮನು ಮಾಡುವ ಉಪಕಾರವೇನು? ಜೀವನಿಗೆ ತನ್ನ ಸ್ವರೂಪಧರ್ಮಸದ್ಭಾವದಲ್ಲಿ ಸ್ವಾತಂತ್ರ್ಯವು ಇರಬಹು

---

ಅಭಿವ್ಯಕ್ತಿಪಡಿಸುತ್ತಾನೆ. ಅದೇ ವಿಷ್ಣುವಿಗೆ ಉತ್ಪತ್ತಿಯು. ದೇಹ ಪ್ರಾಪ್ತಿರೂಪವಾದ ಬೇರೆ ಉತ್ಪತ್ತಿಯು ಇಲ್ಲ. ಲೋಕದ ಜನರಿಗೆ ದೃಗ್ಗೋಚರವಾಗುವುದೇ ಪರಮಾತ್ಮನಿಗೆ ಜನನವು; ಪಾಮರರ ದೃಷ್ಟಿಗೆ ಕಾಣದಂತೆ ಅಂತರ್ಧಾನವನ್ನು ಹೊಂದುವುದೇ ಮರಣವು. ಇದಕ್ಕಿಂತ ಅತಿರಿಕ್ತವಾಗಿ ಯಾವ ವಿಧವಾದ ವಿಕಾರವೂ ಯಾವ ರೀತಿಯಿಂದಲೂ ಪರಮಾತ್ಮನಿಗಿಲ್ಲ.

ದಲ್ಲವೇ? ಎಂಬ ಪ್ರಶ್ನೆಗಳಿಗೆ ಅಚಿಂತ್ಯಾದ್ಭುತಶಕ್ತ್ಯುಪೇತನಾದ ಶ್ರೀಪರಮಾತ್ಮನ ಪ್ರಸಾದವು ಸ್ವಾಭಾವಿಕಧರ್ಮರಕ್ಷಣೆಯಲ್ಲಿಯೂ ಅವಶ್ಯಕವು, ಮತ್ತು ಜೀವನು ಸರ್ವದಾ ತನ್ನ ಸ್ವರೂಪಸತ್ತಾದಿವಿಷಯದಲ್ಲಿಯೂ ಪರತಂತ್ರನು ಎಂದು ದ್ರವ್ಯಂ ಕರ್ಮಚ ಕಾಲಶ್ಚ ಸ್ವಭಾವೋ ಜೀವ ಏವಚ । ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ ಇತ್ಯಾದಿ ಪ್ರಮಾಣಪ್ರಮಿತವಾದ ಅಭಿಪ್ರಾಯವನ್ನೇ ಉತ್ತರರೂಪವಾಗಿ ಶ್ರೀಕೃಷ್ಣನು ಹೇಳುತ್ತಾನೆ:—

(8) **ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।**
**ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥**

(2. 30.)

ಎಲೈ ಪಾರ್ಥನೆ! ಸಕಲರ ದೇಹದಲ್ಲಿಯೂ (ಸ್ಥೂಲ, ಸೂಕ್ಷ್ಮ, ಲಿಂಗ ದೇಹದಲ್ಲಿ ಮತ್ತು ಚಿದ್ರೂಪಸ್ವರೂಪದೇಹದಲ್ಲಿಯೂ ಕೂಡ) ಶ್ರೀ ಪರಮಾತ್ಮನು ರಕ್ಷಕನಾಗಿ ಇರುತ್ತಾನೆ. ಆದುದರಿಂದ ಜೀವನು ನಿತ್ಯನೂ ಅವಧ್ಯನು. ಈ ರೀತಿ ಸ್ವರೂಪೇಣ ನಿತ್ಯರಾದ ಜೀವರ ನಿತ್ಯತ್ವರೂಪಸ್ವಾಭಾವಿಕಧರ್ಮಕ್ಕೆ ರಕ್ಷಕನಾಗಿ ದೇಹಿಗಳಲ್ಲಿ ಶ್ರೀ ಪರಮಾತ್ಮನು ಸ್ಥಿತನಾಗಿರುವುದರಿಂದ* ಶಸ್ತ್ರಾದಿಗಳಿಂದ ಸ್ವರೂಪೇಣ ಅವಧ್ಯರಾದ (ಭೀಷ್ಮಾದಿ) ಜೀವರುಗಳನ್ನು ಕುರಿತು ನೀನು ಶೋಕಿಸಬೇಡ.

3. ಇಷ್ಟು ಉಪನ್ಯಾಸದಿಂದ ಜೀವಸ್ವರೂಪನಾಶಪ್ರಯುಕ್ತವಾದ ಶೋಕವು ಅವಿವೇಕಮೂಲಕವು; ಜೀವನಿಗೆ ಸ್ವರೂಪೇಣನಾಶವು ಇರುವುದಿಲ್ಲ ಎಂದು ಸಿದ್ಧವಾಯಿತು. ಹಾಗಾದರೂ ಮತ್ತೊಂದು ಶಂಕೆಯು ಪ್ರಸಕ್ತವಾಗುವುದು. ಭೀಷ್ಮಾದಿಯೋಧರುಗಳಿಗೆ ಅತಿಪ್ರಿಯವಾದ ದೇಹದ ನಾಶವು

---

* ನಾಲ್ಕು ವಿಧವಾದ ಶರೀರಗಳಲ್ಲಿಯೂ ಪರಮಾತ್ಮನು ರಕ್ಷಕನಾಗಿ ಸ್ಥಿತನಾಗಿರುವನು. ಆದರೆ ಸ್ವರೂಪದೇಹದಲ್ಲಿ **ಸರ್ವದಾ** ರಕ್ಷಕನಾಗಿ ಸ್ಥಿತನಾಗಿರುವನು. ಇತರ ಶರೀರಗಳಲ್ಲಿ ಆಯುಷ್ಯಾನುಗುಣವಾಗಿ ಆಯಾಯಶರೀರಗಳಲ್ಲಿ ಪರಮಾತ್ಮನು ಇದ್ದು ಆಯುಷ್ಯತೀರಿದನಂತರ ಆ ಶರೀರಗಳನ್ನು ಬಿಡುವನು. ಆಗ ಅವು ನಾಶವನ್ನು ಹೊಂದುವುವು. ಸ್ವರೂಪದೇಹದಲ್ಲಿ ಯಾದರೋ ಅನಾದಿಕಾಲದಿಂದಲೂ ಪರಮಾತ್ಮನು ಇರುವನು ಮತ್ತು ಮುಂದೆ ಯಾವಾಗಲೂ ಪರಿತ್ಯಜಿಸುವದಿಲ್ಲ. ಆದುದರಿಂದ ಜೀವಸ್ವರೂಪವು ನಿತ್ಯವು. ಈ ವಿಷಯಗಳೆಲ್ಲವೂ ಛಾಂದೋಗ್ಯ ಶ್ರುತಿಯಲ್ಲಿ ವ್ಯಕ್ತವಾಗಿರುವುವು.

ಪ್ರಾಪ್ತವಾಗುವುದು. ದೇಹನಾಶಜನಿತವಾದ ಮಹಾದುಃಖವು ಭೀಷ್ಮಾದಿಸ್ವ ಜನರಿಗೆ ಗಾಂಡೀವಧನುರ್ಮುಕ್ತವಾದ ತೀಕ್ಷ್ಣಸಾರಾಚಗಳಿಂದ ಯುದ್ಧಮಾಡಿದರೆ ಪ್ರಾಪ್ತವಾಗುವುದಲ್ಲ ಎಂದು ವಿಷಾದದಿಂದ ನಾನು ಯುದ್ಧಮಾಡಲಾರೆನು ಎಂಬ ಅರ್ಜುನನ ಶಂಕೆಗೆ ಶ್ರೀಕೃಷ್ಣನು ಉತ್ತರವನ್ನು ಹೇಳುತ್ತಾನೆ:—

**(1) ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ।**
**ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥** —(2. 13.)

ಎಲೈ ಅರ್ಜುನನೇ! ದೇಹಸಹಿತನಾದ ಈ ಜೀವನಿಗೆ ಈ ದೇಹದಲ್ಲಿ ಕೌಮಾರಾವಸ್ಥೆಯು ಹೋಗಿ ಯೌವನಾವಸ್ಥೆಯೂ ಯೌವನಾವಸ್ಥೆಯು ಹೋಗಿ ವಾರ್ಧಿಕ್ಯಾವಸ್ಥೆಯೂ ಬರುವಂತೆ ಈ ಪರಿದೃಶ್ಯಮಾನವಾದ ದೇಹವು ನಾಶವಾದ ನಂತರ ನಿಯಮೇನ ಮತ್ತೊಂದು ದೇಹವು (ಮುಕ್ತಿಪರ್ಯಂತವೂ) ಬರುತ್ತಲೇ ಇರುವುದು. (ಜೀರ್ಣವಾದ ದೇಹವು ಹೋಗಿ ಪುನಃ ಉತ್ತಮವಾದ ನೂತನ ದೇಹವು ಪ್ರಾಪ್ತವಾಗುವುದೆಂದು ತಿಳಿಯುವ) ವಿವೇಕಶಾಲಿಯಾದ ಪಂಡಿತನು ಬಂಧುಗಳ ದೇಹನಾಶವನ್ನು ಕುರಿತು ವಿಪರೀತಜ್ಞಾನವನ್ನು ಹೊಂದಿ ಶೋಕಪಡುವುದಿಲ್ಲ.

ಒಂದೆರಡು ರೂಪಾಯಿಗಳನ್ನು ಕೊಡುವುದರಿಂದ ನೂರುರೂಪಾಯಿ ಬಾಳುವ ದಿವ್ಯಪೀತಾಂಬರವು ದೊರೆಯುವುದಾದರೆ ಯಾರಾದರೂ ವಿಷಾದವನ್ನು ಹೊಂದುವರೇ? ಹೀಗೆಯೇ ಭೀಷ್ಮಾದಿಗಳಿಗೆ ಕ್ಷತ್ರಿಯೋಚಿತವಾದ ಯುದ್ಧದಲ್ಲಿ ಪ್ರಾಣತ್ಯಾಗದಿಂದ ಜನ್ಮಾಂತರದಲ್ಲಿ ಉತ್ತಮದೇಹವು ಪ್ರಾಪ್ತವಾಗುವುದರಿಂದ ಅವರ ದೇಹನಾಶವು ವಿವೇಕಿಗಳಿಂದ ಶೋಕಾರ್ಹವಲ್ಲವೆಂದು ಶ್ರೀಕೃಷ್ಣನ ವಾಕ್ಯದ ತಾತ್ಪರ್ಯವು.

ಶ್ಲೋಕಾಂತರದಲ್ಲಿಯೂ ಜೀವನಿಗೆ ನೂತನದೇಹಾಂತರಪ್ರಾಪ್ತಿಯನ್ನು ದೃಷ್ಟಾಂತದ್ವಾರಾ ಶ್ರೀಕೃಷ್ಣನು ನಿರೂಪಿಸುತ್ತಾನೆ:—

**(2) ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ।**
**ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥**
—(2.22.)

ಜೀರ್ಣವಾದ ವಸ್ತ್ರಗಳನ್ನು ಪರಿತ್ಯಾಗಮಾಡಿ ಮನುಷ್ಯನು ಬೇರೆ ನೂತನ ವಸ್ತ್ರಗಳನ್ನು ಧಾರಣಾರ್ಥವಾಗಿ ಸ್ವೀಕರಿಸುವಂತೆ ಹಾಗೆಯೇ ಜೀವನು (ಆಯುಃ ಕ್ಷಯಾನಂತರ) ಹಳೆಯ ಶರೀರಗಳನ್ನು ಬಿಟ್ಟು ಬೇರೇ ನೂತನ ದೇಹಗಳನ್ನು ಹೊಂದುತ್ತಲೇ ಇರುವನು.

ಧಾರ್ತರಾಷ್ಟ್ರರ ದೇಹನಾಶರೂಪವಾದ ಮರಣದಿಂದ ವಿಷಾದಹೊಂದುವುದು ಅನವಶ್ಯಕವೆಂಬಲ್ಲಿ ಶ್ರೀಕೃಷ್ಣನು ಮತ್ತೊಂದು ಕಾರಣವನ್ನು ನಿರೂಪಿಸುತ್ತಾನೆ :—

(3) **ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಂ।**
**ತಥಾಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ ॥**
**ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ।**
**ತಸ್ಮಾದಪರಿಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ ॥**
**ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ।**
**ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥**

—(2.26-28.)

ಎಲೈ ಪಾರ್ಥನೇ! ಜೀವನು ನಿಯಮೇನ ದೇಹಯೋಗರೂಪಜನನವನ್ನೂ, ದೇಹವಿಯೋಗರೂಪಮರಣವನ್ನೂ ಹೊಂದಿಯೇ ಹೊಂದುವನೆಂದು ತಿಳಿದವನಾದರೂ ನೀನು ಜೀವನನ್ನು ಕುರಿತು ಶೋಕಿಸುವುದಕ್ಕೆ ಕಾರಣವಿರುವುದಿಲ್ಲ. ಯಾತಕ್ಕೆಂದರೆ ಉತ್ಪನ್ನನಾದವನಿಗೆ ಮರಣವು ನಿಶ್ಚಯವು. ಮತ್ತು ಮೃತನಾದವನಿಗೆ ಪುನರ್ಜನ್ಮವು ನಿಯತವು (ಆಮುಕ್ತಿ.) ಆದುದರಿಂದ ಪರಿಹರಿಸಿಕೊಳ್ಳುವುದಕ್ಕೆ ಅಶಕ್ಯವಾದ, ನಿಯತವಾಗಿ ಪ್ರಾಪ್ತವಾಗುವ ಜನನಮರಣಗಳನ್ನು ಕುರಿತು ನೀನು ಶೋಕಿಸಬೇಡ.

ಎಲೈ ಭಾರತ! (ಭರತಕುಲೋತ್ಪನ್ನನೇ!) ಸಕಲ ಜೀವಶರೀರಗಳೂ ಮೂಲಪ್ರಕೃತಿರೂಪವಾದ ಮೂಲಕಾರಣದಿಂದ ಉತ್ಪನ್ನವಾದುವುಗಳು. ಜನ್ಮಮರಣಗಳ ಮಧ್ಯಕಾಲವಾದ ಸ್ಥಿತಿಕಾಲದಲ್ಲಿ ಸರ್ವರ ದೃಷ್ಟಿಗೂ ಸ್ಪಷ್ಟವಾಗಿ ಕಾಣಿಸಲ್ಪಡತಕ್ಕವುಗಳು. ಪರಿಣಾಮದಲ್ಲಿ ಅವ್ಯಕ್ತನಾಮಕ ಮೂಲಪ್ರಕೃತಿಯಲ್ಲಿ ಲಯವನ್ನು ಹೊಂದುತ್ತವೆ. ಹೀಗೆ ಜೀವಾತ್ಮರ ತತ್ತ್ವವನ್ನು ಮತ್ತು

ಜೀವರುಗಳ ದೇಹಸ್ವರೂಪವನ್ನೂ ವಿಮರ್ಶಿಸಿ ತಿಳಿದ ಮೇಲೆ ಯಾತಕ್ಕೆ ವಿಷಾದ ಪಡಬೇಕು ?

ಜೀವರುಗಳು ಅಸ್ವತಂತ್ರರು. ದೇಹ ನಾಶವು ಅಪರಿಹಾರ್ಯವು. ಅಸ್ವತಂತ್ರನಾದ ಜೀವನಿಗೆ ಸ್ವತಂತ್ರಪುರುಷನಿಂದ ನಿಯತವಾಗಿ ಜನಿಮೃತಿಗಳು ಬರುತ್ತಿರುವುವು. ನಿನ್ನ ಅಧೀನವಲ್ಲದ ವಿಷಯದಲ್ಲಿ ನೀನು ಯಾತಕ್ಕೆ ಪರಿತಪಿಸುತ್ತೀ? ಎಂದು ಶ್ರೀಕೃಷ್ಣನ ವಾಕ್ಯದ ತಾತ್ಪರ್ಯವು.

ಹುಟ್ಟಿದವನಿಗೆ ಮರಣವು ಎಂದಾದರೂ ಅವರ್ಜನೀಯವು. ಇನ್ನೂ ವಿಚಾರಮಾಡಿದರೆ ಧರ್ಮಯುದ್ಧದಲ್ಲಿ ಮರಣದಿಂದ ಭೀಷ್ಮಾದಿಗಳಿಗೆ ಉತ್ತಮದೇಹ ಲಾಭವೇ ಬರುವುದರಿಂದ ಅವರ ದೇಹನಾಶವನ್ನು ಕುರಿತು ವಿಷಾದಪಡುವುದು ನ್ಯಾಯವಲ್ಲವೆಂದು ಶ್ರೀಕೃಷ್ಣನು ಹೇಳಿದನು. ಆದರೆ ದುರ್ಬುದ್ಧಿಗಳಾದ ಧಾರ್ತರಾಷ್ಟ್ರರಿಗೆ ಮರಣಾನಂತರದಲ್ಲಿ ಯಾತನಾದೇಹಪ್ರಾಪ್ತಿಯು ಸಂಭಾವಿತವು. ಉತ್ತಮ ಜನ್ಮಾಂತರಪ್ರಾಪ್ತಿಯು ಅಧರ್ಮಶೀಲರಿಗೆ ಬರಲಾರದು. ಆದುದರಿಂದ ಅವರುಗಳು ಸ್ವಕರ್ಮಾರ್ಜಿತವಾದ ಲೋಕಗಳನ್ನು ಕಾಲಪ್ರಾಪ್ತವಾದ ಮರಣಾನಂತರ ಹೊಂದಬಹುದು. ನಾನು ಅವರನ್ನು ಸಂಹಾರಮಾಡಿ, ಅವರುಗಳಿಗೆ ದುಃಖವನ್ನು ಉಂಟುಮಾಡುವುದು ಸರಿಯಲ್ಲವೆಂಬ ಅರ್ಜುನನ ಶಂಕೆಗೆ ಶ್ರೀಕೃಷ್ಣನು ಉತ್ತರವನ್ನು ಹೇಳುತ್ತಾನೆ:—

(4) **ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**
**ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥**
—(2. 16.)

ದುಷ್ಕರ್ಮಕ್ಕೆ ಸುಖವು ಇರುವುದಿಲ್ಲ, ಸತ್ಕರ್ಮಕ್ಕೆ ದುಃಖವು ಇರುವುದಿಲ್ಲ. ಈ ಎರಡು ವಿಷಯಗಳ ನಿರ್ಣಯವು ತತ್ವದರ್ಶಿಗಳಾದ ಜ್ಞಾನಿಗಳಿಂದ ನಿಶ್ಚಿತವಾಗಿರುವುದು. *

---

* ಈ ಶ್ಲೋಕಕ್ಕೆ ಪೂರ್ವದಲ್ಲಿ ಒಂದು ಅರ್ಥವು ನಿರೂಪಿತವಾಗಿತ್ತು. ಈಗ " ಸತ್" ಶಬ್ದಕ್ಕೆ ಸಾಧುಕರ್ಮವೆಂದೂ " ಅಸತ್" ಶಬ್ದಕ್ಕೆ ದುಷ್ಕರ್ಮವೆಂದೂ ಅರ್ಥವು ಮಾಡಲ್ಪಟ್ಟಿರುವುದು. ಗೀತೆಯಲ್ಲಿಯೇ ಶ್ರೀಕೃಷ್ಣನು " ಪ್ರಶಸ್ತೇಕರ್ಮಣಿ ತಥಾಸಚ್ಛಬ್ದಃಪಾರ್ಥ ಯುಜ್ಯತೇ" ಎಂಬಲ್ಲಿ ಈ ಅರ್ಥವನ್ನು ನಿರೂಪಿಸಿರುವನು. ಭಾರತವು ದಶಾರ್ಥಗಳಿಂದ ಸಹಿತವಾಗಿ ಶ್ರೀಪರಮಾತ್ಮನ ಉತ್ಕ

ನಾರಾಯಣದ್ವೇಷಿಗಳಾದ, ಅತಏವ ಭೂಭಾರರೂಪರಾದ ಮಹಾದೈತ್ಯರು ಸಂಹೃತರಾಗಿ ದುರ್ದೇಹಗಳನ್ನು ಹೊಂದಿ ದುಃಖಪಡುವುದು ಅವರ್ಜನೀಯವು; ಆದುದರಿಂದ ನಾನು ಯಾತಕ್ಕೆ ಅವರನ್ನು ಸಂಹಾರಮಾಡಬೇಕೆಂದು ನೀನು ಪರಿತಪಿಸಬೇಕಾಗಿಲ್ಲ. ಮತ್ತು ಧರ್ಮಯುದ್ಧದಲ್ಲಿ ದುರ್ಜನಹನನವೆಂಬ ಸತ್ಕರ್ಮದಿಂದ ಮೋಕ್ಷಾದಿ ಸುಖಪ್ರಾಪ್ತಿಯು ಸಿದ್ಧವಾಗಿರುವುದರಿಂದ ಸ್ವಜನರನ್ನು ನಾನು ಹೇಗೆ ಸಂಹಾರಮಾಡಲೆಂದು ನೀನು ವಿಷಾದಹೊಂದಲು ಕಾರಣವಿಲ್ಲವೆಂದು ಶ್ರೀಕೃಷ್ಣನ ಭಾವವು. ದುರ್ಜನರಿಗೆ ದುರ್ದೇಹಪ್ರಾಪ್ತಿಯು ವಿಷಾದಕಾರಣವಲ್ಲ. ಮತ್ತು ಕ್ಷತ್ರಿಯನಿಗೆ ಧರ್ಮಯುದ್ಧದಲ್ಲಿ ದುರ್ಜನಹನನವು ದುಃಖಕರವಲ್ಲ.

4. ಆದರೂ ಮತ್ತೊಂದು ಪ್ರಬಲವಾದ ವಿಷಾದಕಾರಣವನ್ನು ಅರ್ಜುನನು ನಿರೂಪಿಸಬಹುದು. ಭೀಷ್ಮಾದಿಗಳು ಸ್ವರೂಪೇಣ ನಿತ್ಯರೇ. ಅವರು ದೇಹ ನಾಶವಾದನಂತರವೂ ಉತ್ತಮದೇಹಾಂತರವನ್ನು ಹೊಂದಬಹುದು. ದುರ್ಯೋಧನಾದಿಗಳು ದುಷ್ಟರಾದುದರಿಂದ ದುರ್ದೇಹವನ್ನು ಹೊಂದಿದರೂ ದುಃಖಪಡಬೇಕಾದುದಿಲ್ಲ. ಹೀಗಿದ್ದರೂ, ಸ್ವಜನರಾದ ಭೀಷ್ಮಾದಿಗಳಿಗೆ ಪರಿದೃಶ್ಯಮಾನವಾದ ದೇಹವಿಯೋಗವು ಪ್ರಾಪ್ತವಾದರೆ ಅವರ ದರ್ಶನ ಸ್ಪರ್ಶಸಂಭಾಷಣಾದಿಗಳು ತಪ್ಪಿಹೋಗಿ ದುಃಖಸಾಗರದಲ್ಲೇ ಮುಳುಗಬೇಕಾಗುವುದು. ಸ್ವಜನಶೂನ್ಯವಾದ ಹಸ್ತಿನಾವತಿಯು ನರಕತುಲ್ಯವಾಗುವುದಿಲ್ಲವೇ? ಎಂಬ ಅರ್ಜುನನ ಶಂಕೆಗೆ ತಾಪತ್ರಯೋಪಶಾಮಕವಾದ ವಾಗಮೃತದಿಂದ ಶ್ರೀಕೃಷ್ಣನು ಸಮಾಧಾನವನ್ನು ನಿರೂಪಿಸುತ್ತಾನೆ :—

(1) **ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥**

—(2. 14.)

---

ರ್ಥವನ್ನು ಬೋಧಿಸುವುದೆಂದು ಶ್ರೀಮದಾಚಾರ್ಯರು ಹೇಳಿರುತ್ತಾರೆಂದು ಮಧ್ವವಿಜಯದಿಂದ ತಿಳಿದುಬರುವುದು. ಶ್ರೀಮದಾಚಾರ್ಯರು ಕೆಲವು ಗೀತಾಶ್ಲೋಕಗಳಿಗೆ ಮಾತ್ರ ಎರಡು ಅರ್ಥವನ್ನು ಮಾಡಿತೋರಿಸಿ "**ಲೇಶತಃ**" ತಮ್ಮ ಬುದ್ಧಿಶಕ್ತಿಯನ್ನು ಪ್ರಕಾಶಪಡಿಸಿರುವರು. ಪರಸ್ಪರ ವಿರುದ್ಧವಾದ ಅದ್ವೈತಗೀತಾಭಾಷ್ಯವನ್ನು ಪರಾಮರ್ಶೆಮಾಡಿ ನಂತರ ದ್ವೈತಭಾಷ್ಯವನ್ನು ಅವಲೋಕಿಸಿದರೆ ತೃಷಾರ್ಥನಿಗೆ ಅಮರತರಂಗಿಣಿಯು ಸಿಕ್ಕಿದಂತೆ ಆನಂದವಾಗುವುದರಲ್ಲಿ ಸಂಶಯವಿಲ್ಲ.

ಎಲೈ ಕೌಂತೇಯನೇ! ಕೇವಲ ಇಂದ್ರಿಯಾರ್ಥಸನ್ನಿಕರ್ಷಗಳು (ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳಿಗೂ ಶ್ರೋತ್ರ, ತ್ವಕ್, ಚಕ್ಷು, ರಸನ, ಘ್ರಾಣಗಳೆಂಬ ಇಂದ್ರಿಯಗಳಿಗೂ ಕ್ರಮವಾಗಿ ಉಂಟಾಗುವ ಸಂಬಂಧಗಳು) ಶಬ್ದಾದಿ ವಿಷಯಸಾಕ್ಷಾತ್ಕಾರ ದ್ವಾರಾ ಸುಖದುಃಖಗಳನ್ನು ಕೊಡುವುವೆಂದು ತಿಳಿದಿರುವೆಯಾ? (ಕೇವಲ ಶಬ್ದಾದಿಗಳು ಜ್ಞಾನದ್ವಾರಾ ಸುಖದುಃಖಗಳನ್ನುಂಟುಮಾಡಲಾರವು. ಮತ್ತೇನೆಂದರೆ ವಿಷಯಾಭಿಮಾನವು ಇದ್ದರೇನೇ ಇಷ್ಟವಿಷಯ ಪ್ರಾಪ್ತಿಯಿಂದ ದುಃಖವು ಉಂಟಾಗುವುದು.) (ಕಿಂಶುಕ ಕುಸುಮಪ್ರವಾಹದಂತೆ) ಶಬ್ದಾದಿವಿಷಯಗಳು ಬರುತ್ತಲೂ ನಾಶವಾಗುತ್ತಲೂ ಇರುತ್ತವೆ. ಮತ್ತು ಸರ್ವವಿಷಯಗಳೂ ಅಸತ್ಯಗಳು. ಆದುದರಿಂದ ನಾಶಶಿರಸ್ಕವಾದ ಕ್ಷುದ್ರವಿಷಯಗಳಲ್ಲಿ ಅಭಿಮಾನವನ್ನು ಬಿಟ್ಟು ಬಂಧುಗಳ ದರ್ಶನಾದ್ಯಭಾವದಿಂದ ದುಃಖರೂಪ ಚಿತ್ತವಿಕಾರವನ್ನು ಹೊಂದದೆ ಯುದ್ಧವನ್ನು ಮಾಡು.

ಲೌಕಿಕ ವಿಷಯಗಳ ಅಪೇಕ್ಷೆಯಿಂದಲೂ, ಬಂಧುಗಳು ನನ್ನವರು, ಇವರೇ ನನಗೆ ಸುಖಪ್ರದರು ಎಂಬ ಅಭಿಮಾನದಿಂದಲೂ, ದುಷ್ಟವಾದ ಕ್ಷುದ್ರ ವಿಷಯಗಳಲ್ಲಿ ಇವು ಮಹತ್ಸುಖಪ್ರದವೆಂಬ ಭ್ರಮದಿಂದಲೂ ಇಂದ್ರಿಯಾರ್ಥಸನ್ನಿಕರ್ಷವು ಶಬ್ದಾದಿವಿಷಯಕಜ್ಞಾನವನ್ನೂ, ಹಾಗೆ ಉತ್ಪನ್ನವಾದ ಜ್ಞಾನವು ಸುಖದುಃಖಗಳನ್ನೂ ಉಂಟುಮಾಡುತ್ತದೆ. * ಸರ್ವಪ್ರಕಾರದಿಂದ ಅಭಿ

* ಅಭಿಮಾನವು ಮೂರು ಪ್ರಕಾರವಾಗಿರುತ್ತದೆ.

(1) ದೇಹೇಂದ್ರಿಯಾಂತಃಕರಣಗಳಿಗೂ ಜೀವನಿಗೂ ಇರುವ ಸಂಬಂಧವಿಶೇಷವು ಅಭಿಮಾನವೆನ್ನಿಸುತ್ತದೆ. ಸಂಸಾರಾವಸ್ಥೆಯಲ್ಲಿ ಇಂಥಾ ಅಭಿಮಾನವು ಇದ್ದರೆ ವಿಷಯಜ್ಞಾನವು ಉತ್ಪನ್ನವಾಗುತ್ತದೆ; ಇಂಥಾ ಅಭಿಮಾನವು ಇಲ್ಲದಿದ್ದರೆ ವಿಷಯಜ್ಞಾನವೇ ಉತ್ಪನ್ನವಾಗುವುದಿಲ್ಲ. ಸುಷುಪ್ತಿಯಲ್ಲಿ ಇಂಥಾ ಅಭಿಮಾನವಿಲ್ಲದುದರಿಂದ ಲೌಕಿಕಜ್ಞಾನವು ಉತ್ಪನ್ನವಾಗುವುದಿಲ್ಲ. ಜಾಗ್ರದವಸ್ಥೆಯಲ್ಲಿ ಈರೀತಿಯಾದ ಅಭಿಮಾನಪರಿತ್ಯಾಗವು ಬ್ರಹ್ಮಾಪರೋಕ್ಷಜ್ಞಾನಸಾಧ್ಯವು. ಆದುದರಿಂದಲೇ ಬ್ರಹ್ಮಜ್ಞಾನಿಗೆ ಸಮಾಧ್ಯವಸ್ಥೆಯಲ್ಲಿ ಅವಯವಭೇದವನ್ನು ಮಾಡಿದರೂ ದುಃಖವು ಉತ್ಪನ್ನವಾಗುವುದಿಲ್ಲ. ಈ ಅಭಿಮಾನವು ಸಂಸಾರದಲ್ಲಿ ಜಾಗ್ರದವಸ್ಥೆಯಲ್ಲಿ ಬ್ರಹ್ಮಾದಿಸರ್ವಜೀವರಿಗೂ ಇರುವುದು. ಉಪಯೋಗಭೇದದಿಂದ ಇದು ಒಳ್ಳೆಯದೂ ಕೆಟ್ಟದೂ ಆಗುವುದು.

ಮಾನಶೂನ್ಯನಾದವನಿಗೆ ಕ್ವಚಿತ್ ಸುಪ್ತಪುರುಷನಿಗಾಗುವಂತೆ ಶಬ್ದಾದಿಜ್ಞಾನವೇ ಉಂಟಾಗುವುದಿಲ್ಲ. ಕಥಂಚಿತ್ ಜ್ಞಾನವು ಉತ್ಪನ್ನವಾದರೂ ಸುಖದುಃಖಗಳು ಉತ್ಪನ್ನವಾಗುವುದಿಲ್ಲ. ಆದುದರಿಂದ ಬಂಧುಗಳಲ್ಲಿರುವ ಅಭಿಮಾನವನ್ನು ಬಿಟ್ಟುಬಿಟ್ಟು, ಅವರ ದರ್ಶನಾದಿಗಳಿಂದ ದುಃಖವು ಉಂಟಾಗದಂತೆ ಇರುವ ಸ್ಥಿತಿಯನ್ನು ಹೊಂದು ಎಂದು ಶ್ರೀಕೃಷ್ಣನ ವಾಕ್ಯತಾತ್ಪರ್ಯವು.

---

(2) ಅಹಂತಾಮಮತಾರೂಪಭ್ರಮಜ್ಞಾನವು ಅಭಿಮಾನವೆನ್ನಿಸುವುದು. ನಾನೇ ಸ್ವತಂತ್ರನು, ಪಶು, ಪತ್ನೀ, ಬಾಂಧವರೆಲ್ಲರೂ ನನ್ನವರು; ನನಗೆ ಸ್ವತಂತ್ರವಾಗಿ ಸುಖಪ್ರದರು ಎಂದು ತಿಳಿಯುವ ಜ್ಞಾನವು ಭ್ರಮವು. ಈ ಭ್ರಮದಿಂದ ರಾಗದ್ವೇಷಗಳೂ, ವಿಷಯಾಕಾಂಕ್ಷೆಯೂ ಉತ್ಪನ್ನವಾಗಿ ತನಗೆ ದುಃಖಪ್ರದವಾದ ವಸ್ತುಗಳಲ್ಲೆಲ್ಲಾ ದ್ವೇಷವು ಉಂಟಾಗುವುದು. ಈ ದುರಭಿಮಾನವು ಪರಮಾತ್ಮನ ಸ್ವಾತಂತ್ರ್ಯಪರಿಜ್ಞಾನದಿಂದ ನಷ್ಟವಾಗುವುದು. ಈ ದುರಭಿಮಾನದ ಪರಿತ್ಯಾಗವುಳ್ಳವನಿಗೆ (ಮನಸ್ಸು ವಿಷಯಗಳಲ್ಲಿ ಆಸಕ್ತಿರಹಿತವಾಗಿರುವುದರಿಂದ) ಕ್ವಚಿತ್ ಪದಾರ್ಥಜ್ಞಾನವೇ ಉತ್ಪನ್ನವಾಗುವುದಿಲ್ಲ. ಅವರ್ಜನೀಯವಾಗಿ ಚಕ್ಷುರಾದಿ ಇಂದ್ರಿಯಗಳಿಗೂ, ವಿಷಯಗಳಿಗೂ ಇರುವ ಸನ್ನಿಕರ್ಷಪ್ರಭಾವದಿಂದ ಜ್ಞಾನವು ಉತ್ಪನ್ನವಾದರೂ ಸುಖದುಃಖಗಳು ಉತ್ಪನ್ನವಾಗುವುದಿಲ್ಲ. ಅವರ್ಜನೀಯವಾಗಿ ಸುಖದುಃಖಗಳು ಉತ್ಪನ್ನವಾದರೂ ಜ್ಞಾನಿಯು ಸುಖದಿಂದ ಹಿಗ್ಗುವುದಿಲ್ಲ, ದುಃಖದಿಂದ ಕುಗ್ಗುವುದಿಲ್ಲ. ದುರ್ವಿಷಯಜನಿತ ಸುಖದುಃಖಗಳ ಭೋಗವು ಉಂಟಾಗುವುದಿಲ್ಲ. ಅಹಂತಾಮಮತೆಗಳನ್ನುಳ್ಳವನಿಗೆ ಅರಿಷಡ್ವರ್ಗಗಳು ಉತ್ಪನ್ನವಾಗಿ ದುರ್ವಿಷಯಗಳಲ್ಲಿ ಸ್ನೇಹವೂ, ಸದ್ವಿಷಯಗಳಲ್ಲಿ ದ್ವೇಷವೂ ಉತ್ಪನ್ನವಾಗಿ ಕ್ಷಿಪ್ರದಲ್ಲಿ ನರಕಾದ್ಯನರ್ಥವನ್ನು ಹೊಂದುವನು. ಅಂತಹ ಮಮತಾದಿಗಳು ಸರ್ವಕಾಲದಲ್ಲೂ ದುಷ್ಟವಾದವುಗಳು.

3 ವಿಷಯಗಳಲ್ಲಿ ಶೋಭನಾಧ್ಯಾಸವು ತೃತೀಯಪ್ರಕಾರದ ಅಭಿಮಾನವು; ಎಂದರೆ, ಮೋಕ್ಷವಿರೋಧಿಯಾದ ದುರ್ವಿಷಯಗಳಲ್ಲಿ ಇದು ನನಗೆ ಉತ್ತಮ ಸುಸಾಧನವೆಂಬ ದುಷ್ಟಜ್ಞಾನವು ಮತ್ತು ತಜ್ಜನಿತರಾಗವು; ಮತ್ತು ಸದ್ವಿಷಯಗಳಲ್ಲಿ (ಮೋಕ್ಷೋಪಯೋಗಿಯಾದ ವಿಷಯಗಳಲ್ಲಿ) ಇದು ನನಗೆ ದುಃಖಸಾಧನವೆಂಬ ಅನಿಷ್ಟಜ್ಞಾನವು, ತಜ್ಜನಿತದ್ವೇಷವು ಅಭಿಮಾನವೆನ್ನಿಸುವುವು. ಇದು ಯಾವಾಗಲೂ ನಾಶಕಾರಣವಾದುದು. ಈ ದುರಭಿಮಾನದ ಪರಿತ್ಯಾಗದಿಂದ ಕೆಲವು ದುರ್ವಿಷಯಗಳ ಸನ್ನಿಕರ್ಷವಿದ್ದರೂ (ಮನಸ್ಸು ಅನ್ಯತ್ರ ಆಸಕ್ತವಾಗಿರುವುದರಿಂದ) ಕ್ವಚಿತ್ ಜ್ಞಾನವೇ ಉತ್ಪನ್ನವಾಗುವುದಿಲ್ಲ. ಕಥಂಚಿತ್ ಅವರ್ಜನೀಯವಾಗಿ ಜ್ಞಾನವು ಉತ್ಪನ್ನವಾದರೂ ದುರ್ವಿಷಯಗಳ (ಮೋಕ್ಷೋಪಯೋಗಿಯಲ್ಲದ ವಿಷಯಗಳ) ಸನ್ನಿಕರ್ಷಜನಿತಜ್ಞಾನದಿಂದ ಸುಖವು ಉತ್ಪನ್ನವಾಗುವುದಿಲ್ಲ. ಶತ್ರುಪುತ್ರನ ದರ್ಶನದಿಂದ ಸುಖವು ಉಂಟಾಗುವುದೇ? ಹೀಗೆಯೇ

5. ತಥಾಪಿ ಇನ್ನೂ ಒಂದೆರಡು ಶಂಕೆಗಳು ಉಳಿದೇ ಇರುವುವು. ದೈವ ನಿಯತಕಾರಣಗಳಿಂದ ತಾವೇ ಮರಣವನ್ನು ಹೊಂದುವ ಈ ಶತ್ರುಯೋಧರನ್ನು ನಾನು ಪ್ರಯತ್ನಪೂರ್ವಕವಾಗಿ ಯಾತಕ್ಕೆ ಸಂಹರಿಸಬೇಕು ? ಕಿಂಚ ಇವರನ್ನು ಸಂಹಾರಮಾಡಿ ಬಂಧುದರ್ಶನಾದ್ಯಭಾವದಿಂದ ಪ್ರಸಕ್ತವಾಗುವ ದುಃಖವನ್ನು ಅಭಿಮಾನತ್ಯಾಗದಿಂದ ದೂರೀಕರಣೆಮಾಡಬೇಕೆಂಬ ಗುರುಭೂತವಾದ ಪ್ರಯತ್ನವು ಯಾತಕ್ಕೆ? "ಪ್ರಕ್ಷಾಳನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ". ಕೆಸರಿನಲ್ಲಿ ಕಾಲಿಟ್ಟು ನಂತರ ಜಲದಿಂದ ಪಾದಪ್ರಕ್ಷಾಳನಮಾಡಿಕೊಂಡು ಶುದ್ಧಿಯನ್ನು ಹೊಂದುವದಕ್ಕಿಂತ ಮೊದಲೇ ಕೆಸರನ್ನು ತುಳಿಯದಂತೆ ರಸ್ತೆಯಲ್ಲಿ ಗಮನಮಾಡುವುದು ಉಚಿತವಾಗಿ ಲೋಕದಲ್ಲಿ ಕಂಡುಬಂದಿರುವುದೆಂಬ ಅರ್ಜುನನ ಸಂದೇಹಕ್ಕೆ ಶ್ರೀಕೃಷ್ಣನು ಸಮಾಧಾನವನ್ನು ಹೇಳುತ್ತಾನೆ:—

**(1) ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।**
**ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥**

—(2. 15.)

ಅಭಿಮಾನವನ್ನು ಪರಿತ್ಯಾಗಮಾಡಿ ಇಂದ್ರಿಯಾರ್ಥಸನ್ನಿಕರ್ಷಜನ್ಯಶಬ್ದಾದಿಜ್ಞಾನದಿಂದ ಯಾವ ಪುರುಷನು ಸುಖದುಃಖರೂಪವಾದ ವಿಕಾರವನ್ನು ಹೊಂದುವುದಿಲ್ಲವೋ, ಅಂಥಾ ಸಮದುಃಖಸುಖನಾದ (ಎಂದರೆ ದುಃಖವು ಹೇಗೆ ಅನುಪಾದೇಯವೋ ಹಾಗೆಯೇ ಸಕಲ ವಿಷಯಸೌಖ್ಯವೂ ಅನಿತ್ಯವೂ,

---

ಸದ್ವಿಷಯ ದರ್ಶನಾದಿಗಳಿಂದ ಯಾವಾಗಲೂ ದುಃಖವು ಉಂಟಾಗುವುದಿಲ್ಲ. ಕಥಂಚಿತ್ ಅವರ್ಜನೀಯವಾಗಿ ಸ್ವಲ್ಪ ದುಃಖವು ಬಂದರೂ ಜ್ಞಾನಿಯು ನೀಚತೆಯನ್ನು ಹೊಂದುವುದಿಲ್ಲ. ಮಾಘಸ್ನಾನದಿಂದ ಛಳಿಯಾದರೂ ಜ್ಞಾನಿಯು ಸಹನಮಾಡುವನಷ್ಟೆ !

ಪ್ರಕೃತದಲ್ಲಿ ಈ ಎರಡನೆಯ ಮೂರನೆಯ ಅಭಿಮಾನಗಳನ್ನು ಪರಿತ್ಯಾಗಮಾಡಿ ಧರ್ಮಯುದ್ಧವು ಅಧರ್ಮವೆಂಬ ಭ್ರಮವನ್ನೂ, ದುಷ್ಟರಾದ ದುರ್ಯೋಧನಾದಿಗಳಲ್ಲಿ ಇವರು ನನಗೆ ಸುಖಸಾಧನರು ಎಂಬ ಭ್ರಮವನ್ನೂ ಪರಿತ್ಯಾಗಮಾಡಿ ಅವರ ಹನನದಿಂದ ದುಃಖವನ್ನೇ ಹೊಂದಬೇಡ; ಕಥಂಚಿತ್ ಸ್ವಲ್ಪ ದುಃಖವು ಬಂದರೂ ಮೋಕ್ಷರೂಪಮಹಾಫಲಸಾಧನವಾದುದರಿಂದ, ಯಜ್ಞದಲ್ಲಿ ಧೂಮವ್ಯಾಪ್ತಿಯನ್ನು ಸಹಿಸುವಂತೆ, ಆ ದುಃಖವನ್ನು ಸಹನಮಾಡು ಎಂದು ಶ್ರೀಕೃಷ್ಣನ ಉಪದೇಶಭಾವವು.

ಅಲ್ಪವೂ, ಬ್ರಹ್ಮಜ್ಞಾನಕ್ಕೆ ವಿರೋಧಿಯೂ ಆದುದರಿಂದ ಅನುಪಾದೇಯವೆಂದು ತಿಳಿಯುವ) ಬ್ರಹ್ಮಜ್ಞಾನಿಯು ಮೋಕ್ಷವನ್ನು ಹೊಂದುವುದಕ್ಕೆ ಅರ್ಹನಾಗುತ್ತಾನೆ.

ಈ ವಾಕ್ಯಪರ್ಯಾಲೋಚನೆಯಿಂದ ಈ ವಿಷಯವು ವಿಶದವಾಗಿ ತಿಳಿದುಬರುವುದು. ಸ್ವಧರ್ಮವನ್ನು ಆಚರಿಸಿ ಅದರಿಂದ ಪ್ರಾಪ್ತವಾದ ದುಃಖಗಳನ್ನು ಅಭಿಮಾನಪರಿತ್ಯಾಗದಿಂದ ಪರಿಹರಿಸಿಕೊಳ್ಳುವುದು ಮೋಕ್ಷಸಾಧನೋಪಾಯವು. ಆದುದರಿಂದ ಬಂಧುಗಳನ್ನಾದರೂ ಧರ್ಮಯುದ್ಧದಲ್ಲಿ ಹನನಮಾಡಿ ಅಭಿಮಾನಪರಿತ್ಯಾಗದಿಂದ ಚಿತ್ತವಿಕಾರವನ್ನು ಹೊಂದದಿರುವುದು ಉತ್ತಮ ಸಾಧನವೆಂದು ನಿಶ್ಚಿತವಾಗುವುದು.

ಪ್ರಕೃತ ಯುದ್ಧವು ನಾರಾಯಣ ದ್ವೇಷಿಗಳ ಹನನರೂಪವಾದುದರಿಂದ ಸ್ವಧರ್ಮವೆಂದೂ, ಅದರ ಪರಿತ್ಯಾಗದಿಂದ ಬಹಳ ಅನರ್ಥಗಳುಂಟೆಂದೂ ಶ್ರೀಕೃಷ್ಣನು ಹೇಳುತ್ತಾನೆ :—

(2) ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ಕ್ಷತ್ರಿಯಸ್ಯ ನ ವಿದ್ಯತೇ ॥
ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಂ ।
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಂ ।
ಅಥ ಚೇತ್ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಸ್ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥
ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇಽವ್ಯಯಾಮ್ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥
ಭಯಾದ್ರಣಾದುಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಂ ॥
ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಂ ॥

**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥**

—(2. 30-37.)

ಜೀವಸ್ವರೂಪವು ನಾಶವಾಗುವುದಿಲ್ಲವೆಂದು ತಿಳಿಯುವುದಲ್ಲದೆ ಈ ಯುದ್ಧವು ಸ್ವಧರ್ಮರೂಪವಾದುದೆಂದೂ ತಿಳಿದು ನೀನು ಭಯದಿಂದ ಶರೀರಕಂಪವನ್ನು ಹೊಂದಕೂಡದು. ಕ್ಷತ್ರಿಯನಿಗೆ ಧರ್ಮಯುದ್ಧಕ್ಕಿಂತ ಹೆಚ್ಚು ಪರಲೋಕ ಸುಖಹೇತುಕರವಾದ ಮತ್ತು ಧಾರಕನಾದ ವಿಷ್ಣುವಿಗೆ ಪ್ರೀತಿಕರವಾದ ಧರ್ಮವು ಇರುವುದಿಲ್ಲ. ದೈವೇಚ್ಛೆಯಿಂದ ಪ್ರಾಪ್ತವಾದ ಪಾರಲೌಕಿಕ ಸುಖಸಾಧನ ವಾದ ಇಂಥಾ ಯುದ್ಧವನ್ನು ಪುಣ್ಯವಂತರಾದ ಕ್ಷತ್ರಿಯರು ಹೊಂದುತ್ತಾರೆ. ಜಗದ್ಧಾರಕನಾದ ಪರಮಾತ್ಮನಿಗೆ ಪ್ರೀತಿಕರವಾದ ಮೋಕ್ಷಸಾಧನಾರ್ಥವಾದ ಯುದ್ಧವನ್ನು ನೀನು ಮಾಡದೇ ಇದ್ದರೆ, ನೀನು ಸ್ವಧರ್ಮವನ್ನೂ ಕೀರ್ತಿ ಯನ್ನೂ ಕಳೆದುಕೊಂಡು ಪಾಪವನ್ನು ಹೊಂದುತ್ತೀಯೆ. ಸಕಲ ಪ್ರಜೆಗಳೂ ಶಾಶ್ವತವಾದ ನಿನ್ನ ಅಪಕೀರ್ತಿಯನ್ನು ಆಡಿಕೊಳ್ಳುತ್ತಾರೆ. ಲೋಕದಲ್ಲಿ ಮಾನಿಷ್ಠನಾದ ಪುರುಷನಿಗೆ ಅಪಕೀರ್ತಿಯು ಮರಣಕ್ಕಿಂತ ಅಧಿಕದುಃಖಕರವು. ಯಾರು ನಿನ್ನನ್ನು ಬಹು ಗೌರವಿಸುತ್ತಿದ್ದರೋ ಅಂಥಾ ಮಹಾರಥರು ನಿನ್ನನ್ನು ಭಯದಿಂದ ಓಡಿಹೋದನೆಂದು ತಿಳಿಯುವರು. ನೀನು ಅವರ ಮನಸ್ಸಿನಲ್ಲಿ ಲಾಘವವನ್ನು ಹೊಂದುತ್ತೀಯೆ. ನಿನ್ನ ಶತ್ರುಗಳು ನಿನ್ನ ಸಾಮರ್ಥ್ಯವನ್ನು ನಿಂದಿಸುವವರಾಗಿ ಅವಾಚ್ಯವಾಗಿ ನಿನ್ನನ್ನು ಬೈಯುತ್ತಾರೆ. ಅದಕ್ಕಿಂತಲೂ ಇನ್ನು ಅಧಿಕದುಃಖವು ಯಾವುದು ಇರುವುದು? ನೀನು ಯುದ್ಧದಲ್ಲಿ ಮೃತ ನಾದರೆ ಸ್ವರ್ಗವನ್ನು ಹೊಂದುತ್ತೀಯೆ. ಜಯಿಸಿದರೆ ರಾಜ್ಯವನ್ನು ಅನುಭವಿ ಸುತ್ತೀಯೆ. ಆದುದರಿಂದ ಯುದ್ಧಮಾಡುವುದಕ್ಕೆ ಕೃತನಿಶ್ಚಯನಾಗಿ ಯುದ್ಧ ಸನ್ನದ್ಧನಾಗು.

**7.** ಈ ಪ್ರಕಾರವಾಗಿ ಅರ್ಜುನನು ಯುದ್ಧಪರಿತ್ಯಾಗದಲ್ಲಿ ಹೇಳಿದ ಕಾರಣಗಳನ್ನೆಲ್ಲಾ* ತತ್ತ್ವೋಪದೇಶದಿಂದ ಪರಿಹಾರಮಾಡಿ ಶ್ರೀಕೃಷ್ಣನು ತನ್ನ ಸಾಂಖ್ಯೋಪದೇಶವನ್ನು ಉಪಸಂಹಾರಮಾಡುತ್ತಾನೆ:—

---

**6.** * ದೇಹಾನ್ಯಜೀವವೇ ಇಲ್ಲವಾದುದರಿಂದ ದೇಹನಾಶವಾದರೆ ಆತ್ಮನಾಶವು ಪ್ರಸಕ್ತ ವಾಗುವುದರಿಂದ ಸರ್ವನಾಶಕವಾದ ಬಾಣಪ್ರಯೋಗವನ್ನು ನಾನು ಮಾಡಲಾರನೆಂಬ ಅರ್ಜುನನ

**(1) ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।**
**ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥**
—(2. 38.)

ಜೀವ ಸ್ವರೂಪವು ನಿತ್ಯವಾದುದೆಂದು ತಿಳಿದು, ದೇಹನಾಶವು ಅಪರಿಹಾರ್ಯವಾದುದೆಂದು ತಿಳಿದು, ಜೀವದೇಹ ಸಂಬಂಧ ವಿಯೋಗದಿಂದ ಪ್ರಾಪ್ತವಾಗುವ ಬಂಧುದರ್ಶನಾದ್ಯಭಾವಜನಿತ ದುಃಖಗಳನ್ನು ಅಭಿಮಾನತ್ಯಾಗದಿಂದ ಪರಿಹರಿಸಿಕೊಂಡು, ಸುಹೃಜ್ಜನ ದರ್ಶನ, ಸ್ಪರ್ಶಾದಿ ಜನಿತ ಸುಖವೂ (ಲೌಕಿಕ ವಿಷಯಸುಖವೂ) ದುಃಖವೂ ಸಮಾನವೇ ಎಂದರೆ ದುಃಖವು ಹೇಗೆ ಅನಿಷ್ಟವೋ ಹಾಗೆಯೇ ವಿಷಯ ಸುಖವೂ ಮೋಕ್ಷಸಾಧನ ವಿರೋಧಿಯಾದುದರಿಂದ ಅನಿಷ್ಟವೆಂದು ತಿಳಿದು, ಸುಖದುಃಖಗಳಲ್ಲಿ ಸಮನಾಗಿ, ಯುದ್ಧವು ಸ್ವಧರ್ಮರೂಪವಾದುದರಿಂದ ರಾಜ್ಯಲಾಭವಾದರೂ ಸರಿಯೇ ರಾಜ್ಯಹಾನಿಯಾದರೂ ಸರಿಯೇ, ನಿರ್ವಿಕಾರನಾಗಿ, ಯುದ್ಧವು ಸ್ವಧರ್ಮರೂಪವಾದುದರಿಂದ

---

ಶಂಕೆಯು "**ದೇಹಿನೋಽಸ್ಮಿನ್ ಯಥಾ ದೇಹೇ। ಕೌಮಾರಂ ಯೌವನಂ ಜರಾ॥ ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ**" ಎಂಬ ಶ್ಲೋಕದಿಂದಲೇ ಪರಿಹೃತವಾಗಿರುವುದು. "**ದೇಹಿನಃ**" ಎಂದರೆ ದೇಹವುಳ್ಳವನಿಗೆ ಎಂದರ್ಥವು. ಇದರಿಂದಲೇ ದೇಹವು ಭಿನ್ನವು, ದೇಹವುಳ್ಳ ಆತ್ಮನು ಭಿನ್ನನು ಎಂದು ಸಿದ್ಧವಾಗುವುದು. ದೇಹಾತಿರಿಕ್ತವಾದ ಆತ್ಮನೇ ಇಲ್ಲವೆಂಬ ಚಾರ್ವಾಕ ಮತದಲ್ಲಿ ಮರಣವೆಂದರೇನು? ಎಂಬ ಪ್ರಶ್ನೆಗೆ ಉತ್ತರವು ದುರ್ಘಟವಾಗುವುದು. ಸಮಗ್ರಾವಯವವುಳ್ಳ ಮೃತದೇಹಕ್ಕೂ ಜೀವದೇಹಕ್ಕೂ ಈ ಮತದಲ್ಲಿ ವೈಷಮ್ಯವನ್ನು ನಿರೂಪಿಸುವುದೇ ಕಷ್ಟವಾಗುವುದು. ದೇಹವೇ ಆತ್ಮವಾದರೆ ಜನರು ಕ್ಷೌರಮಾಡಿಸಿಕೊಂಡಾಗಲೆಲ್ಲಾ ಆತ್ಮಭೇದವನ್ನು ಹೊಂದಿದರೆಂದು ಒಪ್ಪಬೇಕಾಗುವುದು. "**ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾಃ ಶರೀರಿಣಃ**" ಇತ್ಯಾದಿ ಶ್ಲೋಕಗಳಲ್ಲಿ ಶ್ರೀಕೃಷ್ಣನು ಜೀವನದೇಹವು ನಾಶಹೊಂದತಕ್ಕದ್ದು, ಜೀವನ ಸ್ವರೂಪವು ನಿತ್ಯವು ಎಂದು ವಿಭಾಗಮಾಡಿ ನಿರೂಪಿಸಿರುವುದರಿಂದ ಮತ್ತು ಜನ್ಮಾಂತರಗಳನ್ನೂ ಸಾಧನೆಮಾಡಿರುವುದರಿಂದ ಈ ತತ್ವವು ಗೀತಾವಿರುದ್ಧವೆಂದು ಹೆಚ್ಚು ಹೇಳಬೇಕಾದುದಿಲ್ಲ. ಅತಿಕ್ಷುದ್ರ ಮತವಾದುದರಿಂದಲೂ "ನನ್ನ ದೇಹವು" ಎಂಬ ಸರ್ವಜನರುಗಳ ಪ್ರತೀತಿಯಿಂದಲೇ ಹತವಾಗಿರುವುದರಿಂದಲೂ ಈ ವಿಷಯದಲ್ಲಿ ಹೆಚ್ಚು ಚರ್ಚೆಯನ್ನು ಮಾಡಬೇಕಾಗಿಲ್ಲ.

ಜಯಪ್ರಾಪ್ತಿಯನ್ನೂ ಅಪಜಯವನ್ನೂ ಸಮವೆಂದು ತಿಳಿದು, **ತತಃ**—ಈ ಪೂರ್ವೋಕ್ತ ತತ್ತ್ವಾನುಸಂಧಾನವುಳ್ಳವನಾಗಿ ಅಥವಾ ಸರ್ವವ್ಯಾಪ್ತನಾದ, ಗುಣಪೂರ್ಣನಾದುದರಿಂದ **"ತತ್"** ಎಂಬ ಹೆಸರುಳ್ಳ ಪರಮಾತ್ಮನಿಂದ ನಾನು ಪ್ರೇರಿತನಾಗಿರುತ್ತೇನೆ, ನಾನು ನಿಯಮ್ಯನಾಗಿರುತ್ತೇನೆ, ನಾನು ಸ್ವತಂತ್ರ ನಲ್ಲವೆಂದು ತಿಳಿದು, ಯುದ್ಧಾರ್ಥವಾಗಿ ಸನ್ನದ್ಧನಾಗು. ಈ ಬುದ್ಧಿಯಿಂದ ಯುದ್ಧವನ್ನು ಮಾಡಿದರೆ ನೀನು ಪಾಪವನ್ನು ಹೊಂದುವುದಿಲ್ಲ.

ಇದು ಕೃಷ್ಣನ ಮತವು. ಸಂಕ್ಷೇಪದಿಂದ ತಾನು ಉಪದೇಶಮಾಡಿದ ಈ ತತ್ತ್ವವನ್ನೇ ಉಳಿದ ಹದಿನಾರೂವರೆ ಅಧ್ಯಾಯಗಳಲ್ಲಿ ವಿಸ್ತರಿಸಿಹೇಳಿರುತ್ತಾನೆ. ಶ್ರೀಕೃಷ್ಣನು ಅದ್ವೈತಿಯಾಗಿದ್ದರೆ ಈ ಸಾಂಖ್ಯೋಪದೇಶದ ಉಪಸಂಹಾರವನ್ನು "ತತೋಯುದ್ಧಾಯ ಯುಜ್ಯಸ್ವ" ಎಂದು ಮಾಡುತ್ತಿರಲಿಲ್ಲ. "ತತೋ ಯುದ್ಧಾನ್ನಿವರ್ತಸ್ವ" ಎಂದು ಹೇಳುತ್ತಿದ್ದನು. **ತತಃ** ಎಂಬ ಈ ಹೇತು ಸೂಚಕವಾದ **ಪೂರ್ವೋಕ್ತ**ಕಾರಣಪರಾಮರ್ಶಿಯಾದ ಪದವು ಅದ್ವೈತಿಗಳ ಕತ್ತನ್ನು ಕುಯ್ಯುವುದು. ಇಪ್ಪತ್ತೇಳು ಶ್ಲೋಕಗಳಿಂದ ಪಾರಮಾರ್ಥಿಕ ತತ್ತ್ವವನ್ನು ಶ್ರೀಕೃಷ್ಣನು ಹೇಳಿ, ನಂತರ ವ್ಯಾವಹಾರಿಕಧರ್ಮವನ್ನು ಉಪ ದೇಶ ಮಾಡಿದನೆಂದು ಶಂಕರಾಚಾರ್ಯರು ಹೇಳಿರುವರು. ಇದು ಅಸಂಬದ್ಧ ಪ್ರಲಾಪವೆಂಬುದು "ತತೋ ಯುದ್ಧಾಯ ಯುಜ್ಯಸ್ವ" ಎಂಬ ಶ್ರೀಕೃಷ್ಣನ ಶ್ಲೋಕಾಂತ್ಯಪಾದವು ತಾಡನಮಾಡಿದಂತೆ ನಿರೂಪಿಸುತ್ತಿರುವುದು. ಧರ್ಮಾ ನುಷ್ಠಾನಕ್ಕೂ ಸಾಂಖ್ಯತತ್ತ್ವಾನುಸಂಧಾನಕ್ಕೂ ಕಾರ್ಯಕಾರಣಭಾವವಿರುವುದು ಎಂದು ಸ್ಪಷ್ಟವಾಗಿ "ತತಃ" ಎಂಬ ಹೇತುವಾಚಕ ಪದವು ಬೋಧಿಸುವುದು. ಶಂಕರಾಚಾರ್ಯರು ಹೇಳಿರುವಂತೆ, ಸರ್ವಕರ್ಮಸಂನ್ಯಾಸಪೂರ್ವಕವಾದ ಬ್ರಹ್ಮೈಕ್ಯಜ್ಞಾನವು ನಿಜತತ್ತ್ವವಾಗಿದ್ದರೆ ಈ ಶ್ಲೋಕಾರ್ಥವು ಈ ರೀತಿಯಾಗಿ ಆಗುವುದು:—"ಸರ್ವಕರ್ಮಸಂನ್ಯಾಸಪೂರ್ವಕವಾದ ಬ್ರಹ್ಮೈಕ್ಯಜ್ಞಾನವು ಪರಮ ತತ್ತ್ವವೆಂದು ತಿಳಿದು, ಸುಖದುಃಖಗಳಲ್ಲೂ ಲಾಭಾಲಾಭಗಳಲ್ಲೂ ಜಯಾಪ ಜಯಗಳಲ್ಲೂ ಸಮನಾಗಿ ಎಂದರೆ ಸರ್ವವೂ ಮಿಥ್ಯಾ ಎಂದು ತಿಳಿದು, **ತತಃ**= ಅನಂತರದಲ್ಲಿ ಅಥವಾ ಈ ಕಾರಣಗಳ ದೆಸೆಯಿಂದ, ಭಯಂಕರ ಯುದ್ಧದಲ್ಲಿ ಸನ್ನದ್ಧನಾಗು. ನಿನಗೆ ಈ ಪ್ರಕಾರವಾದ ಯುದ್ಧದಿಂದ ಪಾಪವಿಲ್ಲ."

ಈ ಅರ್ಥವು ಅತ್ಯಂತ ಅಸಂಗತವಾದ, ದುರರ್ಥವೆಂದು ಸ್ಪಷ್ಟವಾಗಿರುವುದು. ಸಾಂಖ್ಯಾನುಸಂಧಾನವನ್ನೂ ಜಗನ್ಮಿಥ್ಯಾತ್ವಾನುಸಂಧಾನವನ್ನೂ ಹೊಂದಿದನಂತರ ಯುದ್ಧಕ್ಕೆ ಸನ್ನದ್ಧನಾಗು ಎಂದು ಹೇಳುವವನು ವಂಚಕನು ಅಥವಾ ಮೂಢನು; ಕೇಳುವವನು ಭ್ರಾಂತನು ಅಥವಾ ಅತ್ಯಂತಬುದ್ಧಿಶೂನ್ಯನಾದ ಪಶುವು ಎಂದು ಪ್ರಾಪ್ತವಾಗುವುದು. ಕೃಷ್ಣಾರ್ಜುನರ ಸಂವಾದವು ಅಥವಾ ಕೃಷ್ಣೋಪದೇಶಾನುಸಾರಿಯಾದ ಅರ್ಜುನನ ಯುದ್ಧವು ಗಾರ್ಧಬಗಾಯಕನ ಸಮಯದಲ್ಲಿ ಉಷ್ಟ್ರತಾಂಡವರಚನೆಯಂತೆ ಅಪಹಾಸಾಸ್ಪದವಾದ, ಮಂಕು ಮಿತ್ರರ ಸಂಭಾಷಣೆಯೆಂದು ಪ್ರಾಪ್ತವಾಗುವುದು. ಆದುದರಿಂದ ಶ್ರೀಕೃಷ್ಣೋಪದಿಷ್ಟಸಾಂಖ್ಯವು ಅದ್ವೈತವೆಂದು ಉಪಪಾದಿಸುವುದು ಪ್ರಬಲವಾದ ನರನಾರಾಯಣರ ಅವಜ್ಞೆಯಾಗುವುದೆಂದು ನಾವು ನಿರೂಪಿಸಿಯೇ ಇರುತ್ತೇವೆ.

---

# 12. ಹನ್ನೆರಡನೆಯ ಅಂಶವು

## ಸಾಂಖ್ಯತತ್ತ್ವೋಪದೇಶವು.

(ಮುಂದುವರಿಸಿದ್ದು.)

## ಜ್ಞಾನವಿಜ್ಞಾನಗಳು.

1. **ಶ್ರೀಶ್ರೀಗಳವರು :—** ಸಂಗ್ರಹರೂಪವಾಗಿ ದ್ವಿತೀಯಾಧ್ಯಾಯದಲ್ಲಿ ನಿರೂಪಿತವಾದ ಪರಾಪರತತ್ತ್ವನಿರ್ಣಯವನ್ನು ಜ್ಞಾನಷಟ್ಕದಲ್ಲಿ (7-12 ಅಧ್ಯಾಯಗಳಲ್ಲಿ) ಶ್ರೀಕೃಷ್ಣನು ಉಪದೇಶಮಾಡಿರುತ್ತಾನೆ. ಮತ್ತು ಪುನಃ ಸರ್ವಾರ್ಥಸಂಕ್ಷೇಪರೂಪವಾದ ತ್ರಯೋದಶಾಧ್ಯಾಯದಲ್ಲಿಯೂ ಸಯುಕ್ತಿಕವಾಗಿ ಉಪಪಾದಿಸಿರುತ್ತಾನೆ.

**ಪ್ರಶ್ನೆ —** ಸ್ವಾಮಿ! ಶ್ರೀಕೃಷ್ಣನು ಪ್ರಥಮತಃ ತತ್ತ್ವನಿರೂಪಣೆಯನ್ನು ಮಾಡುವಾಗಲೇ ನಿಸ್ಸಂಶಯವಾಗುವಂತೆ ವಿಸ್ತಾರವಾಗಿ ನಿರವಕಾಶವಾಕ್ಯಗಳಿಂದ ಪ್ರತಿಪಾದನೆಮಾಡದೆ ಅತಿಸಂದಿಗ್ಧವಾದ ವಾಕ್ಯಗಳಲ್ಲಿ ಜ್ಞಾತವ್ಯತತ್ತ್ವವನ್ನು ನಿರೂಪಣೆಮಾಡುವುದು ಉಚಿತವೇ?

**ಶ್ರೀಶ್ರೀಗಳವರು:—** ಅನುಚಿತಕರ್ಮವನ್ನು ಶ್ರೀಕೃಷ್ಣನು ಮಾಡುವನೇ? "ಸಂಕ್ಷೇಪವಿಸ್ತರಾಭ್ಯಾಂ ಹಿ ಕಥಯಂತಿ ಮನೀಷಿಣಃ" ಎಂಬ ಪ್ರಮಾಣಶ್ಲೋಕೋಕ್ತನ್ಯಾಯಾನುಸಾರವಾಗಿ ಜ್ಞಾನಿಗಳು ಶಿಷ್ಯನ ಕುತೂಹಲಪರಿಹಾರಾರ್ಥವಾಗಿ ಸಮಸ್ತತತ್ತ್ವವನ್ನೂ ಸ್ವಲ್ಪ ಮಾತುಗಳಿಂದಲೇ ಪ್ರಥಮದಲ್ಲಿಯೇ ಪೂರ್ಣವಾಗಿ ನಿರೂಪಿಸಿಬಿಡುವರು. ಸಂಕ್ಷೇಪವು ಪ್ರಾಯೇಣ ಸಂದಿಗ್ಧವಾಗಿಯೇ ಇರುವುದು. ಇದರಿಂದ ಅನೇಕ ಪ್ರಶ್ನೆಗಳು ಪುನಃ ಪ್ರಾಪ್ತವಾಗುವುವು. ಆಗ ಕೌತುಕನಿರ್ಭರನಾದ ಶಿಷ್ಯನಿಂದ ಪರಿಪೃಷ್ಟನಾದ ಗುರುವು ಸಯುಕ್ತಿಕವಾಗಿ ತನ್ನಿಂದ ಉಪದಿಷ್ಟವಾದ ಪ್ರಮೇಯವನ್ನು ಸಮಗ್ರವಾಗಿ ದೃಷ್ಟಾಂತಗಳಿಂದಲೂ, ಅವಶ್ಯಬಿದ್ದರೆ ಸ್ವಾನುಭವಕಥನದಿಂದಲೂ ದೃಢೀಕರಿಸುವನು. ಹೀಗಿರುವುದರಿಂದಲೇ ದ್ವಿತಿಯಾಧ್ಯಾಯಶ್ಲೋಕಗಳು ಸಂದಿಗ್ಧವಾಗಿದ್ದರೂ ಸಪ್ತ, ಅಷ್ಟಮ, ಪಂಚದಶಾಧ್ಯಾಯಾದಿಗಳಲ್ಲಿ ಬ್ರಹ್ಮಸ್ವರೂಪವು ನಿರವಕಾಶವಾದ ವಾಕ್ಯಗಳಲ್ಲಿ ನಿರೂಪಿತವಾಗಿರುವುದರಿಂದ ತದನುಗುಣವಾಗಿ ಸಾವಕಾಶಶ್ಲೋಕಾರ್ಥಗಳನ್ನು ಯೋಜನೆಮಾಡಬೇಕು. ಜ್ಞಾನಿಸಂಪ್ರದಾಯವನ್ನೇ ಶ್ರೀಕೃಷ್ಣನು ಅವಲಂಬಿಸಿ ತತ್ತ್ವೋಪದೇಶವನ್ನು ಮಾಡಿರುವನು. ಮಹಾಭಾರತದಲ್ಲಿಯೂ, ಭಾಗವತದಲ್ಲಿಯೂ ಸಹ ಪ್ರಥಮ ದ್ವಿತೀಯಾಧ್ಯಾಯಗಳಲ್ಲಿ ಸಕಲ ಪ್ರಮೇಯಗಳೂ ಸಂಕ್ಷೇಪತಃ ನಿರೂಪಿತವಾಗಿ ನಂತರ ಅಷ್ಟಾದಶಪರ್ವಗಳಲ್ಲಿಯೂ ಉಕ್ತಾರ್ಥವು ವಿಶದವಾಗಿ ನಿರೂಪಿಸಲ್ಪಟ್ಟಿರುವುದು.

**ಪಶ್ನೆ—** ಸ್ವಾಮಿ! ಇನ್ನೂ ಎಲ್ಲೆಲ್ಲಿ ಶ್ರೀಕೃಷ್ಣನು ಸಾಂಖ್ಯಜನಕವಾದ ವಿಚಾರವನ್ನು ಮಾಡಿರುವನು? ಅವುಗಳನ್ನು ಸಂಗ್ರಹವಾಗಿ ನಿರೂಪಿಸಬೇಕು.

**ಶ್ರೀಶ್ರೀಗಳವರು—**ಪರಬ್ರಹ್ಮಸ್ವರೂಪಜ್ಞಾನವು ಮುಖ್ಯವಾಗಿ ಸಾಂಖ್ಯಶಬ್ದಾರ್ಥವು. ಪರಬ್ರಹ್ಮಸ್ವರೂಪವನ್ನು ವಿವಿಚ್ಯ ತಿಳಿಯಬೇಕಾದರೆ, ಎಂದರೆ ಪ್ರಕೃತ್ಯಾದಿಗಳಿಂದ ಭಿನ್ನವಾಗಿ, ಅಸಾಧಾರಣಧರ್ಮೋಪೇತನನ್ನಾಗಿ ಸಪ್ರಕಾರವಾಗಿ ತಿಳಿಯಬೇಕಾದರೆ ಜಗದ್ವಿಜ್ಞಾನವೂ, ಕಾಲ, ಆಕಾಶ, ಜೀವಾದಿ ವಸ್ತುಗಳ ಸ್ವರೂಪವಿಜ್ಞಾನವೂ ಅವಶ್ಯಕವು. ಇದರಲ್ಲಿ ಜೀವಾದಿಗಳಿಂದ ವ್ಯಾವೃತ್ತವಾದ ಬ್ರಹ್ಮಸ್ವರೂಪನಿರ್ಣಯವನ್ನು ಸಮಗ್ರದ್ವಿತೀಯಷಟ್ಕದಲ್ಲಿ ಶ್ರೀಕೃಷ್ಣನು

ಮಾಡಿರುತ್ತಾನೆ. ಇವುಗಳೆಲ್ಲಾ ಪ್ರಾಯೇಣ ಪ್ರಥಮಾಧ್ಯಾಯದಲ್ಲಿ ಹರಿಸರ್ವೋತ್ತಮತ್ವಸಾಧನಾವಸರದಲ್ಲಿ ನಮ್ಮಿಂದ ನಿರೂಪಿತವಾಗಿವೆ. ಜೀವಸ್ವರೂಪವನ್ನು ಅಲ್ಲಿ ಅಲ್ಲಿ ಬಿಡಿಸಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ಅದೂ ಸಹ ಪೂರ್ವದಲ್ಲಿ (ಗೀತೋಪದೇಶಗಳು I ಭಾಗ ಅಧ್ಯಾಯ 3-4-5.) ನಮ್ಮಿಂದ ಪ್ರತಿಪಾದಿಸಲ್ಪಟ್ಟಿರುವುದು. ಪ್ರಕೃತಿಸ್ವರೂಪವನ್ನು ನಾವು ದ್ವಿತಿಯಾಧ್ಯಾಯದಲ್ಲಿ ಜಗತ್ಸತ್ಯತ್ವಸಮರ್ಥನಾವಸರದಲ್ಲಿ ಹೇಳಿರುತ್ತೇವೆ. ಶ್ರೀಕೃಷ್ಣನು ಉಪಪಾದಿಸಿರುವ ಮುಕ್ತಿಸ್ವರೂಪವನ್ನು ಮುಕ್ತಿಸ್ವರೂಪವರ್ಣನಾವಸರದಲ್ಲಿ ನಾವು ನಿರೂಪಿಸಿರುತ್ತೇವೆ. ಆದರೂ ಪ್ರಕಾರಭೇದದಿಂದ ಪುನಃ ಪುನಃ ತತ್ತ್ವನಿರೂಪಣವು ಜ್ಞಾನದ ವೈಶದ್ಯಕ್ಕೆ ಕಾರಣವಾಗಬಹುದೆಂದು, ಜ್ಞಾನವಿಜ್ಞಾನಶಬ್ದಗಳಿಂದ ಶ್ರೀಕೃಷ್ಣನು ಉದ್ದೇಶಮಾಡಿ ನಿರೂಪಿಸಿರುವ ಕೆಲವು ತತ್ತ್ವರಹಸ್ಯಗಳನ್ನು, ಅವನಿಂದ ಉಕ್ತವಾದ ರೀತಿಯಿಂದಲೇ ಪ್ರತಿಪಾದಿಸುವೆವು*

2. **ಪ್ರಶ್ನೆ**:— ಸ್ವಾಮಿ! ಹಾಗಾದರೆ ದ್ವಿತೀಯಷಟ್ಕದಲ್ಲಿ ಕೇವಲ ತತ್ತ್ವಪರವಾದ ಶ್ಲೋಕಗಳಿಗೆ ಅರ್ಥವನ್ನು ಹೇಳಬೇಕು.

**ಶ್ರೀಶ್ರೀಗಳವರು** :— ಸಮಸ್ತ ಶ್ಲೋಕಗಳೂ ತತ್ತ್ವಪರವೇ ಆಗಿರುವುವು. ಆದುದರಿಂದ ಕೆಲವು ನಿರ್ದಿಷ್ಟಶ್ಲೋಕಗಳಿಗೆ ಮಾತ್ರ ವಿಂಗಡಿಸಿ ಅರ್ಥವನ್ನು ನಿರೂಪಿಸುವೆವು. ತಥಾಹಿ:—

ಶ್ರೀಕೃಷ್ಣನೇ ಪರಬ್ರಹ್ಮವಿಷಯಕ ತತ್ತ್ವಜ್ಞಾನವು ಸಾಮಾನ್ಯವಿಶೇಷಭಾವದಿಂದ ಎರಡುಪ್ರಕಾರವಾಗಿರುವುದೆಂದು ವಿಂಗಡಿಸಿ ಹೇಳಿ ಬಂದಾದನಂತರ ಮತ್ತೊಂದನ್ನು ಕ್ರಮವಾಗಿ ಉಪಪಾದಿಸಿ ಹೇಳಿರುತ್ತಾನೆ:—

---

ಬ್ರಹ್ಮಸ್ವರೂಪವರ್ಣನೆಯು ಸಮಗ್ರ ದ್ವಿತೀಯಷಟ್ಕದ ಕಾರ್ಯವು. ಪ್ರಥಮಷಟ್ಕದಲ್ಲಿಯೂ ಸಹ (3.42-43.), (4.5-14.), (5.29.), (6.29-32.) ಇತ್ಯಾದಿ ಶ್ಲೋಕಗಳಲ್ಲಿಯೂ, ತೃತೀಯಷಟ್ಕದಲ್ಲಿ (13.3.), (13.13-18.), (13.23.), (13.28.), (13.32-34.), (14.3-4.), (14.19.), (14.27.), ಹದಿನೈದನೆಯ ಅಧ್ಯಾಯದ ಬಹು ಶ್ಲೋಕಗಳಲ್ಲಿಯೂ, (17.23.), (18.54-58.), (18.61-62.), (18.65-66.) ಇತ್ಯಾದಿ ಬಹುಸ್ಥಳಗಳಲ್ಲಿ ಕಥಿತವಾಗಿರುವುದು.

ಜೀವಸ್ವರೂಪಾದಿಗಳನ್ನು ಇದೇ ನ್ಯಾಯದಿಂದ ಅಲ್ಲಿ ಅಲ್ಲಿ ನಿರೂಪಿತವಾಗಿರುವುದನ್ನು ವಿಂಗಡಿಸಿ ತಿಳಿಯಬೇಕು.

(1) **ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ।**
**ಯಜ್ಜ್ಞಾತ್ವಾ ನೇಹ ಭೂಯೋಽನ್ಯ ಜ್ಜ್ಞಾತವ್ಯಮವಶಿಷ್ಯತೇ॥**
—(7. 2.)

ಎಲೈ ಪಾರ್ಥನೇ! ನಾನು ವಿಶೇಷವಾಗಿ ತಿಳಿಯಲ್ಪಡಬೇಕಾದ ಭಗವನ್ಮಹಿಮೆಯಿಂದ ಸಹಿತವಾದ ಜ್ಞಾನವನ್ನು (ಸಾಮಾನ್ಯವಾಗಿ ತಿಳಿಯಲ್ಪಡಬೇಕಾದ ಭಗವನ್ಮಹಿಮೆಯನ್ನು) ನಿನಗೆ ಸಮಗ್ರವಾಗಿ ಹೇಳುತ್ತೇನೆ. ನಾನು ಹೇಳುವುದನ್ನು ಕೇಳಿದನಂತರ ನಿನಗೆ ಮುಖ್ಯವಾದ ಜ್ಞಾತವ್ಯಪ್ರಮೇಯವು ಒಂದೂ ಉಳಿಯುವುದಿಲ್ಲ.

ಹೀಗೆ ಪ್ರತಿಜ್ಞೆ ಮಾಡಿ ಶ್ರೀಕೃಷ್ಣನು **'ಸಾಮಾನ್ಯಸಾಂಖ್ಯ'** ವನ್ನು ಈ ರೀತಿಯಾಗಿ ನಿರೂಪಿಸಿರುತ್ತಾನೆ:—

(2) **ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ।**
**ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ॥**
**ಅಪರೇಯ ಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ।**
**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್॥**
**ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ।**
**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ॥**
**ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ।**
**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥**
—(7. 2-7.)

ಈ ಶ್ಲೋಕಾರ್ಥವು ಪೂರ್ವದಲ್ಲಿಯೇ ನಿರೂಪಿತವಾಗಿರುತ್ತದೆ. ಇದರ ತಾತ್ಪರ್ಯವು ಸ್ಪಷ್ಟವಾಗಿರುವುದು. ಪರಮಾತ್ಮನು ಚೇತನಾಚೇತನ ಸರ್ವ ಜಗತ್ತಿಗಿಂತಲೂ ವಿಲಕ್ಷಣನು. ಆತನು ಲಕ್ಷ್ಮ್ಯಾದಿ ಸರ್ವ ಚೇತನರಿಗಿಂತಲೂ ಉತ್ತಮನು. ಆತನೇ ಸರ್ವೋತ್ತಮನು. ಆತನೇ ಮುಖ್ಯ ಸೃಷ್ಟಿಕರ್ತನು, ಸ್ಥಿತಿಕರ್ತನು, ಸಂಹಾರಕರ್ತನು, ಸರ್ವನಿಯಾಮಕನು, ಸರ್ವಾಧಾರನು ಇತ್ಯಾದಿ ರೀತಿಯಾಗಿ ಬ್ರಹ್ಮನನ್ನು ತಿಳಿಯುವ ಜ್ಞಾನವು ಸಾಮಾನ್ಯ ಜ್ಞಾನವು.

**ವಿಜ್ಞಾನ**ವೆಂದು ನಿರ್ದಿಷ್ಟವಾದ **ಸಾಂಖ್ಯವಿಶೇಷ**ವನ್ನು ಶ್ರೀಕೃಷ್ಣನು ಉತ್ತರ ಶ್ಲೋಕಗಳಲ್ಲಿ ನಿರೂಪಿಸಿರುತ್ತಾನೆ:—

(3) ರಸೋಽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥
ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥
ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಂ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಂ ॥
ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಂ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥
ಯೇ ಚೈವ ಸಾತ್ತ್ವಿಕಾಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ ॥
—(7. 8-12.)

ಈ ಶ್ಲೋಕಗಳು ಪೂರ್ವದಲ್ಲಿಯೇ (ಪುಟ 21 ಪ್ರಥಮಭಾಗದಲ್ಲಿ) ವ್ಯಾಖ್ಯಾತವಾಗಿರುವುವು. ಲೋಕದಲ್ಲಿರುವ ಸಾತ್ವಿಕ ರಾಜಸ ತಾಮಸಗಳೆಂಬ ತ್ರಿವಿಧ ಪದಾರ್ಥಗಳೂ ಮತ್ತು ಈ ಪದಾರ್ಥಗಳಲ್ಲಿರುವ ತ್ರಿವಿಧ ಸ್ವರೂಪಧರ್ಮಗಳೂ ನನ್ನಿಂದಲೇ ಉಂಟಾಗುತ್ತವೆ; ನಾನು ಅವುಗಳನ್ನು ಆಶ್ರಯಿಸಿಕೊಂಡಿರುವುದಿಲ್ಲ, ಅವು ನನ್ನ ಆಶ್ರಯದಲ್ಲಿ ಇರುತ್ತವೆ ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ಪ್ರತಿ ಪದಾರ್ಥದಲ್ಲಿಯೂ ಇರುವ ಸ್ವರೂಪ, ಪ್ರಮಿತಿ, ಪ್ರವೃತ್ತಿ ರೂಪ ತ್ರಿವಿಧಸತ್ತೆಯೂ ಪರಮಾತ್ಮನ ಅಧೀನವಾಗಿರುವುದು. ಪರಮಾತ್ಮನು ಪ್ರತಿ ಪದಾರ್ಥದಲ್ಲಿಯೂ ಇರುವ ಸ್ವಾಭಾವಿಕ ಧರ್ಮಗಳಿಗೂ ನಿಯಾಮಕನು ಎಂದು ತಿಳಿಯುವುದು **ವಿಜ್ಞಾನವು.** ಸ್ವಾಭಾವಿಕ ಧರ್ಮಗಳಿಗೆ ಪರಮಾತ್ಮನಿಂದ ಪ್ರಾಪ್ತವಾಗುವ ವಿಶೇಷವೇನು ಎಂದು ಶಂಕಿಸಕೂಡದು. "ಏತೇನ ಹ ವಾ ಪಯೋ ಮಂಡಂ ಭವತಿ" ಇತ್ಯಾದಿ ಶ್ರುತಿಗಳಿಂದಲೂ, "ಪಯೋಂಬುವಚ್ಚೇತ್ತತ್ರಾಪಿ" ಇತ್ಯಾದಿ ಸೂತ್ರಗಳಿಂದಲೂ, ದ್ರವ್ಯಂ ಕರ್ಮ ಚ ಕಾಲಶ್ಚ ಇತ್ಯಾದಿ ಭಾಗವತಾದಿ ಸ್ಮೃತಿಗಳಿಂದಲೂ ಪರಮಾತ್ಮನು ಸ್ವಾಭಾವಿಕ ಧರ್ಮಗಳಿಗೂ ನಿಯಾಮಕನು, ಪರಮಾತ್ಮನೊಬ್ಬನೇ ಸ್ವತಂತ್ರನು ಎಂದು ಸಿದ್ಧವಾಗಿರುವುದು. ಶ್ರೀಕೃಷ್ಣನೂ ಸಹ ಗೀತೆಯ ದ್ವಿತೀಯಾಧ್ಯಾಯದಲ್ಲಿಯೇ ಪರಬ್ರಹ್ಮನು ಆಶ್ಚರ್ಯಸ್ವರೂಪನೆಂದು ಹೇಳಿರುತ್ತಾನೆ.

ಜ್ಞಾನವಿಜ್ಞಾನ ವಿಭಾಗದಿಂದ ದ್ವಿಪ್ರಕಾರವಾದ ಸಾಂಖ್ಯವನ್ನು ಶ್ರೀ ಕೃಷ್ಣನು ನವಮಾಧ್ಯಾಯದಲ್ಲಿಯೂ ನಿರೂಪಿಸಿರುತ್ತಾನೆ:—

(4) **ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ।**
**ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್॥**
**ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಂ।**
**ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಂ॥**
**ಅಶ್ರದ್ಧಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ।**
**ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ॥**
—(9. 1-3.)

ಎಲೈ ಪರಂತಪನೇ! ಅಸೂಯಾರಹಿತನಾದ (ಗುಣವಂತರಲ್ಲಿ ದೋಷ ಬುದ್ಧಿರಹಿತನಾದ) ನಿನಗೋಸ್ಕರ ಅತಿ ಗುಹ್ಯವಾದ ವಿಜ್ಞಾನದಿಂದ ಸಹಿತವಾದ ಜ್ಞಾನವನ್ನು (ಸಾಮಾನ್ಯವಾದ ಜ್ಞಾತವ್ಯಭಗವನ್ಮಹಿಮೆಗಳನ್ನೂ, ವಿಶೇಷವಾಗಿ ಜ್ಞಾತವ್ಯವಾದ ಭಗವನ್ಮಹಿಮೆಗಳನ್ನೂ) ಉಪದೇಶ ಮಾಡುತ್ತೇನೆ. ಇದನ್ನು ತಿಳಿದು (ಅನುಷ್ಠಾನ ಮಾಡಿದ ಮೇಲೆ) ನೀನು ಸಕಲ ಪಾಪಗಳಿಂದಲೂ ಮುಕ್ತ ನಾಗುತ್ತೀಯೆ. ಇದು ರಾಜವಿದ್ಯೆಯು ಎಂದರೆ ಸಾಕ್ಷಾನ್ಮೋಕ್ಷೋಪಯೋಗಿ ಯಾದ ಪ್ರಧಾನ ವಿದ್ಯೆಯು, ಪ್ರಧಾನರಹಸ್ಯತತ್ವವು, ಪಾಪಹಾರಕವಾದುದು, ಶ್ರೇಷ್ಠವಾದುದು; ಸರ್ವೇಂದ್ರಿಯ ಪ್ರೇರಕನಾದ ಭಗವತ್ಸಾಕ್ಷಾತ್ಕಾರ ಸಾಧನ ವಾದುದು, ಜಗದ್ಧಾರಕನಾದ ಪರಮಾತ್ಮನ ಪ್ರೀತಿಸಾಧನವು, ಸಂಪಾದಿಸು ವುದಕ್ಕೆ ಅತಿ ಸುಲಭವು, ಮತ್ತು ಅಕ್ಷಯವಾದ ಮೋಕ್ಷ ಫಲಪ್ರದವಾದುದು. ಭಗವದ್ವಿಷಯಕವಾದ ಈ ಜ್ಞಾನದ ವಿಷಯದಲ್ಲಿ ಶ್ರದ್ಧಾರಹಿತರಾದ ಎಂದರೆ ಇದು ಪರಮಪುರುಷಾರ್ಥವೆಂದು ತಿಳಿಯದ ಜನರು ನನ್ನನ್ನು ಹೊಂದದೇನೆ ಜನನ ಮರಣ ಪ್ರವಾಹ ರೂಪವಾದ ಭಯಂಕರವಾದ ಸಂಸಾರಮಾರ್ಗದಲ್ಲಿ ನಿರಂತರ ಸ್ಥಿತರಾಗಿರುತ್ತಾರೆ.

ಈ ಶ್ಲೋಕಗಳಲ್ಲಿ ಕೃಷ್ಣನು ತಾನು ನಿರೂಪಿಸುವ ವಿದ್ಯೆಯು ವ್ಯಾವ ಹಾರಿಕವಾದ ಸುಳ್ಳಾದ ಧರ್ಮಸ್ವರೂಪಮಾತ್ರ ನಿರೂಪಣೆಯಲ್ಲ; ಅಪರ ಬ್ರಹ್ಮವಿದ್ಯೆಯಲ್ಲವೆಂದು ತೋರಿಸುವುದಕ್ಕಾಗಿ, ಮೋಕ್ಷಪ್ರದತ್ವಾದಿ ಮಹಾ

ಮಹಿಮೋಪೇತವು ಸಾಕ್ಷಾತ್ ಭಗವತ್ಸಾಕ್ಷಾತ್ಕಾರಸಾಧನವು ಇತ್ಯಾದಿ ರೀತಿಯಲ್ಲಿ ಪ್ರಶಂಸನೆಮಾಡಿ ಈ ರಾಜವಿದ್ಯೆಯು ಪಾರಮಾರ್ಥಿಕತತ್ವಬೋಧಕವಾದ ಸಾಂಖ್ಯವೇ ಎಂದು ಸ್ಪಷ್ಟವಾಗುವಂತೆ ವಿವರಿಸಿರುತ್ತಾನೆ.

ಪ್ರತಿಜ್ಞಾತವಾದ ಜ್ಞಾನವನ್ನು ಎಂದರೆ ಸಾಮಾನ್ಯ ಜ್ಞಾತವ್ಯವಾದ ಸಾಂಖ್ಯ ಸ್ವರೂಪವನ್ನು ಶ್ರೀಕೃಷ್ಣನು ಹೀಗೆ ವರ್ಣಿಸಿರುತ್ತಾನೆ:—

(5) **ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।**
**ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥**
**ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ ।**
**ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥**
**ಯಥಾಽಽಕಾಶಸ್ಥಿತೋ ನಿತ್ಯಂ ವಾಯುಸ್ಸರ್ವತ್ರಗೋ ಮಹಾನ್ ।**
**ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ।**
**ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ ।**
**ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಂ ॥**
**ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।**
**ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥**
**ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।**
**ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥**
**ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ ।**
**ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ॥**

—(9. 4-10.)

ಎಲೈ ಪಾರ್ಥನೇ! ಚರಾಚರಾತ್ಮಕವಾದ ಈ ಸಕಲ ಪ್ರಪಂಚವೂ ಸೂಕ್ಷ್ಮದೇಹವುಳ್ಳ ನನ್ನಿಂದ ವ್ಯಾಪಿಸಲ್ಪಟ್ಟಿದೆ. ಸರ್ವ ಪದಾರ್ಥಗಳೂ ನನ್ನ ಆಧಾರದಲ್ಲಿ ಇರುತ್ತವೆ. ನಾನು ಅವುಗಳನ್ನು ಆಶ್ರಯಿಸಿರುವುದಿಲ್ಲ. ಸರ್ವ ಪ್ರಾಣಿಗಳೂ ನನ್ನ ಆಧಾರದಲ್ಲಿಯೇ ಇದ್ದರೂ ನನ್ನ ಸ್ಪರ್ಶವನ್ನು ಹೊಂದಿ ನನ್ನ ಧರ್ಮಸಂಕ್ರಾಂತಿಯನ್ನು ಹೊಂದುವುದಿಲ್ಲ. ಇದು ನನ್ನ ಅಚಿಂತ್ಯಸಾಮರ್ಥ್ಯವೆಂದು ತಿಳಿ. ನಾನು ಹೇಗೋ ಹಾಗೆಯೇ ನನ್ನ ದೇಹವೂ ಕೂಡ ಸ್ಪೃಷ್ಟ್ಯಾದಿ

ಗಳನ್ನು ಮಾಡುವುದಾಗಿ ಸಕಲ ಜಗದಾಧಾರವಾಗಿದ್ದು ಮತ್ತೊಂದು ಪದಾರ್ಥವನ್ನು ಆಶ್ರಯಿಸಿರುವುದಿಲ್ಲ. ಸರ್ವದಾ ಆಕಾಶದಲ್ಲಿರುವ ಮಹಾ ವಾಯುವು ಸರ್ವಸ್ಥಳದಲ್ಲಿಯೂ ಇದ್ದರೂ ಆಯಾಯ ಸ್ಥಳದಲ್ಲಿರುವ ಧರ್ಮ ಸಂಪರ್ಕವನ್ನು ಹೇಗೆ ಹೊಂದುವುದಿಲ್ಲವೋ * ಹಾಗೆಯೇ ಸಮಸ್ತ ಚರಾಚರ ಪ್ರಪಂಚವೂ ನನ್ನಲ್ಲಿದ್ದರೂ ಅನ್ಯೋನ್ಯ ಧರ್ಮಸಂಪರ್ಕರಹಿತವಾಗಿರುವುದೆಂದು ತಿಳಿ. ಹೇ ಕೌಂತೇಯನೇ! ಪ್ರಳಯಕಾಲದಲ್ಲಿ ಸರ್ವ ಜೀವ ಜಡಾತ್ಮಕ ಪದಾರ್ಥ ಸಮೂಹವೂ ನನ್ನ ಅಧೀನವಾದ ಪ್ರಕೃತಿಯನ್ನು ಸೇರಿ ನನ್ನಲ್ಲಿ ಲೀನವಾಗುತ್ತವೆ. (ಜೀವರುಗಳು ಚೇತನ ಪ್ರಕೃತಿಯಲ್ಲಿಯೂ ಜಡಗಳು ಜಡಪ್ರಕೃತಿಯಲ್ಲಿಯೂ ಲಯಹೊಂದುವುವೆಂದು ವಿವೇಕವು.) ಪುನಃ ಸೃಷ್ಟಿಕಾಲದಲ್ಲಿ ನಾನು ಅವುಗಳನ್ನು ವಿಧವಿಧವಾಗಿ ಸೃಷ್ಟಿಸುತ್ತೇನೆ. ನನ್ನ ಅಧೀನವಾದ ಪ್ರಕೃತಿಯನ್ನು ಸೃಷ್ಟ್ಯುಪಕರಣ ಪದಾರ್ಥವನ್ನಾಗಿ ಆಶ್ರಯಿಸಿ (ಜಡ ಪ್ರಕೃತಿಯನ್ನು ಉಪಾದಾನತ್ವೇನ ಆಶ್ರಯಿಸಿ, ಚೇತನ ಪ್ರಕೃತಿಯನ್ನು ನಿಮಿತ್ತವನ್ನಾಗಿ ಆಶ್ರಯಿಸಿ) ಪ್ರಕೃತಿ ವಶವಾದುದರಿಂದಲೇ ಅಸ್ವತಂತ್ರವಾದ ಈ ಸಮಸ್ತ ಭೂತಸಮುದಾಯವನ್ನೂ ಪುನಃ ಪುನಃ (ಪ್ರತಿಕಲ್ಪದಲ್ಲಿಯೂ) ನಾನಾ ಪ್ರಕಾರವಾಗಿ ಸೃಷ್ಟಿಮಾಡುತ್ತೇನೆ. ಹೀಗೆ ನಾನಾ ವಿಧವಾಗಿ ಸೃಷ್ಟ್ಯಾದಿಗಳನ್ನು ನಾನು ಮಾಡಿದರೂ ಆ ಕರ್ಮಗಳು ನನ್ನನ್ನು ಬಂಧಿಸುವುದಿಲ್ಲ. ಯಾತಕ್ಕೆಂದರೆ ವಸ್ತುತಃ ಉದಾಸೀನನಲ್ಲದಿದ್ದರೂ ಉದಾಸೀನನಾದ ಪುರುಷನೋಪಾದಿಯಲ್ಲಿ ಆ ನನ್ನ ಸೃಷ್ಟ್ಯಾದಿಕರ್ಮಗಳಲ್ಲಿ ನಾನು ಪ್ರಯೋಜನಾಪೇಕ್ಷಾರಹಿತನಾಗಿ ನಿರಾಯಾಸದಿಂದ ಪ್ರವೃತ್ತನಾಗಿರುತ್ತೇನೆ. ‡ ಅಧಿಪತಿ

---

* ವಾಯುವು ಕೇವಲ ಶೀತಳವಾಗಿರುವುದು ವಾಯುಗತ ಜಲಕಣಗಳ ನಿಮಿತ್ತಕವು. ವಾಯುವು ಕೇವಲ ಉಷ್ಣವಾಗಿರುವುದು ವಾಯುಸಂಬಂಧಿ ಅಗ್ನಿಕಣ ನಿಮಿತ್ತಕವು: ಸುರಭಿಯಾದರೆ ಪೃಥಿವೀಕಣ ನಿಮಿತ್ತಕವು. ವಸ್ತುತಃ ಔಷ್ಣ್ಯಶೈತ್ಯಾದಿ ಧರ್ಮಗಳನ್ನು ಹೊಂದುವುದಿಲ್ಲ.

‡ ಪರಮಾತ್ಮನು ಕರ್ಮನಿರ್ಲಿಪ್ತನು ಎಂದರೆ 1. ಆತನು ಸ್ವಪ್ರಯೋಜನವನ್ನು ಉದ್ದೇಶಮಾಡಿ ಜಗತ್ಸೃಷ್ಟಿ ಪ್ರೇರಣಾದಿ ವ್ಯಾಪಾರಗಳನ್ನು ಮಾಡುವವನಲ್ಲ. ಆತನು ಪೂರ್ಣಾನಂದನು. 2. ಪರಮಾತ್ಮನು ಜನರು ಕರ್ಮಮಾಡುವಂತೆ ಆಯಾಸದಿಂದ ಕರ್ಮಗಳನ್ನು ಮಾಡುವುದಿಲ್ಲ. ಆತನು ಅಚಿಂತ್ಯಾದ್ಭುತಸಾಮರ್ಥ್ಯೋಪೇತನು. 3. ಪರಮಾತ್ಮನು ಕರ್ಮಫಲವನ್ನು (ದುಃಖಾದಿ

ಯಾದ ನನ್ನಿಂದ (ಪ್ರೇರಿತವಾಗಿ) ಪ್ರಕೃತಿಯು ಚರಾಚರ ಪ್ರಪಂಚವನ್ನು ನಿರ್ಮಿಸುತ್ತದೆ. ಈ ರೀತಿಯಾದ ಕಾರಣದಿಂ (ಸ್ವತಂತ್ರಕರ್ತನಾದ ಮತ್ತು ಪ್ರೇರಕನಾದ ನನ್ನಿಂದ, ಪರಾಧೀನ ಕಾರಣವಾದ ಉಭಯವಿಧ ಪ್ರಕೃತಿಯಿಂದ) ಚರಾಚರಾತ್ಮಕ ಜಗತ್ತು ಪುನಃ ಪುನಃ ಹುಟ್ಟುತ್ತದೆ.

ಈ ಪ್ರಕಾರವಾಗಿ ಪರಮಾತ್ಮನ ಸರ್ವತ್ರವ್ಯಾಪ್ತಿ, ನಿಖಿಲಜಗದಾಧಾರತ್ವ, ಸರ್ವತ್ರ ಇದ್ದರೂ ತತ್ತತ್ಪದಾರ್ಥಗತಧರ್ಮಸಂಕ್ರಾಂತಿರಾಹಿತ್ಯ, ಕರ್ಮ ಲೇಪಾಭಾವ, ಸ್ವತಂತ್ರ ಸೃಷ್ಟಿಕರ್ತೃತ್ವ, ಪುನಃಪುನಃ ಜಗನ್ನಿರ್ಮಾಣ ಹೇತುತ್ವವನ್ನೂ ಮತ್ತು ಪ್ರಕೃತ್ಯಾದಿಗಳ ಅಧೀನತೆಯನ್ನೂ ತಿಳಿಯುವುದು, **"ಜ್ಞಾನ"**ವು, ಸಾಮಾನ್ಯಸಾಂಖ್ಯವು.

ತನ್ನ ಮಾಹಾತ್ಮ್ಯೆಯನ್ನು ತಿಳಿಯದ ದುರ್ಜನರನ್ನು ಅವರಿಗೆ ಪ್ರಾಪ್ತವಾಗುವ ಅನರ್ಥಫಲಪ್ರದರ್ಶನಪೂರ್ವಕವಾಗಿ ನಿಂದಿಸಿ, ತನ್ನನ್ನು ಭಜಿಸುವ ಸಾಧುಸಜ್ಜನರನ್ನು ಸ್ತುತಿಸಿ, ಶ್ರೀಕೃಷ್ಣನು ತನ್ನಿಂದ ಪ್ರತಿಜ್ಞಾತವಾದ ವಿಜ್ಞಾನವನ್ನು ಈಪ್ರಕಾರ ವರ್ಣಿಸಿರುತ್ತಾನೆ :—

6 **ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಂ ।**
**ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಂ ॥**

**ಪಿತಾಽಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।**
**ವೇದ್ಯಂ ಪವಿತ್ರ ಮೋಂಕಾರ ಋಕ್ಸಾಮಯಜುರೇವಚ ॥**

---

ಗಳನ್ನು) ಭೋಗಿಸುವುದಿಲ್ಲ. ಆತನು ಯೋಗೇಶ್ವರೇಶ್ವರನಾದ ಸ್ವತಂತ್ರಪುರುಷನು. 4. **ಕೆಲವು** ಶುಭಕರ್ಮ ಫಲಗಳನ್ನು (ಜೀವದತ್ತವಾದುವುಗಳನ್ನೂ ಸಹ) ಆತನು ಸ್ವೀಕರಿಸಿದರೂ ಸಹ ಆತನಿಗೆ ಅದರಿಂದ ವೃದ್ಧಿಯು ಇಲ್ಲ. ಜಲಬಿಂದುವು ಸಮುದ್ರಕ್ಕೆ ಬಂದಂತೆ ಕರ್ಮಫಲಭೋಗದಿಂದ ಆತನ ಆನಂದವು ವೃದ್ಧಿಯಾಗುವುದಿಲ್ಲ. ಶುಭಕರ್ಮ ಫಲಗಳು ಬರದಿದ್ದರೆ ಆತನಿಗೆ ಹಾನಿಯಿಲ್ಲ. ಇದಕ್ಕೆ ಲೌಕಿಕ ದೃಷ್ಟಾಂತವು ಸಿಕ್ಕುವುದಿಲ್ಲ. ಜಲಬಿಂದುಸಾಗರ ದೃಷ್ಟಾಂತವು ಸರ್ವವಿಷಯಕವಲ್ಲ. **'ಆಗಮಿಷ್ಯತ್ಸುಖಂ ಚಾಪಿ ತಸ್ಯಾಸ್ತ್ಯೇವ ಸದಾಪಿ ತು'** ಇತ್ಯಾದಿ ಪ್ರಮಾಣ ವಚನಾನುಸಾರವಾಗಿ ಶ್ರೀ ಪರಮಾತ್ಮನು ಸರ್ವದಾ ಪರಿಪೂರ್ಣವಾದ ವೃದ್ಧಿಹ್ರಾಸವರ್ಜಿತವಾದ ನಿತ್ಯಾನಂದವುಳ್ಳವನು.

**ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।**
**ಪ್ರಭವಃ ಪ್ರಲಯಸ್ಥಾನಂ ನಿಧನಂ ಬೀಜಮವ್ಯಯಂ ॥**
**ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।**
**ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥**

(9. 18-19.)

ಎಲೈ ಅರ್ಜುನನೇ ! ನಾನು ಸೃಷ್ಟ್ಯಾದಿಕೃತಿಸ್ವರೂಪನಾದುದರಿಂದ ಕ್ರತುಶಬ್ದವಾಚ್ಯನಾಗಿ ಕ್ರತುವಿನಲ್ಲಿ * ಇದ್ದು ಕ್ರತುವಿಗೆ ನಿಯಾಮಕನಾಗಿಯೂ, ಕ್ರತುಫಲಭೋಕ್ತನಾಗಿಯೂ ಇರುತ್ತೇನೆ. ಪ್ರಮಾಣಪ್ರಮಿತವಾದ ಸರ್ವವನ್ನೂ ತಿಳಿಯುವುದರಿಂದ ನಾನು ಯಜ್ಞನಾಮಕನಾಗಿಯೂ, ಯಜ್ಞಫಲಭೋಕ್ತೃವೂ ಆಗಿರುವೆನು. ಸ್ವಾತ್ಮಾಧಾರದಲ್ಲಿಯೇ ಇರುವ ಅನನ್ಯಾಶ್ರಿತಪುರುಷನಾದುದರಿಂದ ಸ್ವಧಾಶಬ್ದವಾಚ್ಯನಾದ ನಾನು ಸ್ವಧೆಯಲ್ಲಿದ್ದು ಸ್ವಧಾನಿಯಾಮಕನಾಗಿಯೂ ಆಗಿರುವೆನು. ತಾಪತ್ರಯಸಂತಪ್ತರಿಗೆ ನಿಧಿಯಾದುದರಿಂದ ಔಷಧನಾಮಕನಾದ ನಾನು ಔಷಧದಲ್ಲಿದ್ದು ಔಷಧಕ್ಕೆ ಶ್ರೈಷ್ಠ್ಯಪ್ರದನಾಗಿಯೂ, ನಿಯಾಮಕನಾಗಿಯೂ ಇರುವೆನು. ಭಕ್ತರಿಗೆ ಜ್ಞಾನದಾನಮಾಡಿ ರಕ್ಷಣೆಮಾಡುವುದರಿಂದ ಮಂತ್ರನಾಮಕನಾದ ನಾನು ಮಂತ್ರದಲ್ಲಿದ್ದು ಮಂತ್ರಕ್ಕೆ ಶ್ರೈಷ್ಠ್ಯಪ್ರದನಾಗಿಯೂ, ಪ್ರತಿಪಾದ್ಯನಾಗಿಯೂ ನಿಯಾಮಕನಾಗಿಯೂ, ಫಲದಾತೃವಾಗಿಯೂ ಇರುವೆನು. ಸರ್ವರಿಗಿಂತಲೂ ಶ್ರೇಷ್ಠನಾದುದರಿಂದ ಆಜ್ಯಶಬ್ದವಾಚ್ಯನಾದ ನಾನು ಆಜ್ಯದಲ್ಲಿ ಅದರ ಸ್ವಾಭಾವಿಕಧರ್ಮಕ್ಕೆ ನಿಯಾಮಕನಾಗಿ ಅದಕ್ಕೆ ಶ್ರೇಷ್ಠತ್ವಪ್ರದನಾಗಿರುವೆನು. ಸ್ವತಃ ಗತಿಹೀನವಾದ ಪ್ರಪಂಚವನ್ನು ಉತ್ತಮಗತಿಯನ್ನು ಕುರಿತು ನಯನಮಾಡುವುದರಿಂದ ಅಗ್ನಿಶಬ್ದವಾಚ್ಯನಾದ ನಾನು ಅಗ್ನಿಯಲ್ಲಿ ಇದ್ದು ಅದಕ್ಕೆ ಶ್ರೇಷ್ಠತ್ವಪ್ರದನಾಗಿ, ಅದರ ಸ್ವಾಭಾವಿಕಧರ್ಮಗಳಿಗೂ ನಿಯಾಮಕನಾಗಿ ಪ್ರೇರಕ

---

* 1. ದೀಕ್ಷಾದ್ಯವಭೃತಾಂತವಾದ ಜ್ಯೋತಿಷ್ಟೋಮಾದಿನಾಮಕಸಮಗ್ರಯಜ್ಞಕರ್ಮಕ್ಕೆ ಕ್ರತುವೆಂದು ಹೆಸರು.

2. ದೇವತೋದ್ದೇಶದಿಂದ ದ್ರವ್ಯತ್ಯಾಗರೂಪವಾದ ಯಾಗೈಕದೇಶವಾದ ಪ್ರಧಾನ ಕರ್ಮಕ್ಕೆ ಯಜ್ಞವೆಂದು ಹೆಸರು.

3. ಪಿತೃಗಳಿಗೆ ಮಾಡುವ ತಿಲೋದಕದಾನಕ್ಕೆ ಸ್ವಧಾ ಎಂದು ಹೆಸರು.

ನಾಗಿರುವೆನು. ಯಜ್ಞಾದಿಗಳಲ್ಲಿ ಆಹೂತನಾದುದರಿಂದ ಹುತನಾಮಕನಾದ ನಾನು ಹೋಮದ್ರವ್ಯದಲ್ಲಿದ್ದು ಅದಕ್ಕೆ ಶ್ರೇಷ್ಠತ್ವಪ್ರದನಾಗಿ ಅದರಲ್ಲಿ ನಿಯಾಮಕನಾಗಿರುತ್ತೇನೆ. ನಾನೇ ಜಗತ್ತಿಗೆ ಜನಕನು, ತಾಯಿಯು, ಪೋಷಕನು ಮತ್ತು ಧಾರಕನು, ಪಿತಾಮಹನು ಎಂದರೆ ಪೂಜ್ಯನು, ವೇದ್ಯನು ಎಂದರೆ ಪ್ರಧಾನಜ್ಞೇಯವಸ್ತುವು; ಪವಿತ್ರನು ಎಂದರೆ ಸ್ಮರಣೆಮಾಡುವವರನ್ನು ಪವಿತ್ರಮಾಡುವವನು, ಪ್ರಣವಪ್ರತಿಪಾದ್ಯನು. ಬ್ರಹ್ಮಾದಿಗಳಿಂದ ಅರ್ಚ್ಯನಾದುದರಿಂದ ಋಕ್‌ಶಬ್ದವಾಚ್ಯನಾದ ನಾನು ಋಗ್ವೇದದಲ್ಲಿದ್ದು ಅದಕ್ಕೆ ಸರ್ವ ವೇದಾಪೇಕ್ಷಯಾ ಶ್ರೈಷ್ಠ್ಯಪ್ರದನಾಗಿ, ಋಗ್ವೇದಪ್ರತಿಪಾದ್ಯನಾಗಿ, ಅದರಲ್ಲಿ ನಿಯಾಮಕನಾಗಿರುತ್ತೇನೆ. ಸರ್ವರೂಪಗಳಲ್ಲೂ ಸಮನಾಗಿರುವುದರಿಂದ ಸಾಮಶಬ್ದವಾಚ್ಯನಾದ ನಾನು ಸಾಮವೇದದಲ್ಲಿದ್ದು ಅದಕ್ಕೆ ಶ್ರೈಷ್ಠ್ಯಪ್ರದನಾಗಿ, ಅದರಿಂದ ಪ್ರತಿಪಾದ್ಯನಾಗಿ ಸಾಮವೇದದಲ್ಲಿ ನಿಯಾಮಕನಾಗಿರುವೆನು. ಯಾಗೋದ್ದೇಶ್ಯದೇವತೆಯಾನುದರಿಂದ ಯಜ್ಞಶಬ್ದವಾಚ್ಯನಾದ ನಾನು ಯಜುರ್ವೇದದಲ್ಲಿದ್ದು ಯಜುರ್ವೇದದಿಂದ ಪ್ರತಿಪಾದ್ಯನಾಗಿ ಅದರಲ್ಲಿ ನಿಯಾಮಕನಾಗಿರುವೆನು. ಮೋಕ್ಷಾರ್ಥಿಗಳಿಂದ ಗಮ್ಯನಾದುದರಿಂದ ನಾನು ಗತಿಯೆಂದೆನಿಸುವೆನು. ನಾನು ಸರ್ವರಿಗೂ ಪೋಷಕನು, ಸ್ವಾಮಿಯು ಮತ್ತು ಸಾಕ್ಷಿಯು ಎಂದರೆ ಸರ್ವವನ್ನೂ ಸಾಕ್ಷಾತ್ ನೋಡುವವನು. ನಾನು ಸರ್ವರಿಗೂ ಆಶ್ರಯನು, ಭೀತರಕ್ಷಕನು, ಅನಿಮಿತ್ತಬಂಧುವು, ಸೃಷ್ಟಿಕರ್ತನು, ಸಂಹಾರಕರ್ತನು, ಸರ್ವಾಧಾರನು, ಪ್ರಳಯದಲ್ಲಿ ಸರ್ವಜಗತ್ತನ್ನೂ ಉದರದಲ್ಲಿಟ್ಟುಕೊಳ್ಳುವವನು. ನಾನೇ ಜಗದ್ವ್ಯಂಜಕನು, ಅಪರೂ ವಿಕಾರರಹಿತನು. ಮತ್ತು ಆದಿತ್ಯನಲ್ಲಿದ್ದು ನಾನೇ ತಪಿಸುತ್ತೇನೆ, ಎಂದರೆ ಆದಿತ್ಯನಲ್ಲಿರುವ ತಪನಧರ್ಮಕ್ಕೆ ನಿಯಾಮಕನಾಗಿರುತ್ತೇನೆ. ಮೇಘಚಕ್ರಗತನಾಗಿ ವೃಷ್ಟಿಯನ್ನು ಸುರಿಸುತ್ತೇನೆ ಮತ್ತು ನಿಲ್ಲಿಸುತ್ತೇನೆ. ಮೃತಿನಾಶಕನಾದುದರಿಂದ ಅಮೃತನೂ ನಾನೇ. ಆಯುಃಕ್ಷಯವಾದನಂತರ ಸಂಹಾರಕನೂ ನಾನೇ. ಸಕಲ ಕಾರ್ಯಪದಾರ್ಥಗಳಿಗೂ ನಾನೇ ನಿಯಾಮಕನು; ಸಕಲ ಕಾರಣಪದಾರ್ಥಗಳಿಗೂ ನಾನೇ ನಿಯಾಮಕನು.

ಈ ಪ್ರಕಾರವಾಗಿ ಸರ್ವಶಬ್ದವಾಚ್ಯನಾದ ಪರಮಾತ್ಮನು ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ರೂಪದಿಂದ ಇದ್ದು ಆ ಪದಾರ್ಥಗತ ಸ್ವಾಭಾ

ಏಕ ಧರ್ಮಗಳಿಗೂ ತತ್ತತ್ಪದಾರ್ಥಗಳ ನಾಮ ರೂಪ ಕ್ರಿಯೆಗಳಿಗೂ ನಿಯಾಮಕನಾಗಿರುವನೆಂದು ತಿಳಿಯುವುದು **ವಿಜ್ಞಾನ**ವೆನ್ನಿಸುವುದು. ಇದೇ ವಿಶೇಷ ಸಾಂಖ್ಯವು. ಈ ವಿಶೇಷಜ್ಞಾತವ್ಯಭಗವನ್ಮಹಿಮೆಗಳನ್ನು ದಶಮಾಧ್ಯಾಯದಲ್ಲಿ ಇನ್ನೂ ವಿಸ್ತಾರವಾಗಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ಅದನ್ನು ಮುಂದೆ ವಿಶದವಾಗಿ ಹೇಳುತ್ತೇವೆ.

**3. ಪ್ರಶ್ನೆ :—** ಸ್ವಾಮಿ! ಪರಮಾತ್ಮನು ಸೃಷ್ಟಿಕರ್ತನು, ಸ್ಥಿತಿಕರ್ತನು, ಸಂಹಾರ ಕರ್ತನು ಇತ್ಯಾದಿ ರೀತಿಯಾಗಿ ತಿಳಿಯುವುದು ಸಾಮಾನ್ಯ ಜ್ಞಾನವೆಂದು ಸಪ್ತಮಾಧ್ಯಾಯದಲ್ಲಿ ಶ್ರೀಕೃಷ್ಣನು ನಿರೂಪಿಸಿ, ಈಗ ನವಮಾಧ್ಯಾಯದಲ್ಲಿ "ಪ್ರಭವಃ ಪ್ರಳಯಃ ಸ್ಥಾನಂ" ಎಂದು ಸೃಷ್ಟಿಕರ್ತೃತ್ವಾದಿ ಜ್ಞಾನವನ್ನು ವಿಜ್ಞಾನದಲ್ಲಿ ಅಂತರ್ಭಾವವನ್ನು ಹೊಂದಿಸಿರುವನು. ಇದು ವಿರುದ್ಧವಾಗಲಿಲ್ಲವೇ?

**ಶ್ರೀಶ್ರೀಗಳವರು :—** ಬ್ರಹ್ಮಾದಿ ದೇವತೆಗಳಿಗೂ ಜ್ಞಾನದಾತನಾದ ಜಗದ್ಗುರುವಾದ ಶ್ರೀಕೃಷ್ಣನು ವಿರುದ್ಧೋಪದೇಶಗಳನ್ನು ಮಾಡುವನೇ? ಸಪ್ತಮಾಧ್ಯಾಯದಲ್ಲಿ ಪರಮಾತ್ಮನು ಸೃಷ್ಟಿಕರ್ತನು, ಸ್ಥಿತಿಕರ್ತನು, ಸಂಹಾರಕರ್ತನು ಇತ್ಯಾದಿ ರೀತಿಯಲ್ಲಿ ಪರಮಾತ್ಮನನ್ನು ತಿಳಿಯುವುದು ಸಾಮಾನ್ಯ ಜ್ಞಾನವೆಂದೇ ಹೇಳಿರುವನು. ಸಾಮಾನ್ಯವಾಗಿ ಸರ್ವಜಗತ್ತಿಗೂ ಪರಮಾತ್ಮನು ಸೃಷ್ಟ್ಯಾದಿ ಕರ್ತನು ಎಂದು ತಿಳಿಯುವುದು "ಜ್ಞಾನವು" ಎಂದು ಅಲ್ಲಿ ಅರ್ಥವು. ನವಮಾಧ್ಯಾಯದಲ್ಲಿಯಾದರೋ, ಒಂದೊಂದು ಘಟ, ಪಟಾದಿ ವ್ಯಕ್ತಿವಿಶೇಷವನ್ನು ಪರಮಾತ್ಮನು ಸೃಷ್ಟಿಸುವನು, ರಕ್ಷಿಸುವನು, ಸಂಹರಿಸುವನು ಎಂದು ವಿಶೇಷವಾಗಿ ಪ್ರತಿಪ್ರತಿ ಪದಾರ್ಥಗಳಲ್ಲಿಯೂ ಪರಮಾತ್ಮನನ್ನು ಚಿಂತಿಸುವುದು ವಿಜ್ಞಾನವೆಂದು ಪರಮಾತ್ಮನು ನಿರೂಪಿಸಿರುವನು. ಹೀಗಿರುವಲ್ಲಿ ವಿರೋಧವೆಲ್ಲಿಂದ ಬಂತು?

**4. ಪ್ರಶ್ನೆ :—** ಸ್ವಾಮಿ! ಇನ್ನೂ ಪರಬ್ರಹ್ಮನ ಮಹಿಮೆಯನ್ನು ವಿಸ್ತರಿಸುವ ಇತರ ಶ್ಲೋಕಗಳಿಗೂ ಅರ್ಥವನ್ನು ವಿವರಿಸಬೇಕು.

**ಶ್ರೀಶ್ರೀಗಳವರು:—** ಪ್ರಾಯೇಣ ಭಗವನ್ಮಹಿಮಾಪ್ರತಿಪಾದಕವಾದ ಸಕಲ ವಾಕ್ಯಗಳನ್ನೂ ಉದಾಹರಿಸಿ ಅರ್ಥವನ್ನು ಪೂರ್ವದಲ್ಲಿ (ಪ್ರಥಮಾಧ್ಯಾ

ಯದಲ್ಲಿಯೇ) ನಿರೂಪಿಸಿರುತ್ತೇವೆ. ಗೀತೆಯ ಏಕಾದಶಾಧ್ಯಾಯದಲ್ಲಿ ಪರಮಾತ್ಮನು ದೇಶತಃ ಕಾಲತಃ ಗುಣತಃ ಅನಂತನೆಂಬ ಮಹಾ ಮಹಿಮೆಯು ಮುಖ್ಯವಾಗಿ ಪ್ರತಿಪಾದಿತವಾಗಿರುತ್ತದೆ. ದ್ವಾದಶಾಧ್ಯಾಯದಲ್ಲಿ ಅವ್ಯಕ್ತ ನಾಮಕ ಲಕ್ಷ್ಮೀದೇವಿಗಿಂತಲೂ ಪರಮಾತ್ಮನು ಉತ್ತಮನು ಎಂದು ನಿರೂಪಿಸಲ್ಪಟ್ಟಿರುವುದು. ತ್ರಯೋದಶಾಧ್ಯಾಯದಲ್ಲಿ ಪರಬ್ರಹ್ಮಸ್ವರೂಪವು ಬಹ್ವರ್ಥಗರ್ಭಿತವಾದ ಸಂಕ್ಷಿಪ್ತ ವಾಣಿಯಿಂದ ವರ್ಣಿತವಾಗಿರುವುದು. ಆ ಶ್ಲೋಕಗಳನ್ನು ಉದಾಹರಿಸಿ ಈ ವಿಚಾರವನ್ನು ಉಪಸಂಹರಿಸುವೆವು:—

(1) **ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ।**
**ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥** ॥12॥
**ಸರ್ವತಃ ಪಾಣಿಪಾದಂ ತತ್ಸರ್ವತೋಕ್ಷಿಶಿರೋಮುಖಂ ।**
**ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥** ॥13॥
**ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ।**
**ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ॥** ॥14॥
**ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ।**
**ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್॥** ॥15॥
**ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಂ ।**
**ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ॥** ॥16॥
**ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ।**
**ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ಧಿಷ್ಠಿತಂ॥** ॥17॥
**ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ।**
**ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ॥** ॥22॥

ಈ ಶ್ಲೋಕಗಳು ಪ್ರಾಯೇಣ ವ್ಯಾಖ್ಯಾತವಾಗಿರುವುವು. ಇವುಗಳಲ್ಲಿ ಪರಮಾತ್ಮನ ಅನಂತಾವಯವತ್ವ, ಒಂದೊಂದು ಅವಯವಕ್ಕೂ ಸರ್ವೇಂದ್ರಿಯ ಕಾರ್ಯಕಾರಿ ಸಾಮರ್ಥ್ಯೋಪೇತತ್ವ, ಸರ್ವತ್ರ ಅಂತರ್ಬಹಿರ್ವ್ಯಾಪ್ತತ್ವ, ಸರ್ವೇಂದ್ರಿಯಗಳ ಮತ್ತು ಸರ್ವೇಂದ್ರಿಯ ವಿಷಯಗಳ ಜ್ಞಾನವತ್ವ, ಪ್ರಾಕೃತೇಂದ್ರಿಯ ರಾಹಿತ್ಯ, ನಿರ್ಲಿಪ್ತತ್ವ, ಸಾರಭೋಕ್ತೃತ್ವ, ಸರ್ವಸಂಹಾರಕತ್ವ, ಸತ್ವಾದಿಗುಣ

ರಾಹಿತ್ಯ, ಅನಂತಕಲ್ಯಾಣಗುಣಪೂರ್ಣತ್ವ, ಸರ್ವಪ್ರಾಣಿಗಳಲ್ಲಿ ಅಂತರ್ಬಹಿರ್ವ್ಯಾಪ್ತತ್ವ, ನಿಶ್ಚಲತ್ವ ಮತ್ತು ಚಲತ್ವ, ಸ್ಥೂಲತ್ವ ಮತ್ತು ಸೂಕ್ಷ್ಮತ್ವ, ದೂರಸ್ಥತ್ವ ಮತ್ತು ಸಮೀಪಸ್ಥತ್ವ ಇವೇ ಮುಂತಾದ ವಿರುದ್ಧ ಧರ್ಮೋಪೇತತ್ವವು ಅನಂತಾಧಿಷ್ಠಾನಗಳಲ್ಲಿದ್ದರೂ ತಾರತಮ್ಯರಹಿತನಾಗಿರೋಣವೆಂಬ ಸಮತ್ವ, ಭೂತಧಾರಣಪೋಷಣ ಕರ್ತೃತ್ವ, ಪ್ರಳಯದಲ್ಲಿ ಸರ್ವಭಕ್ಷಕತ್ವ, ಸೃಷ್ಟಿಯಲ್ಲಿ ಸರ್ವೋತ್ಪಾದಕತ್ವ, ಸೂರ್ಯಾದಿತೇಜಃಪದಾರ್ಥಗಳಿಗೂ ತೇಜಃಪ್ರದತ್ವ, ಪ್ರಕೃತಿವಿಲಕ್ಷಣತ್ವ ಮತ್ತು ಅಜ್ಞಾನರಾಹಿತ್ಯ, ಜ್ಞಾನರೂಪತ್ವ, ಸ್ವತಂತ್ರ ಸ್ವಪ್ರಕಾಶತ್ವ, ಜ್ಞಾನಗಮ್ಯತ್ವ, ಸರ್ವಾಂತಃಕರಣ ವೃತ್ತಿತ್ವ, ಸರ್ವಾಧಿಕನಾಗಿದ್ದು ಸರ್ವವನ್ನೂ ನೋಡೋಣವೆಂಬ ಉಪದ್ರಷ್ಟೃತ್ವ, ನಿರಾತಂಕವಾದ ಮತಿಯಿಂದ ನಿಖಿಲರ ಮನಸ್ಸನ್ನು ಪ್ರೇರಿಸುವುದೆಂಬ ಅನುಮಂತೃತ್ವ, ಸರ್ವಾಧಾರಕತ್ವ, ಸಾರಭೋಕ್ತೃತ್ವ, ಅಚಿಂತ್ಯ ಶಕ್ತಿಮತ್ವ, ಪರಮಚೇತನತ್ವ ಇವೇ ಮುಂತಾದ ಬಹು ಗೋಪ್ಯವಾದ ಪ್ರಧಾನವಾದ ಭಗವನ್ಮಹಿಮೆಗಳು ವರ್ಣಿತವಾಗಿರುವುವು. ಅಂತ್ಯ ಶ್ಲೋಕತ್ರಯಗಳು ಸದೃಷ್ಟಾಂತವಾಗಿ ಪರಮಾತ್ಮನ ವ್ಯಾಪ್ತಿಯನ್ನೂ, ನಿರ್ಲಿಪ್ತತೆಯನ್ನೂ ವಿವರಿಸುತ್ತವೆ:—

(2) **ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾಽಯಮವ್ಯಯಃ ।**
**ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ॥**
**ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।**
**ಸರ್ವತ್ರಾವಸ್ಥಿತೋ ದೇಹೇ ತಥಾಽಽತ್ಮಾ ನೋಪಲಿಪ್ಯತೇ ॥**
**ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।**
**ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥**
—(13. 31-33.)

ಈ ಪರಮಾತ್ಮನು ಅವ್ಯಯನು ಎಂದರೆ ಸರ್ವಪ್ರಕಾರದಿಂದಲೂ ನಾಶರಹಿತನು. ಯಾತಕ್ಕೆಂದರೆ ಈತನು ಅನಾದಿಯು ಎಂದರೆ ಉತ್ಪತ್ತಿರಹಿತನು. ಉತ್ಪತ್ತಿರಹಿತನಾದರೂ ದೇಹಸಂಬಂಧದಿಂದ ಜನ್ಮಾದಿಗಳು ಯಾತಕ್ಕೆ ಬರಬಾರದೆಂದರೆ ಈತನು ನಿರ್ಗುಣನು, ಪ್ರಾಕೃತ ಗುಣರಹಿತನು; ಪ್ರಾಕೃತ ಗುಣರಹಿತನಾದರೂ ಕರ್ಮಫಲಭೋಕ್ತೃತ್ವಾದಿಗಳಿಂದ ವಿಕಾರವುಂಟಾಗಲಿ

ಎಂದು ಶಂಕಿಸಿದರೆ ಅಥವಾ ಬ್ರಹ್ಮನು ಇಂಥಾ ಗುಣಸಂಗರಹಿತನಾದ ಅವ್ಯಯ ಮೂರ್ತಿಯಾದರೆ, ತತ್ವಮಸಿ ಮುಂತಾದ ಅದ್ವೈತವಾಕ್ಯಗಳಿಗೇನು ಗತಿ ಎಂದು ಶಂಕಿಸಿದರೆ ಶ್ರೀಕೃಷ್ಣನು ಹೇಳುತ್ತಾನೆ:—**ಶರೀರಸ್ಥೋಽಪಿ ನ**–ಪರಮಾತ್ಮನು (ಇದು ಹೇತುಗರ್ಭ ಪದವು) ಎಂದರೆ ಪರಮಚೇತನನಾದ ವಿಷ್ಣುವು ಶರೀರಾಭಿಮಾನಿಯಾದ ಜೀವನಲ್ಲ. ಇದರಿಂದ ಕರ್ಮಫಲಭೋಕ್ತೃತ್ವಾದಿ ನಿಮಿತ್ತಕ ವಿಕಾರಗಳು ಪರಮಚೇತನನಾದ ಹರಿಗೆ ಬರುವುದಿಲ್ಲವೆಂದು ಸಿದ್ಧವಾಯಿತು. ಪರಮಾತ್ಮನು ಜೀವನಂಥಾ ಅಲ್ಪಶಕ್ತನಾದ ಅಸ್ವತಂತ್ರ ಶರೀರಾಭಿಮಾನಿಯಲ್ಲ. ತತ್ವಮಸ್ಯಾದಿ ವಾಕ್ಯಗಳು ಅಭೇದತಾತ್ಪರ್ಯಕವಲ್ಲವೆಂದೂ ಇದರಿಂದಲೇ ಸಿದ್ಧವಾಯಿತು. ಕಿಂಚ ಪರಮಾತ್ಮನು ನಿಷ್ಕ್ರಿಯನಲ್ಲ. ಕರೋತಿ ನ ಲಿಪ್ಯತೇ = ಆತನು ಸರ್ವಕರ್ತನು ಆದರೂ ಕರ್ಮಫಲದಿಂದ ಲಿಪ್ತನಾಗುವುದಿಲ್ಲ. ಇದರಿಂದಲೇ ಪರಮಾತ್ಮನಿಗೆ ನಿಷ್ಕ್ರಿಯತ್ವ ವ್ಯಪದೇಶವೆಂದು ಸಿದ್ಧವಾಯಿತು. *

ಪರಮಾತ್ಮನು ನಿರ್ಲಿಪ್ತನೆಂಬಲ್ಲಿ ಶ್ರೀ ಕೃಷ್ಣನು ದೃಷ್ಟಾಂತವನ್ನು ಹೇಳುತ್ತಾನೆ:—ಪಂಕಕೂಪವೇ ಮುಂತಾದ ಸರ್ವ ಪ್ರದೇಶವರ್ತಿಯಾದರೂ ಆಕಾಶವು ಸೂಕ್ಷ್ಮವಾದುದರಿಂದ (ಅಪ್ರತಿಘ ದ್ರವ್ಯವಾದುದರಿಂದ) ಹೇಗೆ ತತ್ತತ್ಪ್ರದೇಶಗತದೋಷಗಳಿಂದ ಲಿಪ್ತವಾಗುವುದಿಲ್ಲವೋ ಹಾಗೆಯೇ ಸರ್ವವ್ಯಾಪಿಯಾದ ಪರಮಾತ್ಮನು ಜೀವನ ದೇಹದಲ್ಲಿಯೇ ಇದ್ದರೂ ಜೀವಕೃತ ಕರ್ಮದಿಂದ ಲಿಪ್ತನಾಗುವುದಿಲ್ಲ. ಪರಮಾತ್ಮನು ಕ್ಷೇತ್ರಜ್ಞನೆಂದು ಸದೃಷ್ಟಾಂತವಾಗಿ ಶ್ರೀಕೃಷ್ಣನು ನಿರೂಪಿಸುತ್ತಾನೆ:—ಒಬ್ಬನೇ ಸೂರ್ಯನು ಈ ಸಕಲ ಪ್ರಪಂಚವನ್ನೂ ಪ್ರಕಾಶಪಡಿಸುವಂತೆ ಒಬ್ಬನೇ ಪರಮಾತ್ಮನು ಸಕಲ ಕ್ಷೇತ್ರಗಳಲ್ಲೂ ಸ್ಥಿತನಾಗಿದ್ದು ಚೇತನಾಚೇತನಾತ್ಮಕವಾದ ಸಕಲ ಕ್ಷೇತ್ರವನ್ನೂ ಪ್ರಕಾಶಪಡಿಸುತ್ತಾನೆ.

---

* ಪ್ರಕಾರಾಂತರದಿಂದಲೂ ಈ ಶ್ಲೋಕಭಾಗಕ್ಕೆ ಅರ್ಥವನ್ನು ಹೇಳಬಹುದು. "ಎಲೈ ಕೌಂತೇಯನೇ ! ಪರಮಾತ್ಮನು ಶರೀರದಲ್ಲಿಯೇ ಜೀವನಂತೆಯೇ ಇದ್ದರೂ ಜೀವನಂತೆ ಕರ್ಮಗಳನ್ನು ಅವಶನಾಗಿ ಆಯಾಸದಿಂದ ಫಲಾಪೇಕ್ಷಿಯಾಗಿ ಮಾಡುವುದಿಲ್ಲ. ಮತ್ತು ಕರ್ಮಗಳಿಂದ ಲಿಪ್ತನಾಗುವುದಿಲ್ಲ.

ಹದಿನೈದನೆಯ ಅಧ್ಯಾಯದಲ್ಲಿಯೂ ಬಹು ಭಗವದ್ಗುಣಗಳು ನಿರೂಪಿತವಾಗಿರುವುವು. ಸಾಧ್ಯವಾದಷ್ಟು ಪೂರ್ವದಲ್ಲಿಯೇ (ಪ್ರಥಮಾಧ್ಯಾಯದಲ್ಲಿಯೇ) ನಿರೂಪಿತವಾಗಿರುವುದರಿಂದ ಈಗ ಪುನರಾರಂಭವು ಅನವಶ್ಯಕವು.

ಇದು ಶ್ರೀಕೃಷ್ಣನಿಂದ ಉಪದಿಷ್ಟವಾದ ಸಾಂಖ್ಯತತ್ವವು,—ದ್ವಿತೀಯಾಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟು ಇತರ ಸರ್ವ ಅಧ್ಯಾಯಗಳಲ್ಲೂ ವಿಶದೀಕೃತವಾದ ಗುಹ್ಯೋಪದೇಶವು. ಬಲವದಾಶ್ರಯದಿಂದ ಪ್ರವೇಶಿಸಿದ ಸಾಮಾನ್ಯ ಭೃತ್ಯನಿಗೂ ರಾಜದರ್ಶನವು ಸುಲಭವಾಗಿ ಲಭಿಸುವಂತೆ, ಪದವೀಧರನಿಗೆ ಪ್ರಜಾಸಹಾಯವು ಆಜ್ಞಾಮಾತ್ರದಿಂದ ಲಭಿಸುವಂತೆ, ಅಥವಾ ಲಕ್ಷ್ಮೀಪುತ್ರನಿಗೆ ಲೌಕಿಕಸಂಪತ್ತೆಲ್ಲಾ ದ್ರವ್ಯವಿತರಣೆಯ ಪ್ರಭಾವದಿಂದ ತತ್ತತ್ಕಾಲದಲ್ಲಿ ಬಂದೊದಗುವಂತೆ, ನಿಖಿಲ ಸದ್ಗುಣಗಣೋಪೇತನಾದ ಸ್ವತಂತ್ರನಾದ ಶ್ರೀ ಪರಮಾತ್ಮನ ಜ್ಞಾನಪೂರ್ವಕವಾಗಿ ಕೃತವಾದ ವಿಶಿಷ್ಟಕರ್ಮಯೋಗವುಳ್ಳ ಅಧಿಕಾರಿಯು ಭಗವದನುಗ್ರಹವನ್ನು ಅನಾಯಾಸದಿಂದ ಹೊಂದುವುದರಲ್ಲಿ ಸಂಶಯವಿಲ್ಲ. ಸರ್ವ ಕರ್ಮಾನುಷ್ಠಾನಗಳಿಗೂ ಅವಶ್ಯಾಂಗವಾದ ಮತ್ತು ಫಲರೂಪವೂ ಆದ ಅಂತಹ ನಿಜತತ್ವವು, ಪೂರ್ವೋಕ್ತವಾದ ವಿಷ್ಣುಸರ್ವೋತ್ತಮತ್ವವು, ಪರಮಾತ್ಮನ ಸ್ವಾತಂತ್ರ್ಯ, ಗುಣಪೂರ್ಣತ್ವ, ಅಚಿಂತ್ಯಶಕ್ತ್ಯಾದಿ ಮಹಾಮಹಿಮೋಪೇತತ್ವವು ; ಜೀವನ ಪಾರತಂತ್ರ್ಯ, ಅಲ್ಪತೆ ಮತ್ತು ಸ್ವರೂಪೇಣ ನಿತ್ಯತ್ವವು; ಪ್ರಕೃತ್ಯಾದಿಗಳ ಸ್ವರೂಪೇಣ ನಿತ್ಯತ್ವವು ಮತ್ತು ಪರಮಾತ್ಮನಿಯಮ್ಯತ್ವವು. ಈ ರೀತಿಯಾದ ಪರಾಪರತತ್ವಜ್ಞಾನವು ಈ ಗೀತಾ ದ್ವಿತೀಯಾಧ್ಯಾಯಕ್ಕೆ ಸಾಕ್ಷಾನ್ಮೂಲಭೂತವಾದ ಕಾಠಕ ಶ್ರುತಿಗೂ ಸಮ್ಮತವಾಗಿ ಮತ್ತು ಸರ್ವವೇದದಿಂದಲೂ ಅಂಗೀಕೃತವಾದ ನಿಶ್ಚಯವಾಗಿರುತ್ತದೆ. *

---

* ವಿಷ್ಣು ಸರ್ವೋತ್ತಮತ್ವವು, ಜೀವ ಬ್ರಹ್ಮರ ಭೇದವು, ಜಗತ್ಸತ್ಯತ್ವವು ಇವೇ ಮುಂತಾದುವುಗಳನ್ನು ಪ್ರತಿಪಾದನೆ ಮಾಡುವ ದ್ವೈತತತ್ವವೇ ಗೀತೆಯಲ್ಲಿ ಶ್ರೀಕೃಷ್ಣನಿಂದ ನಿರೂಪಿಸಲ್ಪಟ್ಟ "**ಸಾಂಖ್ಯ**" ವೆಂದು ನಿಷ್ಪಕ್ಷಪಾತವಾದ ಹೃದಯವುಳ್ಳ ಸರ್ವರಿಗೂ ವಿದಿತವಾಗುವುದು. ಆಂಗ್ಲೇಯರಲ್ಲಿ ವಿದ್ವದಗ್ರಣಿಯಾದ ಉರ್ರ್ಕುಹಾರ್ಟನೂ ಹಾಗೆಯೇ ಹೇಳುತ್ತಾನೆ:—

Krishna becomes identified with Vishnu or Vasudeva........ But Vishnu is also on the point of being identified with the impersonal non-qualitative Brahman the subject of the more severely monistic doctrine of the Upanishads. Thus, from whatever direction we view the process of modification, Vishnu obtains the elevation which results from identification with the Absolute, and at the same time the Absolute is prevented from receding into these depths of negation and unapproachability .......The all-God becomes associated with qualities which constitute him a definite object of worship and from him the world-process emerges—as a real emanation and not simply as an illusive shadow-play.

—W. S. Urquhart, M.A., D. Litt.

**ಅರ್ಥವು:—** ಗೀತೆಯಲ್ಲಿ ಶ್ರೀಕೃಷ್ಣನಿಗೆ ವಿಷ್ಣುತಾದಾತ್ಮ್ಯವು (ವಿಷ್ಣುವಿನಿಂದ ಅಭೇದವು)ನಿರೂಪಿತವಾಗಿರುವುದು. ಅಷ್ಟೇ ಅಲ್ಲ. ಈ ವಿಷ್ಣುವಿಗೇ ಉಪನಿಷತ್ಪ್ರತಿಪಾದ್ಯವಾದ ನಿರ್ಗುಣಬ್ರಹ್ಮತಾದಾತ್ಮ್ಯವೂ ನಿರೂಪಿಸಲ್ಪಟ್ಟಿರುವುದು. ಈ ರೀತಿಯಾಗಿ ಪ್ರಾಪ್ತವಾದ ಪ್ರಕಾರ ವೈಚಿತ್ರ್ಯಗಳಲ್ಲಿ ನಾವು ಯಾವುದನ್ನು ಪರಾಮರ್ಶೆ ಮಾಡಿದರೂ, ವಿಷ್ಣುವು ಉಪನಿಷತ್ಪ್ರತಿಪಾದ್ಯವಾದ ಬ್ರಹ್ಮತಾದಾತ್ಮ್ಯದಿಂದ ಪ್ರಾಪ್ತವಾದ ಸರ್ವೋತ್ತಮತ್ವವನ್ನೇ ಹೊಂದುತ್ತಾನೆ. ಅದೂ ಅಲ್ಲದೆ ಪರಮಾತ್ಮನು ನಿರ್ಧಮಕ ಶೂನ್ಯಭಾವ ಮತ್ತು ಅಜ್ಞೇಯತೆ ಎಂಬ ಹಳ್ಳಕ್ಕೆ ಬೀಳದಂತೆ ತಪ್ಪಿಸಲ್ಪಟ್ಟಿರುವನು. ಈ ಸರ್ವೇಶ್ವರನು ಗುಣಗಳಿಂದ ಯುಕ್ತನಾಗುವುದರಿಂಧ ಜನರುಗಳ ಆರಾಧನೆಗೆ ವಿಷಯನಾಗುವನು, ಮತ್ತು ಈತನಿಂದ ಜಗತ್ಪ್ರವಾಹವು—ಸತ್ಯಭೂತವಾದ ನಿರ್ಗಮವು, ಮಿಥ್ಯಾಭೂತವಾದ ಸುಳ್ಳು ಆಟವಲ್ಲ—ಹೊರಗೆ ಹೊರಡುತ್ತದೆ.

ಇದು ಬಹು ಬಿರುದಾಂಕಿತನಾದ ಡಾಕ್ಟರ್ ಬಾರ್ನೆಟ್ ಎಂಬ ಮತ್ತೊಬ್ಬ ಪ್ರೌಢಗ್ರಂಥಕರ್ತನ ನಿಶ್ಚಯವು:—

"At the summit of all existence is an Absolute spirit variously called Paramatman, Purushottama, Vasudeva, Iswara, Narayana, Govinda, Hari, Vishnu. But though

**being above the moods and inconceivable, he is not the blank, attributeless unqualified one of the Adwaita Vedanta. On the other hand, in Him are united all conceivable good qualities raised to infinity. All goodness, knowledge, and blessedness that are and may be abide in an immeasurable degree in Him. He is the soul, the witness, the inward ruler of the universe. All the universe is real for it is inspired throughout by this blessed soul. The universe comprises two real categories—one matter, and infinitely many souls.**

**L. D. Barnett, M.A., D. Litt.**

**ಅರ್ಥವು :—** ಗೀತೆಯಲ್ಲಿ ಸರ್ವಕ್ಕೂ ಮೇಲ್ಪಟ್ಟ ಸ್ಥಾನದಲ್ಲಿ ಪರಮಾತ್ಮ, ಪುರುಷೋತ್ತಮ, ವಾಸುದೇವ, ಈಶ್ವರ, ನಾರಾಯಣ, ಗೋವಿಂದ, ಹರಿ, ವಿಷ್ಣು ಇತ್ಯಾದಿ ಅನೇಕ ಹೆಸರುಗಳಿಂದ ಕರೆಯಲ್ಪಡುವ ಒಂದು ಪರಮ (ಪರಬ್ರಹ್ಮ) ಚೇತನವು ನಿರೂಪಿಸಲ್ಪಟ್ಟಿದೆ. ಆದರೆ ಇದು ಸರ್ವಾವಸ್ಥಾತೀತವೂ, ಅಚಿಂತ್ಯವೂ ಆಗಿದ್ದರೂ, ಅದು ಅದ್ವೈತ ವೇದಾಂತದಲ್ಲಿ ಪ್ರತಿಪಾದಿಸಲ್ಪಟ್ಟ ನಿರ್ಧರ್ಮಕವಾದ, ವಿಶೇಷರಹಿತವಾದ ಶೂನ್ಯ ಐಕ್ಯವಲ್ಲ. ಪರಂತು ಆತನಲ್ಲಿ ಸಕಲ ಕಲ್ಯಾಣಗುಣಗಳೂ ಆನಂತ್ಯವನ್ನು ಹೊಂದಿ ನೆಲೆಗೊಂಡಿರುವುವು. ಸಕಲ ಸದ್ಗುಣಗಳೂ, ಜ್ಞಾನವೂ, ಆನಂದವೂ ಪರಿಪೂರ್ಣವಾಗಿ ಆತನಲ್ಲಿರುವುವು. ಆತನು ಜಗದಂತರ್ಯಾಮಿಯು, ಸರ್ವಸಾಕ್ಷಿಯು, ಅಂತರ್ಗತನಾಗಿ ಜಗನ್ನಿಯಾಮಕನಾಗಿರುವನು. ಸಕಲ ಜಗತ್ತೂ ಸತ್ಯವೇ. ಯಾತಕ್ಕೆಂದರೆ ಅದು ಈ ಪೂರ್ಣಾನಂದ ವಸ್ತುವಿನಿಂದ ಚೇಷ್ಟಿತವಾಗಿದೆ. ಜಗತ್ತು ಸತ್ಯ ಭೂತವಾದ ಎರಡು ತತ್ವಗಳನ್ನು ಒಳಗೊಂಡಿರುವುದು, ಒಂದು ಜಡವು, ಮತ್ತೊಂದು ಅನಂತಾನಂತ ಜೀವರಾಶಿಗಳು.

# 13. ಹದಿಮೂರನೆಯ ಅಂಶವು.

## ಸಂನ್ಯಾಸಸ್ವರೂಪವು.

1. **ಶ್ರೀಶ್ರೀಗಳವರು—**ಸಂಕಲ್ಪರಾಹಿತ್ಯ, ನಿಷ್ಕಾಮತೆ, ವೈರಾಗ್ಯ, ಮನಃಪ್ರಸಾದ ಇತ್ಯಾದಿ ಪರ್ಯಾಯನಾಮಗಳಿಂದ ನಿರೂಪಿತವಾದ ರಾಗ ದ್ವೇಷವರ್ಜನರೂಪವಾದ ಸಂನ್ಯಾಸಸ್ವರೂಪವನ್ನೂ, ಅಪರೋಕ್ಷಜ್ಞಾನ ಪ್ರಾಪ್ತಿಯಲ್ಲಿ ಅದರ ಅವಶ್ಯಕತೆಯನ್ನೂ, ಪೂರ್ವದಲ್ಲೇ ನಿರೂಪಿಸಿರುತ್ತೇವೆ. ಸಂನ್ಯಾಸವು ಚತುರಂಶಗಳಿಂದ ಸಹಿತವಾದ ಸಾಕ್ಷಾತ್ ಧ್ಯಾನಕಾರಣವಾದ ಕರ್ಮಯೋಗದ ಏಕಾಂಶವು ಎಂದೂ ಹಿಂದೆಯೇ ಹೇಳಿರುತ್ತೇವೆ. ಕಾಮಾದಿ ವರ್ಜನರೂಪವಾದ ಸಂನ್ಯಾಸವು ವಿಶಿಷ್ಟಕರ್ಮಯೋಗದಲ್ಲಿ ಅಂತರ್ಭೂತವಾಗಿ ರುವುದೆಂದೂ, ಸಂನ್ಯಾಸವಿಲ್ಲದಿದ್ದರೆ ಕರ್ಮಯೋಗದ ಸ್ವರೂಪನಿಷ್ಪತ್ತಿಯೇ ಅಸಂಭಾವಿತವಾಗುವುದೆಂದೂ ಶ್ರೀಕೃಷ್ಣನು ಹೇಳುತ್ತಾನೆ:—

**(1) ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।**
**ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥**

—(6. 2.)

ಎಲೈ ಪಾಂಡುನಂದನನೇ! ಕಾಮಾದಿವರ್ಜನರೂಪವಾದ ಸಂನ್ಯಾಸವು ಕರ್ಮಯೋಗದಲ್ಲಿ ಅಂತರ್ಭೂತವಾದುದು (ಏಕದೇಶವು) ಎಂದೇ ತಿಳಿ. ಯಾತ ಕ್ಕೆಂದರೆ ಕರ್ಮಫಲಾಪೇಕ್ಷಾಪೂರ್ವಕವಾದ ಸಂಕಲ್ಪಗಳನ್ನು ಪರಿತ್ಯಾಗಮಾಡ ದವನು (ಸಂನ್ಯಾಸರಹಿತನು) ಕರ್ಮಯೋಗಿಯಾಗಲಾರನು.

ಕಾಮಾದಿಗಳನ್ನು ಪರಿತ್ಯಜಿಸುವುದೆಂದರೆ ಸ್ವರೂಪತಃ ಸರ್ವಮನೋಗತ ಸಂಕಲ್ಪಗಳನ್ನೂ, ಇಚ್ಛೆಗಳನ್ನೂ ತ್ಯಜಿಸಿ, ಶೂನ್ಯಭಾವವನ್ನು ಹೊಂದುವುದಲ್ಲ, ಕಾಮಾದಿಗಳನ್ನು ದುರ್ವಿಷಯಗಳಿಂದ ಬಿಡಿಸುವುದೇ ಕಾಮಾದಿಗಳಪರಿತ್ಯಾ ಗವು. ದುರ್ವಿಷಯೇಚ್ಛಾಪರಿತ್ಯಾಗವೇ ಕಾಮವರ್ಜನವು. ಧರ್ಮವಿಷಯದಲ್ಲಿ ಕೋಪವನ್ನು ಹೊಂದದಿರುವುದೇ ಕ್ರೋಧಪರಿತ್ಯಾಗವು. ಸತ್ಪಾತ್ರದಲ್ಲಿ ವಿಷ್ಣು ಪ್ರೀತ್ಯರ್ಥವಾಗಿ ದ್ರವ್ಯವಿನಿಮಯವನ್ನು ಮಾಡಬೇಕಾದಾಗ, ದ್ರವ್ಯವು ಖರ್ಚಾ ಗುವುದಲ್ಲಾ ಎಂಬ ಧನಸ್ನೇಹವನ್ನು ಪರಿತ್ಯಾಗಮಾಡುವುದೇ ಲೋಭತ್ಯಾ

ಗವು. ಇದೇ ರೀತಿಯಲ್ಲಿ ಸಕಲ ಮನೋಧರ್ಮಗಳನ್ನೂ ಅವುಗಳ ವಿಷಯ ಶೋಧನೆಯಿಂದ ತನಗೆ ಅನರ್ಥ ಪ್ರಾಪ್ತಿಕರವಾಗದಿರುವಂತೆ ಮಾಡಿಕೊಳ್ಳೋಣವೇ ಸಂನ್ಯಾಸವೇ ಹೊರತು ಕಾಮಾದಿಗಳನ್ನು ಸ್ವರೂಪತಃ ಸಂಹರಿಸುವುದು ಜ್ಞಾನಭಕ್ತಿವಿರಕ್ತಿಗಳನ್ನು ಸಂಪಾದಿಸಬೇಕೆಂದು ಪುನಃಪುನಃ ವಿಧಿಸುತ್ತಿರುವ ಶ್ರೀಕೃಷ್ಣನಿಗೆ ಅತ್ಯಂತ ಅಸಮ್ಮತವಾದ ವ್ಯಾಪಾರವು.* ಈ ಪ್ರಮೇಯಗ

---

* ಅದ್ವೈತ ಮತಕ್ಕೂ ದ್ವೈತ ಮತಕ್ಕೂ, ಹೂಣ ವ್ಯವಹಾರಗಳಿಗೂ ವೈದಿಕ ವ್ಯವಹಾರಗಳಿಗೂ ವಿರೋಧವಿರುವಂತೆ, ಸರ್ವಮೋಕ್ಷಹೇತುಭೂತವಾದ ತತ್ವ ವಿಷಯಗಳಲ್ಲಿಯೂ ಕ್ರೂರವಾದ ವಿರೋಧವು ಇರುವುದು. ಪ್ರಕೃತದಲ್ಲಿಯೂ ಕೂಡ ಸಕಲ ಕಾಮಗಳನ್ನೂ ಸ್ವರೂಪತಃ ನಾಶವನ್ನು ಹೊಂದಿಸಿ, ಇಚ್ಛಾರಹಿತನಾಗಿ ಮೋಟುಮರದಂತೆ ನಿಶ್ಚಲತ್ವವನ್ನು ಹೊಂದುವುದೇ ಉತ್ತಮ ಧರ್ಮವೆಂದು ಅದ್ವೈತಿಗಳು ಹೇಳುತ್ತಾರೆ. ಇದು ಧರ್ಮಭ್ರಂಶಕ್ಕೂ. ನರಕಾದ್ಯನರ್ಥಗಳಿಗೂ ಕಾರಣವಾದ, ಇಹಪರಗಳೆರಡರಲ್ಲೂ ದುಃಖಮಾತ್ರ ಫಲವನ್ನುಕೊಡುವ ವೃಥಾ ಪ್ರಯತ್ನವೆಂದು ದ್ವೈತಿಗಳು ಹೇಳುತ್ತಾರೆ. ಕಾಮಜಯವೆಂದರೆ ಸ್ವರೂಪತಃ ಕಾಮದ ನಾಶವಲ್ಲ. ಮತ್ತೇನೆಂದರೆ ಕಾಮಕ್ಕೆ ವಿಷಯವಾದ ಸ್ತ್ರೀ, ಧನ, ಕೀರ್ತಿ ಮುಂತಾದ ಅಲ್ಪ ಪದಾರ್ಥಗಳನ್ನು ಪರಿತ್ಯಾಗ ಮಾಡಿ, ಪರಮಾತ್ಮ, ದೇವತೆಗಳು, ಧರ್ಮ ಮುಂತಾದುವುಗಳನ್ನು ವಿಷಯವಾಗಿ ಸ್ವೀಕರಿಸುವುದು. ವಿಷಯಶೋಧನೆಯಿಂದ ಕಾಮಾದಿಗಳ ಜಯವು ಉಚಿತವೇ ಹೊರತು ಸ್ವರೂಪತಃ ಇಚ್ಛೆಯನ್ನು ಪರಿತ್ಯಾಗ ಮಾಡುವುದು ಸುಖಕರವಲ್ಲವೆಂಬುದು ಎಲ್ಲರ ಅನುಭವಕ್ಕೂ ಸಿದ್ಧವಾಗಿರುವುದು. ಆಂಗ್ಲೇಯ ತತ್ವಜ್ಞರಲ್ಲಿ ನಿಸ್ಸೀಮನೆಂದು ಪ್ರಸಿದ್ಧನಾದ ಕೇರ್ಡನು ಈ ದೋಷವನ್ನು ತೋರಿಸುತ್ತಾನೆ:—

**"To remain at the negative point of view is as disastrous as never to have reached it. For to deny the place of passion and desire is to cut oneself off from all concrete human interests."**

**—Edward Caird, M.A.**

**ಅರ್ಥ:**—ತತ್ವವಿಚಾರದಲ್ಲಿ ಯಾವುದೂ ಇಲ್ಲ, ಎಲ್ಲಾ ಸುಳ್ಳು ಎಂಬ ನಿಷೇಧ ದೃಷ್ಟಿಯಲ್ಲಿ ಇರುವುದು ವಿಚಾರ ರಹಿತವಾಗಿದ್ದರೆ ಹೇಗೋ ಹಾಗೆಯೇ ನಾಶಕರವಾದುದು. ಏತಕ್ಕೆಂದರೆ

ಳೆಲ್ಲಾ ಪೂರ್ವದಲ್ಲಿಯೇ ನಿರೂಪಿಸಲ್ಪಟ್ಟಿರುವುವು. ಅದೇ ವಿಷಯುವನ್ನೇ ಸ್ವಲ್ಪ ವಿವರಿಸುವೆವು. ತಥಾಹಿ:—

ಶ್ರೀಕೃಷ್ಣನೇ ಸಂನ್ಯಾಸಶಬ್ದಾರ್ಥವನ್ನೂ ಸಹ ಹೇಳಿರುತ್ತಾನೆ:—

(2) **ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।**
**ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ಪ್ರಮುಚ್ಯತೇ ॥**
—(5. 3.)

ಎಲೈ ಪರಾಕ್ರಮಶಾಲಿಯಾದ ಅರ್ಜುನನೇ! ಯಾವಾತನು ದ್ವೇಷ ಆಕಾಂಕ್ಷಾದಿರಹಿತನೋ (ಮತ್ತು ಕಾಮ್ಯಕರ್ಮತ್ಯಾಗಿಯೋ) ಆತನು ನಿತ್ಯ

ರಾಗದ್ವೇಷಾದಿಗಳಿಗೆ ಸ್ವರೂಪತಃ ಸ್ಥಿತಿಯನ್ನೇ ತಿರಸ್ಕರಿಸುವುದು ಸಕಲ ಮಾನುಷಧರ್ಮವ್ಯವಹಾರ ಗಳಿಂದಲೂ ಸಂಬಂಧವನ್ನು ಕತ್ತರಿಸಿಕೊಂಡಂತೆಯೇ ಆಗುವುದು.

(ಸ್ವರೂಪತಃ ಕಾಮಾದಿಗಳನ್ನು ನಾಶಮಾಡಿದರೆ ಪರಮಾತ್ಮ ಪ್ರೀತಿಕರವಾದ ಧರ್ಮಗಳನ್ನೂ ಸಾಧು ಮನುಷ್ಯ ಸೇವೆಗಳನ್ನೂ ಮಾಡುವುದು ಕೂಡ ಅಸಾಧ್ಯವಾಗಿ ಹೋಗುವುದೆಂದು ಭಾವವು.)

ಆರ್ಚರ್ ಸಾಹೇಬನೂ ಇದೇ ನಿಶ್ಚಯವನ್ನು ಬರೆದಿರುತ್ತಾನೆ:—

**The doctrine of detachment, passionlessness, indifference as a cure for the inherent evil of existence is not a profound one at all ...... In its exaggerated form it is violently anti-social and consequently incompatible with any rational system of ethics."**

**—W. Archer's India and the Future (73)**

**ಅರ್ಥ :—** ಸರ್ವಸಂಗ ರಾಹಿತ್ಯ, ಸ್ವರೂಪೇಣ ರಾಗರಾಹಿತ್ಯ ಮತ್ತು ಉದಾಸೀನತೆ ಇವುಗಳೇ ಲೋಕದಲ್ಲಿರುವ ತಾಪಗಳಿಗೆ ಪರಿಹಾರವೆಂದು ಬೋಧಿಸುವ ತತ್ವವು ಆಳವಾದುದೇ ಅಲ್ಲ. ಅಧಿಕವಾಗಿ ವೃದ್ಧಿ ಹೊಂದಿದರೆ ಈ ನಡೆವಳಿಕೆಯು ಅತಿಕ್ರೂರವಾಗಿ ಸಮಾಜದಲ್ಲಿ ಧರ್ಮಾನುಷ್ಠಾನಗಳಿಗೇ ವಿರುದ್ಧವಾಗುವುದರಿಂದ ಈ ತತ್ವವು ಯಾವ ವಿಧವಾದ ಸಮಂಜಸವಾದ ಮೋಕ್ಷಸಾಧನ ಶಾಸ್ತ್ರದ ಸಂಗಡದಲ್ಲಿಯೂ ಅವಿರುದ್ಧವಾಗಿರಲಾರದು. (ಮೋಕ್ಷಸಾಧನ ಶಾಸ್ತ್ರವನ್ನು ಇಟ್ಟುಕೊಳ್ಳಬೇಕಾದರೆ ಅದ್ವೈತತತ್ವವನ್ನು ಪರಿತ್ಯಾಗ ಮಾಡಬೇಕೆಂದು ತಾತ್ಪರ್ಯವು.)

ಸಂನ್ಯಾಸಿಯೆಂದು ತಿಳಿಯತಕ್ಕದ್ದು. ಆತನೇ ರಾಗದ್ವೇಷಾದಿರೂಪವಾದ ಅಥವಾ ಶೀತೋಷ್ಣ, ಲಾಭಾಲಾಭಾದಿರೂಪವಾದ ದ್ವಂದ್ವಗಳನ್ನು ಜಯಿಸಿ ಅನಾಯಾಸವಾಗಿ ಸಂಸಾರಪಾಶದಿಂದ ಮುಕ್ತನಾಗುತ್ತಾನೆ.

ದ್ವೇಷ ಮತ್ತು ಆಕಾಂಕ್ಷಾರಹಿತನು ಸಂನ್ಯಾಸಿಯು ಎಂಬ ಶ್ರೀಕೃಷ್ಣನ ವಾಕ್ಯವು ಇನ್ನೂ ಅಧಿಕವಾದ ಅರ್ಥದಿಂದ ಗರ್ಭಿತವಾಗಿರುವುದು. ಆಕಾಂಕ್ಷಾ ದ್ವೇಷಗಳನ್ನು ಪರಿತ್ಯಾಗಮಾಡಬೇಕೆಂದರೆ ಕಾಮಾದಿ ಸಕಲ ಅರಿಷಡ್ವರ್ಗಗಳನ್ನೂ ಜಯಿಸಬೇಕೆಂದು ಅರ್ಥವು.

2. ಅಲ್ಲಿ ಅಲ್ಲಿ ಶ್ರೀಕೃಷ್ಣನು ಪುನಃಪುನಃ ಕಾಮಾದಿಗಳ ಜಯವನ್ನು ವಿಧಿಸುತ್ತಾನೆ:—

(1) **ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ॥**

—(3. 37.)

* * * * *

**ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।**
**ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥**

—(3. 41.)

ಎಲೈ ಪಾರ್ಥನೇ! ಈ ಕಾಮವು ಪ್ರಬಲವಾದ ಪಾಪಕಾರಣವು. ಇದೇ ರಜೋಗುಣದಿಂದ ಉತ್ಪನ್ನವಾಗತಕ್ಕ ಕ್ರೋಧಕ್ಕೆ ಕಾರಣವು. ಇದು ಬಹು ಭೋಗಸಾಧನಗಳನ್ನು ಅಪೇಕ್ಷಿಸತಕ್ಕದ್ದು. ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಕಾರಣವಾಗತಕ್ಕದ್ದು. ಇದನ್ನು ಮುಖ್ಯಶತ್ರುವೆಂದು ತಿಳಿ........ಆದುದರಿಂದ ಎಲೈ ಭರತಶ್ರೇಷ್ಠನೇ! ನೀನು ಮೊದಲು ಇಂದ್ರಿಯಗಳನ್ನು ವಿಷಯಗಳಿಗೆ ಹೋಗದಂತೆ ನಿಗ್ರಹಿಸಿ ಜ್ಞಾನವಿಜ್ಞಾನಗಳಿಗೆ ನಾಶಕವಾದ ಈ ಪಾಪಿಯನ್ನು ಸಂಹರಿಸು.

ಅರಿಷಡ್ವರ್ಗಗಳಲ್ಲೆಲ್ಲಾ ಕಾಮವು ಪ್ರಧಾನವು. ಕ್ರೋಧಾದಿಗಳೆಲ್ಲಾ ಕಾಮಮೂಲಕವಾಗಿ ಉತ್ಪನ್ನವಾದುವುಗಳು; ಆದುದರಿಂದ ಬಂಧಕವಾದ ವಿಷಯೇಚ್ಛಾರೂಪವಾದ ಕಾಮವನ್ನು ಪರಿತ್ಯಾಗಮಾಡಿದರೆ, ಸಂಪೂರ್ಣ

ಸಂನ್ಯಾಸವನ್ನು ಸಂಪಾದಿಸಿದಂತಾಯಿತು. ಇಂಥಾ ರಾಗದ್ವೇಷಪರಿತ್ಯಾಗವನ್ನು ನಾನಾಪ್ರಕಾರವಾಗಿ ಶ್ರೀಕೃಷ್ಣನು ಬೋಧಿಸಿರುತ್ತಾನೆ:—

(2) **ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।**
**ತಯೋರ್ನ ವಶಮಾಗಚ್ಛೇತ್ತೌ ಹ್ಯಸ್ಯ ಪರಿಪಂಥಿನೌ ॥**

—(3.34.)

ಇಂದ್ರಿಯುಗಳಿಗೆ ಅನುಕೂಲವೆಂದು ತೋರಿದ ವಿಷಯುಗಳಲ್ಲಿ ಇಚ್ಛೆಯೂ ಪ್ರತಿಕೂಲವೆಂದು ತೋರಿದ ವಿಷಯುಗಳಲ್ಲಿ ದ್ವೇಷವೂ ವ್ಯವಸ್ಥಿತವಾಗಿರುವುದು. ಜಿತೇಂದ್ರಿಯನಾದ ಪ್ರಾಜ್ಞನು ಅವುಗಳ (ರಾಗದ್ವೇಷಗಳ) ಅಧೀನನಾಗಬಾರದು. ಅವುಗಳೇ ಶ್ರೇಯೋಽರ್ಥಿಗೆ ಮುಖ್ಯಶತ್ರುಗಳು. ಶ್ರೀಕೃಷ್ಣನು ಹೇಳುತ್ತಾನೆ:—

(3) **ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।**
**ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥**
**ಶಕ್ನೋತೀಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್ ।**
**ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸಸುಖೀ ನರಃ ॥**

—(5. 22-23.)

ಎಲೈ ಕೌಂತೇಯನೇ! ವಿಷಯಸಂಸರ್ಗಜನ್ಯವಾದ ಭೋಗಗಳೆಲ್ಲಾ ನಿಯಮೇನ ದುಃಖಕ್ಕೇ ಕಾರಣವಾಗುತ್ತವೆ. ಯಾತಕ್ಕೆಂದರೆ ಅವು ಉತ್ಪತ್ತಿ ವಿನಾಶವುಳ್ಳವುಗಳಾಗಿರುತ್ತವೆ. ಆದುದರಿಂದ ಪ್ರಾಜ್ಞನು ಅವುಗಳಲ್ಲಿ ಆಸಕ್ತನಾಗುವುದಿಲ್ಲ. ಯಾವಾತನು ಈ ಮಾನುಷದೇಹದಲ್ಲಿಯೇ ದೇಹವಿಯೋಗರೂಪವಾದ ಮರಣಪ್ರಾಪ್ತಿಗೆ ಪೂರ್ವದಲ್ಲಿಯೇ ಕಾಮಕ್ರೋಧಗಳಿಂದ ಉಂಟಾಗುವ ವೇಗವನ್ನು ಎಂದರೆ ಮನೋವಿಕಾರಗಳನ್ನು ಸಹಿಸುವುದಕ್ಕೆ ಯತ್ನಿಸುವನೋ ಆತನೇ ಜ್ಞಾನೋಪಾಯವನ್ನುಳ್ಳ ಅಧಿಕಾರಿಯು. ಆತನೇ ಸುಖವುಳ್ಳವನಾಗುತ್ತಾನೆ.

**3.** ಶ್ರೀಕೃಷ್ಣನು ದ್ವಿತೀಯಾಧ್ಯಾಯದಲ್ಲಿ ವಿಷಯಕಾಮವು ಬುದ್ಧಿಭ್ರಂಶವನ್ನು ಉತ್ಪತ್ತಿಮಾಡುವ ಪ್ರಕಾರವನ್ನೂ ರಾಗದ್ವೇಷರಾಹಿತ್ಯರೂಪವಾದ ಸಂನ್ಯಾಸದ ಫಲವನ್ನೂ ವಿಶದವಾಗಿ ವರ್ಣಿಸುತ್ತಾನೆ:—

**(1) ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।**
**ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ॥**
**ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿವಿಭ್ರಮಃ।**
**ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ॥**
**ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್।**
**ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ॥**

(2 62-64)

ಶಬ್ದಾದಿವಿಷಯಗಳನ್ನು ಸದಾ ಚಿಂತಿಸುವವನಿಗೆ ಅವುಗಳಲ್ಲಿ ಆಸಕ್ತಿಯು ಹುಟ್ಟುತ್ತದೆ. ಅದರಿಂದ ವಿಷಯೇಚ್ಛೆಯು ಅಧಿಕವಾಗುತ್ತದೆ. ಕಾಮವು ಯಾರಿಂದಲಾದರೂ ಪ್ರತಿರುದ್ಧವಾದರೆ ಆತನ ವಿಷಯದಲ್ಲಿ ಕ್ರೋಧವು ಉತ್ಪನ್ನವಾಗುತ್ತದೆ. ಕ್ರೋಧದಿಂದ ಅಕಾರ್ಯೇಚ್ಛೆಯು ಅಥವಾ ಅಧರ್ಮದಲ್ಲಿ ಧರ್ಮಬುದ್ಧಿಯು ಹುಟ್ಟುತ್ತದೆ. ಇಂತಹ ಸಮ್ಮೋಹದಿಂದ ವಿಧಿನಿಷೇಧಶಾಸ್ತ್ರಜ್ಞಾನವು ನಾಶವಾಗುತ್ತದೆ. ಅದರಿಂದ ಬುದ್ಧಿನಾಶವು ಎಂದರೆ ಪರದ್ರವ್ಯಹರಣಾದಿಗಳು ಅಧರ್ಮಕರವೆಂದು ನಿರ್ಣೀತವಾದ ದೋಷಬುದ್ಧಿಯು ಸರ್ವಾತ್ಮನಾ ನಾಶವನ್ನು ಹೊಂದುತ್ತದೆ. ಇಂಥಾ ಬುದ್ಧಿನಾಶದಿಂದ ಪುರುಷನು ನರಕಾದ್ಯನರ್ಥಗಳನ್ನು ಹೊಂದುತ್ತಾನೆ. ರಾಗದ್ವೇಷಗಳಿಂದ ರಹಿತವಾದ ಇಂದ್ರಿಯಗಳಿಂದ ಸ್ವದೇಹಧಾರಣೋಪಯೋಗಿಯಾದ ವಿಷಯಗಳನ್ನು ಭೋಗಿಸುತ್ತಾ ಇರುವವನು ಸ್ವಾಧೀನವಾದ ಮನಸ್ಸುಳ್ಳವನಾಗಿ ಪ್ರಸಾದವನ್ನು ಹೊಂದುತ್ತಾನೆ ಎಂದರೆ ಸ್ವಪ್ರಯತ್ನವಿಲ್ಲದೆ ಮನಸ್ಸು ವಿಷಯಗಳಲ್ಲಿ ಪ್ರವರ್ತಿಸದೇ ಇರೋಣವೆಂಬ ಪೂರ್ಣಸಂನ್ಯಾಸವನ್ನು ಹೊಂದುತ್ತಾನೆ.

4. ಇಂಥಾ ಸಂನ್ಯಾಸವು ದೈವೀಸಂಪತ್ತುಳ್ಳ ಮುಕ್ತಿಯೋಗ್ಯರಲ್ಲಿ ಸ್ವಾಭಾವಿಕವಾಗಿರುವುದೆಂದೂ, ಆಸುರೀಸಂಪತ್ತಿನಿಂದ ಒಡಗೂಡಿದ ದುರ್ಜನರಲ್ಲಿ ಇದಕ್ಕೆ ವಿರುದ್ಧವಾದ ಉಲ್ಬಣವಾದ ವಿಧಿವಿರುದ್ಧಕಾಮವು ಪ್ರವೃದ್ಧವಾಗಿರುವುದೆಂದೂ ಶ್ರೀಕೃಷ್ಣನು ಹೇಳುತ್ತಾನೆ:—

**(1) ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ।**

* * * * *

**ಅಹಿಂಸಾ ಸತ್ಯಮಕ್ರೋಧಸ್ತ್ಯಾಗಶ್ಶಾಂತಿರಪೈಶುನಂ।**

...........ಅಲೋಲುತ್ವಂ ಮಾರ್ದವಂ ಹ್ರೀರಚಾಪಲಂ ॥
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥

—(16-2, 3.)

ಎಲೈ ಭರತಶ್ರೇಷ್ಠನೇ! ಸತ್ವಸಂಶುದ್ಧಿಃ = ಎಂದರೆ ನಿರ್ಮಲವಾದ ಅಂತಃಕರಣವು (ಸಂನ್ಯಾಸವು)... ....ಅಕ್ರೋಧಃ = ಕ್ರೋಧಪರಿತ್ಯಾಗವು; ಅಲೋಲುತ್ವಂ = ವಿಷಯಗಳಲ್ಲಿ ಅನುರಾಗಪರಿತ್ಯಾಗವು; ಇತ್ಯಾದಿ ಗುಣಗಳು ದೈವೀಸಂಪತ್ತನ್ನು ಹೊಂದಿದವರಲ್ಲಿ (ಮುಕ್ತಿಯೋಗ್ಯರಲ್ಲಿ) ಇರುತ್ತವೆ.

(2) ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು ।
ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ ।

* * * * *

ಕಾಮೋಪಭೋಗಪರಮಾ ಏತಾವದಿತಿ ನಿಶ್ಚಿತಾಃ ।
ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾರ್ ॥

* * * *

ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥

—(16. 6.) (16. 10-16.)

"ಎಲೈ ಪಾರ್ಥನೇ! ಮುಕ್ತಿಯೋಗ್ಯಸ್ವಭಾವಧರ್ಮಗಳು ವಿಸ್ತಾರವಾಗಿ ವರ್ಣಿಸಲ್ಪಟ್ಟವು. ಇನ್ನು ಅಸುರಸಂಬಂಧಿಸ್ವಭಾವವನ್ನು ಕೇಳು. ಅಸುರರು ವಿಷಯಗಳನ್ನು ಕೊಟ್ಟು ತೃಪ್ತಿಹೊಂದಿಸುವುದಕ್ಕೆ ಅಶಕ್ಯವಾದ ಕಾಮವನ್ನು ಆಶ್ರಯಿಸಿ ದಂಭಮಾನಮದಾನ್ವಿತರಾಗಿರುತ್ತಾರೆ.

"ವಿಷಯಭೋಗದಲ್ಲಿಯೇ ಅತ್ಯಂತ ಆಸಕ್ತರಾಗಿ, ಐಹಿಕಫಲಕ್ಕಿಂತ ಬೇರೆ ಆಮುಷ್ಮಿಕ ಸುಖಪ್ರದಲೋಕವೇ ಇಲ್ಲವೆಂದು ನಿಶ್ಚಯಿಸಿ, ಅನಂತರ ಆಶಾಪಾಶದಿಂದ ಬದ್ಧರಾಗಿ, ಕಾಮಕ್ರೋಧಪರಾಯಣರಾಗಿ, ತಮಗೆ ಇಷ್ಟವಾದ ವಿಷಯಭೋಗಗಳ ಅನುಭವಾರ್ಥವಾಗಿ ಅಧರ್ಮದಿಂದ ದ್ರವ್ಯಸಂಗ್ರಹವನ್ನು ಇಚ್ಛಿಸುತ್ತಾರೆ. ಮತ್ತು ವಿಷಯಭೋಗಗಳಲ್ಲಿ ಅತ್ಯಂತರತರಾಗಿ ಅತಿಕಶ್ಮಲವಾದ ನರಕದಲ್ಲಿ ಬೀಳುತ್ತಾರೆ."

ಇದು ರಾಗದ್ವೇಷವರ್ಜನರೂಪವಾದ ಸಂನ್ಯಾಸರಹಿತರ ಚರಿತ್ರೆಯು.

ಸಂನ್ಯಾಸವನ್ನು ಸಂಪಾದಿಸಿದವರು ಜ್ಞಾನಿಗಳಾಗಿ ಮಹಾಫಲವನ್ನು ಹೊಂದಿರುತ್ತಾರೆಂದು ಶ್ರೀಕೃಷ್ಣನು ಹೇಳುತ್ತಾನೆ:—

**(3) ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ ।**
**ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥**

—(4. 10.)

ರಾಗ, ಭಯ, ಕ್ರೋಧಗಳಿಂದ ರಹಿತರಾದವರು (ಸಂನ್ಯಾಸವನ್ನು ಹೊಂದಿದವರು) ನನ್ನನ್ನು ಧ್ಯಾನಮಾಡಿ ನನ್ನನ್ನೇ ಸರ್ವವಿಧದಲ್ಲಿಯೂ ಆಶ್ರಯಿಸಿ ಅನೇಕ ಸಜ್ಜನರು ಜ್ಞಾನತಪಸ್ಸುಗಳಿಂದ ಪವಿತ್ರರಾಗಿ ಮುಕ್ತರಾಗಿರುತ್ತಾರೆ.

ಇದರಿಂದ ಸಂನ್ಯಾಸವು ಧ್ಯಾನಕ್ಕೆ ಕಾರಣವಾಗಿ ಕ್ರಮವಾಗಿ ಜ್ಞಾನಾದಿಗಳು ಉತ್ಪನ್ನವಾದನಂತರ ಪರಂಪರಯಾ ಮುಕ್ತಿಗೆ ಕಾರಣವಾಗುವುದೆಂದು ಸಿದ್ಧವಾಗುವುದು.

5. ರಾಗದ್ವೇಷವರ್ಜನರೂಪವಾದ ಸಂನ್ಯಾಸವು ಕರ್ಮಯೋಗದಲ್ಲಿ ಪ್ರವೃತ್ತನಾದವನಲ್ಲಿ ಕರ್ಮಫಲಾಪೇಕ್ಷಾರಾಹಿತ್ಯವನ್ನು ಉಂಟುಮಾಡುವುದರ ಮೂಲಕ ತನ್ನ ಪ್ರಭಾವವನ್ನು ತೋರಿಸುವುದು. ಆದುದರಿಂದ ಕಾರ್ಯಕಾರಣಗಳಿಗೆ ಅಭೇದವ್ಯಪದೇಶವನ್ನು ನಿಮಿತ್ತಮಾಡಿ ಕೆಲವು ಸ್ಥಳಗಳಲ್ಲಿ ಕರ್ಮಫಲೇಚ್ಛಾರಾಹಿತ್ಯವೇ ಸಂನ್ಯಾಸವೆಂದು ಗೀತೆಯಲ್ಲಿ ಶ್ರೀಕೃಷ್ಣನಿಂದಲೇ ವ್ಯವಹರಿಸಲ್ಪಟ್ಟಿರುವುದು. ಕ್ವಚಿತ್ ಇದೇ ರೀತಿಯಾಗಿ ಸಂಕಲ್ಪಪರಿತ್ಯಾಗವು ಎಂದರೆ ಲೌಕಿಕವಿಷಯಭೋಗಪ್ರಾಪ್ತಿರೂಪವಾದ ಫಲವನ್ನು ಇಚ್ಛಿಸದೆ ಇರೋಣವೆಂಬ ಮನೋಧರ್ಮವೇ ಸಂನ್ಯಾಸವೆಂದು ನಿರೂಪಿಸಲ್ಪಟ್ಟಿರುವುದು:—

**(1) ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ।**
**ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ॥**—(6. 1.)

ಕರ್ಮವನ್ನು ಅಪೇಕ್ಷಿಸದೆ ಕರ್ತವ್ಯ ಕರ್ಮವನ್ನು ಯಾವಾತನು ಮಾಡುವನೋ ಆತನೇ ಸಂನ್ಯಾಸಿಯು, ಮತ್ತು ಆತನೇ ಯೋಗಿಯು. ಅಗ್ನಿಪರಿತ್ಯಾಗಮಾಡಿದವನು ಸಂನ್ಯಾಸಿಯಲ್ಲ; ಸಕಲ ಕರ್ಮವನ್ನೂ ಪರಿತ್ಯಾಗಮಾಡಿದವನು ಯೋಗಿಯಲ್ಲ.

ಸಂಕಲ್ಪಸಂನ್ಯಾಸವೂ ಸಂನ್ಯಾಸಶಬ್ದಾರ್ಥವೆಂದು ಈ ಕೆಳಗಿನ ಶ್ಲೋಕಾರ್ಥ ಪರ್ಯಾಲೋಚನೆಯಿಂದ ಸಿದ್ಧವಾಗುವುದು :—

(2) **ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ।**

—(6.2.)

ಕರ್ಮಾನುಷ್ಠಾನಗಳಲ್ಲಿ ಸಂಕಲ್ಪಗಳನ್ನು ಪರಿತ್ಯಾಗಮಾಡದವನು ಯೋಗಿಯೂ ಆಗಲಾರನು.

ಈ ಶ್ಲೋಕದಲ್ಲಿ "ಸಂನ್ಯಾಸ"ವನ್ನು ಹೊಂದದವನು ಪೂರ್ವೋಕ್ತ ಸಮಗ್ರಕರ್ಮಯೋಗವುಳ್ಳವನೂ ಆಗಲಾರನು ಎಂದು ಶ್ರೀಕೃಷ್ಣನು ಹೇಳಬೇಕಾಗಿರುವುದು. ಇದನ್ನು ಉಪದೇಶಮಾಡುವಾಗ ಸಂನ್ಯಾಸ ಶಬ್ದಕ್ಕೆ "ಸಂನ್ಯಸ್ತ ಸಂಕಲ್ಪ"ನೆಂದು ವಿವರಣರೂಪವಾಗಿ ವಾಕ್ಯವನ್ನು ಪ್ರಯೋಗಮಾಡಿರುವನು. ಸಕಲ ಸಂಕಲ್ಪಗಳನ್ನೂ ಪರಿತ್ಯಾಗಮಾಡಿದವನು ಸಂನ್ಯಾಸವುಳ್ಳವನು ಎಂದು ನಿಶ್ಚಿತಾರ್ಥವು. ಎಂದರೆ ಮೋಕ್ಷಾರ್ಥಿಯು ಕರ್ಮಾನುಷ್ಠಾನಾರಂಭದಲ್ಲಿ ತಾನು ಮಾಡುವ ಕರ್ಮವನ್ನು "ಪುತ್ರಪೌತ್ರಧನಧಾನ್ಯಾದ್ಯಭಿವೃದ್ಧ್ಯರ್ಥಂ" "ದಾರಾ ಪುತ್ರ ಮಿತ್ರ ಸೌಭಾಗ್ಯಸಿದ್ಧ್ಯರ್ಥಂ," ಇತ್ಯಾದಿ ಬಹುಪ್ರಕಾರವಾದ ಲೌಕಿಕ ಉದ್ದೇಶಮಾಡಿ ಆಚರಿಸಬಾರದು ಎಂದು ಅರ್ಥವು. ನಿಷ್ಕಾಮನಾಗಿ ಎಂದರೆ ವಿಷಯಕಾಮನಾರಹಿತನಾಗಿ ಭಗವಂತನ ಪ್ರಸಾದವನ್ನೂ ಜ್ಞಾನಭಕ್ತಿವೈರಾಗ್ಯಗಳನ್ನೂ ಅಪೇಕ್ಷಿಸಿ ಕರ್ಮವನ್ನು ಆಚರಿಸಬೇಕು.

ಮತ್ತೊಂದು ವಾಕ್ಯದಿಂದಲೂ ಇಂಥಾ ಮೋಕ್ಷ ವಿರೋಧಿ ಸಂಕಲ್ಪ ಪರಿತ್ಯಾಗವು ಸಂನ್ಯಾಸವೆಂದು ನಿಶ್ಚಿತವಾಗುವುದು :—

(3) **ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ**
**ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥**

—(6.4.)

ಯಾವಾಗ ಮೋಕ್ಷಾಧಿಕಾರಿಯು ಇಂದ್ರಿಯವಿಷಯಗಳಲ್ಲಿ ಪ್ರಯತ್ನವಿಲ್ಲದೆ ಸ್ನೇಹರಹಿತನಾಗುತ್ತಾನೆಯೋ ಮತ್ತು ಕರ್ಮಾನುಷ್ಠಾನಗಳಲ್ಲಿ ನಾನೇ ಸ್ವತಂತ್ರಕರ್ತನು ಎಂಬ ಅಭಿಮಾನರಹಿತನಾಗುತ್ತಾನೆಯೋ ಅಂತಹ ಸರ್ವ

ಸಂಕಲ್ಪಗಳನ್ನೂ (ದುರ್ವಿಷಯೇಚ್ಛೆಯನ್ನು) ಪರಿತ್ಯಾಗಮಾಡಿದವನು ಯೋಗಾರೂಢನೆನ್ನಿಸುವನು.

**6.** ಸಕಲಲೌಕಿಕಸಂಕಲ್ಪಪರಿತ್ಯಾಗವು ಧ್ಯಾನಯೋಗಿಗೆ ಅವಶ್ಯಕವೆಂಬುದು ಶ್ರೀಕೃಷ್ಣನ ವಿಧಾನದಿಂದಲೇ ತಿಳಿದುಬರುವುದು :—

(1) **ಸಂಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।**
**ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥**
**ಶನೈಃ ಶನೈರುಪರಮೇತ್...........** ।

—(6. 24-25.)

ಈ ಫಲಪ್ರಾಪ್ತಿಗೋಸ್ಕರ ಈ ಕರ್ಮವನ್ನು ಮಾಡುತ್ತೇನೆ ಎಂಬ ಸಂಕಲ್ಪಪೂರ್ವಕವಾದ ಅನುಷ್ಠಾನದಿಂದ ಉತ್ಪತ್ತಿಯುಳ್ಳ ಸಕಲ ವಿಷಯಭೋಗಗಳನ್ನೂ ಪರಿತ್ಯಾಗಮಾಡಿ, ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸಿ, ಬುದ್ಧಿಯಿಂದ ಮನಸ್ಸನ್ನು ಕ್ರಮಕ್ರಮವಾಗಿ ವಿಷಯಗಳಿಗೆ ಹೋಗದಂತೆ ನಿಯಮಿಸಬೇಕು.

ಇದರಿಂದ ಸಂಕಲ್ಪವು ವಿಷಯಭೋಗಪ್ರಾಪ್ತಿಗೆ ಕಾರಣವಾಗಿ ಜ್ಞಾನಪ್ರಾಪ್ತಿಗೆ ವಿಳಂಬವನ್ನು ಉಂಟುಮಾಡಿ ಮೋಕ್ಷಮಾರ್ಗಕ್ಕೆ ವಿರೋಧಿಯಾಗುವುದೆಂದು ನಿಶ್ಚಿತವಾಗುವುದು. ಸ್ಪಷ್ಟ ವಚನವೂ ಇರುವುದು :—

(2) **ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ।** —(6. 2.)

ಸಂಕಲ್ಪ ಪರಿತ್ಯಾಗಮಾಡದವನು ಧ್ಯಾನಮಾಡಲಾರನು.

7. ವಿಷಯೇಚ್ಛೆಯಿಂದ ಜನಿತವಾದ ಸಂಕಲ್ಪಗಳನ್ನು ಬಿಟ್ಟು ನಿಷ್ಕಾಮಕರ್ಮಾನುಷ್ಠಾನಮಾಡುವವರು ಉತ್ತಮಜ್ಞಾನಿಗಳಾಗುವರೆಂದು ಶ್ರೀಕೃಷ್ಣನು ಶ್ಲಾಘಿಸುತ್ತಾನೆ:—

(1) **ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।**
**ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥**

—(4. 19.)

ಯಾವಾತನಿಗೆ ಸಕಲಕರ್ಮೋಪಕ್ರಮದಲ್ಲಿಯೂ ಈ ಫಲಾರ್ಥವಾಗಿ ಈ ಕರ್ಮವನ್ನು ಮಾಡುತ್ತೇನೆ ಎಂಬ ಇಚ್ಛೆಯೂ ಅದರಿಂದ ಹುಟ್ಟುವ ಸಂಕಲ್ಪಗಳೂ ಇರುವುದಿಲ್ಲವೋ ಅಂತಹವನೇ (ಸಂನ್ಯಾಸವುಳ್ಳವನೇ) ಪರ

ಮಾತ್ಮನೇ ಸ್ವತಂತ್ರಕರ್ತನೆಂದು ತಿಳಿದು ತತ್ವಜ್ಞಾನಿಯಾಗುವನೆಂದು ಬುಧರು ಹೇಳಿರುತ್ತಾರೆ.

8. ಮೋಕ್ಷಾರ್ಥಿಯಾದವನು ಸ್ವಕರ್ಮಾನುಷ್ಠಾನವನ್ನು ಮಾಡು ವಾಗಲೂ ಸಕಲ ಲೌಕಿಕಫಲಾಪೇಕ್ಷಾರಹಿತನಾಗಿರಬೇಕೆಂಬುದು ಸಾಕ್ಷಾಚ್ಛ್ರೀಕೃಷ್ಣನ ವಿಧಾನದಿಂದಲೂ, ಮತ್ತು ಕೆಲವು ವಾಕ್ಯಗಳ ತಾತ್ಪರ್ಯಪರ್ಯಾಲೋಚನೆಯಿಂದಲೂ ವಿಶದವಾಗುವುದು :—

(1) **ಮಾ ಕರ್ಮಫಲಹೇತುರ್ಭೂಃ ..........।**

—(2. 47.)

ಎಲೈ ಅರ್ಜುನನೇ! ನೀನು ಕರ್ಮಫಲವನ್ನು ಅಪೇಕ್ಷಿಸಿ ಕರ್ಮಗಳನ್ನು ಆಚರಿಸಬೇಡ.

(2) ........**ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।**

—(2. 48.)

ಎಲೈ ಧನಂಜಯನೇ! ನೀನು ಕರ್ಮಫಲಸ್ನೇಹರಹಿತನಾಗಿ ವಿಧ್ಯುಕ್ತ ಕರ್ಮವನ್ನು ಅನುಷ್ಠಾನಮಾಡು.

(3) **ತಸ್ಮಾದಸಕ್ತಸ್ಸತತಂ ಕಾರ್ಯಂ ಕರ್ಮ ಸಮಾಚರ ।**

—(3. 19.)

....ನೀನು ಫಲಸ್ನೇಹರಹಿತನಾಗಿ ಕರ್ತವ್ಯಕರ್ಮವನ್ನು ನಿರಂತರ ಇದು ಭಗವತ್ಪೂಜೆಯು ಎಂಬ ಬುದ್ಧಿಯಿಂದ ಆಚರಿಸುವವನಾಗು.

(4) **ನಿರಾಶೀಃ**....... **ಯುಧ್ಯಸ್ವ** ....... ।

—(3. 30.)

ನೀನು ಫಲಾಶಾರಹಿತನಾಗಿ ಯುದ್ಧವನ್ನುಮಾಡು.

(5) **ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥**

—(3. 43.)

ಎಲೈ ಮಹಾಬಾಹುವೇ! ನೀನು ವಿಷಯೇಚ್ಛೆಯೆಂಬ ದುರ್ಜಯನಾದ ಶತ್ರುವನ್ನು ಜಯಿಸುವವನಾಗು.

(6) **ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।**

—(2. 45.)

ಎಲೈ ಅರ್ಜುನನೇ! ವೇದಗಳು ಆಪಾತತಃ ಸ್ವರ್ಗಾದಿಫಲಗಳನ್ನು ಕೊಡುವ ಕಾಮ್ಯಕರ್ಮವನ್ನು ಬೋಧಿಸುವುವು. ನೀನಾದರೋ (ಅದು ವೇದತಾತ್ಪರ್ಯವಲ್ಲವಾದುದರಿಂದ) ಕಾಮ್ಯಕರ್ಮಜನ್ಯವಾದ ಸ್ವರ್ಗಾಧಿಫಲ ಗಳಲ್ಲಿ ಅಪೇಕ್ಷಾರಹಿತನಾಗು.

9. ಇದು ಕರ್ಮಫಲಾಪೇಕ್ಷಿಗಳ ನಿಂದೆಯು:—

(1) **ಕೃಪಣಾಃ ಫಲಹೇತವಃ।**

(2. 49.)

ಫಲೋದ್ದೇಶದಿಂದ ಕರ್ಮಾನುಷ್ಠಾನವನ್ನು ಮಾಡುವವರು ದೀನರು.

(2) **ನಾಸ್ತಿ ಬುದ್ಧಿರಯುಕ್ತಸ್ಯ।**

(2. 66.)

ವಿಷಯಕಾಮನಾರಾಹಿತ್ಯರೂಪವಾದ ಚಿತ್ತನಿರೋಧವು ಇಲ್ಲದವನಿಗೆ ಧ್ಯಾನವು ಪ್ರಾಪ್ತವಾಗುವುದಿಲ್ಲವಾದುದರಿಂದ ಅಪರೋಕ್ಷಜ್ಞಾನವು ಉತ್ಪನ್ನ ವಾಗುವುದಿಲ್ಲ.

(3) **ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ।**

(5. 12.)

ಎಲೈ ಪಾರ್ಥನೇ! ಯೋಗಹೀನನಾದ, ಫಲೇಚ್ಛಾಪೂರ್ವಕವಾದ ಕರ್ಮಾ ಚರಣೆಯಿಂದ ಕ್ಷುದ್ರವಾದ ಸ್ವರ್ಗಾದಿ ಫಲಗಳಲ್ಲಿ ಆಸಕ್ತನಾದವನು ಅತ್ಯಂತ ವಾಗಿ ಸಂಸಾರಬಂಧವನ್ನು ಅನುಭವಿಸುತ್ತಾನೆ.

10. ಕರ್ಮಫಲಾಪೇಕ್ಷಾರಾಹಿತ್ಯರೂಪವಾದ ಸಂನ್ಯಾಸವು ಮೋಕ್ಷೋ ಪಯೋಗಿಯಾದ ಮಹಾಗುಣವು. ಅದು ಸಾಕ್ಷಾದ್ಧ್ಯಾನಕ್ಕೆ ಕಾರಣವಾಗಿ ಅಪರೋಕ್ಷಜ್ಞಾನವು ಪ್ರಾಪ್ತವಾದ ನಂತರ ಮತ್ತಷ್ಟು ಪ್ರಜ್ವಲಿತವಾಗಿ ಶ್ರೀ ಪರಮಾತ್ಮನಲ್ಲಿ ಭಕ್ತಿವೃದ್ಧಿಗೆ ಕಾರಣವಾಗಿ ಪರಮಾತ್ಮನ ಅತ್ಯರ್ಥ ಪ್ರಸಾದ ಪ್ರಾಪ್ತಿಗೆ ಹೇತುವಾಗುವುದು. ಶ್ರೀ ಕೃಷ್ಣನು ಹೇಳುತ್ತಾನೆ:—

(1) **ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ॥**
**ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ।**

**ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।**
**ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥**
**ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ ।**
**ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥**

—(18. 51-53.)

ಈ ಶ್ಲೋಕಗಳು ಪೂರ್ವದಲ್ಲೇ (ಪುಟ 62) ವ್ಯಾಖ್ಯಾತವಾಗಿರುವುವು. ಇದರಿಂದ ವೈರಾಗ್ಯವು (ಸಂನ್ಯಾಸವು) ಜ್ಞಾನಾರ್ಥಿಯಾದ ಮುಮುಕ್ಷುವಿಗೆ ಪ್ರಥಮ ಸೋಪಾನವೆಂದು ಸಿದ್ಧವಾಗುವುದು. ಸಂನ್ಯಾಸವನ್ನು ಹೊಂದಿದವನು ಧ್ಯಾನಯೋಗದಲ್ಲಿ ನಿರತನಾಗಿ ಅಹಂತಾಮಮತೆಗಳನ್ನು ಪರಿತ್ಯಾಗ ಮಾಡಿ ಬ್ರಹ್ಮಭೂಯಾಯಕಲ್ಪತೇ = ಪರಬ್ರಹ್ಮನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗುತ್ತಾನೆ ಎಂದು ಸಿದ್ಧವಾಗುವುದು. ನಂತರ ಶ್ರವಣಾದಿ ಜನಿತ ಜ್ಞಾನದಿಂದ ಸ್ತುತನಾದ ಪರಮಾತ್ಮನ ಸಾಕ್ಷಾತ್ಕಾರವೂ ಅದರಿಂದ ಪ್ರವೃದ್ಧವಾದ ದೃಢಭಕ್ತಿಯೂ ಬರುವುದೆಂದು ಇದೇ ಅಧ್ಯಾಯದ (54-55.) ಶ್ಲೋಕಗಳಲ್ಲಿ ನಿರೂಪಿತವಾಗಿರುವುದು. ಕೆಲವು ಕಡೆಗಳಲ್ಲಿ ಸಂನ್ಯಾಸವು ಮೋಕ್ಷಕಾರಣವೆಂದು ಹೇಳಿದ್ದರೂ ಈ ಶ್ಲೋಕಾರ್ಥವಿಮರ್ಶಾನುಗುಣವಾಗಿ ಧ್ಯಾನಾದಿದ್ವಾರಾ ಸಾಂಖ್ಯಾದಿ ಇತರ ಅಂಶಗಳಿಂದ ಸಹಕೃತವಾದ ಸಂನ್ಯಾಸವೇ ಪರಂಪರಯಾ ಮೋಕ್ಷಕಾರಣವಾಗುವುದೆಂದು ನಿಶ್ಚಯಿಸಬೇಕು. ಫಲಕಥನಪೂರ್ವಕವಾಗಿ ಶ್ರೀಕೃಷ್ಣನು 'ಸಂನ್ಯಾಸ'ವನ್ನು ಪ್ರಶಂಸಿಸಿರುವ ಇತರ ಶ್ಲೋಕಗಳನ್ನು ಉದಾಹರಿಸುವೆವು.

(2) **ಅಸಕ್ತಬುದ್ಧಿಸ್ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।**
**ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥**

—(18. 49.)

ಶಬ್ದಾದಿ ಸರ್ವವಿಷಯುಗಳಲ್ಲಿಯೂ ಆಸಕ್ತಿರಹಿತವಾದ ಬುದ್ಧಿಯುಳ್ಳವನಾಗಿ, ಜಿತಮನಸ್ಕನಾಗಿ, ವಿಷಯಾಭಿಲಾಷೆಗಳನ್ನು ಪರಿತ್ಯಾಗಮಾಡಿದವನು ಇಂಥಾ ಸಂನ್ಯಾಸದಿಂದ (ಧ್ಯಾನದ್ವಾರಾ) ಉತ್ಕೃಷ್ಟವಾದ ಮೋಕ್ಷರೂಪವಾದ ಮಹಾಪುರುಷಾರ್ಥವನ್ನು ಹೊಂದುತ್ತಾನೆ.

ದ್ವಿತೀಯಾಧ್ಯಾಯಗತವಾದ ಶ್ರೀ ಕೃಷ್ಣನ ವಾಕ್ಯವು ಸಾಂಖ್ಯ ಸಹ ಕೃತವಾದ ಸಂನ್ಯಾಸವೇ ಮೋಕ್ಷಸಾಧನವೆಂದು ನಿರೂಪಿಸಿ ಫಲವನ್ನು ಹೇಳುತ್ತದೆ:—

(3) **ಕರ್ಮಜಂ ಬುದ್ಧಿಯುಕ್ತಾ ಹಿ ಫಲಂತ್ಯಕ್ತ್ವಾಮನೀಷಿಣಃ ।**
**ಜನ್ಮಬಂಧವಿನಿರ್ಮುಕ್ತಾಃ ಪದಂಗಚ್ಛಂತ್ಯನಾಮಯಂ ॥**

—(2. 51.)

ಶಾಸ್ತ್ರಾಭ್ಯಾಸ ಜನಿತ ತತ್ವಜ್ಞಾನವುಳ್ಳ ಪಂಡಿತರು, ಕರ್ಮಜಂ ಫಲಂತ್ಯಕ್ತ್ವಾ =ಕರ್ಮದಿಂದ ಪ್ರಾಪ್ತವಾಗುವ ಲೌಕಿಕ ಫಲಗಳನ್ನು ಅಪೇಕ್ಷಿಸದೆ, (ಜ್ಞಾನವನ್ನು ಹೊಂದಿ) ಜನನ ಮರಣ ರೂಪವಾದ ಬಂಧದಿಂದ ನಿರ್ಮುಕ್ತರಾಗಿ ನಿರ್ದುಃಖವಾದ ಮೋಕ್ಷಸ್ಥಾನವನ್ನು ಹೊಂದುತ್ತಾರೆ.

(4) **ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।**
**ಪ್ರಸನ್ನಚೇತಸೋಹ್ಯಾಶು ಬುದ್ಧಿಃ ಪರ್ಯವತಿಷ್ಠತಿ ॥**

—(2. 65.)

ಅಪ್ರಯತ್ನದಿಂದ ಮನಸ್ಸು ವಿಷಯವನ್ನು ಕುರಿತು ಹೋಗದಿರುವ ಸ್ಥಿತಿಯನ್ನು ಹೊಂದುವುದೆಂಬ ಮನಃ ಪ್ರಸಾದವನ್ನು ಹೊಂದಿದವನಿಗೆ ಶೀಘ್ರದಲ್ಲಿ ಬ್ರಹ್ಮಾಪರೋಕ್ಷಜ್ಞಾನವು ಪ್ರಾಪ್ತವಾಗುವುದರಿಂದ ಆತ್ಯಂತಿಕ ಸಕಲ ದುಃಖಹಾನಿಯು (ಮೋಕ್ಷವು) ಉಂಟಾಗುವುದು.

(5) **ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ।**
**ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥**

—(2. 71.)

ಯಾವ ಪುರುಷನು ಸರ್ವ ಲೌಕಿಕವಿಷಯೇಚ್ಛೆಗಳಿಂದ ರಹಿತನಾಗಿ ಸರ್ವ ವಿಷಯಭೋಗಗಳನ್ನೂ ಪರಿತ್ಯಾಗಮಾಡಿ ಕೇವಲ ದೇಹಧಾರಣಮಾತ್ರಾರ್ಥವಾಗಿ ಆಹಾರವನ್ನು ಭಕ್ಷಿಸುತ್ತಾನೆಯೋ ಅಂಥವನು (ತತ್ವಜ್ಞಾನದಿಂದ ಅಹಂತಾಮಮತೆಗಳನ್ನು ಬಿಟ್ಟವನಾಗಿ) ಮುಕ್ತಿಯನ್ನು ಹೊಂದುತ್ತಾನೆ.

(6) **ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।**
**ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವಸಃ ॥**

—(5. 28.)

ಸರ್ವದಾನಿಗೃಹೀತವಾದ ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಯುಳ್ಳಂಥಾ ಮನನಶೀಲನಾದಂಥಾ, ಮೋಕ್ಷೇತರಪುರುಷಾರ್ಥಗಳಲ್ಲಿ ಇಚ್ಛಾರಹಿತನಾದ, ವಿಷಯೇಚ್ಛೆಯೂ, ಭಯವು ಮತ್ತು ಕ್ರೋಧವು ಇವುಗಳಿಂದ ರಹಿತನಾದವನು ಮುಕ್ತಸದೃಶನು; ಎಂದರೆ ಸಂನ್ಯಾಸವನ್ನು ಹೊಂದಿದವನು ಸಾಂಖ್ಯವನ್ನು ಸಂಪಾದಿಸಿ ಮನನಶೀಲನಾಗಿ ಶೀಘ್ರದಲ್ಲಿ ಪರಬ್ರಹ್ಮನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ. ನಂತರ ಮುಕ್ತನಾಗುತ್ತಾನೆ ಎಂದರ್ಥವು.

(7) **ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಂ।**
**ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಂ॥**
—(5. 26.)

ಕಾಮ ಕ್ರೋಧದಿಂದ ರಹಿತರಾದ, ಜಿತಮನಸ್ಕರಾದ, ಧ್ಯಾನಾದಿ ಯತ್ನಶೀಲರಾದ, ಪರಮಾತ್ಮ ಸಾಕ್ಷಾತ್ಕಾರವನ್ನು ಹೊಂದಿದ ಜ್ಞಾನಿಗಳಿಗೆ ಪ್ರಾಕೃತ ಶರೀರರಹಿತನಾದ ಪರಬ್ರಹ್ಮನು ಸರ್ವಪ್ರಕಾರದಲ್ಲಿಯೂ ರಕ್ಷಕನಾಗಿ ಇರುತ್ತಾನೆ. ಕಾಮ ಕ್ರೋಧಾದಿಗಳಿಂದ ರಹಿತರಾಗಿ "**ಸಂನ್ಯಾಸ**"ವನ್ನು ಹೊಂದಿದವರು ಶ್ರವಣಮನನಾದಿ ಯತ್ನಗಳಿಂದ ಜ್ಞಾನವನ್ನು ಹೊಂದಿ ಪರಮಾತ್ಮನ ದರ್ಶನವನ್ನು ಹೊಂದುತ್ತಾರೆ. ಇಂಥಾ ಕೇವಲ ನಿಷ್ಕಾಮಭಕ್ತರನ್ನು ಪರಮಾತ್ಮನು ಸರ್ವಪ್ರಕಾರದಿಂದಲೂ ಸರ್ವ ದೇಶಕಾಲ ಅವಸ್ಥೆಗಳಲ್ಲಿಯೂ ರಕ್ಷಿಸುತ್ತಾನೆ ಮತ್ತು ನಿರಂತರ ಅವರ ಜ್ಞಾನಕ್ಕೆ ವಿಷಯನಾಗಿ ಇರುತ್ತಾನೆ ಎಂದು ಭಾವವು.

(8) **ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ।** —(6. 7.)

ಜಿತವಾದ ಮನಸ್ಸುಳ್ಳವನಿಗೆ ಪ್ರಶಾಂತಿಯು ಬರುವುದು; ಎಂದರೆ ಆತನ ಮನಸ್ಸು ಸ್ವತ ಏವ ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲ. ಇಂಥಾ ಪ್ರಶಾಂತಿಯುಳ್ಳವನ ಹೃದಯದಲ್ಲಿ ಪರಮಾತ್ಮನು (ಜ್ಞಾನಗೋಚರನಾಗಿ) ಸನ್ನಿಹಿತನಾಗುತ್ತಾನೆ.

(9) **ಯದಾ ವಿನಿಯತಂ ಚಿತ್ತಮಾತ್ಮನ್ಯೇವಾವತಿಷ್ಠತೇ।**
**ನಿಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ॥**
—(6. 18)

ಯಾವಾಗ ಅಧಿಕಾರಿಯು ವಿಶೇಷಾಕಾರವಾಗಿ ವಿಷಯಗಳಿಂದ ಉಪ ಸಂಹೃತವಾದ ಮನಸ್ಸು, ಶ್ರವಣಾದಿಗಳಿಂದ ವಿದಿತನಾದ ಪರಮಾತ್ಮನಲ್ಲಿ ಸ್ಥಿರ ವಾಗಿ ನಿಲ್ಲುತ್ತದೆಯೋ ಮತ್ತು ಸರ್ವ ಭೋಗ್ಯವಿಷಯಕ ಆಶೆಗಳಿಂದಲೂ ನಿವೃತ್ತ ವಾಗಿರುವದೋ ಆಗ ಆತನು ಯೋಗಸಂಪನ್ನನು ಎಂದು ಕರೆಯಲ್ಪಡುವನು.

ಇದರಿಂದಲೂ ಕೂಡ ಸಂನ್ಯಾಸದಿಂದ ನಿಶ್ಚಲಮನಸ್ಸುಳ್ಳ ಯೋಗಿಯು "ಸಾಂಖ್ಯ" ಸಹಾಯದಿಂದ ಪರಮಾತ್ಮಧ್ಯಾನದಲ್ಲಿ ಮಗ್ನನಾಗುವನು. ನಂತರ ಯೋಗಪರಿಪಾಕದ ಫಲವನ್ನು ಹೊಂದುತ್ತಾನೆ ಎಂದು ಸಿದ್ಧವಾಗುವುದು.

(10) **ವಿಶಂತಿ ಯದ್ಯತಯೋ ವೀತರಾಗಾಃ ।**

—(8.11.)

ಸಕಲ ವಿಷಯಾಪೇಕ್ಷೆಗಳನ್ನು ಬಿಟ್ಟ ಯತ್ನಶೀಲರಾದ ಮುನಿಗಳು ಪರ ಮಾತ್ಮನನ್ನು ಪ್ರವೇಶಿಸುತ್ತಾರೆ.

(11) **ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥**

(8-14.)

ಅನ್ಯ ವಿಷಯಗಳಿಂದ ಸಂಪೂರ್ಣವಾಗಿ ಹಿಂತಿರುಗಿಸಲ್ಪಟ್ಟ ಮನಸ್ಸುಳ್ಳವ ನಾಗಿ ಯಾವಾತನು ಸಂತತ ನನ್ನನ್ನು ಸ್ಮರಿಸುತ್ತಾನೆಯೋ ಅಂತಹ ನಿತ್ಯಯುಕ್ತ ನಾದ ಯೋಗಿಗೆ ನಾನು (ಶ್ರೀಕೃಷ್ಣನು) ಸುಲಭನು.

ಈ ವಾಕ್ಯದಿಂದಲೂ ಕೂಡ ಸಂನ್ಯಾಸ ಯುಕ್ತನು ಸಾಂಖ್ಯಜನಿತ ನಿತ್ಯ ಸ್ಮರಣೆಯಿಂದ ಭಗವದಾರಾಧನೆಯಲ್ಲಿ ತತ್ಪರನಾಗಿ ಪರಮಾತ್ಮನನ್ನು ಹೊಂದು ವನೆಂದು ಸಿದ್ಧವಾಗುವುದು.

(12) .... .... .... .... **ಸಂಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥**

—(11. 55.)

ಎಲೈ ಪಾಂಡುನಂದನನೇ! ವಿಷಯಸ್ನೇಹರಹಿತನಾಗಿ, ಸರ್ವಸಜ್ಜನರ ವಿಷಯದಲ್ಲಿಯೂ ದ್ವೇಷರಹಿತನಾಗಿರುವವನು ನನ್ನನ್ನು ಹೊಂದುತ್ತಾನೆ.

(13) **ಅದ್ವೇಷ್ಟಾ ಸರ್ವಭೂತಾನಾಂ ....... ಯೋ ಮದ್ಭಕ್ತಃ**
**ಸ ಮೇ ಪ್ರಿಯಃ ॥**

—(12. 13-14.)

ಸರ್ವ ಸಾತ್ವಿಕಪ್ರಾಣಿಗಳ ವಿಷಯದಲ್ಲಿಯೂ ದ್ವೇಷರಹಿತನಾದ ನನ್ನ ಭಕ್ತನು ನನಗೆ ಅತ್ಯಂತ ಪ್ರಿಯನು.

**"ಸಂನ್ಯಾಸ"**ವು ಈರೀತಿಯಾಗಿ ಪರಂಪರೆಯಾಗಿ ಮೋಕ್ಷಸಾಧನವಾಗಿರುವುದರಿಂದಲೇ ಶ್ರೀ ಕೃಷ್ಣನು ಮೋಕ್ಷಸಾಧನಗಳ ನಿರೂಪಣಾವಸರದಲ್ಲಿ ಇದನ್ನು ಉದ್ದೇಶಪೂರ್ವಕವಾಗಿ ಸಂಗ್ರಹಿಸಿರುತ್ತಾನೆ: —

(14) **ಇಂದ್ರಿಯಾರ್ಥೇಷು ವೈರಾಗ್ಯಂ .... .... .... ....**
**ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಂ ॥**
**ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು ।**
**ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥** —(13-8. 9.)
* * * * *
**ಏತಜ್ಜ್ಞಾನಮಿತಿಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥**
— (13-11)

ಇಂದ್ರಿಯ ವಿಷಯಗಳಾದ ಶಬ್ದಾದಿಗಳಲ್ಲಿ ವೈರಾಗ್ಯವು, ಜನನ ಮರಣ ಜರಾ ವ್ಯಾಧಿಗಳಿಂದ ಲೋಕದಲ್ಲಿ ಉಂಟಾಗುವ ದುಃಖದ ಅನುಸಂಧಾನವು, ಪುತ್ರ, ದಾರ, ಗೃಹಾದಿವಿಷಯಗಳಲ್ಲಿ ವಿಶೇಷ ಆಸಕ್ತಿರಾಹಿತ್ಯವು ಮತ್ತು ವಿಶೇಷಸ್ನೇಹರಾಹಿತ್ಯವು, ಇಷ್ಟಗಳ ಪ್ರಾಪ್ತಿಯಿಂದ ಹಿಗ್ಗದಂಥಾ ಅನಿಷ್ಟ ಪ್ರಾಪ್ತಿಯಿಂದ ಕುಗ್ಗದಂಥಾ ನಿರ್ವಿಕಾರ ಚಿತ್ತಯುಕ್ತತ್ವವು ಇವೆಲ್ಲವೂ ಜ್ಞಾನ ಸಾಧನಗಳೆನ್ನಿಸುವುವು. ಇದಕ್ಕೆ ವಿರುದ್ಧವಾದುವುಗಳು ಜ್ಞಾನಸಾಧನಗಳಲ್ಲ.

(15) **ನಿರ್ಮಾನಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾ**
**ವಿನಿವೃತ್ತಕಾಮಾಃ ।**
**ದ್ವಂದ್ವೈರ್ವಿಮುಕ್ತಾಸ್ಸುಖದುಃಖ ಸಂಜ್ಞೈರ್ಗಚ್ಛಂತ್ಯಮೂಢಾಃ**
**ಪದಮವ್ಯಯಂ ತತ್ ॥**
—(15. 5.)

**ಅರ್ಥ:**— ಅಭಿಮಾನ ಮಿಥ್ಯಾಜ್ಞಾನಗಳಿಂದ ವರ್ಜಿತರಾದ, ಕರ್ಮಫಲ ಸ್ನೇಹವೆಂಬ ದೋಷರಹಿತರಾದ, ಪರಮಾತ್ಮನಲ್ಲಿ ಧ್ಯಾನರತರಾದ ಕಾಮಾದಿಗಳನ್ನು ಬಿಟ್ಟಂಥಾ ಸುಖದುಃಖಗಳೆಂಬ ದ್ವಂದ್ವದಿಂದ ನಿರ್ವಿಕಾರರಾದ ಜ್ಞಾನಿಗಳು ಪರಮಪದವನ್ನು ಹೊಂದುತ್ತಾರೆ.

ಈ ರೀತಿಯಲ್ಲಿ ಜ್ಞಾನೋತ್ಪತ್ತಿಗೂ ಸಾಧಕವಾದ ಮಹಾಗುಣವಾದುದರಿಂದಲೇ ಶ್ರೀಕೃಷ್ಣನು ಸಂನ್ಯಾಸವನ್ನು (ವೈರಾಗ್ಯವನ್ನು) ಸಕಲರೂ ಸಂಪಾದಿಸಬೇಕೆಂದು ಅತ್ಯಂತ ಅಭಿಪ್ರಾಯಪೂರ್ವಕವಾಗಿ ವಿಧಿಸುತ್ತಾನೆ. ಅದರಲ್ಲಿಯೂ ಪ್ರಾಪಂಚಿಕ ವಿಷಯಗಳಲ್ಲಿ ಅನಾದರಣೆಯನ್ನು ಮಾಡುವುದಕ್ಕೆ ಕಾರಣಾಂತರಗಳನ್ನು ನವಮಾಧ್ಯಾಯದಲ್ಲಿ ನಿರೂಪಿಸಿರುತ್ತಾನೆ:—

(16) **ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ ॥**
—(9. 33.)

ಎಲೈ ಅರ್ಜುನನೇ! ಅನಿತ್ಯವಾದ ಮತ್ತು ದುಃಖಮಿಶ್ರವಾದ ಈ ಲೋಕವನ್ನು ಹೊಂದಿರುವಾಗಲೇ ನನ್ನನ್ನು ಭಜಿಸು.

ಪ್ರಪಂಚವು ಅನಿತ್ಯವೂ, ದುಃಖಮಿಶ್ರವೂ ಆಗಿರುವುದರಿಂದ, (ಈ ಮಾನುಷ ದೇಹದಲ್ಲಿ ಅದು ಚೆನ್ನಾಗಿ ತಿಳಿಯುವುದರಿಂದ,) ವಿಷಯ ಭೋಗಗಳನ್ನು ತೊರೆದು ನಿತ್ಯಾನಂದಪ್ರದನಾದ ಪರಮಾತ್ಮನನ್ನು ಉಪಾಸನೆಮಾಡಬೇಕೆಂದು ಶ್ರೀಕೃಷ್ಣನ ಭಾವವು. ಅದೇ ನಮ್ಮ ಉಪದೇಶವು.

---

## 14. ಹದಿನಾಲ್ಕನೆಯ ಅಂಶವು.

### (ಸಂನ್ಯಾಸಮಹಿಮೆಯು.)

1. **ಪ್ರಶ್ನೆ:**—ಸ್ವಾಮಿ! ಕಾಮಾದಿವರ್ಜನರೂಪವಾದ ಸಂನ್ಯಾಸವು ಜ್ಞಾನೋತ್ಪತ್ತಿಯಲ್ಲಿ ಹೇಗೆ ಕಾರಣವಾಗುವುದು? ಚಿತ್ತಶುದ್ಧಿಗೂ ವೇದಾರ್ಥಪರಿಜ್ಞಾನಕ್ಕೂ ಏನು ಸಂಬಂಧವು? ಅಥವಾ ಅಂಥಾ ಸಂನ್ಯಾಸವು ಇದ್ದರೆ ನಿಮ್ಮ ಜ್ಞಾನದಿಂದ ತಾನೇ ಏನು ಪ್ರಯೋಜನವು? **ವೇಧಾದ್ವೇಧಾ ಭ್ರಮಂ ಚಕ್ರೇ ಕಾಂತಾಸು ಕನಕೇಷು ಚ। ತಾಸು ತೇಷ್ವಪ್ಯನಾಸಕ್ತಃ ಸ ವೈ ಭರ್ಗೋ ಮಹೇಶ್ವರಃ।** ಎಂದು ಕಾವ್ಯಶ್ಲೋಕದಲ್ಲಿಯೂ ಸಂನ್ಯಾಸವುಳ್ಳವನು ಕೃತಾರ್ಥನೆಂದು ಹೇಳಲ್ಪಟ್ಟಿರುವುದು.

**ಉತ್ತರ—ಶ್ರೀಶ್ರೀಗಳವರು—**ಅನೇಕ ವಿಧವಾಗಿ ಸಂನ್ಯಾಸವು ಜ್ಞಾನಕ್ಕೆ ಸಾಧಕವಾಗುವುದು. 1. ಸಂನ್ಯಾಸರಹಿತನಿಗೆ ವೇದಾದಿಶಾಸ್ತ್ರಾಭ್ಯಾಸದಲ್ಲಿ

ಯೇ ಅಧಿಕಾರವಿಲ್ಲವೆಂದು ಶ್ರುತಿ, ಸೂತ್ರಾದಿಪ್ರಮಾಣಗಳಲ್ಲಿ ಸಿದ್ಧವಾಗಿರುವುದು. ಗೀತೆಯಲ್ಲಿಯೂ ಕೂಡ "**ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ**" ಇತ್ಯಾದಿ ವಾಕ್ಯಗಳಲ್ಲಿ ವಿಷ್ಣುಭಕ್ತಿ ಮತ್ತು ವಿಷಯವಿರಕ್ತಿಗಳಿಂದ ಸಹಿತನಾದವನಿಗೇ ತತ್ತ್ವೋಪದೇಶವನ್ನು ಮಾಡಬೇಕೆಂದು ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ವಿರಕ್ತನು ಶಾಸ್ತ್ರಶ್ರವಣಾದಿಗಳಿಗೆ ಅಧಿಕಾರಿಯು. ಎಂದರೆ ವೈರಾಗ್ಯಸಂಪನ್ನನಾಗಿದ್ದರೆ, ಶ್ರವಣಾದಿಗಳಿಂದ ವೇದೋಕ್ತಫಲವು ಬರುವುದು, ಅನ್ಯಥಾ ಬರುವುದಿಲ್ಲ. ದುಷ್ಟಹೃದಯದಿಂದ ಮಾಡಿದ ಸೇವೆಯನ್ನು ಪೂರ್ಣಕಾಮನಾದ ವಿಷ್ಣುವು ಸ್ವೀಕರಿಸುವುದಿಲ್ಲವೆಂದು ಹೇಳಬೇಕಾದುದೇನು?

2. ಪರಂತು ಸಂನ್ಯಾಸವು ಸಾಕ್ಷಾತ್ ಜ್ಞಾನೋಪಾಯರೂಪವಲ್ಲದಿದ್ದರೂ, ಜ್ಞಾನೋಪಾಯವಾದ ಕರ್ಮಯೋಗ, ಧ್ಯಾನಾದಿಗಳಿಗೆ ತನ್ನ ಸಾಹಿತ್ಯದಿಂದ ಅಧಿಕಫಲವನ್ನು ಕೊಡಿಸಿ, ಅವುಗಳಿಂದ ಕ್ಷಿಪ್ರಫಲವು ಉಂಟಾಗುವಂತೆ ಮಾಡುತ್ತದೆ. ವಿರಕ್ತನು ಮಾಡಿದ ಕರ್ಮವು ಅನಂತಮಡಿ ಪುಣ್ಯಫಲವನ್ನು ಹೊಂದುತ್ತದೆ; ವಿರಕ್ತನ ಧ್ಯಾನವು ಕ್ಷಿಪ್ರದಲ್ಲಿ ಭಗವಂತನ ಪ್ರಸಾದಕ್ಕೆ ಕಾರಣವಾಗುತ್ತದೆ. ಅಲ್ಲದೆ, ಸಂನ್ಯಾಸದ ಪರಿಪಾಕವು ಮನಃಪ್ರಸಾದವು ಎಂದರೆ ಮನಸ್ಸು ಸ್ವತಃ (ಜೀವನ ಪ್ರಯತ್ನವಿಲ್ಲದೆ) ವಿಷಯಗಳಲ್ಲಿ ಪ್ರವರ್ತಿಸದೇ ಇರೋಣವೆಂಬ ಸ್ಥಿತಿಯನ್ನು ಹೊಂದುವುದು. ಇಂಥಾ ಸ್ಥಿತಿಯು ಹೇಗೆ ತಾನೇ ಸಾಕ್ಷಾತ್ ಪರಮಾತ್ಮನ ಅನುಗ್ರಹಕ್ಕೆ ಕಾರಣವಾಗುವುದು? ಅನ್ಯ ವಿಷಯಕ ಚಿಂತಾಪರಿತ್ಯಾಗ ಮಾತ್ರದಿಂದ ರಾಜನು ತನ್ನ ಭೃತ್ಯನಲ್ಲಿ ವಿಶ್ವಾಸ ಮಾಡಲಾರನು. ಮತ್ತೇನೆಂದರೆ ಅನ್ಯ ವಿಷಯಕಧ್ಯಾನರಹಿತವಾಗಿ ಸ್ವಸೇವೆಯಲ್ಲಿ ನಿರತನಾದ ಭೃತ್ಯನ ವಿಷಯದಲ್ಲಿ ರಾಜನು ಅಧಿಕವಾಗಿ ಪ್ರಸನ್ನನಾಗುವನು. ಆದುದರಿಂದ ಕೇವಲ ರಾಗದ್ವೇಷಾದಿರಾಹಿತ್ಯ ರೂಪವಾದ ಸಂನ್ಯಾಸವು ಅಧಿಕಾರಿಯು ಮಾಡತಕ್ಕ ಕರ್ಮ, ಧ್ಯಾನಾದಿಯೋಗಗಳಲ್ಲಿ ಪ್ರಾಶಸ್ತ್ಯಸಂಪಾದಕವಾಗಿ ಪರಂಪರಯಾ ಮೋಕ್ಷಕ್ಕೆ ಸಾಧಕವಾಗುವುದೆಂದು ನಿರ್ಣಯಿಸಬೇಕು.

3. ಕೇವಲ ಸಂನ್ಯಾಸವು ಮೋಕ್ಷಸಾಧನವಾಗುವುದೆಂದು ಹೇಳಿದರೆ **"ಜ್ಞಾನೇನಾಮೃತೀ ಭವತಿ" "ನಾನ್ಯಃಪಂಥಾ ಅಯನಾಯ ವಿದ್ಯತೇ"**

ಇತ್ಯಾದಿ ಶ್ರುತಿಗಳಿಗೆ ವಿರುದ್ಧವಾಗುವುದು. **'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ'** ಇತ್ಯಾದಿ ಗೀತಾವಾಕ್ಯಗಳಿಗೂ ವಿರುದ್ಧವಾಗುವುದು.

4. ಕಾಮಾದಿಗಳಿಂದ ಅಭಿಭೂತವಾದ ಚಿತ್ತವುಳ್ಳವನಿಗೆ ಶ್ರವಣಾದಿ ಜ್ಞಾನೋಪಾಯಗಳು ಸಂಪಾದಿಸುವುದಕ್ಕೇ ಅಶಕ್ಯವಾಗುವುವು. ಕಥಂಚಿತ್ ಶ್ರವಣದಿಂದ ಜ್ಞಾನವು ಉತ್ಪನ್ನವಾದರೂ, ಅದು ನಿರಂತರ ಧ್ಯಾನವನ್ನು ಉತ್ಪತ್ತಿ ಮಾಡಲಾರದೆ, ಉತ್ಪನ್ನವಾದ ಜ್ಞಾನವನ್ನೂ ತಿರೋಧಾನಹೊಂದಿಸಿ, ಅಪರೋಕ್ಷಜ್ಞಾನಜನಕವಾಗದಂತೆ ಮಾಡಿಬಿಡುವುದು. ಶ್ರೀಕೃಷ್ಣನು ಹೇಳುತ್ತಾನೆ:-

(1) **ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ।**

—(3. 41.)

ಎಲೈ ಅರ್ಜುನನೇ ! ಉತ್ಪತ್ತಿಯಾಗುವ ಮತ್ತು ಉತ್ಪನ್ನವಾದ ಜ್ಞಾನ ವಿಜ್ಞಾನಗಳಿಗೆ ನಾಶಕವಾದ ಪಾಪಿಯಾದ ವಿಷಯಾಭಿಲಾಶೆ ಎಂಬ ಕಾಮವನ್ನು ನೀನು ಸಂಹರಿಸು. ಕ್ವಚಿತ್ ದುಷ್ಟಕಾಮವು ಯಥಾರ್ಥವಿಜ್ಞಾನವನ್ನು ನಾಶಮಾಡುವುದಲ್ಲದೆ, ವಿಪರೀತ ವಿಷಯಗಳಲ್ಲಿ ಮನಸ್ಸನ್ನು ಪ್ರವರ್ತವಾಗುವಂತೆಮಾಡಿ, ನರಕಾದ್ಯನರ್ಥಗಳಿಗೂ ಕಾರಣವಾಗುತ್ತದೆ. "ಧ್ಯಾಯತೋ ವಿಷಯಾನ್ ಪುಂಸಃ" ಇತ್ಯಾರಭ್ಯ "ಬುದ್ಧಿನಾಶಾತ್ಪ್ರಣಶ್ಯತಿ" ಇತ್ಯಂತವಾದ ಗೀತಾವಚನಗಳು ಈ ವಿಷಯದಲ್ಲಿ ಸಾಧಕವಾಗಿರುತ್ತವೆ.

ವಶೀಕೃತವಾದ ಮನಸ್ಸುಳ್ಳವನಿಗಾದರೋ ಯಥಾರ್ಥತತ್ವನಿಶ್ಚಯವು ಶೀಘ್ರದಲ್ಲಿ ಉತ್ಪನ್ನವಾಗುವುದು, ಮತ್ತು ಉತ್ಪನ್ನವಾದ ತತ್ವಜ್ಞಾನವು, ಉಳಲ್ಪಟ್ಟ (ಕರ್ಷಣಮಾಡಲ್ಪಟ್ಟ) ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜದಂತೆ ಕ್ಷಿಪ್ರದಲ್ಲಿ ಧ್ಯಾನಜನಕವಾಗಿ ಅಪರೋಕ್ಷಜ್ಞಾನಕ್ಕೆ ಕಾರಣವಾಗುವುದು

5. ಇದೂ ಅಲ್ಲದೆ.

(2) **ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ।**

—(2. 71.)

ಇತ್ಯಾದಿ ಶ್ರೀಕೃಷ್ಣನ ಅನೇಕ ವಾಕ್ಯಗಳಿಂದ ಅಹಂತಾ ಮಮತಾಪರಿತ್ಯಾಗವು ಧ್ಯಾನಾದಿಗಳಿಗೆ ಒಂದು ಮುಖ್ಯಕಾರಣವೆಂದು ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ನಾನು ಸ್ವತಂತ್ರನು, ನನ್ನ ದಾರಾಪುತ್ರ ಮಿತ್ರಾದಿಗಳೆಲ್ಲರೂ ಕೇವಲ ನನ್ನ ಅಧೀನರು ಇತ್ಯಾದಿರೂಪವಾದ ಭ್ರಮವು ವಿಷಯಗಳಲ್ಲಿ ಆಶಾರಾಹಿತ್ಯ

ಮಾತ್ರದಿಂದ ಹೇಗೆ ನಿವೃತ್ತವಾಗುವುದು? ಪರಮಾತ್ಮನೇ ಸ್ವತಂತ್ರನು. ಕಳ ತ್ರಪುತ್ರಾದಿ ಭಾಗ್ಯವೆಲ್ಲವೂ ಶ್ರೀಹರಿಯ ಕೃಪೆಯಿಂದ ಪ್ರಾಪ್ತವಾದುದು. ಯಾವುದೂ ನಮ್ಮ ಅಧೀನವಲ್ಲ, ಇತ್ಯಾದಿ ವಿಜ್ಞಾನವು "**ಸಾಂಖ್ಯ**" ಎಂದರೆ ತತ್ವಜ್ಞಾನರೂಪವಾದುದು. ಆದುದರಿಂದ ಸಾಂಖ್ಯ ಸಹಕೃತವಾದ ಸಂನ್ಯಾಸವು ಸಾಕ್ಷಾದ್ಧ್ಯಾನಜನಕವಾಗುವುದು ಎಂದು ನಿಶ್ಚಯಿಸಬೇಕು. ಆದುದರಿಂದಲೇ ಶ್ರೀಕೃಷ್ಣನು ಮೋಕ್ಷಸಾಧನಗಳನ್ನು ನಿರೂಪಿಸುವಾಗ '**ಇಂದ್ರಿಯಾರ್ಥೇಷುವೈರಾಗ್ಯಂ**' ಇತ್ಯಾದಿ ವಾಕ್ಯಗಳಲ್ಲಿ ಸಂನ್ಯಾಸವನ್ನು ವಿಧಾನ ಮಾಡಿ ಅದೇ ಪ್ರಕರಣದಲ್ಲಿಯೇ, ಸಂಗಡವೇ, "**ಅಧ್ಯಾತ್ಮಜ್ಞಾನನಿತ್ಯತ್ವಂ ತತ್ವಜ್ಞಾನಾರ್ಥದರ್ಶನಂ**" ಎಂದು ಶಾಸ್ತ್ರಾಭ್ಯಾಸವನ್ನು ಒಂದು ಮುಖ್ಯ ಕಾರಣವನ್ನಾಗಿ ಬೋಧಿಸಿದನು. 6. ಮತ್ತು,

(3) "**ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ।**
**ಧ್ಯಾನಯೋಗಪರೋ ನಿತ್ಯಂ**........" । —(18. 51-52)

ಎಂದು ಹೇಳುವಾಗ ಶ್ರೀಕೃಷ್ಣನು ಸಂನ್ಯಾಸವು (ವಿಷಯಾಕಾಂಕ್ಷಾರಾಹಿತ್ಯವು) ಧ್ಯಾನಯೋಗಕ್ಕೆ ಸಾಧಕವಾಗುವುದೆಂದು ಸೂಚಿಸಿರುತ್ತಾನೆ.

7. ಕೇವಲ ಸಂನ್ಯಾಸವು ಕರ್ಮಭ್ರಂಶಕ್ಕೆ ಕಾರಣವಾಗಿ ಮಹಾ ಪಾಪಗಳಿಗೆ ಮೂಲವಾಗುವುದು ಎಂದು ಶ್ರೀಕೃಷ್ಣನು ಸೂಚಿಸಿರುತ್ತಾನೆ:—

(4) **ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ।**

—(3. 4.)

ಕೇವಲ ಫಲಾಪೇಕ್ಷಾರಾಹಿತ್ಯರೂಪವಾದ ಸಂನ್ಯಾಸದಿಂದಲಾಗಲೀ, ಕೇವಲ ಯತ್ಯಾಶ್ರಮದಿಂದಾಗಲೀ ಜ್ಞಾನಾದಿರೂಪವಾದ ಸಿದ್ಧಿಯನ್ನು ಮನುಷ್ಯನು ಹೊಂದುವುದಿಲ್ಲ.

ಕಾಮಾದಿರಹಿತನಾಗಿ ಸ್ಥಾಣುವಿನಂತೆ ಅಚಲನಾಗಿ ಮನೆಯಲ್ಲಿ ಕುಳಿತರೆ ವಿಹಿತವಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ಪರಿತ್ಯಾಗದಿಂದ ಮಹಾ ಅನರ್ಥವು ಪ್ರಾಪ್ತವಾಗುವುದು. ಸಂನ್ಯಾಸಕರ್ಮಯೋಗಗಳೆರಡೂ ಮಿಳಿತವಾಗಿದ್ದರೇ ಮೋಕ್ಷಹೇತುಭೂತವಾದ ಜ್ಞಾನಧ್ಯಾನಾದಿ ಉಪಾಯಗಳು ಲಭಿಸುವುವು. ಶ್ರೀಕೃಷ್ಣನು ಹೇಳುತ್ತಾನೆ:—

(5) **ಸಂನ್ಯಾಸಃ ಕರ್ಮಯೋಗಶ್ಚ ನಿಶ್ಶ್ರೇಯಸಕರಾವುಭೌ ॥**

—(5. 2.)

ಕಾಮಾದಿರಾಹಿತ್ಯರೂಪವಾದ ಸಂನ್ಯಾಸವು ಮತ್ತು ವಿಹಿತಕರ್ಮಾನುಷ್ಠಾನರೂಪವಾದ ಕರ್ಮಯೋಗವು ಇವೆರಡೂ ಮಿಳಿತವಾಗಿಯೇ ಮೋಕ್ಷಕಾರಣವಾಗುವುವು.

2. ಇದು ಶ್ರೀಕೃಷ್ಣನ ಅಭಿಪ್ರಾಯವು. ಆದರೆ ಶಂಕರಾಚಾರ್ಯರು ಸ್ವರೂಪೇಣ ಸಕಲ ಕರ್ಮಪರಿತ್ಯಾಗವೇ ಸಂನ್ಯಾಸವೆಂದೂ ಇಂಥಾ ಸಂನ್ಯಾಸವನ್ನೇ ಜ್ಞಾನಹೊಂದಿದ ಅರ್ಜುನನು ತಿಳಿದನೆಂದೂ ಹೇಳಿರುತ್ತಾರೆ. ಗೀತೋಪಸಂಹಾರಕಾಲದಲ್ಲಿ ಅರ್ಜುನನು—

(1) **ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ** ।

—(18. 73)

ಎಂದು ಹೇಳಿರುತ್ತಾನೆ. ನಾನು ನಷ್ಟಸಂಶಯವುಳ್ಳವನಾಗಿ ಯುದ್ಧಕ್ಕೆ ಸ್ಥಿತನಾಗಿರುತ್ತೇನೆ. ನಿನ್ನ ಅಪ್ಪಣೆಯನ್ನು ನೆರವೇರಿಸುತ್ತೇನೆ ಎಂದು ಸ್ಪಷ್ಟವಾದ ಶ್ಲೋಕಾರ್ಥವು. ಹೀಗಿದ್ದರೂ ಶಂಕರಾಚಾರ್ಯರು **"ಕರಿಷ್ಯೇ ವಚನಂ ತವ ಅಹಂ ತ್ವತ್ಪ್ರಸಾದಾತ್ಕೃತಾರ್ಥಃ ನ ಮೇ ಕರ್ತವ್ಯಮಸ್ತಿ ಇತ್ಯಭಿಪ್ರಾಯಃ"** ಎಂದು ಅರ್ಥವನ್ನು ಬರೆದಿರುತ್ತಾರೆ.

**ಅರ್ಥವು :—**"ನಾನು ಅಪ್ಪಣೆಯನ್ನು ನಡೆಸುತ್ತೇನೆ ಎಂದರೆ ನಿನ್ನ ಪ್ರಸಾದದಿಂದ ನಾನು ಕೃತಾರ್ಥನಾಗಿರುತ್ತೇನೆ. ನಾನು ಮಾಡಬೇಕಾದುದು ಒಂದೂ ಇಲ್ಲ ಎಂದು ಅಭಿಪ್ರಾಯವು."

ಈರೀತಿಯಾದ ವ್ಯಾಖ್ಯಾನವು ಈ ಅಂತ್ಯಶ್ಲೋಕಕ್ಕೆ ಎಷ್ಟು ಅಸಂಗತವೆಂಬುದು ನಮ್ಮ ಪೂರ್ವದ ನಿರೂಪಣೆಯಿಂದ ವಿಶದವಾಗುವುದು. ನಾನು ನಿನ್ನ ಅಪ್ಪಣೆಯಂತೆ ಯುದ್ಧಮಾಡುತ್ತೇನೆ ಎಂಬ ವಾಕ್ಯಕ್ಕೆ ನಾನು ಕೃತಕೃತ್ಯನು, ನಾನು ಏನನ್ನೂ ಮಾಡಬೇಕಾದುದಿಲ್ಲ ಎಂಬ ಅರ್ಥವು ಏನೋ ದಿನೀ ಪತ್ರಿಕೆಯಲ್ಲಿಯೂ ಸಿಕ್ಕುವುದು ಕಷ್ಟ. ಅರ್ಜುನನ ಮುಂದಿನ ವ್ಯಾಪಾರಗಳ ಪರಾಮರ್ಶೆಯಿಂದಲಾದರೂ ಈ ಶ್ಲೋಕಕ್ಕೆ ಅರ್ಥಮಾಡಿದ್ದರೆ ಇಂಥಾ ಹಾಸ್ಯಾಸ್ಪದವಾದ ಮತಿವಿಭ್ರಮಕರವಾದ ದುರರ್ಥವು ತೋರುತ್ತಿರಲಿಲ್ಲ. ಅರ್ಜುನನು ಉತ್ಸಾಹದಿಂದ ಯುದ್ಧವನ್ನು ಮಾಡಿ ಅನೇಕ ವರ್ಷಗಳ ಪರ್ಯಂತರ

ಸಾಮ್ರಾಜ್ಯಪರಿಪಾಲನೆಯಲ್ಲಿಯುಧಿಷ್ಠಿರನಿಗೆ ಸಹಾಯಭೂತನಾಗಿ ಕೃಷ್ಣನಲ್ಲಿ ನಿರಂತರ ಭೃತ್ಯಭಾವನೆಯನ್ನೇ ವ್ಯಕ್ತಪಡಿಸಿದನು. ಕೃತಕೃತ್ಯನಾದವನಂತೆ ನಿಷ್ಕ್ರಿಯತ್ವವನ್ನೂ, ವರ್ಣಾಶ್ರಮಧರ್ಮಪರಿತ್ಯಾಗವನ್ನೂ ಮಾಡಲಿಲ್ಲ. ಸ್ವರೂಪೇಣ ಕರ್ಮಗಳ ಸಂನ್ಯಾಸವು ತಾಮಸವೆಂದು ಶ್ರೀಕೃಷ್ಣನು ಹೇಳಿರುತ್ತಾನೆ:—

(2) **ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।**
**ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥**
—(18. 7.)

ವಿಧಿವಿಹಿತವಾದ ಆವಶ್ಯಕಕರ್ತವ್ಯಕರ್ಮಗಳ ಪರಿತ್ಯಾಗವು ಉಚಿತವಾದುದಲ್ಲ. ವಿಪರೀತಜ್ಞಾನದಿಂದ ನಿಯತಕರ್ಮಗಳನ್ನು ಪರಿತ್ಯಾಗಮಾಡುವುದು ತಾಮಸವೆಂದು ಹೇಳಲ್ಪಡುವುದು.

ಪುನಃ ಕಾಮ್ಯಕರ್ಮಪರಿತ್ಯಾಗವು ಎಂದರೆ ಕರ್ಮಾನುಷ್ಠಾನ ಮಾಡುವಾಗ ಕಾಮನಾಪರಿತ್ಯಾಗವು ನಿಜವಾದ ಸಂನ್ಯಾಸವೆಂದು ಸಂನ್ಯಾಸಶಬ್ದಾರ್ಥವನ್ನು ಶ್ರೀಕೃಷ್ಣನು ಉಪದೇಶ ಮಾಡಿರುತ್ತಾನೆ:—

(3) **ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।**
—(18. 2.)

ಕರ್ಮಾನುಷ್ಠಾನದಲ್ಲಿ ಕರ್ಮಪರಿತ್ಯಾಗವು ಎಂದರೆ ಲೌಕಿಕ ಫಲಾಪೇಕ್ಷಾರಾಹಿತ್ಯವು ಸಂನ್ಯಾಸವೆಂದು ಜ್ಞಾನಿಗಳು ತಿಳಿದಿರುತ್ತಾರೆ.

**ಪ್ರಶ್ನೆ**—ಸ್ವಾಮಿ! ಕಾಮ್ಯಕರ್ಮಪರಿತ್ಯಾಗವು ಸಂನ್ಯಾಸವೆಂದು ಈ ಶ್ಲೋಕದಲ್ಲಿ ಹೇಳಿರುವುದು. ಕಾಮನಾಪರಿತ್ಯಾಗವು ಸಂನ್ಯಾಸವೆಂದು ಯಾತಕ್ಕೆ ಅರ್ಥ ಮಾಡಬೇಕು?

**ಶ್ರೀಶ್ರೀಗಳವರು**—ಕಾಮ್ಯಕರ್ಮವೆಂಬ ಹೆಸರನ್ನು ಹೊಂದಿದ ಬೇರೆ ಕರ್ಮಗಳ ಸಮುದಾಯವು ಪ್ರಸಿದ್ಧವಾಗಿಲ್ಲ. ಒಂದೇ ಕರ್ಮವು ಕಾಮದಿಂದ ಮಾಡಲ್ಪಟ್ಟರೆ ಕಾಮ್ಯಕರ್ಮವು ಎಂದೆನಿಸುವುದು. ಭಗವದರ್ಪಣಬುದ್ಧಿಯಿಂದ (ನಿಷ್ಕಾಮತೆಯಿಂದ) ಮಾಡಲ್ಪಟ್ಟರೆ ನಿಷ್ಕಾಮಕರ್ಮವೆಂದೆನಿಸುವುದು. ಆದುದರಿಂದ ವಿಶೇಷಣವಾದ ಕಾಮಪರಿತ್ಯಾಗಮಾಡಿದರೆ (ವಿಶಿಷ್ಟವಾದ) ಕಾಮ್ಯಕರ್ಮವನ್ನು ಪರಿತ್ಯಾಗಮಾಡಿದಂತೆಯೇ ಆಯಿತು.

ಅಥವಾ ಕಾರೀರ್ಯಾದಿ ಯಾಗಗಳು ಸ್ವರೂಪೇಣ ಕಾಮ್ಯಕರ್ಮಗಳೆಂದು ಇಟ್ಟುಕೊಂಡರೂ ಚಿಂತಿಲ್ಲ. ಆಗಲೂ ಸಹ ಕಾಮ್ಯಕರ್ಮಗಳ ಪರಿತ್ಯಾಗವು ಸಂನ್ಯಾಸವು ಎಂದು ಶ್ಲೋಕಾರ್ಥವಾಗುವುದು. ನಿಷ್ಕಾಮಕರ್ಮವನ್ನು ಪರಿತ್ಯಾಗಮಾಡಬಾರದು. ಸರ್ವಕರ್ಮಪರಿತ್ಯಾಗವು ಸಂನ್ಯಾಸವಲ್ಲ ಎಂದೂ ಈ ಶ್ಲೋಕದಿಂದಲೇ ನಿಶ್ಚಿತವಾಗುವುದು. ಮತ್ತೂ ಶ್ರೀಕೃಷ್ಣನು ಹೇಳುತ್ತಾನೆ:-

(4) **ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।**
**ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥**

—(18-6.)

ಎಲೈ ಅರ್ಜುನನೇ! ಪೂರ್ವೋಕ್ತ ಯಜ್ಞದಾನಾದಿ ಕರ್ಮಗಳು ಫಲಾಪೇಕ್ಷೆಯನ್ನು ಬಿಟ್ಟು, ಕರ್ಮಫಲವನ್ನೂ ಪರಮಾತ್ಮನಲ್ಲಿ ಸಮರ್ಪಿಸಿ, ಅವಶ್ಯವಾಗಿ ಮಾಡಲ್ಪಡಬೇಕೆಂದು ನನ್ನ ವ್ಯವಸ್ಥಿತವಾದ ಉತ್ತಮ ಸಿದ್ಧಾಂತವಾಗಿರುತ್ತದೆ.

ಏವಂಚ ಸರ್ವಕರ್ಮಪರಿತ್ಯಾಗರೂಪವಾದ ಸಂನ್ಯಾಸವು ಬ್ರಾಹ್ಮಣ್ಯಾದಿ ವರ್ಣಧರ್ಮನಾಶಕವಾದ ಮತ್ತು ಬ್ರಹ್ಮಚರ್ಯಾದಿ ಆಶ್ರಮಧರ್ಮನಾಶಕವಾದ, ಸಾಂಕರ್ಯಕಾರಕವಾದ ಅತ್ಯಂತ ತಾಮಸಧರ್ಮವಾಗಿರುವುದರಿಂದ ಕರ್ಮಪರಿತ್ಯಾಗವೇ ಸಂನ್ಯಾಸವೆಂಬ ವಾದವು ಭಗವತ್ಪ್ರಾಪ್ತಿಗೆ ಸಾಧಕವಾದ ಯೋಗಶಾಸ್ತ್ರದಲ್ಲಿ ಯಜ್ಞಶಾಲೆಯಲ್ಲಿ ಪ್ರವಿಷ್ಟವಾದ ಗಾರ್ದಭದಂತೆ ಬಹಿಷ್ಕೃತವಾದ, ದುರ್ಜನ ಪ್ರೀತಿಕರವಾದ, ಕೆಟ್ಟ ತತ್ತ್ವವೆಂದು ಸಕಲರೂ ಪರಾಮರ್ಶೆಮಾಡಿ ನಿಶ್ಚಯಿಸಿರುತ್ತಾರೆ.

**3.** ರಾಗಾದಿರಾಹಿತ್ಯರೂಪವಾದ ಸಂನ್ಯಾಸವು ವಜ್ರಕ್ಕೆ ವರ್ತಿಯಂತೆ ಕರ್ಮಾನುಷ್ಠಾನದ ನೈಜಪ್ರಭಾವವನ್ನು ವ್ಯಕ್ತಿಗೊಳಿಸುತ್ತದೆ. ಅಥವಾ ಕಳೆಯನ್ನು ಕಿತ್ತು, ಪಾತಿಯನ್ನು ಮಾಡಿ ಜಲಸೇಚನಾದಿಗಳಿಂದ ಸಂಸ್ಕೃತವಾದ ಉತ್ತಮ ಭೂಮಿಯಲ್ಲಿ ಉತ್ತಮವಾದ ಪಟಾಪಟಿಯ ಕಬ್ಬಿನ ಫಸಲು ಬೆಳೆಯುವಂತೆ ಸಂನ್ಯಾಸದಿಂದ ಸಹಕೃತವಾದ ಮನಸ್ಸಿನಿಂದ ಯುಕ್ತವಾಗಿ ಮಾಡಲ್ಪಟ್ಟ ಕರ್ಮಗಳು ಸಮಗ್ರಫಲಪ್ರದವಾಗಿ ಕ್ಷಿಪ್ರದಲ್ಲಿ ಶ್ರೀಹರಿಪ್ರಸಾದಕ್ಕೆ ಕಾರಣವಾಗುವುವು. ಯದ್ಯಪಿ, ಯೋಗ(ವಿಧ್ಯುಕ್ತಕರ್ಮಾನುಷ್ಠಾನ) ರಹಿತವಾದ

ಸಂನ್ಯಾಸವು ಬೀಜರಹಿತವಾದ ಕಪ್ಪು ಭೂಮಿಯಂತೆ ನಿಷ್ಫಲವೇ. ಅಷ್ಟೇ ಅಲ್ಲ; ಪಾಪಕಾರಣವೂ ಆಗುವುದು. ಆದರೆ ಯೋಗಸಹಕೃತವಾದ ಸಂನ್ಯಾಸವು ಮಹತ್ಫಲಕ್ಕೆ ಕಾರಣವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ:—

(1) **ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।**
**ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥**

—(5. 6.)

ಎಲೈ ಪಾರ್ಥನೆ! ಕರ್ಮಾನುಷ್ಠಾನರೂಪವಾದ ಯೋಗರಹಿತವಾದ ಕೇವಲ ಸಂನ್ಯಾಸವು ಕೇವಲ ದುಃಖಾರ್ಥವಾಗಿಯೇ ಸರಿ. (ನರಕಾದ್ಯನರ್ಥಗಳಿಗೆ ಕಾರಣವಾಗುತ್ತದೆ ಎಂದರ್ಥವು.) ಆದರೆ ಭಗವದರ್ಪಣಬುದ್ಧಿಪೂರ್ವಕವಾದ ಕರ್ಮಾನುಷ್ಠಾನರೂಪವಾದ ಯೋಗದಿಂದ ಸಹಕೃತವಾದ, ಶಾಸ್ತ್ರಮನನದಿಂದ ಸಹಿತನಾದವನು ಶೀಘ್ರದಲ್ಲಿ ಪರಬ್ರಹ್ಮನನ್ನು ಹೊಂದುತ್ತಾನೆ.

ಈ ವಾಕ್ಯದಿಂದ ಸಾಂಖ್ಯ, ಯೋಗ, ತ್ಯಾಗ, ಸಂನ್ಯಾಸಗಳೆಂಬ ನಾಲ್ಕೂ ಅಂಶಗಳೂ ಒಟ್ಟಿಗೆ ಸೇರಿದರೆ ಜ್ಞಾನಾದಿರೂಪವಾದ ಸಿದ್ಧಿಯು ಪ್ರಾಪ್ತವಾಗುವುದೆಂದು ನಿರ್ವಿವಾದವಾಗಿ ಸಿದ್ಧವಾಗುವುದು. ಒಂದೇ ಯಂತ್ರದಲ್ಲಿ ಮುಂಭಾಗವೂ, ಹಿಂಭಾಗವೂ, ಮೊಳೆಗಳೂ, ಚಕ್ರಗಳೂ ಸೇರುವುದರಿಂದ ಒಂದು ಕಾರ್ಯವು ನೆರವೇರುವಂತೆ ಈ ನಾಲ್ಕು ಭಾಗಗಳೂ ಸೇರಿದರೇನೆ ವಿಶಿಷ್ಟವಾದ ಕರ್ಮಯೋಗದ ಫಲವು ಪ್ರಾಪ್ತವಾಗುವುದು. ಆದರೂ ಒಂದೊಂದು ಅಂಶಕ್ಕೂ ಪ್ರತ್ಯೇಕ ಪ್ರತ್ಯೇಕ ಪ್ರಯೋಜನವುಂಟು. ಕರ್ಮಾನುಷ್ಠಾನವು ಬ್ರಾಹ್ಮಣ್ಯಾದಿ ವರ್ಣಗಳನ್ನೂ, ಬ್ರಹ್ಮಚರ್ಯಾದಿ ಆಶ್ರಮಗಳನ್ನೂ ರಕ್ಷಿಸುವುದು; ನರಕದಿಂದ ಪ್ರಜೆಗಳನ್ನು ರಕ್ಷಿಸುವುದು; ಸಂನ್ಯಾಸಕ್ಕೆ ಕಾರಣವಾಗುವುದು. ನಂತರ ಸಂನ್ಯಾಸಾದಿಗಳಿಂದ ಸಹಿತವಾಗಿ ಧ್ಯಾನಯೋಗಕ್ಕೆ ಕಾರಣವಾಗುವುದು; ಅಥವಾ ಧ್ಯಾನವನ್ನೂ ಒಂದು ಕರ್ಮವಿಶೇಷವನ್ನಾಗಿಟ್ಟುಕೊಂಡರೆ ಸಾಕ್ಷಾದಪರೋಕ್ಷಜ್ಞಾನಕ್ಕೇ ಕಾರಣವಾಗುವುದು.

ತ್ಯಾಗವು ಮಾಡಲ್ಪಟ್ಟ ಕರ್ಮಫಲವು ನಾಶವಾಗದಂತೆ ಅದನ್ನು ರಕ್ಷಣೆ ಮಾಡುವುದು; ಕರ್ಮಫಲವನ್ನು ಅನಂತಮಾಡಿ ವೃದ್ಧಿಹೊಂದಿಸಿ ಸಮೀಚೀನವಾದ ಫಲವನ್ನು ಕೊಡಿಸುವುದು.

ಸಾಂಖ್ಯವು ಸಾಕ್ಷಾತ್ ಧ್ಯಾನಕ್ಕೆ ಮುಖ್ಯಕಾರಣವಾಗಿ ಅವ್ಯಕ್ತನಾದ ಭಗವಂತನನ್ನು ಸಹ ಅನುಗ್ರಹೋನ್ಮುಖನನ್ನಾಗಿ ಮಾಡಿಸಿಕೊಡುವುದು.

ಸಂನ್ಯಾಸವು ಯಂತ್ರದಲ್ಲಿ ಸ್ಕ್ರೂ ಮೊಳೆಗಳು ಇರುವಂತೆ, ಇತರ ಅಂಶ ಗಳಿಂದ ಸಹಕೃತವಾಗದೆ ಕೇವಲವಾಗಿದ್ದರೆ ಅಪ್ರಯೋಜಕವೇ. ಅರ್ಜನನು ಕೇವಲ ಸಂನ್ಯಾಸವು ಉತ್ತಮವೋ, ಕೇವಲ ಕರ್ಮಾನುಷ್ಠಾನವು ಉತ್ತಮ ವೋ, ಎಂದು ಪ್ರಶ್ನೆಮಾಡಲು ಈ ವಿವಕ್ಷೆಯಿಂದಲೇ ಪರಮಾತ್ಮನಾದ ಶ್ರೀಕೃಷ್ಣನು ಸಂನ್ಯಾಸಾಂಶಕ್ಕಿಂತ ವಿಹಿತಕರ್ಮಾನುಷ್ಠಾನರೂಪವಾದ ಯೋಗಾಂಶವೇ ಅಧಿಕವೆಂದು ಹೇಳಿದನು :—

**ಅರ್ಜುನ ಉವಾಚ :—**

(2) **ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ।**
**ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಂ॥**

**ಶ್ರೀಭಗವಾನುವಾಚ:—**

**ಸಂನ್ಯಾಸಃ ಕರ್ಮಯೋಗಶ್ಚ ನಿಶ್ಶ್ರೇಯಸಕರಾವುಭೌ।**
**ತಯೋಸ್ತು ಕರ್ಮಸಂನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ॥**

*  *  *  *

**ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ।**
**ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ॥**

—(5. 1, 2-6.)

ಎಲೈ ಶ್ರೀಕೃಷ್ಣನೇ! ನೀನು ಕಾಮಾದಿವರ್ಜನರೂಪವಾದ ಸಂನ್ಯಾಸ ವನ್ನು ಅಧಿಕವೆಂದೂ, ಪುನಃ ಕರ್ಮಾನುಷ್ಠಾನರೂಪಯೋಗವೇ ಅಧಿಕವೆಂದೂ ಪ್ರಶಂಸನೆ ಮಾಡಿರುತ್ತೀಯೆ. ಇವೆರಡರಲ್ಲಿ ವಸ್ತುತಃ ಯಾವದೊಂದು ಶ್ರೇಷ್ಠವಾಗಿರುವುದೆಂಬುದನ್ನು ನಿರ್ಣಯವಾಗಿ ಹೇಳು. ಶ್ರೀಕೃಷ್ಣನು ಹೇಳು ತ್ತಾನೆ:— ಎಲೈ ಪಾರ್ಥನೇ! ಕಾಮಾದಿವರ್ಜನರೂಪಸಂನ್ಯಾಸವೂ, ಕರ್ಮಾ ನುಷ್ಠಾನವೂ, ಉಭಯವೂ ಮಿಳಿತವಾಗಿಯೇ ಮೋಕ್ಷಕ್ಕೆ ಸಾಧಕವಾಗು ವುವು; ಅವುಗಳೆರಡರಲ್ಲಿ ಸಂನ್ಯಾಸಕ್ಕಿಂತ ಕರ್ಮಯೋಗರೂಪವಾದ ಅಂಶವು ಶ್ರೇಷ್ಠವು....ಎಲೈ ಮಹಾಬಾಹುವೇ! ವಿಹಿತಕರ್ಮಾನುಷ್ಠಾನವೆಂಬ ಯೋಗ

ದಿಂದ ರಹಿತವಾದ ಕೇವಲಸಂನ್ಯಾಸವು ದುಃಖಮಾಪ್ತುಂ= ಕೇವಲ ದುಃಖಕ್ಕೆ ಕಾರಣವಾಗುವುದು. ( ನರಕಾದ್ಯನರ್ಥ ಪ್ರದವಾಗುವುದೆಂದು ಭಾವವು. ) ಯೋಗಸಹಕೃತವಾದ ಸಂನ್ಯಾಸವುಳ್ಳ ಮನನಶೀಲನಾದ ಅಧಿಕಾರಿಯು ಕ್ಷಿಪ್ರದಲ್ಲಿ ಪರಬ್ರಹ್ಮನನ್ನು ಹೊಂದುತ್ತಾನೆ.

ಯೋಗ(ಕರ್ಮಾನುಷ್ಠಾನ)ಯುಕ್ತವಾದ ಸಂನ್ಯಾಸದ ಮಹಿಮೆಯು ಅಪಾರವಾದುದು. ಅದು ಕ್ಷಿಪ್ರದಲ್ಲಿ ಮೋಕ್ಷದಾಯಕವಾದುದೆಂಬಲ್ಲಿ ಹಿಂದೆಯೇ ವಚನಗಳನ್ನು ಉದಾಹರಿಸಿರುತ್ತೇವೆ. ಇನ್ನೂ ಇತರ ಮಹಿಮೆಗಳನ್ನು ಶ್ರೀಕೃಷ್ಣನು ಹೇಳುತ್ತಾನೆ :—

(3) **ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।**
**ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥**

—(5. 7.)

ಶುದ್ಧಾಂತಃಕರಣನಾದ, ಜಿತಮನಸ್ಕನೂ, ಜಿತೇಂದ್ರಿಯನೂ ಆದ ಸಂನ್ಯಾಸಿಯು ( ರಾಗದ್ವೇಷಾದಿರಹಿತನು ) ಕರ್ಮಾನುಷ್ಠಾನರೂಪವಾದ ಯೋಗಯುಕ್ತನಾಗಿ, ಸರ್ವಭೂತಾಂತರ್ಗತನಾದ ಪರಮಾತ್ಮನಲ್ಲಿ ಇಡಲ್ಪಟ್ಟ ಚಿತ್ತವುಳ್ಳವನಾಗಿ ಕರ್ಮಗಳನ್ನು ಮಾಡುತ್ತಿದ್ದರೂ ಲೇಪವನ್ನು ಹೊಂದುವದಿಲ್ಲ. (ಸಂನ್ಯಾಸವುಳ್ಳವನ ಕರ್ಮಗಳು ಜನನಮರಣರೂಪವಾದ ಸಂಸಾರಬಂಧಕ್ಕೆ ಕಾರಣವಾಗುವುದಿಲ್ಲವೆಂದು ಭಾವವು.)

ಇದೇ ಅಧ್ಯಾಯದಲ್ಲಿ ಪುನಃ ಹೀಗೆ ಹೇಳಿರುತ್ತಾನೆ :—

(4) **ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।**
**ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥**
**ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।**
**ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾಽಽತ್ಮಶುದ್ಧಯೇ ॥**

—(5. 10-11.)

ಯಾವಾತನು ಕರ್ಮಫಲಸ್ನೇಹವನ್ನು ಬಿಟ್ಟು ಪರಮಾತ್ಮಸ್ವಾತಂತ್ರ್ಯಜ್ಞಾನಪೂರ್ವಕವಾಗಿ ಕರ್ಮಮಾಡಿ ಕರ್ಮಫಲವನ್ನು ಪರಮಾತ್ಮನಲ್ಲಿ ಅರ್ಪಿಸುವನೋ ಅಂತಹವನು, ಪದ್ಮಪತ್ರವು ಜಲಸಂಬಂಧವಿಲ್ಲದೇ ಇರುವಂತೆ, ಪಾಪಸಂಬಂಧವನ್ನು ಹೊಂದುವುದಿಲ್ಲ. ಯೋಗಿಗಳು ಶರೀರ, ಮನಸ್ಸು, ಬುದ್ಧಿ,

ಮತ್ತು ಅಹಂಕಾರರಹಿತವಾದ ಇಂದ್ರಿಯಗಳಿಂದಲೂ ಕೂಡ ಫಲೇಚ್ಛಾದಿಗಳನ್ನು ತ್ಯಾಗಮಾಡಿ ಆತ್ಮಶುದ್ಧ್ಯರ್ಥವಾಗಿ ಕರ್ಮವನ್ನು ಮಾಡುತ್ತಾರೆ.

ಸಂನ್ಯಾಸವು ಕರ್ಮಫಲಲೇಪಾಭಾವಕ್ಕೂ ಕಾರಣವಾಗುವುದೆಂದು ಶ್ರೀಕೃಷ್ಣನು ಅರ್ಜುನನನ್ನು ಕುರಿತು ಮಾಡಿರುವ ವಿಧಿಯಿಂದಲೇ ನಿಶ್ಚಿತವಾಗುವುದು :—

(5) **ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ।**
**ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥**

ಈ ಶ್ಲೋಕವು ಪೂರ್ವದಲ್ಲಿಯೇ (ಪುಟ 213.)ವ್ಯಾಖ್ಯಾತವಾಗಿರುವುದು.

ಚತುರ್ಥಾಧ್ಯಾಯದ ಶ್ರೀಕೃಷ್ಣನ ವಾಕ್ಯಗಳಿಂದಲೂ ಸಂನ್ಯಾಸವುಳ್ಳವನಿಗೆ ಆತನು ಮಾಡುವ ಕರ್ಮವು ಸಂಬಂಧವಾಗುವುದಿಲ್ಲವೆಂದೂ ಮತ್ತು ಬಹುಪಾಪಕ್ಷಯಕ್ಕೆ ಕಾರಣವಾಗುವುದು ಎಂದೂ ಪ್ರಮಿತವಾಗುವುದು. :—

(6) **ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।**
**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥**
**ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।**
**ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥**
—(4. 20-21.)

ಪುನಃ,

(7) **ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ।**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಽಪಿ ನ ನಿಬಧ್ಯತೇ ॥**
**ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।**
**ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥**
—(4. 22-23.)

ದೈವೇಚ್ಛೆಯಿಂದ ಲಬ್ಧವಾದುದರಿಂದ ಸಂತುಷ್ಟನಾಗಿ ಲಾಭಾಲಾಭಾದಿ ದ್ವಂದ್ವಗಳಿಂದ ವಿಕಾರವನ್ನು ಹೊಂದದೆ, ಮಾತ್ಸರ್ಯರಹಿತನಾಗಿ, ಸುಖವಾಗಲೀ ದುಃಖವಾಗಲೀ ವಿಕಾರವನ್ನು ಹೊಂದದೆ, ಕರ್ಮಮಾಡುವ ಅಧಿಕಾರಿಯು ತನ್ನ ಕರ್ಮಗಳಿಂದ ಬದ್ಧನಾಗುವದಿಲ್ಲ. ಕರ್ಮಫಲಸ್ನೇಹರಹಿತನಾದ ಸ್ವಾತಂತ್ರ್ಯಾಭಿಮಾನರಹಿತನಾದ, ವಿಷ್ಣುಜ್ಞಾನದಲ್ಲಿ ಆಸಕ್ತವಾದ ಮನ

ಸ್ಸುಳ್ಳ, ವಿಷ್ಣುಪ್ರೀತ್ಯರ್ಥವಾಗಿ ಕರ್ಮವಮಾಡುವ ಅಧಿಕಾರಿಗೆ ಆತನು ಮಾಡುವ ಕರ್ಮಗಳೆಲ್ಲವೂ ಬಂಧಕವಾಗುವದಿಲ್ಲ.

**ಕೇವಲ** ಸಂನ್ಯಾಸಕ್ಕೆ ಬಂಧಪರಿಹಾರಕತ್ವವು ಮತ್ತು ವಿಶೇಷವಾಗಿ ಕರ್ಮಫಲಲೇಪಾಭಾವದಲ್ಲಿ ಕಾರಣತ್ವವು ಇಲ್ಲವೆಂದು ಪಂಚಮಾಧ್ಯಾಯದಲ್ಲಿ ಶ್ರೀಕೃಷ್ಣನು ತೀರ್ಮಾನಮಾಡಿರುತ್ತಾನೆ. ಹೀಗಿದ್ದರೂ ಈ ಪ್ರಕರಣದಲ್ಲಿಯೂ ಮತ್ತು ಇತರಸ್ಥಳಗಳಲ್ಲಿಯೂ ಸಂನ್ಯಾಸಿಗೆ ಪಾಪಕ್ಷಯವೂ ಮಾಡಲ್ಪಟ್ಟ ಕರ್ಮಗಳಿಗೆ ಅಬಂಧಕತ್ವವೂ ಮತ್ತು ವಿಶೇಷ ಪುಣ್ಯಪ್ರಾಪ್ತಿಯೂ ಉಂಟೆಂದು ಹೇಳಿರುವುದರಿಂದ ಇಲ್ಲಿ ಶ್ರೀಕೃಷ್ಣನು ಸಾಂಖ್ಯಸಹಕೃತವಾದ ಅಥವಾ ಅಪರೋಕ್ಷ ಜ್ಞಾನದಿಂದಲೇ ಉಜ್ಜೀವನವನ್ನು ಹೊಂದಿದ ಸಂನ್ಯಾಸವನ್ನು ವಿವಕ್ಷೆ ಮಾಡಿರುವನೆಂದು ನಿಶ್ಚಿತವಾಗುವುದು. ಪರಂತು ಈ ನಿರ್ಣಯದಲ್ಲಿ ಕಾರಣವೂ ಉಂಟು. ತತ್ವಜ್ಞಾನರಹಿತನಾದವನು ಇದು ಸ್ವತಂತ್ರವು ಇದು ಅಸ್ವತಂತ್ರವು; ಇದು ನಿತ್ಯವು ಇದು ಅನಿತ್ಯವು; ಇತ್ಯಾದಿ ರೀತಿಯಾದ ವಿವೇಕವನ್ನು ಮಾಡಲಾರನು. ಸ್ವತಂತ್ರಾಸ್ವತಂತ್ರವಸ್ತು ವಿವೇಕವು, ನಿತ್ಯಾನಿತ್ಯ, ಮತ್ತು ಸಾರಾಸಾರಾದಿ ವಿವೇಕರಹಿತನಿಗೆ ಹೇಗೆ ತಾನೇ ವಿಷಯಭೋಗಾಪೇಕ್ಷೆಯು ನಾಶವನ್ನು ಹೊಂದುವುದು? ಆದುದರಿಂದ ಉತ್ತಮ ವೈರಾಗ್ಯವು ಬರಬೇಕಾದರೆ ಸಮೀಚೀನವಾದ ಶಾಸ್ತ್ರಜ್ಞಾನವು ಅವಶ್ಯವಾಗಿರುವುದು. ಆದಕಾರಣ ಸರ್ವಪಾಪಹಾರಿಯಾಗಿ ಮಾಡಲ್ಪಟ್ಟ ಕರ್ಮಗಳ ಫಲದಿಂದ ನಿರ್ಲಿಪ್ತತೆಯನ್ನು ಹೊಂದಿಸತಕ್ಕ ಸಂನ್ಯಾಸವು ಸಾಂಖ್ಯದಿಂದ ಉಪೋದ್ಬಲಿತನೆಂದು ನಿರ್ವಿವಾದವಾಗಿ ಸಿದ್ಧವಾಗುವುದು. ಹೇಗೆಂದರೆ ಕರ್ತೃತ್ವಾಭಿಮಾನಪರಿತ್ಯಾಗಪೂರ್ವಕವಾಗಿ ಮಾಡಲ್ಪಟ್ಟ ಕರ್ಮವೇ ಬಂಧಕವಾಗುವುದಿಲ್ಲ, ಎಂಬ ನಿಯಮವು ಉಂಟು. ಆದುದರಿಂದ ಸಂನ್ಯಾಸವು ಕರ್ತೃತ್ವಾಭಿಮಾನ ತ್ಯಾಗದ್ವಾರಾ ಕರ್ಮಲೇಪಾಭಾವಕ್ಕೂ ಪಾಪಕ್ಷಯಕ್ಕೂ ಕಾರಣವಾಗುವುದು ಎಂದು ಅವಶ್ಯವಾಗಿ ಅಂಗೀಕರಿಸಬೇಕು. ಕರ್ತೃತ್ವಾಭಿಮಾನತ್ಯಾಗವು ತತ್ವಜ್ಞಾನವಿಲ್ಲದವನಿಗೆ ಶಕ್ಯವಾಗುವುದಿಲ್ಲ. ಆದುದರಿಂದ ಈ ಪರಂಪರಾಕ್ರಮದಿಂದಲೂ ಕೂಡ ಸಂನ್ಯಾಸದ ಫಲಪ್ರಾಪ್ತಿಗೆ ಸಾಂಖ್ಯಸಹಾಯವು ಅತ್ಯವಶ್ಯಕವೆಂದು ನಿರ್ಣೀತವಾಗುವುದು. 'ಸಾಂಖ್ಯವನ್ನು ಹೊಂದಿದವನು ಸ್ವಾತಂತ್ರ್ಯ

ಭಿಮಾನರಹಿತನಾಗಿ ಕರ್ಮಫಲದಲ್ಲಿ ಸ್ನೇಹವನ್ನು ಮಾಡುವುದಿಲ್ಲವೆಂದೂ, ವಿವೇಕರಹಿತನಾದ ತತ್ವಜ್ಞಾನಶೂನ್ಯನು ಸ್ವಾತಂತ್ರ್ಯಭ್ರಮವನ್ನು ಹೊಂದಿ ಕರ್ಮಫಲದಲ್ಲಿ ಸಕ್ತನಾಗುವನೆಂದೂ ಶ್ರೀಕೃಷ್ಣನು ಹೇಳುತ್ತಾನೆ:—

**(8) ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ |**
**ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ||**
**ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು |**
—(3.28-29)

ಎಲೈ ವೀರನೇ ! ಗುಣವಿಭಾಗಗಳನ್ನು (ಎಂದರೆ ಕರ್ಮಕಾರಣವಾದ ಭಗವದಿಚ್ಛಾದಿಗುಣಗಳು, ಜೀವನ ಸ್ವಭಾವಾದಿಗಳು, ಪ್ರಕೃತಿ ಪರಿಣಾಮಗಳಾದ ಸತ್ವರಜಸ್ತಮೋಗುಣಗಳು, ಮತ್ತು ಅವುಗಳ ಕಾರ್ಯಗಳಾದ ದೇಹೇಂದ್ರಿಯ ಮನ ಆದಿಗಳು, ಈ ರೀತಿಯಾದ ವಿಭಾಗಗಳನ್ನು) ಮತ್ತು ಕರ್ಮವಿಭಾಗಗಳನ್ನು (ಎಂದರೆ ಕರ್ಮಮಾಡುವುದರಲ್ಲಿ ಸ್ವತಂತ್ರ ಭಗವತ್ಕರ್ತೃತ್ವವು, ಅಸ್ವತಂತ್ರ ಜೀವ ಕರ್ತೃತ್ವವು ಇತ್ಯಾದಿ ಕರ್ಮವಿಭಾಗಗಳನ್ನೂ) ತಿಳಿದಂಥಾ ತತ್ವಜ್ಞಾನಿಯಾದರೋ ಭಗವದ್ಗುಣಗಳಾದ ಇಚ್ಛಾದಿಗಳು ಅಪ್ರಧಾನವಾದ ಜೀವಸ್ವಭಾವ, ಇಂದ್ರಿಯಗಳು ಮತ್ತು ಕರ್ಮ ಇವುಗಳಲ್ಲಿ ಪ್ರೇರಕತನದಿಂದ ಇರುತ್ತವೆ ಎಂದು ತಿಳಿದು, ನಸಜ್ಜತೇ= ನಾನೇ ಸ್ವತಂತ್ರಕರ್ತನೆಂಬ ಅಭಿಮಾನವನ್ನು ಮಾಡುವುದಿಲ್ಲ. ಕರ್ಮಫಲದಲ್ಲಿ ಸ್ನೇಹವನ್ನು ಮಾಡುವುದಿಲ್ಲ. ಪ್ರಕೃತಿ ಗುಣಗಳಿಂದ ಸಂಮೂಢರಾದವರು (ಎಂದರೆ ಪ್ರಕೃತಿಗುಣಗಳಾದ ಸತ್ವರಜಸ್ತಮೋಗುಣಗಳಿಂದ ಬದ್ಧರಾಗಿ ಮೋಹಿತಜ್ಞಾನವುಳ್ಳಂಥವರು) ಪ್ರಕೃತಿ ಗುಣ ಕರ್ಮಗಳಲ್ಲಿ ಎಂದರೆ ಪ್ರಕೃತಿ ಕಾರ್ಯಗಳಾದ ದೇಹೇಂದ್ರಿಯ ಮನ ಆದಿ ವಸ್ತುಗಳಲ್ಲಿ ಮತ್ತು ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ವಿಷಯಗಳಲ್ಲಿ ಆಸಕ್ತರಾಗುತ್ತಾರೆ. ಮತ್ತು ತಾವು ಮಾಡತಕ್ಕ ಕರ್ಮಗಳಲ್ಲಿ ಸ್ವಾತಂತ್ರ್ಯಭ್ರಮದಿಂದ ಯುಕ್ತರಾಗುತ್ತಾರೆ ಮತ್ತು ಫಲಾಪೇಕ್ಷೆಯಿಂದ ಸಹಿತರಾಗುತ್ತಾರೆ.

ಸಂನ್ಯಾಸ, ಸಾಂಖ್ಯ, ಕರ್ಮಾನುಷ್ಠಾನಾದಿ ಸರ್ವಾಂಗಗಳಿಂದಲೂ ಸಮಗ್ರವಾದ ಕರ್ಮಯೋಗವೇ ಪರಮಾತ್ಮನ ಪ್ರಸಾದಕ್ಕೆ ಕಾರಣವಾಗುವುದು ಎಂದು ಪುನಃ ಪುನಃ ಎಚ್ಚರಿಸಿ ಶ್ರೀಕೃಷ್ಣನು ಹೇಳಿರುತ್ತಾನೆ. ಏಕಾದಶಾಧ್ಯಾ

ಯದ ಅಂತ್ಯಶ್ಲೋಕವು ಇದೇ ಪ್ರಮೇಯವನ್ನೇ ಸಂಗ್ರಹಿಸಿ ನಿರೂಪಿಸುತ್ತದೆ:—

**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥**

—(11. 55.)

ಎಲೈ ಪಾರ್ಥನೆ! ಯಾವಾತನು ನನ್ನ ಪ್ರೀತ್ಯರ್ಥವಾದ ಕರ್ಮಗಳನ್ನು ಅನುಷ್ಠಾನಮಾಡುವವನಾಗಿ ನನ್ನನ್ನೇ (ಶ್ರೀಕೃಷ್ಣನನ್ನೇ) ಸರ್ವೋತ್ತಮನೆಂದು ತಿಳಿದವನಾಗಿ, ನನ್ನಲ್ಲಿ ಭಕ್ತಿಯುಳ್ಳವನಾಗಿ, ವಿಷಯಸ್ನೇಹರಹಿತನಾಗಿ ಸರ್ವ ಸತ್ಪುರುಷರ ವಿಷಯದಲ್ಲಿಯೂ ದ್ವೇಷರಹಿತನಾಗಿರುವನೋ ಅಂಥವನು ನನ್ನನ್ನು ಹೊಂದುತ್ತಾನೆ.

ಈ ವಾಕ್ಯದಲ್ಲಿ **ಮತ್ಕರ್ಮಕೃತ್** ಎಂದು ಹೇಳಿದುದರಿಂದ ಕರ್ಮಯೋಗವೂ ಮತ್ತು ಫಲತ್ಯಾಗವೂ, **ಮತ್ಪರಮಃ** ಎಂದು ಹೇಳಿರುವುದರಿಂದ ಸಾಂಖ್ಯನಾಮಕವಾದ ತೃತೀಯಾಂಶವೂ, **ಸಂಗವರ್ಜಿತಃ, ನಿರ್ವೈರಃ ಸರ್ವಭೂತೇಷು** ಎಂಬ ಶ್ಲೋಕಭಾಗದಿಂದ ಸಂನ್ಯಾಸವೆಂಬ ಚತುರ್ಥಾಂಶವೂ ಪರಮಾತ್ಮನ ಪ್ರಾಪ್ತಿಸಾಧಕವಾದ ಜ್ಞಾನೋಪಾಯಗಳೆಂದು ವರ್ಣಿಸಲ್ಪಟ್ಟಿರುವುವು. **ಮದ್ಭಕ್ತಃ** ಎಂಬ ಶ್ಲೋಕಭಾಗದಿಂದ ಈ ಯಾವತ್ತು ಸಾಧನೆಗಳು ಭಗವದ್ಭಕ್ತಿಯುಕ್ತವಾಗಿದ್ದರೇನೇ ಉತ್ತಮಫಲಪ್ರದವಾಗುವುವು, ಅನ್ಯಥಾ ನಿಷ್ಫಲವೇ ಎಂದು ಶ್ರೀಕೃಷ್ಣನು ಸೂಚಿಸಿರುತ್ತಾನೆ.

4. **ಪ್ರಶ್ನೆ—** ಸ್ವಾಮಿ! ರಾಗಾದಿವರ್ಜನರೂಪವಾದ ಸಂನ್ಯಾಸಕ್ಕೆ ಗುರೂಪದಿಷ್ಟವಾದ ಸಾಂಖ್ಯವು ಅತ್ಯವಶ್ಯಕವೆಂದು ತಮ್ಮ ನಿರೂಪಣೆಯಿಂದ ನಿಶ್ಚಿತವಾಯಿತು. ಸಾಂಖ್ಯವಾದರೋ ಕಾಮಕ್ರೋಧರಹಿತನಾದ ಎಂದರೆ ಸಂನ್ಯಾಸವನ್ನು ಹೊಂದಿದ ಉತ್ತಮ ಅಧಿಕಾರಿಗೇ ಲಭಿಸುವುದು. ಯಾತಕ್ಕೆಂದರೆ ರಾಗಾದಿ ದೋಷಕಲ್ಮಷರಹಿತನಾದವನಿಗೆ ಭಗವತ್ತತ್ತ್ವವನ್ನು ಶ್ರವಣಮಾಡಬೇಕೆಂದು ಶ್ರದ್ಧೆಯು ಬರುವುದು. **"ಶ್ರದ್ಧಾವಾನ್ ಲಭತೇ ಜ್ಞಾನಂ"** ಎಂದು ಶ್ರೀಕೃಷ್ಣನೂ ಹೇಳಿರುವನು. ಹೀಗೆ ಅನ್ಯೋನ್ಯಾಶ್ರಯವು ಪ್ರಾಪ್ತವಾಯಿತು. ಸಂನ್ಯಾಸವನ್ನು ಸಂಪಾದಿಸಿದ ಮೇಲೆ ಸಾಂಖ್ಯಪ್ರಾಪ್ತಿ, ಸಾಂಖ್ಯ

ವುಳ್ಳವನಿಗೆ ವಿಷಯಕಾಮನಾರಾಹಿತ್ಯರೂಪವಾದ ಸಂನ್ಯಾಸವು ಎಂದು ಆಯಿತು. ಆದುದರಿಂದ ಇದನ್ನು ಸಂಬುವುದು ಹೇಗೆ?

**ಉತ್ತರ—ಶ್ರೀಶ್ರೀಗಳವರು:—** ನಾವು ಪೂರ್ವದಲ್ಲಿಯೇ ನಿರೂಪಿಸಿರುತ್ತೇವೆ. ಜ್ಞಾನ ಭಕ್ತಿ ವಿರಕ್ತಿಗಳು ಮೂರೂ ಮಿಳಿತವಾಗಿಯೇ ಮೋಕ್ಷ ಫಲಕ್ಕೆ ಕಾರಣವಾಗುವುವು. ಆದರೂ ಪರಸ್ಪರ ಕಾರ್ಯಕಾರಣಭಾವವುಂಟು. ಜ್ಞಾನ ಬಂದರೆ ವಿಷಯವಿರಕ್ತಿ ಮತ್ತು ಭಗವಂತನಲ್ಲಿ ಭಕ್ತಿ; ಭಕ್ತಿಯಿದ್ದವನಿಗೆ ಜ್ಞಾನಪ್ರಾಪ್ತಿ, ವಿಷಯವೈರಾಗ್ಯ; ಇತ್ಯಾದಿ ರೀತಿಯಾಗಿ ಅನ್ಯೋನ್ಯಾಶ್ರಯಗಳು ಬಂದರೂ ಅದರ ಪರಿಹಾರಕ್ರಮವನ್ನು ನಾವು ನಿರೂಪಿಸಿದೆವು. ಆದರಂತೆ ಇಲ್ಲಿಯೂ ಕೂಡ ಸ್ವಭಾವಾನುಗುಣವಾದ ಸಾತ್ವಿಕವಾದ ಎಂದರೆ ಹೆಚ್ಚು ವಿಷಯಾಕಾಂಕ್ಷೆಯಿಂದ ರಹಿತವಾದ ಮನಸ್ಸನ್ನು ಮುಕ್ತಿಯೋಗ್ಯ ಜೀವನು ಕರ್ಮಪರಿಪಾಕವಶದಿಂದ ಹೊಂದಿ, ಉತ್ತಮ ಗುರುಗಳಲ್ಲಿ ಭಗವತ್ಕಥಾಶ್ರವಣವನ್ನು ಮಾಡಿ ಸ್ವಲ್ಪ ಸಾಂಖ್ಯವನ್ನು ಸಂಪಾದಿಸುವನು. ಆದರಿಂದ ಪುನಃ ಅಭಿವೃದ್ಧವಾದ ಹರಿಭಕ್ತಿಯುಳ್ಳವನಾಗಿ ರಾಗಾದಿಗಳನ್ನು ಪರಿತ್ಯಜಿಸುವನು; ಕರ್ಮಾನುಷ್ಠಾನವನ್ನು ಅತಿಸಮೀಚೀನವಾದ ರೀತಿಯಲ್ಲಿ ಮಾಡುವನು. ಪುನಃ ಸಾಂಖ್ಯಸಂಪಾದನೆಯು, ಆದರಿಂದ ಸಂನ್ಯಾಸವೃದ್ಧಿ, ಆದರಿಂದ ಸಾಂಖ್ಯವೃದ್ಧಿ ಈ ರೀತಿಯಾಗಿ ಉಭಯವೂ ವೃದ್ಧಿಯಾಗುವುವು. ಜ್ಞಾನವೃದ್ಧಿಯಾದ ಹಾಗೆಲ್ಲಾ ಸಂನ್ಯಾಸವೃದ್ಧಿಯು ಎಂಬ ನಿಯಮವು ಇರುವುದರಿಂದಲೇ ಅಪರೋಕ್ಷಜ್ಞಾನಿಗೆ ಏನು ಲಕ್ಷಣವೆಂದು ಅರ್ಜುನನು ಕೇಳಿದ ಪ್ರಶ್ನೆಗೆ ಶ್ರೀಕೃಷ್ಣನು ಪ್ರಾಯೇಣ ಸರ್ವಕಾಮರಾಹಿತ್ಯವು ಜ್ಞಾನಿ ಲಕ್ಷಣವೆಂದು ದ್ವಿತೀಯಾಧ್ಯಾಯದಲ್ಲಿ ನಿರೂಪಿಸಿದನು:—

(1) **ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।**
**ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥**

—(2. 55.)

ಇದೇ ಮುಂತಾದ ಶ್ಲೋಕಗಳು ಪೂರ್ವದಲ್ಲಿಯೇ ವ್ಯಾಖ್ಯಾತವಾಗಿರುವುವು. ಆದುದರಿಂದಲೇ ದ್ವಾದಶಾಧ್ಯಾಯದಲ್ಲಿ ಜ್ಞಾನಿಯಾದ ವಿಷ್ಣುಭಕ್ತನು ಸರ್ವ ಕಾಮಗಳನ್ನೂ ಸಂಪೂರ್ಣವಾಗಿ ತ್ಯಜಿಸಿರುವನೆಂದು ಶ್ರೀಕೃಷ್ಣನು

**"ಅದ್ವೇಷ್ಟಾ ಸರ್ವಭೂತಾನಾಂ'' ''ಹರ್ಷಾಮರ್ಷಭಯೋದ್ವೇಗೈರ್ಮುಕ್ತಃ" "ಅನಪೇಕ್ಷಃ,'' ''ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ"** ಇತ್ಯಾದಿ ವಚನಗಳಿಂದ ಸ್ತುತಿಸಿರುತ್ತಾನೆ. ಚತುರ್ದಶಾಧ್ಯಾಯದಲ್ಲಿಯೂ ಕೂಡ ಗುಣಾತೀತನಾದ ಜ್ಞಾನಿಯೇ ವಿಷಯೇಚ್ಛಾರಹಿತನಾದ ಸಂನ್ಯಾಸಿಯು ಎಂದು **''ಉದಾಸೀನವದಾಸೀನಃ" ''ಸಮದುಃಖಸುಖಃ ಸ್ವಸ್ಥಃ'' "ಮಾನಾಪಮಾನಯೋಸ್ತುಲ್ಯಃ"** ಇತ್ಯಾದಿ ವಚನಗಳಿಂದ ಸ್ತುತಿಸಿರುತ್ತಾನೆ. ಆಶ್ಲೋಕಗಳೆಲ್ಲಾ ಉದಾಹೃತವಾಗಿರುವುವು.

5. **ಪ್ರಶ್ನೆ**—ಗೊತ್ತಾಯಿತು ಮಹಾಸ್ವಾಮಿ! ಆದರೆ ಇಂಥಾ ಸಂನ್ಯಾಸವನ್ನು ನಾವು ಸಂಪಾದಿಸುವ ಕ್ರಮವು ಹೇಗೆ?

**ಉತ್ತರ—ಶ್ರೀಶ್ರೀಗಳವರು—**ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ನಿಗ್ರಹಿಸಿ, ಮನಸ್ಸಿನಲ್ಲಿ ನಿರೂಢವಾದ ಕಾಮವನ್ನು ತತ್ತ್ವಜ್ಞಾನದಿಂದ ಛೇದಿಸಬೇಕು. ಶ್ರೀಕೃಷ್ಣನು ಹೇಳುತ್ತಾನೆ:—

(1) **ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ |**
**ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ||**
—(3. 41.)

**ಏವಂ ಬುದ್ಧೇಃ ಪರಂ ಬುಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ |**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ||**
—(3. 43.)

ಈ ಶ್ಲೋಕಾರ್ಥಗಳನ್ನು ಹಿಂದೆಯೇ ನಿರೂಪಿಸಿರುತ್ತೇವೆ. ಈ ವಾಕ್ಯಗಳಿಂದ ಇಂದ್ರಿಯಜಯದಿಂದ ಸಂನ್ಯಾಸವು ದೃಢವಾಗಿ ಜ್ಞಾನೋತ್ಪತ್ತಿಗೆ ಪ್ರಯೋಜಕವಾಗುವುದು ಎಂದು ಸಿದ್ಧವಾಗುವುದು.

6. **ಪ್ರಶ್ನೆ** — ಸ್ವಾಮಿ! ಇಂದ್ರಿಯಜಯವನ್ನು ಸಂಪಾದಿಸುವುದು ಹೇಗೆ?

**ಉತ್ತರ—ಶ್ರೀಶ್ರೀಗಳವರು—** ಶ್ರೀಕೃಷ್ಣನು ಎರಡು ಮೂರು ಕಾರಣಗಳನ್ನು ನಿರೂಪಿಸಿರುತ್ತಾನೆ. 1. ಯದ್ಯಪಿ ಭಗವಂತನ ಚರಣಾರವಿಂದದಲ್ಲಿ ಶರಣಾಗತಿಪೂರ್ವಕವಾದ ಸಂತತ ಅವನ ಸ್ಮೃತಿಯಿಂದ ಸರ್ವವೂ ಲಭಿಸುವುದು.ಆದರೆ ಮದದಿಂದ ವಿಘೂರ್ಣಿತವಾದ, ಚಂಚಲವಾದ ಇಂದ್ರಿಯವುಳ್ಳವನಿಗೆ ಪರಮಾ

ತ್ಮನನ್ನು ದೈನ್ಯದಿಂದ ಬೇಡುವಷ್ಟು ಮನಃಪ್ರಾವಣ್ಯವು ಕೂಡ ಬರಲಾರದು. ಆದುದರಿಂದ ಮದಿಸಿದ, ಆನೆಯನ್ನೂ ಕ್ರೂರವಾದ ಸಿಂಹವನ್ನೂ ಸ್ವಾಧೀನಪಡಿಸಿ ಕೊಳ್ಳುವ ಉದ್ದೇಶದಿಂದ ಆಹಾರವನ್ನು ಹಾಕದೆ ಅವುಗಳನ್ನು ಸ್ವಲ್ಪ ದಂಡಿಸಿ ಅವುಗಳ ಮದವು ಇಳಿದನಂತರ ಅವುಗಳಿಗೆ ವಿಹಿತಶಿಕ್ಷೆಯನ್ನು ಕಲಿಸುವ ಮೃಗ ಪ್ರದರ್ಶಕ(Circus Manager)ನಂತೆ, ಮೋಕ್ಷಪದವಿಯಲ್ಲಿ ಆರೂಢನಾಗಲು ಇಚ್ಛಿಸುವವನು ತನ್ನ ದೇಹದಲ್ಲಿರುವ ತಾಮಸಭಾವಗಳು ನಾಶವಾಗುವುದ ಕ್ಕೋಸ್ಕರ ನಿರಾಹಾರತ್ವಾದಿ ಮಹಾಪ್ರಯತ್ನಗಳನ್ನೂ ಮಾಡಬೇಕು. ಶ್ರೀ ಕೃಷ್ಣನು ಹೇಳುತ್ತಾನೆ:—

(1) **ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।**
**ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥**

—(2. 59.)

ಈ ಶ್ಲೋಕವು ಪೂರ್ವದಲ್ಲಿ (ಪುಟ 5) ವ್ಯಾಖ್ಯಾತವಾಗಿರುವುದು.

2. ವಿಷಯಗಳಲ್ಲಿ ಪ್ರವರ್ತಿಸುವ ಇಂದ್ರಿಯಗಳನ್ನು ಪುನಃಪುನಃ ಹಿಂತಿರುಗಿಸಿ ಶುಭವಿಷಯಗಳಲ್ಲಿ ಪ್ರವರ್ತಿಸುವುದೆಂಬ ಪ್ರತ್ಯಾಹಾರವೂ, ಇಂದ್ರಿಯ ಜಯಕ್ಕೆ ಒಂದು ಕಾರಣವು. ಆದರೆ 3. ಪರಮಾತ್ಮನ ಸರ್ವೋತ್ತಮತ್ವ ಜ್ಞಾನಪೂರ್ವಕವಾಗಿ ಆತನ ಪ್ರೀತ್ಯರ್ಥವಾದ ಕರ್ಮಗಳನ್ನು ಮಾಡುತ್ತಾ ಪರಮಾತ್ಮನಲ್ಲಿ ಪುನಃಪುನಃ ಚಿತ್ತವೃತ್ತಿಯನ್ನು ಯೋಜಿಸುವುದೇ ಇಂದ್ರಿಯ ಜಯಕ್ಕೆ ಅತ್ಯುತ್ತಮ ಉಪಾಯವು. ಈ ಮೂರು ಉಪಾಯಗಳೂ ಸೋಪಾನಕ್ರಮದಿಂದಲಾದರೂ ಪ್ರಯೋಜಕವಾಗುವುವು. ಶ್ರೀಕೃಷ್ಣನು ಹೇಳುತ್ತಾನೆ:—

(2) **ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ ।**
**ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ॥**
**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।**
**ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**

—(2. 60-61.)

ಈ ಶ್ಲೋಕಗಳು ಪೂರ್ವದಲ್ಲಿಯೇ (ಪುಟ 5) ವ್ಯಾಖ್ಯಾತವಾಗಿರುವುವು.

ಇದೇ ಕ್ರಮವನ್ನೇ ದ್ವಾದಶಾಧ್ಯಾಯದಲ್ಲಿ ಸ್ವಲ್ಪ ಪ್ರಕಾರಾಂತರವಾಗಿ ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ಚಿತ್ತಸಮಾಧಾನವು(ಪರಮಾತ್ಮನಲ್ಲಿ ಸರ್ವೋತ್ತಮತ್ವಜ್ಞಾನಪೂರ್ವಕವಾದ ಮನೋಯೋಜನೆಯು) ಅಶಕ್ಯವಾದರೆ ಪ್ರತ್ಯಾಹಾರಾದಿಯತ್ನಗಳನ್ನು ಮಾಡಬೇಕು, ಅದೂ ಕಷ್ಟವಾದರೆ ಪರಮಾತ್ಮನ ಪ್ರೀತ್ಯರ್ಥವಾದ ಕರ್ಮಗಳು (ಮತ್ತು ನಿರಾಹಾರತ್ವಾದಿಗಳು) ಇವುಗಳಿಂದ ದೇಹವನ್ನು ಸ್ವಾಧೀನಪಡಿಸಿಕೊಂಡು ಇಂದ್ರಿಯಜಯಾದಿಗಳನ್ನು ಸಂಪಾದಿಸಿ ಮನೋಜಯವನ್ನು ಹೊಂದಬೇಕು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ: —

(3) **ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಂ ।**
**ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥**
**ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।**
**ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥**

**—(12. 9-10.)**

ಈ ಶ್ಲೋಕಗಳು (ಪುಟ 65ರಲ್ಲಿ) ವ್ಯಾಖ್ಯಾತವಾಗಿರುವುವು.

7. ಸಂನ್ಯಾಸಕ್ಕೆ ಕಾರಣವಾದ ಇಂದ್ರಿಯಜಯೋತ್ಪತ್ತಿಯಲ್ಲಿ ನಿರಾಹಾರತ್ವಾದಿ ಬಹುಭೇದಭಿನ್ನವಾದ ಕರ್ಮಯೋಗವು ಹೇಗೆ ಕಾರಣವಾಗುವುದೆಂಬುದನ್ನು ವಿಶದವಾಗಿ ಮುಂದೆ ನಿರೂಪಿಸುವೆವು. ಪ್ರಕೃತದಲ್ಲಿ ಈ ಪ್ರಕರಣಾರ್ಥವನ್ನು ಸಂಗ್ರಹದಿಂದ ಪುನಃ ಪರಾಮರ್ಶೆಮಾಡಿ ಮನೋನಿಗ್ರಹದ ಅವಶ್ಯಕತೆಯನ್ನು ಕುರಿತು ಶ್ರೀಕೃಷ್ಣನು ಮಾಡಿರುವ ಉಪದೇಶವನ್ನು ಉದಾಹರಿಸಿ ಈ ವಿಷಯೋಪನ್ಯಾಸವನ್ನು ಉಪರಮಹೊಂದಿಸುವೆವು. 1. ರಾಗದ್ವೇಷಾದಿಪರಿತ್ಯಾಗವು, ಕರ್ಮಾನುಷ್ಠಾನದಲ್ಲಿ ಸಂಕಲ್ಪಪರಿತ್ಯಾಗವು, ಕಾಮ್ಯಕರ್ಮಗಳನ್ನು ಸ್ವರೂಪೇಣ ತ್ಯಜಿಸುವುದು ಮತ್ತು ವಿಹಿತಕರ್ಮಾನುಷ್ಠಾನದಲ್ಲಿ ಫಲಾಪೇಕ್ಷಾರಾಹಿತ್ಯವು ಇವುಗಳೆಲ್ಲವೂ ಸಂನ್ಯಾಸಶಬ್ದಾರ್ಥವು, ಇವುಗಳನ್ನುಳ್ಳವನು ಸಂನ್ಯಾಸಿಯು. 2. ಕೇವಲ ಯತ್ಯಾಶ್ರಮವನ್ನು ಸ್ವೀಕರಿಸಿದವನೇ ಸಂನ್ಯಾಸಿಯಲ್ಲ. ಯತ್ಯಾಶ್ರಮವನ್ನು ಹೊಂದಿದವನಲ್ಲಿ ಮನೋಜಯವು ಅಧಿಕವಾಗಿ ಇರುವುದರಿಂದಲೂ, ಸ್ವರೂಪೇಣ ಕಾಮ್ಯಕರ್ಮಗಳನ್ನು ಆತನು ಬಿಟ್ಟಿರುವುದರಿಂದಲೂ ಯತಿಗೆ ವಿಶೇಷತಃ ಸಂನ್ಯಾಸಿ ಎಂಬ ಹೆಸರು ಸಲ್ಲು

ವುದು. ಆದರೆ ಗೀತೆಯಲ್ಲಿ ನಿರುಕ್ತವಾದ ರೀತಿಯಲ್ಲಿ ವಸಿಷ್ಠಾದಿಗೃಹಸ್ಥರೂ, ವಿಷಯಾಸಕ್ತಿರಹಿತವಾದ ಬ್ರಹ್ಮಚಾರಿಗಳೂ ಸಂನ್ಯಾಸಿಗಳೇ. 3. ಸ್ವರೂಪೇಣ ಕರ್ಮಪರಿತ್ಯಾಗವು ಸಂನ್ಯಾಸವಲ್ಲ. ಅದು ತಾಮಸಕಾರ್ಯವೆಂದು ಗೀತೆಯಲ್ಲಿ ಸ್ಪಷ್ಟವಚನಗಳು ಅನಂತವಾಗಿರುತ್ತವೆ. ಕರ್ಮಪರಿತ್ಯಾಗರೂಪವಾದ ಸಂನ್ಯಾಸವು ಕೃಷ್ಣನಿಂದ ಧಿಕ್ಕೃತವಾದ ತಮಸ್ಸನ್ನು ಹೊಂದಿಸತಕ್ಕ ಪಾಪಮೂಲವಾದ ವಾದವೆಂದು ಗೀತಾರ್ಥಜ್ಞರು ನಿಶ್ಚಯಿಸುವರು. 4. ವಿಹಿತ ಕರ್ಮಾನುಷ್ಠಾನದಲ್ಲಿ ಫಲಾಪೇಕ್ಷಾರಹಿತರಾಗಿರೋಣವೆಂಬ ಶ್ರೀಕೃಷ್ಣನಿಗೆ ಪ್ರಿಯವಾದ ಸಂನ್ಯಾಸವೂ ಕೂಡ ಕೇವಲವಾಗಿ ಫಲಕೊಡಲಾರದು ; ಎಂದರೆ ಕರ್ಮಾನುಷ್ಠಾನ, ಸಾಂಖ್ಯ, ಕರ್ಮಫಲತ್ಯಾಗವೆಂಬ ಇತರ ಅಂಶಗಳಿಂದ ಸಹಿತವಾಗಿಯೇ ಧ್ಯಾನಾದಿಗಳಿಗೆ ಕಾರಣವಾಗಿ ಅಪರೋಕ್ಷಜ್ಞಾನಕ್ಕೆ ಕಾರಣವಾಗುವುದು. 5. ನಂತರವೂ ಜ್ಞಾನೋತ್ಪತ್ತಿಯಾದ ನಂತರ ನಾಶವನ್ನು ಹೊಂದದೆ ಮತ್ತಷ್ಟು ಊರ್ಜಿತವಾಗಿ ಜ್ಞಾನಿಯ ಲಕ್ಷಣವಾಗಿಯೇ ಉಳಿದಿರುವುದು. **"ಆಪೂರ್ಯಮಾಣಮಚಲಪ್ರತಿಷ್ಠಂ"** ಇತ್ಯಾದಿ ಶ್ಲೋಕೋಕ್ತರೀತಿಯಲ್ಲಿ ಪ್ರಾಯೇಣ ಸರ್ವಕಾಮರಾಹಿತ್ಯವು ಜ್ಞಾನಿಗಳ ಲಕ್ಷಣವು. ಇದು ಜ್ಞಾನಿಗಳಲ್ಲಿ ಸ್ವಾಭಾವಿಕವು. 6. ಮುಮುಕ್ಷುಗಳಾದ ಅಜ್ಞರಿಗೆ ಇಂಥಾ ಸಂನ್ಯಾಸವು ತತ್ವಜ್ಞಾನದಿಂದ ಅಧಿಕವಾಗಿ ಬರುವುದು. 7. ತತ್ವಜ್ಞಾನವು ಬರುವುದಕ್ಕಿಂತ ಪೂರ್ವದೆಶೆಯಲ್ಲಿಯೂ ಸಹ ಪರಮಾತ್ಮನ ಪಾದದಲ್ಲಿ ಆತನ ಸರ್ವೋತ್ತಮತ್ವಜ್ಞಾನಪೂರ್ವಕವಾಗಿ ಮನಸ್ಸಮರ್ಪಣೆಯಿಂದಲೂ, ಪ್ರತ್ಯಾಹಾರಾದಿ ಪ್ರಯತ್ನ ವಿಶೇಷದಿಂದಲೂ, ನಿರಾಹಾರತ್ವ, ತೀರ್ಥಯಾತ್ರಾದಿ ಉಪಾಯ ವಿಶೇಷಗಳಿಂದಲೂ ಸಂಪಾದಿಸಿದ ಇಂದ್ರಿಯಜಯದಿಂದ ಮನಃಪ್ರಸಾದವನ್ನು ಸಾಧ್ಯವಾದಷ್ಟುಮಟ್ಟಿಗೆ ಹೊಂದಿ, ಬ್ರಹ್ಮವಿಚಾರದಿಂದ ಶಾಸ್ತ್ರಜ್ಞಾನವನ್ನು ಸಂಪಾದಿಸಿದನಂತರ ಪೂರ್ಣವಾದ ನಿಷ್ಕಾಮತ್ವರೂಪವಾದ ಸಂನ್ಯಾಸವನ್ನು ಸಂಪಾದಿಸಬಹುದು. 8. ಇಂಥಾ ಉತ್ತಮವಾದ ಧರ್ಮವನ್ನು ಮನಸ್ಸಿನಲ್ಲಿಟ್ಟುಕೊಂಡವನಿಗೆ ದ್ವಂದ್ವಸಹಿಷ್ಣುತ್ವಾದಿ ಮಹಾಗುಣಗಳು ಕರಗತವಾಗುವುವು. ಕರ್ಮಗಳು ಬಂಧಕವಾಗದೆ ಸಂಸಾರತಾರಕವಾದ ಬ್ರಹ್ಮವಿದ್ಯಾಪ್ರಾಪ್ತಿಯು ಸುಲಭವಾಗುವುದು, ಕರ್ಮಫಲಲೇಪಾಭಾವವೂ, ಕರ್ಮಕ್ಷ

ಯವೂ, ಅಪರೋಕ್ಷಜ್ಞಾನವೂ, ಮುಕ್ತಿಯೂ, ಪರಂಪರಯಾ ಸಂನ್ಯಾಸದಿಂದ ಪ್ರಾಪ್ತವಾಗತಕ್ಕ ಮಹತ್ಫಲಗಳು. 9. ಹೀಗಿದ್ದರೂ ಇದು ಕರ್ಮಯೋಗರಹಿತವಾಗಿದ್ದರೆ, ನರಕಾದ್ಯನರ್ಥಗಳಿಗೇ ಕಾರಣವಾಗುವುದು. 10. ಸಂನ್ಯಾಸವು ಕರ್ಮಯೋಗಕ್ಕೆ ಫಲರೂಪವಾಗಿರುವುದಲ್ಲದೆ, ಕರ್ಮಯೋಗಸಾಚಿವ್ಯವನ್ನು ಹೊಂದಿದರೆ, ಮಾಡಿದ ಕರ್ಮಫಲದಲ್ಲಿ ಅತಿಶಯವನ್ನು ಉತ್ಪತ್ತಿಮಾಡಿ, ಕ್ಷಿಪ್ರದಲ್ಲಿ ಬ್ರಹ್ಮದರ್ಶನವನ್ನು ಮಾಡಿಸುವುದು. 11. ಇಂಥಾ ಅವಶ್ಯ ಸಂಪಾದನೀಯವಾದ ಮುಮುಕ್ಷುಜನಸಾಮಾನ್ಯವಾದ ಪರಮಧರ್ಮವು ಮುಕ್ತಿಯೋಗ್ಯರಲ್ಲಿ ಸ್ವಾಭಾವಿಕವಾಗಿಯೇ ಇದ್ದು ಸಾಧನೋಪದೇಶಾದಿಗಳಿಂದ ವೃದ್ಧಿಯನ್ನು ಹೊಂದುವುದು. 12. ಆಸುರೀಸಂಪತ್ತುಳ್ಳ ದುರ್ಜನರು ಈಪ್ರಕಾರವಾದ ಸಂನ್ಯಾಸರಹಿತರಾಗಿ, ಆಶಾಪಾಶಶತಗಳಿಂದ ಬದ್ಧವಾದ ದುಷ್ಟಹೃದಯದಿಂದ ವೇದವಿರುದ್ಧವಾದ ಉಗ್ರಕರ್ಮಗಳಲ್ಲಿ ನಿರತರಾಗಿ ಶ್ರೀಕೃಷ್ಣನನ್ನು ಯಾವ ಕಾಲಕ್ಕೂ ಹೊಂದದೆ ಅಧಮಗತಿಯನ್ನು ಹೊಂದುವರು.

ಸಂನ್ಯಾಸವನ್ನು ಸಂಪಾದಿಸದೇ ಆಲಸ್ಯದಿಂದ ಕಾಲವನ್ನು ಕಳೆಯುವವನಿಗೆ ಮಹದನರ್ಥವು ಇರುವುದರಿಂದಲೇ ಶ್ರೀಕೃಷ್ಣನು ಮನೋಜಯದ ಪ್ರಾಶಸ್ತ್ಯವನ್ನು ಕುರಿತು ಉಪದೇಶ ಮಾಡುತ್ತಾನೆ:—

(1) **ಉದ್ಧರೇದಾತ್ಮನಾಽತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥**
**ಬಂಧುರಾತ್ಮಾಽತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।**
**ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥**
**ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ॥**

—(6.5-7.)

"ಯಾವ ಕಾರಣದಿಂದ ಈ ಜೀವನಿಗೆ ಮನಸ್ಸೇ ಬಂಧುವಿನಂತೆ ಉಪಕಾರಿಯೂ, ಮನಸ್ಸೇ ಶತ್ರುವಿನಂತೆ ಅಪಕಾರಿಯೂ ಆಗಿರುವುದೋ, ಆ ಕಾರಣದಿಂದ ಅಧಿಕಾರಿಯು ತನ್ನನ್ನು (ಜೀವನನ್ನು) ತನ್ನ ಮನಸ್ಸಿನಿಂದಲೇ ಉದ್ಧಾರ ಮಾಡಿಕೊಳ್ಳಬೇಕು. ಎಂದರೆ ಮನಸ್ಸನ್ನು ಬಂಧುವಿನಂತೆ ಉಪಕಾರಿಯನ್ನಾಗಿ ಮಾಡಿಕೊಂಡು ತನ್ನನ್ನು ಪುರುಷಾರ್ಥಪ್ರಾಪ್ತಿಗೆ ಅರ್ಹನನ್ನಾಗಿ

ಮಾಡಿಕೊಳ್ಳಬೇಕು. ಮತ್ತು ತನ್ನನ್ನು ದುಃಖಭಾಜನನನ್ನಾಗಿ ಮಾಡಿಕೊಳ್ಳಬಾರದು, ಎಂದರೆ ತನ್ನ ಮನಸ್ಸನ್ನು ಶತ್ರುವಿನಂತೆ ಅಪಕಾರಿಯನ್ನಾಗಿ ಮಾಡಿಕೊಂಡು ತನ್ನನ್ನು ದುರ್ಗತಿಗೆ ಪಾತ್ರನನ್ನಾಗಿ ಮಾಡಿಕೊಳ್ಳಬಾರದು.

"ಎಂತಹ ಜೀವನಿಗೆ ಎಂತಹ ಮನಸ್ಸು ಬಂಧುವಾಗುವುದು ಮತ್ತು ಎಂತಹ ಜೀವನಿಗೆ ಎಂತಹ ಮನಸ್ಸು ಶತ್ರುವಾಗುವುದು ಎಂಬುದನ್ನು ಶ್ರೀಕೃಷ್ಣನು ವಿವರಿಸುತ್ತಾನೆ:— ಯಾವ ಜೀವನಿಂದ ಮನಸ್ಸು ವಶೀಕೃತವಾಗಿರುವುದೋ ಅಂತಹ ಜೀವಾತ್ಮನಿಗೆ ಆತನ ಮನಸ್ಸು ಬಂಧುವಿನಂತೆ ಧ್ಯಾನೋಪಕಾರಿಯಾಗಿರುವುದು. ಮನೋಜಯ ರಹಿತನಾದವನಿಗೆ ಆತನ ಮನಸ್ಸೇ ಶತ್ರುವಿನಂತೆ ಅಪಕಾರಿಯಾಗುವುದು, ಎಂದರೆ ಭಗವದ್ಧ್ಯಾನೋಪಯೋಗಿಯಾಗದೆ ವಿಷಯಧ್ಯಾನೋಪಯೋಗಿಯಾಗಿ ನರಕಾದ್ಯನರ್ಥಗಳನ್ನು ಹೊಂದಿಸುವುದು.

"ವಶೀಕೃತ ಮನಸ್ಸುಳ್ಳವನಿಗಾದರೋ ಪ್ರಶಾಂತಿಯು ಎಂದರೆ ವಿಷಯಗಳಲ್ಲಿ ಪ್ರವರ್ತಿಸದೇ ಇರುವ ಮನಃ ಪ್ರಸಾದವು (ಸಂನ್ಯಾಸವು) ಬರುವುದು. ಪರಮಾತ್ಮನು ಪ್ರಶಾಂತನ ಹೃದಯದಲ್ಲಿ ಸನ್ನಿಹಿತನಾಗುತ್ತಾನೆ; ಎಂದರೆ ಧ್ಯಾನಕ್ಕೆ ಗೋಚರನಾಗಿ ದರ್ಶನವನ್ನು ಕೊಡುತ್ತಾನೆ."

8. **ಪ್ರಶ್ನೆ:**—ಸ್ವಾಮಿ! ಮನೋಜಯವು ಅಸಾಧ್ಯವೆಂದು ನಮಗೆ ತೋರುವುದು.

**ಉತ್ತರ:—ಶ್ರೀಶ್ರೀಗಳವರು:**— ಜಗನ್ನಾಥನನ್ನು ಆಶ್ರಯಿಸದವರಿಗೆ ಎಲ್ಲವೂ ಅಸಾಧ್ಯವು. ಆದರೆ ಹರಿಪಾದದಲ್ಲಿ ವಿನಮ್ರವಾದ ಚಿತ್ತವುಳ್ಳ ಸಜ್ಜನರಿಗೆ ಯಾವುದು ತಾನೇ ಅಸಾಧ್ಯವು? ಆದರೂ ಮನೋನಿಗ್ರಹವು ಸ್ವಲ್ಪ ಕಷ್ಟದಿಂದ ಸಂಪಾದನೀಯವಾಗಿರುವುದು. ಆದರೆ ಅಸಾಧ್ಯವಲ್ಲ. ಶ್ರೀಕೃಷ್ಣಾರ್ಜುನರ ಪ್ರಶ್ನೋತ್ತರ ಪರಾಮರ್ಶದಿಂದ ಈ ವಿಷಯವು ಸುನಿಶ್ಚಿತವಾಗುವುದು:—

**(1) ಅರ್ಜುನ ಉವಾಚ :—**

**ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ।**
**ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ಸ್ಥಿತಿಂ ಸ್ಥಿರಾಂ ॥**

**ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ।**
**ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ।**

**ಶ್ರೀಭಗವಾನುವಾಚ:—**

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ ॥**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥**
**ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।**
**ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ ॥**

—(6. 33-36.)

"ಅರ್ಜುನನು ಹೇಳುತ್ತಾನೆ:—ಎಲೈ ಮಧುಸೂದನನೇ! ಸರ್ವತ್ರ ವಾಸ ಮಾಡುವ ಭಗವಂತನನ್ನು ಅಭಿನ್ನನೆಂದು ತಿಳಿಯುವುದು, ಸುಖದುಃಖಾದಿ ದ್ವಂದ್ವಗಳಿಂದ ವಿಕಾರರಹಿತನಾಗಿರುವುದು, ತನ್ನಂತೆ ಇತರ ಭಗವದನುಯಾಯಿ ಗಳನ್ನು ತಿಳಿಯುವುದು ಇವೇ ಮೊದಲಾದ ಸಾಮ್ಯದೃಷ್ಟಿಯಿಂದ ಸಹಿತವಾದ ಯಾವ ಧ್ಯಾನಯೋಗವು ನಿನ್ನಿಂದ ಉಪದಿಷ್ಟವಾಯಿತೋ ಇಂಥಾ ಯೋಗಕ್ಕೆ ಮನಸ್ಸು ಚಂಚಲವಾಗಿರುವುದರಿಂದ ದೃಢವಾದ ಸ್ಥಿತಿಯನ್ನು ನಾನು ಕಾಣೆನು (ಎಂದರೆ ಸರ್ವರ ಮನಸ್ಸೂ ಚಂಚಲವಾಗಿರುವುದರಿಂದ ಇಂಥಾ ಧ್ಯಾನಯೋಗ ವನ್ನು ಹೊಂದುವುದು ಅಸಾಧ್ಯವು ಎಂದು ಭಾವವು.) ಹೇ ಕೃಷ್ಣ! ಮನಸ್ಸು ಚಂಚಲವು, ದೇಹೇಂದ್ರಿಯಗಳಿಗೆ ಕ್ಷೋಭವನ್ನು ಉಂಟುಮಾಡತಕ್ಕದ್ದು, ಜ್ಞಾನದಿಂದಲೂ ಜಯಿಸುವುದಕ್ಕೆ ಅಶಕ್ಯವು. ಅನಾದಿ ವಿಷಯವಾಸನಾ ಸಂಬಂಧದಿಂದ ವಿಷಯಗಳಲ್ಲಿ ಊರಿ ನಿಂತಿರುವುದು. ಆದುದರಿಂದ ಆಕಾಶದಲ್ಲಿ ಓಡುವ ಗಾಳಿಯನ್ನು ವಸ್ತ್ರಕುಂಭಾದಿಗಳಿಂದ ಹೇಗೆ ನಿರೋಧಮಾಡುವುದು ಅಶಕ್ಯವೋ ಹಾಗೆಯೇ ಮನಸ್ಸನ್ನು ನಿಗ್ರಹಮಾಡುವುದು ಅಸಾಧ್ಯವೆಂದು ತಿಳಿದಿರುತ್ತೇನೆ."

ಶ್ರೀಕೃಷ್ಣನು ಹೇಳುತ್ತಾನೆ:— ಎಲೈ ಮಹಾಬಾಹುವೇ! ಮನಸ್ಸು ಸ್ವಾಭಾವಿಕವಾಗಿ ಚಂಚಲವು ಮತ್ತು ಕಷ್ಟದಿಂದ ಜಯಿಸುವುದಕ್ಕೆ ಶಕ್ಯವಾದುದು. ಈ ವಿಷಯದಲ್ಲಿ ಸಂಶಯವಿಲ್ಲ. ಆದರೆ ವೈರಾಗ್ಯದಿಂದಲೂ (ಎಂದರೆ ವಿಷಯಗಳಲ್ಲಿ ಅಲ್ಪತ್ವ, ಅಸ್ಥಿರತ್ವ, ಅಸಾರತಾನಿಶ್ಚಯದಿಂದ ಜನಿತವಾದ ಜಿಹಾಸೆ

ಯಿಂದಲೂ), ಮತ್ತು ಅಭ್ಯಾಸದಿಂದಲೂ ಎಂದರೆ ವಿಷಯಗಳಲ್ಲಿ ಪ್ರವರ್ತಿಸಿದ ಇಂದ್ರಿಯಗಳನ್ನೂ, ಚಿತ್ತವೃತ್ತಿಗಳನ್ನೂ ಪುನಃ ಪುನಃ ಹಿಂತಿರುಗಿಸಿಕೊಂಡು ಬಂದು ಶುಭ ವಿಷಯಗಳಲ್ಲಿ ಇಡುವುದೆಂಬ (ಪ್ರತ್ಯಾಹಾರಾದಿ) ಪ್ರಯತ್ನಗಳ ಅಭ್ಯಾಸದಿಂದಲೂ ಶಾಸ್ತ್ರಾವೃತ್ತಿರೂಪವಾದ ಅಭ್ಯಾಸದಿಂದಲೂ **ಗೃಹ್ಯತೇ ತು** = ನಿಶ್ಚಯವಾಗಿಯೂ ನಿಗ್ರಹಿಸಲ್ಪಡುತ್ತದೆ. ಅಭ್ಯಾಸಾದಿಗಳಿಂದ ಅವಶೀಕೃತ ವಾದ ಮನಸ್ಸುಳ್ಳವನಿಗೆ ಧ್ಯಾನಯೋಗವು ಅಸಾಧ್ಯವೆಂದು ನನ್ನ ನಿಶ್ಚಯವು. ಅಭ್ಯಾಸ ವೈರಾಗ್ಯಾದಿಗಳಿಂದ ಮನೋಜಯವನ್ನು ಹೊಂದಿದವನಿಗೆ ಧ್ಯಾನ ಯೋಗವು ಉಪಾಯದಿಂದ ಸಂಪಾದಿಸುವುದಕ್ಕೆ ಸಾಧ್ಯವಾಗುವುದು.''

**9.** ಮನೋಜಯವು ಉಪಾಯವುಳ್ಳವನಿಗೆ ಸಾಧ್ಯವೆಂದು ಶ್ರೀಕೃಷ್ಣನು ಹೇಳಿರುವನು. ಮನೋಜಯವುಳ್ಳವನಿಗೆ ಧ್ಯಾನಯೋಗವು ಸಾಧ್ಯವೆಂದೂ ಶ್ರೀಕೃಷ್ಣನು ಹೇಳಿರುವನು. ಆದುದರಿಂದ ವಿವೇಕಿಯಾದ ಪುರುಷನು ಜನನ ಮರಣ ಜರಾ ವ್ಯಾಧ್ಯಾದಿ ಅನಂತಪೀಡೆಗಳಿಂದ ಪರಿಪ್ಲುತವಾದ, ಅಲ್ಪವೂ, ಅಸ್ಥಿರವೂ, ಚಂಚಲವೂ, ಅಸಾರಭೂತವೂ ಆದ ಗ್ರಾಮ್ಯವಿಷಯಭೋಗದ ಅಪೇಕ್ಷೆಯಿಂದ ದಗ್ಧಹೃದಯವುಳ್ಳವರಾಗಿ ನಾನಾ ದುರ್ನಯಗಳಲ್ಲಿ ಭ್ರಮಿಸುತ್ತಿರುವ ಭ್ರಷ್ಟಜನಸಂಘವನ್ನು ನೋಡಿ, ಪ್ರಾಪಂಚಿಕವಾದ ದಾರಾ, ಪುತ್ರ, ಮಿತ್ರ, ಗೃಹ, ಧನ, ಧಾನ್ಯಾದಿ ನಿಮಿತ್ತಕವಾದ ಸುಖಭೋಗದಲ್ಲಿ ಜಿಹಾಸೆಯನ್ನು ಹೊಂದಬೇಕು. ಅನಿತ್ಯವೂ ಅಲ್ಪಸುಖವುಳ್ಳದ್ದೂ ಆದ ಈ ಪ್ರಪಂಚದಲ್ಲಿ ನಮ್ಮ ಮನೋನಯನಗಳನ್ನು ಯಾವುದರಲ್ಲಿ ಸರ್ವಪ್ರಕಾರವಾಗಿ ಇಟ್ಟು ತೃಪ್ತಚಿತ್ತರಾಗಬಹುದು? ವೀರ್ಯ, ಶೌರ್ಯ, ಔದಾರ್ಯಗಳಿಗೆ ನೆಲೆಯಾದ ದಿವ್ಯವಸ್ತುವು ಈ ಲೋಕದಲ್ಲಿ ಯಾವುದೂ ಇಲ್ಲ. ತೇಜೋಲಾವಣ್ಯಗಳಿಗೆ ಆಕರವಾದ ದಿವ್ಯ ಸುಂದರವಿಗ್ರಹವು ಯಾವುದೂ ಭೂಲೋಕದಲ್ಲಿ ಇಲ್ಲ. ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಮಲಮೂತ್ರ ಕೀವುರಕ್ತ ಎಲುಬುಗಳಿಂದ ತುಂಬಿದ ಚರ್ಮಮಯದ ಹೊದ್ದಿಕೆಯುಳ್ಳ ಗೊಂಬೆಗಳು ಕಾಣುತ್ತಿರುವುವು. ಮನುಷ್ಯದೇಹವು ಅಸ್ಥಿರವು, ಬಹು ವ್ಯಾಧಿಗಳಿಗೆ ಆಸ್ಪದವಾದುದು. ದಾರಾ ಪುತ್ರ ಮಿತ್ರಾದಿಗಳು ಸ್ವಸ್ವಪ್ರಯೋಜನಾರ್ಥವಾಗಿ ಪ್ರೀತಿಮಾಡುವರೇ ಹೊರತು ಯಾರೂ ನಿರುಪಾಧಿಕ ಬಂಧುಗಳಲ್ಲ. ಆದುದರಿಂದ ಅಸತ್ಕಲ್ಪವಾದ ಪ್ರಾಪಂಚಿಕ ಸುಖ

ವನ್ನು ಕೋರಿ ತದರ್ಥವಾಗಿ ಕಾಮ್ಯಕರ್ಮವನ್ನು ಮಾಡುವವನು ಮಂದನೇ. ಸ್ವರ್ಗಾದಿಗಳೂ ಸಹ ಅಸ್ಥಿರಲೋಕಗಳು. ಸಂಪಾದಿಸಿದ ಪುಣ್ಯಕ್ಷಯವು ಆದ ನಂತರ ದೇವತೆಗಳಿಂದ ದಬ್ಬಲ್ಪಟ್ಟು ನಾವು ಹೋದ ದಾರಿಯಲ್ಲೋ, ಅಥವಾ ಎಂದೂ ಕಾಣದ ಬೇರೆ ದಾರಿಯಿಂದಲೋ ದಿಗ್ಭ್ರಾಂತರಾಗಿ ಪುನಃ ಭೂಲೋಕಕ್ಕೆ ಬರಬೇಕಾಗುವುದು. ಇನ್ನೂ ದುಷ್ಕಾಮಗಳಿಗೆ ವಶನಾಗಿ ವಿರುದ್ಧ ಕರ್ಮಗಳನ್ನು ಮಾಡುವವನು ಘೋರನರಕಗಳನ್ನು ಹೊಂದಿ ಅಲ್ಲಿಂದ ಮರಳಿ ಭೂಮಿಗೆ ಬಂದರೆ ಕೀಟ, ಪಶು, ಪಕ್ಷ್ಯಾದಿಗಳ ದಾರುಣವಾದ ಗರ್ಭವಾಸವನ್ನು ಹೊಂದಿ ನಾನಾ ಯೋನಿಗಳಲ್ಲಿ ಹುಟ್ಟಬೇಕಾಗುವುದು.* ಆದುದರಿಂದಲೇ ಶ್ರೀಕೃಷ್ಣನು ಪುನಃ ಪುನಃ ಕಾಮಾದಿಗಳನ್ನು ಜಯಿಸಬೇಕೆಂದೂ, ಪರಮಾತ್ಮನಲ್ಲಿ ಶರಣಾಗತನಾಗಿ ಸುಕೃತ ದುಷ್ಕೃತಗಳಿಗೆ ಕಾರಣವಾದ ಕಾಮ್ಯಕರ್ಮಗಳನ್ನು ಪರಿತ್ಯಾಗಮಾಡಬೇಕೆಂದೂ,

(1) **ಶಕ್ನೋತೀಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್।**
**ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ॥***
(5-23.)

---

* ಸಮುದ್ರದಲ್ಲಿ ಮುಳುಗಿ ಮುತ್ತುಗಳನ್ನೂ, ರತ್ನಗಳನ್ನೂ ಹೊರಗೆ ತರುವಂತೆ, ಶ್ರೀಪಾದಂಗಳವರು ಸಕಲ ಶಾಸ್ತ್ರದಲ್ಲಿರುವ ಸಾರತಮವಾದ ಅಭಿಪ್ರಾಯಮಣಿಗಳನ್ನು ಸಜ್ಜನರ ಅನುಗ್ರಹಾರ್ಥವಾಗಿ ಹೊರಗೆ ಚೆಲ್ಲುತ್ತಿರುವರು. ಆದುದರಿಂದ ಮೋಕ್ಷಾರ್ಥಿಗಳಾದ ವೈಷ್ಣವ ವಾಚಕರು ಯಥಾಶಕ್ತಿ ಭಕ್ತಿವಿರಕ್ತಿಗಳಿಂದ ಸಹಿತವಾಗಿ ಈಶ್ವರಪ್ರೀತಿಕರವಾದ ವಿಧ್ಯುಕ್ತಕರ್ಮಗಳನ್ನು ಅನುಷ್ಠಾನ ಮಾಡಬೇಕು. ಯಾತಕ್ಕೆಂದರೆ ಅನ್ಯತಕ್ಕೆ ತವರುಮನೆಯಾದ ಅದ್ವೈತ ಮತದಲ್ಲಿ ಮಾತ್ರ ಬೇಕಾದಂತೆ ವರ್ತಿಸಿದರೂ ಬಾಧಕವಿಲ್ಲ. ಅದ್ವೈತ ಮತದಲ್ಲಿ ಪತ್ನ್ಯಾದಿ ಭೋಗದಿಂದ ಉತ್ಪನ್ನವಾಗುವ ಸುಖವೆಲ್ಲವೂ ಬ್ರಹ್ಮಾನಂದವೇ ಎಂದು ಕೆಲವರು ಸಿದ್ಧಾಂತವನ್ನು ಮಾಡಿರುವರು. ಆದುದರಿಂದ ಆ ಮತದ ರೀತ್ಯಾ ಭೋಗ್ಯ ದ್ರವ್ಯಗಳನ್ನು ವೃದ್ಧಿ ಮಾಡಿಕೊಂಡು ನಿರಂತರ ಸುಖಾನುಭವದಲ್ಲಿ ಮಗ್ನನಾದರೆ ಬೇಡವೆನ್ನುವರು ಯಾರೂ ಇಲ್ಲ. ಶ್ರೀಕೃಷ್ಣನು ಮಾತ್ರ ಇಂಥಾ ವಿಷಯಸುಖಗಳೆಲ್ಲವೂ ರಾಜಸತಾಮಸಗಳೆಂದು ಹದಿನೆಂಟನೆಯ ಅಧ್ಯಾಯದಲ್ಲಿ ನಿರೂಪಿಸಿರುತ್ತಾನೆ. ಆದುದರಿಂದ ವಿಷಯಭೋಗವು ಅನರ್ಥಕರವೆಂದು ತಿಳಿದು ತಮ್ಮ ಸರ್ವಸ್ವವನ್ನೂ ಬ್ರಾಹ್ಮಣರಲ್ಲಿ ಭಗವದರ್ಪಣೆಮಾಡಿ ಪ್ರಾಚೀನರು ಭಗವದುಪಾಸನೆಯಲ್ಲಿ ತತ್ಪರರಾದರು.

**ಅರ್ಥ:**—ಎಲೈ ಪಾರ್ಥನೆ! ಯಾವಾತನು ಈ ಮಾನುಷದೇಹದಲ್ಲಿಯೇ ಶರೀರ ತ್ಯಾಗರೂಪವಾದ ಮರಣಕ್ಕಿಂತ ಪೂರ್ವದಲ್ಲಿಯೇ ಕಾಮಕ್ರೋಧಾದಿಗಳಿಂದ ಉತ್ಪನ್ನವಾದ ವೇಗವನ್ನು (ಮನಸ್ಸಿನ ಮತ್ತು ಇಂದ್ರಿಯಗಳ ಚಾಂಚಲ್ಯವನ್ನು) ಸಹಿಸುವುದಕ್ಕೆ ಸಮರ್ಥನಾಗುತ್ತಾನೆಯೋ ಆತನೇ ಜ್ಞಾನೋಪಾಯವುಳ್ಳ ಅಧಿಕಾರಿಯು; ಆತನೇ ಸುಖವನ್ನು ಹೊಂದುವ ಪುರುಷನು.

ಇತ್ಯಾದಿ ಅನೇಕ ಶ್ಲೋಕಗಳಲ್ಲಿ ಬೋಧಿಸಿರುವನು. ಮತ್ತು ವಿಷಯಗಳಿಂದ ಪ್ರತ್ಯಾಹೃತವಾದ ಯಾವತ್ತೂ ಮನಸ್ಸನ್ನು ತನ್ನಲ್ಲಿ ಇಡಬೇಕೆಂದು

(2) **ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ ॥**

(9. 33.)

(ಈ ವಾಕ್ಯವು ಪುಟ 250ರಲ್ಲಿ ವ್ಯಾಖ್ಯಾತವಾಗಿದೆ.)

ಎಂದು ಪ್ರಿಯನಾದ ಅರ್ಜುನನನ್ನು ನಿಮಿತ್ತಮಾಡಿ ಸಕಲ ಮುಮುಕ್ಷುಗಳಿಗೂ ಉಪದೇಶಮಾಡಿರುತ್ತಾನೆ. ಆದುದರಿಂದ ಯಾವಾತನ ಪಾದಾರವಿಂದದಲ್ಲಿ ಶರಣಾಗತನಾಗುವುದರಿಂದ ಭಯಂಕರವಾದ ಸಂಸಾರಮೃತ್ಯುವು ಪಲಾಯನವನ್ನು ಹೊಂದುವುದೋ, ಅಂಥಾ ನಿರಸ್ತದೋಷನಾದ ಅನಂತಗುಣಗಳಿಂದ ಪೂರ್ಣನಾದ ಜಗನ್ನಾಥನನ್ನು ದುಷ್ಟವಿಷಯಗಳಿಂದ ಭೀತರಾಗಿ ಅಂತರ್ಮುಖವಾದ ಮನೋಇಂದ್ರಿಯದಿಂದ ಧ್ಯಾನಮಾಡಿ, ಆತನ ಪ್ರಸಾದಕ್ಕೆ ಪಾತ್ರರಾಗಿ ಜ್ಞಾನದ್ವಾರಾ ಯಾವ ಕಾಲದಲ್ಲಿಯೂ ಯಾವ ಕಾರಣದಿಂದಲೂ ನಾಶಹೊಂದದ ಸ್ವರೂಪಭೂತವಾದ ನಿತ್ಯಾನಂದದ ಅಭಿವ್ಯಕ್ತಿತೆಯನ್ನು ಹೊಂದುವುದಕ್ಕೆ ಯತ್ನಿಸಬೇಕೆಂಬುದು ಶ್ರೀಕೃಷ್ಣನಿಗೆ ಸಮ್ಮತವಾದ ಉಪದೇಶವೆಂದು ನಾವು ನಿರೂಪಿಸಿರುತ್ತೇವೆ.

# 15. ಹದಿನೈದನೆಯ ಅಂಶವು.

## ಕರ್ಮಾನುಷ್ಠಾನಸ್ವರೂಪವು.

1. **ಶ್ರೀಶ್ರೀಗಳವರು—**ಇನ್ನು ಧ್ಯಾನಕಾರಣವಾದ ಕರ್ಮಯೋಗದಲ್ಲಿ ಒಂದು ಅಂಶವಾದ ಕರ್ಮಾನುಷ್ಠಾನದ ಸ್ವರೂಪವನ್ನು ಶ್ರೀಕೃಷ್ಣನ ವಾಕ್ಯಗಳಿಂದಲೇ ನಿರೂಪಿಸುತ್ತೇವೆ. ಮತ್ತು ಕರ್ಮಾನುಷ್ಠಾನವು ಜ್ಞಾನೋತ್ಪತ್ತಿಯಲ್ಲಿ ಹೇಗೆ ಪ್ರಯೋಜಕವಾಗುವುದು ಎಂಬ ನಿಮ್ಮ ಪ್ರಶ್ನೆಗೂ ಉತ್ತರವನ್ನು ಕೊಡುತ್ತೇವೆ. ಜ್ಞಾನಕಾರಣವೆಂದು ಶ್ರೀಕೃಷ್ಣನಿಂದ ವಿವಕ್ಷಿತವಾದ ಕರ್ಮಾನುಷ್ಠಾನವೆಂದರೆ ಕರ್ಮೇಂದ್ರಿಯಗಳಿಂದ ಮಾಡಲ್ಪಟ್ಟ ಭಗವತ್ಪೂಜೆಯು ಎಂದರ್ಥವು. ಸ್ವಶಕ್ತ್ಯನುಸಾರವಾಗಿ ಸ್ವವರ್ಣಾಶ್ರಮೋಚಿತವಾದ ವೇದೋಕ್ತಕರ್ಮಗಳನ್ನು ಭಗವದಾರಾಧನರೂಪವಾಗಿ ಅನುಷ್ಠಾನ ಮಾಡುವುದೇ ಕರ್ಮಾನುಷ್ಠಾನವು. ಇದನ್ನೇ ಯೋಗವೆಂದೂ, ಕರ್ಮಯೋಗವೆಂದೂ ಶ್ರೀಕೃಷ್ಣನು ಅಲ್ಲಿ ಅಲ್ಲಿ ಕರೆದಿರುತ್ತಾನೆ. ಭಗವದರ್ಪಣಬುದ್ಧಿಯಿಂದ ಮಾಡಲ್ಪಡುವ ವಿಧ್ಯುಕ್ತಕರ್ಮವು ಸಾಂಖ್ಯ, ಸಂನ್ಯಾಸ, ತ್ಯಾಗಗಳಿಂದ ಸಹಿತವಾಗಿ ಧ್ಯಾನಕ್ಕೆ ಕಾರಣವಾಗುವುದು ಮತ್ತು ಅಪರೋಕ್ಷಜ್ಞಾನಕ್ಕೂ ಪ್ರಯೋಜಕವಾಗುವುದು. ಇಂಥಾ ಪ್ರಶಸ್ತಕರ್ಮಕ್ಕೆ ನಾಮಾಂತರವೂ ಉಂಟೆಂದು ಶ್ರೀಕೃಷ್ಣನು ಹೇಳುತ್ತಾನೆ:—

(1) **ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ ॥**
**ಯಜ್ಞೇ ತಪಸಿ ದಾನೇ ಚ ಸ್ಥಿತಿಸ್ಸದಿತಿ ಚೋಚ್ಯತೇ ।**
**ಕರ್ಮ ಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ ॥**
—(17. 26-27.)

ಎಲೈ ಪಾರ್ಥನೇ! ಶುಭಕರ್ಮದಲ್ಲಿಯೂ ಕೂಡ "**ಸತ್**" ಎಂಬ ಪದವು ಪ್ರಯೋಗಿಸಲ್ಪಡುತ್ತದೆ. ಜ್ಯೋತಿಷ್ಟೋಮ, ರಾಜಸೂಯ, ಅಶ್ವಮೇಧಾದಿ ಯಾಗಗಳಲ್ಲಿಯೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸುಗಳಲ್ಲಿಯೂ, ದ್ರವ್ಯದಾನದಲ್ಲಿಯೂ **ಸ್ಥಿತಿಯು*** ಎಂದರೆ ಭಗವನ್ನಿಷ್ಠಾಬುದ್ಧಿಯೂ ಕೂಡ '**ಸತ್**'

---

* ಅಶ್ವಮೇಧಾದಿ ಯಾಗಗಳನ್ನು ಮಾಡುವಾಗಲೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸುಗಳನ್ನು ಆಚರಿಸುವಾಗಲೂ, ಉತ್ತಮಪಾತ್ರರಲ್ಲಿ ವಿಧ್ಯುಕ್ತರೀತಿಯಲ್ಲಿ ದಾನಾದಿಗಳನ್ನು ಅರ್ಪಿಸು

ಎಂಬ ಹೆಸರಿನಿಂದ ವ್ಯವಹರಿಸಲ್ಪಡುತ್ತದೆ. ಭಗವತ್ಪ್ರೀತಿಕರವಾದ ಕರ್ಮವೂ ಕೂಡ ಸತ್ ಎಂದೇ ಕರೆಯಲ್ಪಡುವುದು.

ಸನ್ನಾಮಕವಾದ, ಭಗವದರ್ಪಣಬುದ್ಧಿಯಿಂದ ಮಾಡಲ್ಪಟ್ಟ, ಕರ್ಮೇಂದ್ರಿಯ ವ್ಯಾಪಾರವು ತಪಸ್ಸೆಂದೂ ಕರೆಯಲ್ಪಡುವುದು. ವಿಹಿತಕರ್ಮಾನುಷ್ಠಾನವು ಶಾರೀರಕ ಮತ್ತು ವಾಚಸಿಕ ತಪಸ್ಸಿನಲ್ಲಿ ಅಂತರ್ಭೂತವಾಗಿ ಶ್ರವಣಾದಿಗಳಿಗೆ ಕಾರಣವಾಗುವುದು.

ಆದಿಸೃಷ್ಟಿಯಲ್ಲಿ ಗಾಢಾಂಧಕಾರದಿಂದ ಆವೃತನಾಗಿ ಪ್ರಳಯೋದಕದಲ್ಲಿ ಸ್ಥಿತನಾದ ಪದ್ಮನಾಭ ದೇವರ ನಾಭಿಕಮಲದಿಂದ ಉತ್ಪನ್ನರಾದ ಚತುರ್ಮುಖ ಬ್ರಹ್ಮದೇವರು ತಾವು ಹುಟ್ಟಿದ ಮೂಲಸ್ಥಾನವನ್ನು ತಿಳಿಯಲಾರದೆ ನಾಲ್ಕು ದಿಕ್ಕುಗಳನ್ನೂ ನೋಡುತ್ತಿರಲು, **"ತಪ" "ತಪ"** ಎಂಬ ಭಗವಂತನ ಮುಖಕಮಲದಿಂದ ನಿಸೃತವಾದ ಆಕಾಶವಾಣಿಯು ಕೇಳಲ್ಪಟ್ಟಿತು. ಅನಂತರ ಚತುರ್ಮುಖಬ್ರಹ್ಮದೇವರು ದಿವ್ಯಸಹಸ್ರವರ್ಷಪರ್ಯಂತವಾಗಿ ಪದ್ಮಾಸನದಲ್ಲಿ ಸ್ಥಿತರಾಗಿ ಜಪಾದಿರೂಪವಾದ ಪರಮಾತ್ಮನ ಪ್ರೀತಿಕರವಾದ ಕರ್ಮವನ್ನು ಮಾಡಲು, ಪರಮಾತ್ಮನು ಪ್ರಸನ್ನನಾಗಿ ಎದುರಿಗೆ ಬಂದು, ತನ್ನ ಮುಕ್ತಲೋಕವನ್ನು ಸಹ ಅವರಿಗೆ ದರ್ಶನ ಮಾಡಿಸಿ, ವೇದಾದಿ ಸಕಲ ಪ್ರಮಾಣ ಗ್ರಂಥಗಳನ್ನೂ ಸಾಕ್ಷಾತ್ ಉಪದೇಶ ಮಾಡಿದನು.

ಇದೇ ಕರ್ಮಫಲವು. ಇದೇ ರೀತಿಯಲ್ಲಿ ಈಗಲೂ ಕೂಡ ಭಗವದಾಜ್ಞಾರೂಪವಾದ ವಿಹಿತಕರ್ಮವನ್ನು ಮಾಡುವವರೆಲ್ಲರೂ ಭಗವಂತನ ಪ್ರಸಾದಕ್ಕೆ ಪಾತ್ರರಾಗಿ ಉತ್ತಮಗುರುಗಳಿಂದ ಸಂಸಾರತಾರಕವಾದ ಬ್ರಹ್ಮವಿದ್ಯೆಯನ್ನು ಹೊಂದುವುದಕ್ಕೆ ಯೋಗ್ಯರಾಗುತ್ತಾರೆ. *

---

ವಾಗಲೂ ಭಗವಂತನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವನಾಗಿ ಈ ಆರಾಧನೆಗಳಿಂದ ಭಗವಂತನು ಸಂತುಷ್ಟನಾಗಿ ಫಲಪ್ರದನಾಗುವನೆಂಬ ಶ್ರದ್ಧಾವಿಶೇಷವು ಸ್ಥಿತಿಯೆನ್ನಿಸುವುದು.

* ಶ್ರೀಪಾದಂಗಳವರು ಪ್ರತಿಯೊಂದು ಮೋಕ್ಷಸಾಧನೆಯ ನಿರೂಪಣಾವಸರದಲ್ಲಿಯೂ ಪರಬ್ರಹ್ಮನ **ಪ್ರಸಾದವು** ಅತ್ಯವಶ್ಯಕವೆಂದು ತಲೆಯಮೇಲೆ ಹೊಡೆದಂತೆ ಒತ್ತಿಒತ್ತಿ ನಿರೂಪಿಸಿರುವರು. ಅನ್ಯಥಾ ನಮ್ಮ ಕರ್ಮಾದ್ಯನುಷ್ಠಾನಗಳು ನಿರುದ್ದೇಶ್ಯಕವಾಗಿ ಸಂಸಾರತಾರಣೋಪಾಯವೇ

ಕರ್ಮೇಂದ್ರಿಯ ವ್ಯಾಪಾರಗಳು ಅನಂತವಾಗಿರುವುವು. ಆದರೆ ಇವುಗಳಲ್ಲಿ ಯಾವ ಪ್ರಕಾರವಾದ ಕರ್ಮಗಳು ಪರಮಾತ್ಮನಿಂದ ತಪೋರೂಪವಾಗಿ ಸ್ವೀಕರಿಸಲ್ಪಡುವುವೋ ಅವು ಯೋಗವೆಂದೂ, ತಪಸ್ಸೆಂದೂ ಕರೆಯಲ್ಪಟ್ಟು

---

ಹೀಗೆಂದು ಹೇಳಲಿಕ್ಕೆ ಅಶಕ್ಯವಾಗುವುದೆಂದು ಅವರ ಭಾವವು. ಅದ್ವೈತಮತದಲ್ಲಿಯಾದರೋ ಎರಡು ಚೇತನರೇ ಇಲ್ಲದಿರುವುದರಿಂದ ಸ್ವಾಮಿಭೃತ್ಯಭಾವವಾಗಲೀ, ಉಚ್ಚನೀಚಭಾವವಾಗಲೀ ಉಂಟಾಗುವುದಕ್ಕೇ ಅವಕಾಶವಿಲ್ಲದಿರುವುದರಿಂದ ನಮ್ಮ ಸರ್ವ ಮೋಕ್ಷಸಾಧನ ಯತ್ನಗಳೂ ಬೂದಿಯಲ್ಲಿ ಮಾಡಿದ ಹೋಮದಂತೆ ನಿರರ್ಥಕವೆಂದೇ ಪ್ರಾಪ್ತವಾಗುವುದು. ಯಾತಕ್ಕೆಂದರೆ ಅದ್ವೈತಮತದರೀತ್ಯಾ "**ನಾನು**" ಎಂಬ ಜೀವವೇ ಯಾವಾಗಲೂ ನಿತ್ಯಜ್ಞಪ್ತಿಸ್ವರೂಪನಾದ ಪರಬ್ರಹ್ಮನು. ಇದಕ್ಕೆ ಭಿನ್ನವಾದ ಸಕಲ ಜಗತ್ತೂ ಮಿಥ್ಯಾ ಎಂದರೆ ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಇರುವುದಿಲ್ಲ. ಹೀಗಿರುವಲ್ಲಿ ನಾವು ಯಾರ ಆಜ್ಞೆಯನ್ನು ಪರಿಪಾಲನೆ ಮಾಡಬೇಕು? ಯಾರ ಪ್ರೀತ್ಯರ್ಥವಾಗಿ ಕರ್ಮವನ್ನು ಮಾಡಬೇಕು? ಪ್ರಸಾದಮಾಡತಕ್ಕ ಅಥವಾ ಕುಪಿತನಾಗತಕ್ಕ ಬೇರೆ ಚೇತನನು ಎಲ್ಲಿ ಇರುವನು? ಯಾರ ಪ್ರಸಾದದಿಂದ ತಾನೇ ನಮಗೆ ಏನಾಗಬೇಕು? ಇಂಥಾ ದುಃಸ್ಥಿತಿಯನ್ನು ಅಂಗೀಕರಿಸುವ ಅದ್ವೈತಮತವು ಈಶ್ವರನನ್ನಾಗಲೀ, ಅವನ ಪ್ರಸಾದವನ್ನಾಗಲೀ ಒಪ್ಪುವುದಕ್ಕೆ ಕಾರಣವಿಲ್ಲವೆಂದೂ, ಯಾವ ಮೋಕ್ಷಸಾಧನವನ್ನೂ ನಿರೂಪಿಸಲಾರದೆಂದೂ ಘನಹೊಂದಿದ ವಿದ್ವಾಂಸನಾದ ಪ್ರಭುಲಾಲನು ಸಯುಕ್ತಿಕವಾಗಿ ತೋರಿಸಿರುತ್ತಾನೆ.

**Be it remembered that were it not for the grace of God, ....... no body would be freed from the round of births and deaths to which he is subject in virtue of his karma.**

**According to the Adwaita Vedanta, as there is one Absolute existence without a second, there is no individual soul, no God, no slave, no master. Man is essentially free and pure and not bound. Neither are there actions, nor is there any agency, neither rewards nor punishments; and therefore there are no occasions for the exercise of the Lord's grace. It is the ignorance of man only in considering himself as an individual**

ಶ್ರವಣಕ್ಕೆ ಕಾರಣವಾಗುವುವು. ತದ್ಭಿನ್ನವಾದವುಗಳು ತಾಮಸಕರ್ಮಗಳು. **"ಶಾಸ್ತ್ರವಿಧಿಂ", "ಶಾಸ್ತ್ರವಿಧಾನೋಕ್ತಂ"** ಇತ್ಯಾದಿ ಶ್ರೀಕೃಷ್ಣನ ವಾಕ್ಯಗಳಲ್ಲಿ ವೇದಾದಿ ಶಾಸ್ತ್ರಗಳು ಭಗವಂತನ ವಿಧಿಗಳು ಎಂದರೆ ಭಗವಂತನು ಮಾಡಿ

---

**entity separate from the Lord that has produced this delusion of a slave and a master about himself and God respectively...... Thus, it is man alone who has himself created under delusion or through ignorance about the Reality which he himself is, a state of affairs, wherein, he who is himself the master, or to say more correctly, who is neither master nor slave, places himself in the position of a slave at the mercy of his master the Lord God who exists as a master over him as long only as he is under the said delusion. .......The Lord's position is truly that of a witness of a scene unconcerned with what is passing before Him ; and it is man alone, who though himself essentially free of all these wordly scenes, creates these scenes and drags the Lord also into the said scenes giving Him all sorts of attributes that do not belong to Him at all.**

**—Prabhulal,**

**(Vedanta Kesari, May, 1916.)**

**ಅರ್ಥವು:**—ಪರಮಾತ್ಮನ ಪ್ರಸಾದವಿಲ್ಲದಿದ್ದರೆ, ಯಾವ ಒಬ್ಬ ಪುರುಷನೂ ತನ್ನ ಕರ್ಮದಿಂದ ಪ್ರಾಪ್ತವಾದ ಜನನಮರಣರೂಪವಾದ ಚಕ್ರದಿಂದ ಬಿಡುಗಡೆ ಹೊಂದಲ್ಪಡುತ್ತಿರಲಿಲ್ಲವೆಂಬುದು ನೆನಪಿನಲ್ಲಿ ಇಡಲ್ಪಟ್ಟಿರಲಿ. ಅದ್ವೈತಮತದ ರೀತ್ಯಾ ದ್ವಿತೀಯರಹಿತವಾದ ಒಂದೇ ಒಂದು ಪರಮಾರ್ಥತತ್ವವು ಇರುವುದರಿಂದ, ಜೀವನೂ, ಈಶ್ವರನೂ, ಭೃತ್ಯನೂ, ಸ್ವಾಮಿಯೂ ಇರುವುದಿಲ್ಲ ಮನುಷ್ಯನು ಸ್ವರೂಪತಃ ಮುಕ್ತನೂ, ಶುದ್ಧನೂ ಮತ್ತು ಬಂಧರಹಿತನೂ ಆಗಿರುವನು. ಮತ್ತು ಕರ್ಮಗಳಾಗಲೀ ಯಾವುದಾದರೂ ಕರ್ತೃತ್ವವಾಗಲೀ (ಕರ್ಮಾಚರಣೆಗೆ) ಪ್ರತಿಫಲವಾಗಲೀ, (ಅನಾಚರಣೆಗೆ) ದಂಡನಾಗಲೀ ಇರುವುದಿಲ್ಲ, ಆದುದರಿಂದ ಪರಮಾತ್ಮನ ಪ್ರಸಾದವನ್ನು ತೋರಿಸು

ರುವ ನಿಬಂಧನೆಗಳು ಎಂದು ಹೇಳಲ್ಪಟ್ಟಿರುವುದು. ಅವುಗಳನ್ನು ಅನುಸರಿಸಿಯೇ ಸಕಲ ಕರ್ಮಗಳನ್ನೂ ನಾವು ಮಾಡಬೇಕು ಎಂದು ಸಿದ್ಧವಾಗುವುದು. ಇವು ಸಾತ್ವಿಕ ಕರ್ಮಗಳು. ಪರಮಾತ್ಮನಿಂದಲೇ ಪ್ರವರ್ತಿಸಲ್ಪಟ್ಟ ವಿಧ್ಯುಕ್ತ ಸಾತ್ವಿಕಕರ್ಮಗಳು ಸಕಲ ಮುಮುಕ್ಷುಗಳಿಂದಲೂ ಸಹಜವಾಗಿ ಆಚರಿಸಲ್ಪಡುವುವು. ಶ್ರೀಕೃಷ್ಣನು ಹೇಳುತ್ತಾನೆ:—

**(1) ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ।**
.... .... .... .... .... ....
**ತದಿತ್ಯನಭಿಸಂಧಾಯ ಫಲಂ ಯಜ್ಞತಪಃಕ್ರಿಯಾಃ ।**
**ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ ॥**
—(17. 23-25.)

ಭಗವದಾಜ್ಞಾರೂಪವಾದ ನಿಯತವಿಧಿಗಳನ್ನು ಉಲ್ಲಂಘಿಸುವವರು ಅಸುರರು ಎಂದು ಶ್ರೀಕೃಷ್ಣನು ಹೇಳುತ್ತಾನೆ:—

**(2) ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ।**
.... .... **ತಾನ್ ವಿದ್ಧ್ಯಾಸುರನಿಶ್ಚಯಾನ್ ॥**
—(17. 5-6.)

---

ವುದಕ್ಕೆ ಅವಕಾಶವೇ ಇರುವುದಿಲ್ಲ. ಮನುಷ್ಯನ, ತನ್ನ ಕೇವಲ ಅಜ್ಞಾನದಿಂದಲೇ, ತಾನು ಪರಮಾತ್ಮನಿಂದ ಭಿನ್ನವಾದ ಒಬ್ಬ ಜೀವನೆಂಬ ಕಲ್ಪನೆಯೇ ನಾನು ಭೃತ್ಯನು, ಈಶ್ವರನು ಸ್ವಾಮಿಯು ಎಂಬ ಭ್ರಮಕ್ಕೆ ಕಾರಣವಾಗಿರುವುದು. ಈ ರೀತಿಯಾಗಿ ಮನುಷ್ಯನೇ ತನ್ನ ಪರಮಾರ್ಥಸ್ಥಿತಿ ವಿಷಯದಲ್ಲಿ ಭ್ರಮಕ್ಕೂ ಅಜ್ಞಾನಕ್ಕೂ ವಶನಾಗಿ ಒಂದಾನೊಂದು ಸ್ಥಿತಿಯನ್ನು ಕಲ್ಪಿಸಿಕೊಂಡು ಅದರಲ್ಲಿ ವಸ್ತುತಃ ತಾನೇ ಸ್ವಾಮಿಯಾಗಿದ್ದರೂ ಅಥವಾ ಇನ್ನೂ ಸರಿಯಾಗಿ ಹೇಳಬೇಕಾದರೆ, ತಾನು ಸ್ವಾಮಿಯಾಗಲೀ ಅಥವಾ ಭೃತ್ಯನಾಗಲೀ ಅಲ್ಲದಿದ್ದರೂ ತನ್ನನ್ನು, ತನ್ನ ಭ್ರಮಕಾಲದಲ್ಲಿ ಮಾತ್ರ ಸ್ವಾಮಿಯಂತೆ ತೋರುವ ಒಬ್ಬ ಈಶ್ವರನ ಕಾರುಣ್ಯವಶನಾದ ಭೃತ್ಯನೋಪಾದಿಯಲ್ಲಿ ಕಲ್ಪಿಸಿಕೊಂಡಿರುವನು. ಪರಮಾತ್ಮನ ಸ್ಥಿತಿಯು ತನ್ನ ಎದುರಿಗೆ ನಡೆಯುವ ಕ್ರಿಯೆಗಳಲ್ಲಿ ಯಾವ ಸಂಬಂಧವನ್ನೂ ಹಚ್ಚಿಕೊಳ್ಳದ ಒಂದು ನೋಟವನ್ನು ನೋಡುವ ಸಾಕ್ಷಿಗಾರನಂತೆ ಇರುವದು. ಮತ್ತು ಮನುಷ್ಯನು ತಾನೇ ಈ ಪ್ರಾಪಂಚಿಕ ವ್ಯವಹಾರಗಳಿಂದ ಮುಕ್ತನಾಗಿದ್ದರೂ ವ್ಯವಹಾರಗಳನ್ನು ಕಲ್ಪಿಸಿಕೊಳ್ಳುತ್ತಾನೆ, ಮತ್ತು ಪರಮಾತ್ಮನನ್ನು, ಅವನಿಗೆ ಸರ್ವಥಾ ಇಲ್ಲದೇ ಇರುವಂಥ ನಾನಾವಿಧವಾದ ಧರ್ಮಗಳನ್ನು ಕೊಟ್ಟು ಪೂರ್ವೋಕ್ತ ವ್ಯವಹಾರಕ್ಕೆ ಎಳೆಯುತ್ತಾನೆ.

ಎಲೈ ಪಾರ್ಥನೇ! ಯಾರು ಶಾಸ್ತ್ರೋಕ್ತ ವಿಧಿಗಳನ್ನು ಅತಿಕ್ರಮಿಸಿ ತಪಸ್ಸನ್ನು ಆಚರಿಸುತ್ತಾರೆಯೋ ಅವರನ್ನು (ತಾಮಸರಾದ) ಅಸುರಸಂಬಂಧಿ ಜ್ಞಾನವುಳ್ಳವರೆಂದು ನೀನು ನಿಶ್ಚಯವಾಗಿ ತಿಳಿ.

"**ವಿಧಿದೃಷ್ಟೋ ಯ ಇಜ್ಯತೇ ...ಸ ಸಾತ್ತ್ವಿಕಃ**" ಎಂದೂ, "**ವಿಧಿಹೀನಂ ....ತಾಮಸಂ ಪರಿಚಕ್ಷತೇ**" ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ವಿಧ್ಯುಕ್ತ ಯಾಗವು ಸಾತ್ತ್ವಿಕವೆಂದೂ, ವಿಧಿಯನ್ನು ಉಲ್ಲಂಘಿಸಿ ಮಾಡಿದ್ದು ತಾಮಸವೆಂದೂ ಅರ್ಥವು.

ವಿಧ್ಯುಕ್ತಸಾತ್ತ್ವಿಕಕರ್ಮಗಳು ಸಂಧ್ಯಾವಂದನಾದಿ ನಿತ್ಯಕರ್ಮಗಳು, ತೀರ್ಥಯಾತ್ರಾ, ದೇವಪೂಜನ, ವ್ರತಾನುಷ್ಠಾನಗಳು, ಏಕಾದಶ್ಯಾದಿ ಉಪ ವಾಸ, ಜಪ, ಪಾರಾಯಣ ಇವೇ ಮುಂತಾದುವುಗಳು. ಶ್ರೀಕೃಷ್ಣನು ಹೇಳುತ್ತಾನೆ :—

(3) **ದೇವದ್ವಿಜಗುರುಪ್ರಾಜ್ಞಪೂಜನಂ ಶೌಚಮಾರ್ಜವಂ ।**
**ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ॥**
**ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।**
**ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥**
—(17. 14-15.)

ವಿಷ್ಣುಪೂಜೆಯು ಮತ್ತು ಭಗವತ್ಪರಿವಾರತಯಾ ಅವರವರ ಯೋಗ್ಯತಾನು ಸಾರವಾಗಿ ಇತರ ದೇವತೆಗಳ ಪೂಜೆಯು, ಬ್ರಾಹ್ಮಣರ ಸತ್ಕಾರವು, ಗುರು ಪೂಜೆಯು, ಜ್ಞಾನಿಗಳ ಸೇವೆಯು, ಮೃಜ್ಜಲಾದಿಗಳಿಂದ ಶೌಚವು, ಮನೋ ವಾಕ್ಯಗಳಿಗೆ ಅನುಸಾರಿಯಾದ ಬಾಹ್ಯ ಆಚರಣೆಯು, ಗುಹ್ಯೇಂದ್ರಿಯನಿಗ್ರಹವು, ಇತರ ಪ್ರಾಣಿಗಳಿಗೆ ಹಿಂಸೆಯನ್ನು ಮಾಡದೆ ಇರೋಣವು, ಇವುಗಳು ಶರೀರ ಸಂಬಂಧಿ ತಪಸ್ಸುಗಳೆನ್ನಿಸುವುವು. ಪರರಿಗೆ ಉದ್ವೇಗವನ್ನು ಉಂಟುಮಾಡದಿರು ವಂತೆ ಮಾತಾಡೋಣವು, ಕೇಳುವಾಗ ಮತ್ತೂ ಮತ್ತೂ ಕೇಳಬೇಕೆಂಬ ಇಚ್ಛೆ ಯನ್ನು ಹುಟ್ಟಿಸುವ, ಕಾಲಾಂತರದಲ್ಲಿ ಸುಖಕರವಾದ ಯಥಾರ್ಥ ವಚನವು,*

---

* "**ಸತ್ಯಂ ಪ್ರಿಯಹಿತಂ ಚ ಯತ್**" ಎಂದರೆ ಯಥಾರ್ಥ ವಚನವನ್ನೇ ಶ್ರವಣ ಮಾಡೋಣದರಿಂದ ದುಃಖವಾಗದ ಸಮಯದಲ್ಲಿ ಮತ್ತು ಹಿತವಾದ (ಧರ್ಮಸಾಧನಕ್ಕೆ ಅನುಕೂಲ

ವೇದಾದಿಗಳನ್ನು ಅಭ್ಯಾಸಮಾಡುವುದು (ಪಾರಾಯಣಾದಿಗಳು), ವಾಗಿಂದ್ರಿಯದಿಂದ ನಡೆಯಿಸಲ್ಪಟ್ಟ ತಪಸ್ಸೆನ್ನಿಸುತ್ತವೆ.

ಇವುಗಳಲ್ಲದೆ ಇನ್ನೂ ಅನೇಕ ವಿಧವಾದ ಕರ್ಮಗಳು ವಿಧಿವಿಹಿತವಾಗಿ ಪರಮಾತ್ಮನ ಪ್ರೀತಿಸಂಪಾದನೆಗೆ ಕಾರಣವಾಗಿರುವುವು. ವಿಧ್ಯುಕ್ತವಾದ (ಸಾತ್ವಿಕ) ಆಹಾರ, ಯಜ್ಞ, ದಾನ, ಭಾಷಣಾದಿಗಳ ಸ್ವರೂಪವು ಶ್ರೀಕೃಷ್ಣನಿಂದ ಹದಿನೆಂಟನೆಯ ಅಧ್ಯಾಯದಲ್ಲಿ ನಿರೂಪಿತವಾಗಿರುವುದು. ಆ ವಾಕ್ಯಗಳೆಲ್ಲವೂ ಪೂರ್ವದಲ್ಲಿಯೇ ಉದಾಹೃತವಾಗಿರುವುವು. ಆದುದರಿಂದ ಸರ್ವರೂ ಪರಬ್ರಹ್ಮನಿಂದ ವಿಹಿತವಾದ ಕರ್ಮಗಳನ್ನು ಆಚರಿಸಿ ಆತನ ಆಜ್ಞಾಪರಿಪಾಲನರೂಪವಾದ ತಪಸ್ಸಿನಿಂದ ಪ್ರಾಪ್ತವಾದ ಆತನ ಪ್ರಸಾದಕ್ಕೆ ಪಾತ್ರರಾಗಿ ಜ್ಞಾನಾದಿಗಳನ್ನು ಸಂಪಾದಿಸುವುದಕ್ಕೆ ಯತ್ನಿಸಬೇಕು.

2. **ಪ್ರಶ್ನೆ:**— ಮಹಾಸ್ವಾಮಿ! ವಿಧಿವಿಹಿತಕರ್ಮಾನುಷ್ಠಾನವು ಅನೇಕ ಪ್ರಕಾರವಾಗಿರುವುದೆಂದೂ, ಮೋಕ್ಷಾರ್ಥಿಗಳು ಅದನ್ನು ಆಚರಿಸುವರೆಂದೂ ವಿದಿತವಾಯಿತು. ವಿಹಿತಕರ್ಮಾಚರಣೆಗೆ ತಪಸ್ಸೆಂಬ ನಾಮಧೇಯವೂ ಯುಕ್ತವೇ ಸರಿ. ಆದರೆ ಕರ್ಮಾಚರಣೆಗೆ ಶ್ರವಣಾದಿರೂಪವಾದ ಜ್ಞಾನಸಾಧನಗಳನ್ನು ಸಂಪಾದಿಸುವುದರಲ್ಲಾಗಲೀ ಅಥವಾ ಬೇರೆ ವಿಧವಾಗಿ ಮೋಕ್ಷಪ್ರಾಪ್ತಿಯಲ್ಲಾಗಲೀ ಕಾರಣತ್ವವು ಕಂಡು ಬರುವುದಿಲ್ಲ. ಜ್ಞಾನಾದಿಗಳಿಗೆ ಸಾಧಕವಲ್ಲದ ನಿಷ್ಕಾರಣವಾದ ವ್ಯರ್ಥ ಕರ್ಮಗಳನ್ನು ಯಾತಕ್ಕೆ ಮಾಡಬೇಕು ಎಂಬ ನಮ್ಮ ಪ್ರಶ್ನೆಗೆ ಸಾವಧಾನವಾಗಿ ಉತ್ತರವನ್ನು ನಿರೂಪಿಸಬೇಕು.

**ಉತ್ತರ—ಶ್ರೀಶ್ರೀಗಳವರು :—** ನಾವೂ ಒಂದು ಪ್ರಶ್ನೆಯನ್ನು ಕೇಳುತ್ತೇವೆ. ಈಗ ಬಿ. ಎ. ಪರೀಕ್ಷೆ ಮಾಡಿದವರಿಗೆ ಐವತ್ತು ರೂಪಾಯಿನ ಸರ್ಕಾರದ ಹುದ್ದೆಯನ್ನು ಕೊಡಬಹುದು ಎಂದು ನಿಮ್ಮ ರಾಜ್ಯದಲ್ಲಿ ನಿಯಮವಿರು

---

ವಾಗುವ) ಸಮಯದಲ್ಲಿ ನುಡಿಯಬೇಕು. ಅಸತ್ಯವಚನವನ್ನು ಯಾವಾಗಲೂ ಹೇಳಬಾರದು. ಸತ್ಯ ವಚನವನ್ನು ಅಪ್ರಿಯ ಮತ್ತು ಅಹಿತವಾಗುವ (ಅಧರ್ಮಾನುಷ್ಠಾನಕ್ಕೆ ಉಪೋದ್ಬಲಕವಾಗುವ) ಕಾಲದಲ್ಲಿ ಆಡದೆ ಮೌನವನ್ನು ಧರಿಸಬೇಕು. ಈ ನ್ಯಾಯವನ್ನು ಅನುಸರಿಸಿಯೇ ವಿದುರನು ಯುಧಿಷ್ಠಿರನಿಗೆ ಭವಿಷ್ಯದ್ವೃತ್ತಾಂತವೆಲ್ಲವನ್ನೂ ಹೇಳಿದರೂ ಕೃಷ್ಣನ ಪ್ರಯಾಣ, ಯಾದವರ ನಾಶ ಮುಂತಾದುವನ್ನು ತಿಳಿದಿದ್ದರೂ ಹೇಳಲಿಲ್ಲ. [H. S.]

ವುದು. ಎಂದರೆ ಪರೀಕ್ಷಾರ್ಥವಾಗಿ ಇಡಲ್ಪಟ್ಟ ಕೆಲವು ಗ್ರಂಥಗಳ ಜ್ಞಾನವು ಸರ್ಕಾರದಲ್ಲಿ ಅಧಿಕಾರಪ್ರಾಪ್ತಿಗೆ ಸಾಕ್ಷಾತ್ಕಾರಣವೆನ್ನಿಸುವುದು. ಹೀಗಿರುವಲ್ಲಿ ನಿಯತಶಾಲೆಗೆ ಹೋಗೋಣ; ಶಾಲಾಧ್ಯಕ್ಷರಿಗೆ ವಿಧೇಯನಾಗಿರೋಣ; ಉಪಾಧ್ಯಾಯರಲ್ಲಿ ನಮ್ರತೆಯನ್ನು ತೋರಿಸೋಣ; ಶಾಲಾನಿಯಮಗಳನ್ನನುಸರಿಸಿ ಭೋಜನ ಕಾಲವನ್ನೂ ಪರಿಮಿತಿಯನ್ನೂ ಕ್ಲೃಪ್ತಮಾಡಿಕೊಳ್ಳೋಣ; ನಿಯಮಾನುಸಾರಿಯಾದ ಉಡಿಗೆತೊಡಿಗೆಗಳನ್ನು ಹೊಂದಿ, ನಿಯಮ ವಿರುದ್ಧವಾದ ಆಚಾರಗಳನ್ನು ಪರಿತ್ಯಜಿಸಿ, ಫೀಜು ವಗೈರೆಗಳನ್ನು ಕಾಲ ಕಾಲಕ್ಕೆ ಕೊಡೋಣ; ಇವೇ ಮೊದಲಾದ ಕರ್ಮಗಳನ್ನೂ, ಮತ್ತು ಶಾಲೆಗೆ ಸೇರುವುದಕ್ಕೆ ಮೊದಲು ರಾಜ್ಯದ ನಿಬಂಧನೆಗಳನ್ನನುಸರಿಸಿಕೊಂಡು ರಾಜದ್ರೋಹಾದಿಗಳಿಗೆ ವಶರಾಗದೆ, ಶಾಲೆಯ ಪ್ರವೇಶಕ್ಕೆ ಪ್ರಯೋಜಕವಾದ ಪ್ರಾರ್ಥನಾದಿಗಳನ್ನು ಮಾಡೋಣವೇ ಮೊದಲಾದ ಅನೇಕ ಕರ್ಮಗಳನ್ನೂ ಯಾತಕ್ಕೆ ಮಾಡಬೇಕು? ಇವುಗಳಿಗೂ ಸರ್ಕಾರದ ನೌಕರಿಗೂ ಏನು ಸಂಬಂಧವು?

**ವಿದ್ಯಾರ್ಥಿಗಳು :—** ಸ್ವಾಮಿ ! ಸಾಕ್ಷಾತ್ಸಂಬಂಧವು ಇಲ್ಲದಿದ್ದರೂ ಪರಂಪರಯಾ ಸಂಬಂಧವು ಇರುವುದು. ಶಾಲಾಪ್ರವೇಶಕ್ಕೆ ಪೂರ್ವದಲ್ಲಿ ರಾಜದ್ರೋಹಾದಿಗಳನ್ನು ಮಾಡಿ ಕಾರಾಗೃಹವಾಸಾದಿಗಳನ್ನು ಹೊಂದಿದರೆ ಶಾಲೆಗೆ ಸೇರುವುದಕ್ಕಾಗುವುದಿಲ್ಲ. ಶಾಲೆಗೆ ಸೇರದಿದ್ದರೆ ಗ್ರಂಥ ವ್ಯಾಸಂಗವು ದುರ್ಘಟವಾಗಿ **ಬಿ.** ಎ. ಪರೀಕ್ಷೆ ಕೊಡುವುದಕ್ಕೇ ಅವಕಾಶವಿರುವುದಿಲ್ಲ. 2. ಶಾಲೆಗೆ ಪ್ರವೇಶ ಮಾಡಿದನಂತರವೂ ಸಹ ಶಾಲಾಧ್ಯಕ್ಷರು ಮಾಡುವ ನಿಬಂಧನೆಗಳನ್ನು ಮೀರಿದರೆ ಶಾಲೆಯಿಂದ ಬಹಿಷ್ಕಾರವು ಪ್ರಾಪ್ತವಾಗುವುದು. ಒಂದೊಂದು ವೇಳೆ ನಾವು ಪರೀಕ್ಷೆ ಕೊಟ್ಟರೂ ನಮಗೆ ತೇರ್ಗಡೆಚೀಟಿಯನ್ನು ಕೊಡಬಾರದೆಂದು ಶಿಕ್ಷೆಯು ಪ್ರಾಪ್ತವಾಗುವುದು. ನಿಯಮಗಳನ್ನು ಅನುಸರಿಸಿಕೊಂಡು ಶಾಲಾಧಿಕಾರಿಗಳ ಮನಃಪ್ರಸಾದಕ್ಕೆ ಪಾತ್ರರಾದರೆ ವಿದ್ಯಾಫಲವು ಅತಿ ಸುಲಭವಾಗಿ ಬಂದೊದಗುವುದು.

**ಶ್ರೀಶ್ರೀಗಳವರು:—**1. ಇದೇ ರೀತಿಯಲ್ಲಿ ಭಗವಂತನಾದ ನಮ್ಮ ವಿಷ್ಣುವು ಶ್ರವಣಾದಿಗಳಿಂದ ಜ್ಞಾನವನ್ನು ಹೊಂದಿದವರಿಗೇ ಮೋಕ್ಷವನ್ನು ಕೊಡುವೆನೆಂಬ ನಿಯಮವನ್ನು ಮಾಡಿರುವನು. ಮತ್ತು ಸರ್ಕಾರದವರು ಪ್ರಜೆಗಳ ಕ್ಷೇಮಾರ್ಥ

ವಾಗಿ ಅವರುಗಳಿಂದ ಅವಶ್ಯವಾಗಿ ಅನುಷ್ಠೇಯವಾದ ಕೆಲವು ಕಾಯಿದೆಗಳನ್ನು ಮಾಡಿರುವಂತೆ, ಸಕಲ ಮನುಷ್ಯರುಗಳಿಂದಲೂ ಅವಶ್ಯವಾಗಿ ಅನುಷ್ಠೇಯವಾದ ಕೆಲವು ನಿಬಂಧನೆಗಳನ್ನು ಮಾಡಿರುತ್ತಾನೆ. ಇವು ಸಾಮಾನ್ಯ ಧರ್ಮಗಳು. ಸರ್ಕಾರದವರಿಂದ ವಿಹಿತವಾದ ಸರ್ವಪ್ರಜಾಸಾಮಾನ್ಯವಾದ ಧರ್ಮಗಳನ್ನು ತಿರಸ್ಕರಿಸಿದವರಿಗೆ ದೇಶವಾಸವೇ ದುರ್ಘಟವಾಗಿ ದಂಡವೋ, ಕಾರಾಗೃಹ ವಾಸವೋ, ದೇಶೋಚ್ಚಾಟನೆಯೋ ಪ್ರಾಪ್ತವಾಗುವಂತೆ, ಶ್ರೀಕೃಷ್ಣನು ವಿಧಾನ ಮಾಡಿರುವ ನಿತ್ಯ ಕರ್ಮಗಳನ್ನು ಆಚರಿಸದವನಿಗೆ ನರಕಾದ್ಯನರ್ಥರೂಪವಾದ ಮಹಾದಂಡವು ಪ್ರಾಪ್ತವಾಗುವುದು. ಇನ್ನು ಮೋಕ್ಷೋಪಯೋಗಿಯಾದ ಶ್ರವಣಾದಿಗಳಿಗೆ ಅಧಿಕಾರವೆಲ್ಲಿಂದ ಬಂತು? 2. ಮತ್ತು ಸಾಮಾನ್ಯ ಧರ್ಮಗಳನ್ನು ರಕ್ಷಿಸುವ ವಿನೀತರಾದ ದೇಶೀಯ ಪ್ರಜೆಗಳೂ ಸಹ ಬಿ. ಎ. ಪರೀಕ್ಷೆಯನ್ನು ಮಾಡಬೇಕಾದರೆ ಶಾಲಾಪ್ರವೇಶಾರ್ಥವಾಗಿ ಸ್ವಲ್ಪ ವಿಶೇಷಪ್ರಾರ್ಥನಾದಿ ರೂಪವಾದ ಹೆಚ್ಚು ಆಚರಣೆಯನ್ನು ಮಾಡಬೇಕಾಗಿರುವಂತೆ, ನಿತ್ಯ ಕರ್ಮಾದಿಗಳನ್ನು ಮಾಡುತ್ತಿರುವ ಸಾತ್ವಿಕಜನರೂ ಸಹ ಶ್ರವಣಾದಿಗಳಿಗೆ ಅಧಿಕಾರ ಬರುವುದಕ್ಕಾಗಿ ಸ್ವಲ್ಪ ವಿಶೇಷಕರ್ಮಾನುಷ್ಠಾನವನ್ನು ಮಾಡಬೇಕು. ಅಥವಾ ಮಾಡುವ ಕರ್ಮಗಳನ್ನೇ ಹೆಚ್ಚು ಶ್ರದ್ಧೆಯಿಂದ ಆಚರಿಸಿ ಪರಮಾತ್ಮನನ್ನು ಪ್ರಾರ್ಥಿಸಬೇಕು. 3. ಪರಂತು ರಾಜ್ಯದಲ್ಲಿರುವ ಪರ್ಯಂತವೂ ಪ್ರಜೆಯು ತತ್ತದಧಿಕಾರಿಗಳಿಗೆ ವಿಧೇಯನಾಗಿರುವಂತೆ, ಪರಬ್ರಹ್ಮನ ಆಳ್ವಿಕೆಗೆ ಒಳಪಟ್ಟ ಸಕಲ ಜೀವರುಗಳು ಯಾವ ಯಾವ ಕಾಲದಲ್ಲಿ ಯಾವ ಯಾವ ಅವಸ್ಥೆಯಲ್ಲಿ ಏನೇನು ಕರ್ಮವನ್ನು ಮಾಡಬೇಕೆಂದು ಆತನು ವಿಧಿಸಿರುವನೋ ಅಂಥಾ ಕರ್ಮಗಳನ್ನು ಮಾಡುತ್ತಲೇ ಇರಬೇಕು. ಅಷ್ಟೇ ಅಲ್ಲ. ರಾಜನು ಉತ್ತಮನಾದ, ವಿದ್ಯಾವಂತನಾದ ತನ್ನ ಪ್ರಜೆಗೆ ಕೌನ್ಸಿಲರ್ ಅಂಥಾ ಮಂತ್ರಿ ಪದವಿಯನ್ನು ಕೊಟ್ಟು ಆತನನ್ನು ಯಾವ ನಿರ್ಬಂಧಗಳಿಗೂ ವಶವಾಗದಂತೆ ಮಾಡಿ ಸ್ವಾತಂತ್ರ್ಯವನ್ನು ಕೊಟ್ಟರೂ ಸಹ, ಆ ಮಂತ್ರಿಯು ರಾಜನಿಗೆ ವಿಧೇಯನಾಗಿ ತನ್ನ ಮನಃಪೂರ್ವಕವಾಗಿ ಪ್ರಜಾಕ್ಷೇಮಾರ್ಥವಾಗಿ ರಾಜನ ಉದ್ದೇಶಗಳನ್ನನುಸರಿಸಿ ಪ್ರಾಯೇಣ ಸರ್ವ ನಿಬಂಧನೆಗಳನ್ನು ಅನುಸರಿಸುತ್ತಲೇ ತಾನೂ ಒಬ್ಬ ಪ್ರಜೆಯಾಗಿಯೇ ಇರುವಂತೆ, ಬ್ರಹ್ಮಾದಿ ಸಕಲ ಮುಕ್ತಿಯೋಗ್ಯ ಜೀವರುಗಳೂ

ಅಪರೋಕ್ಷ ಜ್ಞಾನಿಗಳಾಗಿ ಮುಕ್ತರಾಗಿ ಭಗವಂತನಿಂದ ಯಥೇಷ್ಟವಾಗಿ ರಮಿಸುತ್ತಿರಬಹುದೆಂಬ ಅಪ್ಪಣೆಯನ್ನು ಹೊಂದಿದ್ದರೂ ಸಹ ಭಗವಂತನಲ್ಲಿರುವ ಭಕ್ತಿಭರದಿಂದ ವಿಶೇಷಾಕಾರವಾಗಿ ತಮ್ಮ ಸ್ವಭಾವಾನುಗುಣವಾಗಿಯೇ ಆತನ ಸೇವೆಯಲ್ಲಿ ತತ್ಪರರಾಗಿರುತ್ತಾರೆ. ಮುಕ್ತರಿಗೆ ಕರ್ಮಾನುಷ್ಠಾನವೂ ಸಹ ಸುಖರೂಪವಾಗಿಯೇ ಇರುವುದು.

**ಪ್ರಶ್ನೆ :—** ಸ್ವಾಮಿ! ಹಾಗಾದರೆ ಸಂಧ್ಯಾವಂದನಾದಿ ಸರ್ವ ವಿಧ್ಯುಕ್ತ ಕರ್ಮಗಳನ್ನು ಯಾವ ರೀತಿಯಲ್ಲಿ ನಾವು ತಿಳಿಯಬೇಕು?

**ಉತ್ತರ :— ಶ್ರೀಶ್ರೀಗಳವರು**:— ಕರ್ಮಾನುಷ್ಠಾನವು ಭಗವದಾರಾಧನಾರೂಪವಾಗಿ ಪರಂಪರಯಾ ಜ್ಞಾನಕಾರಣವೆಂದು ತಿಳಿಯಬೇಕು.

ಶ್ರೀಕೃಷ್ಣನು ಹೇಳುತ್ತಾನೆ:—

**(1) ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ।**
**ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಂ॥**
**ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ।**
**ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ॥**
—(5. 4-5.)

"ಎಲೈ ಅರ್ಜುನನೇ! ಶ್ರವಣಾದಿ ಜನಿತ ತತ್ವಜ್ಞಾನವೂ ಭಗವದರ್ಪಣಬುದ್ಧಿ ಪೂರ್ವಕವಾದ ವಿಹಿತ ಕರ್ಮಾನುಷ್ಠಾನ ರೂಪವಾದ ಯೋಗವೂ (ಸಾಧ್ಯಸಾಧನ ಭಾವ ರಹಿತವಾದ,) ಪರಸ್ಪರ ಸಂಬಂಧ ರಹಿತವಾದ ಪ್ರತ್ಯೇಕ ಪದಾರ್ಥಗಳೆಂದು ಅವಿವೇಕಿಗಳು ಹೇಳುತ್ತಾರೆ. ಪಂಡಿತರು (ಸಾಂಖ್ಯವು ಸಾಧ್ಯವು, ಯೋಗವು ಸಾಧನವು ಎಂದು ತಿಳಿದು,) ಇವೆರಡೂ ಕಾರ್ಯಕಾರಣ ಭಾವರಹಿತವೆಂದು ತಿಳಿಯುವುದಿಲ್ಲ. ಆದುದರಿಂದ ಜ್ಞಾನಮಾರ್ಗ ಕರ್ಮಮಾರ್ಗವೆಂಬ ಇವೆರಡರಲ್ಲಿ ಯಾವ ಒಂದನ್ನು ಸಮೀಚೀನವಾಗಿ ಆಚರಿಸುವವನೂ ಕೂಡ ಜ್ಞಾನ ಕರ್ಮ ಇವುಗಳೆರಡರ ಫಲವನ್ನೂ ಹೊಂದುತ್ತಾನೆ. (ಎಂದರೆ ಕರ್ಮಾನುಷ್ಠಾನ ಮಾಡುವವನು ಜ್ಞಾನವನ್ನು ಹೊಂದಿ ಮೋಕ್ಷವನ್ನು ಹೊಂದುತ್ತಾನೆ. ಸಾಂಖ್ಯರೂಪ ಜ್ಞಾನವುಳ್ಳವನು ಸಾಕ್ಷಾತ್ ಅಪರೋಕ್ಷ ಜ್ಞಾನದ್ವಾರಾ ಮುಕ್ತನಾಗುತ್ತಾನೆ. ಅಂತು ಕರ್ಮಮಾಡುವವ

ನಿಗೂ ಜ್ಞಾನವೂ ಅದರ ಫಲವೂ ತಪ್ಪದೇ ಬಂದೇ ಬರುವುದು ಎಂದು ಭಾವವು) ಇದೇ ಅಭಿಪ್ರಾಯವೇ ಮುಂದಿನ ಶ್ಲೋಕದಲ್ಲಿ ವಿವರಿಸಲ್ಪಡುವುದು:— ಎಲೈ ಅರ್ಜುನನೇ! ಸಾಂಖ್ಯವನ್ನು ಹೊಂದಿದ ಎಂದರೆ ತತ್ವನಿಶ್ಚಯವನ್ನುಳ್ಳ ಪಂಡಿತರಿಂದ ಯಾವ ಸ್ಥಾನವು ಎಂದರೆ ಭಗವತ್ಸ್ವರೂಪವು ಹೊಂದಲ್ಪಡುತ್ತದೆಯೋ, ಅದು ಯೋಗವುಳ್ಳ ಎಂದರೆ ಭಗವದರ್ಪಣಬುದ್ಧಿಯಿಂದ ವಿಹಿತಕರ್ಮಾನುಷ್ಠಾನದಿಂದ ಸಹಿತರಾದ ಕರ್ಮಯೋಗಿಗಳಿಂದಲೂ ಹೊಂದಲ್ಪಡುವುದು. (ಕರ್ಮಾನುಷ್ಠಾನ ಮಾಡುವವರೂ ಸಾಂಖ್ಯವನ್ನು ಹೊಂದಿ ಭಗವಂತನನ್ನು ಹೊಂದುವರು ಎಂದು ಭಾವವು.) ಯಾವಾತನು ಸಾಂಖ್ಯವೂ ಯೋಗವೂ ಒಂದೇ ಎಂದರೆ ಕಾರ್ಯಕಾರಣ ಭಾವವನ್ನು ಹೊಂದಿ ಭಗವತ್ಪ್ರಾಪ್ತಿ ರೂಪವಾದ ಏಕ ಫಲಕ್ಕೆ ಸಾಧಕವಾದವುಗಳೆಂದು ತಿಳಿಯುತ್ತಾನೆಯೋ ಆತನು ವಿವೇಕಿಯು."

ಚತುರ್ಥಾಧ್ಯಾಯದಲ್ಲಿಯೂ ಸಹ ಶ್ರೀಕೃಷ್ಣನು ಹೇಳಿರುತ್ತಾನೆ:—

**(2) ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥**

—(4. 33.)

ಎಲೈ ಪಾರ್ಥನೇ! ಸಕಲ ಕರ್ಮಗಳೂ ಜ್ಞಾನರೂಪವಾದ ಫಲದಲ್ಲಿ ಪರಿಸಮಾಪ್ತಿಯನ್ನು ಹೊಂದುವುವು. ಎಂದರೆ ಸರ್ವಕರ್ಮಗಳಿಗೂ ಜ್ಞಾನವೇ ಫಲವು ಎಂದರ್ಥವು.

ಕರ್ಮಾನುಷ್ಠಾನದ ಸಾರ್ಥಕತೆಯನ್ನು ಮೂರು ನಾಲ್ಕು ಪ್ರಕಾರವಾಗಿ ನಿರೂಪಿಸಬಹುದು.

i. **ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಶ್ರಯಾಂ ।**
**ನೋತ್ಪಾದಯೇದ್ಯದಿ ರತಿಂ ಶ್ರಮ ಏವ ಹಿ ಕೇವಲಂ ॥**

**ಅರ್ಥ** :— ಸಮೀಚೀನವಾಗಿ ಆಚರಿಸಲ್ಪಟ್ಟ ವಿಹಿತಕರ್ಮಗಳು ಶ್ರೀಮನ್ನಾರಾಯಣನನ್ನು ಪ್ರತಿಪಾದನೆಮಾಡುವ ಶಾಸ್ತ್ರಶ್ರವಣದಲ್ಲಿ ಶ್ರದ್ಧೆಯನ್ನು ಉಂಟುಮಾಡದಿದ್ದರೆ (ಭಸ್ಮದಲ್ಲಿ ಮಾಡಿದ ಹೋಮದಂತೆ) ನಿರರ್ಥಕವೇ. ಈ ಭಾಗವತವಚನಬಲದಿಂದಲೂ;

**(3) ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ।**

**(4) ಶ್ರದ್ಧಾವಾನ್ ಲಭತೇ ಜ್ಞಾನಂ ಮತ್ಪರಃ ಸಂಯತೇಂದ್ರಿಯಃ ॥**

ಇತ್ಯಾದಿ ಗೀತಾವಾಕ್ಯಗಳ ಬಲದಿಂದಲೂ ಸಮೀಚೀನಪ್ರಕಾರದಲ್ಲಿ ಅನುಷ್ಠಿತವಾದ ವಿಹಿತಕರ್ಮಾನುಷ್ಠಾನವು ಇಂದ್ರಿಯಜಯಾದಿಗಳಿಗೆ ಕಾರಣವಾಗಿ ಭಗವಂತನ ಮಹಿಮೆಯನ್ನು ತಿಳಿಸಿಕೊಡುವ ಶಾಸ್ತ್ರಶ್ರವಣದಲ್ಲಿ ಶ್ರದ್ಧೆಯನ್ನು ಉಂಟುಮಾಡುತ್ತದೆ ಎಂದು ಸಿದ್ಧವಾಗುವುದು.

ii. ಅಂತಃಕರಣವು ಕನ್ನಡಿಯಂತೆ ಸ್ವಚ್ಛವಾದ ದ್ರವ್ಯವು. ಇದು ಅನಾದಿ ವಿಷಯವಾಸನಾರೂಪವಾದ ಮಲದಿಂದ ಆವೃತವಾಗಿ ತತ್ವಜ್ಞಾನಜನಕವಾದ ಶ್ರವಣಾದಿಗಳಲ್ಲೂ, ಭಗವದ್ಧ್ಯಾನದಲ್ಲೂ ಆಸಕ್ತವಾಗಲಾರದು. ಸಾತ್ವಿಕ ಕರ್ಮಾನುಷ್ಠಾನದಿಂದ ರಜಸ್ತಮೋಗುಣಜನಿತವಾದ ಈ ದೋಷಗಳು ಸುಟ್ಟುಹೋಗಿ ಗುಡಿಸಿದ ಮನೆಯಂತೆ ಅಂತಃಕರಣವು ಶುದ್ಧವಾಗುವುದು ಎಂದರೆ ಪ್ರಮಾದಾಲಸ್ಯಾದಿಗಳಿಂದ ರಹಿತವಾಗಿ ಚಿತ್ತೈಕಾಗ್ರತೆಯಿಂದ ಯುಕ್ತವಾಗಿ ಜ್ಞಾನಸಾಧನಕಾರ್ಯದಲ್ಲಿ ಸಮರ್ಥವಾಗುವುದು.

iii. ವಿಹಿತಕರ್ಮಾನುಷ್ಠಾನದ ಪ್ರಭಾವದಿಂದ ಜನಿತವಾದ ಪುಣ್ಯಪುಂಜಯದಿಂದ ಪರಿಮಳೀಕೃತವಾದ ಅಂತಃಕರಣವು ದೇವತೆಗಳ ವಾಸಸ್ಥಾನವಾಗಿ ನಿಬಿಡವಾದ ಪ್ರಕಾಶದಿಂದ ಸಹಿತವಾಗುವುದರಿಂದ ಭಗವಂತನಲ್ಲಿ ಭಕ್ತಿಯೂ ಅತಏವ ಭಗವತ್ಕಥಾಶ್ರವಣದಲ್ಲಿ ವಿಶೇಷವಾದ ರತಿಯೂ, ವಿಷಯಗಳಲ್ಲಿ ಅನಾದರಣೆಯೂ ಸಾಕ್ಷಾತ್ತಾಗಿ ಉಂಟಾಗುವುವು. ಏವಂಚ ವಿಹಿತಕರ್ಮಾನುಷ್ಠಾನಕ್ಕೆ ಪಾಪಕ್ಷಯ, ಪುಣ್ಯಪ್ರಾಪ್ತಿ ಇವೆರಡೂ ಸಾಕ್ಷಾತ್ಫಲಗಳು. ಇವೆರಡರಿಂದಲೂ ಸಾಕ್ಷಾತ್ತಾಗಿಯೇ ಇಂದ್ರಿಯಜಯಾದಿಗಳೂ, ಭಗವನ್ಮಹಿಮಾಶ್ರವಣದಲ್ಲಿ ಸಾತ್ವಿಕಶ್ರದ್ಧೆಯೂ, ಕ್ರಮವಾಗಿ ರಾಗದ್ವೇಷರಾಹಿತ್ಯವೂ ಪ್ರಾಪ್ತವಾಗುವುವು.

3. **ಪ್ರಶ್ನೆ:—**ಸ್ವಾಮಿ! ನಿರಂತರ ವಿಹಿತಕರ್ಮಾನುಷ್ಠಾನದಿಂದ ಭಗವತ್ಕಥಾರತಿಯು ಪ್ರಾಪ್ತವಾಗುವುದು ಹೇಗೆ?

**ಉತ್ತರ:—ಶ್ರೀಶ್ರೀಗಳವರು—**ಇದರಲ್ಲಿ ಆಶ್ಚರ್ಯವೇನು? 1. ವಿಹಿತಕರ್ಮಾನುಷ್ಠಾನದಿಂದ ಪ್ರಸನ್ನನಾದ ಪರಮಾತ್ಮನು ಕರ್ಮಕಾಲದಲ್ಲಿ ಮಾಡಿದ "**ಧಿಯೋ ಯೋ ನಃ ಪ್ರಚೋದಯಾತ್**" ಎಂದರೆ ನಮಗೆ ಸಮೀಚೀನ

ವಾದ ಬುದ್ಧಿಯನ್ನು ಶ್ರೀಪರಮಾತ್ಮನು ಪ್ರೇರಣೆಮಾಡಲಿ, ಇತ್ಯಾದಿ ಪ್ರಾರ್ಥನಾನುಗುಣವಾಗಿ ತನ್ನನ್ನು ತಿಳಿಯುವುದಕ್ಕೆ ಯೋಗ್ಯವಾಗುವ ಸಾತ್ವಿಕಬುದ್ಧಿಯನ್ನು ದಯಪಾಲಿಸುವನು. ಕರ್ಮದಿಂದ ಬುದ್ಧಿವಿಕಾಸವು ಆಗುವುದು ನಿಶ್ಚಯವು. ಆದರಲ್ಲಿ ಸಾತ್ವಿಕಕರ್ಮದಿಂದ ಸಾತ್ವಿಕಬುದ್ಧಿಯೂ, ರಾಜಸ ಕರ್ಮದಿಂದ ರಾಜಸ ಬುದ್ಧಿಯೂ ತಾಮಸ ಕರ್ಮದಿಂದ ತಾಮಸಬುದ್ಧಿಯೂ ಬರುವುದು. "ಬುದ್ಧಿಃ ಕರ್ಮಾನುಸಾರಿಣೀ" ಎಂಬ ಪುರಾಣವಾಕ್ಯಕ್ಕೆ ಇದೂ ಒಂದು ಅರ್ಥವು.

2. ಕಿಂಚ, ಶೌಚ, ಸ್ನಾನ, ಊರ್ಧ್ವಪುಂಡ್ರಧಾರಣ, ಸಂಧ್ಯಾವಂದನ, ಜಪ, ಪಾರಾಯಣ, ದಾನ, ತೀರ್ಥಾಟನಾದಿ ಉತ್ತಮಕರ್ಮಗಳಲ್ಲಿ ನಿರತನಾದವನು ತಾನು ಯಾರ ಪ್ರೀತ್ಯರ್ಥವಾಗಿ ಸಂಕಲ್ಪಪೂರ್ವಕವಾಗಿ ಇಷ್ಟು ಕರ್ಮಗಳನ್ನುಮಾಡುತ್ತಿರುವನೋ ಅಂಥಾ ಮಹಾಪುರುಷನು ಯಾರು ಎಂದು ಆಕಾಂಕ್ಷೆಯನ್ನು ಸಹಜವಾಗಿಯೂ ಹೊಂದುವನು. ಕರ್ಮಜನಿತ ಪುಣ್ಯಪ್ರಚಯದಿಂದ ಸುವಾಸಿತವಾದ ಅಂತಃಕರಣವುಳ್ಳವನಿಗೆ ಶ್ರವಣಾದಿಗಳಲ್ಲಿ ಅತ್ಯಾಸಕ್ತಿಯು ಕ್ಷಿಪ್ರದಲ್ಲಿ ಹುಟ್ಟಿಹೋಗಿ ಭಗವಂತನಲ್ಲೂ, ಭಗವದ್ಭಕ್ತರಲ್ಲೂ ಅತುಲವಾದ ಯಥಾಯೋಗ್ಯವಾದ **ಸ್ನೇಹವು** ಅಂಕುರಿಸುವುದು. ಪ್ರತಿದಿನವೂ ಪರಮಾತ್ಮನನ್ನು ಉದ್ದೇಶಮಾಡಿ ಸಂಕಲ್ಪಗಳನ್ನು ಮಾಡುತ್ತಾ ಮಾಡುತ್ತಾ ಅವನ ಸ್ಮೃತಿಯು ಬರುತ್ತಿರುವುದು. ಯಾವನ ಪ್ರೀತ್ಯರ್ಥವಾಗಿ ಇದನ್ನೆಲ್ಲಾ ನಿತ್ಯವೂ ಆಚರಿಸುವನೋ ಅವನಲ್ಲಿ ಪ್ರೀತಿಯು ಬರುವುದು ಸಹಜವೇ! ಇಂಥಾ ಭಗವತ್ಸ್ನೇಹದಿಂದ ಸಹಿತರಾದ ಸಜ್ಜನರು ತುಚ್ಛವಾದ ವಿಷಯಾಪೇಕ್ಷೆಯಿಂದ ರಹಿತರಾಗಿ ಶ್ರವಣಾಧಿಕಾರಿಗಳಾಗುವರೆಂಬಲ್ಲಿ ಸಂಶಯವೇನು ?

3. ಪುಣ್ಯಕರ್ಮಗಳು ಮತ್ತೊಂದು ವಿಧವಾಗಿಯೂ ಮುಮುಕ್ಷುವನ್ನುಕಾಪಾಡುವುವು ಎಂದರೆ ಮೋಕ್ಷೋಪಯೋಗಿಯಾದ ಶ್ರವಣದಲ್ಲಿ ಕಾರಣವಾಗುವುವು. ಧರ್ಮದಲ್ಲಿ ರತನಾದವನು ಅತ್ಯಂತ ನಿಷ್ಕಾಮನಾಗದಿದ್ದರೂ ಸಹ ಸ್ವರ್ಗಾದಿಗಳನ್ನು ಅನುಭವಿಸಿದಮೇಲೆ, ಕಾಮಿಯಾದ ಯೋಗಭ್ರಷ್ಟನಂತೆ, ಪ್ರಭೂತವಾದ ಸಾತ್ವಿಕ ಧನಸಂಪನ್ನನಾಗಿ ಉತ್ತಮಕುಲದಲ್ಲಿ ಹುಟ್ಟಿ, ಉತ್ತಮ ಗುರುಗಳನ್ನು ತನ್ನ ದ್ರವ್ಯದಾನಾದಿಗಳಿಂದ ತೃಪ್ತಿಪಡಿಸಿ, ಬ್ರಹ್ಮ

ವಿದ್ಯೆಯನ್ನು ಹೊಂದುವದಕ್ಕೆ ಸಮರ್ಥನಾಗುವನು. ಶ್ರೀಕೃಷ್ಣನು ಹೇಳುತ್ತಾನೆ :—

(1) **ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥**
**ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ।**
**ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ ॥**
—(6. 41-42.)

ಯೋಗಭ್ರಷ್ಟನು (ಉಪಲಕ್ಷಣದಿಂದ ವಿಹಿತಪುಣ್ಯಕರ್ಮಗಳನ್ನು ಮಾಡುವವನು) * ಪವಿತ್ರರಾದ ಧನವಂತರ ಮನೆಯಲ್ಲಿ ಹುಟ್ಟುತ್ತಾನೆ. ಅಥವಾ ಬ್ರಹ್ಮವಿದ್ಯೆಯನ್ನು ಬಲ್ಲ ಜ್ಞಾನಿಗಳ ವಂಶದಲ್ಲಿ ಹುಟ್ಟುತ್ತಾನೆ. ಈ ವಿಧವಾದ ಉತ್ಪತ್ತಿಯು ಕಷ್ಟಲಭ್ಯವಾದುದು.

ಈಪ್ರಕಾರವಾಗಿ ಸತ್ಕರ್ಮಗಳಿಂದ ಪ್ರಾಪ್ತವಾದ ಧನದಿಂದ ಮತ್ತಷ್ಟು ಪುಣ್ಯಕರ್ಮಗಳನ್ನೂ, ಗುರುಸೇವೆಯನ್ನೂ ಮಾಡಿದರೆ ಪ್ರಸನ್ನನಾದ ಗುರುವಿನಿಂದ ಸುಲಭವಾಗಿ ಶಾಸ್ತ್ರಶ್ರವಣಾದಿಗಳನ್ನು ಮಾಡಿ ಜ್ಞಾನವನ್ನು ಹೊಂದಬಹುದು. ಈರೀತಿಯಾಗಿ ಕರ್ಮಾನುಷ್ಠಾನವು ಬ್ರಹ್ಮವಿದ್ಯಾಪ್ರಾಪ್ತಿಯಲ್ಲಿ ಒಂದು ಬಹಿರಂಗ ಕಾರಣವಾಗಿಯೂ ಕ್ವಚಿತ್ ಆಗುವುದು. ಈ ವಿವಕ್ಷೆಯಿಂದಲೇ ವಿದುರನು ಧರ್ಮಾದಿ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮವು (ಸತ್ಕರ್ಮಾನುಷ್ಠಾನವು) ಶ್ರೇಷ್ಠವು ಎಂದು ಹೇಳಿದನು. ಶ್ರವಣಾದಿಗಳಿಗೆ ಪ್ರಯೋಜಕವಾದ ಉತ್ತಮ ದೇಹಾದಿಪ್ರಾಪ್ತಿರೂಪವಾದ ಮಹಾಲಾಭವು ಸತ್ಕರ್ಮಾನುಷ್ಠಾನ ಮಾಡಿದವರಿಗೇ ಶಕ್ಯವಾಗುವುದು.

4. ಮತ್ತೊಂದು ಪ್ರಕಾರವಾದ ಕರ್ಮದ ಸಾರ್ಥಕತೆಯು ಮತ್ತು ಪರಂಪರಯಾ ಶ್ರವಣೋಪಯೋಗಿತ್ವವು ಸುಲಭವೇದ್ಯವಾದ ಶಾಸ್ತ್ರಾರ್ಥವಾಗಿರುವುದು. ರಾಜಾಜ್ಞೆಗಳನ್ನು ಉಲ್ಲಂಘಿಸುವ ದ್ರೋಹಿಯು ಶಿಕ್ಷೆಗೆ ಗುರಿಯಾಗಿ ರಾಜ್ಯದಲ್ಲಿರುವ ಮಾನ್ಯಸ್ಥಾನಗಳ ಪ್ರವೇಶದಲ್ಲಿ ಅಧಿಕಾರವನ್ನು ಕಳೆದು

---

* ಈ ವಾಕ್ಯದಲ್ಲಿ ಕೇವಲ ಯೋಗಭ್ರಷ್ಟನನ್ನು ವಿವಕ್ಷೆಮಾಡಬಾರದು; ಮತ್ತೇನೆಂದರೆ, ಸರ್ವಪುಣ್ಯಕರ್ಮದಲ್ಲಿ ರತರಾದವರನ್ನೂ ತೆಗೆದುಕೊಳ್ಳಬೇಕೆಂಬುದು "ನ ಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತ ಗಚ್ಛತಿ" ಎಂಬ ಹಿಂದಿನ ಶ್ಲೋಕದಿಂದಲೇ ಸೂಚಿತವಾಗುವುದು.

ಕೊಳ್ಳುವಂತೆ, ಭಗವದಾಜ್ಞಾರೂಪವಾದ ಶ್ರುತಿಸ್ಮೃತಿಗಳಲ್ಲಿರುವ ವಿಧಿಗಳನ್ನು ಅತಿಕ್ರಮಿಸಿ ನಿರಂಕುಶವಾಗಿ ಪ್ರವರ್ತಿಸಿದರೆ ನರಕವು ಪ್ರಾಪ್ತವಾಗುವದಲ್ಲದೆ ಪುನಃ ಭೂಲೋಕದಲ್ಲಿ ನಾಯಿ, ನರಿ, ಕುರಿ, ಕೋಳಿ, ಹಂದಿ, ಪತಂಗಾದಿ ನಾನಾ ದುರ್ಯೋನಿಗಳನ್ನು ಹೊಂದುವುದರಿಂದ ಶ್ರವಣಾದಿಗಳಿಗೆ ಪ್ರಯೋಜಕವಾದ ಮನುಷ್ಯದೇಹವನ್ನೇ ಕಳೆದುಕೊಳ್ಳುವನು. ಶ್ರೀಕೃಷ್ಣನು ಹೇಳುತ್ತಾನೆ:—

(2) **ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥**
—(16. 23.)

ಯಾವಾತನು ಶಾಸ್ತ್ರವಿಧಿಯನ್ನು ಉಲ್ಲಂಘಿಸಿ, ಸ್ವೇಚ್ಛಾನುಸಾರವಾಗಿ ಪ್ರವರ್ತಿಸುವನೋ ಆತನು ಜ್ಞಾನಾದಿರೂಪವಾದ ಫಲವನ್ನು ಹೊಂದುವುದಿಲ್ಲ. ಇಹದಲ್ಲೂ ಸುಖವನ್ನು ಹೊಂದುವುದಿಲ್ಲ. (ಆಸುರಯೋನಿಗಳನ್ನು ಹೊಂದುವುದರಿಂದ) ಉತ್ತಮಗತಿಯನ್ನೂ ಹೊಂದುವುದಿಲ್ಲ.

ಶ್ರೀಕೃಷ್ಣನು ಶಾಸ್ತ್ರವಿಧಿಯನ್ನು ಮೀರಿನಡೆಯುವವರು ಅಸುರರೆಂದೇ ಹೇಳುತ್ತಾನೆ:—

(3) **ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।**
**ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ ॥**
—(16. 7.)

**ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।**
**ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥**
(16. 19.)

"ಅಸುರರು ವಿಧ್ಯುಕ್ತ ಕರ್ಮಗಳಲ್ಲಿ ಪ್ರವೃತ್ತಿಯನ್ನೂ ವಿಧಿಸಿಷಿದ್ಧದ ಪರಿತ್ಯಾಗವನ್ನೂ ತಿಳಿದು ಅನುಷ್ಠಾನ ಮಾಡುವವರಲ್ಲ. ಆದುದರಿಂದ ಅವರಲ್ಲಿ ವಿಧ್ಯುಕ್ತಶೌಚವು ಇರುವುದಿಲ್ಲ. ಸ್ನಾನ, ಊರ್ಧ್ವಪುಂಡ್ರಧಾರಣ, ಸಂಧ್ಯಾವಂದನ, ದೇವಪೂಜಾದಿ ಆಚರಣೆಗಳು ಇರುವುದಿಲ್ಲ. "ಸತ್ಯಂ ವದ" ಇತ್ಯಾದಿ ವೇದೋಕ್ತ ಯಥಾರ್ಥವಚನವು ಇರುವುದಿಲ್ಲ........ಈರೀತಿಯಾಗಿ ನನ್ನ ಆಜ್ಞೆಯನ್ನು ಉಲ್ಲಂಘನೆಮಾಡಿದ ನರಾಧಮರಾದ ದುಷ್ಕರ್ಮಗಳನ್ನು ಮಾಡಿದ

ನನ್ನ ದ್ವೇಷಿಗಳನ್ನು ನಾನು ನಿರಂತರವೂ ಆಸುರೀಯೋನಿಗಳಲ್ಲಿ ಇಡುತ್ತೇನೆ, ಎಂದರೆ ತಮೋಗುಣಪ್ರಚುರವಾದ ದುರ್ಯೋನಿಗಳಲ್ಲಿ ಇಡುತ್ತೇನೆ" ಎಂಡರ್ಥವು.

**ಪ್ರಶ್ನೆ :—** ಸ್ವಾಮಿ! ವಿಧ್ಯುಕ್ತಕರ್ಮಗಳನ್ನು ಮಾಡದೆ ಈಗ ಎಷ್ಟೋ ಜನರು ಶ್ರವಣಾದಿಗಳನ್ನು ಮಾಡಿ ಜ್ಞಾನವನ್ನು ಸಂಪಾದಿಸಿ ಗ್ರಂಥಗಳನ್ನು ಸಹ ಬರೆದಿರುವರು. ಆಂಗ್ಲೇಯರಲ್ಲಿ ಅನೇಕರು ವೇದವಿಧಿಯನ್ನು ಅತಿಕ್ರಮಿಸಿ ಇದ್ದರೂ ಪ್ರಚಂಡಪಂಡಿತರಾಗಿರುವರು. ಹೀಗಿರುವಲ್ಲಿ ವಿಧ್ಯುಕ್ತಕರ್ಮಗಳನ್ನು ಮಾಡದವನಿಗೆ ಜ್ಞಾನಾದಿಗಳು ಬರುವುದಿಲ್ಲವೆಂದು ಹೇಳುವುದು ಹೇಗೆ?

**ಉತ್ತರ:—ಶ್ರೀಶ್ರೀಗಳವರು:—**ನಾವು ಪೂರ್ವದಲ್ಲಿಯೇ ನಿರೂಪಿಸಿದೆವು. ಕರ್ಮಮಾತ್ರದಿಂದ ಜ್ಞಾನವು ಪರಂಪರಯಾ ಪ್ರಾಪ್ತವಾಗುವುದು. ಆದರೆ ಪರಮಾತ್ಮನ **ಅಪರೋಕ್ಷಜ್ಞಾನಜನಕವಾದ ಯಥಾರ್ಥ** ತತ್ವಜ್ಞಾನವು ವೇದವಿರುದ್ಧ ಆಚಾರವುಳ್ಳವರಿಗೆ ದೊರಕಲಾರದು ಎಂದು ನಾವು ಹೇಳಿದೆವು. ರಾಜಾಜ್ಞೆಯನ್ನು ಉಲ್ಲಂಘಿಸಿ, ಶಾಲೆಗಳಿಗೆ ಹೋಗಿ ನಿಯತರೀತಿಯಲ್ಲಿ ಪರೀಕ್ಷೆ ಕೊಡದೆ, ತೇರ್ಗಡೆ ಪತ್ರವನ್ನು ಹೊಂದದೆ, ನಿಯತವಲ್ಲದ ಅನೇಕ ಗ್ರಂಥಗಳನ್ನು ಓದಿದ ಮಾತ್ರಕ್ಕೆ ಸರ್ಕಾರದವರು ತಮ್ಮ ನಿಯಮಕ್ಕೆ ಒಳಪಡದ ನಿರಂಕುಶ ಪ್ರಜೆಗೆ ಉತ್ತಮ ನೌಕರಿಯನ್ನು ಕೊಡಲಾರರು. ಇದೇ ರೀತಿಯಲ್ಲಿ ಪರಮಾತ್ಮನ ಕಾಯಿದೆಗಳನ್ನು ಮೀರಿ ವೇದೋಕ್ತ ಸ್ವವರ್ಣಾಶ್ರಮೋಚಿತವಾದ ಕರ್ಮಗಳನ್ನು ಮಾಡದವನಿಗೆ **ಸಂಸಾರತಾರಕವಾದ ಪರಮಾತ್ಮನ ಪ್ರಸಾದದಿಂದಲೇ ಬರುವ, ಮೋಕ್ಷೋಪಯೋಗಿಯಾದ** ಶ್ರವಣಾದಿಗಳಲ್ಲಿ ಅಧಿಕಾರವು ಬರುವುದಿಲ್ಲ. ಅಷ್ಟೇ ಹೊರತು, ಮೋಕ್ಷಮಾರ್ಗಕ್ಕೆ ವಿರುದ್ಧವಾದ, ಪರಮಾತ್ಮನ ಕೋಪಕ್ಕೆ ಪಾತ್ರವಾಗುವ, ಆಸುರಯೋನಿಪ್ರಾಪ್ತಿಗೂ ದುರ್ಗತಿಗೂ ಕಾರಣವಾಗುವ ತಾಮಸಜ್ಞಾನವು ಬರುವುದಿಲ್ಲವೆಂದು ಹೇಳಿದವರು ಯಾರು? ವಿಪರ್ಯಯ ಜ್ಞಾನವು ಹೇಗೆ ತಮೋಗುಣಜನ್ಯವೋ ಹಾಗೆಯೇ ತನ್ನ ಅಧಿಕಾರವನ್ನು ಮೀರಿ ಭಗವನ್ನಿಯಮಗಳಿಗೆ ವಿರುದ್ಧವಾಗಿ ಸಂಪಾದಿಸಿದ ಯಥಾರ್ಥ ನಿಶ್ಚಯವೂ ಸಹ ತಮೋಗುಣಕಾರ್ಯವೇ. ಆದುದರಿಂದ ವಿಧಿ ನಿಷೇಧಗಳನ್ನು

ಗೌರವ ಮಾಡಿ ಆಚರಿಸದವರಿಗೆ ಅಧಃಪತನವು ತಪ್ಪಿದುದಲ್ಲ. ವಸ್ತುತಃ ವಿಧ್ಯುಕ್ತಕರ್ಮರಹಿತನಾದವನಿಗೆ ಶಾಸ್ತ್ರತಾತ್ಪರ್ಯವಾದ ಯಥಾರ್ಥಜ್ಞಾನವೇ ಹುಟ್ಟುವುದಿಲ್ಲ. ಯಥಾರ್ಥ ಜ್ಞಾನವು ಹುಟ್ಟಿದರೂ ಅದೇ ಯಥಾರ್ಥವಾದುದು ಇತರ ಸರ್ವ ಮತಗಳೂ ಅಪ್ರಾಮಾಣಿಕವಾದುವುಗಳು ಎಂದು ಸಂಶಯವಿಪರ್ಯಯರಹಿತವಾದ ಪ್ರಾಮಾಣ್ಯ ನಿಶ್ಚಯವು ಯಾವಾಗಲೂ ಬರುವುದಿಲ್ಲ. ಅಷ್ಟೇ ಅಲ್ಲ. ವಿಪರೀತ ಜ್ಞಾನಗಳಲ್ಲಿ ಪ್ರಾಮಾಣ್ಯ ನಿಶ್ಚಯವು ಉಂಟಾಗುವುದು. ಶ್ರೀಕೃಷ್ಣನ ವಾಕ್ಯಗಳ ಆನುಪೂರ್ವೀಪರ್ಯಾಲೋಚನೆಯಿಂದಲೇ ಇದು ನಿಶ್ಚಿತವಾಗುವುದು :—

**(4) ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ।**
**ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ॥**

—(16. 7.)

ಎಂದರೆ ಅಸುರ ಜನರು ವೇದೋಕ್ತ ರೀತಿಯಲ್ಲಿ ಸ್ವೋಚಿತವಾದ ಕರ್ಮಗಳನ್ನು ಮಾಡುವುದಿಲ್ಲವೆಂದು ಹೇಳಿ, ಮುಂದಿನ ವಾಕ್ಯದಲ್ಲಿ,

**(5) ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ।**
**ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಂ॥**
**ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ।**
**ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ॥**

—(16. 8-9.)

ಎಂದು ಹೇಳಿದನು. "ವಿಧಿ ನಿಷೇಧಗಳನ್ನು ಅನುಸರಿಸಿ ಆಚರಣೆಗಳನ್ನು ನಡೆಸದ ಅಸುರರು ಜಗತ್ತು ಮಿಥ್ಯಾ, ಸ್ವಾಧಾರರಹಿತವಾದುದು, ಪಾಲಕನಾದ ಈಶ್ವರನಿಂದ ರಹಿತವಾದುದು ಇತ್ಯಾದಿ ರೀತಿಯಾದ ಜ್ಞಾನವನ್ನು ಅವಲಂಬಿಸಿ ದುಷ್ಟ ಮನಸ್ಸಿನಿಂದ ಸಹಿತರಾದ ನೀಚಬುದ್ಧಿಗಳಾಗುವರು. ಅವರು ಜಗತ್ತಿನ ಕ್ಷೇಮನಾಶಕರಾಗಿ ಸ್ವನಾಶಾರ್ಥವಾಗಿಯೇ ಎಂದರೆ ನರಕಾದ್ಯನರ್ಥಗಳನ್ನು ಹೊಂದುವುದಕ್ಕಾಗಿಯೇ ಲೋಕದಲ್ಲಿ ಹುಟ್ಟುತ್ತಾರೆ" ಎಂದು ಅರ್ಥವು. ಇದರಿಂದ ವಿಧ್ಯತಿಕ್ರಮಕ್ಕೂ ವಿಪರ್ಯಯಜ್ಞಾನೋತ್ಪತ್ತಿಗೂ ಯಾವುದಾದರೂ ಒಂದು ರೀತಿಯಲ್ಲಿ ಕಾರ್ಯಕಾರಣ ಭಾವವು ಇರುವುದೆಂದು ಸೂಚಿತವಾ

ಗುವುದು. ಮುಂದಿನ ವಾಕ್ಯಗಳಲ್ಲಿ ಶ್ರೀಕೃಷ್ಣನೇ ಅಸುರಜನರ ಚಿಂತಾಪ್ರಕಾರ ವನ್ನು ವಿಶೇಷವಾಗಿ ನಿರೂಪಿಸಿರುತ್ತಾನೆ. ಇವೆಲ್ಲಕ್ಕೂ ಆರಂಭದಲ್ಲಿಯೇ ಅವರು ವೇದೋಕ್ತ ವಿಧಿಗಳನ್ನು ಪರಿಪಾಲಿಸುವುದಿಲ್ಲವೆಂದು ಹೇಳಿರುವುದರಿಂದ ಅವರ ವಿಧ್ಯತಿಕ್ರಮವನ್ನು ನೋಡಿ ಕುಪಿತನಾದ ಕರ್ಮಫಲಪ್ರದನಾದ ಪರಮಾತ್ಮನೇ ಅವರಿಗೆ ತನ್ನ ಪ್ರಾಪ್ತಿಗೆ ಪ್ರತಿಬಂಧಕವಾಗುವ ಅಂಥಾ ದುಷ್ಟಜ್ಞಾನವನ್ನು ಕೊಡುವನೆಂದು ನಿಶ್ಚಯಿಸಬೇಕು. ಯಾತಕ್ಕೆಂದರೆ, ಪರಮಾತ್ಮನೇ ಬುದ್ಧ್ಯಾದಿಗಳಿಗೆ ಪ್ರೇರಕನು, ಜ್ಞಾನಾದಿದಾತೃವು ಎಂದು ಪ್ರಮಿತವಾಗಿರುತ್ತದೆ. ಶ್ರೀಕೃಷ್ಣನು ಹೇಳುತ್ತಾನೆ:—

(6) **ಬುದ್ಧಿರ್ಜ್ಞಾನಮಸಂಮೋಹಃ....ಮತ್ತ ಏವ ಪೃಥಗ್ವಿಧಾಃ।**

—(10. 4-5.)

(7) **ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ ॥**

—(15. 15.)

ಕಿಂಚ ಪರಮಾತ್ಮನು ತನ್ನ ಭಕ್ತರಾಗಿ ಸ್ವೋಚಿತ ಕರ್ಮಗಳಲ್ಲಿ ರತರಾದವರಿಗೆ ತನ್ನ ಪ್ರಾಪ್ತಿಪ್ರಯೋಜಕವಾದ ಉತ್ತಮ ಜ್ಞಾನವನ್ನು ಕೊಟ್ಟು ಅವರ ಹೃದಯದಲ್ಲಿರುವ ಅಜ್ಞಾನವನ್ನು ನಾಶಮಾಡುವನು. ಶ್ರೀಕೃಷ್ಣನು ಹೇಳುತ್ತಾನೆ:—

(8) **ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಂ ।**
**ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥**
**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥**
**ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ॥**

—(10. 9-11.)

**ಅರ್ಥ:**—ಎಲೈ ಪಾರ್ಥನೆ! ನನ್ನ(ಶ್ರೀಕೃಷ್ಣನ) ಮಹಿಮೆಯನ್ನು ತಿಳಿದ ಜ್ಞಾನಿಗಳು ನನ್ನಲ್ಲಿಯೇ ಇಡಲ್ಪಟ್ಟ ಚಿತ್ತವುಳ್ಳವರಾಗಿ, ನನ್ನಲ್ಲಿಯೇ ಅರ್ಪಿತವಾದ ಪ್ರಾಣವುಳ್ಳವರಾಗಿ, (ಶ್ರೀಕೃಷ್ಣನ ಸೇವಾರ್ಥವಾಗಿಯೇ ಪ್ರಾಣವನ್ನು ಧಾರಣೆಮಾಡುವವರಾಗಿ, ಮತ್ತು ಕೇವಲ ಶ್ರೀಕೃಷ್ಣನ ಪ್ರೀತ್ಯರ್ಥವಾದ

ಚೇಷ್ಟೆಗಳನ್ನು ಉಳ್ಳವರಾಗಿ) ಶಿಷ್ಯರಿಗೆ ನನ್ನ ಸ್ವರೂಪವನ್ನು ಉಪದೇಶ ಮಾಡುತ್ತಾ, ಇಬ್ಬರು ಸೇರಿದಾಗ ಪರಸ್ಪರವಾಗಿ ನನ್ನ ಮಹಿಮೆಗಳನ್ನು ಒಬ್ಬರಿಗೊಬ್ಬರು ತಿಳಿಸಿಕೊಡುತ್ತಾ, ಸರ್ವದಾ ವಿಷಯಗಳಲ್ಲಿ ಅಲಂಬುದ್ಧಿಯುಳ್ಳವರಾಗಿರುತ್ತಾರೆ; ಮತ್ತು ನನ್ನ ಧ್ಯಾನದಿಂದ ಸುಖವನ್ನು ಅನುಭವಿಸುತ್ತಾರೆ. ಈ ರೀತಿಯಾಗಿ ನಿತ್ಯದಲ್ಲಿಯೂ ನನ್ನಲ್ಲಿ ನಿಬದ್ಧವಾದ ಚಿತ್ತವುಳ್ಳ, ಭಕ್ತಿಪೂರ್ವಕವಾಗಿ ನನ್ನನ್ನು ಸೇವಿಸುವ ಅಧಿಕಾರಿಗಳಿಗೆ ಯಾವುದರಿಂದ ಅವರು ನನ್ನನ್ನು ಬಂದು ಸೇರುತ್ತಾರೆಯೋ, ಅಂತಹ ಜ್ಞಾನರೂಪವಾದ ಉಪಾಯವನ್ನು ಕೊಡುತ್ತೇನೆ. ಮತ್ತು ಅವರಲ್ಲಿಯೇ ದಯಾನಿಮಿತ್ತದಿಂದ ಅವರ ಅಂತಃಕರಣದಲ್ಲಿ ನಾನು ಒಂದು ರೂಪದಿಂದ ಸ್ಥಿತನಾಗಿ, ಪ್ರಜ್ವಲಿತವಾದ ಜ್ಞಾನವೆಂಬ ದೀಪದಿಂದ ಅವರ ಮನೋಗತವಾದ ಅಜ್ಞಾನಜನ್ಯವಾದ ಸಕಲಗಳನ್ನೂ ನಾಶಮಾಡುತ್ತೇನೆ.

ಈ ವಾಕ್ಯಾರ್ಥವಿಮರ್ಶೆಯಿಂದ ನಾವು ಹೇಳಿದ ಎರಡು ವಿಷಯಗಳೂ ಸಿದ್ಧವಾಗುವುವು. "ತೇಷಾಂ ಸತತಯುಕ್ತಾನಾಂ" ಎಂದರೆ ನಿರಂತರ ನನಗೆ ಸಮ್ಮತವಾದ ಕರ್ಮಯೋಗದಲ್ಲಿ ರತರಾಗಿ ನನ್ನಲ್ಲಿ ಭಕ್ತಿಮಾಡುವವರಿಗೇನೇ ನಾನು ಜ್ಞಾನಪ್ರದನಾಗುವೆನು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ಕಿಂಚ "ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ" ಎಂದರೆ ಯಾವುದರಿಂದ ನನ್ನನ್ನು ಹೊಂದುತ್ತಾರೆಯೋ **ಅಂಥಾ** ಬುದ್ಧಿಯೋಗವನ್ನು ನಾನು ಕೊಡುತ್ತೇನೆಂದು ಶ್ರೀಕೃಷ್ಣನು ಪ್ರತಿಜ್ಞೆ ಮಾಡಿರುವುದರಿಂದ, ಶ್ರೀಕೃಷ್ಣನ ಪ್ರಾಪ್ತಿರಹಿತವಾದ ಒಂದು ಬುದ್ಧಿಯೋಗವೂ ಉಂಟೆಂದು ನಿಶ್ಚಿತವಾಗುವುದು. ಹದಿನಾರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಅಸುರರ ಬುದ್ಧಿಪ್ರಕಾರವನ್ನು "ಈಶ್ವರೋಽಹಮಹಂ ಭೋಗೀ" ಇತ್ಯಾದಿ ಅನೇಕ ಶ್ಲೋಕಗಳಲ್ಲಿ ವಿವರಿಸಿ,

(9) **ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ||**

ಎಂದರೆ ಅಸುರರು ಸರ್ವಥಾ ನನ್ನನ್ನು ಹೊಂದದೇ ಅಂತ್ಯದಲ್ಲಿ ಅಂಧಂತಮಸ್ಸನ್ನು ಕುರಿತು ಹೋಗುತ್ತಾರೆ ಎಂದು ಹೇಳಿರುತ್ತಾನೆ.

ಪರಮಾತ್ಮನ ಪ್ರೀತಿಕರವಾದ ಸ್ವೋಚಿತ ಧರ್ಮಾನುಷ್ಠಾನವು ಸಾತ್ವಿಕ ಗುಣಕಾರ್ಯವು. ಆದುದರಿಂದ ಅದು ರಜಸ್ತಮೋಗುಣಗಳ ಹನನದಲ್ಲಿ ಸಮರ್ಥವಾಗುವುದು ಮತ್ತು ಭಗವಂತನಲ್ಲಿ ರತಿಯನ್ನೂ ಹುಟ್ಟಿಸುವುದು, ನಂತರ ಯಥಾರ್ಥಜ್ಞಾನಕ್ಕೂ ಕಾರಣವಾಗುವುದೆಂದು ಭಾಗವತದಲ್ಲಿಯೂ ಹೇಳಲ್ಪಟ್ಟಿರುವುದು. ಹದಿನಾಲ್ಕನೆಯ ಅಧ್ಯಾಯದಲ್ಲಿ ಗೀತೆಯಲ್ಲಿಯೂ ಉಕ್ತವಾಗಿರುವುದು. ಭಾಗವತದಲ್ಲಿ ಉದ್ಧವನಿಗೆ ಶ್ರೀಕೃಷ್ಣನು **"ಸತ್ತ್ವೇನಾನ್ಯತಮಾ ಹನ್ಯಾತ್"** ಎಂದರೆ ಸತ್ವಗುಣದಿಂದ ರಜಸ್ತಮೋಗುಣಗಳನ್ನು ನಾಶಮಾಡಬೇಕೆಂದು ಉಪದೇಶಮಾಡಿರುತ್ತಾನೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿಯೂ ಹೇಳಿರುತ್ತಾನೆ:—

(10) **ತತ್ರ ಸತ್ವಂ ನಿರ್ಮಲತ್ವಾತ್ಪ್ರಕಾಶಕಮನಾಮಯಂ ।**
**ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥** —(14.6.)

ಸತ್ವ ಗುಣವು ಶುದ್ಧವಾದುದರಿಂದ ಭವರೋಗನಾಶಕವಾದ ಜ್ಞಾನೋತ್ಪಾದಕವಾಗಿ ಸಾತ್ವಿಕಸುಖಸಂಬಂಧದಿಂದಲೂ ತತ್ವಜ್ಞಾನಸಂಬಂಧದಿಂದಲೂ ಮುಕ್ತಿಯೋಗ್ಯಜನರನ್ನು ಬಂಧಿಸುತ್ತದೆ.

ಸತ್ವಗುಣವು ಜ್ಞಾನೋತ್ಪತ್ತಿಯಲ್ಲಿ ಪ್ರಯೋಜಕವಾಗುವ ಕ್ರಮವು **"ಸತ್ತ್ವಾದ್ಧರ್ಮೋ ಭವೇದ್ವೃದ್ಧಾತ್ಪುಂಸೋ ಮದ್ಭಕ್ತಿಲಕ್ಷಣಃ। ಸಾತ್ವಿಕೋಪಾಸ್ತಯಾ ಜ್ಞಾನಂ ತತೋ ಧರ್ಮಃ ಪ್ರವರ್ತತೇ॥ ಧರ್ಮೋ ರಜಸ್ತಮೋ ಹನ್ಯಾತ್ಸತ್ವವೃತ್ತಿರನುತ್ತಮಾ॥** ಎಂಬ ಏಕಾದಶಸ್ಕಂಧ ಶ್ಲೋಕಗಳಲ್ಲಿ ಪ್ರಮಿತವಾಗಿರುವುದು. ಸಾತ್ವಿಕಗುಣಕಾರ್ಯವಾದ ವಿಧ್ಯುಕ್ತಸ್ವಧರ್ಮಾನುಷ್ಠಾನದಿಂದ ಭಗವತ್ಕಥಾಶ್ರವಣಾದಿಗಳಲ್ಲಿ ರತಿಯೂ, ಸಾತ್ವಿಕಭಗವದ್ಜ್ಞಾನವೂ ಬರುವುದು ಎಂದು ಪೂರ್ವದಲ್ಲಿ ನಿರೂಪಿತವಾದ ಅರ್ಥವೇ ಉಕ್ತವಾಗಿರುವುದು. ಆದುದರಿಂದ ವಿಧ್ಯುಕ್ತಕರ್ಮಾನುಷ್ಠಾನದಿಂದಲೇ ಯಥಾರ್ಥಜ್ಞಾನಪ್ರಾಪ್ತಿಯೂ, ವಿಧ್ಯತಿಕ್ರಮದಿಂದ ತಾಮಸಗುಣಜನ್ಯವಾದ ದುಷ್ಟಜ್ಞಾನವೂ ಬರುವುದೆಂದು ನಿಶ್ಚಯಿಸಬೇಕು.

**ಪ್ರಶ್ನೆ:**—ಸ್ವಾಮಿ! ಯದ್ಯಪಿ ಶಾಲಾನಿಯಮಗಳು ಅನೇಕವಿರುವುವು. ಆದರೆ ರಾಜದ್ರೋಹಾದಿಗಳನ್ನು ಮಾಡದೇ ಶಾಲೆಯವರ ಅಪ್ಪಣೆಗೆ ಅನುಗುಣ

ವಾಗಿಯೇ ಮನೆಯಲ್ಲಿಯೇ ನಿಯತಗ್ರಂಥಗಳನ್ನು ಓದಿ ಪರೀಕ್ಷೆ ಕೊಟ್ಟವರಿಗೂ ಸಹ ತೇರ್ಗಡೆ ಚೀಟಿಯು ದೊರಕುವುದು. ಹೀಗೆಯೇ ಕರ್ಮಾದಿಗಳನ್ನು ಮಾಡದಿದ್ದರೂ ಪೂರ್ವಜನ್ಮಕೃತಕರ್ಮಪರಿಪಾಕದಿಂದ ಶ್ರವಣಾದಿಗಳಲ್ಲಿ ರತಿಯುಳ್ಳವನಾದವನು ಜ್ಞಾನವನ್ನು ಸಂಪಾದಿಸಬಹುದಲ್ಲವೇ ?

**ಉತ್ತರ:—ಶ್ರೀತ್ರೀಗಳವರು:**—ನಿಮ್ಮ ದೃಷ್ಟಾಂತದಲ್ಲಿ ವಿಧ್ಯತಿಕ್ರಮವು ಯಾವುದೂ ಇರುವುದಿಲ್ಲ. ಸರ್ಕಾರದವರ ಅಪ್ಪಣೆಯ ಪ್ರಕಾರವೇ ವಿಶೇಷ ಪ್ರಾರ್ಥನೆಗಳಿಂದ ಆಜ್ಞೆಯನ್ನು ಪಡೆದುಕೊಂಡು ಅವರಿಂದ ನಿಯತವಾದ ಗ್ರಂಥಜ್ಞಾನವನ್ನೇ ಮನೆಯಲ್ಲಿಯೇ ಓದಿ ಹೊಂದಿದರೂ ಆತನು ತೇರ್ಗಡೆ ಚೀಟಿಯನ್ನು ಪಡೆಯುವನು. ಹೀಗೆಯೇ ಸರ್ವದಾ ಪರಮಾತ್ಮನ ಆಜ್ಞೋಲ್ಲಂಘನಾರೂಪವಾದ ದ್ರೋಹವನ್ನು ಆಚರಿಸದೆ, ವಿಶೇಷ ಪ್ರಾರ್ಥನೆಯಿಂದ ಪ್ರಸನ್ನನಾದ ಪರಮಾತ್ಮನ ಅಪ್ಪಣೆಗೆ ಅನುಗುಣವಾಗಿ ಸಮೀಪದಲ್ಲಿ ಗುರುಗಳು ಇಲ್ಲದಿದ್ದರೆ ಭಗವತ್ಕಥಾಶ್ರವಣಾದಿಗಳಲ್ಲಿ ಭಕ್ತಿಪೂರ್ವಕವಾಗಿ ಆಸಕ್ತನಾದರೆ ಭಗವಂತನು ಕುಪಿತನಾಗುವುದಿಲ್ಲ. ಮತ್ತು ಪ್ರಸನ್ನನಾಗಿ ಕ್ಷಿಪ್ರದಲ್ಲಿ ಉತ್ತಮ ಗುರುಗಳನ್ನು ಸಂಯೋಗ ಮಾಡುವನು. ದಂಭಮಾನಮದಾನ್ವಿತರಾಗಿ ನಿಯತಕರ್ಮಗಳನ್ನು ಪರಿತ್ಯಾಗ ಮಾಡಿದರೆ ಬ್ರಾಹ್ಮಣ್ಯಾದಿಧರ್ಮಗಳೇ ನಾಶವಾಗುವುವು. ಅದರಿಂದ ಇದ್ದ ಅಧಿಕಾರವು ಲುಪ್ತವಾಗಿ ಅಂಥಾ ಭ್ರಷ್ಟನಿಂದ ಮಾಡಲ್ಪಟ್ಟ ಇತರ ಪುಣ್ಯಗಳೂ ನಿಷ್ಫಲವಾಗುವುವು. ಶ್ರೀಕೃಷ್ಣನು ಹೇಳುತ್ತಾನೆ:—

**(11) ಯಜ್ಞದಾನತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥**
**ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।**
**ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥**
—(18. 5-7.)

**ಅರ್ಥ**—ಎಲೈ ಪಾರ್ಥನೇ! ವಿಧ್ಯುಕ್ತವಾದ ಯಜ್ಞಗಳು, ಸತ್ಪಾತ್ರದಲ್ಲಿ ದಾನಗಳು, ಉಪವಾಸಾದಿ ತಪಸ್ಸುಗಳು, ಸಂಧ್ಯಾದಿಕರ್ಮಗಳು ಇವುಗಳು ಬಿಡಲ್ಪಡತಕ್ಕವಲ್ಲ; ಮತ್ತು ಅವಶ್ಯಕವಾಗಿ ಆಚರಿಸಲ್ಪಡತಕ್ಕವುಗಳು.

ಯಜ್ಞದಾನತಪಸ್ಸುಗಳು ಜ್ಞಾನಿಗಳಿಗೂ ಪಾವನಕರವಾದುವುಗಳು ..........
ವಿಧ್ಯುಕ್ತ ವರ್ಣಾಶ್ರಮೋಚಿತಕರ್ಮಗಳ ಪರಿತ್ಯಾಗವು ಯುಕ್ತವಲ್ಲ. ಮಿಥ್ಯಾ ಜ್ಞಾನದಿಂದ ಸ್ವೋಚಿತಕರ್ಮಗಳನ್ನು ಪರಿತ್ಯಾಗಮಾಡುವುದು ತಾಮಸ ವೆನ್ನಿಸಲ್ಪಡುತ್ತದೆ.

ಪರಮಾತ್ಮನ ಆಜ್ಞಾರೂಪವಾದ, ವಿಧ್ಯನುಗುಣವಾದ ಕರ್ಮಗಳನ್ನು ಮಾಡುವವನೇ ಜ್ಞಾನಾದಿಗಳನ್ನು ಪಡೆಯುವನೆಂದು ಶ್ರೀಕೃಷ್ಣನು ಹೇಳು ತ್ತಾನೆ :—

(12) **ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ।**
—(12. 10.)

**ಅರ್ಥ:**—ನನ್ನ ಪ್ರೀತ್ಯರ್ಥವಾದ ಕರ್ಮಗಳನ್ನು ಮಾಡುತ್ತಲೇ ನೀನು ಜ್ಞಾನಾದಿಸಿದ್ಧಿಯನ್ನು ಹೊಂದುತ್ತೀಯೆ.

(13) **ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥**
—(18. 46.)

ಸ್ವವರ್ಣಾಶ್ರಮೋಚಿತಕರ್ಮಗಳಿಂದ ಪರಮಾತ್ಮನನ್ನು ಆರಾಧನೆ ಮಾಡಿ ದರೆ ಮನುಷ್ಯನು ಜ್ಞಾನರೂಪಸಿದ್ಧಿಯನ್ನು ಹೊಂದುವನು.

ಪರಂತು ಕರ್ಮಫಲವಾದ ಜ್ಞಾನವು ಪರಮಚೇತನನಾದ ಪರಮಾತ್ಮನ ಪ್ರಸಾದದಿಂದ ಪ್ರಾಪ್ತವಾಗುವ ಪದಾರ್ಥವೆಂದು ತಿಳಿದರೆ ಕರ್ಮದಿಂದ ಜ್ಞಾನವು ಹೇಗೆ ಬರುವುದೆಂಬ ನಿಮ್ಮ ಪ್ರಶ್ನೆಗೇ ಅವಕಾಶವಿರುವುದಿಲ್ಲ. ತನ್ನ ಸೇವಾರೂಪವಾದ ಕರ್ಮಾನುಷ್ಠಾನದಿಂದ ಶ್ರೀಪರಮಾತ್ಮನು ಪ್ರಸನ್ನನಾಗು ವನು, ಮತ್ತು ಫಲರೂಪವಾಗಿ ಅಂತಃಕರಣವನ್ನು ಶುದ್ಧಿಮಾಡಿ ಶ್ರವಣದಲ್ಲಿ ರತಿಯನ್ನು ಉತ್ಪತ್ತಿಮಾಡಿ ಜ್ಞಾನವನ್ನು ದಯಪಾಲಿಸುವನೆಂದು ಹೇಳುವುದ ರಲ್ಲಿ ಭಾದಕವೇನು? ಶ್ರೀಕೃಷ್ಣನು ತನ್ನ ಸ್ವಂತ ಮುಖದಿಂದ ಶಾಸ್ತ್ರೋಕ್ತ ರೀತಿಯಲ್ಲೇ ಸಕಲ ಕರ್ಮಗಳನ್ನೂ ಮಾಡಬೇಕೆಂದು ಹೇಳಿರುವನು :—

(14) **ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥**
—(16. 24.)

ಎಲೈ ಪಾರ್ಥನೇ! ಶಾಸ್ತ್ರಸಮ್ಮತವಾದ ಕರ್ತವ್ಯಕರ್ಮವನ್ನು ತಿಳಿದು ಕೊಂಡು ನೀನು ಕರ್ಮಗಳನ್ನು ಮಾಡಬೇಕು.

## ಇಷ್ಟು ಮುಖ್ಯವಾದ ತಾತ್ಪರ್ಯವು:—

1. ವಿಷ್ಣುವಿನ ಆಜ್ಞಾರೂಪವಾದ ವೇದವಿಧಿಗಳ ಅತಿಕ್ರಮವು ವಿಷ್ಣು ದ್ರೋಹರೂಪವಾಗಿ ಪರಿಣಮಿಸಿ. ಶ್ರವಣಾದಿಗಳಿಗೆ ಪ್ರಯೋಜಕವಾದ ಬ್ರಾಹ್ಮಣಾದಿ ಉತ್ತಮದೇಹಪ್ರಾಪ್ತಿಗೇ ವಿಘಾತಕವಾಗುವುದು. 2. ನಮಗೆ ಇಷ್ಟ ಕರ್ಮವನ್ನು ನಾವು ಮಾಡಿದರೆ ಫಲದಾತೃವೆಂದು ಪ್ರಸಿದ್ಧನಾದ ಪರಮಾತ್ಮನು ಪ್ರಸನ್ನನಾಗುವುದಿಲ್ಲ. ಮತ್ತು ಆತನಿಗೆ ಸಮ್ಮತವಾದ ಶಾಸ್ತ್ರೋಕ್ತ ಆಚರಣೆಯಿಂದ ಆತನು ಪ್ರಸನ್ನನಾಗಿ ಅಂತಃಕರಣ ಶುದ್ಧಿದ್ವಾರಾ ಜ್ಞಾನಫಲವನ್ನು ಕೊಡುವನೆಂದು ಪ್ರತಿಜ್ಞೆಮಾಡಿರುವನು. 3. ವಿಧ್ಯುಕ್ತಕರ್ಮವು ಸಾತ್ವಿಕ ಗುಣಕಾರ್ಯವಾದುದರಿಂದಲೂ ರಜಸ್ತಮೋಭಾವಗಳನ್ನು ನಾಶಮಾಡಿ, ಸಚ್ಛಾಸ್ತ್ರದಲ್ಲಿ ಸ್ನೇಹವನ್ನು ವೃದ್ಧಿಮಾಡಿ, ಜ್ಞಾನಕ್ಕೆ ಕಾರಣವಾಗುವುದೆಂದು ಹೇಳಲ್ಪಟ್ಟಿರುವುದು. 4. ಧರ್ಮದಿಂದ ಅರ್ಥಪ್ರಾಪ್ತಿಯೂ, ಸಮಾಚೀನವಾಗಿ ವಿನಿಯುಕ್ತವಾದ ದ್ರವ್ಯದಿಂದ ಗುರುತುಷ್ಟಿಯೂ, ತದ್ದ್ವಾರಾ ಬ್ರಹ್ಮವಿದ್ಯಾಪ್ರಾಪ್ತಿರೂಪವಾದ ಫಲವೂ ದೊರಕಬಹುದಾದುದರಿಂದಲೂ, ಕರ್ಮವು ಜ್ಞಾನಕ್ಕೆ ಕಾರಣವಾಗಬಹುದೆಂದು ಹೇಳಬಹುದು. 5. ಕರ್ಮದಿಂದ ಕ್ರಮವಾಗಿ ಇಂದ್ರಿಯಗಳೂ ಮನೋವೃತ್ತಿಗಳೂ ಮಾಲಿನ್ಯರಹಿತವಾಗುವುವು. ಸತ್ಕರ್ಮಾನುಷ್ಠಾನದಿಂದ ಮನೋಗತಪಾಪಗಳು ದೂರವಾಗುವುವು. ಅತಏವ ದುಷ್ಟಕಾಮಗಳು ನಿವೃತ್ತವಾಗುವುವು. ಸತ್ಕರ್ಮಾನುಷ್ಠಾನಜನಿತ ಪುಣ್ಯ ಪ್ರಭಾವದಿಂದ ಮನಸ್ಸು ಭಗವಚ್ಛಾಸ್ತ್ರದಲ್ಲಿ ಸ್ನೇಹಯುಕ್ತವಾಗುವುದು. ಈರೀತಿಯಾಗಿ ಸತ್ಕರ್ಮಾನುಷ್ಠಾನವು ಸಾಕ್ಷಾತ್ಸತ್ವಶುದ್ಧಿಗೆ ಕಾರಣವಾಗಿ ಪರಂಪರಯಾ ಜ್ಞಾನಕ್ಕೆ ಕಾರಣವಾಗುವುದು. 6. ಕಿಂಚ ಪ್ರತಿದಿನವೂ ಕರ್ಮಾನುಷ್ಠಾನ ಮಾಡುವವನು "ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ" ಎಂದು ಸಂಕಲ್ಪಮಾಡಿ ಕರ್ಮಗಳನ್ನು ಮಾಡುತ್ತಾ ಯಾರ ಪ್ರಸಾದಾರ್ಥವಾಗಿ ಇಷ್ಟು ಪ್ರಯಾಸಪೂರ್ವಕವಾದ ಮಹತ್ಕರ್ಮಗಳನ್ನು ಆಚರಿಸುವನೋ ಅಂಥಾ ಮಹಾ ಪುರುಷನ ಮಹಿಮೆಗಳನ್ನು ತಿಳಿಯಬೇಕೆಂದು ಇಚ್ಛಿಸುವುದು ಸಹಜವಾಗಿಯೂ ಇರುವುದು. ಆದುದರಿಂದ ಸತ್ಕರ್ಮಾನುಷ್ಠಾನವು ಭಗವತ್ಕಥಾರತಿಯನ್ನು ಉಂಟುಮಾಡುವುದೆಂದು ಹೇಳುವುದರಲ್ಲಿ ಅಸಂಭಾವನಾ

ಶಂಕೆಗೇ ಅವಕಾಶವಿರುವುದಿಲ್ಲ. 7. ಮತ್ತು ಭಗವಂತನಿಂದ ನಿಯತವಾದ ಶಾಸ್ತ್ರೋಕ್ತಕರ್ಮಗಳನ್ನು ಮಾಡದೆ ಕಾಮಚಾರೇಣ ಪ್ರವೃತ್ತರಾಗುವವರು ಅಸುರರು ಎಂದು ಶ್ರೀಕೃಷ್ಣನು ನಿಂದಿಸಿ, ಅವರಿಗೆ ಜಗತ್ತು ಮಿಥ್ಯಾ ಈಶ್ವರೋಽಹಂ ಇತ್ಯಾದಿದುಷ್ಟಜ್ಞಾನಗಳು ಬರುವುವು, ವಿಷ್ಣುಭಕ್ತಿಯು ಬರುವುದಿಲ್ಲ, ಮತ್ತು ಅವರು ವಿಷ್ಣುದ್ವೇಷರೂಪವಾದ ಆಚರಣೆಗಳಿಂದ ತಮಸ್ಸನ್ನು ಹೊಂದುತ್ತಾರೆ ಎಂದು ಹೇಳಿರುವನು. ಇದರಿಂದ ವಿಧ್ಯುಕ್ತಸಾತ್ವಿಕ ಕರ್ಮವೇ ಯಥಾರ್ಥಜ್ಞಾನಕ್ಕೆ ಕಾರಣವಾಗುವುದೆಂದೂ, ವಿಧಿವಿರುದ್ಧವಾದ ತಾಮಸ ಕರ್ಮಗಳು ಅಯಥಾರ್ಥಜ್ಞಾನಕ್ಕೆ ಕಾರಣವಾಗುವುವೆಂದೂ ಪ್ರಮಿತವಾಗುವುದು. ಆದುದರಿಂದ ಮುಮುಕ್ಷುಗಳಾದ ಸರ್ವರೂ ಶಾಸ್ತ್ರನಿಷಿದ್ಧ ಆಚರಣೆಗಳ ಪರಿತ್ಯಾಗಪೂರ್ವಕವಾಗಿ ಸ್ವವರ್ಣಾಶ್ರಮೋಚಿತವಾದ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಅತ್ಯಂತಶ್ರದ್ಧೆಯಿಂದ ಆಸಕ್ತರಾಗಬೇಕೆಂದು ನಿರೂಪಿಸಿರುತ್ತೇವೆ.

---

## 16. ಹದಿನಾರನೆಯ ಅಂಶವು.

### ಕರ್ಮಾನುಷ್ಠಾನವು (ಮುಂದುವರಿಸಿದ್ದು.)

### ಜ್ಞಾನಮಾರ್ಗವೂ, ಕರ್ಮಮಾರ್ಗವೂ ವಿರುದ್ಧವೇ?

### ಕರ್ಮಾನುಷ್ಠಾನದ ಅವಶ್ಯಕತೆಯು.

1. **ಶ್ರೀಶ್ರೀಗಳವರು:—** ಕರ್ಮಾನುಷ್ಠಾನವೂ, ಜ್ಞಾನಮಾರ್ಗವೂ ಪರಸ್ಪರ ವಿರುದ್ಧವಾದ ಅತ್ಯಂತ ಭಿನ್ನಮಾರ್ಗಗಳೆಂದು ಶಂಕರಾಚಾರ್ಯರು ಬರೆದಿರುತ್ತಾರೆ. ಕಾಮಿಗಳಾದ ಕರ್ಮಿಗಳು ಕರ್ಮಮಾರ್ಗದಲ್ಲಿ ಅಧಿಕಾರಿಗಳು, ಅಂಥವರಿಗೆ ಜ್ಞಾನಮಾರ್ಗದಲ್ಲಿ ಪ್ರವೇಶವಿಲ್ಲ. ಜ್ಞಾನಮಾರ್ಗದಲ್ಲಿ ಪ್ರವಿಷ್ಟರಾದ ಸಂನ್ಯಾಸಿಗಳು ಸಮಸ್ತ ಕರ್ಮಗಳನ್ನೂ ಅವಶ್ಯವಾಗಿ ಪರಿತ್ಯಾಗಮಾಡಿ ಆತ್ಮಧ್ಯಾನದಲ್ಲಿ ನಿರತರಾಗಬೇಕೆಂದು ಶಾಂಕರಗೀತಾಭಾಷ್ಯದಲ್ಲಿ ಅನೇಕ ವಚನಗಳಿರುತ್ತವೆ. ಕರ್ಮಮಾರ್ಗವೂ, ಜ್ಞಾನಮಾರ್ಗವೂ ಭಿನ್ನಪುರುಷಾನುಷ್ಠೇಯ

ವಾದ ಮತ್ತು ಒಬ್ಬಪುರುಷನಿಂದ ಅನುಷ್ಠಿಸಲ್ಪಡುವುದಕ್ಕೆ ಅಶಕ್ಯವಾದ ಭಿನ್ನ ಪದಾರ್ಥಗಳೆಂದು ಅವರು ಬಹುಸಾಹಸದಿಂದ ಪುನಃ ಪುನಃ ಉಪಪಾದಿಸಿರುತ್ತಾರೆ. * ಈ ಅಭಿಪ್ರಾಯಖಂಡನೆಯನ್ನು ಪೂರ್ವದಲ್ಲಿಯೇ ಮಾಡಿರುತ್ತೇವೆ. ಪ್ರಕೃತದಲ್ಲಿ ಜ್ಞಾನಮಾರ್ಗವೂ ಕರ್ಮಮಾರ್ಗ.... **ಸಮುಚ್ಚಿತ**ವಾಗಿಯೇ ಎಂದರೆ ಮಿಳಿತವಾಗಿಯೇ **ಅಪರೋಕ್ಷಜ್ಞಾನಕ್ಕೆ** ಕಾರಣವಾಗುತ್ತವೆ; ಅವುಗಳೆರಡೂ ಸಂನ್ಯಾಸಿ ಮತ್ತು ಗೃಹಸ್ಥರೆಂಬ ಭಿನ್ನ ಅಧಿಕಾರಿಗಳಿಂದ ಅನುಷ್ಠೇಯವಾದ ವಿರುದ್ಧಧರ್ಮಗಳಲ್ಲವೆಂಬ ಶ್ರೀಕೃಷ್ಣನ ಸಿದ್ಧಾಂತವನ್ನು ಸಂಗ್ರಹವಾಗಿ ಪ್ರತಿಪಾದಿಸುವೆವು.

1. ಸಂನ್ಯಾಸಿಯು ಸಾಂಖ್ಯಕ್ಕೆ ಅಧಿಕಾರಿಯು, ಗೃಹಸ್ಥನು ಕರ್ಮಕ್ಕೆ ಅಧಿಕಾರಿಯು ಎಂದು ಶಂಕರಾಚಾರ್ಯರು ಹೇಳಿರುತ್ತಾರಷ್ಟೇ! ಇದು ಕೃಷ್ಣನ

---

* ಇದು ಶಾಂಕರ ಗೀತಾಭಾಷ್ಯದ ತೃತೀಯಾಧ್ಯಾಯದ ವಚನವು:—

(1) "ಭಿನ್ನಪುರುಷಾನುಷ್ಠೇಯತ್ವೇನ ಜ್ಞಾನಕರ್ಮನಿಷ್ಠಯೋಃ" |

(2) ಭಿನ್ನಪುರುಷಾನುಷ್ಠೇಯತ್ವೇನ ಜ್ಞಾನಕರ್ಮನಿಷ್ಠಯೋಃ ಭಗವತಃ ಪ್ರತಿವಚನದರ್ಶನಾತ್ ಜ್ಞಾನಕರ್ಮಣೋಃ ಸಮುಚ್ಚಯಾನುಪಪತ್ತಿಃ ||

"ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ" ಎಂಬ ಶ್ಲೋಕವ್ಯಾಖ್ಯಾನಾವಸರದಲ್ಲಿ ಹೀಗೆ ಬರೆದಿರುತ್ತಾರೆ:—

(3) ಲೋಕೇಽಸ್ಮಿನ್ ಶಾಸ್ತ್ರಾರ್ಥಾನುಷ್ಠಾನಾಧಿಕೃತಾನಾಂ ತ್ರೈವರ್ಣಿಕಾನಾಂ ದ್ವಿವಿಧಾ ದ್ವಿಪ್ರಕಾರಾ ನಿಷ್ಠಾ ಸ್ಥಿತಿಃ ................ತತ್ರ ಜ್ಞಾನಯೋಗೇನ ಜ್ಞಾನಮೇವ ಯೋಗಃ ತೇನ ಸಾಂಖ್ಯಾನಾಂ ಆತ್ಮಾನಾತ್ಮವಿಷಯವಿವೇಕವಿಜ್ಞಾನವತಾಂ ಬ್ರಹ್ಮಚರ್ಯಾಶ್ರಮಾದೇವ ಕೃತಸಂನ್ಯಾಸಾನಾಂ ವೇದಾಂತವಿಜ್ಞಾನಸುನಿಶ್ಚಿತಾರ್ಥಾನಾಂ ಪರಮಹಂಸಪರಿವ್ರಾಜಕಾನಾಂ ಬ್ರಹ್ಮಣ್ಯೇವ ಅವಸ್ಥಿತಾನಾಂ ನಿಷ್ಠಾ ಪ್ರೋಕ್ತಾ ಕರ್ಮಯೋಗೇನ ಕರ್ಮೈವ ಯೋಗಃ ಕರ್ಮಯೋಗಃ ತೇನ ಕರ್ಮಯೋಗೇನ ಕರ್ಮಿಣಾಂ ನಿಷ್ಠಾ ಪ್ರೋಕ್ತಾ ಇತ್ಯರ್ಥಃ || ಯದಿ ಚ ಏಕೇನ ಪುರುಷೇಣ ಏಕಸ್ಮೈ ಪುರುಷಾರ್ಥಾಯ ಜ್ಞಾನಂ ಕರ್ಮ ಚ ಸಮುಚ್ಚಿತ್ಯ ಅನುಷ್ಠೇಯಂ ಭಗವತಾ ಇಷ್ಟಂ ಉಕ್ತಂ ........ ಕಥಮಿಹ ಅರ್ಜುನಾಯ ಉಪಸನ್ನಾಯ ಪ್ರಿಯಾಯ ವಿಶಿಷ್ಟಭಿನ್ನಪುರುಷಕರ್ತೃಕೇ ಏವ ಜ್ಞಾನಕರ್ಮನಿಷ್ಠೇ ಬ್ರೂಯಾತ್?........ತಸ್ಮಾತ್ ಕಯಾಪಿ ಯುಕ್ತ್ಯಾ ನ ಸಮುಚ್ಚಯೋ ಜ್ಞಾನಕರ್ಮಣೋಃ ||

ಕ್ರೋಧಾಗ್ನಿಗೆ ವಶವಾದ ಇದ್ದಲಿಸಂಥಾ ಕೆಟ್ಟವಾದವು. ಹೇಗೆಂದರೆ ತಲೆಯನ್ನು ಬೋಳಿಸಿಕೊಂಡು ಆಶ್ರಮವನ್ನು ಸ್ವೀಕರಿಸಿದವನೇ ಸಂನ್ಯಾಸಿಯು ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಲಿಲ್ಲ. "ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ", "ಅನಾಶ್ರಿತಃ ಕರ್ಮಫಲಂ....ಸ ಸಂನ್ಯಾಸೀ" ಇತ್ಯಾದಿ ಬಹುವಾಕ್ಯಗಳಿಂದ ರಾಗದ್ವೇಷರಹಿತರಾದ ಕಾಮ್ಯ ಕರ್ಮಗಳನ್ನು ಪರಿತ್ಯಾಗಮಾಡಿದ ಬ್ರಹ್ಮಚಾರಿಗೃಹಸ್ಥಾದಿ ಸರ್ವ ಅಧಿಕಾರಿಗಳೂ ಸಂನ್ಯಾಸಿಗಳೇ ಆಗಿರುತ್ತಾರೆ. ವಿಷಯಕಾಮರಹಿತನು ಕರ್ಮಮಾಡಕೂಡದೆಂದು ಶ್ರೀಕೃಷ್ಣನು ಹೇಳಿರುವುದಿಲ್ಲ. ಪ್ರತ್ಯುತ, ಕಾಮಾದಿರಹಿತನು ನಿಷ್ಕಾಮನಾಗಿ ಕರ್ಮಾನುಷ್ಠಾನವನ್ನು ಮಾಡಿ ಭಗವದರ್ಪಣೆಯನ್ನು ಮಾಡಬೇಕೆಂದು ಹೇಳಿರುತ್ತಾನೆ. ಕರ್ಮವನ್ನು ಮಾಡದ ಕೇವಲ ಸಂನ್ಯಾಸಿಯು ದುಃಖಭಾಗಿಯಾಗುತ್ತಾನೆಂದು ಹೇಳಿರುವನು :—

**(1) ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ।**

ಎಲೈ ಮಹಾಬಾಹುವೇ ! ಕರ್ಮಾನುಷ್ಠಾನರೂಪವಾದ ಯೋಗದಿಂದ ಸಹಕೃತವಲ್ಲದ ಕೇವಲ ಸಂನ್ಯಾಸವು ನರಕಾದ್ಯನರ್ಥಗಳಿಗೇ ಕಾರಣವಾಗುತ್ತದೆ. ಸಂನ್ಯಾಸವು ಯೋಗ(ಕರ್ಮ)ದಿಂದ ಸಹಕೃತವಾದರೆ ಬ್ರಹ್ಮಾಪರೋಕ್ಷ ಜ್ಞಾನಕ್ಕೆ ಸಾಧನವಾಗುವುದೆಂದೂ ಶ್ರೀಕೃಷ್ಣನು ಹೇಳಿರುತ್ತಾನೆ :—

**(2) ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥**

ಕರ್ಮಾನುಷ್ಠಾನದಿಂದ ಸಹಿತನಾದ ಸಂನ್ಯಾಸವುಳ್ಳ ಮುನಿಯು ಶೀಘ್ರದಲ್ಲಿ ಬ್ರಹ್ಮನನ್ನು ಹೊಂದುತ್ತಾನೆ.

2. ಕಿಂಚ ಸಾಂಖ್ಯವನ್ನು ಅವಲಂಬಿಸಿದವರು ಕರ್ಮವನ್ನು ಮಾಡಬಾರದೆಂದು ಎಲ್ಲಿಯೂ ಕೃಷ್ಣನು ಹೇಳಿರುವುದಿಲ್ಲ. ವೇದಾಂತ ತತ್ವಜ್ಞಾನವನ್ನು ಹೊಂದಿದವನು ವೈರಾಗ್ಯದಿಂದ ಉಪೇತನಾಗಿ ಹೆಚ್ಚು ನಿಷ್ಕಾಮತೆಯಿಂದ ಕರ್ಮಗಳನ್ನು ಮಾಡುತ್ತಾ ಪರಮಾತ್ಮನ ಧ್ಯಾನವನ್ನು ಮಾಡಿದರೆ ಬ್ರಹ್ಮಾಪರೋಕ್ಷಜ್ಞಾನವನ್ನು ಹೊಂದುವನು. ಅಪರೋಕ್ಷಜ್ಞಾನ ಪರ್ಯಂತವಂತೂ ಸ್ವವರ್ಣಾಶ್ರಮೋಚಿತ ಧರ್ಮಗಳನ್ನು ಸರ್ವಥಾ ಪರಿತ್ಯಾಗ ಮಾಡ

ಕೂಡದು; ಸಮಾಧಿಪರಿಪಾಕವು ಪ್ರಾಪ್ತವಾಗುವವರೆವಿಗೂ ಕರ್ಮಾನುಷ್ಠಾನವನ್ನು ಬಿಡಕೂಡದೆಂದು ಶ್ರೀಕೃಷ್ಣನು ಹೇಳುತ್ತಾನೆ:—

(3) **ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।**
**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥**
—(2. 53.)

ಶ್ರುತಿಗಳ ಆಪಾತತಃ ವಿರುದ್ಧವಾಕ್ಯಗಳಿಂದ ಸಂಶಯಗ್ರಸ್ತವಾದ ನಿನ್ನ ಬುದ್ಧಿಯು ಯಾವಾಗ ಸಂಶಯರಹಿತವಾಗಿ ನಿಶ್ಚಲವಾಗುತ್ತದೋ ಆಗ ಸಮಾಧಿಧ್ಯಾನವು ಲಭಿಸುವುದು. ಅಂಥಾ ಸಮಾಧಿಧ್ಯಾನವು ಲಬ್ಧವಾದರೆ ಯೋಗಮವಾಪ್ಸ್ಯಸಿ—ಅದುವರೆವಿಗೂ ಅನುಷ್ಠಿತವಾದ ನಿಷ್ಕಾಮ ಕರ್ಮರೂಪವಾದ ಉಪಾಯವು ಪೂರ್ತಿಯನ್ನು ಹೊಂದುವದು. (ಎಂದರೆ ಅಪರೋಕ್ಷಜ್ಞಾನ ಪರ್ಯಂತವೂ ಕರ್ಮರೂಪವಾದ ಉಪಾಯವನ್ನು ಆಚರಿಸುತ್ತಲೇ ಇರಬೇಕೆಂದು ಭಾವವು.)

3. ವೇದಾಂತಜ್ಞಾನದಿಂದ ಸಹಿತವಾಗಿ ಕರ್ಮಫಲಾಪೇಕ್ಷಾರಹಿತವಾಗಿ ಮಾಡಿದ ಕರ್ಮಗಳೇ ಉತ್ತಮಕರ್ಮಗಳು, ಅವುಗಳೇ ಬಂಧಕವಾಗದೆ ಸಂಸಾರತರಣಕ್ಕೆ ಕಾರಣವಾಗುವವು ಎಂದು ಸಹ ಶ್ರೀಕೃಷ್ಣನು ಹೇಳುತ್ತಾನೆ:—

(4) **ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥**
**ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।**
**ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥**
**ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।**
**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥**
—(4. 18-20.)

ಈ ಶ್ಲೋಕಗಳು ಪೂರ್ವದಲ್ಲಿಯೇ (ಪುಟ 122-123.) ವ್ಯಾಖ್ಯಾತವಾಗಿರುವುವು.

ಇನ್ನೂ ಉತ್ತರಶ್ಲೋಕದಲ್ಲಿ ಶ್ರೀಕೃಷ್ಣನು ಜ್ಞಾನಕರ್ಮಸಂನ್ಯಾಸಗಳು ಮೂರೂ (ತ್ಯಾಗವೂ ಸೇರಿ ನಾಲ್ಕೂ) ಮಿಳಿತವಾಗಿಯೇ ಕರ್ಮಕ್ಷಯಕ್ಕೆ ಕಾರಣವಾಗುವುವು ಎಂದು ಸ್ಪಷ್ಟವಾಗಿ ಹೇಳುತ್ತಾನೆ:—

(5) **ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।**
**ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥**
—(4. 23.)

ಈ ಶ್ಲೋಕವೂ ಪೂರ್ವದಲ್ಲಿಯೇ (ಪುಟ 123) ವ್ಯಾಖ್ಯಾತವಾಗಿರುವುದು

4. ಪರಂತು ಜ್ಞಾನಮಾರ್ಗದಲ್ಲಿ ಅಧಿಕಾರಿಯೆಂದು ಪ್ರಸಿದ್ಧನಾದ ಇಂದ್ರಾವತಾರನಾದ ಅರ್ಜುನನಿಗೇ ಶ್ರೀಕೃಷ್ಣನು **"ಕುರು ಕರ್ಮೈವ ತಸ್ಮಾತ್ ತ್ವಂ ಪೂರ್ವೈಃ ಪೂರ್ವತರಂ ಕೃತಂ"** ಎಂದು ವಿಧಿಸಿರುವುದರಿಂದಲೂ ಜ್ಞಾನ ಮಾರ್ಗವೂ ಕರ್ಮಮಾರ್ಗವೂ ಭಿನ್ನಪುರುಷಾನುಷ್ಠೇಯವಾದ ವಿರುದ್ಧ ಧರ್ಮಗಳಲ್ಲವೆಂದು ನಿಶ್ಚಿತವಾಗುವುದು. ಅರ್ಜುನನು ಸಾಂಖ್ಯಕ್ಕೆ ಎಂದರೆ ವೇದಾಂತ ಜ್ಞಾನಕ್ಕೆ ಅನರ್ಹನಾದ ಕರ್ಮಿಯು ಎಂದು ಶಂಕರಾಚಾರ್ಯರು ಧೈರ್ಯವಾಗಿ ಬರೆದಿರುತ್ತಾರೆ :—

**"ಕುರು ಕರ್ಮೈವ ತಸ್ಮಾತ್ ತ್ವಂ ಇತಿ ಚ ಜ್ಞಾನನಿಷ್ಠಾಸಂಭವಂ ಅರ್ಜುನಸ್ಯ ಅವಧಾರಣೇನ ದರ್ಶಯಿಷ್ಯತಿ ।"** ಶಾಂಕರಗೀತಾ ಭಾಷ್ಯಂ.

**ಅರ್ಥವು:**—ಕರ್ಮವನ್ನೇ ಮಾಡು ಎಂಬ ವಿಧಿಯಿಂದ ಶ್ರೀಕೃಷ್ಣನು ಅರ್ಜುನನಿಗೆ ಜ್ಞಾನನಿಷ್ಠೆಯು ಅಸಾಧ್ಯವೆಂದು (ಅವಧಾರಣೆಯಿಂದ) ನಿಶ್ಚಯ ಪೂರ್ವಕವಾಗಿ ತೋರಿಸುತ್ತಾನೆ.

ಅಸಿತ, ದೇವಲ, ವೇದವ್ಯಾಸಾದಿಗಳಿಂದ ಶಿಕ್ಷಿತನಾದ, ಪರಬ್ರಹ್ಮನ ವಿರಾಡ್ರೂಪವನ್ನು ದಿವ್ಯಚಕ್ಷುಸ್ಸಿನಿಂದ ನೋಡಿ ಸರ್ವಜ್ಞನಾದ ಇಂದ್ರ ನಂದನನು ಕರ್ಮಿಯೆಂದು ಪಾಷಾಣಹೃದಯವುಳ್ಳವನು ಹೇಳಬೇಕೇ ಹೊರ ತು ಶ್ರುತಿ ಸ್ಮೃತಿ ವಿಮರ್ಶೆಯಿಂದ ದ್ರವೀಕೃತಚಿತ್ತವುಳ್ಳ ದೇವತಾರಹಸ್ಯ ವನ್ನು ತಿಳಿದ ವಿವೇಕಿಯು ಹೇಳಲಾರನು. ಕರ್ಮಾನುಷ್ಠಾನವೂ, ಸಾಂಖ್ಯವೂ ಸಂನ್ಯಾಸವೂ, ತ್ಯಾಗವೂ, ಮಿಳಿತವಾಗಿಯೇ ಫಲಪ್ರದವೆಂದು ತಿಳಿದೇ ಶ್ರೀ ಕೃಷ್ಣನು ವಿಶೇಷಪುಣ್ಯಕರವಾದ ಅಸಿತರಸಾಧಾರಣವಾದ ದಿವ್ಯಸಾಧನೆ ಯನ್ನು ಅರ್ಜುನನಿಗೆ ಉಪದೇಶ ಮಾಡಿರುತ್ತಾನೆ:—

(6) **ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥**
—(3. 30-)

ಈ ಶ್ಲೋಕಾರ್ಥವು ಪೂರ್ವದಲ್ಲಿಯೇ (ಪುಟ 134) ನಿರೂಪಿತವಾಗಿರುವುದು.

ಶ್ರೀಕೃಷ್ಣನು ಕಾಮದಿಂದ ಸಹಿತನಾಗಿ ಪುತ್ರಾದ್ಯರ್ಥಿಯಾದ ತುಚ್ಛ ಗೃಹಸ್ಥನಂತೆ ಕರ್ಮವನ್ನು ಮಾಡಬೇಕೆಂದು ವಿಧಿಸಲಿಲ್ಲ.

ಚತುರಂಶಸಹಿತವಾದ ಸಮಗ್ರಕರ್ಮಯೋಗವೇ ಬ್ರಹ್ಮಜ್ಞಾನಕಾರಣವಾಗಿ ಮುಕ್ತಿಪ್ರಾಪಕವಾಗುವುದೆಂದು ಶ್ರೀಕೃಷ್ಣನ ಹನ್ನೊಂದನೆಯ ಅಧ್ಯಾಯದ ಶ್ಲೋಕದಿಂದ ನಿಶ್ಚಿತವಾಗುವುದು.

**(7) ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥**
**—(11. 55.)**

"ಎಲೈ ಅರ್ಜುನನೇ! ಮತ್ಪರಮಃ—ನಾನೇ (ಶ್ರೀಕೃಷ್ಣನೇ) ಸರ್ವೋತ್ತಮನೆಂಬ ಜ್ಞಾನಪೂರ್ವಕವಾಗಿ, ಸಂಗವರ್ಜಿತಃ—ಕರ್ಮಫಲಗಳಲ್ಲಿ ಸ್ನೇಹರಹಿತನಾಗಿ ಮತ್ತು ವಿಷಯಗಳಲ್ಲಿ ಸ್ನೇಹರಹಿತನಾಗಿ, ಎಂದರೆ ಸಾಂಖ್ಯರೂಪವಾದ ವೇದಾಂತಜ್ಞಾನದಲ್ಲಿ ಸ್ಥಿತಿಯುಳ್ಳವನಾಗು" ಎಂದು ವಿಧಾನವನ್ನು ಮಾಡಿರುತ್ತಾನೆ. ಒಬ್ಬನೇ ಅರ್ಜುನನಿಗೆ **"ಕುರು ಕರ್ಮ" "ಬುದ್ಧೌ ಶರಣಮನ್ವಿಚ್ಛ"** ಎಂಬ ಎರಡು ಉಪದೇಶಗಳನ್ನೂ ಶ್ರೀಕೃಷ್ಣನು ಮಾಡಿರುವುದರಿಂದ ಜ್ಞಾನಕರ್ಮಗಳೆರಡೂ ಏಕತ್ರ ಇರಬಹುದಾದ ಧರ್ಮಗಳೆಂದೇ ಸಿದ್ಧವಾಗುವುದು, **'ಕುರು ಕರ್ಮೈವ'** ಎಂಬಲ್ಲಿರುವ **"ಏವ"** ಕಾರವು ನೀನು ಕರ್ಮವನ್ನು ಮಾಡಿಯೇ ಮಾಡು; ಅದು ಜ್ಞಾನಿಯಾದ ನಿನಗೂ ಪ್ರಯೋಜನವುಳ್ಳದ್ದು, ನಿರರ್ಥಕವಲ್ಲವೆಂದು ಬೋಧಿಸುವುದು. **"ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ"** ಎಂದಷ್ಟೇ ಶ್ರೀಕೃಷ್ಣನು ಹೇಳಿರುವನು.

2. **ಪ್ರಶ್ನೆ:**—ಸ್ವಾಮಿ! ಅರ್ಜುನನು ಜ್ಞಾನಿಯಾಗಿದ್ದರೆ, ಮತ್ತು ಜ್ಞಾನಕರ್ಮಗಳು ಭಿನ್ನಪುರುಷಾನುಷ್ಠೇಯವಾದ ಎರಡು ಧರ್ಮಗಳಲ್ಲದಿದ್ದರೆ ಶ್ರೀಕೃಷ್ಣನು,

**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।**
**ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ ॥**

ಎಂದು ಹೇಳಿ ಅನಂತರ "ಕುರು ಕರ್ಮೈವ ತಸ್ಮಾತ್ತ್ವಂ" ಎಂದು ವಿಧಿಸಲು ಕಾರಣವೇನು?

**ಉತ್ತರ:— ಶ್ರೀಶ್ರೀಗಳವರು:—** ಅರ್ಜುನನ ಪ್ರಶ್ನೆಯನ್ನು ವಿಮರ್ಶೆ ಮಾಡಿ ನಂತರ ಶ್ರೀಕೃಷ್ಣನ ಉತ್ತರವನ್ನು ಪರಾಮರ್ಶಿಸಿದರೆ ಸಕಲವೂ ವಿದಿತವಾಗುವುದು. ಇದು ಅರ್ಜುನನ ಪ್ರಶ್ನೆಯು:—

**ಅರ್ಜುನ ಉವಾಚ:—**

(1) **ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।**
**ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥**
**ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।**
**ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಂ ॥**
—(3. 1-2.)

**ಅರ್ಥ:**— ಅರ್ಜುನನು ಹೇಳುತ್ತಾನೆ— ಎಲೈ ಜನಾರ್ದನನೇ! ಬುದ್ಧಿಯೋಗವು ಕರ್ಮಯೋಗಕ್ಕಿಂತ ಶ್ರೇಷ್ಠವೆಂದು ನಿನ್ನ ಅಭಿಪ್ರಾಯವಿರುವುದಾದರೆ ನನ್ನನ್ನು ಈ ಘೋರವಾದ ಯುದ್ಧದಲ್ಲಿ ಯಾತಕ್ಕೆ ಪ್ರೇರಿಸುತ್ತೀಯೇ? ಪರಸ್ಪರ ವಿರುದ್ಧಾರ್ಥಗಳಿಂದ ಸಹಿತವಾದ ಸಂದೇಹಜನಕವಾದ ವಾಕ್ಯದಿಂದ ನನ್ನ ಬುದ್ಧಿಯನ್ನು ಮೋಹಮಾಡುವವನಂತೆ ತೋರುತ್ತೀಯೆ. ಆದುದರಿಂದ ಎಲೈ ಕೇಶವನೇ! ಯಾವ ಒಂದು ಆಚರಣೆಯಿಂದ ನಾನು ನಿಶ್ಚಯವಾಗಿ ಶ್ರೇಯಸ್ಸನ್ನು ಹೊಂದುವೆನೋ ಅಂಥಾ ಮುಖ್ಯ ಶ್ರೇಯಸ್ಸಾಧನವನ್ನು ನಿರ್ಣಯವಾಗಿ ನನಗೆ ಹೇಳು.

ಇಷ್ಟು ಈ ಶ್ಲೋಕಗಳ ಅಕ್ಷರಾರ್ಥವು. ಶ್ರೀಕೃಷ್ಣನು ದ್ವಿತೀಯಾಧ್ಯಾಯದಲ್ಲಿ ಮಾಡಿದ ಉಪದೇಶದಲ್ಲಿ ಆಪಾತತಃ ಪರಸ್ಪರ ವಿರುದ್ಧ ಮಾತುಗಳನ್ನೇ ಹೇಳಿದನು. ಹೇಗೆಂದರೆ,

(2) **ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।**
**ತತೋ ಯುದ್ಧಾಯ ಯುಜ್ಯಸ್ವ ... .... ॥**

ಎಂಬಲ್ಲಿ, ಮತ್ತು "ತಸ್ಮಾದುತ್ತಿಷ್ಠ ಕೌಂತೇಯ" ಯುದ್ಧಾಯ "ಕೃತನಿಶ್ಚಯಃ" ಎಂಬಲ್ಲಿಯೂ, ಇನ್ನೂ ಎರಡು ಮೂರು ವಾಕ್ಯಗಳಲ್ಲಿಯೂ

ಯುದ್ಧವನ್ನು ಪ್ರಶಂಸೆ ಮಾಡಿ ಅರ್ಜುನನು ಯುದ್ಧಮಾಡಬೇಕೆಂದು ಪ್ರೇರಿಸಿದನು. ಪುನಃ ನಲವತ್ತೆಂಟನೆಯ ಶ್ಲೋಕದಲ್ಲಿ **ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ** ಎಂದರೆ ಯೋಗೋಪಾಯದಲ್ಲಿ ರತನಾಗಿ ಕರ್ಮವನ್ನು ಮಾಡು ಎಂದು ವಿಧಿಸಿದನು. ಅನಂತರ ಇದರ ಮುಂದಿನ ಶ್ಲೋಕದಲ್ಲಿಯೇ (49ನೆಯ ಶ್ಲೋಕದಲ್ಲಿಯೇ) ಕರ್ಮವು ಅಧಮವು, ನೀನು ಅದನ್ನು ಪರಿತ್ಯಾಗ ಮಾಡು ಎಂದು ಹೇಳುವನು:—

(3) **ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ |**
**ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ||**
(2. 49.)

ಎಲೈ ಧನಂಜಯನೇ! ಕರ್ಮಯೋಗವು ಬುದ್ಧಿಯೋಗಕ್ಕಿಂತ ಅತ್ಯಂತ ನೀಚವಾದುದು. ಆದುದರಿಂದ ನೀನು ಬುದ್ಧಿಯನ್ನು ಶರಣು ಹೊಂದು. ಫಲಾಪೇಕ್ಷಿಗಳು ದೀನರು.

ಆಪಾತತಃ ವ್ಯಾಹತಿಗೆ ಇದಕ್ಕಿಂತ ಬೇರೆ ದೃಷ್ಟಾಂತವು ಬೇಕಿಲ್ಲ. ನಲವತ್ತೆಂಟನೆಯ ಶ್ಲೋಕದಲ್ಲಿ **"ಯೋಗಸ್ಥಃ ಕುರು ಕರ್ಮಾಣಿ"** ಎಂದು ವಿಧಿಸಿ ನಲವತ್ತೊಂಭತ್ತನೆಯ ಶ್ಲೋಕದಲ್ಲಿ ನೀನು "**ಬುದ್ಧಿ**"ಯಲ್ಲಿ ಶರಣು ಹೊಂದು, ಕರ್ಮವು ನೀಚವು ಎಂದು ಉಪದೇಶಮಾಡಿದರೆ ಸಂದೇಹವು ಯಾರಿಗೆ ತಾನೇ ಹುಟ್ಟದಿರುವುದು?

ಶಂಕರಾಚಾರ್ಯರ ಅಭಿಪ್ರಾಯದಲ್ಲಿ "ಕುರು ಕರ್ಮಾಣಿ" ಇತ್ಯಾದಿ ವಿಧಿಗಳು ಅಜ್ಞರಿಗೆ ಕರ್ಮ ದೃಷ್ಟಿಯನ್ನು ಅನುಸರಿಸಿ ಹೇಳಿದ್ದು; "ಬುದ್ಧೌ ಶರಣಮನ್ವಿಚ್ಛ" ಇತ್ಯಾದಿ ಉಪದೇಶವು ಸಾಂಖ್ಯ ದೃಷ್ಟಿಯನ್ನು ಅನುಸರಿಸಿದ ಪರಮಾರ್ಥ ತತ್ವವು; "ಬುದ್ಧೌ ಶರಣಮನ್ವಿಚ್ಛ" ಎಂದರೆ "ಪರಮಾರ್ಥಜ್ಞಾನ ಶರಣೋಭವ ಇತ್ಯರ್ಥಃ" ಎಂದು ಬರೆದಿರುವರು.

ಇದರಿಂದ ಏನು ತಿಳಿದುಬರುವುದೆಂದರೆ ಪ್ರಾಜ್ಞನಾದ ಪರಬ್ರಹ್ಮನಾದ ಶ್ರೀಕೃಷ್ಣನು ಪ್ರಿಯಶಿಷ್ಯನಾದ ಒಬ್ಬನೇ ಅರ್ಜುನನಿಗೆ ಈ ಎರಡು ವಿಧಿಗಳನ್ನೂ ಮಾಡಿರುವುದರಿಂದ ಇಲ್ಲಿ ನಿರೂಪಿತವಾಗಿರುವ ಸಾಂಖ್ಯವೂ ಕರ್ಮವೂ ಪರಸ್ಪರ ವಿರುದ್ಧವಾದ ಏಕಪುರುಷನಿಂದ ಒಂದೇ ಕಾಲದಲ್ಲಿ ಅನುಷ್ಠಿಸಲ್ಪಡು

ವುದಕ್ಕೆ ಅನರ್ಹವಾದ ಎರಡು ಪದಾರ್ಥಗಳಲ್ಲ. ಮತ್ತೇನೆಂದರೆ ಒಬ್ಬನೇ ಅರ್ಜುನನು ಒಂದೇ ಯುದ್ಧ ಕಾಲದಲ್ಲಿ ಎರಡು ವಿಧಿಗಳನ್ನು ಅನುಷ್ಠಿಸಬೇಕೆಂದು ಅವನ ಮತವಿರುತ್ತದೆ ಎಂದು ಸಿಶ್ಚಿತವಾಗುವುದು. ಆದುದರಿಂದ ನಾವು ಈ ಎರಡು ಶ್ಲೋಕಗಳಿಗೆ ಆಪಾತತಃ ತೋರುವ ವಿರೋಧವನ್ನು ಪ್ರಕರಣಪರ್ಯಾಲೋಚನೆಯಿಂದ ಸಮೀಚೀನವಾದ ಅರ್ಥದಿಂದ ಪರಿಹರಿಸಬೇಕು. ಹಾಗಿಲ್ಲದೆ ಶಂಕರಾಚಾರ್ಯರು ಹೇಳುವಂತೆ ಎರಡು ಭಿನ್ನದೃಷ್ಟಿಗಳಿಂದ ಶ್ರೀಕೃಷ್ಣನು ಒಬ್ಬ ಅಧಿಕಾರಿಗೆ ಉಪದೇಶ ಮಾಡಿದನೆಂದು ಒಪ್ಪುವುದಾದರೆ, ಅದೇ ಬಾಯಿಯಿಂದಲೇ ಶ್ರೀಕೃಷ್ಣನು ಬುದ್ಧಿಶೂನ್ಯನಾದ ಕುರುಬರ ಹುಡುಗನು ಎಂದೂ ಉತ್ಕೀರ್ತನ ಮಾಡುವುದಕ್ಕೆ ಸಿದ್ಧರಾಗಬೇಕು.

ವಸ್ತುತಃ ಸರ್ವಜ್ಞನಾದ ಶ್ರೀಕೃಷ್ಣನು ವಿರುದ್ಧೋಪದೇಶವನ್ನು ಮಾಡಿಲ್ಲ. ಹೇಗೆಂದರೆ ನಲವತ್ತೆಂಟನೆಯ ಶ್ಲೋಕದಲ್ಲಿ "ಯೋಗಸ್ಥಃ ಕುರು ಕರ್ಮಾಣಿ" ಎಂದು ಜ್ಞಾನೋಪಾಯಕ್ಕೆ ಸಾಧಕವಾದ "ನಿಷ್ಕಾಮಯುದ್ಧ ಕರ್ಮವನ್ನು ಮಾಡು" ಎಂದು ಹೇಳಿದನು. ನಲವತ್ತೊಂಭತ್ತನೆಯ ಶ್ಲೋಕದಲ್ಲಿ "ಕೃಪಣಾಃ ಫಲಹೇತವಃ" ಎಂದರೆ ಫಲಾಪೇಕ್ಷಿಗಳು ದುಃಖಭಾಗಿಗಳಾಗುವರು ಎಂದು ಹೇಳಿ, ಫಲಾಪೇಕ್ಷೆಯಿಂದ ಸಹಿತವಾದ ಕಾಮ್ಯಕರ್ಮವನ್ನು ನಿಂದಿಸಿ ಬುದ್ಧೌ ಶರಣಮನ್ವಿಚ್ಛ=ಎಂದರೆ **ಜ್ಞಾನಸಾಧನದಲ್ಲಿ** (ನಿಷ್ಕಾಮ ಕರ್ಮ ಧ್ಯಾನಾದಿಗಳಲ್ಲಿ) ತತ್ಪರನಾಗು ಎಂದೇ ಹೇಳಿದನು. ವಿರೋಧವೆಲ್ಲಿಂದ ಬಂತು? 'ನಿಷ್ಕಾಮಕರ್ಮವನ್ನು ಮಾಡು' ಎಂಬ ವಿಧಿಗೂ 'ಕಾಮ್ಯಕರ್ಮವು ಜ್ಞಾನೋಪಾಯಕ್ಕಿಂತ ಅಧಮವು; ನೀನು ಜ್ಞಾನೋಪಾಯದಲ್ಲಿ ಆಸಕ್ತನಾಗು' ಎಂಬ ಉಪದೇಶಕ್ಕೂ ಚಿನ್ನದ ಸರಪಣಿಯಂತೆ ಅನ್ವಯವಿರುವುದೇ ಹೊರತು ವಿರೋಧವೇ ಇಲ್ಲ. ಇಷ್ಟು ಸೂಕ್ಷ್ಮವಿಚಾರವನ್ನು ಶ್ರೀಕೃಷ್ಣನ ಮುಖದಿಂದ ಹೊರಡಿಸಬೇಕೆಂದೇ ರಾಗದ್ವೇಷಾದಿಗಳಿಂದ ಪೂರ್ಣವಾದ ಯುದ್ಧಾದಿ ಘೋರ ಕರ್ಮಗಳು ನಿಂದ್ಯಕರ್ಮಗಳೇ, ಇವು ಜ್ಞಾನೋಪಾಯಗಳಾಗಲಾರವು ಎಂದು ಶಂಕಿಸಿಕೊಂಡು ಕೃಷ್ಣನನ್ನು ಅರ್ಜುನನು ಪ್ರಶ್ನೆಮಾಡಿದನು: **"ಎಲೈ ಕೃಷ್ಣನೇ ಉತ್ತಮವಾದ ಜ್ಞಾನೋಪಾಯದಲ್ಲಿ ನನ್ನನ್ನು ಪ್ರೇರಿಸದೆ ಕಾಮ್ಯವಾದ ಯುದ್ಧಾದಿಕರ್ಮಗಳಲ್ಲಿ ನನ್ನನ್ನು ಯಾತಕ್ಕೆ ಪ್ರೇರಿಸುತ್ತೀ?"**

ಇದು ಅರ್ಜುನನಿಂದ ವಿವಕ್ಷಿತವಾದ ಪ್ರಥಮಪ್ರಶ್ನೆಯು. ಇದಕ್ಕೆ ಶ್ರೀಕೃಷ್ಣನು ಕೊಟ್ಟ ಉತ್ತರವನ್ನು ಮುಂದೆ ನಿರೂಪಿಸುವೆವು.

ಮತ್ತೊಂದು ಪ್ರಶ್ನೆಯೂ ಅರ್ಜುನನಿಂದ ವಿವಕ್ಷಿತವಾಗಿರುವುದು. "ಯೋಗಸ್ಥಃ ಕುರು ಕರ್ಮಾಣಿ" ಎಂಬಲ್ಲಿ ನಿಷ್ಕಾಮನಾಗಿ ಯುದ್ಧಾದಿಕರ್ಮವನ್ನು ಮಾಡು ಎಂದು ಶ್ರೀಕೃಷ್ಣನು ಹೇಳಿದನು. "ಬುದ್ಧೌ ಶರಣಮನ್ವಿಚ್ಛ" ಎಂಬಲ್ಲಿ ಜ್ಞಾನೋಪಾಯದಲ್ಲಿ ತತ್ಪರನಾಗು ಎಂದು ಬೋಧಿಸಿದನು. ಯದ್ಯಪಿ ನಿಷ್ಕಾಮಕರ್ಮವೇ ಜ್ಞಾನೋಪಾಯವು. ನಿಷ್ಕಾಮನಾಗಿ ಯುದ್ಧಾದಿ ಸ್ವಧರ್ಮರೂಪವಾದ ಜ್ಞಾನೋಪಾಯದಲ್ಲಿ ತತ್ಪರನಾಗು ಎಂದು ಶ್ರೀಕೃಷ್ಣನ ಅಭಿಪ್ರಾಯವು. ಆದರೆ ಇಲ್ಲಿ ಬೇರೆ ಒಂದು ಶಂಕೆಗೆ ಅವಕಾಶವಿರುವುದು. ಹೇಗೆಂದರೆ ಜ್ಞಾನೋಪಾಯಗಳು ದ್ವಿವಿಧವಾಗಿರುವುವು. ನಿಷ್ಕಾಮಕರ್ಮವು ಒಂದು ಜ್ಞಾನೋಪಾಯವು. ನಿಷ್ಕಾಮ ಶ್ರವಣಮನನಧ್ಯಾನಾದಿಗಳು ಒಂದು ಜ್ಞಾನೋಪಾಯವು. **ನಿಷ್ಕಾಮಕರ್ಮ**ರೂಪವಾದ ಜ್ಞಾನೋಪಾಯಕ್ಕಿಂತ **ನಿಷ್ಕಾಮಧ್ಯಾನ**ರೂಪವಾದ ಜ್ಞಾನೋಪಾಯವು ಶ್ರೇಷ್ಠವು. ಆದರೆ "ಯುದ್ಧಾಯ ಯುಜ್ಯಸ್ವ" ಎಂಬಲ್ಲಿ ಶ್ರೀಕೃಷ್ಣನು ಅಧಮವಾದ ನಿಷ್ಕಾಮ ಯುದ್ಧಾದಿಕರ್ಮರೂಪವಾದ ಜ್ಞಾನಸಾಧನವನ್ನೇ ತನಗೆ ಉಪದೇಶಮಾಡಿಬಿಟ್ಟನಲ್ಲಾ, ವಿಶೇಷವಾಗಿ ಯತಿಗಳಿಂದ ಅನುಷ್ಠೇಯವಾದ ಧ್ಯಾನಪ್ರವಚನಾದಿಗಳಲ್ಲಿ ನನ್ನನ್ನು ಪ್ರೇರಿಸಲಿಲ್ಲವಲ್ಲಾ ಎಂದು ಭೀತನಾಗಿ ಅರ್ಜುನನು ಪ್ರಶ್ನೆಮಾಡಿದನು :—

**"ಎಲೈ ಜನಾರ್ದನನೆ! ನಿಷ್ಕಾಮವಾದ ಕರ್ಮರೂಪವಾದ ಉಪಾಯಕ್ಕಿಂತ ಬುದ್ಧಿಯು ಎಂದರೆ ಜ್ಞಾನಸಾಧನವಾದ ಧ್ಯಾನಾದಿಗಳು ಶ್ರೇಷ್ಠವಾದರೆ, ನನಗೆ ಯತ್ಯಾಶ್ರಮವನ್ನು ಸ್ವೀಕರಿಸಿ ಧ್ಯಾನಾದಿ ಉತ್ತಮಸಾಧನಗಳಲ್ಲಿ ಪ್ರವರ್ತನಾಗು ಎಂದು ಬೋಧಿಸದೇ ಜ್ಞಾನೋಪಾಯವಾದರೂ ಘೋರವಾದ ಕರ್ಮರೂಪವಾದ ಯುದ್ಧದಲ್ಲಿ ಸನ್ನದ್ಧನಾಗು ಎಂದು ಯಾತಕ್ಕೆ ಹೇಳುತ್ತಿ?"** ಇದು ಅರ್ಜುನನಿಂದ ವಿವಕ್ಷಿತವಾದ ದ್ವಿತೀಯ ಪ್ರಶ್ನೆಯು. ಅರ್ಜುನನ ಪ್ರಶ್ನವಾಕ್ಯಕ್ಕೆ ಈ ರೀತಿಯಾಗಿ ಎರಡು ಅರ್ಥಗಳಿರುವುವು.

**3.** ಈ ಪ್ರಕಾರವಾದ ಎರಡು ಪ್ರಶ್ನೆಗಳಲ್ಲಿ ಪ್ರಥಮ ಪ್ರಶ್ನೆಗೆ ವಿಸ್ತಾರವಾದ ಸಮಾಧಾನವನ್ನು ಹೇಳಬೇಕಾಗಿದ್ದುದರಿಂದ ದ್ವಿತೀಯ ಪ್ರಶ್ನೆಗೆ ಹೇಳಬೇಕಾದ ಸಂಕ್ಷಿಪ್ತವಾದ ಉತ್ತರವನ್ನು ಒಂದೇ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳಿ ಬಿಟ್ಟನು:—

**ಶ್ರೀಭಗವಾನುವಾಚ—**

(1) **ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।**
**ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ॥**

—(3. 3.)

ಅರ್ಥ—ಎಲೈ ಪಾಪರಹಿತನಾದ ಅರ್ಜುನನೇ! ಈ ಲೋಕದಲ್ಲಿ ಮೋಕ್ಷೋಪಾಯರಹಿತರಾದವರು ಎರಡು ಪ್ರಕಾರವಾಗಿರುತ್ತಾರೆ. ಸಾಂಖ್ಯರು ಎಂದರೆ (ಸಾಕ್ಷಾತ್) ಜ್ಞಾನಸಾಧನವಾದ ಧ್ಯಾನಪ್ರವಚನಾದಿಗಳಲ್ಲಿ ವಿಶೇಷರತರಾದ ಸನಕಾದಿಗಳು, ಜ್ಞಾನಯೋಗದಿಂದ ಎಂದರೆ ಯತ್ಯಾಶ್ರಮವನ್ನು ಸ್ವೀಕಾರಮಾಡಿ, ವಿಶೇಷವಾಗಿ ಧ್ಯಾನಪ್ರವಚನಾದಿರೂಪವಾದ ಉಪಾಸನೆಯಿಂದ ಸಹಿತವಾದ ಸ್ಥಿತಿಯಲ್ಲಿರುತ್ತಾರೆ. ಜನಕಪ್ರಿಯವ್ರತಾದಿ ಆಧಿಕಾರಿಕ ಚೇತನರು ಯೋಗಿಗಳು ಎಂದರೆ ನಿಷ್ಕಾಮವಾಗಿ ರಾಜ್ಯಪರಿಪಾಲನಾದಿ ಕರ್ಮರೂಪವಾದ ಮೋಕ್ಷಸಾಧನೋಪಾಯದಿಂದ ಸಹಿತವಾದ ಸ್ಥಿತಿಯಲ್ಲಿರುತ್ತಾರೆ.

ಈ ವಾಕ್ಯದಿಂದ ಶ್ರೀಕೃಷ್ಣನು ಅರ್ಜುನನಿಗೆ ಯತ್ಯಾಶ್ರಮವನ್ನು ಸ್ವೀಕರಿಸಿ ವಿಶೇಷವಾಗಿ ಧ್ಯಾನಾದಿಗಳನ್ನು ಅನುಷ್ಠಾನ ಮಾಡಬೇಕೆಂದು ವಿಧಿಸದೆ ರಾಜ್ಯಪರಿಪಾಲನೆಯಲ್ಲಿ ಪ್ರೇರಿಸಿದುದಕ್ಕೆ ಸ್ಪಷ್ಟಕಾರಣವು ತಿಳಿದುಹೋಯಿತು. ಇಂದ್ರಾದಿ ದೇವತೆಗಳು "**ಕರ್ಮಯೋಗಿಗಳು**" ಎಂದರೆ ಜ್ಞಾನವನ್ನು ಹೊಂದಿದನಂತರವೂ ಸಹ ವಿಶೇಷವಾಗಿ ತ್ರೈಲೋಕ್ಯರಕ್ಷಣರೂಪವಾದ ಕರ್ಮದಲ್ಲಿ ಆಸಕ್ತರಾಗಿ ಪರಮಾತ್ಮನನ್ನು ಸೇವಿಸುತ್ತಾರೆ. ಸನಕಸನಂದನಾದಿ ಯತಿಗಳೂ, ಋಷಿಗಳೂ ಪ್ರಚುರವಾಗಿ ಧ್ಯಾನಾದಿರೂಪವಾದ ಉಪಾಸನೆಯಲ್ಲಿ ರತರಾಗಿ ಪರಮಾತ್ಮನನ್ನು ಸೇವಿಸುತ್ತಾರೆ. *

---

* ಯದ್ಯಪಿ ಪ್ರಚುರವಾದ ಕರ್ಮಯೋಗವುಳ್ಳವರು ಅವರರು. (ಅಧಮರು). ಪ್ರಚುರವಾದ ಜ್ಞಾನಯೋಗವುಳ್ಳವರು ಉತ್ತಮರು. ಆದರೂ ಈ ವ್ಯವಸ್ಥೆಯು ಬ್ರಹ್ಮಾಪರೋಕ್ಷಜ್ಞಾನವನ್ನು

ಅರ್ಜುನನು ತ್ರೈಲೋಕ್ಯರಕ್ಷಣಕಾರ್ಯದಲ್ಲಿ ಶ್ರೀಪರಮಾತ್ಮನಿಂದ ನಿಯುಕ್ತನಾದ ಇಂದ್ರನ ಅವತಾರವೆಂದು ಸುಪ್ರಸಿದ್ಧವಾಗಿರುವುದು. ಆದುದರಿಂದ ದುಷ್ಟನಿಗ್ರಹವನ್ನುಮಾಡಿ, ರಾಜ್ಯಪರಿಪಾಲನವನ್ನು ಮಾಡುವುದು ಆಧಿಕಾರಿಕಚೇತನನಾದ ನಿನಗೆ ಉಚಿತವೆಂದೇ ನಾನು ನಿನಗೆ ಘೋರವಾದ ಯುದ್ಧಕರ್ಮದಲ್ಲಿ ಪ್ರೇರಿಸಿರುತ್ತೇನೆ ಎಂದು ಶ್ರೀಕೃಷ್ಣನ ಭಾವವು. ಅದರಲ್ಲಿಯೂ ರಾಜ್ಯಾದಿಕಾಮದಿಂದ ಮಾಡಿದ ಯುದ್ಧವು ಕ್ಷಯಿಷ್ಣುಫಲಕಾರಿಯಾದುದರಿಂದ **"ಬುದ್ಧೌ ಶರಣಮನ್ವಿಚ್ಛ"** ಎಂದರೆ ಜ್ಞಾನೋಪಾಯವಾದ ನಿಷ್ಕಾಮತೆಯನ್ನು ಹೊಂದು ಎಂದು ಉಪದೇಶಮಾಡಿದನು.

ಅರ್ಜುನನು ಇಂದ್ರಾಂಶನಲ್ಲದಿದ್ದರೆ ಶ್ರೀಕೃಷ್ಣನು ನಾರದಾದಿಗಳಿಗೆ ವಿಧಿಸಿರುವಂತೆ ಧ್ಯಾನಜ್ಞಾನೋಪದೇಶಾದಿ ಕಾರ್ಯಗಳಲ್ಲಿ ನಿಯೋಗಿಸುತ್ತಿದ್ದನು.

ಹೀಗಿರುವುದರಿಂದ **"ಬುದ್ಧೌ ಶರಣಮನ್ವಿಚ್ಛ"** ಎಂಬ ಶ್ಲೋಕ ಭಾಗಕ್ಕೆ ಕರ್ಮವನ್ನು ಪರಿತ್ಯಾಗ ಮಾಡಿ ಜ್ಞಾನಯೋಗವನ್ನು ಅವಲಂಬಿಸು ಎಂಬ ಅರ್ಥವು ದುರರ್ಥವು. ಮತ್ತೇನೆಂದರೆ ಕಾಮಗಳನ್ನು ಪರಿತ್ಯಾಗ ಮಾಡಿ ಜ್ಞಾನೋಪಾಯದಲ್ಲಿ ರತನಾಗು ಎಂದು ತಾತ್ಪರ್ಯವು. ಕಾಮ್ಯ ಕರ್ಮಗಳು ಜ್ಞಾನೋಪಾಯಗಳಲ್ಲಿ ಮತ್ತು ಜ್ಞಾನೋತ್ಪತ್ತಿಯಲ್ಲಿ ಪ್ರತಿಬಂಧಕಗಳೂ ಆಗುವುವು. ಆದುದರಿಂದಲೇ ಶ್ರೀಕೃಷ್ಣನು ಅನೇಕ ರೀತಿ

---

ಹೊಂದುವುದಕ್ಕೆ ಮುಂಚೆ ಯುಕ್ತವೇ ಹೊರತು ಬ್ರಹ್ಮಾಪರೋಕ್ಷಜ್ಞಾನವಾದನಂತರ ಯುಕ್ತವಲ್ಲ. ಅಪರೋಕ್ಷಜ್ಞಾನವನ್ನು ಹೊಂದಿ ಧ್ಯಾನಾದಿಗಳನ್ನು ಮಾಡುತ್ತಾ ಪ್ರಜಾಪರಿಪಾಲನಾದಿ ವಿಶೇಷ ಕರ್ಮಗಳಲ್ಲಿ ಶ್ರೀಹರಿಯ ಆಜ್ಞಾನುಸಾರವಾಗಿ ಜನಕ, ಪ್ರಿಯವ್ರತ, ಇಂದ್ರಾದಿ ಮಹಾಜನರುಗಳು ಆಸಕ್ತರಾಗುತ್ತಾರೆ. ಪರಮಾತ್ಮನಿಂದ ನಿಯತವಾದ ಆಧಿಪತ್ಯವನ್ನು ಹೊಂದಿರುವುದರಿಂದಲೇ ಇವರುಗಳಿಗೆ ಆಧಿಕಾರಿಕಚೇತನರೆಂದು ಹೆಸರು. ಕರ್ಮಜದೇವತಾತುಲ್ಯರಾದ ಮಾಂಧಾತೃ, ಅಂಬರೀಷಾದಿ ನೂರುಜನ ಚಕ್ರವರ್ತಿಗಳೂ ಈ ಗುಂಪಿಗೇ ಸೇರಿದವರು. ಯಾರಿಗೆ ಈ ರೀತಿಯಾದ ವಿಶೇಷಾಧಿಪತ್ಯವನ್ನು ಶ್ರೀಹರಿಯು ಕೊಟ್ಟಿಲ್ಲವೋ, ಅವರು ಸಹಜವಾಗಿ ಧ್ಯಾನದಲ್ಲಿ ಆಸಕ್ತರಾಗುತ್ತಾರೆ. ಆದ್ದರಿಂದ ಜ್ಞಾನೋತ್ತರಕಾಲದಲ್ಲಿ ಶ್ರೀಹರಿಯ ಆಜ್ಞೆಯಿಂದ ಪ್ರಾಪ್ತವಾದ ಈ ವೈಚಿತ್ರ್ಯವು ತಾರತಮ್ಯಸೂಚಕವಲ್ಲವೆಂದು ತಿಳಿಯಬೇಕು.

ಗಳಿಂದ ಕಾಮ್ಯಕರ್ಮಪರಿತ್ಯಾಗವನ್ನು ಬೋಧಿಸಿರುವನು. **"ಶುಭಾಶುಭ ಪರಿತ್ಯಾಗೀ", "ಸರ್ವಾರಂಭ ಪರಿತ್ಯಾಗೀ", "ಸರ್ವಧರ್ಮಾನ್ ಪರಿತ್ಯಜ್ಯ,''** ಇತ್ಯಾದಿ ಶ್ಲೋಕಭಾಗಗಳಿಗೆಲ್ಲಾ ಇದೇ ಅರ್ಥವು. ಕಾಮನೆಯಿಂದ (ಫಲೇಚ್ಛೆಯಿಂದ) ಮಾಡಿದ ಸತ್ಕರ್ಮವು ಶುಭವು, ಧರ್ಮವು, ಪುಣ್ಯವು ಎನ್ನಿಸಲ್ಪಡುವುದು. ಸ್ವರ್ಗಕಾರಣವಾದ ಇಂಥಾ ಧರ್ಮಗಳು ಮೋಕ್ಷಪ್ರಾಪ್ತಿಗೆ ವಿಳಂಬವನ್ನುಂಟುಮಾಡುವುದರಿಂದ ಪಾಪತುಲ್ಯಗಳೆಂದು ತಿಳಿದು ಮೋಕ್ಷೇಚ್ಛುವು ಪರಿತ್ಯಾಗ ಮಾಡಬೇಕು. ಜ್ಞಾನಕಾರಣವಾದ ನಿಷ್ಕಾಮ ಕರ್ಮವು ನಿರ್ಗುಣಕರ್ಮವೆನ್ನಿಸುವುದು ; ಯಾತಕ್ಕೆಂದರೆ ಅದು ಗುಣಬಂಧರಾಹಿತ್ಯರೂಪವಾದ ಮೋಕ್ಷಕ್ಕೆ ಕಾರಣವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ :—

(2) **ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ** ||(2. 45.)

ಎಲೈ ಅರ್ಜುನನೇ! **"ಸ್ವರ್ಗಕಾಮೋ ಯಜೇತ''** ಇತ್ಯಾದಿ ವೇದವಿಧಿಗಳು ಆಪಾತತಃ ತ್ರೈಗುಣ್ಯವಿಷಯಾಃ–ತ್ರಿಗುಣಜನ್ಯವಾದ ಸ್ವರ್ಗಾದಿ ಫಲೋದ್ದೇಶದಿಂದ ಕರ್ಮವಿಧಾಯಕವಾದುವುಗಳೆಂದು ತೋರುತ್ತವೆ. ನೀನು ತ್ರಿಗುಣಬುದ್ಧಿಯಿಂದ ರಹಿತನಾಗು ಎಂದರೆ ತ್ರಿಗುಣಜನ್ಯ ಸ್ವರ್ಗಾದ್ಯುದ್ದೇಶಕವಾದ ಫಲಬುದ್ಧಿಯಿಂದ ರಹಿತನಾಗು. (ನಿಷ್ಕಾಮನಾಗಿ ಕರ್ಮವನ್ನು ಮಾಡು ಎಂದು ಅರ್ಥವು.)

4. ಈ ಪ್ರಕಾರವಾಗಿ ನಿಷ್ಕಾಮಧ್ಯಾನದಲ್ಲಿ ನನ್ನನ್ನು ಪ್ರೇರಿಸದೆ, ನಿಷ್ಕಾಮಕರ್ಮದಲ್ಲಿ ಯಾತಕ್ಕೆ ಪ್ರೇರಿಸುತ್ತಿ ಎಂಬ ಅರ್ಜುನನ ದ್ವಿತೀಯ ಪ್ರಶ್ನೆಗೆ ಪರಿಹಾರವು ಪೂರ್ಣವಾಯಿತು. ಇನ್ನು ಜ್ಞಾನಕ್ಕೆ ಪ್ರತಿಬಂಧಕವಾದ ಮತ್ತು ಸಾಧಕವಾಗದ ಸ್ವರೂಪತಃ ನಿಂದ್ಯವಾದ ತುಚ್ಛವಾದ ಕರ್ಮಯೋಗದಲ್ಲಿ ನನ್ನನ್ನು ಯಾತಕ್ಕೆ ಪ್ರೇರಿಸುತ್ತೀ ಎಂಬ ಅರ್ಜುನನ ಪ್ರಥಮ ಪ್ರಶ್ನೆಗೆ ಸಾವಕಾಶವಾಗಿ ಶ್ರೀಕೃಷ್ಣನು ಉತ್ತರವನ್ನು ತೃತೀಯಾಧ್ಯಾಯದಲ್ಲಿ ನಿರೂಪಿಸಿ ತಾನು ಹೇಳಿದ ಸಮಾಧಾನವನ್ನು ಸಮಗ್ರ ಪ್ರಥಮಷಟ್ಕದಲ್ಲಿ ವಿಸ್ತರಿಸಿರುತ್ತಾನೆ. ಇನ್ನೂ ಕರ್ಮಕರಣ ವಿಷಯದಲ್ಲಿ ಪ್ರಾಪ್ತವಾಗುವ ಕೆಲವು ಶಂಕೆಗಳನ್ನು ತೃತೀಯ ಷಟ್ಕದಲ್ಲಿ ಪರಿಹರಿಸಿರುತ್ತಾನೆ, ಆ ಉತ್ತರವು ಯಾವುದು ಎಂಬುದನ್ನು ಪರಿಶೀಲಿಸಬೇಕಾಗಿರುವುದು.

ಇಲ್ಲಿ ಪ್ರಥಮತಃ ಒಂದು ಅಂಶವನ್ನು ಸೂಚಿಸಬೇಕಾಗಿರುವುದು. ಶ್ರೀ ಕೃಷ್ಣನ ಮತವು ಅದ್ವೈತಮತವಾಗಿದ್ದರೆ ಎಂದರೆ ಕರ್ಮಮಾರ್ಗವೂ ಜ್ಞಾನ ಮಾರ್ಗವೂ ಭಿನ್ನ ಪುರುಷಾನುಷ್ಠೇಯವಾದ ಧರ್ಮಗಳಾಗಿದ್ದರೆ ಅವುಗಳೆ ರಡಕ್ಕೂ ಕಾರ್ಯಕಾರಣಭಾವವು ಯಾವ ರೀತಿಯಿಂದಲೂ ಕೂಡುವುದಿಲ್ಲ. ಅದ್ವೈತಮತದ ರೀತ್ಯಾ ಕರ್ಮಮಾರ್ಗದಲ್ಲಿರುವವನು ಮೂಢನು. ಕರ್ಮ ಮಾರ್ಗವನ್ನು ಉಪದೇಶಮಾಡುವವನು ಅಧಿಕ ಮೂಢನು. ಕರ್ಮಸಂನ್ಯಾಸ ವಷ್ಟೇ ಮುಕ್ತಿಗೆ ಸಾಧಕವೆಂದು ಶಂಕರಾಚಾರ್ಯರು ಹೇಳಿರುತ್ತಾರೆ! ಆದುದ ರಿಂದ ನಿಂದ್ಯವಾದ ಕರ್ಮಮಾರ್ಗದಲ್ಲಿ ನನ್ನನ್ನು ಯಾತಕ್ಕೆ ಪ್ರೇರಿಸುತ್ತೀ? ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಅದ್ವೈತಿಯಾಗಿದ್ದರೆ ಈ ಉತ್ತರ ವನ್ನು ಕೊಡುತ್ತಿದ್ದನು:— "ಎಲೈ ಅರ್ಜುನನೇ! ನೀನು ಮೂಢನು, ನಾನು ಸಂಮೂಢನು ಆದುದರಿಂದ ನಿನ್ನ ಶ್ರವಣವೂ, ನನ್ನ ಉಪದೇಶವೂ ಉಪಪನ್ನ ವಾಗುವುದು." ಅನ್ಯಥಾ ಮಿಥ್ಯಾಭೂತವಾದ ಮೋಕ್ಷವಿರೋಧಿಯಾದ ಕರ್ಮ ಗಳನ್ನು ಮಾಡಬೇಕೆಂದು ಹೇಳುವುದು ಅಸಂಭಾವಿತವು. ನೀರೆಲ್ಲಿರುವುದು ಎಂದು ಕೇಳಿದರೆ ಯಾವ ಜ್ಞಾನಿಯು ತಾನೇ 'ಮರೀಚಿಕಾ' ವನ್ನು ಕೈಯಿಂದ ತೋರಿ ಸುವನು' ಯಾವ ನಿರ್ದುಷ್ಟಚಕ್ಷುಸ್ಸುಳ್ಳವನು ನಂಬುವನು?*

---

* ಜಗತ್ತು ಮಿಥ್ಯಾ ಎಂಬ ವಾದವು ಕರ್ಮಯೋಗಕ್ಕೆ ಉಪೋದ್ಬಲಕವಾದ ವೈದ್ಯುತಶಕ್ತಿ ಯನ್ನು ಕೊಡಲಾರದು.

ಜಗತ್ತು ಮಿಥ್ಯಾ ಎಂದರೆ ಹಿಂದೆ ಇರಲಿಲ್ಲ, ಈಗ ಇಲ್ಲ, ಮತ್ತು ಮುಂದೆ ಇರುವುದಿಲ್ಲ ವೆಂಬಂಥಾ ಸುಳ್ಳುಪದಾರ್ಥವಾಗಿದ್ದರೆ, ನಿಷ್ಕಾಮವಾದ ಪ್ರಜಾಪರಿಪಾಲನರೂಪವಾದ ಧರ್ಮದಲ್ಲಿ ಆದರದಿಂದ ಆಸಕ್ತನಾಗುವವನು ಪ್ರಜ್ಞಾಹೀನನೇ ಸರಿ. ಅದ್ವೈತತತ್ತ್ವಜ್ಞರಾದ ಪ್ರೊಫೇಸರ್ ಬಿ. ಕೆ. ಶಾಸ್ತ್ರಿಗಳೂ ಈ ದೋಷವನ್ನು ಒಪ್ಪಿಕೊಳ್ಳುತ್ತಾರೆ:—

**"To live and work for the essentially untrue is hardly an inspiring and convincing creed ......."**

**—Professor B. K. Shastri, M.A.**

**ಅರ್ಥ:—**ವಸ್ತುತಃ ಸುಳ್ಳಾದ ಜಗತ್ತಿಗೋಸ್ಕರ ಬದುಕಬೇಕು ಮತ್ತು ಕೆಲಸಮಾಡ ಬೇಕೆಂಬ ವಾದವು ಉತ್ತೇಜಕವಾದ ಮತ್ತು ಶ್ರದ್ಧಾರ್ಹವಾದ ವಾದವೇ ಅಲ್ಲ..........

ವಸ್ತುತಃ ಶ್ರೀಕೃಷ್ಣನು ಜ್ಞಾನಿಯೆಂದು ಶ್ರುತಿಸ್ಮೃತಿ ಸಿದ್ಧವಾದ ಪ್ರಮೇಯವು. "ವೇದಾಂತಕೃದ್ವೇದವಿದೇವಚಾಹಂ" ಎಂದು ಶ್ರೀಕೃಷ್ಣನು ತನ್ನ ಸರ್ವಜ್ಞತೆಯನ್ನು ತಾನೇ ಉದ್ಘೋಷಿಸಿರುತ್ತಾನೆ. ಶಿಷ್ಯನಾದ ಅರ್ಜುನನೂ ಅಂಥಾ ಮೂಢನಲ್ಲ. ಪರಂತು ಈ ಶ್ಲೋಕದಲ್ಲಿಯೇ "ಅನಘ" ಎಂದು ಶ್ರೀಕೃಷ್ಣನು ಅರ್ಜುನನನ್ನು ಕುರಿತು ಸಂಬೋಧಿಸಿರುವನು. ಪಾಪ ರಹಿತವಾದ ಅಂತಃಕರಣವುಳ್ಳ ಅರ್ಜುನನಿಗೆ, ನಿಂದ್ಯವಾದ, ಅವಿವೇಕಿಗಳಿಗೆ ಉಚಿತವಾದ, ತುಚ್ಛವಾದ, ಸುಳ್ಳು ತತ್ವವನ್ನು ಉಪದೇಶಮಾಡುವಷ್ಟು ಅನ್ಯಾಯವನ್ನು ನಿರ್ದೋಷಿಪ್ರಿಯನಾದ ಪರಬ್ರಹ್ಮನಾದ ಶ್ರೀಕೃಷ್ಣನು ಮಾಡಲಾರನು. ಆದುದರಿಂದ ಶ್ರೀಕೃಷ್ಣನಿಂದ ಉಪದಿಷ್ಟವಾದ ಕರ್ಮಮಾರ್ಗವು ಪಾರಮಾರ್ಥಿಕವಾಗಿಯೂ ಜ್ಞಾನಾದಿಗಳಿಗೆ ಸಾಧಕವಾದ ಉತ್ತಮ ಶ್ರೇಯಸ್ಸಾಧನೆಯೆಂದು ನಿಶ್ಚಿತವಾಗುವುದು.

ಆದುದರಿಂದಲೇ ಕರ್ಮಮಾರ್ಗವು ತುಚ್ಛವಾದುದರಿಂದ ಪರಿತ್ಯಾಗಾರ್ಹವೆಂಬ ಅದ್ವೈತಮತದ ರೀತ್ಯಾ ಪ್ರಾಪ್ತವಾದ ಅರ್ಜುನನ ಶಂಕೆಯನ್ನು ಬಹು ದುಷ್ಟವೆಂದು ಸ್ಪಷ್ಟವಾಗಿ ಶ್ರೀಕೃಷ್ಣನು ನಿಂದಿಸುತ್ತಾನೆ:—

**(1) ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।**
**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥**

(3. 4.)

---

**Looking at human beings ... ... through the mediation of the concept of strict identity....... we cannot direct our efforts persistently towards their welfare.... . Social service demands the reality of the social order and its members."**

**—W. S. Urquhart, M.A., D.Litt,**

**ಅರ್ಥ:—** ಕೇವಲ ಐಕ್ಯವಾದ ರೀತಿಯಲ್ಲಿ ಮನುಷ್ಯರನ್ನು ನಾವು ತಿಳಿಯುವುದಾದರೆ ನಾವು ಪ್ರಯತ್ನಪೂರ್ವಕವಾಗಿ ಅವರ ರಕ್ಷಣೆಯಲ್ಲಿ ನಿರತರಾಗಲಾರೆವು. ಪ್ರಜಾಸೇವೆಯು ಸಾಮಾಜಿಕ ಕ್ರಮಗಳ ಮತ್ತು ಸಮಾಜಕ್ಕೆ ಸೇರಿದ ಜನರ ಸತ್ಯತೆಯನ್ನೂ ಅವಶ್ಯವಾಗಿ ಕೋರುತ್ತದೆ.

ಈ ಶ್ಲೋಕವು ಬಹ್ವರ್ಥಗರ್ಭಿತವಾದುದು. ಬಹು ವಿಕಲ್ಪಗಳಿಗೆ ಉತ್ತರ ರೂಪವಾಗಿರುವುದು. ಕರ್ಮಮಾರ್ಗವು ತುಚ್ಛವು, ಪರಿತ್ಯಾಗಾರ್ಹವು, ಎಂದು ಹೇಳುವವರು ಮೂರು ವಿಧವಾಗಿ ಪೂರ್ವಪಕ್ಷವನ್ನು ಮಾಡಬಹುದು. ಅವುಗಳೆಲ್ಲಕ್ಕೂ ಈ ಶ್ಲೋಕ ಮೊದಲುಗೊಂಡು ಐದಾರು ಶ್ಲೋಕಗಳಲ್ಲಿ ಸಮಾಧಾನವನ್ನು ಶ್ರೀಕೃಷ್ಣನು ಹೇಳಿರುತ್ತಾನೆ. ತಥಾಹಿ:— ಇದು ಶ್ರೀಕೃಷ್ಣನ ತಾತ್ಪರ್ಯವು. "ಎಲೈ ಅರ್ಜುನನೇ! ಕರ್ಮವನ್ನು ಮಾಡಬಾರದೆಂದು ಮಾತನಾಡುವ ನಿನ್ನ ಅಭಿಪ್ರಾಯವೇನು? 1. ಕರ್ಮಾಕರಣದಿಂದಲೇ ನೈಷ್ಕರ್ಮ್ಯವೆಂಬ ಹೆಸರಿನಿಂದ ಪ್ರಸಿದ್ಧವಾದ ಮುಕ್ತಿಯು ಪ್ರಾಪ್ತವಾಗುವುದು ಎಂದೋ? 2. ಅಥವಾ ಕರ್ಮವು ಸಂಸಾರಬೀಜಭೂತವಾದುದು. ಕರ್ಮವನ್ನು ಮಾಡುವುದನ್ನು ಬಿಟ್ಟುಬಿಟ್ಟರೆ ಬೀಜರಹಿತವಾದರೆ ವೃಕ್ಷಾದಿಗಳು ಹುಟ್ಟದಿರುವಂತೆ ಕರ್ಮಾಕರಣದಿಂದ ಸಂಸಾರೋಪರಮವು ಪ್ರಾಪ್ತವಾಗಿ ಮುಕ್ತಿಯು ಸಿದ್ಧವಾಗುವುದೆಂದೋ? 3. ಅಥವಾ "ಕರ್ಮಣಾ ಬಧ್ಯತೇ ಜಂತುಃ" ಎಂಬ ಪ್ರಮಾಣಾನುಸಾರವಾಗಿ ಬಂಧಕವಾದ ಕರ್ಮದ ಪರಿತ್ಯಾಗವು ಉಚಿತವೆಂದೋ?" ಎಂದು ಮೂರು ವಿಕಲ್ಪಗಳನ್ನು ಮನಸ್ಸಿನಲ್ಲಿಟ್ಟು ಮೂರಕ್ಕೂ ಸಮಾಧಾನವನ್ನು ಹೇಳುತ್ತಾನೆ.

---

ಸುಪ್ರಸಿದ್ಧರಾದ ರಾಧಾಕೃಷ್ಣರೂ ಸಹ ಜಗತ್ತು ಮಿಥ್ಯಾ ಎಂಬ ವಾದವು ಅಸಮರ್ಪಕವೆಂದೇ ನಿರ್ಣಯಿಸಿರುವರು.

**If........we........, following the lead of some later Adwaitins, dismiss it (the world) as a cosmic illusion which has somehow arisen to afflict us, deluded mortals of an evil dream, then the system becomes unsatisfactory." (p. 657. I. P.)**

**—S. Radhakrishnan, M.A., D.Litt.**

**ಅರ್ಥ :—** ನಾವು ಅರ್ವಾಚೀನರಾದ ಕೆಲವು ಅದ್ವೈತಿಗಳನ್ನು ಅನುಸರಿಸಿಕೊಂಡು ಸ್ವಪ್ನದಂತೆ ಈ ಜಗತ್ತೆಲ್ಲವೂ ಸುಳ್ಳೇ, ಹೇಗೋ ಭ್ರಾಂತಮರ್ತ್ಯರಾದ ನಮ್ಮ ದುಃಖಕ್ಕಾಗಿ ಉತ್ಪನ್ನವಾಗಿರುವ ಕಲ್ಪಿತದೃಶ್ಯವೆಂದು ತೀರ್ಮಾನಮಾಡುವುದಾದರೆ, ಅದ್ವೈತತತ್ತ್ವವು ಅಸಮರ್ಪಕವೇ ಆಗುವುದು.

**5.** ಕರ್ಮಾಕರಣವೇ ಮೋಕ್ಷಸಾಧನವು ಎಂಬ ಪ್ರಥಮಶಂಕೆಗೆ ಶ್ರೀಕೃಷ್ಣನು ಉತ್ತರವನ್ನು ಹೇಳುತ್ತಾನೆ:—

(1) **ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ॥**
—(3. 4.)

ಎಲೈ ಅರ್ಜುನನೇ! ಕರ್ಮಾಕರಣದಿಂದ ಪುರುಷನು ಮೋಕ್ಷವನ್ನು ಹೊಂದುವುದಿಲ್ಲ.

ಕರ್ಮಾಕರಣದಿಂದ ಮೋಕ್ಷವನ್ನು ಹೊಂದುವುದು ಅಸಂಭಾವಿತವು ಎಂದು ಶ್ರೀಕೃಷ್ಣನ ಭಾವವು. "ಪುರುಷಃ" ಎಂಬ ಪದವೇ ಈ ಅರ್ಥವನ್ನು ಸೂಚಿಸುವುದು. ಅನಂತಶರೀರಗಳನ್ನು ಹೊಂದುತ್ತಿರುವುದರಿಂದ ಜೀವನು ಪುರುಷನೆಂದು ಹೆಸರುಳ್ಳವನಾಗುವನು. ಜೀವನು ಯಾವ ಶರೀರದಲ್ಲಿದ್ದರೂ ಏನಾದರೂ ಕರ್ಮವನ್ನು ಮಾಡುತ್ತಲೇ ಇರುವನು. ಕರ್ಮವನ್ನು ಮಾಡದೇ ಶರೀರಿಯು ಇರುವುದು ಅಸಂಭಾವಿತವು. ಆದುದರಿಂದ ಕರ್ಮಾಕರಣದಿಂದ ಮುಕ್ತಿಯಾಗುವುದೆಂದು ಹೇಳಿದರೆ ಒಬ್ಬರಿಗೂ ಮುಕ್ತಿಯಿಲ್ಲವೆಂದು ಒಪ್ಪಬೇಕಾಗಿ ನೈರಾಶ್ಯವಾದಕ್ಕೆ ಕಾಲುಚಾಚಿದಂತಾಗುವುದು. ಕರ್ಮಾಕರಣವು ಅಸಾಧ್ಯವೆಂದು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ:—

(2) **ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥**—(3. 5.)

ಎಲೈ ಪಾರ್ಥನೇ! ಜೀವನು ಯಾವ ಒಂದು ಅವಸ್ಥೆಯಲ್ಲಿಯೂ ಯಾವ ಕರ್ಮವನ್ನೂ ಮಾಡದೆ ಸುಮ್ಮನೆ ಕೂಡಲಾರನು. ಪ್ರತಿಯೊಬ್ಬ ಪುರುಷನೂ ಅವಶನಾಗಿ ಪ್ರಕೃತಿಜನ್ಯಗುಣಗಳಿಂದ ಪ್ರೇರಿತನಾಗಿ ಯಾವುದಾದರೂ ಕರ್ಮವನ್ನು ಮಾಡುತ್ತಲೇ ಇರುವನು.

ಹದಿನೆಂಟನೆಯ ಅಧ್ಯಾಯದಲ್ಲಿಯೂ ಶ್ರೀಕೃಷ್ಣನು ಹೀಗೆಯೇ ಹೇಳಿರುತ್ತಾನೆ:—

(3) **ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ॥**
—(18. 11.)

ಎಲೈ ಧನಂಜಯನೇ! ದೇಹಧಾರಿಯಾದ ಈ ಜೀವನಿಗೆ ಯಾವ ಅವಸ್ಥೆಯಲ್ಲಿಯೂ ಸರ್ವ ಕರ್ಮಗಳನ್ನೂ ಪರಿತ್ಯಾಗಮಾಡುವುದು ಶಕ್ಯವಲ್ಲ.

ಪುನಃ ತೃತೀಯಾಧ್ಯಾಯದಲ್ಲಿ ಈ ವಿಷಯವನ್ನೇ ನಿರೂಪಿಸಿ ಕರ್ಮಪರಿತ್ಯಾಗಕ್ಕಿಂತ ನಿಯತಕರ್ಮಕರಣವು ಉತ್ತಮವೆಂದು ಶ್ರೀಕೃಷ್ಣನು ಹೇಳುತ್ತಾನೆ:—

**(4) ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।**
**ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥**
—(3. 8.)

ಎಲೈ ಅರ್ಜುನನೇ! ಕರ್ಮಾಕರಣಕ್ಕಿಂತ ನಿಯತಕರ್ಮಕರಣವು ಶ್ರೇಷ್ಠವಾದುದರಿಂದ ನೀನು ವಿಧ್ಯುಕ್ತನಿಯತಕರ್ಮವನ್ನು ಅನುಷ್ಠಾನಮಾಡು. ಕರ್ಮಾಕರಣದಿಂದ ನೀನು ದೇಹಧಾರಣವನ್ನು ಮಾಡುವುದೇ ಅಶಕ್ಯವಾಗುವುದು.

ಕರ್ಮಾಕರಣವನ್ನು ಮೋಕ್ಷಹೇತುವೆಂದು ತಿಳಿದು ಅನುಷ್ಠಾನಮಾಡುವವನು ಶ್ವಾಸ, ಭೋಜನಾದಿ ಕ್ರಿಯಾಗಳನ್ನೂ ಪರಿತ್ಯಾಗಮಾಡಬೇಕಾಗಿ ಮರಣವನ್ನು ಹೊಂದುವನು. ಆದುದರಿಂದ ದೇಹಧಾರಣೋಪಯೋಗಿಕರ್ಮಗಳನ್ನು ಮಾಡುತ್ತಾ ಅತಿರಿಕ್ತಕರ್ಮಗಳನ್ನು ಮಾಡದಿರುವುದೇ ವಿವಕ್ಷಿತ ಕರ್ಮಾಕರಣವು ಎಂದು ಹೇಳುವುದಾದರೆ, ಪಶ್ವಾದಿ ಸಾಧಾರಣವಾದ ಇಂಥಾ ದುಷ್ಟತತ್ತ್ವದಿಂದೇನು? ಪರಮಾತ್ಮನಿಂದ ವಿಹಿತವಾದ ಕರ್ಮಗಳನ್ನು ಮಾಡಿ ತದತಿರಿಕ್ತವಾದ ಕರ್ಮಗಳನ್ನು ಪರಿತ್ಯಾಗಮಾಡುವುದು ಶ್ರೇಯಸ್ಕರವು ಎಂದು "ಕರ್ಮ ಜ್ಯಾಯೋ ಹ್ಯಕರ್ಮಣಃ" ಎಂಬ ಪದಗಳಿಂದ ಶ್ರೀಕೃಷ್ಣನು ಬೋಧಿಸಿದನು. ನಿಯತಕರ್ಮಪರಿತ್ಯಾಗದಿಂದ ಬಹಳ ಅನರ್ಥವೂ ಉಂಟೆಂದು ಹೇಳಿರುವನು. ಅದನ್ನು ಮುಂದೆ ಉದಾಹರಿಸುವೆವು.

**6.** ಸಂಸಾರಬೀಜಭೂತವಾದುದರಿಂದ ಕರ್ಮದ ಪರಿತ್ಯಾಗದಿಂದ ಜನನ ಮರಣಾದಿರೂಪವಾದ ಸಂಸಾರವೃಕ್ಷವು ನಷ್ಟವಾಗಿ ಹೋಗುವುದು ಎಂಬ ಅರ್ಜುನನ ದ್ವಿತೀಯಶಂಕೆಗೂ ಶ್ರೀಕೃಷ್ಣನ ಈ ವಾಕ್ಯಗಳೇ ಉತ್ತರರೂಪವಾಗಿರುವುವು:—

**(1) ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।**

ಎಲೈ ಅರ್ಜುನನೇ! ಕರ್ಮಗಳನ್ನು ಮಾಡದೇ ಇರುವುದರಿಂದ ಪುರುಷನು ಮುಕ್ತಿಯನ್ನು ಹೊಂದುವುದಿಲ್ಲ. ಪುರುಷಶಬ್ದವು ಹೇತುಸೂಚಕವು

ಅನಾದಿಕಾಲದಿಂದ ಅನಂತದೇಹಗಳಲ್ಲಿ ಈ ಜೀವನು ನಾನಾ ಕರ್ಮಗಳನ್ನು ಮಾಡಿರುವನು. ಆ ಕರ್ಮಬೀಜಗಳು ಮುಗಿದಮೇಲಷ್ಟೇ ಸಂಸಾರವೃಕ್ಷ ನಾಶವು ಆಗಬೇಕು. ಸಪ್ತಸಮುದ್ರಗಳೂ ಶೋಷಣವನ್ನು ಹೊಂದಬಹುದು; ಅನಾದಿಯಾಗಿ ಬಂದಿರುವ ಜೀವನ ಅನಂತಕರ್ಮಗಳನ್ನು ಭೋಗಿಸಿ ಮುಗಿಸುವುದು ಅಶಕ್ಯವು. ಆದುದರಿಂದ ಕರ್ಮರೂಪವಾದ ಬೀಜನಾಶದಿಂದ ಸಂಸಾರ ನಾಶವನ್ನು ಹೊಂದುವುದು ಅಸಂಭಾವಿತವು ಎಂದು ಭಾವವು.*

ಕಿಂಚ "ಪ್ರಕೃತಿಜನ್ಯವಾದ ಗುಣಗಳಿಂದ ಪ್ರೇರಿತನಾಗಿ ಈ ಜೀವನು ಅವಶನಾಗಿ ನಾನಾ ಕರ್ಮಗಳನ್ನು ಮಾಡುತ್ತಲೇ ಇರುವನು; ದೇಹಧಾರಿಯಾದ ಈ ಜೀವನಿಂದ ಸರ್ವಕರ್ಮಪರಿತ್ಯಾಗವು ಶಕ್ಯವೂ ಅಲ್ಲ; ಮತ್ತು ಕರ್ಮಾಕರಣದಿಂದ ಶರೀರಯಾತ್ರೆಯೇ ದುರ್ಘಟವಾಗುವುದು. ಆದುದರಿಂದ ನೀನು ನಿಯತ ಕರ್ಮಗಳನ್ನು ಮಾಡು," ಇತ್ಯಾದಿ ರೀತಿಯಾದ ಪೂರ್ವ ವಿಕಲ್ಪಕ್ಕೆ ಕೊಟ್ಟ ಉತ್ತರವು ಈ ಪ್ರಶ್ನೆಗೂ ಸಮಾಧಾನರೂಪವಾಗಿರುವುದು. ಮತ್ತು ಉಭಯ ಪಕ್ಷದಲ್ಲಿಯೂ ನಿಯತಕರ್ಮಪರಿತ್ಯಾಗಜನಿತ ಅನರ್ಥಗಳು ಇದ್ದೇ ಇರುವುವು.

7. **"ಕರ್ಮಣಾ ಬಧ್ಯತೇ ಜಂತುಃ"** ಇತ್ಯಾದಿ ಪ್ರಮಾಣ ವಚನಾನುಸಾರವಾಗಿ ಕರ್ಮಾನುಷ್ಠಾನವು ಸಂಸಾರಬಂಧಕ್ಕೆ ಕಾರಣವಾಗುವುದು; ಆದುದರಿಂದ ಕರ್ಮಪರಿತ್ಯಾಗವು ಉಚಿತವು ಎಂಬ ತೃತೀಯ ವಿಕಲ್ಪಕ್ಕೂ

---

* **ಆಚತುರ್ದಶವರ್ಷಾತ್ಕರ್ಮಾಣಿ ನಿಯಮೇನ ತು ।**
**ದಶಾವರಾಣಾಂ ದೇಹಾನಾಂ ಕಾರಣಾನಿ ಕರೋತ್ಯಯಂ ॥**
**ಅತಃ ಕರ್ಮಕ್ಷಯಾನ್ಮುಕ್ತಿಃ ಕುತ ಏವ ಭವಿಷ್ಯತಿ ।**

ಹದಿನಾಲ್ಕನೆಯ ವರ್ಷವನ್ನು ಆರಂಭಿಸಿಕೊಂಡು ಈ ದೇಹಿಯು ಒಂದೊಂದು ದಿವಸ ಮಾಡುವ ಕರ್ಮಗಳೂ ಕೊನೆಯಪಕ್ಷ ಹತ್ತು ಜನ್ಮಗಳಿಗೆ ಕಾರಣವಾಗುತ್ತವೆ. ಈರೀತಿಯಲ್ಲಿ ಪೂರ್ವದಲ್ಲಿ ಎಷ್ಟು ಜನ್ಮಗಳು ನಮಗೆ ಬಂದಿದ್ದಾಗ ಎಷ್ಟು ಕರ್ಮಗಳು ಸಂಚಿತವಾಗಿರುವುವೆಂಬುದು ಅಚಿಂತ್ಯವು. ಅವುಗಳನ್ನು ಭೋಗಿಸುವಾಗ ಮತ್ತೂ ಹೊಸಕರ್ಮಗಳು ಬೆಳೆಯುವುವು. ಆದುದರಿಂದ ಕರ್ಮಾಕರಣದಿಂದ ಪೂರ್ವದ ಕರ್ಮಗಳು ತಮಗೆ ತಾವೇ ಮುಗಿದುಹೋಗುವುವು ಎಂದು ಹೇಳುವದು ಮೂಢರ ಮತವೇ ಸರಿ.

ಪೂರ್ವೋದಾಹೃತ ಶ್ಲೋಕಗಳು ಉತ್ತರರೂಪವಾಗಿಯೇ ಇರುವುವು. ವಿಶೇಷ ಉತ್ತರವನ್ನೂ ಶ್ರೀಕೃಷ್ಣನು ಕೊಡುತ್ತಾನೆ :—

(1) **ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।**
**ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಸ್ಸಮಾಚರ ॥**
—(3. 9.)

**ಅರ್ಥ**—ಯಜ್ಞನಾಮಕ ಪರಮಾತ್ಮನ ಪ್ರೀತ್ಯರ್ಥವಲ್ಲದ ಇತರ ಕರ್ಮಗಳಿಂದ ಲೋಕದಲ್ಲಿ ಜನರು ಬದ್ಧರಾಗುತ್ತಾರೆ. ಆದುದರಿಂದ ಎಲೈ ಕೌಂತೇಯನೇ! ನೀನು ಫಲಾಪೇಕ್ಷೆಯಿಂದ ರಹಿತನಾಗಿ ಭಗವತ್ಪೂಜಾರ್ಥವಾಗಿ ಕರ್ಮವನ್ನು ಆಚರಿಸು.

ಏವಂಚ ಕಾಮ್ಯಕರ್ಮವು, ಭಗವತ್ಪ್ರೀತಿಮಾತ್ರೋದ್ದೇಶಕವಾದ ನಿಷ್ಕಾಮಕರ್ಮವು ಎಂದು ಕರ್ಮವು ದ್ವಿವಿಧವು. ಅದರಲ್ಲಿ ಕಾಮ್ಯಕರ್ಮವು ಬಂಧಕವು. ಕೇವಲ ಭಗವತ್ಪ್ರೀತ್ಯುದ್ದೇಶದಿಂದ ಮಾಡಿದ ನಿಷ್ಕಾಮಕರ್ಮವು ಬಂಧಕವಲ್ಲ ಮತ್ತು ಮೋಚಕವಾದುದು.

ಕಾಮ್ಯಕರ್ಮವು ಬಂಧಕವೆಂದು ಗೀತೆಯಲ್ಲಿ ಮೂರು ನಾಲ್ಕು ಸ್ಥಳಗಳಲ್ಲಿ ಹೇಳಲ್ಪಟ್ಟಿರುವುದು :—

(2) **ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।**
**ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥**
**ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಂ ।**
**ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥**
**ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಂ ।**
**ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥**
—(2. 42-44.)

ಈ ಶ್ಲೋಕಗಳು ಪೂರ್ವದಲ್ಲಿಯೇ (ಪುಟ 213. ಪ್ರಥಮಭಾಗ) ವ್ಯಾಖ್ಯಾತವಾಗಿರುವುವು. ವೇದವು ಕಾಮ್ಯಕರ್ಮವನ್ನು ವಿಧಿಸುವುದೆಂದು ಭ್ರಮಿಸಿ ಸ್ವರ್ಗಾದಿಫಲಕವಾದ ಕಾಮ್ಯಕರ್ಮಗಳಲ್ಲಿ ರತರಾದವರು ಸಮಾಧಿಯೋಗದಲ್ಲಿ

ಪರಮಾತ್ಮನ ದರ್ಶನಕ್ಕೆ ಕಾರಣವಾದ ಯಥಾರ್ಥತತ್ವಜ್ಞಾನವನ್ನು ಹೊಂದ ಲಾರರು ಎಂದು ಫಲಿತಾರ್ಥವು. ಕಾಮ್ಯಕರ್ಮಿಗಳು ಮೋಕ್ಷಪ್ರಯೋಜಕ ವಾದ ಜ್ಞಾನವನ್ನು ಹೊಂದಲಾರರು. ಅವರು ಪುನಃಪುನಃ ಜನನಮರಣ ರೂಪಪ್ರವಾಹದಲ್ಲಿ ಬಿದ್ದು ಸುಖದುಃಖಗಳನ್ನು ಹೊಂದುತ್ತಲೇ ಇರುವರು ಎಂದು ಭಾವವು.

(3) **ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥**

—(5. 12.)

ಜ್ಞಾನೋಪಾಯರಹಿತನಾದವನು ಫಲಕಾಮನಾಪೂರ್ವಕವಾದ ಕರ್ಮಾ ನುಷ್ಠಾನದಿಂದ ಸ್ವರ್ಗಾದಿ ಕ್ಷುದ್ರಫಲಗಳಲ್ಲಿ ಆಸಕ್ತನಾಗಿ ನಿಬಧ್ಯತೇ= ಅತ್ಯಂತ ವಾಗಿ ಸಂಸಾರಬಂಧವನ್ನು ಅನುಭವಿಸುತ್ತಾನೆ.

ಸಪ್ತಮಾಧ್ಯಾಯದಲ್ಲಿ ಶ್ರೀಕೃಷ್ಣನು ಫಲಾಪೇಕ್ಷಿಗಳಾದ ಕಾಮಿಗಳು ಅನ್ಯದೇವತೋಪಾಸನೆಯನ್ನು ಮಾಡುವರೆಂದು ನಿರೂಪಿಸಿ ಅವರಿಗಾಗುವ ಅಲ್ಪಫಲವನ್ನೂ ವರ್ಣಿಸಿರುವನು :—

(4) **ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ।**

.... .... .... .... .... .... ....

**ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ ।**

—(7. 20-23.)

ಫಲಾಪೇಕ್ಷಿಗಳಾದ ಕರ್ಮಿಗಳು ಅವರವರಿಗೆ ಅಭೀಷ್ಟವಾದ ಕಾಮ್ಯ ವಸ್ತುಗಳಲ್ಲಿ ಅತ್ಯಂತ ಆಸಕ್ತವಾದ ಚಿತ್ತವುಳ್ಳವರಾಗಿ ಇತರ ದೇವತೆಗಳನ್ನು ಶರಣುಹೊಂದಿ ನಾನಾ ಕರ್ಮಗಳನ್ನು ಮಾಡುತ್ತಾರೆ. ....... ಇಂಥಾ ಅಲ್ಪ ಬುದ್ಧಿಯುಳ್ಳ ಕಾಮಿಗಳಿಗೆ ಪ್ರಾಪ್ತವಾಗುವ ಫಲವು ಅಂತವತ್ತು= ಕ್ಷಿಪ್ರದಲ್ಲಿ ನಾಶವನ್ನು ಹೊಂದತಕ್ಕದ್ದು.

ನವಮಾಧ್ಯಾಯದಲ್ಲಿಯೂ ಸಹ, ವೇದದಲ್ಲಿ ಆಪಾತತಃ ತೋರುವ ಅರ್ಥ ದಿಂದ ಮೋಹಿತವಾದ ಬುದ್ಧಿಯುಳ್ಳವರಾದುದರಿಂದ ತ್ರೈವಿದ್ಯರೆಂದು ಕರೆಯ ಲ್ಪಡುವ ಕಾಮ್ಯಕರ್ಮಿಗಳು ಪುನಃಪುನಃ ಸಂಸಾರದಲ್ಲಿ ಪರಿವರ್ತನವನ್ನು ಹೊಂದುತ್ತಲೇ ಇರುವರೆಂದು ಶ್ರೀಕೃಷ್ಣನು ಹೇಳುತ್ತಾನೆ:—

(5) **ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾಃ**
**ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।**

**ತೇ ಪುಣ್ಯಮಾಸಾದ್ಯ ಸುರೇಂದ್ರಲೋಕಂ**
**ಅಶ್ನಂತಿ ದಿವ್ಯಾನ್ ದಿವಿ ದೇವಭೋಗಾನ್ ॥**
**ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ**
**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ॥**
**ಏವಂ ತ್ರಯೀಧರ್ಮಮನುಪ್ರಪನ್ನಾ**
**ಗತಾಗತಂ ಕಾಮಕಾಮಾ ಲಭಂತೇ ॥** —(9. 20-21.)

ವೇದದಿಂದ ಆಪಾತತಃ ತೋರುವ ಸ್ವರ್ಗಾದಿಫಲಗಳಲ್ಲಿ ಅಪೇಕ್ಷೆಯಿಂದ ಸಹಿತರಾದ ಕಾಮ್ಯಕರ್ಮಿಗಳು ಯಜ್ಞವನ್ನು ಮಾಡಿ, ಹುತಶೇಷವಾದ ಸೋಮ ರಸಪಾನವನ್ನು ಮಾಡಿ ಪಾಪಗಳನ್ನು ಪರಿಹರಿಸಿಕೊಂಡು ಸ್ವರ್ಗಫಲವನ್ನು ಭೋಗಿಸುತ್ತಾರೆ. ಅವರು ತಮ್ಮ ಪುಣ್ಯಲಭ್ಯವಾದ ಸ್ವರ್ಗವನ್ನು ಹೊಂದಿ ಅದ್ಭುತವಾದ ದೇವ ಭೋಗ್ಯ ಸುಖಗಳನ್ನು ಅನುಭವಿಸುತ್ತಾರೆ. ಆದರೆ ಕ್ಷೀಣೇ ಪುಣ್ಯೇ=ಆ ಪುಣ್ಯವು ಕ್ಷಯವಾದನಂತರ, ಪುನಃ ಭೂಲೋಕಕ್ಕೆ ಬಂದುಬೀಳುತ್ತಾರೆ. ಈ ರೀತಿಯಾಗಿ ಕಾಮ್ಯಕರ್ಮವನ್ನು ಮಾಡುವವರು ಸ್ವರ್ಗಲೋಕ ಭೂಲೋಕ, ಪುನಃ ಸ್ವರ್ಗಲೋಕ ಭೂಲೋಕಗಮನ ಹೀಗೆ ಬಂದುಹೋಗುತ್ತಾ ಆವರ್ತಿಯನ್ನು ಹೊಂದುತ್ತಿರುತ್ತಾರೆ.

**8.** ಈ ರೀತಿಯಲ್ಲಿ ಶ್ರೀಕೃಷ್ಣನು ಮೂರು ಪ್ರಕಾರವಾಗಿ ವಿಕಲ್ಪ ಮಾಡಿಕೊಂಡು ಮೂರು ವಿಧದಿಂದಲೂ ಕರ್ಮಾಕರಣವು ಉಚಿತವಲ್ಲವೆಂದೂ ವಿಹಿತಕರ್ಮಾನುಷ್ಠಾನವು ಅವಶ್ಯಕವೆಂದೂ, ಆದರಲ್ಲಿಯೂ ಯಜ್ಞನಾಮಕ ಪರ ಮಾತ್ಮನ ಪ್ರೀತಿಯನ್ನು ಉದ್ದೇಶಮಾಡಿ ಮಾಡಿದ ನಿಷ್ಕಾಮಕರ್ಮವು ಬಂಧಕ ವಲ್ಲವೆಂದೂ ನಿರೂಪಿಸಿದನು. ಇನ್ನುಮುಂದೆ ಚತುರ್ವರ್ಣದವರೂ ತಮತಮಗೆ ವಿಹಿತವಾದ ಕರ್ಮಗಳನ್ನು ಪರಿತ್ಯಾಗಮಾಡಿದರೆ ವರ್ಣಸಾಂಕರ್ಯವು ಬರುವು ದೆಂದು ಶ್ರೀಕೃಷ್ಣನು ಹೇಳುತ್ತಾನೆ :—

(1) **ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥**
**ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮಚೇದಹಂ ।**
**ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥**
—(3. 23-24.)

ಎಲೈ ಪಾರ್ಥನೇ! (ಯದ್ಯಪಿ ನಾನು ಕರ್ಮಬಂಧರಹಿತನು. ಹಾಗಿದ್ದರೂ)ನಾನು ಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮವನ್ನು ಆಚರಿಸದಿದ್ದರೆ, ಸಕಲ ಮನುಷ್ಯರೂ ನನ್ನನ್ನು ನೋಡಿಕೊಂಡು ಸ್ವವರ್ಣಾಶ್ರಮೋಚಿತವಾದ ಕರ್ಮವನ್ನು ಪರಿತ್ಯಾಗಮಾಡಿಬಿಡುವರು. ಹಾಗೆ ಚತುರ್ವರ್ಣದವರೂ ತಮ್ಮ ತಮ್ಮ ವಿಹಿತಕರ್ಮಾನುಷ್ಠಾನಗಳನ್ನು ಮಾಡದಿದ್ದರೆ, ಘೋರನರಕಪ್ರಾಪ್ತಿರೂಪವಾದ ನಾಶವನ್ನು ಹೊಂದಿಬಿಡುವರು; ನಾನೇ ವರ್ಣಸಾಂಕರ್ಯವನ್ನು ಮಾಡಿದಹಾಗಾಗುವುದು ಮತ್ತು ಸಕಲ ಪ್ರಜೆಗಳನ್ನೂ ನಾನೇ ನರಕಕ್ಕೆ ಕೆಡವಿದಂತಾಗುವುದು.

ಏವಂಚ ಕರ್ಮಾಕರಣದಿಂದ ನರಕಪ್ರಾಪ್ತಿರೂಪವಾದ ಫಲವು; ಇಹಲೋಕದಲ್ಲಿ ಜಾತಿವಿವೇಕವು ತಪ್ಪಿಹೋಗಿ ವರ್ಣಸಾಂಕರ್ಯಪ್ರಾಪ್ತಿದ್ವಾರಾ ಪರ್ಯವಸಾನದಲ್ಲಿ ಸರ್ವರಿಗೂ ನರಕಪ್ರಾಪ್ತಿಯು; ಹೀಗೆ ಉಭಯವಿಧದಿಂದ ಜನರಿಗೆ ದುಃಖವು ಬರುವುದೆಂದು ಪೂರ್ಣಕಾಮನಾದ ಪರಮಾತ್ಮನೂ ಕೂಡ ರಾಮಕೃಷ್ಣಾದ್ಯವತಾರಗಳಲ್ಲಿ ಲೋಕಸಂಗ್ರಹಾರ್ಥವಾಗಿ ವಿಹಿತಕರ್ಮಗಳನ್ನು ಅನುಷ್ಠಾನ ಮಾಡುತ್ತಲೇ ಇರುವನು ಎಂದು ಶ್ರೀಕೃಷ್ಣನ ಈ ವಾಕ್ಯಗಳಿಂದ ನಿಶ್ಚಿತವಾಗುವುದು.

**9.** ಶ್ರೀಕೃಷ್ಣನು ಇನ್ನೂ ಎರಡು ಪ್ರಕಾರದಿಂದ ಸ್ವಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮಾನುಷ್ಠಾನವು ಅವಶ್ಯಕವೆಂದು ಉಪಪಾದಿಸಿರುತ್ತಾನೆ:—

(1) **ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ |**
**ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್ ‖**
**ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ |**
**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ‖**
**ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ |**
**ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ‖**
**ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ |**
**ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ‖**
—(3. 10-13.)

**ಅರ್ಥ:**—ಸೃಷ್ಟಿಕರ್ತನಾದ ನಾರಾಯಣನು ಯಜ್ಞಾದಿಸ್ವವರ್ಣಾಶ್ರಮೋಚಿತ ಕರ್ಮಗಳಿಂದ ಸಹಿತರಾದ ಪ್ರಜೆಗಳನ್ನು ಸೃಷ್ಟಿಸಿದನಂತರ ಅವರನ್ನು ಕುರಿತು ಈ ರೀತಿ ಮಾತಾಡಿದನು:— ಎಲೈ ಪ್ರಜೆಗಳಿರಾ! ಸ್ವವರ್ಣಾಶ್ರಮೋಚಿತ ಕರ್ಮವೆಂಬ ಯಜ್ಞದಿಂದ ನಿಮ್ಮ ಅಭೀಷ್ಟಗಳನ್ನು ಪಡೆಯಿರಿ. ನಿಮ್ಮಿಂದ ಆಚರಿಸಲ್ಪಡುವ ಯಜ್ಞಾದಿಕರ್ಮಗಳು ನಿಮಗೆ ಬೇಕಾದ ಭೋಗ್ಯದ್ರವ್ಯಗಳನ್ನು ಕೊಡುವುವಾಗಲಿ. ಎಲೈ ಪ್ರಜೆಗಳಿರಾ! ನೀವು ಯಜ್ಞಾದಿ ಸ್ವಧರ್ಮದಿಂದ ದೇವತೆಗಳನ್ನು ಪೂಜಿಸಿರಿ. ಅವರು ನಿಮಗೆ ಇಷ್ಟಾರ್ಥಗಳನ್ನು ಕೊಟ್ಟು ರಕ್ಷಿಸಲಿ. ಈ ರೀತಿ ನೀವೂ ಮತ್ತು ಪರ್ಜನ್ಯಾದಿ ದೇವತೆಗಳೂ ಪರಸ್ಪರವಾಗಿ ಭಾವಿತರಾಗಿ ಅಂತ್ಯದಲ್ಲಿ ಮೋಕ್ಷರೂಪ ಪ್ರಯೋಜನವನ್ನು ಹೊಂದುವಿರಿ. ಎಲೈ ಪ್ರಜೆಗಳಿರಾ! ಯಜ್ಞದಿಂದ ಆರಾಧಿತರಾದ ದೇವತೆಗಳು ನಿಮಗೆ ಇಷ್ಟವಾದ ಅನ್ನಾದಿ ಭೋಗ್ಯದ್ರವ್ಯಗಳನ್ನು ಕೊಡುವರು. ಅಂತಹ ದೇವತೆಗಳಿಂದಲೇ ಕೊಡಲ್ಪಟ್ಟ ಪದಾರ್ಥಗಳನ್ನು ಯಜ್ಞಾದಿದ್ವಾರಾ ಆ ದೇವತೆಗಳಿಗೆ ಕೊಡದೆ ಭೋಗಿಸುವವನು ಚೋರನೇ ಸರಿ. ವಿಷ್ಣುವೇ ಮೊದಲಾಗಿ ಸಕಲ ದೇವತೆಗಳಿಗೂ ಹವಿಸ್ಸನ್ನು ಯಥಾಯೋಗ್ಯವಾಗಿ ಅರ್ಪಣೆಮಾಡಿ (ಪಂಚಮಹಾಯಜ್ಞವನ್ನು ಮಾಡಿ) ಯಜ್ಞಶೇಷವನ್ನು ಭೋಜನ ಮಾಡುವವರು ಸಕಲ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಹಾಗಲ್ಲದೆ ತಮ್ಮ ಉದರಪೂರ್ತಿಗಾಗಿ ಯಾರು ಪಾಕಮಾಡಿ ಭೋಜನ ಮಾಡುತ್ತಾರೆಯೋ ಅಂತಹವರು ಪಾಪವನ್ನೇ ಭೋಜನ ಮಾಡುತ್ತಾರೆಂದು ತಿಳಿಯಬೇಕು. (ಪಂಚಯಜ್ಞಮಾಡದೆ ಅತಿಥಿ ಅಭ್ಯಾಗತರನ್ನು ಸಂತುಷ್ಟಿಪಡಿಸದೆ ಭೋಜನ ಮಾಡುವವನು ಪಾಪವನ್ನು ಹೊಂದುವನೆಂದು ಅರ್ಥವು.)

10. ಇದರಿಂದ (ವಿಹಿತ ಕರ್ಮವನ್ನು ಬಿಟ್ಟು ಕಾಮಗಳನ್ನು ಭೋಗಿಸುವವನಿಗೆ ಚೌರ್ಯದೋಷಪ್ರಾಪ್ತಿ ನಿರೂಪಣದಿಂದ) ಕರ್ಮಾಕರಣವನ್ನು ಅವಲಂಬಿಸುವವನಿಗೆ ದೈವದ್ರೋಹವು ಬಂದು ಒಂದೊಂದು ದಿನದ ಭೋಜನದಿಂದಲೂ ಪಾಪವೃದ್ಧಿಯಾಗುವುದೆಂದು ಸಿದ್ಧವಾಯಿತು.

ಮತ್ತೊಂದು ಪ್ರಕಾರದಿಂದಲೂ ವರ್ಣಾಶ್ರಮೋಚಿತವಾದ ಕರ್ಮವು ಅವಶ್ಯಕರ್ತವ್ಯವೆಂಬುದನ್ನು ಶ್ರೀಕೃಷ್ಣನು ತೋರಿಸುತ್ತಾನೆ:—

(2) ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥
ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥
ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥
—(3. 14-16.)

**ಅರ್ಥ.**—ಎಲೈ ಪಾರ್ಥನೇ ! ಅನ್ನದಿಂದ ಪ್ರಾಣಗಳು ಉತ್ಪನ್ನವಾಗುತ್ತವೆ (ಅನ್ನವು ವೀರ್ಯಶುಕ್ಲಾದಿ ರೂಪೇಣ ಪರಿಣಮಿಸಿ ಗರ್ಭೋತ್ಪತ್ತಿಗೆ ಕಾರಣವಾಗಿ ಪ್ರಾಣಿಗಳ ಸೃಷ್ಟಿಗೆ ನಿಮಿತ್ತವಾಗುವುದು.) ಇಂತಹ ಅನ್ನವು ಪರ್ಜನ್ಯನಾಮಕ ಆದಿತ್ಯನಿಂದ ವೃಷ್ಟಿದ್ವಾರಾ ಪ್ರಾಪ್ತವಾಗುವುದು. ಅಂತಹ ಪರ್ಜನ್ಯನು ಯಜಮಾನನಿಂದ ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸಿ ಬಲವುಳ್ಳವನಾಗಿ (ಅನುಗ್ರಹೋನ್ಮುಖನಾಗಿ) ವೃಷ್ಟಿಪ್ರದನಾಗುತ್ತಾನೆ. ಅಂತಹ ಪರ್ಜನ್ಯನನ್ನು ಪ್ರಸನ್ನೀಕರಿಸುವ ಯಜ್ಞವು ತದಂಗವಾದ ಕ್ರಿಯೆಗಳಿಂದ ಹುಟ್ಟುತ್ತದೆ. ಅಂತಹ ಯಜ್ಞಾಂಗಭೂತವಾದ ಕರ್ಮವು ಪರಮಾತ್ಮನ ಪ್ರೇರಣೆಯಿಂದ ಉಂಟಾಗುವುದು. ಆ ಪರಮಾತ್ಮನು ವೇದರೂಪವಾದ ನಿತ್ಯವಾದ ಶಬ್ದಪ್ರಮಾಣದಿಂದ ತಿಳಿಯಲ್ಪಡತಕ್ಕವನು. (ಯಥಾರ್ಥವಾದ ವೇದದಿಂದಲೇ ಪರಬ್ರಹ್ಮನು ಪ್ರಾಣಿಗಳಿಂದ ತಿಳಿಯಲ್ಪಡತಕ್ಕವನು.) ಹಾಗೆ ತಿಳಿಯಲ್ಪಟ್ಟರೆ ಆತನು ಪ್ರಸನ್ನನಾಗಿ ಸತ್ಕರ್ಮದಲ್ಲಿ ಪ್ರೇರಣೆ ಮಾಡುತ್ತಾನೆ. ಈ ರೀತಿಯಲ್ಲಿ ಜಗಚ್ಚಕ್ರಪ್ರವೃತ್ತಿಯು. ಆದುದರಿಂದ ಪೂರ್ವೋಕ್ತ ಪರಂಪರೆಯಿಂದ ಪರಬ್ರಹ್ಮನುಯಜ್ಞದಿಂದ ಅಭಿವ್ಯಂಗ್ಯನಾದುದರಿಂದ ಪರಮಾತ್ಮನು ಸರ್ವದಾ ಯಜ್ಞದಲ್ಲಿ ಪ್ರತಿಷ್ಠಿತನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಈ ರೀತಿಯಾಗಿ ಪ್ರವರ್ತಿತವಾದ ಜಗಚ್ಚಕ್ರವನ್ನು ಯಾವಾತನು ಅನುವರ್ತಿಸುವುದಿಲ್ಲವೋ ಅಂತಹವನು ಪಾಪಸಂಪಾದನೆಗಾಗಿಯೇ ಉತ್ಪನ್ನನಾದವನು; ಅವನು ಇಂದ್ರಿಯವಿಷಯಗಳಲ್ಲಿ ಆಸಕ್ತನು; ಎಲೈ ಪಾರ್ಥನೇ! ಅವನ ಬದುಕು ನಿರರ್ಥಕವು.

ಪ್ರಾಣಿಗಳು ವೇದದಿಂದ ಪರಮಾತ್ಮನನ್ನು ತಿಳಿಯುವರು. ಪರಮಾತ್ಮನು ಅದರಿಂದ ಸಂತುಷ್ಟನಾಗಿ ಸತ್ಕರ್ಮಗಳಲ್ಲಿ ಪ್ರೇರಿಸುವನು. ಸತ್ಕರ್ಮಗಳಿಂದ ಯಜ್ಞವು ನಿಷ್ಪನ್ನವಾಗಿ ಪರ್ಜನ್ಯಾದಿ ದೇವತೆಗಳಿಗೆ ಸಂತುಷ್ಟಿಯನ್ನುಂಟು ಮಾಡುವುದು. ಪರ್ಜನ್ಯಾದಿಗಳು ವೃಷ್ಟಿಯನ್ನು ಸುರಿಸುವರು. ಅದರಿಂದ ಅನ್ನವೃದ್ಧಿಯಾಗುವುದು. ಅದರಿಂದ ಪ್ರಾಣಿಗಳು ಪುಷ್ಟರಾಗುವರು ಮತ್ತು ನೂತನಪ್ರಾಣಿಗಳೂ ಹುಟ್ಟುವರು; ಅವರು ಪುನಃ ವೇದಾಭ್ಯಾಸವನ್ನು ಮಾಡಿ ಪರಮಾತ್ಮನನ್ನು ತಿಳಿಯುವರು; ಈರೀತಿ ಜ್ಞಾತನಾದ ಪರಮಾತ್ಮನು ಪುನಃ ಸತ್ಕ್ರಿಯೆಗಳಿಗೆ ಪ್ರೇರಕನಾಗುವನು; ಅದರಿಂದ ಯಜ್ಞವು; ಅದರಿಂದ ಪರ್ಜನ್ಯಪ್ರೀತಿಯು; ಅದರಿಂದ ಸದನ್ನವು; ಅದರಿಂದ ಪುನಃ ಸಾತ್ವಿಕಪ್ರಾಣಿಗಳಿಗೆ ಪುಷ್ಟಿಯು, ನೂತನಪುರುಷರ ಜನನವು; ಮತ್ತು ಅವರ ವೇದಾಭ್ಯಾಸವು.... ....ಇದೇ ರೀತಿಯಾಗಿ ಜಗಚ್ಚಕ್ರವು ವೇದಜ್ಞಾನ, ಯಜ್ಞ, ಸಾತ್ವಿಕ ಅನ್ನಾದಿಗಳನ್ನೂ ನಿಮಿತ್ತಮಾಡಿಕೊಂಡಿರುವ ಪರಮಾತ್ಮನಿಂದ ನಡೆಯಿಸಲ್ಪಡುತ್ತಿರುವುದು. ಹೀಗಿರುವಲ್ಲಿ ಯಜ್ಞವನ್ನು ನಿಲ್ಲಿಸಿಬಿಟ್ಟರೆ ಪರ್ಜನ್ಯನು ಕುಪಿತನಾಗುವನು; ಅದರಿಂದ ಸರಿಯಾಗಿ ವೃಷ್ಟ್ಯಾದಿಗಳಾಗದೆ, ಕ್ಷಾಮಾದಿಗಳು ಒದಗಿ ಸಾತ್ವಿಕಾನ್ನವು ದೊರಕಲಾರದು; ಅದರಿಂದ ದುರ್ಬುದ್ಧಿಯುಂಟಾಗಿ ವೇದದಿಂದ ಪರಮಾತ್ಮನ ಯಥಾರ್ಥಜ್ಞಾನವು ಬರುವುದಿಲ್ಲ; ಪರಮಾತ್ಮನು ಸತ್ಕ್ರಿಯೆಗಳಲ್ಲಿ ಪ್ರೇರಿಸುವುದಿಲ್ಲ. ಈ ರೀತಿಯಾಗಿ ಜಗತ್ತು ತಾಮಸವಾಗಿ ವಿಲಯವನ್ನು ಹೊಂದುವುದು. ಆದುದರಿಂದ ಯಜ್ಞಾದಿಕರ್ಮಗಳನ್ನು ಮೋಕ್ಷಪರ್ಯಂತವೂ ಬಿಡಬಾರದು ಎಂದು ಶ್ರೀಕೃಷ್ಣನ ತಾತ್ಪರ್ಯವು. ಇದರಿಂದ ಕರ್ಮಪರಿತ್ಯಾಗವು ಅತಿತಾಮಸವಾದ ದೈವದ್ರೋಹವೆಂದು ಪ್ರಾಪ್ತವಾಯಿತು.

**11.** ಪುನಃ ಹದಿನಾರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ವಿಧಿಯನ್ನು ಅತಿಕ್ರಮಿಸಿ ನಡೆಯುವ ಆಸುರಸ್ವಭಾವವನ್ನೂ ಅದಕ್ಕೆ ಪ್ರಾಪ್ತವಾಗುವ ಅನರ್ಥಫಲಕಥನದಿಂದ ಸಹಿತವಾಗಿ ವರ್ಣಿಸಿ, ಉಪಸಂಹಾರದಲ್ಲಿ ಸ್ವವರ್ಣಾಶ್ರಮೋಚಿತಧರ್ಮವನ್ನು ವಿಧ್ಯುಕ್ತರೀತಿಯಲ್ಲಿ ಅವಶ್ಯವಾಗಿ ಅನುಷ್ಠಾನಮಾಡಬೇಕೆಂದು ಎರಡು ಶ್ಲೋಕಗಳಲ್ಲಿ ನಿರೂಪಿಸಿರುವನು. ಅವುಗಳನ್ನು ಪೂರ್ವದಲ್ಲಿಯೇ ಉದಾಹರಿಸಿ ವ್ಯಾಖ್ಯಾನಮಾಡಿರುತ್ತೇವೆ.

**12.** ಹದಿನೆಂಟನೆಯ ಅಧ್ಯಾಯದಲ್ಲಿ ಸ್ವರೂಪೇಣ ಕರ್ಮಪರಿತ್ಯಾಗವು ವಿಹಿತವೆಂಬ ಅದ್ವೈತವಾದವನ್ನು ಶ್ರೀಕೃಷ್ಣನು ಪೂರ್ವಪಕ್ಷಸ್ಥಾನದಲ್ಲಿಟ್ಟು ಅದನ್ನು ನಿರವಕಾಶವಾಕ್ಯಗಳಿಂದ ಖಂಡನೆಮಾಡಿ ವರ್ಣಾಶ್ರಮವಿಹಿತವಾದ ಸ್ವಕರ್ಮಗಳನ್ನು ಸರ್ವರೂ ಮಾಡಿಯೇ ತೀರಬೇಕೆಂದು ವಿಧಾನಮಾಡಿರುವನು :—

(1) ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥
ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಸ್ಸಂಪ್ರಕೀರ್ತಿತಃ ॥
ಯಜ್ಞದಾನತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥
ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥
ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥
—(18.3—7.)

**ಅರ್ಥ:**—"ಎಲೈ ಭರತಶ್ರೇಷ್ಠನೇ! ಕೆಲವರು ಜ್ಞಾನಿಗಳು ದೋಷಯುಕ್ತವಾದ ಕರ್ಮವನ್ನು ಪರಿತ್ಯಾಗಮಾಡಬೇಕೆಂದು ಹೇಳುತ್ತಾರೆ. ಮತ್ತೂ ಕೆಲವರು ಜ್ಞಾನಿಗಳು ಯಜ್ಞ, ದಾನ, ತಪಸ್ಸೇ ಮುಂತಾದ ಕರ್ಮಗಳನ್ನು ಬಿಡಬಾರದೆಂದು ಹೇಳುತ್ತಾರೆ. ಈ ವಿವಾದಾಸ್ಪದವಾದ ತ್ಯಾಗವಿಷಯದಲ್ಲಿ ನನ್ನ ನಿಶ್ಚಯವನ್ನು ಕೇಳು.

"ಎಲೈ ಪುರುಷಶ್ರೇಷ್ಠನೇ! ತ್ಯಾಗವು ಮೂರು ಪ್ರಕಾರವಾಗಿರುವುದು. ಅದರಲ್ಲಿ ವಸ್ತುತತ್ವವೇನೆಂದರೆ ಯಜ್ಞ, ದಾನ, ತಪಸ್ಸೇ ಮುಂತಾದ ಕರ್ಮಗಳನ್ನು ಸರ್ವಥಾ ಬಿಡಬಾರದು. ಅವುಗಳು ಅವಶ್ಯವಾಗಿ ಅನುಷ್ಠೇಯವಾದುವುಗಳು. ಯಜ್ಞವೂ, ದಾನವೂ, ತಪಸ್ಸೂ ಜ್ಞಾನಿಗಳಿಗೂ ಪಾವನಕರವಾಗಿರುವುವು. (ಹಾಗಿದ್ದರೆ ಕೆಲವರು ಜ್ಞಾನಿಗಳು ದೋಷಯುಕ್ತವಾದು

ದರಿಂದ ಕರ್ಮಗಳನ್ನು ಪರಿತ್ಯಾಗಮಾಡಬೇಕೆಂದು ಹೇಳಿದರಲ್ಲಾ; ಅವರ ತಾತ್ಪರ್ಯವೇನು? ಎಂದರೆ ಹೇಳುತ್ತಾನೆ:—) ಇದೇ ಕರ್ಮಗಳನ್ನು ಕರ್ಮ ಫಲಸ್ನೇಹ(ವೆಂಬ ದೋಷ)ವನ್ನು ಬಿಟ್ಟು ಕರ್ಮಫಲಗಳನ್ನು ಅಂತ್ಯದಲ್ಲಿ ಪರ ಮಾತ್ಮನಲ್ಲಿ ಸಮರ್ಪಿಸಿ ವಿಧ್ಯುಕ್ತರೀತಿಯಲ್ಲಿ ಅವಶ್ಯಮಾಡಬೇಕೆಂಬುದು ನನ್ನ ನಿಶ್ಚಿತವಾದ ಸಿದ್ಧಾಂತವು. (ಇದರಿಂದ ಕಾಮ್ಯಕರ್ಮಗಳನ್ನು ಬಿಡಬೇಕೆಂಬುದೇ "ದೋಷಯುಕ್ತವಾದುದರಿಂದ ಕರ್ಮಪರಿತ್ಯಾಗಮಾಡಬೇಕು" ಎಂದು ಹೇಳಿದ ಜ್ಞಾನಿಗಳ ಅಭಿಪ್ರಾಯವೆಂದು ಸಿದ್ಧವಾಯಿತು.)

"ಎಲೈ ಪಾರ್ಥನೇ! ವಿಧಿವಿಹಿತಸ್ವೋಚಿತಕರ್ಮಗಳ ಪರಿತ್ಯಾಗವು ಉಚಿತ ವಲ್ಲ. ವಿಪರೀತಬುದ್ಧಿಯಿಂದ ಅವುಗಳ ಪರಿತ್ಯಾಗವು ತಾಮಸವೆಂದು ಹೇಳ ಲ್ಪಟ್ಟಿರುತ್ತದೆ."

ಈ ರೀತಿ ಅನೇಕ ಪ್ರಕಾರವಾಗಿ ಪ್ರಸಕ್ತವಾದ ಕರ್ಮಾಕರಣಮತ ವನ್ನು ಅಮೋಘವಾದ ವಾಗ್ಬಾಣಗಳಿಂದ ಖಂಡಿಸಿ ಶ್ರೀಕೃಷ್ಣನು ನಿಷ್ಕಾಮ ವಾದ ವಿಹಿತಕರ್ಮಾನುಷ್ಠಾನವು ಮೋಕ್ಷಸಾಧಕವೆಂದೇ ಸಿದ್ಧಾಂತ ಮಾಡಿ ರುವನು. ಮತ್ತು ಸಾಂಖ್ಯರಿಂದಲೂ ಕರ್ಮಿಗಳಿಂದಲೂ ಸಹ ಅಪ ರೋಕ್ಷಜ್ಞಾನೋತ್ಪತ್ತಿ ಪರ್ಯಂತವೂ ಅವಶ್ಯಾನುಷ್ಠೇಯವಾಗಿರುವುದೆಂದೂ ಹೇಳಿ, ಜ್ಞಾನಿಗಳಾದ ಜನಕಾದಿಗಳೂ ಕೂಡ ಭಗವದಾರಾಧನರೂಪವಾದ ಕರ್ಮಯೋಗವನ್ನು ಹರಿಭಕ್ತಿವೃದ್ಧಿಯನ್ನು ಉದ್ದೇಶಮಾಡಿ ಮತ್ತು ಲೋಕ ಸಂಗ್ರಹಾರ್ಥವಾಗಿಯೂ ಆಚರಿಸಿ ವಿಷ್ಣುಪ್ರಸಾದಕ್ಕೆ ಪಾತ್ರರಾಗಿ ಮುಕ್ತ ರಾಗಿರುವರೆಂದು ನಿರೂಪಿಸಿರುವನು. ಮುಮುಕ್ಷುವು ವಿಹಿತಕರ್ಮವನ್ನು ಪರಿ ತ್ಯಾಗ ಮಾಡಬೇಕೆಂಬ ಶಂಕರಾಚಾರ್ಯರ ವಾದವು ಘೋರನರಕಪ್ರಾಪ್ತಿಗೆ ಕಾರಣವಾದ ತಾಮಸಕಾರ್ಯವೆಂದು ಶ್ರೀಕೃಷ್ಣನಿಂದ ಧಿಕ್ಕರಿಸಲ್ಪಟ್ಟಿರುವುದು.

# 17. ಹದಿನೇಳನೆಯ ಅಂಶವು.

## ಕರ್ಮಾನುಷ್ಠಾನವು (ಮುಂದುವರಿಸಿದ್ದು)

## ನಿಷ್ಕಾಮಕರ್ಮದ ಮಹಿಮೆಯು.

**1. ಪ್ರಶ್ನೆ :—** ಸ್ವಾಮಿ! ಕರ್ಮಾಕರಣವು ನಿಷಿದ್ಧವೆಂದೂ ಕಾಮ್ಯ ಕರ್ಮವು ಬಂಧಕವೆಂದೂ ಸಿದ್ಧವಾಯಿತು. ಹಾಗಾದರೆ ಸಂಸಾರಮೋಚಕ ವಾದ ಕರ್ಮಸ್ವರೂಪವನ್ನು ಶ್ರೀಕೃಷ್ಣನು ಯಾವ ಲಕ್ಷಣವುಳ್ಳದ್ದೆಂದು ನಿರೂ ಪಿಸಿರುತ್ತಾನೆ?

**ಉತ್ತರ:—ಶ್ರೀಶ್ರೀಗಳವರು :—**ಸಾಂಖ್ಯ, ಸಂನ್ಯಾಸ, ತ್ಯಾಗಗಳಿಂದ ಸಹಿತವಾದ, ವಿಷ್ಣುಭಕ್ತಿ ಪೂರ್ವಕವಾದ, ಸ್ವವರ್ಣಾಶ್ರಮೋಚಿತವಾದ ವಿಹಿತ ಕರ್ಮಾನುಷ್ಠಾನವು ಭವಸಾಗರವನ್ನು ಗೋಷ್ಪದದಂತೆ ಮಾಡಿ ಪರಬ್ರಹ್ಮನ ಪಾದಾರವಿಂದವನ್ನು ಧ್ಯಾನಗೋಚರವಾಗಿ ಮಾಡುವುದೆಂದು ನಾವು ಹಿಂದೆಯೇ ಹೇಳಿರುತ್ತೇವೆ.

**ಪ್ರಶ್ನೆ :—** ಸ್ವಾಮಿ! ಅಂಥಾ ಸಂಪೂರ್ಣವಾದ ಕಾಮ ಕ್ರೋಧ ಪರಿ ತ್ಯಾಗರೂಪವಾದ ಸಂನ್ಯಾಸವೂ, ನಿಶ್ಚಿತತತ್ವಜ್ಞಾನ ರೂಪವಾದ ಸಾಂಖ್ಯವೂ ಪ್ರಾಪ್ತವಾಗುವುದಕ್ಕೆ ಮೊದಲು ಪರಮಾತ್ಮನ ಪ್ರಸಾದಕ್ಕೆ ಪಾತ್ರವಾದ ಕರ್ಮಾನುಷ್ಠಾನವು ಯಾವ ಪ್ರಕಾರವಾಗಿರಬೇಕು? ಅದನ್ನು ದಯಮಾಡಿ ವಿವರಿಸಬೇಕು.

**ಉತ್ತರ:—ಶ್ರೀಶ್ರೀಗಳವರು:—**ಇದೂ ಹಿಂದೆಯೇ ನಿರೂಪಿತವಾಗಿರು ವುದು. ಸ್ವಲ್ಪ ಸಂನ್ಯಾಸ ಪೂರ್ವಕವಾದ, ಪರಮಾತ್ಮಸ್ಮೃತಿಯಿಂದ ಸಹಿತ ವಾದ ವಿಹಿತಕರ್ಮವು ಮತ್ತೂ ಅಧಿಕವಾದ ಮನಃಶುದ್ಧಿಗೆ ಕಾರಣವಾಗಿ ಶ್ರವಣಾದಿಗಳಲ್ಲಿ ಶ್ರದ್ಧೆಯನ್ನು ಹುಟ್ಟಿಸುವುದು. ಅನಂತರ ಭಗವನ್ಮಾಹಾ ತ್ಮ್ಯಜ್ಞಾನ ಪೂರ್ವಕವಾಗಿ ಹೆಚ್ಚು ವೈರಾಗ್ಯದಿಂದ ಪುನಃ ಉತ್ತಮ ಕರ್ಮಗ ಳನ್ನು ಮಾಡಬೇಕು. ಆದರಿಂದ ಮತ್ತೂ ಅಧಿಕವಾದ ಮನೋಜಯಾದಿಗಳು ಪ್ರಾಪ್ತವಾಗುವುವು. ಹೀಗೆ ಸ್ವಶಕ್ತ್ಯನುಸಾರವಾಗಿ ಕಾಮಕ್ರೋಧಗಳನ್ನು ಬಿಟ್ಟು ಪರಮಾತ್ಮನ ಸ್ಮೃತಿಪೂರ್ವಕವಾಗಿ ಫಲಾಪೇಕ್ಷೆಯಿಲ್ಲದೆ ವಿಹಿತ ಕರ್ಮ ವನ್ನು ಪ್ರತಿಯೊಬ್ಬ ಮುಮುಕ್ಷುವೂ ಮಾಡಬೇಕು. ಯದ್ಯಪಿ ಸಮಗ್ರ

ವಾಗಿ ರಾಗದ್ವೇಷಾದಿಗಳ ಪರಿತ್ಯಾಗವು ಪ್ರಾರಂಭದಲ್ಲಿ ದುರ್ಘಟವು; ಮತ್ತು ಶ್ರವಣಾದಿರಹಿತನಾದವನಿಗೆ ಶಾಸ್ತ್ರನಿರ್ಣೀತವಾದ ತತ್ವಜ್ಞಾನವೂ ಅಲಭ್ಯವು. ಆದರೂ ಮುಮುಕ್ಷುವು ಆರಂಭದಲ್ಲಿ ಪರಮಾತ್ಮನ ಪ್ರೀತಿಯನ್ನು ಅಪೇಕ್ಷಿಸಿ, ಸ್ವರ್ಗ, ಧನ, ದಾರಾ, ಪುತ್ರ, ಮಿತ್ರಾದಿಭಾಗ್ಯಗಳನ್ನು ತನ್ನ ಕರ್ಮಗಳಿಗೆ ಫಲ ರೂಪವಾಗಿ ಕೋರದೆ, "ನಾಹಂಕರ್ತಾ ಹರಿಃ ಕರ್ತಾ" ಎಂದರೆ ಪರಮಾತ್ಮನೇ ಸ್ವತಂತ್ರನು ಮತ್ತು ಸರ್ವೇಂದ್ರಿಯಗಳಲ್ಲಿ ನಿಂತು ನನ್ನ ಕರ್ಮಗಳಲ್ಲಿ ಪ್ರೇರ ಕನು ಎಂಬ ಸಾಮಾನ್ಯಜ್ಞಾನಪೂರ್ವಕವಾಗಿ ವೇದೋಕ್ತವಾದ ವಿಹಿತ ಕರ್ಮ ಗಳನ್ನು ಅನುಷ್ಠಾನ ಮಾಡಿ, ಪರಮಾತ್ಮನಿಗೆ ಆ ಕರ್ಮಫಲವನ್ನು ಸಮರ್ಪಿಸ ಬೇಕು. ಇದೇ ನಿಷ್ಕಾಮ ಕರ್ಮಾನುಷ್ಠಾನವು. ಇದರಿಂದ ಶ್ರೀಹರಿಯು ಪ್ರಸನ್ನನಾಗಿ ಮೋಕ್ಷೋಪಯೋಗಿಯಾದ ಸಚ್ಛಾಸ್ತ್ರ ಶ್ರವಣದಲ್ಲಿ ಅಧಿಕಾರ ವನ್ನು ಕೊಟ್ಟು ಅನುಕೂಲವನ್ನು ಕಲ್ಪಿಸಿಕೊಡುವನು. ಗುಣತ್ರಯರಾಹಿತ್ಯ ರೂಪವಾದ ಮೋಕ್ಷಕ್ಕೆ ಪರಂಪರಯಾ ಕಾರಣವಾಗುವುದರಿಂದ ಇದಕ್ಕೆ ನಿರ್ಗುಣ ಕರ್ಮವೆಂದು ಹೆಸರು. ನಾಶರಹಿತವಾದ ಫಲಕ್ಕೆ ಕಾರಣವಾಗು ವುದರಿಂದ ಇದಕ್ಕೆ ಅಕ್ಷಯ ಕರ್ಮವೆಂದು ಹೆಸರು. ಮಂತ್ರಪೂತವಾದ ಇಂದ್ರನ ವಜ್ರಾಯುಧವಾದರೂ ಸಮಯವಿಶೇಷದಲ್ಲಿ ನಿಷ್ಫಲವಾಗಬಹುದು. ಆದರೆ ಸಮೀಚೀನವಾಗಿ ಆಚರಿಸಲ್ಪಟ್ಟ ಒಂದು ನಿಷ್ಕಾಮ ಕರ್ಮವೂ ಸಹ ವ್ಯರ್ಥವಾಗಲಾರದು. "**ಕೃತಜ್ಞ**" ನೆಂಬ ಪ್ರಸಿದ್ಧನಾಮವುಳ್ಳ ಶ್ರೀಪರ ಮಾತ್ಮನು ತನ್ನ ಭಕ್ತರು ಮಾಡುವ ಒಂದೊಂದು ಕರ್ಮವನ್ನೂ ಮರೆಯದೆ ಜ್ಞಾನಭಕ್ತಿ ವಿರಕ್ತಿರೂಪವಾದ ಉತ್ತಮ ಫಲಗಳನ್ನೇ ಕೊಡುವನು. ನಿಷ್ಕಾಮ ಕರ್ಮ ಸ್ತುತಿಯನ್ನು ಶ್ರೀಕೃಷ್ಣನೇ ಮಾಡಿರುವನು :—

(1) **ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ।**
**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥**

—(2. 40.)

**ಅರ್ಥ :—** ಎಲೈ ಪಾರ್ಥನೇ! ಜ್ಞಾನೋಪಾಯರೂಪವಾದ ನಿಷ್ಕಾಮ ಕರ್ಮ ವಿಷಯದಲ್ಲಿ ಆರಂಭಮಾತ್ರಕ್ಕೂ ನಾಶವಿರುವುದಿಲ್ಲ. (ಎಂದರೆ "ಆರಂಭ ಮಾತ್ರಮಿಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ" ಎಂಬ ಪ್ರಮಾಣಾನುಸಾರವಾಗಿ ನಿಷ್ಕಾಮಕರ್ಮವನ್ನು ಮಾಡುವೆನೆಂದು ಇಚ್ಛಿಸುವವನಿಗೂ, ಸ್ವಲ್ಪ ಆರಂಭ

ಮಾಡಿ ಅಷ್ಟರಲ್ಲೇ ಕರ್ಮವನ್ನು ಪರಿತ್ಯಾಗಮಾಡಿದರೂ ಸಹ ಮಾಡಿದಷ್ಟಕ್ಕೆ ಪುಣ್ಯವು ಬಂದೇ ಬರುವುದು ಎಂದು ಭಾವವು.) ಮತ್ತು ಕರ್ಮವನ್ನು ಆರಂಭಮಾಡಿ ಮಧ್ಯೇ ವಿಚ್ಛೇದ ಬಂದರೂ ಕರ್ಮಪರಿತ್ಯಾಗ ನಿಮಿತ್ತಕವಾಗಿಯಾಗಲೀ, ಅಥವಾ ವಿಷ್ಣು ಧರ್ಮದಲ್ಲಿ ರತನಾಗಿ ಅನ್ಯ ಧರ್ಮಗಳನ್ನು ಮಾಡಲಿಲ್ಲವೆಂಬ ನಿಮಿತ್ತದಿಂದಲಾಗಲೀ ನರಕಾದ್ಯನರ್ಥಗಳು ಇರುವುದಿಲ್ಲ. ಮತ್ತು ನಿಷ್ಕಾಮಧರ್ಮವು ಸ್ವಲ್ಪ ಅನುಷ್ಠಿತವಾದರೂ ಸಂಸಾರರೂಪವಾದ ಮಹದ್ಭಯದಿಂದ ರಕ್ಷಿಸುತ್ತದೆ.

ಈ ವಾಕ್ಯದಲ್ಲಿ ನಾಲ್ಕೈದು ಪ್ರಕಾರವಾದ ನಿಷ್ಕಾಮಕರ್ಮಾನುಷ್ಠಾನದ ಮಹಿಮೆಗಳನ್ನು ಶ್ರೀಕೃಷ್ಣನು ವರ್ಣಿಸಿರುತ್ತಾನೆ. 1. ಕಾಮ್ಯಕರ್ಮವನ್ನು ಮಾಡುತ್ತೇನೆಂದು ಸಂಕಲ್ಪಮಾಡಿದಮಾತ್ರಕ್ಕೇ ಫಲವು ಬರುವುದಿಲ್ಲ. ಸಾಂಗವಾದ ಕರ್ಮವು ವಿಧ್ಯುಕ್ತರೀತ್ಯಾ ಅನುಷ್ಠಿತವಾದರೆ ಅಭೀಷ್ಟಫಲವು ಪ್ರಾಪ್ತವಾಗುವುದು. ಸ್ವಲ್ಪ ಆರಂಭಮಾಡಿ ಧನವ್ಯಯವನ್ನು ಮಾಡಿದ್ದರೂ ಕಾಮ್ಯಕರ್ಮವು ಸಂಪೂರ್ತಿಯನ್ನು ಹೊಂದದಿದ್ದರೆ ನಿಷ್ಫಲವೇ. ನಿಷ್ಕಾಮಕರ್ಮವು ಈ ಪ್ರಕಾರವಾಗಿರುವುದಿಲ್ಲ. ವಿಷ್ಣುಪ್ರೀತಿಕರವಾದ ಕರ್ಮವನ್ನು ಮಾಡಬೇಕೆಂದು ಮನಃಪೂರ್ವಕವಾಗಿ ಇಚ್ಛಾಮಾಡಿದಮಾತ್ರಕ್ಕೇ, ಹಾಗೂ ಆರಬ್ಧವಾದ ಕರ್ಮವು ಪರಿಸಮಾಪ್ತಿಯನ್ನು ಹೊಂದದೇ ನಿಂತುಹೋದರೂ, ಯಥಾಯೋಗ್ಯವಾಗಿ ಪುಣ್ಯಫಲವನ್ನು ಶ್ರೀಹರಿಯು ಕೊಟ್ಟೇಕೊಡುವನು. 2. ಕಿಂಚ ಸಂಕಲ್ಪಿತವಾದ ಕಾಮ್ಯಕರ್ಮವು ಅರ್ಧದಲ್ಲೇ ನಿಂತು ಹೋದರೆ ಕರ್ಮಪರಿಸಮಾಪ್ತಿಯನ್ನು ಮಾಡದೆ ಸಂಕಲ್ಪಭ್ರಂಶವನ್ನು ಹೊಂದಿದ ಅಂಥ ಅವಿವೇಕಿಯು ನರಕಭಾಗಿಯಾಗುವನೆಂದು ಪ್ರಮಿತವಾಗಿರುವುದು. ನಿಷ್ಕಾಮಕರ್ಮಕ್ಕೆ ಪರಿತ್ಯಾಗದಿಂದ ಇಂಥಾ ಪ್ರತ್ಯವಾಯವಿರುವುದಿಲ್ಲ. ಯೋಗಭ್ರಷ್ಟನು ಉತ್ತಮಜನ್ಮವನ್ನು ಸಂಪಾದಿಸಿ ಪುನಃ ತನ್ನ ಪೂರ್ವಜ್ಞಾನವನ್ನು ಹೊಂದಿ ಭಗವತ್ಪ್ರಸಾದಹೇತುವಾದ ಶುದ್ಧ ಧರ್ಮದಲ್ಲಿ ರತನಾಗುವನೆಂದು ಶ್ರೀಕೃಷ್ಣನು ಷಷ್ಠಾಧ್ಯಾಯದಲ್ಲಿ ಹೇಳಿರುತ್ತಾನೆ. 3. ಪ್ರತ್ಯವಾಯೋ ನ ವಿದ್ಯತೇ ಎಂಬ ಶ್ಲೋಕಭಾಗಕ್ಕೆ ಪ್ರತ್ಯವಾಯವೆಂದರೆ ವಿಘ್ನವೆಂದೂ ಅರ್ಥವಾಗುವುದೆಂದು ಕೆಲವರು ಇಟ್ಟುಕೊಂಡು ನಿಷ್ಕಾಮಕರ್ಮವನ್ನು ಅನುಷ್ಠಾನಮಾಡುವವರನ್ನು ಪರಮಾತ್ಮನು ತನ್ನ

ಕೃಪಾದೃಷ್ಟಿಯಿಂದ ವೀಕ್ಷಿಸಿ ಅವರ ಕರ್ಮಗಳನ್ನು ತಾನೇ ನಿರ್ವಿಘ್ನವಾಗಿ ಪರಿಸಮಾಪ್ತಿಮಾಡಿಸಿಕೊಂಡು ಸ್ವೀಕಾರಮಾಡುವನೆಂದು ಅರ್ಥವನ್ನು ಹೇಳುವರು. ಪ್ರತ್ಯವಾಯವೆಂಬ ಪದಕ್ಕೆ ವಿಘ್ನವೆಂಬ ಅರ್ಥವು ಪ್ರಮಿತವಾಗಿದ್ದರೆ ಈ ಪ್ರಮೇಯವು ಶ್ಲೋಕಾರೂಢವಾಗುವುದು. ಅನ್ಯಥಾ ದ್ವಾದಶಾಧ್ಯಾಯದ ಗೀತಾವಚನಗಳಿಂದ ಈ ವಿಷಯವನ್ನು ನಿರ್ಣಯಿಸಬೇಕು. ಅಥವಾ ಇಲ್ಲಿಯೇ, "ನೇಹಾಭಿಕ್ರಮನಾಶೋಽಸ್ತಿ" ಎಂಬ ವಾಕ್ಯಕ್ಕೇ ಆರಬ್ಧವಾದ ನಿಷ್ಕಾಮಕರ್ಮವು ವಿಘ್ನದಿಂದ ನಾಶವನ್ನು ಹೊಂದುವುದಿಲ್ಲವೆಂದು ಅರ್ಥಮಾಡಬಹುದು. 4. ಕಾಮ್ಯಕರ್ಮಾನುಷ್ಠಾನವು ಅಂಗಡಿಯಲ್ಲಿ ದ್ರವ್ಯದಾನಮಾಡಿ ಪೀತಾಂಬರವನ್ನು ಕೊಂಡು ಕೊಂಡಂತೆಯೇ ಎಂದು ತಿಳಿಯಬೇಕು. ಕಾಸಿಗೆ ತಕ್ಕ ಕಜ್ಜಾಯ. ಧನಕ್ಕೆ ಅನುಗುಣವಾದ ಪದಾರ್ಥವನ್ನು ಅಂಗಡಿಯವನು ಕೊಡುವಂತೆ ಕಾಮ್ಯಕರ್ಮಗಳಿಗೆ ಕ್ಲೃಪ್ತವಾದ ಫಲಕ್ಕಿಂತ ಅತಿಶಯವಾದ ಸುಖವು ಬರಲಾರದು. ನಿಷ್ಕಾಮಕರ್ಮಾನುಷ್ಠಾನ ವಿಷಯದಲ್ಲಿ ಈ ರೀತಿಯಾದ ವ್ಯವಸ್ಥೆಯು ಇರುವುದಿಲ್ಲ. ಭಕ್ತ್ಯತಿಶಯದಿಂದ ವಿಷ್ಣುಧರ್ಮವನ್ನು ಆಚರಿಸುವವನು ಸ್ವಲ್ಪಮಾಡಿದರೂ ಅಪರಿಮಿತಫಲವು ಬರುವುದು. "ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂಬ ಶ್ರೀಕೃಷ್ಣನ ವಾಕ್ಯಗಳಿಗೆ ಮೂರು ನಾಲ್ಕು ಅಭಿಪ್ರಾಯಗಳಿರುವುವು. ಕಾಮ್ಯಕರ್ಮವು ಸಂಸಾರಭಯದಿಂದ ಕಾಪಾಡಲಾರದು. ಸಂಸಾರದಲ್ಲಿ ಸ್ವಲ್ಪ ಕಾಲವೇ ನಿಷ್ಕಾಮಕರ್ಮವನ್ನು ಅಧಿಕಾರಿಯು ಅನುಷ್ಠಾನಮಾಡಿದರೂ ಪರಮಾತ್ಮನು ಅದನ್ನು ಎಂದೆಂದಿಗೂ ಮರೆಯದೆ ಅಧಿಕಾರಿಯನ್ನು, ಕುರಿ, ಕೋಳಿ ಮುಂತಾದ ದುರ್ಯೋನಿಗಳಿಗಾಗಲೀ ನರಕಾದ್ಯನರ್ಥಗಳಿಗಾಗಲೀ ಪ್ರಾಯೇಣ ಗುರಿಮಾಡದೆ ಕ್ರಮವಾಗಿ ಜ್ಞಾನದ್ವಾರಾ ಮೋಕ್ಷರೂಪವಾದ ಮಹಾಫಲವನ್ನೇ ಕೊಟ್ಟು ಸಂಸಾರಭಯದಿಂದಲೂ ಬಿಡಿಸಿಬಿಡುವನು. 5. ಮತ್ತು ಕಾಮ್ಯಕರ್ಮವು ಅನಿತ್ಯಫಲವನ್ನು ಕೊಡುವುದು. ಆದರೆ ನಿಷ್ಕಾಮಕರ್ಮದಿಂದ ಬರುವ ಮೋಕ್ಷರೂಪಫಲವು ನಿತ್ಯವಾದುದು. ಸ್ವಲ್ಪ ಕಾಲದಲ್ಲಿ ಆಚರಿಸಿದ ಕರ್ಮವೂ ಕೂಡ ಶಾಶ್ವತಫಲವನ್ನು ಕೊಡಿಸುವುದು. ನಾಶಶಿರಸ್ಕವಾದ ಕರ್ಮವು ನಾಶರಹಿತವಾದ ಫಲವನ್ನು ಕೊಡಿಸುವುದು. 6. ಇದೂ ಅಲ್ಲದೆ ಸ್ವಲ್ಪ ನಿಷ್ಕಾಮ

ಕರ್ಮಕ್ಕೆ ಭಕ್ತಿತುಷ್ಟನಾದ ಪರಮಾತ್ಮನು ಅನಂತಮಡಿಮಾಡಿ ಅಧಿಕವಾಗಿ ಫಲವನ್ನೂ ಕೊಡುವನು. ಕಾಮ್ಯಕರ್ಮಕ್ಕೆ ಸೇವಾನುಗುಣವಾದ ಫಲವೇ ಹೊರತು ಭಗವಂತನು ಅದನ್ನು ಅಧಿಕಮಾಡಿ ಫಲವನ್ನು ಹೆಚ್ಚಿಸಿ ಕೊಡುವುದಿಲ್ಲ.

ಇತರ ದೇವತೆಗಳನ್ನು ಕುರಿತು ಉಪಾಸನೆಮಾಡುವುದನ್ನು ಬಿಟ್ಟು ಸಕಲ ದೇವತೆಗಳನ್ನೂ ಭಗವತ್ಪರಿವಾರಭೂತರೆಂದು ಚಿಂತಿಸಿ ಸಾಕ್ಷಾತ್ಪರಮಾತ್ಮನ ಪ್ರೀತ್ಯರ್ಥವಾಗಿ ಕರ್ಮಾನುಷ್ಠಾನಮಾಡುವವರು ಸುಲಲಿತವಾಗಿ ಮೋಕ್ಷವನ್ನು ಹೊಂದುವರೆಂದೂ, ಲಕ್ಷ್ಮ್ಯಾದಿಗಳನ್ನು ಉಪಾಸನೆಮಾಡುವವರು ಬಹು ಕಷ್ಟಪಡಬೇಕಾಗುವುದೆಂದೂ, ಶ್ರೀಕೃಷ್ಣನು "ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಂ" ಎಂಬ ಶ್ಲೋಕದಲ್ಲಿ ನಿರೂಪಿಸಿರುತ್ತಾನೆ. ಶ್ರೀಮದಾಚಾರ್ಯರೂ ಅವ್ಯಕ್ತೋಪಾಸನೆಯು ಪರಮಾತ್ಮನ ಉಪಾಸನೆಗಿಂತ ಹೆಚ್ಚು ಕಠಿಣವಾಗುವುದಕ್ಕೆ ಅನೇಕ ಕಾರಣಗಳನ್ನು ನಿರೂಪಿಸುವಾಗ ಲಕ್ಷ್ಮ್ಯಾದಿದೇವತೆಗಳು ಸಾಧನಸಂಪೂರ್ತಿಯುಳ್ಳವರಿಗೆ ಫಲವನ್ನು ಕೊಡತಕ್ಕವರೇ ಹೊರತು ಅಧಿಕಾರಿಯಲ್ಲಿ ನಿಂತು ತಮ್ಮ ಪ್ರೇರಣೆಯಿಂದ ತಮ್ಮ ಸಾಧನಗಳನ್ನು ಸಂಪಾದನೆ ಮಾಡಿಕೊಡತಕ್ಕವರಲ್ಲವೆಂದು ಸಪ್ರಮಾಣವಾಗಿ ಹೇಳಿರುವರು. ಶ್ರೀಪರಮಾತ್ಮನು ಹೀಗಲ್ಲ. "ದೇವಸ್ತು ತಾನಿ ಸಾಧನಾನಿ ಭಕ್ತಿಮತಃ ಸ್ವಯಮೇವ ಪ್ರಯತ್ನೇನ ದದಾತೀತಿ ಸೌಕರ್ಯಮಿತಿ ಭಕ್ತಾನಾಂ ಭಗವದುಪಾಸನೇ" ಎಂದು ಗೀತಾಭಾಷ್ಯದಲ್ಲಿ ನಿರೂಪಿಸಿರುವರು. ಪರಮಾತ್ಮನು ಭಕ್ತಿಯಿಂದ ಸಹಿತನಾದ ನಿಷ್ಕಾಮನಾದ ಅಧಿಕಾರಿಯಲ್ಲಿ ಪ್ರವಿಷ್ಟನಾಗಿ ತಾನೇ ಒಂದು ವಿಶೇಷರೂಪದಿಂದ ಪ್ರೇರಣೆಮಾಡಿ ಇಂದ್ರಿಯಜಯಾದಿ ಸಾಧನಸಂಪತ್ತಿಗಳನ್ನು ಕೊಟ್ಟು ತನ್ನ ಸೇವೆಯನ್ನು ಮಾಡಿಸಿಕೊಂಡು ಫಲವನ್ನು ಕೊಡುವನಾದುದರಿಂದ ಸಾಕ್ಷಾದ್ವಿಷ್ಣು ಪ್ರೀತಿಕರವಾದ ಉಪಾಸನೆಯು ಬಹುಸುಲಭವು ಎಂದು ಅರ್ಥವು.

ಈ ವಿಷಯವನ್ನು ನಿಷ್ಕಾಮಭಗವದಾರಾಧನೆಯ ವಿಷಯದಲ್ಲಿಯೂ ಅನ್ವಯಿಸಿಕೊಳ್ಳಬಹುದು. ನಿಷ್ಕಾಮನಾಗಿ ಭಗವಂತನ ಪ್ರೀತ್ಯರ್ಥವಾಗಿ ಕರ್ಮಮಾಡುವುದಕ್ಕೆ ಉದ್ಯುಕ್ತನಾದಾಗಲೇ ಶ್ರೀಹರಿಯು ಆತನ ಭಕ್ತಿಗೆ ಪ್ರಸನ್ನನಾಗಿ ನಿರ್ವಿಘ್ನವಾಗಿ ಆತನ ಸೇವೆಯನ್ನು ಪೂರ್ಣಮಾಡಿ ಸ್ವೀಕರಿಸುವನು ಎಂದು ಶ್ರುತಿಸ್ಮೃತಿಗಳು ಹೇಳುವುವು. ಇದು ಸ್ಪಷ್ಟವಾದ ಪಂಚರಾತ್ರಾಗಮ ವಚನವು:—

**ಸಂಕಲ್ಪಾದೇವ ಭಗವಾನ್ ತತ್ತ್ವತೋ ಭಾವಿತಾತ್ಮನಾಂ ।**
**ವ್ರತಾಂತಮಖಿಲಂ ಕಾಲಂ ಸೇಚಯತ್ಯಮೃತೇನ ತು ॥**
**ಜ್ಞಾತ್ವೈವ ಬಂಧಂ ಮರ್ತ್ಯೇನ ಭವಿತವ್ಯಂ ಸದೈವ ಹಿ ।**
**ಪ್ರಾಪ್ತಯೇ ಸರ್ವಕಾಮಾನಾಂ ಸಂಸಾರಭಯಭೀರುಣಾಂ ॥ ***

ಮತ್ತೊಂದು ಸ್ಥಳದಲ್ಲಿ ಹೀಗಿರುವುದು :—

**ಪ್ರವೃತ್ತಿಕಾಲಾದಾರಭ್ಯ ಆತ್ಮಲಾಭಾವಸಾನಿಕಂ ।**
**ಯತ್ರಾವಕಾಶೋ ವಿಘ್ನಾನಾಂ ವಿದ್ಯತೇ ನ ಕದಾಚನ ॥†**

2. ನಿಷ್ಕಾಮ ಭಗವದಾರಾಧನೆಯ ಮಹಿಮೆಯು ಈ ಪ್ರಕಾರವಾಗಿರುವುದು. ಇನ್ನು ನಿಷ್ಕಾಮಕರ್ಮವನ್ನು ಆರಂಭ ಮಾಡುವ ಮುಮುಕ್ಷುವಿನಲ್ಲಿ ಅವಶ್ಯವಾಗಿ ಇರಬೇಕಾದ ಧರ್ಮಗಳು ಯಾವುವು ಎಂಬ ನಿಮ್ಮ ಪ್ರಶ್ನೆಗೆ ಉತ್ತರವನ್ನು ಶ್ರೀಕೃಷ್ಣೋಕ್ತಿಗಳಿಂದಲೇ ತೋರಿಸುವೆವು.

1. ಯಥಾಯೋಗ್ಯವಾದ ಹರಿಭಕ್ತಿಯು ಪ್ರಥಮಾಂಗವೆಂದು ಶ್ರೀಕೃಷ್ಣನು ಹೇಳುತ್ತಾನೆ :—

**(1) ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥**

—(9. 26.)

---

* ನಿಷ್ಕಾಮವಾದ ತನ್ನ ಭಕ್ತರು ತನ್ನನ್ನು ಉದ್ದೇಶಮಾಡಿ ವ್ರತಗಳನ್ನು ಅನುಷ್ಠಿಸಬೇಕೆಂದು ಸಂಕಲ್ಪಗಳನ್ನು ಮಾಡಿದ ಒಡನೆಯೇ, ಪರಮಾತ್ಮನು ಅದನ್ನು ತಿಳಿದವನಾಗಿ, ತನ್ನ ಅಮೃತ ದೃಷ್ಟಿಯಿಂದ ವ್ರತಸಮಾಪ್ತಿಯಾಗುವ ಪೂರ್ಣಕಾಲದಲ್ಲೂ ಅವರನ್ನು ತೋಯಿಸುವನು. ಏತಕ್ಕೆಂದರೆ ಮರ್ತ್ಯನಾದ ಮನುಷ್ಯನ ಬಂಧವು ದುರತಿಕ್ರಮವು, ಮತ್ತು ಸಂಸಾರಭಯದಿಂದ ಕಂಗೆಟ್ಟ ಮಾನವರು ತನ್ನಿಂದ ಅಭೀಷ್ಟವಾದ (ಜ್ಞಾನಾದಿ)ಕಾಮಗಳನ್ನು ಹೊಂದಲಿ ಎಂದು ತಿಳಿದು ಶ್ರೀಪರಮಾತ್ಮನು ತನ್ನ ಆರಾಧಕರಿಗೆ ಈ ರೀತಿಯಾಗಿ ಅನುಗ್ರಹಮಾಡುವನು.

† ಈ ನಿಷ್ಕಾಮಕರ್ಮಾನುಷ್ಠಾನ ಮಾಡುವವರಿಗೆ ಕರ್ಮಾರಂಭಕಾಲ ಮೊದಲುಗೊಂಡು ಪರಮಾತ್ಮದರ್ಶನವಾಗುವವರೆಬಿಗೂ ವಿಘ್ನಗಳಿಗೇ ಅವಕಾಶವಿಲ್ಲ. (ಪರಮಾತ್ಮನು ಪ್ರಾಪ್ತವಾದ ವಿಘ್ನಗಳೆಲ್ಲವನ್ನೂ ಕತ್ತರಿಸಿಬಿಡುವನೆಂದು ಭಾವವು.)

"ಎಲೈ ಪಾರ್ಥನೇ! ತುಲಸ್ಯಾದಿಪತ್ರಗಳನ್ನಾಗಲಿ, ಜಾಜಿಯೇ ಮುಂತಾದ ಪುಷ್ಪಗಳನ್ನಾಗಲಿ, ನಾರಿಕೇಳಾದಿ ಫಲಗಳನ್ನಾಗಲಿ, ಅಥವಾ ಶುದ್ಧಜಲವನ್ನಾಗಲಿ ಯಾವನು ನನಗೆ ಭಕ್ತಿಯಿಂದ ಕೊಡುತ್ತಾನೆಯೋ, ಅಂಥಾ ಜಿತಮನಸ್ಕನಾದ ವಿಷಯವಿರಕ್ತನಿಂದ ಕೊಡಲ್ಪಟ್ಟ ಪತ್ರಾದಿಸರ್ವವನ್ನೂ ನಾನು ಸ್ವೀಕರಿಸುತ್ತೇನೆ."

ಭಕ್ತಿಯಿಂದ ಸಮರ್ಪಿಸಲ್ಪಟ್ಟ ಪುಷ್ಪಾದಿಗಳನ್ನೇ ಭಗವಂತನು ಸ್ವೀಕರಿಸುವನು. ಭಕ್ತಿರಹಿತನ ಆರಾಧನೆಯನ್ನು, ದುರ್ಯೋಧನನ ಆತಿಥ್ಯವನ್ನು ನಿರಾಕರಿಸಿದಂತೆ, ಶ್ರೀಕೃಷ್ಣನು ತಿರಸ್ಕರಿಸುವನು. ಆದುದರಿಂದ ಜ್ಞಾನೋಪಯೋಗಿಯಾದ ಉತ್ತಮಕರ್ಮವನ್ನು ಮುಮುಕ್ಷುವು ಭಗವದ್ಭಕ್ತಿಯಿಂದ ಆಚರಿಸಬೇಕು.

ii. ಪರಂತು ಮಾಡತಕ್ಕ ಕರ್ಮವನ್ನು ಸ್ವರ್ಗಸುಖಾಪೇಕ್ಷೆಯಿಂದಲಾಗಲಿ, ವಿಷಯಕಾಂಕ್ಷೆಯಿಂದಲಾಗಲಿ, ಆಚರಿಸಬಾರದು. ಅಷ್ಟೇ ಅಲ್ಲ. ಕರ್ಮಾನುಷ್ಠಾನವನ್ನು ಮಾಡುವಾಗ ವಿಷಯಧ್ಯಾನವನ್ನು ಮಾಡುತ್ತಿರಬಾರದು. ಮನಸ್ಸಿನಲ್ಲಿ ವಿಷಯಚಿಂತನೆಯನ್ನು ಮಾಡುತ್ತಾ ಬಾಹ್ಯವ್ಯಾಪಾರಮಾತ್ರರಹಿತನಾದವನು ಕಪಟಿಯು ಎಂದು ಶ್ರೀಕೃಷ್ಣನು ನಿಂದಿಸಿರುತ್ತಾನೆ. ಇಂಥಾ ರಾವಣಸಂನ್ಯಾಸವನ್ನು ಪರಿತ್ಯಜಿಸಿ ಮನಃಪೂರ್ವಕವಾಗಿ ಕರ್ಮಫಲಗಳನ್ನು ಅಪೇಕ್ಷಿಸದೆ, ವಿಷಯಧ್ಯಾನವನ್ನು ಮಾಡದೆ ಚಿತ್ತೈಕಾಗ್ರತೆಯಿಂದ ಸಹಿತನಾಗಿ ಕರ್ಮವನ್ನು ಆಚರಿಸಬೇಕು. ಶ್ರೀಕೃಷ್ಣನು ಹೇಳುತ್ತಾನೆ:—

(2) **ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರ್ನ್।**
**ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ॥**
**ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ।**
**ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ॥**

**—(3. 7.)**

ಎಲೈ ಅರ್ಜುನನೇ! ಕರ್ಮೇಂದ್ರಿಯಗಳನ್ನು (ಜ್ಞಾನೇಂದ್ರಿಯಗಳನ್ನೂ) ನಿಗ್ರಹಮಾಡಿ ರೂಪಾದಿ ವಿಷಯಗಳನ್ನು ಮನಸ್ಸಿನಿಂದ ಸ್ಮರಿಸುತ್ತಿರುವ

ಭ್ರಾಂತನು ಕಪಟಾಚಾರವುಳ್ಳವನು, ಡಾಂಭಿಕನು ಎನ್ನಿಸುವನು. ಯಾವಾತನು ಇಂದ್ರಿಯುಗಳನ್ನು ವಿಷಯುಗಳಿಗೆ ಹೋಗದಂತೆ ಮನಸ್ಸಿನಿಂದ ನಿಗ್ರಹಿಸಿ ಕರ್ಮೇಂದ್ರಿಯದಿಂದ ನಿಷ್ಕಾಮಕರ್ಮವನ್ನು ಆರಂಭಿಸುವನೋ ಆತನು ಶ್ರೇಷ್ಠನು.

iii. ಮತ್ತು ಕರ್ಮಾರಂಭದಲ್ಲಿ, ಕರ್ಮಾನುಷ್ಠಾನ ಕಾಲದಲ್ಲಿಯೂ ಸಹ **"ನಾಹಂ ಕರ್ತಾ ಹರಿಃ ಕರ್ತಾ"** ಎಂದರೆ ಭಗವಂತನೇ ಸ್ವತಂತ್ರನು, ಆತನ ಪ್ರೇರಣೆಯಿಂದಲೇ ನನ್ನ ಕರ್ಮವು ನಡೆಯುತ್ತಿರುವುದು ಎಂಬ ಜ್ಞಾನ ಪೂರ್ವಕವಾಗಿ ಪರಮಾತ್ಮನ ಸ್ಮೃತಿಯಿದ್ದರೇ ಆ ಕರ್ಮವು ಭಗವದಾರಾಧನೆಯೆನ್ನಿಸುವುದು. ಶ್ರೀಕೃಷ್ಣನ ತೃತೀಯಾಧ್ಯಾಯದ ಈ ವಾಕ್ಯಗಳು ಈ ವಿಷಯದಲ್ಲಿ ಪ್ರಮಾಣವಾಗಿರುತ್ತವೆ:—

(3) **ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।**
**ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥**
**ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ।**
**ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥**
**ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ॥**
—(3. 27-29.)

**ಅರ್ಥ :— ಪ್ರಕೃತೇಃ ಗುಣೈಃ**— ಪ್ರಕೃತಿನಾಮಕ ಈಶ್ವರನ ಜ್ಞಾನೇಚ್ಛಾದಿ ಗುಣಗಳಿಂದ, ಜೀವಸ್ವಭಾವಾನುಗುಣವಾದ ಗುಣಗಳಿಂದ, ಮತ್ತು ಜಡಪ್ರಕೃತಿಯ ಪರಿಣಾಮಗಳಾದ ದೇಹೇಂದ್ರಿಯಾಂತಃಕರಣಾದಿಗಳಿಂದ, ಪ್ರೇರಿತವಾಗಿ ನಡೆಯುವ ಸರ್ವಕರ್ಮಗಳೂ ಕೇವಲ ನನ್ನಿಂದಲೇ ಸ್ವತಂತ್ರವಾಗಿ ಆಚರಿಸಲ್ಪಡುವುವು ಎಂದು ಅಹಂಕಾರದಿಂದ ಭ್ರಾಂತಚಿತ್ತವುಳ್ಳ ಮೂಢನು ತಿಳಿಯುತ್ತಾನೆ. ಎಲೈ ಮಹಾಬಾಹುವೇ ! ತತ್ವಜ್ಞಾನಿಯಾದರೋ, ಗುಣಕರ್ಮವಿಭಾಗಯೋಃ—ಗುಣವಿಭಾಗವನ್ನು ಎಂದರೆ ಪರಮಾತ್ಮನ ಜ್ಞಾನೇಚ್ಛಾದಿ ಗುಣಗಳು, ಜೀವನ ಸ್ವಾಭಾವಿಕಗುಣಗಳು, ಪ್ರಕೃತಿ ಪರಿಣಾಮಗಳಾದ ದೇಹೇಂದ್ರಿಯಾಂತಃಕರಣಗಳೆಂಬ ಗುಣಗಳು ಇವುಗಳನ್ನೂ ಮತ್ತು ಈಶ್ವರನ ಸ್ವತಂತ್ರಪ್ರೇರಕ ಕರ್ಮಗಳು, ಜೀವನ ಅಸ್ವತಂತ್ರ ಕರ್ಮಗಳು, ಪ್ರಕೃತಿಯ

ವಿಕಾರ ಕ್ರಿಯೆಗಳು ಈ ರೀತಿ ಕರ್ಮವಿಭಾಗವನ್ನೂ ಚೆನ್ನಾಗಿ ತಿಳಿದು, ಗುಣಾ ಗುಣೇಷು ವರ್ತಂತೇ— ಸ್ವತಂತ್ರನಾದ ಭಗವಂತನ ಜ್ಞಾನೇಚ್ಛಾಪ್ರಯತ್ನಾದಿಗುಣಗಳು, ಜೀವನ ಸ್ವಾಭಾವಿಕಗುಣಗಳಿಗೂ ಜೀವನ ಪ್ರಾಕೃತ ದೇಹದ ಇಂದ್ರಿಯಾದಿಗಳೆಂಬ ಗುಣಗಳಿಗೂ ಪ್ರೇರಕತನದಿಂದ ಪ್ರವರ್ತಿಸುತ್ತವೆ; ನಾನು ಸ್ವತಂತ್ರಕರ್ತನಲ್ಲ ಎಂದು ತಿಳಿದು, ನ ಸಜ್ಜತೇ— ಕರ್ಮ ಮಾಡುವುದರಲ್ಲಿ ನಾನೇ ಸ್ವತಂತ್ರನೆಂಬ ಅಭಿಮಾನವನ್ನು ಮಾಡುವುದಿಲ್ಲ. ಈ ರೀತಿ ಗುಣ ಕರ್ಮ ವಿಭಾಗವನ್ನು ತಿಳಿಯದ ಭ್ರಾಂತರು ತಾವೇ ಸ್ವತಂತ್ರರೆಂದು ಅಭಿಮಾನ ಹೊಂದುತ್ತಾರೆ ಮತ್ತು ಇಂದ್ರಿಯವಿಷಯಗಳಲ್ಲಿ ಆಸಕ್ತರಾಗುತ್ತಾರೆ.

ಚತುರ್ಥಾಧ್ಯಾಯಗತ ವಾಕ್ಯಗಳೂ ವಿಶದವಾಗಿಯೇ ಇರುವುವು:—

(4) **ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।**
**ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥**
**ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।**
**ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥**
**ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್॥**
—(4. 16-18.)

ಎಲೈ ಪಾರ್ಥನೇ ! ಕರ್ಮವು ಯಾವುದು ? ಅಕರ್ಮವು ಯಾವುದು ? ವಿಕರ್ಮವು ಯಾವುದು ? ಎಂದು ತಿಳಿಯುವ ವಿಷಯದಲ್ಲಿ ಪಂಡಿತರೂ ಸಹ ಮೋಹಿತರಾಗುತ್ತಾರೆ. ಆದುದರಿಂದ ಯಾವ ಕರ್ಮ ಸ್ವರೂಪವನ್ನು ತಿಳಿದು ಅನುಷ್ಠಾನ ಮಾಡುವುದರಿಂದ ನೀನು ಪಾಪದಿಂದ ಮುಕ್ತನಾಗುತ್ತಿಯೋ ಅಂತಹ (ನಿಷ್ಕಾಮ) ಕರ್ಮವನ್ನು ನಿನಗೆ ಉಪದೇಶ ಮಾಡುತ್ತೇನೆ, ಕೇಳು. ಕರ್ಮ ಅಕರ್ಮ, ವಿಕರ್ಮಗಳನ್ನು ವಿವೇಕಮಾಡಿ ಅಂದರೆ ಸತ್ಕರ್ಮವನ್ನು ಅಕರ್ಮವಿಕರ್ಮಗಳಿಂದ ಬೇರೆಯಾಗಿ, ಅಕರ್ಮವನ್ನು ಕರ್ಮವಿಕರ್ಮಗಳಿಂದ ಭಿನ್ನವಾದ ಲಕ್ಷಣವುಳ್ಳದ್ದನ್ನಾಗಿ, ವಿಕರ್ಮವನ್ನು ಕರ್ಮಾಕರ್ಮಗಳಿಂದ ವ್ಯಾವೃತ್ತ ಸ್ವರೂಪವುಳ್ಳದ್ದನ್ನಾಗಿ (ಅವುಗಳ ಲಕ್ಷಣಗಳನ್ನು) ಸರಿಯಾಗಿ

ತಿಳಿಯಬೇಕು. ಕರ್ಮಾದಿಜ್ಞಾನವು ಅತಿದುರ್ಘಟವು, ಮತ್ತು ಕರ್ಮ, ಅಕರ್ಮ, ವಿಕರ್ಮಗಳೆಲ್ಲವೂ ಭಗವಂತನ ಅಧೀನವೆಂದು ತಿಳಿಯಬೇಕು. ಎಲೈ ಪಾರ್ಥನೇ! ಯಾವಾತನು ತಾನು ಸ್ವೋಚಿತ ಕರ್ಮಮಾಡುವಾಗಲೂ ತನಗೆ ಕರ್ಮಾಭಾವವನ್ನು ಎಂದರೆ ಸ್ವತಂತ್ರಕರ್ತೃತ್ವರಾಹಿತ್ಯವನ್ನು ತಿಳಿಯುತ್ತಾನೆಯೋ, ಎಂದರೆ ತಾನು ಕರ್ಮಮಾಡುವಾಗ ಭಗವಂತನು ಸ್ವತಂತ್ರಕರ್ತನೆಂದು ತಿಳಿಯುವನೋ ಮತ್ತು ಅಕರ್ಮಣಿ– ಜೀವನಾದ ತನ್ನಿಂದ ಆಚರಿಸಲ್ಪಡುವ ಕ್ರಿಯಾರಹಿತವಾದ ಸುಷುಪ್ತಿ ಸ್ವಪ್ನಾದ್ಯವಸ್ಥೆಗಳಲ್ಲಿಯೂ, ಕರ್ಮ ಯಃ ಪಶ್ಯೇತ್– ಸ್ವತಂತ್ರ ಭಗವಂತನ ಕ್ರಿಯೆಗಳುಂಟೆಂದು ಯಾವಾತನು ತಿಳಿಯುತ್ತಾನೆಯೋ ಆತನು ಮನುಷ್ಯರಲ್ಲಿ ಜ್ಞಾನಿಯು. (ಸರ್ವಾವಸ್ಥೆಗಳಲ್ಲಿಯೂ, ಸರ್ವ ಕರ್ಮಗಳಲ್ಲಿಯೂ ಭಗವಂತನು ಸ್ವತಂತ್ರಕರ್ತನು ಎಂದು ತಿಳಿಯುವವನು ವಿವೇಕಿಯು ಎಂದು ಭಾವವು.) ಆತನೇ ಜ್ಞಾನೋಪಾಯವುಳ್ಳವನು; ಆತನೇ ಸ್ವಯೋಗ್ಯವಾದ ಸಕಲ ಕರ್ಮಗಳಿಗೂ ಫಲವನ್ನು ಹೊಂದಿದವನು.

ಅಷ್ಟಾದಶಾಧ್ಯಾಯದಲ್ಲಿಯೂ ಕೂಡ ಪರಮಾತ್ಮನ ಸ್ವಾತಂತ್ರ್ಯವನ್ನು ತಿಳಿಯದೇ ಕರ್ಮಮಾಡುವವನು ಅವಿವೇಕಿಯು ಎಂದು ಶ್ರೀಕೃಷ್ಣನು ಹೇಳಿರುವನು:—

(5) **ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।**
**ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಂ ॥**
**ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ।**
**ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಂ ॥**
**ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।**
**ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥**
**ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।**
**ಪಶ್ಯತ್ಯಕೃತಬುದ್ಧಿತ್ವಾತ್ ನ ಸ ಪಶ್ಯತಿ ದುರ್ಮತಿಃ ॥**
—(18. 13-16.)

**ಅರ್ಥ:**— ಎಲೈ ಮಹಾಬಾಹುವೇ! ಸಕಲ ಕರ್ಮಗಳೂ ಸ್ವರೂಪತಃ ನಿಷ್ಪನ್ನವಾಗಬೇಕಾದರೆ, (ಕರ್ಮಗಳು ಉತ್ಪನ್ನವಾಗಬೇಕಾದರೆ,) ಕಪಿಲನಾಮಕ

ಸಾಕ್ಷಾತ್ ಶ್ರೀಪರಮಾತ್ಮನಿಂದ ಉಪದಿಷ್ಟವಾದ ಸಾಂಖ್ಯಸಿದ್ಧಾಂತದಲ್ಲಿ* ಐದು ಕಾರಣಗಳು ನಿರೂಪಿಸಲ್ಪಟ್ಟಿರುವುವು. ದೇಹಭೂಮ್ಯಾದಿ ಅಧಿಷ್ಠಾನವು; ಪರಾಧೀನಕರ್ತನಾದ ಜೀವನು, ಇಂದ್ರಿಯಾದಿಕರಣಗಳು ; ಕರ್ಮೇಂದ್ರಿಯಗಳ ನಾನಾವಿಧವಾದ ಕ್ರಿಯೆಗಳು ಮತ್ತು ಮಾನಸಿಕ ಕ್ರಿಯೆಗಳು; ಮತ್ತು ದೈವಂ- ಅದೃಷ್ಟಾದಿ ನಿಯಾಮಕನಾದ ಸ್ವತಂತ್ರ ಪರಮಾತ್ಮನು ಐದನೆಯ ಕಾರಣವು. ಹೀಗೆ ಐದು ಕಾರಣಗಳು. ಇದರಲ್ಲಿ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಮನೋರೂಪವಾದ ಇಂದ್ರಿಯಗಳಿಂದ ಮನುಷ್ಯನು ನ್ಯಾಯವಾದ ಅಥವಾ ಅನ್ಯಾಯವಾದ ಯಾವ ಕರ್ಮವನ್ನು ಮಾಡಿದರೂ ಅದಕ್ಕೆ ಈ ಐದೂ ಕಾರಣಗಳುಂಟೆಂದು ತಿಳಿಯಬೇಕು. ಒಂದು ಕರ್ಮವು ಜೀವನಿಂದ ನಡೆಯಬೇಕಾದರೆ ಪಂಚಕಾರಣಗಳು ಇರಲಾಗಿ ಯಾವಾತನು ತಾನೊಬ್ಬನೇ ಆ ಕರ್ಮಕ್ಕೆ ಸ್ವತಂತ್ರವಾಗಿ ಕಾರಣನು ಎಂದು ತಿಳಿಯುವನೋ ಅಂಥವನು ಶ್ರವಣಾದಿಸಂಸ್ಕಾರರಹಿತವಾದ ಬುದ್ಧಿಯುಳ್ಳವನಾದುದರಿಂದ ದುರ್ಮತಿಯು, ವಿಪರೀತಜ್ಞಾನವುಳ್ಳವನು.

IV. ಭಗವತ್ಪ್ರೀತಿಕರವಾದ ನಿಷ್ಕಾಮ ಕರ್ಮವು ವಿಧ್ಯುಕ್ತವಾಗಿರಬೇಕು. ವೇದವಿಹಿತ ಕರ್ಮಗಳನ್ನೇ ವೇದೋಕ್ತರೀತಿಯಲ್ಲಿ ಅನುಷ್ಠಾನಮಾಡಿ ಪರಮಾತ್ಮನಿಗೆ ಅರ್ಪಿಸಬೇಕೇ ಹೊರತು ನಿಷಿದ್ಧಕರ್ಮಗಳನ್ನು ಅರ್ಪಿಸುವುದು ಅತಿತಾಮಸವಾದ ತುಚ್ಛವ್ಯಾಪಾರವೆಂದು ತಿಳಿಯಬೇಕು.
ಸಾತ್ವಿಕಕರ್ಮವನ್ನು ವಿವರಿಸುವಾಗ ಶ್ರೀಕೃಷ್ಣನು ಈ ಅಂಶವನ್ನು ಮರೆಯದೆ ಉಲ್ಲಿಖಿಸಿರುತ್ತಾನೆ:—

(6) **ನಿಯತಂ ಸಂಗರಹಿತಮರಾಗದ್ವೇಷತಃ ಕೃತಂ ।**
**ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ವಿಕಮುಚ್ಯತೇ ॥**—(18. 23.)

ಎಲೈ ಪಾರ್ಥನೇ! ನಿಯತಂ= ಸ್ವವರ್ಣಾಶ್ರಮೋಚಿತವಾದ ಮತ್ತು ವಿಧ್ಯುಕ್ತವಾದ, ಫಲಸ್ನೇಹರಹಿತವಾಗಿ ರಾಗದ್ವೇಷಗಳಿಲ್ಲದೆ, ಸ್ವಾತಂತ್ರ್ಯಾಭಿಮಾನರಹಿತವಾಗಿ ಮಾಡಲ್ಪಟ್ಟ ಕರ್ಮವು ಸಾತ್ವಿಕವು ಎನ್ನಿಸಲ್ಪಡುತ್ತದೆ.

———

* ಈಗ ಲೋಕದಲ್ಲಿರುವ ಷಡ್ದರ್ಶನಗಳಲ್ಲಿ ಒಂದಾದ ಸಾಂಖ್ಯಮತವು ದುರ್ಮತವು. ಇದು ಪರಮಾತ್ಮನಿಂದ ರಚಿಸಲ್ಪಟ್ಟುದಲ್ಲ.

# 18. ಹದಿನೆಂಟನೆಯ ಅಂಶವು.

## ಕರ್ಮಾನುಷ್ಠಾನವು (ಮುಂದುವರಿಸಿದ್ದು)

## ಸರ್ವಕರ್ಮಸಮರ್ಪಣಕ್ರಮವು.

**ಪ್ರಶ್ನೆ:**—ಸ್ವಾಮಿ! ಈ ಪ್ರಕಾರವಾದ ತಮ್ಮ ನಿರೂಪಣೆಯಿಂದ ನಮಗೆ ಮಹಾಸಂಕಟವು ಪ್ರಾಪ್ತವಾದಂತಾಗಿರುವುದು. ಹೇಗೆಂದರೆ "**ಪುಣ್ಯ ಪಾಪಗಳರ್ಪಿಸವನಡಿಗೆ**" ಇತ್ಯಾದಿ ರೀತಿಯಲ್ಲಿ ಜಗನ್ನಾಥದಾಸರೇ ಮೊದಲಾದ ಭಗವತ್ತತ್ವವನ್ನು ಸಮೀಚೀನವಾಗಿ ತಿಳಿದ ಅನೇಕ ಜ್ಞಾನಿಗಳು ಪಾಪವನ್ನು ಸೇರಿಸಿಕೊಂಡು ಸಕಲ ಕರ್ಮಗಳನ್ನೂ ಭಗವದಧೀನವನ್ನಾಗಿ ಮಾಡಬೇಕೆಂದು ತಿಳಿಸಿರುವರು. ಭಗದ್ಗೀತೆಯಲ್ಲಿಯೇ ಶ್ರೀಕೃಷ್ಣನೂ ಕೂಡ "ಶುಭಾಶುಭ ಪರಿತ್ಯಾಗೀ," "ಸರ್ವಧರ್ಮಾ ಪರಿತ್ಯಜ್ಯ", "ಸರ್ವಾರಂಭಪರಿತ್ಯಾಗೀ" ಎಂದು ಅನೇಕ ಶ್ಲೋಕಗಳಲ್ಲಿ ಪಾಪದಿಂದ ಸಹಿತವಾದ ಸರ್ವ ಕರ್ಮಗಳನ್ನೂ ಭಗವಂತನ ಪಾದದಲ್ಲಿ ಅರ್ಪಿಸಿ ನಿಶ್ಚಲಚಿತ್ತನಾಗಿರಬೇಕು ಎಂದು ಉಪದೇಶ ಮಾಡಿರುವನು. 2. ಪರಂತು ಸರ್ವ ಕರ್ಮಸಮರ್ಪಣೆಯು ಯುಕ್ತಿಸಿದ್ಧ ವಾಗಿಯೂ ಇರುವುದು. ಪರಮಾತ್ಮನೇ ಸರ್ವ ಸ್ವತಂತ್ರನು. ಜೀವನು ಕಲ್ಲಿನಂತೆ, ಸ್ವತಂತ್ರವಾಗಿ ಯಾವುದನ್ನು ಮಾಡುವುದಕ್ಕೂ ಸಮರ್ಥನಲ್ಲ. ಹೀಗಿರುವಲ್ಲಿ ಆತನು ಮಾಡಿಸಿದ ಸರ್ವ ಕರ್ಮಗಳನ್ನೂ ಆತನಿಗೇ ಅರ್ಪಿಸು ವುದು ಯುಕ್ತವಲ್ಲವೇ? ಆಗಮವೂ ಮತ್ತು ಅನುಮಾನವೂ ಕೂಡ ಪುಣ್ಯ ಪಾಪಗಳೆರಡನ್ನೂ ಪರಮಾತ್ಮನಿಗೆ ಸಮರ್ಪಿಸುವುದರಲ್ಲಿ ಸಾಧಕವಾಗಿರು ವಾಗ ತಾವು ಕೇವಲ ಅನಿಷಿದ್ಧ ಕರ್ಮಗಳನ್ನೇ ಆಚರಿಸಿ ಪರಮಾತ್ಮನಿಗೆ ಅರ್ಪಿಸಬೇಕೆಂದು ಹೇಳಲು ಕಾರಣವೇನು?

**ಉತ್ತರ :— ಶ್ರೀಶ್ರೀಗಳವರು:—** 1. "ಪುಣ್ಯಪಾಪಗಳರ್ಪಿಸು" "ಶುಭಾಶುಭಪರಿತ್ಯಾಗೀ" ಇತ್ಯಾದಿ ವಾಕ್ಯಗಳಿಗೆ ದುರರ್ಥಗಳನ್ನು ಮಾಡಿ ಕೊಂಡು ಪ್ರಶ್ನೆಮಾಡುತ್ತೀರಿ. ಯದ್ಯಪಿ "ಪುಣ್ಯಪಾಪಾದಿಕಂ ಕರ್ಮ ಅರ್ಪಣಂ ಕುರು ಸರ್ವದಾ" ಇತ್ಯಾದಿ ರೀತಿಯಲ್ಲಿ ಕೆಲವು ಪ್ರಮಾಣವಚನ ಗಳೂ ಇರುವುವು. ಆದರೆ ನಿರವಕಾಶವಾದ ಭಗವದ್ವಚನಾನುಗುಣವಾಗಿ ಸಾವ ಕಾಶವಾದ ಮತ್ತು ಮೋಹಕವಾದ ಈ ಪ್ರಕಾರವಾದ ವಾಕ್ಯಗಳಿಗೆ ಪ್ರಕರಣೋ

ಚಿತವಾದ ಯಥಾರ್ಥವಾದ ಅರ್ಥವನ್ನು ಹೇಳಬೇಕಾಗಿರುವುದು. ಯಾತಕ್ಕೆಂದರೆ ಯಾವ ದಾಸರಾಯರು "ಪುಣ್ಯಪಾಪಗಳರ್ಪಿಸವನಡಿಗೆ" ಎಂದು ಹೇಳಿದರೋ ಅವರೇ **"ಪರಮೋತ್ಸವದಿಂದ" "ಪರಮಾದರದಿ"** ಇತ್ಯಾದಿ ವಿಶೇಷಣಗಳನ್ನು ಕೊಟ್ಟಿರುವರು. ಪರಮಭಕ್ತಿಯಿಂದ ಸಹಿತವಾಗಿ ಮಾಡಿದ ಪಾಪಗಳನ್ನು ಅವನಿಗೆ ಅರ್ಪಿಸು ಎಂದು ಹೇಳಿದರೆ ಅನ್ಯಾರ್ಥವನ್ನು ಕಲ್ಪಿಸದೇ ಇರುವುದು ಹೇಗೆ? ಹೇಗೆಂದರೆ "ಶ್ರುತಿಸ್ಮೃತೀ ಹರೇರಾಜ್ಞೇ" ಎಂಬ ಪ್ರಮಾಣವಚನವಿರುವುದರಿಂದ ಪಾಪವೆಂದರೆ ಪರಮಾತ್ಮನ ಆಜ್ಞೋಲ್ಲಂಘನೆಯೆನ್ನಿಸುವುದು. ಪರಮಾತ್ಮನಲ್ಲಿ ಭಕ್ತಿಯಿಂದ ಯುಕ್ತನಾಗಿ ಅವನ ಆಜ್ಞೆಯನ್ನು ಉಲ್ಲಂಘಿಸುವುದು ಅಸಂಭಾವಿತವು. ಇದು ಅನ್ಯತ್ರೋಕ್ತವಾದ ಶ್ರೀಕೃಷ್ಣನ ಮಾತು :—

**ಶ್ರುತಿಸ್ಮೃತೀ ಮಮೈವಾಜ್ಞೇ ಯ ಉಲ್ಲಂಘ್ಯ ಪ್ರವರ್ತತೇ।**
**ಆಜ್ಞಾಛೇದೀ ಮಮ ದ್ವೇಷೀ ಮದ್ಭಕ್ತೋಽಪಿ ನ ವೈಷ್ಣವಃ ॥**

ನಾವು ಯಾವಾತನನ್ನು ಪ್ರೀತಿಮಾಡುತ್ತೇವೋ ಅಂಥಾ ಪುರುಷನನ್ನೇ ಅದೇಸಮಯದಲ್ಲಿ ದೊಣ್ಣೆಯಿಂದ ಹೊಡೆಯುವುದು ಸಂಭಾವಿತವಾಗುವುದೇ? ಆಗಲಾರದು. ಆದುದರಿಂದ ಪರಮಾದರದಿಂದ ಒಡಗೂಡಿ ಪುಣ್ಯಪಾಪಗಳನ್ನು ಅವನಿಗೇ ಅರ್ಪಿಸು ಎಂಬ ದಾಸರಾಯರ ವಾಕ್ಯಗಳಿಗೂ, "ಪುಣ್ಯಪಾಪಾದಿಕಂ ಕರ್ಮ ಅರ್ಪಣಂ ಕುರು" ಇತ್ಯಾದಿ ಪುರಾಣ ವಾಕ್ಯಗಳಿಗೂ, "ಶುಭಾಶುಭ ಪರಿತ್ಯಾಗೀ" ಇತ್ಯಾದಿ ಶ್ರೀಕೃಷ್ಣನ ವಾಕ್ಯಗಳಿಗೂ ಬೇರೆ ಅರ್ಥವನ್ನೇ ಹೇಳಬೇಕು.

2. ಭಕ್ತಿಯಿಲ್ಲದಿದ್ದರೂ ಚಿಂತೆ ಇಲ್ಲ; ಪುಣ್ಯಪಾಪಾತ್ಮಕವಾದ ಸಕಲ ಕರ್ಮಗಳನ್ನೂ ಸರ್ವದಾ ಸರ್ವಾವಸ್ಥೆಯಲ್ಲಿಯೂ ಪರಮಾತ್ಮನಿಗೆ ಅರ್ಪಿಸಬಹುದು ಎಂಬ ಮತವು ನಿಮಗೂ ಸಮ್ಮತವಲ್ಲ. ಮತ್ತು ಯಾರೂ ಒಪ್ಪತಕ್ಕದ್ದಲ್ಲ. ಹಾಗೆ ಅಂಗೀಕರಿಸಿದರೆ ಯಥೇಷ್ಟವಾಗಿ ಆಸುರಕೃತ್ಯಗಳನ್ನು ಮಾಡಿ ಪರಮಾತ್ಮನಿಗೆ ಸಮರ್ಪಿಸುತ್ತಿರಬಹುದು. ಚೋರಾದಿಗಳಿಗೂ, ದುರಾಚಾರಿಗಳಿಗೂ, ಮದ್ಯಪಾನ, ಸುವರ್ಣಸ್ತೇಯಾದಿ ಮಹಾಪಾತಕಗಳನ್ನು ಆಚರಿಸಿದವರಿಗೂ ದಂಡಾದಿ ಅನರ್ಥಗಳು ಆಗುವುದಕ್ಕೆ ಕಾರಣವಿಲ್ಲ. ನಿಷೇಧಶಾಸ್ತ್ರಕ್ಕೆ ಪ್ರವೃ

ತ್ರಿಯೇ ಲುಪ್ತಪ್ರಾಯವಾಗುವುದು. ಮತ್ತು ಅನ್ಯಾಯಾರ್ಜಿತದ್ರವ್ಯದಿಂದ ಲಾದರೂ ಯಜ್ಞಯಾಗಾದಿಗಳನ್ನು ಸರ್ವರೂ ಮಾಡಬಹುದೆಂದು ಒಪ್ಪಬೇಕಾ ಗುವುದು. ಕಿಂಚ ಈ ದುಷ್ಟವಾದವು ಯುಕ್ತಿಹತವಾಗಿಯೂ ಇರುವುದು. ಭಕ್ತಿರಹಿತನಾದವನು ಕೊಟ್ಟ ಉತ್ತಮ ವಜ್ರರತ್ನಾದಿದ್ರವ್ಯಗಳನ್ನೂ, ಭಕ್ತಿ ರಹಿತನ ತಪಸ್ಸನ್ನೂ ಸಹ ಪರಮಾತ್ಮನು ತಿರಸ್ಕರಿಸುವನು. ಹೀಗಿರುವಲ್ಲಿ ಭಕ್ತಿ ಯಿಲ್ಲದವನ ಪಾಪವನ್ನು ಸಮರ್ಪಿಸಿದರೆ ಪರಮಾತ್ಮನು ಅದನ್ನು ಸ್ವೀಕರಿಸು ವುದು ಅಸಂಭಾವಿತವು.

3. ಅಷ್ಟೇ ಅಲ್ಲ. ಪರಮಾತ್ಮನಿಗೆ ಅರ್ಪಿತವಾದುದು ಅನಂತವಾಗಿ ಜೀವನಭೋಗಕ್ಕೇ ರೂಪಾಂತರದಲ್ಲಿ ಪರಮಾತ್ಮನಿಂದ ಕೊಡಲ್ಪಡುವುದೆಂದು ಶಾಸ್ತ್ರದಲ್ಲಿ ನಿಶ್ಚಿತವಾಗಿರುತ್ತದೆ. ಹೀಗಿರುವಲ್ಲಿ ಪಾಪಗಳನ್ನು ಅರ್ಪಿಸಿದರೆ ಪಾಪವೂ ಅನಂತಮಡಿಯಾಗಿ ಜೀವನ ಭೋಗಕ್ಕೇ ಬರುವುದೆಂದು ಅಂಗೀಕರಿಸ ಬೇಕಾಗುವುದು. ಪಾಪಫಲವಾದ ಅಜ್ಞಾನ ದುಃಖಾದಿಗಳು ಯಾರಿಗೂ ಇಷ್ಟ ವಲ್ಲವಾದುದರಿಂದ ಪಾಪಸಮರ್ಪಣೆಯು ಮತ್ತು ಪಾಪಹೇತುವಾದ ತಾಮಸ ಕ್ರಿಯೆಯೆಂದು ಸರ್ವರೂ ನಿಶ್ಚಯಿಸಬೇಕು.

4. ಇದೂ ಅಲ್ಲದೆ ಶ್ರೀಕೃಷ್ಣನೂ ನಿರವಕಾಶವಾಗಿ ಪರಮಾತ್ಮನಿಗೆ ಸಮ ರ್ಪಿಸಲ್ಪಡುವ ಕರ್ಮಗಳು **“ನಿಯತ”**ವಾಗಿರಬೇಕು. ಎಂದರೆ ವರ್ಣಾಶ್ರಮೋ ಚಿತವಾದ ವಿಧಿವಿಹಿತವ್ಯಾಪಾರವಾಗಿರಬೇಕೆಂದೇ ಹೇಳಿರುವನು :—

(1) **ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।**
**ಸ್ವಕರ್ಮನಿರತಃ ಸಿದ್ಧಿಂ........ವಿಂದತಿ........ ॥**
—(18. 45.)

ಬ್ರಾಹ್ಮಣಾದಿ ಸ್ವವರ್ಣೋಚಿತಕರ್ಮದಲ್ಲಿ ಆಸಕ್ತನಾದ ಮನುಷ್ಯನು ಜ್ಞಾನದ್ವಾರಾ ಮುಕ್ತಿಯನ್ನು ಹೊಂದುತ್ತಾನೆ. ಸ್ವಕರ್ಮದಲ್ಲಿ ನಿರತನಾದ ವನು........ಸಿದ್ಧಿಯನ್ನು ಹೊಂದುತ್ತಾನೆ.

ಪುನಃ ಸ್ವಕರ್ಮನಿರತನೇ ಜ್ಞಾನಸಿದ್ಧಿಯನ್ನು ಹೊಂದುವನೆಂದು ಶ್ರೀ ಕೃಷ್ಣನು ಹೇಳುತ್ತಾನೆ:—

(2) **ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ।**
—(18.46.)

5. ಸರ್ವಸಮರ್ಪಣೆಯು ಪರಮಾತ್ಮನಿಗೆ ತೃಪ್ತಿಕರವಲ್ಲವೆಂಬುದು ಯುಕ್ತಿಸಿದ್ಧವಾಗಿಯೂ ಇರುವುದು. ಪರಮಾತ್ಮನು ಸಕಲಸಜ್ಜನರ ಉದ್ಧಾರಾರ್ಥವಾಗಿ ವಿಧಿನಿಷೇಧಶಾಸ್ತ್ರವನ್ನು ಪ್ರವರ್ತನಮಾಡಿ ವಿಹಿತವನ್ನು ಅನುಷ್ಠಾನಮಾಡಿ ತನ್ನನ್ನು ಆರಾಧಿಸಬೇಕೆಂದೂ, ನಿಂದಿತವನ್ನು ಪರಿತ್ಯಾಗಮಾಡಿ ತನ್ನನ್ನು ಸಂತೋಷಪಡಿಸಬೇಕೆಂದೂ ಹೇಳಿರುತ್ತಾನೆ. "ಸ್ವಧರ್ಮಾಚರಣಂ ಶಕ್ತ್ಯಾ ವಿಧರ್ಮಾಚ್ಚ ನಿವರ್ತನಂ" ಇತ್ಯಾದಿ ಭಾಗವತಶ್ಲೋಕಗಳೂ,

**(3) ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್।**
**ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥***

—(18.47.)

ಇತ್ಯಾದಿವಚನಗಳೂ ಇದೇ ಅರ್ಥವನ್ನೇ ಪುಷ್ಟೀಕರಿಸುತ್ತವೆ. ವಿರುದ್ಧಕರ್ಮವನ್ನು ಅರ್ಪಣೆಮಾಡಿ ಸುಖಿಗಳಾಗಬಹುದಾದರೆ ಯಥೇಷ್ಟವಾಗಿ ಸರ್ವರೂ ಆಚರಿಸಬಹುದಾದುದರಿಂದ ವರ್ಣಸಾಂಕರ್ಯವು ಸ್ವಲ್ಪದರಲ್ಲೇ ಬಂದುಬಿಡುವುದು. ಅಲ್ಲದೆ ಪರಮಾತ್ಮನು ಅನಿಷ್ಟವಾದ ಪಾಪವನ್ನು ಹೇಗೆ ತಾನೇ ಸ್ವೀಕರಿಸುವನು? ಕೊಳೆತ ಮಾವಿನಹಣ್ಣನ್ನು ಯಾವ ಭಕ್ತನೂ ಇದುವರೆವಿಗೆ

---

* **ಅರ್ಥ:—**ಅಂಗವಿಹೀನವಾದರೂ ಸ್ವಧರ್ಮಾಚರಣೆಯು ಸಾಂಗವಾಗಿ ಅನುಷ್ಠಿಸಲ್ಪಟ್ಟ ಪರಧರ್ಮಕ್ಕಿಂತ ಶ್ರೇಷ್ಠವು. (ಎಂದರೆ ಪುರುಷಾರ್ಥಸಾಧನವು.) ಸ್ವವಿಹಿತಕರ್ಮವನ್ನು ಆಚರಿಸುವವನು ಪಾಪವನ್ನು ಹೊಂದುವುದಿಲ್ಲ. (ಉತ್ತಮವಾದ ರೀತಿಯಲ್ಲಿ ಪರಕೀಯಧರ್ಮವನ್ನಾಚರಿಸಿದರೂ ಪಾಪವನ್ನು ಹೊಂದುವನು.) ಇದು ವಿಷ್ಣುಪುರಾಣದಲ್ಲಿ ಔರ್ವರು ಹೇಳಿದ ಮಾತು:—

**ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।**
**ವಿಷ್ಣುರಾರಾಧ್ಯತೇ ಪಂಥಾ ನಾನ್ಯತ್ತತ್ತೋಷಕಾರಣಂ ॥**

ಇವು ಸುಪ್ರಸಿದ್ಧವಾದ 'ವಿಷ್ಣುಧರ್ಮ'ದ ವಚನಗಳು :—

**ಶ್ರುತಿಸ್ಮೃತ್ಯುದಿತಂ ಧರ್ಮಂ ವರ್ಣಾಶ್ರಮವಿಭಾಗಜಂ ।**
**ಉಲ್ಲಂಘ್ಯ ಯೇ ಪ್ರವರ್ತಂತೇ ಸ್ವೇಚ್ಛಯಾ ಕೂಟಯುಕ್ತಿಭಿಃ॥**
**ವಿಕರ್ಮಾಭಿರತಾ ಮೂಢಾ ಯುಕ್ತಿಪ್ರಾಗಲ್ಭ್ಯದುರ್ಮದಾಃ ।**
**ಪಾಷಂಡಿನಸ್ತೇ ದುಃಖಶೀಲಾ ನರಕಾರ್ಹಾ ನರಾಧಮಾಃ ॥**

ದೇವರ ನೈವೇದ್ಯಕ್ಕೆ ಇಟ್ಟಿರುವುದಿಲ್ಲ. ಹೀಗೆಯೇ ನಿಷಿದ್ಧಕರ್ಮವನ್ನೂ ಪರಮಾತ್ಮನಿಗೆ ಅರ್ಪಿಸಬಾರದೆಂದು ಖಂಡಿತವಾಗಿ ತಿಳಿಯಬೇಕು.

6. ಪರಂತು ನೀವು ಹೇಳಿದ ಯುಕ್ತಿಯೂ ಸಹ ಸರ್ವಕರ್ಮಸಮರ್ಪಣೆಗೆ ಸಾಧಕವಾಗಿರುವುದಿಲ್ಲ. ಸ್ವತಂತ್ರನಾದ ಪರಮಾತ್ಮನೇ ಸಕಲ ಕರ್ಮಗಳಿಗೂ ಪ್ರೇರಕನಾದುದರಿಂದ ಅವನು ಮಾಡಿಸಿದುದನ್ನೂ ಮತ್ತು ಅವನು ಕೊಟ್ಟುದನ್ನೂ ಅವನಿಗೇ ಕೊಡಬೇಕೆಂದು ಹೇಳುವುದೂ ಉಚಿತವಲ್ಲ. ಯಾತಕ್ಕೆಂದರೆ ಲೋಕದಲ್ಲಿ ಪರಮಾತ್ಮನು ಸರ್ವಫಲಗಳನ್ನೂ ಅವರವರಿಗೆ ಅವರವರ ಸ್ವಭಾವ ಕರ್ಮಾನುಸಾರವಾಗಿ ಕೊಡುವನು. ಸತ್ಕರ್ಮವನ್ನು ಮಾಡಿದವರಿಗೆ ಸದ್ಬುದ್ಧಿಯನ್ನು ಕೊಟ್ಟು ಅನಿಷಿದ್ಧಕರ್ಮದಲ್ಲಿ ಅವರನ್ನು ಪ್ರೇರಿಸಿ ಸತ್ಫಲಗಳನ್ನು ಕೊಡುವನು. ದುಸ್ಸಂಗಾದಿಗಳಿಂದ ದುಷ್ಕರ್ಮವನ್ನು ಮಾಡಿದವರಿಗೆ ದುರ್ಬುದ್ಧಿಯನ್ನು ಕೊಟ್ಟು ವಿರುದ್ಧವ್ಯಾಪಾರಗಳಲ್ಲಿ ಪ್ರೇರಿಸಿ ಅನರ್ಥಫಲಗಳನ್ನು ಕೊಡುವನು. ಶಿಕ್ಷಾರೂಪವಾಗಿ, ಸ್ವತಂತ್ರನಾದ ಪರಮಾತ್ಮನು ಪಾಪಕರ್ಮಗಳನ್ನು ಮಾಡಿಸಿರುವುದರಿಂದ ಅದನ್ನು ಪರಮಾತ್ಮನಿಗೆ ಪ್ರೀತಿಕರವಾಗಬೇಕೆಂಬ ಅನುಸಂಧಾನದಿಂದ ಆತನಿಗೆ ಅರ್ಪಿಸುವುದು ಶಾಸ್ತ್ರವಿರುದ್ಧವೂ ಲೋಕವಿರುದ್ಧವೂ ಆಗಿರುವುದು. ಲೋಕದಲ್ಲಿ ಸ್ವತಂತ್ರನಾದ ಮಹಾರಾಜನು ಸೇವೆಯನ್ನು ಮಾಡಿದ ಪ್ರಜೆಗಳಿಗೆ ವೇತನಾದಿ ಬಹುಮಾನಗಳನ್ನು ಕೊಡುವನು. ಅದನ್ನು ಪುನಃ ಆತನಿಗೇ ಕಾಣಿಕೆಯಾಗಿ ಅರ್ಪಿಸಿ ರಾಜಸೇವೆಯನ್ನು ಮಾಡಿದರೆ ಮಹಾರಾಜನು ಪುನಃ ಹೆಚ್ಚು ಸಂತೋಷಪಡುವನು. ಚೌರ್ಯಾದಿ ವಿರುದ್ಧಕರ್ಮವನ್ನು ಮಾಡಿದವರನ್ನು ಕುಪಿತನಾದ ರಾಜನು ಕಾರಾಗೃಹದಲ್ಲಿಟ್ಟು ಗಂಜಿಯನ್ನೂ, ಸರಪಣಿಯನ್ನೂ ಉಡಿಗೆಗೋಸ್ಕರ ದುಷ್ಟಬಟ್ಟೆಗಳನ್ನೂ ಕೊಡುವನು. ಇವುಗಳನ್ನು ಪುನಃ ಯಾವರೀತಿಯಾಗಿಯೂ ಕಾಣಿಕೆಯಾಗಿ ರಾಜನಿಗೆ ಅರ್ಪಿಸುವುದು ಯುಕ್ತವಲ್ಲ. ಹೀಗೆಯೇ ಪರಮಾತ್ಮನ ಸ್ವಾತಂತ್ರ್ಯಾನುಸಂಧಾನವುಳ್ಳವನು ತನ್ನ ದುಷ್ಕರ್ಮಗಳಿಗೆ ನಿಷ್ಕೃತಿಯನ್ನು ಮಾಡಿಕೊಳ್ಳುವ ಉಪಾಯವನ್ನು ಮಾಡಬೇಕೇ ಹೊರತು ಪುನಃ ಆ ಪಾಪಗಳನ್ನೇ ಪರಮಾತ್ಮನಿಗೆ ಫಲದಂತೆ ಅರ್ಪಿಸುವುದು ಧಾರ್ಷ್ಟ್ಯಮೂಲವಾದ ತಾಮಸಕಾರ್ಯವೆಂದೇ ಶಾಸ್ತ್ರನಿಶ್ಚಯವು.

2. **ಪ್ರಶ್ನೆ:**—ಸ್ವಾಮಿ ! ಹಾಗಾದರೆ "ಪುಣ್ಯಪಾಪಗಳರ್ಪಿಸವನಡಿಗೆ" ಇತ್ಯಾದಿ ಶ್ಲೋಕಾರ್ಥವೇನು ?

**ಶ್ರೀಶ್ರೀಗಳವರು:**—ಎರಡು ಮೂರು ಪ್ರಕಾರವಾಗಿ ಶ್ಲೋಕಾರ್ಥಗಳಿರುವುವು. ಯಥಾಹಿ:—

1. ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ಜ್ಞಾನಿಯು ಸರ್ವಕರ್ಮಗಳನ್ನೂ ಭಗವತ್ಪ್ರೀತಿಕರವಾಗುವಂತೆಯೇ ಮಾಡುವನೇ ಹೊರತು ಭಗವಂತನಿಗೆ ಇಷ್ಟವಲ್ಲದ ಒಂದು ಕಾರ್ಯವನ್ನೂ ಮಾಡಲಾರನು. ಜ್ಞಾನಿಯು ಜ್ಞಾನಿಯಾಗಿರುವ ಅವಸ್ಥೆಯಲ್ಲಿ ಪಾಪಕರ್ಮವನ್ನು ಮಾಡುವುದೇ ಅಸಂಭಾವಿತವು. ಆತನು ತನ್ನ ಬಿಂಬರೂಪನಾದ ಸ್ವತಂತ್ರಸ್ವಾಮಿಯಾದ ಶ್ರೀವಿಷ್ಣುವಿನ ಆಜ್ಞೆಯನ್ನು ಧರಿಸಿಯೇ ಲೋಕೋದ್ಧರಣಾದಿ ರೂಪವಾದ ಬಹು ಕರ್ಮಗಳನ್ನು ಮಾಡುವನು. ಹೀಗಿರುವಲ್ಲಿ ಪರಮಾತ್ಮನು ತನ್ನ ಇಚ್ಛಾನುಸಾರವಾಗಿ ಲೋಕರೀತಿಯಿಂದ ಪಾಪದಂತೆ ಕಾಣುವ ಕೆಲವು ಕರ್ಮಗಳನ್ನೂ ಸಹ ಮಾಡಬೇಕೆಂದು ತನ್ನ ಭಕ್ತನಿಗೆ ಆಜ್ಞಾಪಿಸುವನು. ಸ್ವತಂತ್ರನಾದ ಪರಮಾತ್ಮನು ಮಹಾದೇವರಿಗೆ ಪಾಶುಪತಾದಿ ದುಶ್ಶಾಸ್ತ್ರವನ್ನು ಮಾಡಬೇಕೆಂದೂ ಗೌತಮಾದಿಗಳಿಗೆ ನ್ಯಾಯಶಾಸ್ತ್ರವೇ ಮುಂತಾದುವುಗಳನ್ನು ರಚಿಸಬೇಕೆಂದೂ ಆಜ್ಞಾಪಿಸಿದನು. ಜಗತ್ಸಂಹಾರವನ್ನು ಮಾಡಬೇಕೆಂದು ರುದ್ರನಿಗೆ ಆಜ್ಞಾಪಿಸಿರುವನು. ಅಶ್ವತ್ಥಾಮನು ಮೃತನಾದನೆಂದು ಹೇಳಬೇಕೆಂದು ಯುಧಿಷ್ಠಿರನಿಗೆ ಆಜ್ಞಾಪಿಸಿದನು. ಇಂಥಾ ಕರ್ಮಗಳನ್ನು ಪರಮಾತ್ಮನಿಗೆ ಜ್ಞಾನಿಯು ಸಮರ್ಪಣೆ ಮಾಡುತ್ತಾನೆ. ಲೋಕರೀತಿಯಿಂದ ಇವುಗಳು ಪಾಪವಾಗಿ ಕಂಡುಬಂದರೂ ಪರಮಾತ್ಮನ ಆಜ್ಞೆಯಿಂದ ಮಾಡಲ್ಪಡುವ ಕಾರಣ ಇವುಗಳೆಲ್ಲಾ ಪರಮಧರ್ಮಗಳೇ. ಇಂಥಾ 'ಪಾಪ'ಸಮರ್ಪಣೆಯು ಉಚಿತವೇ. ಕರ್ಮಸಮರ್ಪಣೆಯನ್ನು ಮಾಡಬೇಕಾದರೆ ಆ ಕರ್ಮವು ಪರಮಾತ್ಮನಿಂದ ಪ್ರೇರಿತವಾದರೆ ಸಾಲದು. ಪರಮಾತ್ಮನಿಗೆ ಇಷ್ಟವಾಗಿರಬೇಕು.

2. ಇತರ ಮುಮುಕ್ಷುಗಳಿಗೂ ಸಹ ಇಂಥಾ ಅನೇಕ "ಪಾಪ" ಸಮರ್ಪಣೆಯು ಶಾಸ್ತ್ರೋಕ್ತವೇ ಆಗಿರುವುದು. ಪತ್ನೀಪರಿತ್ಯಾಗವು, ಪಿತೃಪರಿತ್ಯಾಗವು, ಪುತ್ರಪರಿತ್ಯಾಗವು, ಭೃತ್ಯಾದಿಸ್ವಜನಪರಿತ್ಯಾಗವು ಇವುಗಳೆಲ್ಲಾ ಬಹು ಪಾಪಹೇತುಗಳಾಗಿರುವುವು. ಆದರೆ ಭಗವತ್ಪ್ರಾಪ್ತಿಮಾರ್ಗಕ್ಕೆ ವಿರೋಧಿಗಳಾದರೆ ಪಿತೃಪಿತಾಮಹಾದಿ ಸಕಲ ಪೂಜ್ಯರನ್ನೂ ಕೂಡ

ನಿಶ್ಶಂಕವಾಗಿ ಪರಿತ್ಯಜಿಸಿ ಅವರಿಗೆ ವಿರುದ್ಧವಾಗಿಯೂ ಆಚರಿಸಿ ಅಂಥ ಕರ್ಮಗಳೆಲ್ಲವನ್ನೂ ಪೂಜಾರೂಪವಾಗಿ ಪರಮಾತ್ಮನಿಗೆ ಸಮರ್ಪಿಸಬೇಕೆಂಬುದು ನಿರ್ಣೀತವಾದ ಶಾಸ್ತ್ರಾರ್ಥವು. **"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ"** ಎಂಬ ಗೀತಾ ಶ್ಲೋಕವು ಈ ಅರ್ಥವನ್ನೂ ಹೇಳುವುದು. ಭಗವಂತನಲ್ಲಿ ಶರಣಾಗತಿಯು ಎಂದರೆ ಸರ್ವದಾ ಚಿತ್ತವೃತ್ತಿಯನ್ನು ಇಟ್ಟು ಆತನ ಸೇವೆಯಲ್ಲಿಯೇ ರತನಾಗುವುದು ಪರಮಧರ್ಮವು. ಇದಕ್ಕೆ ಸಾಧಕವಲ್ಲದ ಮತ್ತು ವಿರುದ್ಧವಾದ ಸರ್ವ ಕರ್ಮಗಳನ್ನೂ ಪರಿತ್ಯಾಗಮಾಡಬೇಕೆಂಬುದು ಶ್ರೀಕೃಷ್ಣನ ಅಭಿಪ್ರಾಯವು. ಆದುದರಿಂದ ವರ್ಣಾಶ್ರಮೋಚಿತ ಧರ್ಮಕ್ಕೆ ವಿರುದ್ಧವಾಗಿ, ಪರಮಾತ್ಮನ ಪ್ರಾಪ್ತಿಗೆ ವಿರೋಧಿಯಾಗುವ ಜನಸೇವೆಯು, ದೇಶಸೇವೆಯು, ದುಷ್ಟಪಿತೃಸೇವೆಯು, ದುಷ್ಟಬಂಧುಸೇವೆಯು ಇವುಗಳೆಲ್ಲಾ ಲೋಕರೀತಿಯಿಂದ "ಧರ್ಮ"ವೆಂದು ವ್ಯವಹರಿಸಲ್ಪಡುತ್ತಿದ್ದರೂ ಪರಮಾತ್ಮಪ್ರೀತಿಯನ್ನು ಆಕಾಂಕ್ಷೆಮಾಡುವವನು ಅವುಗಳನ್ನು ಪರಿತ್ಯಾಗಮಾಡಬೇಕೆಂಬುದು ಶ್ರೀಕೃಷ್ಣನ ಮತವು.

3. "ಪುಣ್ಯಪಾಪಗಳರ್ಪಿಸು" ಇತ್ಯಾದಿ ಶ್ಲೋಕಗಳಿಗೆ ಮತ್ತೊಂದು ಅರ್ಥವೂ ಇರುವುದು. ಲೋಕದಲ್ಲಿ ಪುಣ್ಯಶಬ್ದವು ಸ್ವರ್ಗಹೇತುವಾದ ಕಾಮ್ಯಕರ್ಮಜನಿತ ಅದೃಷ್ಟದಲ್ಲಿ ಹೆಚ್ಚು ರೂಢವಾಗಿರುವುದು. ಪಾಪಪದವು ನರಕಹೇತುವಾದ ದುಷ್ಕರ್ಮಜನಿತ ಅದೃಷ್ಟದಲ್ಲಿ ರೂಢವಾಗಿರುವುದು. ಭಕ್ತರಾದವರು ಪರಮಾತ್ಮನ ಪ್ರೀತಿಯನ್ನು ಉದ್ದೇಶಮಾಡಿ ಸಕಲ ಕರ್ಮಗಳನ್ನೂ ಮಾಡಬೇಕು. ಪರಮಾತ್ಮನಿಗೆ ಕೋಪಬರುವುದೆಂಬ ಭೀತಿಯಿಂದ ಆತನಿಗೆ ಇಷ್ಟವಲ್ಲದ ಕೆಲಸಗಳನ್ನು ಬಿಡಬೇಕು. ಅಷ್ಟೇ ಹೊರತು ಸ್ವರ್ಗಪ್ರಾಪಕವೆಂದು ಪುಣ್ಯಗಳನ್ನು ಆಚರಿಸುವುದೂ, ನರಕ ಭೀತಿಯಿಂದ ಪಾಪವನ್ನು ಪರಿತ್ಯಾಗ ಮಾಡುವುದೂ ಉತ್ತಮಾಧಿಕಾರಿಗೆ ಉಚಿತವಲ್ಲ. ಹೀಗಿರುವುದರಿಂದ ಪುಣ್ಯಪಾಪಗಳರ್ಪಿಸು ಎಂದರೆ ಪುಣ್ಯಪಾಪವಿವಕ್ಷೆಯಿಂದ ಕರ್ಮಗಳನ್ನು ಮಾಡುವುದೂ ಬಿಡುವುದೂ ಯುಕ್ತವಲ್ಲ. ಮತ್ತೇನೆಂದರೆ "ಪರಮಾದರದಿ"– ಕೇವಲ ಭಗವದ್ಭಕ್ತಿಯಿಂದ ಅವನ ಪ್ರೀತಿಹೇತುವಾದ **ನಿಷ್ಕಾಮ** ವ್ಯಾಪಾರಗಳಲ್ಲಿ ಆಸಕ್ತನಾಗಬೇಕು ಎಂದು ತಾತ್ಪರ್ಯವು. "ಶುಭಾಶುಭಪರಿತ್ಯಾಗೀ" "ಸರ್ವ

ಧರ್ಮಾನ್ ಪರಿತ್ಯಜ್ಯ'', ''ಕುಶಲೇನಾನುಷಜ್ಜತೇ'' ಇತ್ಯಾದಿಗೀತಾವಚನಗಳು ಕಾಮ್ಯಧರ್ಮಗಳನ್ನೂ ಪಾಪಗಳನ್ನೂ ಸರ್ವವನ್ನೂ ಪರಿತ್ಯಾಗಮಾಡಿ ಪುಣ್ಯ ಪಾಪವಿವಕ್ಷೆಯನ್ನು ಬಿಟ್ಟು ಭಗವತ್ತೋಷಣವನ್ನು ಬಯಸಿ ನಿಷ್ಕಾಮನಾಗಿ ಆತನಿಗೆ ಇಷ್ಟವಾದ ವ್ಯಾಪಾರಗಳನ್ನು ಮಾಡುತ್ತಾ ನಮ್ಮ ಯಾವತ್ತೂ ದಿನ ಚರ್ಯೆಯನ್ನು ಅವನ ಆರಾಧನರೂಪವಾಗಿ ಮಾಡಿ ಅವನಿಗೆ ಅರ್ಪಿಸಬೇಕು ಎಂಬ ತಾತ್ಪರ್ಯವುಳ್ಳವುಗಳಾಗಿರುವುವು. ವೈಷ್ಣವರು ಹಾಸಿಗೆಯಿಂದ ಎದ್ದು ಪ್ರಾತಃಕಾಲದಲ್ಲಿ ಮಾಡುವ ಸಂಕಲ್ಪವೇ ಈ ವಿಶೇಷವನ್ನು ಸೂಚಿಸು ವುದು:—

**ಪ್ರಾತಃ ಪ್ರಭೃತಿ ಸಾಯಾಂತಂ ಸಾಯಾದಿಪ್ರಾತರಂತತಃ ।**
**ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಂ ॥**

''ಎಲೈ ಜಗನ್ನಾಥನೇ! ಪ್ರಾತಃಕಾಲ ಮೊದಲುಮಾಡಿ ಸಾಯಂಕಾಲ ಪರ್ಯಂತವೂ ಪುನಃ ಸಾಯಂಕಾಲವನ್ನು ಆರಂಭಮಾಡಿಕೊಂಡು ಪ್ರಾತಃಕಾಲ ಪರ್ಯಂತವೂ ನಿನ್ನಿಂದ ವಿಹಿತವಾದ, ನಾನು ಮಾಡುವ ಶೌಚ, ಆಚಮನ, ಸ್ನಾನ, ದೇವಪೂಜನ, ಉದ್ಯೋಗ, ಭಾರ್ಯಾಪುತ್ರಾದಿ ಪೋಷಣೆ, ಶಾಸ್ತ್ರಶ್ರವಣ, ಧರ್ಮ, ನಿದ್ರಾದಿವ್ಯಾಪಾರವೂ ಕೂಡ ಸ್ವತಂತ್ರನಾದ ನಿನಗೆ ಪೂಜಾರೂಪ ವಾಗಲಿ; ನೀನು ಇದನ್ನು ನಿನ್ನ ಪೂಜಾರೂಪವಾಗಿ ದಯಮಾಡಿ ಸ್ವೀಕರಿಸಬೇಕು'' ಎಂದು ಅರ್ಥವು. ಶ್ರೀಕೃಷ್ಣನೂ ಕೂಡ ಸಕಲಕರ್ಮಗಳನ್ನೂ ವಿಧ್ಯುಕ್ತ ವಾಗಿ ನೆರವೇರಿಸಿ ಯಾವತ್ತೂ ದಿನಚರ್ಯೆಯನ್ನು ಭಗವದಾರಾಧನರೂಪ ವಾಗಿ ಸಮರ್ಪಿಸಬೇಕೆಂದು ಗೀತೆಯಲ್ಲಿಯೇ ಹೇಳಿರುತ್ತಾನೆ:—

(1) **ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥**

—(9. 27.)

''ಎಲೈ ಕುಂತೀಪುತ್ರನೇ! ನೀನು ಏನೇನು ಸತ್ಕರ್ಮಗಳನ್ನು ಮಾಡು ತ್ತೀಯೋ ಯಾವುದನ್ನು ಭೋಜನ ಮಾಡುತ್ತೀಯೋ, ಹೋಮಮಾಡು ತ್ತೀಯೋ, ದಾನಮಾಡುತ್ತೀಯೋ ಮತ್ತು ತಪಸ್ಸುಮಾಡುತ್ತೀಯೋ ಅವೆಲ್ಲ ವನ್ನೂ ನನಗೆ ಅರ್ಪಣೆಮಾಡು.

ಈ ರೀತಿಯಾಗಿ ಸಾಮಾನ್ಯಕರ್ಮಗಳನ್ನೂ ಕೂಡ ಭಕ್ತಿಪೂರ್ವಕವಾಗಿ ಅರ್ಪಣೆಮಾಡಿದರೆ ನಾನು ಸ್ವೀಕರಿಸುತ್ತೇನೆಂದು ಶ್ರೀಕೃಷ್ಣನು ಸೂಚಿಸಿರುತ್ತಾನೆ :—

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।**
**ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥** —(9. 26.)

ಈ ಶ್ಲೋಕವು (ಪುಟ 331ರಲ್ಲಿ) ವ್ಯಾಖ್ಯಾತವಾಗಿರುವುದು.

4. ಮತ್ತೊಂದು ಪ್ರಕಾರವಾದ ಪಾಪಪುಣ್ಯಸಮರ್ಪಣೆಯು ಶಾಸ್ತ್ರೋಕ್ತವಾಗಿಯೇ ಇರುವುದು. ಪುಣ್ಯವೂ ಪಾಪವೂ ಈ ಸಕಲಜಗತ್ತೂ ಭಗವದಧೀನವಾಗಿರುವುದು. ಪುಣ್ಯವೂ ಪರಮಾತ್ಮನಿಗೆ ಇಷ್ಟಕರವಾಗಿರುವುದರಿಂದ ಪುಣ್ಯಕರ್ಮವನ್ನು ಭಗವಂತನ ಸ್ವಾತಂತ್ರ್ಯಾನುಸಂಧಾನಪೂರ್ವಕವಾಗಿ ನಿಷ್ಕಾಮನಾಗಿ ಮಾಡಿ ಪುಣ್ಯಫಲವನ್ನು ಪರಮಾತ್ಮನಿಗೆ ಸಮರ್ಪಿಸಬೇಕು. ಪಾಪವನ್ನು ಅಜ್ಞಾನದಿಂದ ಮಾಡಿದನಂತರ, ಪ್ರಮಾದಾತ್ಮಕವಾಗಿ ಮಾಡಿದ ಪಾಪವನ್ನು ಪರಮಾತ್ಮನ ಅಧೀನವೆಂದು ತಿಳಿದು ಪಶ್ಚಾತ್ತಾಪಪೂರ್ವಕವಾಗಿ ಅದನ್ನು ಪರಿಹರಿಸಬೇಕೆಂದು ಅವನನ್ನು ಬೇಡಿಕೊಳ್ಳಬೇಕು. ಜ್ಞಾನಪೂರ್ವಕವಾಗಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲ. ಆದರೆ ಪಶ್ಚಾತ್ತಾಪಯುಕ್ತನಾದ ಪುರುಷನು ಭಗವಂತನಲ್ಲಿ ಶರಣಾಗತನಾದರೆ ಪರಮಾತ್ಮನು ಅದನ್ನೂ ಪರಿಹರಿಸುವನು. ಆದುದರಿಂದ ಪಾಪಕರ್ಮಕ್ಕೆ ಸಮರ್ಪಣೆಯೆಂದರೆ "ಭಗವದಧೀನತ್ವ ಚಿಂತನವು" ಎಂದರೆ ಪಾಪವೂ ಪರಮಾತ್ಮನ ಪ್ರೇರಣೆಯಿಂದ ಅಧೀನನಾದ ಅಲ್ಪಜೀವನಾದ ನನ್ನಿಂದ ನಡೆಯಿತು ಎಂಬ ಜ್ಞಾನಪೂರ್ವಕವಾದ ಮತ್ತೂ ಪಶ್ಚಾತ್ತಾಪಪೂರ್ವಕವಾದ ವಿಜ್ಞಾಪನೆಯು. ಪುಣ್ಯಕ್ಕೆ ಫಲಪರ್ಯಂತವಾದ ಸಮರ್ಪಣೆಯು.

ಇದು ನಿರ್ಣೀತವಾದ ಶಾಸ್ತ್ರಾರ್ಥವು. ಇದೇ ಏಕಾದಶಸ್ಕಂಧಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ನಿರೂಪಿಸಿರುವ ವಾಕ್ಯಗಳ ಅಭಿಪ್ರಾಯವು. ಆದುದರಿಂದ ಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮಗಳು ವಿಧ್ಯುಕ್ತರೀತಿಯಲ್ಲಿ ಅನುಷ್ಠಾನ ಮಾಡಲ್ಪಟ್ಟರೇನೇ ಸಮೀಚೀನವೆನ್ನಿಸುವುವು.

# 19. ಹತ್ತೊಂಬತ್ತನೆಯ ಅಂಶವು.

## ಕರ್ಮಾನುಷ್ಠಾನವು (ಮುಂದುವರಿಸಿದ್ದು)

## ಜೀವಕರ್ತೃತ್ವವಿಚಾರವು.

1. **ಪ್ರಶ್ನೆ:—** ಸ್ವಾಮಿ! ಫಲಾಪೇಕ್ಷಾರಹಿತನಾಗಿ, ಭಗವಂತನ ಸ್ವಾತಂತ್ರ್ಯಜ್ಞಾನಪೂರ್ವಕವಾಗಿ ವಿಹಿತಕರ್ಮವನ್ನು ಮುಮುಕ್ಷುವು ಆಚರಿಸಬೇಕು ಎಂದು ಸಿದ್ಧವಾಯಿತು. ಆದರೆ ಇಲ್ಲಿ ಒಂದು ಶಂಕೆಯು ಬರುವುದು. ಭಗವಂತನೇ ಸರ್ವಸ್ವತಂತ್ರನಾದರೆ ವಿಧಿನಿಷೇಧಶಾಸ್ತ್ರಾದಿಗಳು ಏತಕ್ಕೆ? ಮತ್ತು ಜೀವನಿಗೂ ಕಲ್ಲಿಗೂ ವ್ಯತ್ಯಾಸವೇನು?

**ಉತ್ತರ:— ಶ್ರೀಶ್ರೀಗಳವರು:—** ಜೀವನೂ, ವಿಧಿನಿಷೇಧಾತ್ಮಕ ಶಾಸ್ತ್ರಾದಿಗಳೂ ಕರ್ಮದಲ್ಲಿ ಸ್ವತಂತ್ರಪ್ರೇರಕನಾದ ಭಗವಂತನಿಗೆ ನಿಮಿತ್ತಗಳು. ಶ್ರೀಕೃಷ್ಣನು ಹೇಳುತ್ತಾನೆ:—

**(1) ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।**
**ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥**
—(18. 18.)

ಕರ್ಮಚೋದನಾ = ಜೀವನನ್ನು ಕುರಿತು ನೀನು ಯಜ್ಞಮಾಡು, ಪಲಾಂಡು ಭಕ್ಷಣವನ್ನು ಮಾಡಬೇಡ ಇತ್ಯಾದಿ ರೂಪವಾಗಿ ಪ್ರವೃತ್ತವಾಗಿರುವ ಕರ್ಮವಿಧಿಯು, ಜ್ಞಾನಂ= ಎಂದರೆ ವಿಧಿಜ್ಞಾನವು, ಜ್ಞೇಯಂ =ಜ್ಞೇಯವಾದ ಮನುಷ್ಯ, ಪ್ರಯತ್ನ, ಭೂಮಿ, ದೇಹಾದಿ ಆಶ್ರಯಗಳು, ಚರುಪುರೋಡಾಶ ಚಮಸಾದಿ ಸಾಮಗ್ರಿಗಳು ಮತ್ತು ಪರಿಜ್ಞಾತಾ ಎಂದರೆ ಪರಮಾತ್ಮನ ಪ್ರೇರಣೆಗೆ ವಿಷಯನಾದ ಕರ್ತೃಜೀವನು, ಈ ರೀತಿಯಾಗಿ ತ್ರಿವಿಧಾ = ಮೂರು ಪದಾರ್ಥಗಳನ್ನು ನಿಮಿತ್ತಮಾಡಿಕೊಂಡು ಪ್ರವೃತ್ತವಾಗಿರುವುದು. (ಎಂದರೆ ಒಂದು ಸಂಧ್ಯಾವಂದನಾದಿ ರೂಪವಾದ ವಿಧ್ಯುಕ್ತಕರ್ಮವು ನಡೆಯಬೇಕಾದರೆ 1. ಅದನ್ನು ವಿಧಿಸುವ ಶಾಸ್ತ್ರಜ್ಞಾನವು, 2. ಅದರ ನಿಷ್ಪತ್ತಿಗೆ ಮತ್ತು **ಪರಿಸಮಾಪ್ತಿಗೆ** ಬೇಕಾದ ಪ್ರಯತ್ನ ಆಸನ, ಪಂಚಪಾತ್ರಾದಿಸಾಮಗ್ರಿಗಳು. 3. ಅದನ್ನು ಮಾಡುವ ಒಬ್ಬ ಜೀವನು ಮತ್ತು ಪ್ರೇರಕನಾದ ಪರಮಾತ್ಮನು ಇಷ್ಟೂ ಅವಶ್ಯಕವು; ಎಂದರೆ ಸ್ವತಂತ್ರನಾದ ಪರಮಾತ್ಮನು ಶಾಸ್ತ್ರವಿಧಿಯನ್ನೂ,

ಪ್ರಯತ್ನ, ದೇಹಭೂಮ್ಯಾದಿಪದಾರ್ಥಗಳನ್ನೂ, ಜೀವನನ್ನೂ ನಿಮಿತ್ತಮಾಡಿ ಕೊಂಡು ಜೀವನನ್ನು ಪ್ರೇರಿಸಿ ಜ್ಞಾನವನ್ನು ಉತ್ಪತ್ತಿಮಾಡಿ ಇಚ್ಛೆಯನ್ನು ಹುಟ್ಟಿಸಿ, ಪ್ರಯತ್ನವನ್ನೂ ಮಾಡಿಸಿ, ಸಲಕರಣೆಗಳನ್ನು ಒದಗಿಸಿಕೊಟ್ಟು ಕರ್ಮವನ್ನು ಮಾಡಿಸುತ್ತಾನೆ. ಜೀವಾದಿಗಳು ನಿಮಿತ್ತಮಾತ್ರರು ಎಂದು ಭಾವವು.)

ಜೀವರು ಅಸ್ವತಂತ್ರರಾದರೆ ಹೀಗೆ ಮಾಡು ಎಂಬ ವಿಧಿಬದ್ಧತೆಯು ಕೂಡು ವುದಿಲ್ಲವೆಂದು ಶಂಕಿಸಕೂಡದು. ಜೀವನು ಸ್ವತಂತ್ರನಲ್ಲದಿದ್ದರೂ ಸ್ವರೂಪತಃ ಕ್ರಿಯಾಕರಣಸಾಮರ್ಥ್ಯದಿಂದ ಯುಕ್ತನಾಗಿರುವನು. ಕರ್ಮಪರಿಸಮಾಪ್ತಿಗೆ ಬೇಕಾದ ಕ್ರಿಯಾಶಕ್ತಿಯು ಜೀವನಲ್ಲಿ ಇರುವುದರಿಂದ ಸ್ವತಂತ್ರನಾದ ದೇವರು ಅಸ್ವತಂತ್ರನಾದ ಜೀವನನ್ನು ವಿಧಿಬದ್ಧನನ್ನಾಗಿ ಮಾಡಿರುವನು. ವಿಧಿಬದ್ಧ ನಾಗಬೇಕಾದರೆ ವಿಧ್ಯುಕ್ತಕರ್ಮಾನುಷ್ಠಾನಕ್ಕೆ ಬೇಕಾದ ಸ್ವಾಭಾವಿಕಶಕ್ತಿಯು ಇದ್ದರೆ ಸಾಕು. ಸ್ವಾತಂತ್ರ್ಯವು ಇರಬೇಕಾದುದಿಲ್ಲ. ಅಷ್ಟೇ ಅಲ್ಲ. ಸ್ವಾತಂತ್ರ್ಯವು ಇದ್ದರೆ ವಿಧಿಬದ್ಧತೆಯೇ ಕೂಡುವುದಿಲ್ಲ. ಅಸ್ವತಂತ್ರನಿಗೇ ವಿಧಿಬದ್ಧತೆಯು ಎಂದು ಲೋಕಸಿದ್ಧ ನ್ಯಾಯವಿರುವುದು. ಜೀವಾದಿಗಳು ನಿಮಿತ್ತಮಾತ್ರರು ಎಂಬ ವಿಷಯವು ಶ್ರೀಕೃಷ್ಣನ ವಿಧಿಯಿಂದಲೇ ತಿಳಿದುಬರು ವುದು.

**(2) ಮಯೈವೈತೇ ನಿಹತಾಃ ಪೂರ್ವಮೇವ**
**ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ।**
**ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ**
**ಕರ್ಣಂ ತಥಾಽನ್ಯಾನಪಿ ಯೋಧವೀರಾನ್ ॥**
**ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾಃ**
**ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥**

—(11. 33-34.)

ಎಲೈ ಸವ್ಯಸಾಚಿಯೇ! ಈ ನಿನ್ನ ಶತ್ರುಗಳೆಲ್ಲರೂ ನೀನು ಯುದ್ಧಮಾ ಡುವುದಕ್ಕೆ ಮೊದಲೇ ಸ್ವತಂತ್ರನಾದ ನನ್ನಿಂದ ಹತಪ್ರಾಯರು. ನೀನು ನನ್ನ ಸ್ವತಂತ್ರ ಸಂಹಾರ ಕಾರ್ಯದಲ್ಲಿ ನಿಮಿತ್ತನಾಗು. ದ್ರೋಣಾಚಾರ್ಯರು,

ಭೀಷ್ಮಾಚಾರ್ಯರು, ಜಯದ್ರಥ, ಕರ್ಣ ಮತ್ತು ಇನ್ನೂ ಇತರ ಯೋಧ ವೀರರೇನು ಇವರೆಲ್ಲರೂ ಸ್ವತಂತ್ರನಾದ ನನ್ನಿಂದಲೇ ಸಂಹೃತ ಪ್ರಾಯರಾದ ವರು. ಅಂಥವರನ್ನು ನೀನು ಸಂಹರಿಸು. ವ್ಯಥೆಪಡಬೇಡ. ಯುದ್ಧಮಾಡು. ಯುದ್ಧದಲ್ಲಿ ಶತ್ರುವನ್ನು ಜಯಿಸುತ್ತೀ.

ಜೀವನ ಸ್ವಾತಂತ್ರ್ಯಜ್ಞಾನವು ಭ್ರಮವೇ. ಪರಮಾತ್ಮನಿಂದ ಸಂಕಲ್ಪಿತವಾದ ವ್ಯಾಪಾರವು ನಡೆದೇ ಹೋಗುವುದು ಎಂಬ ವಿಷಯವು ಹದಿನೆಂಟನೆಯ ಅಧ್ಯಾಯದ ಈ ಶ್ಲೋಕಗಳಿಂದ ತಿಳಿದುಬರುತ್ತದೆ:—

(3) **ಯದ್ಯಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।**
**ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥**
—(18. 59.)

ಎಲೈ ಪಾರ್ಥನೇ! ನೀನು ಸ್ವಾತಂತ್ರ್ಯಾಭಿಮಾನವನ್ನು ವಹಿಸಿ ನಾನು ಯುದ್ಧಮಾಡುವುದಿಲ್ಲವೆಂದು ನಿಶ್ಚಯಿಸುವುದಾದರೆ ನಿನ್ನ ನಿಶ್ಚಯವು ವ್ಯರ್ಥವೇ ಆಗುತ್ತದೆ. ಏತಕ್ಕೆಂದರೆ ಪ್ರಕೃತಿ:—ಈಶ್ವರೇಚ್ಛೆಯು, ನಿನ್ನನ್ನು ಯುದ್ಧಮಾಡುವುದರಲ್ಲಿ ಪ್ರೇರಿಸುತ್ತದೆ. (ಆದುದರಿಂದ ನೀನು ಯುದ್ಧಮಾಡದೇ ಇರುವುದರಲ್ಲಿ ಸ್ವತಂತ್ರನಲ್ಲ.)

ಪ್ರಕೃತಿಯನ್ನು ನಿಮಿತ್ತಮಾಡಿ ಪರಮಾತ್ಮನೇ ಸರ್ವ ಕರ್ಮಗಳನ್ನೂ ಪ್ರೇರಿಸುತ್ತಾನೆಂಬ ಭಾವವು ಸ್ವಲ್ಪ ಮುಂದಿನ ಶ್ಲೋಕದಿಂದ ಸ್ಪಷ್ಟವಾಗುವುದು.

(4) **ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**
—(18. 61.)

ಎಲೈ ಅರ್ಜುನನೇ! ಸ್ವತಂತ್ರನಾದ ಈಶನಶೀಲನಾದ ನಾರಾಯಣನು ಸರ್ವ ಪ್ರಾಣಿಗಳ ಹೃದಯ ಪ್ರದೇಶದಲ್ಲಿಯೂ ಯಂತ್ರದಂತಿರುವ ಶರೀರದಲ್ಲಿ ಸರ್ವ ಜೀವರುಗಳನ್ನೂ ತನ್ನ ಸ್ವೇಚ್ಛೆಯಿಂದ ನಾನಾ ವ್ಯಾಪಾರಗಳಲ್ಲಿ ಪ್ರೇರಿಸುವವನಾಗಿ ಸ್ಥಿತನಾಗಿರುತ್ತಾನೆ.

ಆದುದರಿಂದ (ಜೀವನಲ್ಲಿ ಸ್ವಾಭಾವಿಕ ಕ್ರಿಯಾಶಕ್ತಿಯಿರುವುದರಿಂದ, ಮತ್ತು ಪರಮಾತ್ಮನು ಜೀವಸ್ವಭಾವಾದಿಗಳನ್ನು ನಿಮಿತ್ತಮಾಡಿಕೊಂಡು

ಪ್ರೇರಿಸುವುದರಿಂದ)ಭಗವದನುಗ್ರಹಪಾತ್ರನಾದ ಪ್ರತಿಯೊಬ್ಬ ಮುಮುಕ್ಷುವೂ ತನ್ನನ್ನು ಸಮೀಚೀನವ್ಯಾಪಾರಗಳಲ್ಲಿ ಪ್ರೇರಿಸಬೇಕೆಂದು ಪರಮಾತ್ಮನನ್ನೂ ಅವನ ಅಂಗಭೂತರಾದ ಇತರ ದೇವತೆಗಳನ್ನೂ ಪ್ರಾರ್ಥಿಸಬೇಕು ಮತ್ತು ಪ್ರಾರ್ಥಿಸುವನು.

ಶ್ರೀಕೃಷ್ಣನು ಹೇಳುತ್ತಾನೆ:—

(5) **ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ॥** —(18. 62.)

ಎಲೈ ಅರ್ಜುನನೇ! ಸ್ವತಂತ್ರ ಪ್ರೇರಕನಾದ ಪರಮಾತ್ಮನನ್ನೇ ನೀನು ಸರ್ವಪ್ರಕಾರದಿಂದಲೂ ಶರಣುಹೊಂದು.

(6) **ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥**
—(15. 4.)

ಎಂಬ ಶ್ರೀಕೃಷ್ಣನ ಹಿತೋಪದೇಶವೂ ಸಮೀಚೀನ ವ್ಯಾಪಾರದಲ್ಲಿ ಪ್ರೇರಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುವುದೇ ಸಂಸಾರತರಣೋಪಾಯವೆಂದು ನಿರೂಪಿಸುವುದು.

ವೈಷ್ಣವರು ಪ್ರತಿದಿನವೂ ಮಾಡುವ ಪ್ರಾತಃಕಾಲದ ದೇವತಾ ಸ್ತುತಿಯಲ್ಲಿಯೂ ಹೀಗಷ್ಟೇ ಇರುವುದು.

**ನಮೋಽಸ್ತು ತಾತ್ವಿಕಾ ದೇವಾಃ ವಿಷ್ಣುಭಕ್ತಿಪರಾಯಣಾಃ ।**
**ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ ॥**

ಎಲೈ ತತ್ವಾಭಿಮಾನಿ ದೇವತೆಗಳಿರಾ! ವಿಷ್ಣುಭಕ್ತಿ ಪರಾಯಣರಾದ ನಿಮಗೆಲ್ಲರಿಗೂ ನಮಸ್ಕಾರವು. ತಾವುಗಳೆಲ್ಲರೂ ನನ್ನನ್ನು ವಿಷ್ಣುಪ್ರೀತಿಕರವಾದ ಕರ್ಮಾನುಷ್ಠಾನದಲ್ಲಿಯೇ ಪ್ರೇರಿಸೋಣಾಗಲಿ.

## 20. ಇಪ್ಪತ್ತನೆಯ ಅಂಶವು.

### ಕರ್ಮಾನುಷ್ಠಾನವು (ಮುಂದುವರಿದ್ದು)

### ವಿಧ್ಯುಕ್ತಕರ್ಮಗಳು.

1. **ಪ್ರಶ್ನೆ**—ಸ್ವಾಮಿ! ಪ್ರಾತಃಕಾಲ ಮೊದಲುಗೊಂಡು ಸಾಯಂಕಾಲ ಪರ್ಯಂತವೂ ಪುನಃ ರಾತ್ರಿಯಲ್ಲಿಯೂ ಮುಮುಕ್ಷುವಿನಿಂದ ಅನುಷ್ಠೇಯವಾದ ವಿಧ್ಯುಕ್ತ ಕರ್ಮಗಳು ಯಾವುವು?

**ಉತ್ತರ:—ಶ್ರೀಶ್ರೀಗಳವರು:**—ಅವುಗಳನ್ನೆಲ್ಲಾ ಸ್ಮೃತಿಗಳಿಂದ ಸುಲಭವಾಗಿ ತಿಳಿಯಬಹುದು. ವೈಷ್ಣವ ಆಹ್ನಿಕಪದ್ಧತಿ ಗ್ರಂಥಗಳಲ್ಲಿ ಕರ್ಮಸಂಗ್ರಹವು ನಿರೂಪಿತವಾಗಿರುವಂತೆ ಗುರುಗಳಿಂದ ಉಪದೇಶ ಹೊಂದಿ ತಿಳಿದುಕೊಂಡು ಅನುಷ್ಠಾನಮಾಡಿದರೆ ವಿಧ್ಯುಕ್ತ ಫಲವು ಬರುವುದು. ಇಷ್ಟು ಸಂಗ್ರಹವು:— ಉಪನೀತನಾದ ಬ್ರಾಹ್ಮಣಕುಮಾರನು ಶಿಖಾಯಜ್ಞೋಪವೀತಗಳನ್ನು ರಕ್ಷಿಸಿಕೊಂಡು, ತಲೆಗೂದಲನ್ನು ನಾನಾವಿಧವಾದ ಪರಿವರ್ತನಗಳಿಂದ ಕಳೆದುಕೊಂಡು ಬ್ರಾಹ್ಮಣ್ಯವನ್ನು ಕಳೆದುಕೊಳ್ಳದೆ ಆಚಾರಸಂಪನ್ನನಾಗಿರಬೇಕು, "ಏಷ ದೇವರಥಃ" ಎಂದು ಹೇಳಿರುವಂತೆ ಈ ನಮ್ಮ ದೇಹವು ರಥಿಕನಾದ ಶ್ರೀಪರಮಾತ್ಮನಿಗೆ ಆವಾಸಭೂತವಾದ ರಥವೆಂದು ತಿಳಿದು, ಅಥವಾ ಇದೂ ಒಂದು ದೇವಸ್ಥಾನವೆಂದು ತಿಳಿದು, ಸ್ವಾರ್ಥಕಾಮಗಳನ್ನು ಪರಿತ್ಯಜಿಸಿ ಪರಮಾತ್ಮನಿಗೆ ಪ್ರೀತಿಕರವಾದ ಪದಾರ್ಥಗಳಿಂದಲೇ, ಪರಮಾತ್ಮನಿಗೆ ಇಷ್ಟವಾದ ವಿಧಿಗಳ ಅನುಸರಣೆಯಿಂದಲೇ ಇದನ್ನು ಪರಿಪಾಲಿಸಬೇಕು. ಆತನ ಸೇವಾರ್ಥವಾಗಿಯೇ ಯಾವತ್ತೂ ಕರ್ಮೇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳನ್ನೂ ಮನಸ್ಸನ್ನೂ ಉಪಯೋಗಿಸಬೇಕು. ಈ ಪ್ರಕಾರವಾಗಿ ಆಲೋಚಿಸಿದರೆ ಮಲಮೂತ್ರವಿಸರ್ಜನ, ಶೌಚಾದಿಗಳು ಪರಮಾತ್ಮನ ಮಂದಿರವನ್ನು ಗುಡಿಸಿ ಸಾರಿಸಿದಂತೆ ಫಲಪ್ರದವಾಗುವುದು. ದಂತಧಾವನ, ಮುಖಪ್ರಕ್ಷಾಳನ, ಸ್ನಾನಾದಿಗಳು ದೇವಮಂದಿರಮಾರ್ಜನದಂತೆ ಫಲಪ್ರದವಾಗುವುವು. ಭೋಜನವು ವೈಶ್ವಾನರಯಜ್ಞವು, ಶಾಸ್ತ್ರಾಲಾಪಗಳು ಜ್ಞಾನಯಜ್ಞವು. ವಿಧ್ಯುಕ್ತ ಸ್ತ್ರೀಭೋಗವು ವಾಸುದೇವಯಜ್ಞವೆನ್ನಿಸುವುದು. ರಾತ್ರಿಕಾಲದಲ್ಲಿ ಅವಶ್ಯವಾಗಿ ಪ್ರಾಪ್ತವಾದ ನಿದ್ರೆಯೂ ಸಹ

ಪ್ರದಕ್ಷಿಣೆಯಂತೆ ವಿಷ್ಣುಪ್ರೀತಿಕರವಾಗುವುದು. ಆದುದರಿಂದ ಸರ್ವ ಮುಮುಕ್ಷುಗಳೂ ವಿಧಿವಿಹಿತ ಮಾರ್ಗವನ್ನು ಸ್ವಲ್ಪವೂ ಅತಿಕ್ರಮಿಸದೆ ತಮ್ಮ ಯೋಗ್ಯತಾನುಗುಣವಾಗಿ ಸರ್ವದಾ ಭಗವಂತನನ್ನು ಸೇವಿಸಿ ಜ್ಞಾನಫಲವನ್ನು ಹೊಂದುವುದಕ್ಕೆ ಯತ್ನವನ್ನು ಮಾಡಬೇಕು. ಜೀವನು ಕಲ್ಲಿನಂತೆ ಪ್ರಯತ್ನ ಯೋಗ್ಯತಾರಹಿತನಾದ ಪದಾರ್ಥವಲ್ಲ. ಪ್ರಯತ್ನಸಾಮರ್ಥ್ಯವು ಜೀವನಲ್ಲಿ ಸ್ವಾಭಾವಿಕವಾಗಿ ಇರುವುದು. ಅದನ್ನು ನಿಮಿತ್ತಮಾಡಿಕೊಂಡೇ ಕರ್ಮ ವಿಧಿಗಳು ಪ್ರವೃತ್ತವಾಗಿರುವುವು. ಜೀವನು, ಪರಮಾತ್ಮನು ಸ್ವತಂತ್ರಕರ್ತನು ಎಂಬ ಅನುಸಂಧಾನಸಹಿತನಾಗಿ, ಸರ್ವ ವಿಧ್ಯುಕ್ತ ಕರ್ಮಗಳಲ್ಲಿ ತನ್ನ ಸ್ವಾಭಾವಿಕ ವಾದ ಪ್ರಯತ್ನವನ್ನು ನಿಯೋಗಿಸಬೇಕು.

ಹದಿನೆಂಟನೆಯ ಅಧ್ಯಾಯದಲ್ಲಿ ಮಾತ್ರ ಶ್ರೀಕೃಷ್ಣನು ಬ್ರಾಹ್ಮಣಾದಿ ಗಳಿಗೆ ಸ್ವಾಭಾವಿಕವಾದ ಕೆಲವು ಮುಖ್ಯಧರ್ಮಗಳನ್ನು ಸಂಗ್ರಹಿಸಿ ಹೇಳಿ ರುತ್ತಾನೆ:—

**ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।**
**ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಂ ॥**
**ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಂ।**
**ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಂ ॥**
**ಕೃಷಿಗೋರಕ್ಷವಾಣಿಜ್ಯಂ ವೈಶ್ಯಂ ಕರ್ಮ ಸ್ವಭಾವಜಂ।**
**ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಂ ॥**
**ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।**

—(18. 42-45.)

"ಎಲೈ ಅರ್ಜುನನೇ! ಶಮಃ—ಸರ್ವದಾ ಬುದ್ಧಿಯನ್ನು ಪರಮಾತ್ಮ ನಲ್ಲಿ ಇಡುವುದು ; ದಮಃ–ಇಂದ್ರಿಯನಿಗ್ರಹವು ; ತಪಃ - ಕೃಚ್ಛ್ರ, ಚಾಂದ್ರಾ ಯಣ, ಉಪವಾಸಾದಿ ತಪಸ್ಸುಗಳು ; ಶೌಚಂ – ಮೃತ್ತಿಕಾದಿಗಳಿಂದ ಬಾಹ್ಯ ಶೌಚವು, ವೈರಾಗ್ಯಬ್ರಹ್ಮಜ್ಞಾನಾದಿಗಳಿಂದ ಅಂತಃಶೌಚವು; ಕ್ಷಾಂತಿಃ – ಸಹನಗುಣವು; ಆರ್ಜವಂ - ಮನೋವಾಕ್ಕಾಯಗಳಲ್ಲಿ ಏಕ ರೀತಿಯಿಂದ ಇರುವುದು; ಜ್ಞಾನಂ – ಸೃಷ್ಟಿಕರ್ತೃತ್ವಾದಿ ವಿಷಯಕ ಸಾಮಾನ್ಯವಾದ

ಭಗವಜ್ಜ್ಞಾನವನ್ನು ಹೊಂದುವುದು ; ವಿಜ್ಞಾನಂ=ವಿಶೇಷವಾದ ಭಗವನ್ಮಹಿಮೆಗಳನ್ನು ತಿಳಿಯುವುದು ಮತ್ತು ಭಗವದ್ದರ್ಶನವು ; ಆಸ್ತಿಕ್ಯಂ=ಶಾಸ್ತ್ರದಲ್ಲಿ ಶ್ರದ್ಧೆಯು ; ಇವುಗಳೆಲ್ಲವೂ ಬ್ರಾಹ್ಮಣನಿಗೆ ಜನ್ಮಸ್ವಭಾವಾನುಗುಣವಾಗಿ ಪರಮಾತ್ಮನಿಂದ ನಿಯತವಾದ ಸ್ವಧರ್ಮಗಳು.

"ಶೌರ್ಯವು, ತೇಜಸ್ಸು, ಧೈರ್ಯವು, ದಕ್ಷತೆಯು, ಯುದ್ಧದಲ್ಲಿ ಅಪಲಾಯನವು, ಬ್ರಾಹ್ಮಣರಿಗೆ ದಾನಮಾಡುವುದು, ದುಷ್ಟನಿಗ್ರಹ ಶಿಷ್ಟಪರಿಪಾಲನಾರ್ಥವಾಗಿ ದಂಡಧಾರಣೆಯು ; ಇವುಗಳು ಕ್ಷತ್ರಿಯನಿಗೆ ಜನ್ಮಸ್ವಭಾವಾನುಗುಣವಾಗಿ ವಿಹಿತವಾದ ಧರ್ಮಗಳು.

"ಕೃಷಿಯು, ಗೋರಕ್ಷಣೆಯು, ವ್ಯಾಪಾರವು; ಇವು ವೈಶ್ಯಜನ್ಮಸ್ವಭಾವಾನುಗುಣವಾಗಿ ಈಶ್ವರನಿಂದ ವಿಹಿತವಾದ ಕರ್ಮಗಳು.

"ಪೂರ್ವೋಕ್ತ ತ್ರೈವರ್ಣಿಕ ಸಜ್ಜನರ ಸೇವೆಯು ಶೂದ್ರನಿಗೆ ಜನ್ಮಸ್ವಭಾವಾನುಗುಣವಾಗಿ ವಿಹಿತವಾದ ಕರ್ಮವು. ಸ್ವಸ್ವಧರ್ಮಗಳ ಅನುಷ್ಠಾನದಲ್ಲಿ ನಿರತನಾದವನು ಜ್ಞಾನದ್ವಾರಾ ಮುಕ್ತಿರೂಪವಾದ ಸಂಸಿದ್ಧಿಯನ್ನು ಹೊಂದುತ್ತಾನೆ."

**ಪ್ರಶ್ನೆ:**—ಸ್ವಾಮಿ ! ಈ ವಾಕ್ಯಗಳಲ್ಲಿ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳೆಂಬ ಷಟ್ಕರ್ಮಗಳು ಬ್ರಾಹ್ಮಣನ ಸ್ವಧರ್ಮಗಳೆಂದು ಸ್ಮೃತ್ಯುಕ್ತರೀತಿಯಾಗಿ ಹೇಳದೆ ಶಮದಮಾದಿಗುಣಗಳು ಬ್ರಾಹ್ಮಣನ ಧರ್ಮಗಳು ಎಂದು ಹೇಳಿರುವುದರಿಂದ ಯಾರು ಬೇಕಾದರೂ ಉಕ್ತಧರ್ಮದಿಂದ ಸಹಿತನಾದರೆ ಬ್ರಾಹ್ಮಣನಾಗಬಹುದು ಎಂದು ಹೇಳಿದಂತಾಗಲಿಲ್ಲವೇ ?

**ಉತ್ತರ :—ಶ್ರೀಶ್ರೀಗಳವರು :**—ಈ ವಾಕ್ಯಗಳ ಸ್ವಾರಸ್ಯವನ್ನು ನೀವು ತಿಳಿಯಲಿಲ್ಲ. "ಬ್ರಾಹ್ಮಂ ಕರ್ಮ ಸ್ವಭಾವಜಂ", "ಕ್ಷಾತ್ರಂ ಕರ್ಮ", "ವೈಶ್ಯಂ ಕರ್ಮ", "ಶೂದ್ರಂ ಕರ್ಮ ಸ್ವಭಾವಜಂ" ಇತ್ಯಾದಿ ರೀತಿಯಾಗಿ ಉದ್ದೇಶಮಾಡುವಾಗಲೇ ಬ್ರಾಹ್ಮಣಾದಿ ಯೋನಿಗಳಲ್ಲಿ ಹುಟ್ಟಿರುವ ಭಿನ್ನಭಿನ್ನ ವರ್ಣಸ್ಥ ಅಧಿಕಾರಿಗಳನ್ನು ಬೇರೆಬೇರೆಯಾಗಿಯೇ ಗ್ರಹಣಮಾಡಿ ಅವರ ಜಾತ್ಯನುಗುಣವಾದ ವಿಶೇಷ ಧರ್ಮಗಳನ್ನು ಶ್ರೀಕೃಷ್ಣನು ಇಲ್ಲಿ ಹೇಳಿರುತ್ತಾನೆ. ಶಮದಮಾದಿ

ಗುಣಗಳು ನಾಲ್ಕು ವರ್ಣದ ಮುಮುಕ್ಷುಗಳಿಗೂ ಬೇಕು. ಶೌರ್ಯಾದಿಗಳೂ ಬ್ರಾಹ್ಮಣರಲ್ಲಿ ಸ್ವಲ್ಪ ಇರಬೇಕು. ಬ್ರಾಹ್ಮಣರಿಗೂ ಉತ್ತಮರ ಪರಿಚರ್ಯೆಯೂ, ಕ್ಷತ್ರಿಯರಿಗೂ ಬ್ರಾಹ್ಮಣರ ಪರಿಚರ್ಯೆಯೂ ವಿಹಿತವೇ. ಆದರೆ ಶ್ರೀಕೃಷ್ಣನು ಇಲ್ಲಿ ಆಯಾಯ ವರ್ಣಸ್ಥ ಅಧಿಕಾರಿಗಳಲ್ಲಿ ಅಸಾಧಾರಣವಾಗಿ ನಿರವಧಿಕವಾಗಿ ಇರಬೇಕಾದ ಮುಖ್ಯ ಧರ್ಮಗಳನ್ನು ಅವರವರ ಸಾಧನ ಸೌಲಭ್ಯಕ್ಕಾಗಿ ನಿರೂಪಿಸಿರುತ್ತಾನೆ. ಮೇಲಾಗಿ ಈ ವಿವರಣವನ್ನು ಬ್ರಾಹ್ಮಣಾದಿ ಜಾತಿಯಲ್ಲಿರುವ ಅಧಿಕಾರಿಗಳ ಲಕ್ಷಣಗಳನ್ನಾಗಿ ಇಟ್ಟುಕೊಳ್ಳಬಹುದು. ಶಮದಮಾದಿಸಂಪತ್ತುಗಳು ಬ್ರಾಹ್ಮಣರಲ್ಲಿ ಇರುವಷ್ಟು ಕ್ಷತ್ರಿಯಾದಿ ಜಾತಿಗಳಲ್ಲಿ ಜನ್ಮಸ್ವಭಾವದಿಂದಲೇ ಇಲ್ಲ. ಆದುದರಿಂದ ಬ್ರಾಹ್ಮಣನು ವಿಶೇಷವಾಗಿ ಧ್ಯಾನಾದಿಗಳಲ್ಲಿ ನಿರತನಾಗಬೇಕು. ಕ್ಷತ್ರಿಯರಲ್ಲಿರುವ ಜನ್ಮಸ್ವಭಾವದಿಂದಲೇ ಪ್ರಾಪ್ತವಾದ ಶೌರ್ಯಾದಿಗಳು ಬ್ರಾಹ್ಮಣನಲ್ಲಿ ಅಲ್ಪವಾಗಿರುವುವು. ಆದುದರಿಂದ ಕ್ಷತ್ರಿಯನು ಜನ್ಮದಿಂದ ಪ್ರಾಪ್ತವಾದ ಗುಣಗಳನ್ನು ಈಶ್ವರತುಷ್ಟಿಕರವಾಗುವಂತೆ ವಿಶೇಷವಾಗಿ ವೃದ್ಧಿಹೊಂದಿಸಿಕೊಳ್ಳಬೇಕು. ಹೀಗೆಯೇ ವೈಶ್ಯಶೂದ್ರರಿಗೂ ವ್ಯಾಪಾರ, ಸೇವಾದಿಗಳು ತಮ್ಮತಮ್ಮ ಜಾತಿಯಲ್ಲಿ ಉತ್ಪತ್ತಿಯಿಂದಲೇ ಪ್ರಾಪ್ತವಾದ ಸ್ವಾಭಾವಿಕ ಕರ್ಮಗಳು. ಅವುಗಳು ಅವರಲ್ಲಿ ವಿಶೇಷವಾಗಿರುವುವು. ಅವುಗಳಿಂದಲೇ ಈಶ್ವರತುಷ್ಟಿಯನ್ನು ಅವರು ಹೊಂದಬಹುದು. ಸರ್ವರೂ ಯಥಾಯೋಗ್ಯವಾಗಿ ಶಮದಮಾದಿಗಳು, ಸ್ವಲ್ಪ ಶೌರ್ಯಾದಿಗಳು, ಸಾಮಾನ್ಯವಾದ ಉತ್ತಮ ಸೇವಾದಿಗಳು ಇದರಲ್ಲಿ ಅಧಿಕಾರಿಗಳೇ. ಆದರೂ "ಅಸಾಧಾರಣ್ಯೇನ ವ್ಯಪದೇಶಾ ಭವಂತಿ" ಎಂಬ ನ್ಯಾಯಾನುಗುಣವಾಗಿ ಕ್ಷತ್ರಿಯಾದಿಗಳ ಕರ್ಮಗಳನ್ನು ಮಾಡದೆ ಕೇವಲ ಧ್ಯಾನ ಪ್ರವಚನ ಶಮದಮಾದಿ ಗುಣಗಳಿಂದ ಸಹಿತರಾಗಿರೋಣವು ಬ್ರಾಹ್ಮಣರ ಸ್ವಧರ್ಮವೆಂದೂ, ಸ್ವಲ್ಪ ನ್ಯೂನವಾದ ಶಮಾದಿಗುಣಗಳನ್ನು ಹೊಂದಿದ್ದರೂ ಅವಶ್ಯವಾಗಿ ಪ್ರಜಾಪರಿಪಾಲನರೂಪವಾದ ಕಾರ್ಯದಲ್ಲಿ ವಿಶೇಷತಃ ಆಸಕ್ತನಾಗಬೇಕಾಗುವುದು ಕ್ಷತ್ರಿಯನ ಸ್ವಧರ್ಮವೆಂದೂ, ಹಾಗೆಯೇ ಇತರವರ್ಣಸ್ಥರ ಕರ್ಮಗಳನ್ನು ಮಾಡದೆ ಯಥಾಯೋಗ್ಯ ಶಮಾದಿಗಳಿಂದ ಸಹಿತನಾಗಿ ವ್ಯಾಪಾರಾದಿಗಳಲ್ಲಿ ನಿರತನಾಗುವುದು ವೈಶ್ಯಧರ್ಮವೆಂದೂ, ಶಮಾದಿ ಗುಣಗಳಿಂದ

ಸಹಿತನಾಗಿ ಇತರ ವರ್ಣಸ್ಥರ ಕರ್ಮವನ್ನು ಬಿಟ್ಟು ಅವರುಗಳ ಸೇವೆಯಲ್ಲಿಯೇ ತತ್ಪರನಾಗಿರುವುದು ಶೂದ್ರನ ಧರ್ಮವೆಂದೂ ಶ್ರೀಕೃಷ್ಣನ ಅಭಿಪ್ರಾಯವು.

ಆದುದರಿಂದ ಸರ್ವ ಸಜ್ಜನರೂ ಇನ್ನೂ ವಿಶೇಷವಾದ ಸ್ವವರ್ಣಾಶ್ರಮೋಚಿತಕರ್ಮಗಳನ್ನೂ ಆಪದ್ಧರ್ಮಗಳನ್ನೂ ಭಾರತದಿಂದಲೂ, ಸಾತ್ವಿಕಸ್ಮೃತಿಪುರಾಣಾದಿಗಳಿಂದಲೂ ತಿಳಿದುಕೊಂಡು ಪರಧರ್ಮವನ್ನು ಸರ್ವಥಾ ಪರಿತ್ಯಜಿಸಿ ಸ್ವಧರ್ಮದಲ್ಲಿ ನಿರತರಾಗಿ ಭಗವದಾರಾಧನೆಯನ್ನು ಮಾಡುತ್ತಿರಬೇಕು. ಅದರಲ್ಲಿಯೂ ಜ್ಞಾನಸಂಪಾದನೆಯು ಬ್ರಾಹ್ಮಣಜಾತಿಯಲ್ಲಿ ಹುಟ್ಟಿದವನಿಗೆ ಅತ್ಯವಶ್ಯಕವಾದ ಕರ್ತವ್ಯಧರ್ಮವು. ಸಾಮಾನ್ಯ ಪುಣ್ಯಸಂಪಾದನೆಯು ಕ್ಷತ್ರಿಯಾದಿ ಯಾವ ಜಾತಿಯಲ್ಲಿ ಹುಟ್ಟಿದವನಿಗೂ ಸಾಧ್ಯವು. ವಿಶೇಷವಾಗಿ ಜ್ಞಾನಸಾಧನೆಗೆ ಬ್ರಾಹ್ಮಣದೇಹದಲ್ಲಿ ಅಧಿಕಾರವು ಹೆಚ್ಚಾಗಿರುವುದರಿಂದ, ಅಂಥಾ ದೇಹವನ್ನು ಜ್ಞಾನವಿಜ್ಞಾನಸಂಪಾದನೆಯಲ್ಲಿ ಉಪಯೋಗಿಸದೆ ಇರುವ ಬ್ರಾಹ್ಮಣನು ಬಂಗಾರದ ಇಟ್ಟಿಗೆಯನ್ನು ಮನೆಯ ತಳಪಾಯದ ಕಲ್ಲಿಗೆ ಉಪಯೋಗಿಸುವವನಂತೆ, ಮಂದನಾದ ಪಶುವೆಂದು ಬೇರೆ ಹೇಳಬೇಕಾದುದಿಲ್ಲ.

---

## 21. ಇಪ್ಪತ್ತೊಂದನೆಯ ಅಂಶವು.

### ಶಂಕರಾಚಾರ್ಯರ ಕರ್ಮಸಂನ್ಯಾಸವಾದದ ಯುಕ್ತಿವಿಮರ್ಶೆಯು.

1. **ಪ್ರಶ್ನೆ:**—ಸ್ವಾಮಿ! ಅದ್ವೈತಮತದ ರೀತಿಯಿಂದ ಕರ್ಮಾನುಷ್ಠಾನವು ಕೂಡುವುದಿಲ್ಲವೆಂದು ತಮ್ಮಿಂದ ನಿರೂಪಿತವಾಯಿತಷ್ಟೆ. ಕರ್ಮಾಕರಣವನ್ನು ಶಂಕರಾಚಾರ್ಯರು ಎಲ್ಲಿ ಪ್ರತಿಪಾದಿಸಿರುವರು? ಯಾವ ಯುಕ್ತಿಯನ್ನು ಹೇಳಿರುವರು? ದಯಮಾಡಿ ನಿರೂಪಿಸಬೇಕು.

**ಉತ್ತರ:— ಶ್ರೀಶ್ರೀಗಳವರು:—** ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಸಂಶಯಕ್ಕೇ ಆಸ್ಪದವಾಗದಿರುವ ನಿರವಕಾಶವಾದ ಅನೇಕ ವಾಕ್ಯಗಳಿಂದ ಬಹು ಸ್ಥಳಗಳಲ್ಲಿ ಅತ್ಯಾಗ್ರಹಪೂರ್ವಕವಾಗಿ ಕರ್ಮಾಕರಣವೇ ಶ್ರುತ್ಯಾದಿ

ಶಾಸ್ತ್ರಸಮ್ಮತವಾದ ಅನುಷ್ಠಾನವೆಂದು ನಿರೂಪಿಸಿರುತ್ತಾರೆ. ತೃತೀಯಾಧ್ಯಾಯದಲ್ಲಿ ಈ ವಿಷಯವನ್ನು ಹೆಚ್ಚು ಪ್ರಯತ್ನದಿಂದ ಯುಕ್ತ್ಯುಪನ್ಯಾಸದಿಂದ ಸಹಿತವಾಗಿ ಉಪಪಾದಿಸಿರುತ್ತಾರಾದುದರಿಂದ ಆ ವಾಕ್ಯಗಳನ್ನು ಉದಾಹರಿಸುತ್ತೇವೆ:—

(1) **ಅಥ ಗೃಹಸ್ಥಸ್ಯೈವ ಆಯಾಸಬಾಹುಳ್ಯಕರಣಾತ್ ಮೋಕ್ಷಃ ಸ್ಯಾತ್ ನಾಶ್ರಮಾಂತರಾಣಾಂ ಶ್ರೌತನಿತ್ಯಕರ್ಮರಹಿತತ್ವಾದಿತಿ । ತದಪಿ ಅಸತ್ । ಸರ್ವೋಪನಿಷತ್ಸು ಇತಿಹಾಸ ಪುರಾಣಯೋಗ ಶಾಸ್ತ್ರೇಷು ಚ ಜ್ಞಾನಾಂಗತ್ವೇನ ಮುಮುಕ್ಷೋಃ ಸರ್ವಕರ್ಮ ಸಂನ್ಯಾಸವಿಧಾನಾತ್ ॥**

—(ಶಾಂಕರಗೀತಾಭಾಷ್ಯಂ, ಅಧ್ಯಾಯ 3.)

**ಅರ್ಥವು :**—ಗೃಹಸ್ಥಾಶ್ರಮವನ್ನು ಹೊಂದಿದವನು ಕರ್ಮತತ್ಪರನಾಗಿ ಬಹಳ ಆಯಾಸವನ್ನು ಹೊಂದುವುದರಿಂದ ಆತನಿಗೇ ಮೋಕ್ಷವಾಗಬೇಕು, ವೇದೋಕ್ತನಿತ್ಯಕರ್ಮರಹಿತರಾದ ಇತರ (ಯತ್ಯಾದಿ) ಆಶ್ರಮಸ್ಥರಿಗೆ ಮೋಕ್ಷವಾಗಕೂಡದು ಎಂಬ ಪೂರ್ವಪಕ್ಷವು ದುಷ್ಟವಾದುದು. ಯಾತಕ್ಕೆಂದರೆ ಸರ್ವ ಉಪನಿಷತ್ತುಗಳಲ್ಲಿಯೂ ಇತಿಹಾಸ ಪುರಾಣ ಯೋಗಶಾಸ್ತ್ರಗಳಲ್ಲಿಯೂ ಕೂಡ ಮುಮುಕ್ಷುವಿಗೆ ಜ್ಞಾನಾಂಗವಾಗಿ ಸರ್ವಕರ್ಮಸಂನ್ಯಾಸವು ಎಂದರೆ ಸಕಲ ನಿತ್ಯಕರ್ಮಗಳನ್ನು ನಿಶ್ಶೇಷವಾಗಿ ಪರಿತ್ಯಾಗಮಾಡೋಣವೇ ವಿಹಿತವಾಗಿರುವುದು.

ಪುನಃ ಪ್ರಮಾಣೋದಾಹರಣಪೂರ್ವಕವಾಗಿ ಇದೇ ವಿಷಯವನ್ನು ನಿರೂಪಿಸಿರುತ್ತಾರೆ :—

(2) **ಮುಮುಕ್ಷೋಃ ಸರ್ವಕರ್ಮಸಂನ್ಯಾಸವಿಧಾನಾತ್ । "ಪುತ್ರೈಷಣಾಯಾ ವಿತ್ತೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರಂತಿ", "ಬ್ರಹ್ಮಚರ್ಯಾದೇವ ಪ್ರವ್ರಜೇತ್" ಇತ್ಯಾದ್ಯಾ ಶ್ರುತಯಃ ॥**

**"ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ।**
**ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತಂ ತ್ಯಜ॥"**

**"ಸಂಸಾರಮೇವ ನಿಸ್ಸಾರಂ ದೃಷ್ಟ್ವಾ ಸಾರದಿದೃಕ್ಷಯಾ ।**
**ಪ್ರವ್ರಜಂತ್ಯಕೃತೋದ್ವಾಹಾಃ ಪರಂ ವೈರಾಗ್ಯಮಾಶ್ರಿತಾಃ ॥"**
**ಇತಿ ಬೃಹಸ್ಪತಿಃ ॥**

**"ಕರ್ಮಣಾ ಬಧ್ಯತೇ ಜಂತುಃ ವಿದ್ಯಯಾ ಚ ವಿಮುಚ್ಯತೇ।**
**ತಸ್ಮಾತ್ಕರ್ಮ ನ ಕುರ್ವಂತಿ ಯತಯಃ ಪಾರದರ್ಶಿನಃ ॥"**
**ಇತಿ ಶುಕಾನುಶಾಸನಂ ॥**

**ಇಹಾಪಿ ಚ ಸರ್ವಕರ್ಮಾಣಿ ಮನಸಾ ಸಂನ್ಯಸ್ಯೇತ್ಯಾದಿ ॥**

**ಅರ್ಥವು :—**(ಜ್ಞಾನಕರ್ಮಗಳಿಗೆ ಏಕತ್ರ ನಿವಾಸವು ಉಚಿತವಲ್ಲ. ಯಾತಕ್ಕೆಂದರೆ) ಮೋಕ್ಷಾರ್ಥಿಯಾದವನಿಗೆ ಸರ್ವಕರ್ಮಪರಿತ್ಯಾಗವೇ ವಿಧ್ಯುಕ್ತವಾಗಿರುವುದು. **"ಪುತ್ರೈಷಣಾಯಾಃ" "ಬ್ರಹ್ಮಚರ್ಯಾದೇವ"** ಇತ್ಯಾದಿ ಶ್ರುತಿಗಳು ಸರ್ವಕರ್ಮಸಂನ್ಯಾಸವನ್ನೇ ಹೇಳುತ್ತವೆ. ಮತ್ತು **'ತ್ಯಜ ಧರ್ಮಮಧರ್ಮಂ ಚ' "ಸಂಸಾರಮೇವ...." "ಕರ್ಮಣಾ ಬಧ್ಯತೇ ಜಂತುಃ"** ಇತ್ಯಾದಿ ಸ್ಮೃತಿಗಳೂ ಸರ್ವಕರ್ಮಸಂನ್ಯಾಸವನ್ನೇ ವಿಧಾನಮಾಡುತ್ತವೆ. ಇಲ್ಲಿಯೇ ಗೀತೆಯಲ್ಲಿಯೂ ಕೂಡ **"ಸರ್ವಕರ್ಮಾಣಿ ಮನಸಾ ಸಂನ್ಯಸ್ಯ"** ಇತ್ಯಾದಿ ಶ್ಲೋಕಗಳಲ್ಲಿ ಕರ್ಮಪರಿತ್ಯಾಗವೇ ವಿಹಿತವಾಗಿರುವುದು.

ಈ ಪ್ರಕಾರವಾಗಿ ಶಂಕರಾಚಾರ್ಯರು ಮುಮುಕ್ಷುವು ನಿತ್ಯನೈಮಿತ್ತಕಾದಿ ಸರ್ವಕರ್ಮಪರಿತ್ಯಾಗವನ್ನು ಮಾಡಬೇಕೆಂದು ಪ್ರತಿಪಾದಿಸಿ ತಮ್ಮ ತತ್ತ್ವಕ್ಕೆ ಆಧಾರವಾಗುವುವೆಂಬ ಮೋಹದಿಂದ ಶ್ರುತಿಗಳನ್ನೂ ಸ್ಮೃತಿಗಳನ್ನೂ ಉದಾಹರಿಸಿರುವುದಲ್ಲದೆ ಯುಕ್ತಿಯನ್ನೂ ಹೇಳುತ್ತಾರೆ:—

(3) **ಮೋಕ್ಷಸ್ಯ ಚಾಕಾರ್ಯತ್ವಾತ್ ಮುಮುಕ್ಷೋಃ ಕರ್ಮಾನರ್ಥಕ್ಯಂ। ನಿತ್ಯಾನಿ ಪ್ರತ್ಯವಾಯಪರಿಹಾರಾರ್ಥಾನಿ ಇತಿ ಚೇನ್ನ। ಅಸಂನ್ಯಾಸಿವಿಷಯತ್ವಾತ್ಪ್ರತ್ಯವಾಯ ಪ್ರಾಪ್ತೇಃ । ನಹಿ ಅಗ್ನಿಕಾರ್ಯಾದ್ಯಕರಣಾತ್ಸಂನ್ಯಾಸಿನಃ ಪ್ರತ್ಯವಾಯಃ ಕಲ್ಪಯಿತುಂ ಶಕ್ಯಃ ಯಥಾ ಬ್ರಹ್ಮಚಾರಿಣಾಂ ಅಸಂನ್ಯಾಸಿನಾಮಪಿ। ನ ತಾವತ್ ನಿತ್ಯಾನಾಮಕರಣಾತ್ ಅಭಾವಾದೇವ ಭಾವರೂಪಸ್ಯ ಪ್ರತ್ಯವಾಯಸ್ಯ ಉತ್ಪತ್ತಿಃ ಕಲ್ಪಯಿತುಂ ಶಕ್ಯಾ। "ಕಥಮಸತಃ ಸಜ್ಜಾ**

**ಯೇತ ” ಇತಿ ಅಸತಃ ಸಜ್ಜನ್ಮಾಸಂಭವಶ್ರುತೇಃ। ಯದಿ ವಿಹಿತಾಕರಣಾದಸಂಭಾವ್ಯಮಪಿ ಪ್ರತ್ಯವಾಯಂ ಬ್ರೂಯಾದ್ವೇದಃ ತದಾ ಅನರ್ಥಕರಃ ವೇದಃ ಅಪ್ರಮಾಣಮಿತ್ಯುಕ್ತಂ ಸ್ಯಾತ್ । ವಿಹಿತಸ್ಯ ಕರಣಾಕರಣಯೋಃ ದುಃಖಮಾತ್ರಫಲತ್ವಾತ್ । ತಥಾ ಚ ಕಾರಕಂ ಶಾಸ್ತ್ರಂ ನ ಜ್ಞಾಪಕಮಿತಿ ಅನುಪಪನ್ನಾರ್ಥಂ ಕಲ್ಪಿತಂ ಸ್ಯಾತ್ । ನ ಚೈತದಿಷ್ಟಂ। ತಸ್ಮಾನ್ನ ಸಂನ್ಯಾಸಿನಾಂ ಕರ್ಮಾಣಿ ॥**

**ಅರ್ಥವು:—**(ಕರ್ಮಪರಿತ್ಯಾಗದಲ್ಲಿ ಯುಕ್ತಿಗಳೂ ಇರುವುವು.) 1. ಮೋಕ್ಷವು ಸಾಧನಾನುಷ್ಠಾನದಿಂದ ಜನ್ಯವಾದ (ಪ್ರಾಪ್ಯವಾದ) ಪದಾರ್ಥವಲ್ಲವಾದುದರಿಂದ ಮುಮುಕ್ಷುವಿಗೆ ಕರ್ಮವು ನಿಷ್ಪ್ರಯೋಜನವಾದುದೇ ಸರಿ. ಆತನಿಗೆ ಹೊಸದಾಗಿ ಮೋಕ್ಷವು ಬರಬೇಕಾದುದಿಲ್ಲ. ಜೀವರುಗಳು ಇಲ್ಲವೇ ಇಲ್ಲ ಎಂದು ಭಾವವು. ನರಕಪ್ರಾಪ್ತಿರೂಪವಾದ ಪ್ರತ್ಯವಾಯಪರಿಹಾರರೂಪವಾದ ಪ್ರಯೋಜನವು ನಿತ್ಯಕರ್ಮಗಳಿಗೆ ಇರುವುದಾದುದರಿಂದ ನಿತ್ಯಕರ್ಮಗಳನ್ನು ಮಾಡಬೇಕೆಂದು ಹೇಳಕೂಡದು. 2. ಅಗ್ನಿಕಾರ್ಯಾದಿ ನಿತ್ಯಕರ್ಮಪರಿತ್ಯಾಗದಿಂದ ಬ್ರಹ್ಮಚಾರಿಗಳಿಗಿರುವಂತೆ ಸಂನ್ಯಾಸಿಗಳಿಗೂ ಪ್ರತ್ಯವಾಯವು ಇರುವುದೆಂದು ಕಲ್ಪಿಸುವುದು ಶಕ್ಯವಲ್ಲ. 3. ಅಷ್ಟೇ ಅಲ್ಲ. ಯಾವ ರೀತಿಯಿಂದಲೂ ನಿತ್ಯಕರ್ಮಾಕರಣದಿಂದ ಪ್ರತ್ಯವಾಯವು ಬರುವುದುಂಟೆಂದು ಕಲ್ಪಿಸುವುದಕ್ಕೆ ಶಕ್ಯವಲ್ಲ. ಯಾತಕ್ಕೆಂದರೆ ಕರ್ಮಾಕರಣವು ಅಭಾವರೂಪವಾದ ಪದಾರ್ಥವು; ಪ್ರತ್ಯವಾಯವು ಭಾವರೂಪಪದಾರ್ಥವು. ಅಭಾವರೂಪವಾದ ಕರ್ಮಾಕರಣದಿಂದ ಭಾವರೂಪವಾದ ಪ್ರತ್ಯವಾಯೋತ್ಪತ್ತಿಯು ಉಂಟಾಗಲಾರದು. ಅಸತ್ತಿನಿಂದ ಭಾವಪದಾರ್ಥಗಳ ಉತ್ಪತ್ತಿಯು ಅಸಂಭಾವಿತವು ಎಂಬ ಅರ್ಥವುಳ್ಳ “ಕಥಮಸತಃ ಸಜ್ಜಾಯೇತ” ಎಂಬ ಶ್ರುತಿಯೂ ಈ ವಿಷಯದಲ್ಲಿ ಪ್ರಮಾಣವಾಗಿರುವುದು. 4. ಈ ಪ್ರಕಾರವಾಗಿ ವಿಹಿತಕರ್ಮಾಕರಣದಿಂದ ಪ್ರತ್ಯವಾಯಪ್ರಾಪ್ತಿಗೆ ಕಾರಣವೇ ಇಲ್ಲದಿರುವಾಗ ಪ್ರತ್ಯವಾಯವು ಉಂಟು ಎಂದು ಹೇಳುವುದಾದರೆ ವೇದವೂ ಕೂಡ ಅನರ್ಥಕರವಾಗಿ ಅಪ್ರಮಾಣವೆಂದು ಪ್ರಾಪ್ತವಾಗುವುದು.

ಅಭಾವರೂಪವಾದ ಕರ್ಮಾಕರಣದಿಂದ ಪ್ರತ್ಯವಾಯೋತ್ಪತ್ತಿಯಾಗುವುದು. ಅಶಕ್ಯವಾದರೂ ವೇದವು ಅಂಥ ಕೆಲಸವನ್ನು ಕೂಡ ಮಾಡುವುದು ಎಂದು ಹೇಳುವುದಾದರೆ ವೇದವು ಜ್ಞಾಪಕವಾದ ಪ್ರಮಾಣವೆಂದು ಇದುವರೆವಿಗೂ ನಾವು ತಿಳಿದಿದ್ದುದನ್ನು ಬಿಟ್ಟು ಅದು ಕಾರಕವಾದ ಎಂದರೆ ಸ್ಥೂಲ ಕಾರ್ಯಕಾರಿಯಾದ ಒಂದು ವಸ್ತುವೆಂದು ಒಪ್ಪಬೇಕಾಗುವುದು. ಆದುದರಿಂದ ಸಂನ್ಯಾಸಿಗಳಿಗೆ (ಮುಮುಕ್ಷುಗಳಿಗೆ) ಕರ್ಮವು ಇಲ್ಲ. (ಕರ್ಮಾಕರಣದಿಂದ ಯಾವ ಹಾನಿಯೂ ಇಲ್ಲ.)

ಈ ವಾಕ್ಯಗಳ ಪರ್ಯಾಲೋಚನೆಯಿಂದ ಶಂಕರಾಚಾರ್ಯರ ನಿರ್ಗಳಿತವಾದ ಅಭಿಪ್ರಾಯವು ಈ ರೀತಿಯಾಗಿ ಕಂಡುಬರುತ್ತದೆ.

1. ಶ್ರುತಿ ಸ್ಮೃತಿಗಳಲ್ಲಿ ಕರ್ಮವನ್ನು ಪರಿತ್ಯಜಿಸಬೇಕೆಂದು ವಿಧಾನವಿರುವುದರಿಂದ ಮುಮುಕ್ಷುವು ಕರ್ಮವನ್ನು ಪರಿತ್ಯಜಿಸಬೇಕು.

2. ಮೋಕ್ಷವು ಕರ್ಮಾನುಷ್ಠಾನದಿಂದ ನೂತನವಾಗಿ ಪ್ರಾಪ್ಯವಾದ ವಸ್ತುವಲ್ಲವಾದುದರಿಂದ ಕರ್ಮಾಚರಣೆಯು ನಿರರ್ಥಕವು. ಆದುದರಿಂದ ಮುಮುಕ್ಷುವು ಕರ್ಮವನ್ನು ಪರಿತ್ಯಜಿಸಬೇಕು.

3. ಕರ್ಮಾಕರಣದಿಂದ ಪ್ರತ್ಯವಾಯವು ಬರುವುದೆಂಬ ಭೀತಿಗೂ ಕಾರಣವಿಲ್ಲ. ಕರ್ಮಾಕರಣವು ಅಭಾವರೂಪವಾಗಿರುವುದು. ಅಭಾವದಿಂದ ಭಾವರೂಪವಾದ ಪ್ರತ್ಯವಾಯೋತ್ಪತ್ತಿಯು ಅಸಂಭಾವಿತವು. ಹೀಗೆ ಕರ್ಮಾಕರಣದಿಂದ ಯಾವ ನರಕಾದಿ ಪ್ರತ್ಯವಾಯೋತ್ಪತ್ತಿಗೂ ಸಂಭವವಿಲ್ಲದಿರುವುದರಿಂದ ಮುಮುಕ್ಷುವು ಕರ್ಮಾಕರಣವನ್ನೇ ಅವಲಂಬಿಸಬೇಕು.

4. ವೇದವು, ಕರ್ಮಾನುಷ್ಠಾನಪರಿತ್ಯಾಗದಿಂದ ಪ್ರತ್ಯವಾಯವು ಬರುವುದೆಂದು ಪ್ರತಿಪಾದನೆ ಮಾಡುವುದಾದರೆ, ಅದಕ್ಕೆ ಪ್ರಾಮಾಣ್ಯವೇ ದುರ್ಘಟವಾಗಿ ಅದು ಅನರ್ಥಕರವೆಂದು ಪ್ರಾಪ್ತವಾಗುವುದರಿಂದ ವೇದಪ್ರಾಮಾಣ್ಯವನ್ನು ಅಂಗೀಕರಿಸುವ ಮುಮುಕ್ಷುಗಳೆಲ್ಲರೂ ಸರ್ವಕರ್ಮಪರಿತ್ಯಾಗವೇ ವೇದತಾತ್ಪರ್ಯವಿಷಯಭೂತವಾಗಿರು

ವುದೆಂದು ನಿಶ್ಚಯಿಸಿ ಸಕಲ ಕರ್ಮಾನುಷ್ಠಾನಗಳನ್ನೂ ಪರಿತ್ಯಾಗ ಮಾಡಬೇಕು.

ಶಂಕರಾಚಾರ್ಯರಿಂದ ಪ್ರತಿಪಾದಿಸಲ್ಪಟ್ಟಿರುವ ಈ ನಾಲ್ಕು ಯುಕ್ತಿಗಳೂ ಮೂಢಜನಮೋಹಕವಾದ ಹೇತ್ವಾಭಾಸಗಳು. ಹೇಗೆಂದರೆ, ಶ್ರುತಿಸ್ಮೃತಿಗಳಲ್ಲಿ ಎಲ್ಲಿಯೂ ಕರ್ಮಪರಿತ್ಯಾಗವು ಮೋಕ್ಷಸಾಧಕವೆಂದು ಹೇಳಲ್ಪಟ್ಟಿರುವುದಿಲ್ಲ. ಪ್ರತ್ಯುತ "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ" ಇತ್ಯಾದಿ ಅನೇಕ ಶ್ರುತಿಗಳಲ್ಲಿ ನಿತ್ಯಕರ್ಮಗಳನ್ನು ಮಾಡುತ್ತಲೇ ಜ್ಞಾನಸಾಧನಾನುಷ್ಠಾನವನ್ನು ಅವಲಂಬಿಸಬೇಕೆಂದು ವಿಧಿಸಲ್ಪಟ್ಟಿರುವುದು. 2. "ಪುತ್ರೈಷಣಾಯಾಃ ವಿತ್ತೈಷಣಾಯಾಃ" ಇತ್ಯಾದಿ ಶ್ರುತಿಗಳೂ ಪುತ್ರಾದಿರೂಪವಾದ ಕರ್ಮಫಲಗಳಲ್ಲಿ ಇಚ್ಛೆಯನ್ನು ಪರಿತ್ಯಾಗ ಮಾಡಬೇಕೆಂದು ಹೇಳುತ್ತವೆ. ನಿಷ್ಕಾಮಕರ್ಮಗಳನ್ನು ಪರಿತ್ಯಾಗಮಾಡುವುದು ಜ್ಞಾನಾಂಗವಾದ ಮೋಕ್ಷಸಾಧನವೆಂದು ಹೇಳುವುದಿಲ್ಲ. "ಸರ್ವಧರ್ಮಾನ್ ಪರಿತ್ಯಜ್ಯ" "ತ್ಯಜ ಧರ್ಮಮಧರ್ಮಂ ಚ" ಇತ್ಯಾದಿ ಸ್ಮೃತಿಗಳೂ ಕೂಡ ಸ್ವರ್ಗ ನರಕಗಳು ಬರುವುವೆಂಬ ದೃಷ್ಟಿಯಿಂದ ಕರ್ಮದಲ್ಲಿ ಪ್ರವೃತ್ತಿ ನಿವೃತ್ತಿಗಳನ್ನು ಹೊಂದಕೂಡದು. ಮತ್ತೇನೆಂದರೆ ನಿಷ್ಕಾಮನಾಗಿ ಭಗವತ್ಪ್ರಸಾದವನ್ನು ಅಪೇಕ್ಷಿಸಿ ಕರ್ಮಮಾರ್ಗದಲ್ಲಿ ಅವಶ್ಯವಾಗಿ ಪ್ರವರ್ತಿಸಬೇಕೆಂದೇ ಬೋಧಿಸುತ್ತವೆ. 3 ಹಾಗೆಯೇ ಸಂನ್ಯಾಸವೆಂದರೆ ಕರ್ಮಪರಿತ್ಯಾಗಪೂರ್ವಕವಾದ ಯತ್ಯಾಶ್ರಮಸ್ವೀಕಾರವೆಂಬ ಶಂಕರಾಚಾರ್ಯರ ಅರ್ಥವು ಅಜ್ಞಾನವಿಜೃಂಭಿತವಾದ ದುರರ್ಥವು. **"ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ। ಸ ಸಂನ್ಯಾಸೀ"** ಎಂದೂ, **"ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ"** ಎಂದೂ ಕರ್ಮಫಲಾಪೇಕ್ಷಾರಾಹಿತ್ಯವೇ ಸಂನ್ಯಾಸಶಬ್ದಾರ್ಥವೆಂದು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿ, ಕರ್ಮಪರಿತ್ಯಾಗಕ್ಕೆ ಭಯಂಕರವಾದ ಅನರ್ಥಗಳನ್ನು ಸಹ ಹದಿನೆಂಟನೆಯ, ಹದಿನಾರನೆಯ ಮತ್ತು ಹದಿನೇಳನೆಯ ಅಧ್ಯಾಯಗಳಲ್ಲಿ ನಿರೂಪಿಸಿರುತ್ತಾನೆ, **"ಕರ್ಮಣಾ ಬಧ್ಯತೇ ಜಂತುಃ"** ಇತ್ಯಾದಿ ಪ್ರಮಾಣಗಳಿಗೆ ಗತಿಯನ್ನು **"ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ"** ಇತ್ಯಾದಿ ಬಹುಸ್ಥಳ

ಗಳಲ್ಲಿ ಶ್ರೀಕೃಷ್ಣನೇ ತೋರಿಸಿರುತ್ತಾನೆ. ಕಾಮ್ಯಕರ್ಮಗಳು ಪುನಃ ಪುನಃ ಸಾಂಸಾರಿಕ ಅನುಭವಗಳಿಗೆ ಕಾರಣವಾಗುವುದರಿಂದ ಬಂಧಕಗಳಾಗುತ್ತವೆ. ಎಂದರೆ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕಗಳಾಗುತ್ತವೆ. ನಿಷ್ಕಾಮಕರ್ಮವು ಅಪರೋಕ್ಷ ಜ್ಞಾನಕ್ಕೆ ಪೂರ್ವದಲ್ಲಿ ಪ್ರದರ್ಶಿತವಾದ ಅನೇಕ ಪ್ರಕಾರಗಳಲ್ಲಿ ಕಾರಣವಾಗುವುರಿಂದ ಮೋಕ್ಷಸಾಧನವಾಗುವುದೇ ಹೊರತು ಮುಮುಕ್ಷು ವಿನಿಂದ ಪರಿತ್ಯಾಜ್ಯವಾದ ನಿರರ್ಥಕ ವ್ಯಾಪಾರವಲ್ಲ. **4.** ಕರ್ಮಾನುಷ್ಠಾನವು ನಿರರ್ಥಕವೆಂದು ಬಲ್ಲ ಶಂಕರಾಚಾರ್ಯರಿಂದ ನಿರೂಪಿತವಾದ ಯುಕ್ತಿಗಳು ಮೌಢ್ಯಮೂಲಕವಾಗಿರುವುವು. ಮೋಕ್ಷವು **"ಅಕಾರ್ಯ"**ವಾಗಿರುವುದ ರಿಂದ ಎಂದರೆ ನಿತ್ಯಸಿದ್ಧವಾಗಿರುವುದರಿಂದ ಇದನ್ನು ತಿಳಿದ ಮುಮುಕ್ಷುವು ಕರ್ಮವನ್ನು ಯಾತಕ್ಕೆ ಮಾಡಬೇಕು? ಎಂದು ಅವರೇ ಕೇಳಿರುವರು. ಈ ನ್ಯಾಯವನ್ನು ಅವಲಂಬಿಸಿ ಕರ್ಮವನ್ನು ಬಿಡುವುದಾದರೆ ಸಕಲ ಜ್ಞಾನೋ ಪಾಯಗಳನ್ನೂ ಅದೇ ಕಾರಣದಿಂದ ಪರಿತ್ಯಾಗಮಾಡಿ ವೇದವೇದಾಂತಗಳನ್ನೆಲ್ಲ ಸುಟ್ಟು ಸ್ವಸ್ಥನಾಗಿರುವುದೇ ನ್ಯಾಯಪ್ರಾಪ್ತವಾದ ಆಚರಣೆಯಾಗುವುದು. ನಿತ್ಯಸಿದ್ಧವಾದ ಮೋಕ್ಷವು ಕರ್ಮಜನ್ಯವಲ್ಲ ಮತ್ತು ಜ್ಞಾನಜನ್ಯವೂ ಅಲ್ಲ. ಮೋಕ್ಷವು ನಿತ್ಯಸಿದ್ಧವಾದರೂ ಜ್ಞಾನದಿಂದ ಅವಿದ್ಯಾನಿವೃತ್ತಿರೂಪವಾದ ಫಲವು ಪ್ರಮಿತವಾಗಿರುವುದರಿಂದ ಜ್ಞಾನೋಪಾಯವು ಅವಶ್ಯವಾಗಿ ಅನುಷ್ಠೇ ಯವೆಂದು ಹೇಳುವುದಾದರೆ ಜ್ಞಾನೋತ್ಪತ್ತಿಗೆ ಸಾಧಕವಾದ ಕರ್ಮವೂ ಕೂಡ ಅವಶ್ಯವಾಗಿ ಅನುಷ್ಠೇಯವೆಂದೇ ಪ್ರಾಪ್ತವಾಗುವುದು. 5. ಕಿಂಚ ಮೋಕ್ಷವು ನಿತ್ಯಸಿದ್ಧವಾಗಿರುವುದಾದರೆ ಸರ್ವರಿಗೂ ನಿತ್ಯಸಿದ್ಧವೇ. ಹೀಗಿರುವಲ್ಲಿ ಸಂನ್ಯಾ ಸಿಯು ಮಾತ್ರ ಕರ್ಮಪರಿತ್ಯಾಗವನ್ನು ಮಾಡಬೇಕು ಎಂದು ಅಜ್ಞರನ್ನು ವ್ಯಾವರ್ತಿಮಾಡಿ ವಿಶೇಷವಾಗಿ ನಿರೂಪಿಸುವುದಕ್ಕೆ ಕಾರಣವಿಲ್ಲ. ಸಕಲರೂ ಕರ್ಮವನ್ನು ಪರಿತ್ಯಾಗಮಾಡಬಹುದು; ಇದನ್ನು ತಿಳಿಯದ ಮಂದನು ನಿರರ್ಥಕ ಕರ್ಮಗಳನ್ನು ಮಾಡುವನು. ಅಷ್ಟೇ ವಿನಹ ಅಜ್ಞನು ಕರ್ಮವನ್ನು **ಮಾಡಬೇಕು** ಎಂಬ ವಿಧಿಗೆ ಅವಕಾಶವಿರುವುದಿಲ್ಲ. ಈ ನ್ಯಾಯವನ್ನು ಅವ ಲಂಬಿಸಿ ಸರ್ವರೂ ಕರ್ಮವನ್ನು ಪರಿತ್ಯಾಗಮಾಡಿದರೆ ಶ್ರೀಕೃಷ್ಣನು ತೃತೀಯಾ ಧ್ಯಾಯದಲ್ಲಿ ಹೇಳಿರುವಂತೆ ವರ್ಣಸಾಂಕರ್ಯವು ಪ್ರಾಪ್ತವಾಗಿ ಸರ್ವರೂ ನರಕ

ದಲ್ಲಿ ಬೀಳುವರು. 6. ನರಕಾದಿರೂಪವಾದ ಪ್ರತ್ಯವಾಯಗಳೆಲ್ಲಾ ಸುಳ್ಳೇ ಎಂದು ಹೇಳುವವರೋಪಾದಿಯಲ್ಲಿ ಶಂಕರಾಚಾರ್ಯರು ಈ ಸ್ಥಳದಲ್ಲಿ ವಾದಿಸಿ ರುತ್ತಾರೆ. ಅದಕ್ಕೆ ಸರಿಯಾಗಿ ಅಭಾವರೂಪವಾದ ಕರ್ಮಾಕರಣದಿಂದ ಭಾವ ರೂಪವಾದ ನರಕಾದಿ ಪ್ರತ್ಯವಾಯಗಳು ಬರುವುದಕ್ಕೆ ಕಾರಣವೇ ಇಲ್ಲ ಎಂದು ಒಂದು ಅಬದ್ಧ ಯುಕ್ತಿಯನ್ನೂ ಸಹ ಹೇಳಿರುವರು. ಇದು ನಿಜವಾಗುವು ದಾದರೆ ನಿತ್ಯಕರ್ಮಪರಿತ್ಯಾಗದಿಂದ ನರಕಪ್ರಾಪ್ತಿಯಾಗುವುದು, ಸಂಧ್ಯಾಪರಿ ತ್ಯಾಗದಿಂದ ಸೂರ್ಯಹತ್ಯಾದೋಷವು ಬರುವುದು, ಭೂಲೋಕದಲ್ಲಿ ಗೂಬೆ ಯಾಗಿ ಹುಟ್ಟುವನು ಇತ್ಯಾದಿ ರೀತಿಯಾಗಿ ಬೋಧಿಸುವ ಶ್ರುತಿ ಸ್ಮೃತಿಗಳೆಲ್ಲವೂ ಅಪ್ರಮಾಣಗಳೆಂದೇ ಒಪ್ಪಿದಂತಾಯಿತು. 7. ಕಿಂಚ ಋತುಕಾಲವು ಪ್ರಾಪ್ತ ವಾಗುವುದಕ್ಕೆ ಮೊದಲೇ ಕನ್ಯೆಗೆ ವಿವಾಹವನ್ನು ಮಾಡದಿದ್ದರೆ ಸ್ಮೃತಿಗಳು ಭಯಂಕರವಾದ ಪ್ರತ್ಯವಾಯಗಳನ್ನು ಹೇಳುವುವು. ತಥಾಹಿ:—**ಯಾಜ್ಞ ವಲ್ಕ್ಯಃ** :—

(1) **ಅಪ್ರಯಚ್ಛನ್ ಸಮಾಪ್ನೋತಿ ಭ್ರೂಣಹತ್ಯಾಂ ಋತೌ ಋತೌ ॥**

ಕನ್ಯೆಯನ್ನು ಋತುಕಾಲಕ್ಕೆ ಮೊದಲೇ ವಿವಾಹಮಾಡಿಕೊಡದಿದ್ದ ಪಕ್ಷ ದಲ್ಲಿ ಭ್ರೂಣಹತ್ಯೆಯನ್ನು ಹೊಂದುತ್ತಾನೆ.

(2) **ವ್ಯಾಸಃ**—

**ಯದಿ ಸಾ ದಾತೃವೈಕಲ್ಯಾದ್ರಜಃ ಪಶ್ಯೇತ್ಕುಮಾರಿಕಾ ।**
**ಭ್ರೂಣಹತ್ಯಾಮವಾಪ್ನೋತಿ ಪತಿತಸ್ಸ್ಯಾತ್ತದಪ್ರದಃ ॥**

ಕನ್ಯೆಯು ಕನ್ಯಾದಾನಮಾಡಬೇಕಾದವರ ದೋಷದಿಂದ ವಿವಾಹಿತ ಳಾಗದೆ ಋತುಮತಿಯಾಗಿಬಿಟ್ಟರೆ ಅಂತಹ ಕನ್ಯೆಯನ್ನು ವಿವಾಹ ಮಾಡದವನು ಭ್ರೂಣಹತ್ಯಾದೋಷವನ್ನು ಹೊಂದುವನು ಮತ್ತು ಪತಿತನಾಗುವನು.

(3) **ಪರಾಶರಃ**—

**ಪ್ರಾಪ್ತೇ ತು ದ್ವಾದಶೇ ವರ್ಷೇ ಯಃ ಕನ್ಯಾಂ ನ ಪ್ರಯಚ್ಛತಿ ।**
**ಮಾಸಿ ಮಾಸಿ ರಜಸ್ತಸ್ಯಾಃ ಪಿಬಂತಿ ಪಿತರಃ ಸ್ವಯಂ ॥**

ಇತ್ಯಾದಿ ಅನೇಕ ಪ್ರಮಾಣಗಳಲ್ಲಿ ಕರ್ತವ್ಯ ಕಾಲದಲ್ಲಿ ವಿವಾಹಾಕರಣಕ್ಕೆ ಪ್ರಬಲವಾದ ಅನರ್ಥ ಪ್ರಾಪ್ತಿಯು ಹೇಳಲ್ಪಟ್ಟಿರುವುದು. ವಿವಾಹಾಕರಣವು

ಅಭಾವರೂಪವಾದುದು, ಭ್ರೂಣಹತ್ಯಾದಿ ದೋಷಗಳು ಭಾವರೂಪವಾಗಿರುವುವು. ಆದರೂ ಕಾರ್ಯಕಾರಣಭಾವವು ಸಿದ್ಧವಾಗಿರುವುದು. ಹೀಗಿರುವಲ್ಲಿ ಅಭಾವರೂಪವಾದ ನಿತ್ಯಕರ್ಮಾಕರಣದಿಂದ ಭಾವರೂಪವಾದ ಪ್ರತ್ಯವಾಯವು ಹೇಗೆ ಬರುವುದು ? ಎಂಬ ಶಂಕರಾಚಾರ್ಯರ ಉಪಪಾದನೆಯು ಪ್ರಜ್ಞಾರಾಹಿತ್ಯಕ್ಕೆ ಪ್ರಥಮ ನಿದರ್ಶನವೇ ಸರಿ. ಕರ್ತವ್ಯಾಕರಣದಿಂದ ಭಾವರೂಪವಾದ ಅನಂತ ಅನರ್ಥಗಳು ಪ್ರಾಪ್ತವಾಗುತ್ತಿರುವುದು ಲೋಕಸಿದ್ಧವಾಗಿರುವುದು. ನಿರ್ದಿಷ್ಟಕಾಲದಲ್ಲಿ ಶಾಲೆಗೆ ಹೋಗದಿದ್ದರೆ ಭಾವರೂಪವಾದ ದಂಡವು ಪ್ರಾಪ್ತವಾಗುವುದು. ನಿರ್ದಿಷ್ಟಕಾಲದಲ್ಲಿ ಲಾಯರುಗಳು ಕೋರ್ಟಿಗೆ ಹೋಗದಿದ್ದರೆ ಕೇಸು ಕೆಟ್ಟುಹೋಗಿ ಪ್ರಾಪ್ತವಾಗುವ ವರಮಾನಕ್ಕೆ ಕಲ್ಲು ಬೀಳುವುದು ಮತ್ತು ಕೀರ್ತಿನಾಶಾದಿ ನಿಮಿತ್ತಕವಾದ ದುಃಖಗಳು ಬಂದೊದಗುವುವು. ಆದುದರಿಂದ ಕರ್ಮಾಕರಣವು ಪ್ರತ್ಯವಾಯಜನಕವಲ್ಲವೆಂದು ಹೇಳಿದುದು ವಿಪರೀತಜ್ಞಾನಮೂಲಕವೇ ಆಗಿರುವುದು. 8. ಶಂಕರಾಚಾರ್ಯರು ನಿರೂಪಿಸಿರುವ ದೃಷ್ಟಾಂತಪರಾಮರ್ಶೆಯಿಂದ ಈ ಅಭಿಪ್ರಾಯವು ನಿರ್ಣೀತವಾಗುವುದು. ಕರ್ಮಾಕರಣವು ಅಭಾವರೂಪವಾದುದರಿಂದ ಭಾವರೂಪವಾದ ಪ್ರತ್ಯವಾಯವನ್ನು ಹುಟ್ಟಿಸಲಾರದೆಂದು ಹೇಳಿ ಈ ವಿಷಯದಲ್ಲಿ "ಕಥಮಸತಃ ಸಜ್ಜಾಯೇತ" ಎಂದು ಶ್ರುತಿಯನ್ನು ಆಧಾರವಾಗಿ ಕೊಟ್ಟಿರುವರು. ಈ ಶ್ರುತಿಯಲ್ಲಿ ಅಭಾವಕ್ಕೆ ಭಾವರೂಪವಾದ ಪ್ರತ್ಯವಾಯಜನಕತ್ವವು ಸಂಭವಿಸುವುದಿಲ್ಲವೆಂದು ಹೇಳಿರುವುದಿಲ್ಲ. ಮತ್ತೇನೆಂದರೆ ಅಸತ್ತಿನಿಂದ ಸತ್ಪದಾರ್ಥಗಳು ಹುಟ್ಟಲಾರವು ಎಂದು ಹೇಳಿರುವುದು. ಶಶವಿಷಾಣವು, ಗಗನಾರವಿಂದವು, ಶುಕ್ತಿರಜತವು,ರಜ್ಜುಸರ್ಪವು ಇವುಗಳೆಲ್ಲವೂ ಮೂರು ಕಾಲದಲ್ಲಿಯೂ ಇಲ್ಲದ ಅಸತ್ ಎಂಬ ಹೆಸರುಳ್ಳ ಪದಾರ್ಥಗಳು. ಇವುಗಳಿಗೆ ಅರ್ಥಕ್ರಿಯಾಕಾರಿತ್ವವು ಇಲ್ಲ. ಎಂದರೆ ಇವುಗಳಿಂದ ಯಾವ ವಿಧವಾದ ಕಾರ್ಯೋತ್ಪತ್ತಿಯೂ ಕಂಡುಬಂದಿಲ್ಲ. ಆದರೆ ಕ್ಷಾಮಕಾಲದಲ್ಲಿ ಜಲಾಭಾವ, ರಾಜ್ಯದಲ್ಲಿ ರಾಜಾಭಾವ ಇತ್ಯಾದಿ ಅಭಾವಪದಾರ್ಥಗಳು ಅರ್ಥಕ್ರಿಯಾಕಾರಿಗಳು. ಇವುಗಳಿಂದ ಬಹು!ಕಾರ್ಯೋತ್ಪತ್ತಿಯು ಲೋಕದಲ್ಲಿ ಕಂಡುಬಂದಿರುವುದು.ಜಲಾಭಾವದಿಂದ ಅನೇಕರು ಮರಣವನ್ನು ಹೊಂದುವರು. ರಾಜಾಭಾವದಿಂದ ರಾಜ್ಯವು ಅನಾಯಕವಾಗಿ ಪ್ರಜೆಗಳು ಸಂಕಟಕ್ಕೆ

ವಶರಾಗುವರು. ಶ್ರುತಿಯಲ್ಲಿ ಶಶವಿಷಾಣಾದಿ ಅಸತ್ಪದಾರ್ಥಗಳಿಂದ ಯಾವ ಪದಾರ್ಥವೂ ಹುಟ್ಟಲಾರದೆಂದು ಹೇಳಿರುವುದು. ಇದು ಅಭಾವರೂಪವಾದ ಕರ್ಮಾಕರಣದಿಂದ ಪ್ರತ್ಯವಾಯವು ಸಂಭವಿಸುವುದಿಲ್ಲವೆಂದು ಹೇಳುವುದಕ್ಕೆ ಹೇಗೆತಾನೇ ಸಾಧಕವಾಗುವುದು? ಶಂಕರಾಚಾರ್ಯರಿಗೆ "ಅಭಾವ" ಮತ್ತು "ಅಸತ್" ಎಂಬ ಎರಡು ಪದಾರ್ಥಗಳಿಗೂ ಭೇದವು ತಿಳಿಯದೇ ಹೋದುದು ಈರೀತಿಯಾದ ದುಸ್ತತ್ವ ನಿರೂಪಣೆಗೆ ಕಾರಣವಾಯಿತು. ತತ್ತ್ವೋಪದೇಶ ಸಮಯದಲ್ಲಿ ಬುದ್ಧಿಮಾಂದ್ಯವು ಅಥವಾ ವಿಪರೀತಬುದ್ಧಿಯು ಎಷ್ಟು ಅನರ್ಥ ಗಳಿಗೆ ಕಾರಣವಾಗುವುದೆಂಬುದು ಈ ವಾಕ್ಯಾರ್ಥಪರ್ಯಾಲೋಚನೆಯಿಂದ ಸ್ಪಷ್ಟವಾಗುವುದು. 9. ಮತ್ತು ಅಭಾವರೂಪವಾದ ಪದಾರ್ಥವು ಎಲ್ಲರಿಗೂ ಅಭಾವರೂಪವೇ. ಶಶವಿಷಾಣದಂಥಾ ಪದಾರ್ಥವು ಎಲ್ಲರ ವಿಷಯದಲ್ಲೂ ಶಶವಿಷಾಣದಂಥಾ ಪದಾರ್ಥವೇ. 4 + 3 =7 ಎಂಬುದು ಎಲ್ಲರಿಗೂ ಏಳೇ. ಹೀಗೆಯೇ ಕರ್ಮಾಕರಣವು ಅಭಾವರೂಪವೋ ಅಥವಾ ಶಶವಿಷಾಣದಂತೆ ಅಸತ್ಪದಾರ್ಥವೋ ಆಗಿ ಪ್ರತ್ಯವಾಯವನ್ನು ಹುಟ್ಟಿಸಲಾರದೆಂದು ಒಪ್ಪುವುದಾದರೆ, ಅದು ಲೋಕದಲ್ಲಿ ಯಾರಿಗೂ ಯಾವ ಕರ್ಮಾಕರಣದಿಂದಲೂ ಪ್ರತ್ಯವಾಯವಿರುವುದಿಲ್ಲವೆಂದು ಸಿದ್ಧವಾಗುವುದು. ಎಂದರೆ ಮುಮುಕ್ಷುವೂ, ಅಮುಮುಕ್ಷುವೂ, ಸಂನ್ಯಾಸಿಯೂ, ಗೃಹಸ್ಥನೂ, ಬ್ರಹ್ಮಚಾರಿಯೂ ಇತ್ಯಾದಿ ಸರ್ವ ವರ್ಣಾಶ್ರಮೋಪೇತರಾದವರೂ ಪ್ರತ್ಯವಾಯವಿಲ್ಲದಿರುವುದರಿಂದ ಅವರವರ ನಿತ್ಯಕರ್ಮಗಳನ್ನು ಪರಿತ್ಯಾಗಮಾಡಬಹುದೆಂದು ಸಿದ್ಧವಾಗುವುದು. 10. ವೇದವು ಕರ್ಮಾಕರಣದಿಂದ ಪ್ರತ್ಯವಾಯವನ್ನು ಪ್ರತಿಪಾದನೆ ಮಾಡುವುದಾದರೆ ಅದಕ್ಕೆ ಪ್ರಾಮಾಣ್ಯವೇ ಸಂಭವಿಸುವುದಿಲ್ಲವೆಂಬ ಶಂಕರಾಚಾರ್ಯರ ನಿರೂಪಣೆಯು ಭ್ರಾಂತಿಮೂಲಕವೆಂದು ಉಪಪಾದಿಸಬೇಕಾದುದೇ ಇಲ್ಲ. 11. ಇದೂ ಅಲ್ಲದೆ ಅದ್ವೈತ ಭಾಷ್ಯಕಾರರ ಮಾತುಗಳೆಲ್ಲಾ ನಿತ್ಯಕರ್ಮ ಪರಿತ್ಯಾಗವು ಉಚಿತವು ಎಂಬ ವಿಷಯದಲ್ಲಿ ಪ್ರವೃತ್ತವಾದಹಾಗಾಯಿತೇ ಹೊರತು ನಿಷ್ಕಾಮಕರ್ಮವನ್ನು ಮಾಡಿದರೆ ಜ್ಞಾನಾದಿ ಪುರುಷಾರ್ಥ ಗಳು ಪರಂಪರಯಾ ಬರುವುವೆಂದು ಹೇಳುವ ದ್ವೈತಿಗಳ ವಾದಕ್ಕೆ ವಿರೋಧಿಯಾಗಲಾರವು. ಶ್ರೀಕೃಷ್ಣನು ಚತುರ್ಥಾಧ್ಯಾಯದಲ್ಲಿ ಧ್ಯಾನ, ಅಗ್ನಿಹೋತ್ರ

ಪ್ರಾಣಾಯಾಮಾದಿ ಅನೇಕ ಕರ್ಮಾನುಷ್ಠಾನಗಳನ್ನು ವಿವರಿಸಿ ಇವುಗಳನ್ನೆಲ್ಲಾ ನಿಷ್ಕಾಮವಾಗಿ ಆಚರಿಸಿದರೆ ಇಂದ್ರಿಯಜಯ, ಮನೋಜಯದ್ವಾರಾ **"ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ"** ಎಂದರೆ ಸಕಲ ಕರ್ಮಗಳೂ ಜ್ಞಾನಕ್ಕೆ ಕಾರಣವಾಗುತ್ತವೆ ಎಂದು ನಿರೂಪಿಸಿರುತ್ತಾನೆ. ಮೋಕ್ಷವು ಅಕಾರ್ಯವಾದುದರಿಂದ ವ್ಯರ್ಥವಾದ ಕರ್ಮವನ್ನು ಮಾಡಬಾರ ದೆಂದು ಶಂಕರಾಚಾರ್ಯರು ಹೇಳಿರುವರು. ಇದು ಸುಳ್ಳು. ಜಗದ್ಬಂಧವು ಸತ್ಯಭೂತವಾದುದು. ಬ್ರಹ್ಮನಿಂದ ಭಿನ್ನವಾದ ಜೀವನು ಅನಾದಿಯಾದ ಪ್ರಕೃತಿಯಿಂದ ಬದ್ಧನಾಗಿ ತನ್ನ ಸ್ವರೂಪಾನಂದವನ್ನು ಅನುಭವಿಸಲಾರದೇ ನಾನಾ ವಿಧವಾದ ಸಾಂಸಾರಿಕ ದುಃಖಗಳನ್ನು ಈಗ ಅನುಭವಿಸುತ್ತಿರುವನು. ನಿಷ್ಕಾಮ ಕರ್ಮಯೋಗದಿಂದ ಜ್ಞಾನವೂ, ಜ್ಞಾನದಿಂದ ಪರಮಾತ್ಮನ ಪ್ರಸಾ ದವೂ, ಅದರಿಂದ ಪ್ರಕೃತಿಬಂಧದ ನಾಶವೂ ಪ್ರಾಪ್ತವಾಗಿ ಮೋಕ್ಷವು ಪ್ರಾಪ್ತ ವಾಗುವುದು. ಆದುದರಿಂದ ಕರ್ಮವು ಅನರ್ಥಕರವೆಂಬ ವಾದವು ವೇದಾದಿ ಶಾಸ್ತ್ರವಿರುದ್ಧವಾದುದು. 12. ಕಿಂಚ ಕರ್ಮವು ಅನರ್ಥಕರವೆಂಬುದು ಲೋಕ ವಿರುದ್ಧವೂ ಆಗಿರುವುದು. ಭಕ್ತಿಪೂರ್ವಕವಾದ ರಾಜಸೇವೆಯೇ ವ್ಯರ್ಥವಾಗು ವುದಿಲ್ಲ. ಹೀಗಿರುವಲ್ಲಿ ಸರ್ವಸಾಕ್ಷಿಯಾದ ನಿಖಿಲಾಪೇಕ್ಷಿತದಾತನೆಂದು ಪ್ರಸಿದ್ಧನಾದ ಪರಬ್ರಹ್ಮನ ಸೇವಾರೂಪವಾದ ಕರ್ಮವು ಹೇಗೆತಾನೆ ವ್ಯರ್ಥ ವಾಗುವುದು? ಈ ಪ್ರಕಾರವಾಗಿ ಶಂಕರಾಚಾರ್ಯರ ಕರ್ಮಸಂನ್ಯಾಸವಾ ದವು ಮಹಾತಮಸ್ಕವಾದ ಪಾಪಮೂಲವಾದ ದುಷ್ಟವಾದವು. ಜಗನ್ನಾಶಕರ ವಾದ ಈ ಭಯಂಕರ ಪ್ರಕ್ರಿಯೆಯನ್ನು ಅನೇಕರು ಅಂಗೀಕರಿಸಿ ವರ್ಣಾಶ್ರಮ ಧರ್ಮಗಳನ್ನು ಹಾಳುಮಾಡುತ್ತಿರುವುದು ಅನ್ಯಾಯವಾದ ವ್ಯಾಪಾರವು. ಶ್ರೀಕೃಷ್ಣನ ಅಭಿಪ್ರಾಯವನ್ನು ನಾವು ಮೊದಲೇ ಹೇಳಿರುತ್ತೇವೆ:—

(1) **ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥**
—(16. 23.)

ಈ ಶ್ಲೋಕವು ಪೂರ್ವದಲ್ಲಿಯೇ ವ್ಯಾಖ್ಯಾತವಾಗಿರುವುದು.

(2) **ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ॥**
—(18. 45.)

ಆದುದರಿಂದ ನೀವುಗಳೆಲ್ಲರೂ ಪರಬ್ರಹ್ಮನ ಆಜ್ಞಾರೂಪವಾದ ವಿಧಿಗಳನ್ನು ಪರಿಪಾಲಿಸುತ್ತಾ ಆತನಿಂದ ನಿಷಿದ್ಧವಾದ ಕ್ರಿಯೆಗಳನ್ನು ಪರಿತ್ಯಜಿಸಿ, ಭಗವದಾರಾಧನರೂಪವಾದ ಸ್ವಸ್ವವರ್ಣಾಶ್ರಮೋಚಿತವಾದ ನಾನಾ ಪ್ರಕಾರವಾದ ಕರ್ಮಗಳನ್ನು ಭಕ್ತ್ಯಾದಿಗಳಿಂದ ಸಹಿತವಾಗಿ ಅನುಷ್ಠಾನಮಾಡಿ ಪರಮಾತ್ಮನಿಗೆ ಸಮರ್ಪಿಸಿ ಆತನ ಪ್ರಸಾದಕ್ಕೆ ಪಾತ್ರರಾಗಿ ಜ್ಞಾನಾದಿ ಪುರುಷಾರ್ಥಗಳನ್ನು ಹೊಂದಲು ಉತ್ಸಾಹಸಮೃದ್ಧಿಯಿಂದ ಪುನಃ ಪುನಃ ಯತ್ನಮಾಡುತ್ತಿರಬೇಕೆಂದು ನಿರೂಪಿಸಿರುತ್ತೇವೆ.

---

## 22. ಇಪ್ಪತ್ತೆರಡನೆಯ ಅಂಶವು.

### ಕರ್ಮಾನುಷ್ಠಾನವು (ಮುಂದುವರಿಸಿದ್ದು.)

### ವರ್ಣಾಶ್ರಮಾಚಾರ ವಿಭಾಗನಿರೂಪಣೆಯು.

1. **ಪ್ರಶ್ನೆ:—** ಸ್ವಾಮಿ! ವಿಧ್ಯುಕ್ತಧರ್ಮಗಳನ್ನು ಅನುಷ್ಠಾನಮಾಡಬೇಕಾಗುವುದು ಅವಶ್ಯಕವು. ಆದರೆ ಸ್ವಸ್ವವರ್ಣಾಶ್ರಮೋಚಿತವಾದ ಕರ್ಮಗಳನ್ನು ಆಚರಿಸಬೇಕೆಂದು ತಮ್ಮ ಮಾತಿಗೆ ಅರ್ಥವಾಗಲಿಲ್ಲ. ಶಾಸ್ತ್ರದಲ್ಲಿ ನಾರಣಪ್ಪನಿಗೆ ಒಂದು ಧರ್ಮವು, ರಾಮಣ್ಣನಿಗೆ ಒಂದು ಧರ್ಮವು, ದೇವದತ್ತನಿಗೆ ಒಂದು ಧರ್ಮವು ಹೀಗೆ ಒಬ್ಬೊಬ್ಬನಿಗೆ ಒಂದೊಂದು ಧರ್ಮವೆಂದು ವಿಧಿಸಲ್ಪಟ್ಟಿರುವುದೆಂದು ಹೇಳಿದರೆ ಈ ಕಾಲದಲ್ಲಿ ಹಾಸ್ಯಾಸ್ಪದವಾಗದೇ ಇರಲಾರದು.

**ಉತ್ತರ:—ಶ್ರೀಶ್ರೀಗಳವರು:—** ಯದ್ಯಪಿ ಶಾಸ್ತ್ರದಲ್ಲಿ ಒಬ್ಬೊಬ್ಬ ವ್ಯಕ್ತಿಯ ಹೆಸರನ್ನು ಹಿಡಿದು ಈ ನಾಮಧೇಯವುಳ್ಳವನು ಈ ಪ್ರಕಾರವಾಗಿ ಆಚರಿಸಬೇಕೆಂದು ವಿಧಿಯು ಇರುವುದಿಲ್ಲ. ಆದರೆ ನಾವು ಒಂದು ನಿರ್ಣಯವನ್ನು ತಿಳಿಸುವೆವು. ಶಾಸ್ತ್ರದಲ್ಲಿ ಅಂಥಾ ವಿಧಿಯು ಇದ್ದರೂ ಸಹ ನಾವು ಗೌರವಿಸಬೇಕೇ ಹೊರತು ಅಜ್ಞರು ಹಾಸ್ಯಮಾಡುವರೆಂದು ಅಂಜಿಕೊಂಡು

ಪುರುಷಾರ್ಥ ಸಾಧನವಾದ ಧರ್ಮಗಳನ್ನು ಪರಿತ್ಯಾಗಮಾಡಿ ನರಕಕ್ಕೆ ಬೀಳಲಾಗುವುದಿಲ್ಲ. ಶ್ರೀಕೃಷ್ಣನ ಮಾತುಗಳಲ್ಲಿ ವಿಶ್ವಾಸವನ್ನಿಟ್ಟು ಅವನ ಪಕ್ಷವನ್ನು ವಹಿಸಿ ಧರ್ಮಾನುಷ್ಠಾನತತ್ಪರರಾಗಿ ಶಾಸ್ತ್ರವಿಚಾರರಹಿತರಾದ ಪಶುಗಳಂಥಾ ಮೂಢರ ಹಾಸ್ಯಕ್ಕೆ ವಿಷಯವಾದರೆ ತಾನೇ ಏನು? ಅಜ್ಞಸಂಘದ ಪ್ರಶಂಸೆಗೆ ವಶರಾಗಿ ಜಾತಿಗೆಟ್ಟುಹೋದರೆ ನರಕವು ತಪ್ಪಲಾರದು. ಪುರಂದರ ನಾಮಕ ಇಂದ್ರನು ನೂರು ಅಶ್ವಮೇಧಗಳನ್ನು ಮಾಡಬೇಕೆಂದು ಶಾಸ್ತ್ರವಿಧಿಯು ಇರುವುದು. ಹಾಗೆಮಾಡಿದರೆ ಆತನಿಗೆ ಸ್ವಯೋಗ್ಯತಾನುಗುಣವಾದ ಇಂದ್ರಪದವಿಯು ದೊರಕುವುದು. ಹೀಗೆಯೇ ಶಾಸ್ತ್ರದಲ್ಲಿ ಅನೇಕ ಆಧಿಕಾರಿಕ ಚೇತನರ ಹೆಸರನ್ನು ಹಿಡಿದು ಶಾಸ್ತ್ರದಲ್ಲಿ ಸಾಧನೆಗಳು ಕೆಲವು ಸ್ಥಳಗಳಲ್ಲಿ ಉಪದಿಷ್ಟವಾಗಿರುವುವು. ಆದರೆ ವರ್ಣಾಶ್ರಮಧರ್ಮಗಳು ನಾಮಗ್ರಹಣಪೂರ್ವಕವಾಗಿ ಪ್ರತಿ ಪ್ರತಿ ಪುರುಷನಿಗೂ ಉಪದಿಷ್ಟವಾಗಿರುವುದಿಲ್ಲ. ಅವುಗಳು ಬ್ರಾಹ್ಮಣಾದಿ ಜಾತಿಗಳನ್ನು ನಿಮಿತ್ತಮಾಡಿಕೊಂಡು ಪ್ರವೃತ್ತವಾಗಿರುವುವು.

**2. ಪ್ರಶ್ನೆ:—** ಸ್ವಾಮಿ! ಶಾಸ್ತ್ರಕಾರರು ಇಂಥವರು ಬ್ರಾಹ್ಮಣರು, ಇಂಥವರು ಕ್ಷತ್ರಿಯರು, ಇಂಥವರು ವೈಶ್ಯರು, ಇಂಥವರು ಶೂದ್ರರು ಇತ್ಯಾದಿ ರೀತಿಯಾಗಿ ಪಟ್ಟಿಯನ್ನು ಬರೆದು ತಲೆಯಮೇಲೆ ಅಂಟಿಸಿರುತ್ತಾರೆಯೋ?

**ಶ್ರೀಶ್ರೀಗಳವರು:—**ಹಾಗಾದರೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂಬ ವಿವೇಕವು ಹೇಗೆ ಉಂಟಾಯಿತೆಂದು ತಿಳಿದಿರುತ್ತೀರಿ?

**ವಿದ್ಯಾರ್ಥಿಗಳು—**"by Division of Labour", ಎಂದರೆ ಕರ್ಮಭೇದದಿಂದ ವರ್ಣವಿಭಾಗಗಳು ಉಂಟಾಗಿರುವವೆಂದು ಆಂಗ್ಲೇಯರೂ, ನವೀನ ಹಿಂದೂ ವಿದ್ವಾಂಸರೂ ತೀರ್ಮಾನ ಮಾಡಿರುವರು.

**ಶ್ರೀಶ್ರೀಗಳವರು:—** ಅದು ಹೇಗೆ?

**ವಿದ್ಯಾರ್ಥಿಗಳು:—** ಸ್ವಾಮಿ! ಇದು ನಮ್ಮ ಅಭಿಪ್ರಾಯವು. ಅನಾದಿ ಕಾಲದಿಂದಲೂ ಸರ್ವ ಆರ್ಯರೂ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ವರ್ಣವಿಭಾಗರಹಿತರಾಗಿ ಸ್ತ್ರೀ ಪುರುಷರೆಂಬ ದೈವನಿರ್ಮಿತ ಭೇದಕಧರ್ಮ

ದಿಂದ ಮಾತ್ರ ಸಹಿತರಾಗಿ ಅನ್ಯೋನ್ಯವಾಗಿ ಭರತಖಂಡದಲ್ಲಿ ವಾಸಮಾಡು ತ್ತಿದ್ದರು. ಕಾಲಕರ್ಮವಶದಿಂದ ಕೆಲವರು ಧ್ಯಾನಪ್ರವಚನಾದಿರೂಪವಾದ ಉತ್ತಮ ಕರ್ಮಗಳಲ್ಲಿ ತತ್ಪರರಾದರು. ಕೆಲವರು ಪ್ರಜಾರಕ್ಷಣಕಾರ್ಯದಲ್ಲಿ ನಿಯುಕ್ತರಾಗಿ ಯುದ್ಧಾದಿ ಕರ್ಮಗಳಲ್ಲಿ ಉದ್ಯುಕ್ತರಾದರು. ಮತ್ತು ಕೆಲವರು ವ್ಯಾಪಾರ ವ್ಯವಸಾಯಗಳಿಂದ ಜೀವನವನ್ನು ಕಳೆಯುವುದಕ್ಕಾರಂಭಿಸಿದರು. ಇನ್ನೂ ದರಿದ್ರರು ಸೇವಾವೃತ್ತಿಯನ್ನು ಅವಲಂಬಿಸಿ ಶೂದ್ರರೆಂದೆನಿಸಿಕೊಂಡರು. ಹೀಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣಗಳೂ **ಮನುಷ್ಯ ನಿಂದ** ನಿರ್ಮಿತವಾದ ವ್ಯವಸ್ಥಾವಿಶೇಷವೇ ಹೊರತು ಅನಾದಿಸಿದ್ಧವಾದ ಜಾತಿ ಗಳಲ್ಲ. ಸ್ತ್ರೀಯರು ಸ್ತ್ರೀಯರೇ. ಪುರುಷರು ಪುರುಷರೇ. ಈ ವಿವೇಕವು ಭಗವಂತನಿಂದ ನಿರ್ಮಿತವಾದುದು. ಆದುದರಿಂದ ಸ್ತ್ರೀ ಧರ್ಮಗಳನ್ನೂ ಪುರುಷ ಧರ್ಮಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ನಿರೂಪಿಸಿರುವುದು ಯುಕ್ತವೇ. ಬ್ರಾಹ್ಮಣಾದಿ ಜಾತಿಗಳು ಸ್ವಯಂ ಮನುಷ್ಯಕಲ್ಪಿತವಾಗಿರುವುದರಿಂದ ಅವರು ಗಳನ್ನು ಉದ್ದೇಶಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ಧರ್ಮಗಳನ್ನು ಶಾಸ್ತ್ರಕಾರರು ಹೇಳಿರುವುದೂ ಇಲ್ಲ. ಕಥಂಚಿತ್ ಹೇಳಿದ್ದರೂ ಸಹ ಪೂರ್ವಕಾಲದ ಕಾಯಿದೆ ಗಳನ್ನು ಸರಕಾರದವರು ಬದಲಾಯಿಸಿ ಕಾಲಾನುಗುಣವಾಗಿ ಬೇರೆ ನಿಬಂಧನೆ ಗಳನ್ನು ನಿರ್ಮಿಸುವಂತೆ ಈಗ ನಾವೂ ಕೂಡ ಸ್ವಲ್ಪ ಧರ್ಮಪರಿವರ್ತನೆಯನ್ನೂ ಸಹ ಅವಶ್ಯವಾಗಿ ಮಾಡಬೇಕಾಗಿರುವುದು. ಆದುದರಿಂದ ಈ ವಿಷಯದಲ್ಲಿ ತಾವು ಕೇವಲ ಶ್ರೀಕೃಷ್ಣನ ವಾಕ್ಯಗಳ ಆಧಾರದಿಂದ ಚರ್ಚೆಯನ್ನು ನಡೆಸಿ ನಿರ್ಣಯವನ್ನು ಹೇಳಬೇಕೆಂದು ಪ್ರಾರ್ಥಿಸುತ್ತೇವೆ.

**ಶ್ರೀಶ್ರೀಗಳವರು:—** ಧರ್ಮರಕ್ಷಕನಾದ ಶ್ರೀಕೃಷ್ಣನ ಮಾತುಗಳನ್ನು ನೀವು ಒಪ್ಪಿದರೆ ಸಾಕು. ಈಗ ನೀವು ಉಪನ್ಯಾಸ ಮಾಡಿರುವ ವಿಷಯವು ಶಾಸ್ತ್ರಜ್ಞಾನಶೂನ್ಯರಾದ ಭ್ರಾಂತರಿಂದ ನಿರ್ಮಿತವಾದ ಕುಕಲ್ಪನೆಯು. ಏಕೆಂ ದರೆ ಲೋಕನಾಶಕವಾದ ಮತ್ತು ಅಜ್ಞಜನವ್ಯಾಮೋಹಕವಾದ ಈ ಪ್ರಕ್ರಿ ಯೆಯು ಪುಂಖಾನುಪುಂಖವಾಗಿ ಶ್ರೀಕೃಷ್ಣನ ವಾಗ್ಬಾಣಗಳಿಂದ ಖಂಡಿಸ ಲ್ಪಟ್ಟು ಶಾಸ್ತ್ರಸಾಮ್ರಾಜ್ಯದಿಂದ ದೂರಹಾಕಲ್ಪಟ್ಟಿರುವುದು. 1. ಚಾತುರ್ವ ರ್ಣ್ಯವನ್ನು ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಜಾತಿವಿಭಾಗ

ವನ್ನು ಸಾಕ್ಷಾತ್ಪರಬ್ರಹ್ಮನೇ ನಿರ್ಮಿಸಿರುತ್ತಾನೆ. ಸ್ತ್ರೀಪುರುಷ ಭೇದವನ್ನು ಪರಮಾತ್ಮನು ಹೇಗೆ ಮಾಡಿರುವನೋ, ದೇವ, ದಾನವ, ಗಂಧರ್ವ, ಮನುಷ್ಯ, ಪಶು, ಪಕ್ಷ್ಯಾದಿ ಯೋನಿಭೇದಗಳನ್ನು ಹೇಗೆ ಸ್ವಯಂ ಪರಮಾತ್ಮನೇ ಸೃಷ್ಟಿಕಾಲದಲ್ಲಿಯೇ ರಚಿಸಿರುವನೋ, ಹಾಗೆಯೇ ಮನುಷ್ಯರನ್ನು ಸೃಷ್ಟಿಸುವಾಗಲೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕುವರ್ಣ ವಿಭಾಗಗಳನ್ನು ಮಾಡಿ ತತ್ತದ್ವರ್ಣಾನುಸಾರಿಯಾಗಿ ಕರ್ಮವಿಧಾನವನ್ನೂ ಸಾಕ್ಷಾತ್ಪರಮಾತ್ಮನೇ ಮಾಡಿರುತ್ತಾನೆ. ಶ್ರೀಕೃಷ್ಣನು ಹೇಳುತ್ತಾನೆ:—

(3) **ಓಂತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಸ್ಮೃತಃ ।**
**ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ ॥**

—(17. 23.)

ಪರಬ್ರಹ್ಮನಿಗೆ ಓಂ, ತತ್, ಸತ್, ಎಂಬ ಮೂರು ಹೆಸರುಗಳುಂಟು. ಆತನಿಂದಲೇ **ಪುರಾ** ಎಂದರೆ ಪೂರ್ವದಲ್ಲಿ, ಸೃಷ್ಟಿಕಾಲದಲ್ಲಿಯೇ ಬ್ರಾಹ್ಮಣರು, ನಿರ್ಮಿಸಲ್ಪಟ್ಟರು ; ವೇದಗಳು ಅಭಿವ್ಯಕ್ತಿ ಮಾಡಲ್ಪಟ್ಟವು; ಯಜ್ಞಾದಿ ಕ್ರಿಯೆಗಳು ಪ್ರವರ್ತಿಸಲ್ಪಟ್ಟವು.

ಚತುರ್ಥಾಧ್ಯಾಯದಲ್ಲಿಯೂ ಸಹ ಸ್ಪಷ್ಟವಾಗಿ ಶ್ರೀಕೃಷ್ಣನು ಇದೇ ವಿಷಯವನ್ನು ಹೇಳಿರುತ್ತಾನೆ:—

**ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।**

—(4. 13.)

ಎಲೈ ಅರ್ಜುನನೇ ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚತುರ್ವರ್ಣ ಸಮೂಹವು ಸತ್ವರಜಸ್ತಮೋಗುಣಭೇದವನ್ನು ನಿಮಿತ್ತಮಾಡಿ ಮತ್ತು ತತ್ತದ್ವರ್ಣೋಚಿತವಾದ ಕರ್ಮವಿಧಾನಗಳನ್ನೂ ಮಾಡಿ ನನ್ನಿಂದ ಸೃಷ್ಟಿಸಲ್ಪಟ್ಟಿತು.

ಈ ವಾಕ್ಯದಲ್ಲಿ ಚಾತುರ್ವರ್ಣ್ಯವು ಪರಮಾತ್ಮನಾದ ಶ್ರೀಕೃಷ್ಣನಿಂದ ನಿರ್ಮಿತವಾದುದೆಂದು ಹೇಳಲ್ಪಟ್ಟಿರುವುದೇ ಹೊರತು ಇಷ್ಟಾನುಸಾರವಾದ ಉದ್ಯೋಗಭೇದದಿಂದ ಪ್ರಾಪ್ತವಾದ ಮನುಷ್ಯಕಲ್ಪಿತವಾದ ವ್ಯವಸ್ಥೆಯಲ್ಲವೆಂದು

ಸಿದ್ಧವಾಗುವುದು. ದ್ವಾಪರಯುಗದಲ್ಲಿ ಶ್ರೀಕೃಷ್ಣನು ಚಾತುರ್ವರ್ಣ್ಯವನ್ನು ರಚಿಸಿದನೆಂದು ಭ್ರಮಿಸಕೂಡದು. ಶ್ರೀಕೃಷ್ಣನು ಅನಾದಿನಿತ್ಯನಾದ ಪ್ರಣವ ಪ್ರತಿಪಾದ್ಯನಾದ ಜಗತ್ಸೃಷ್ಟಿಕರ್ತನಾದ ಪರಬ್ರಹ್ಮನು. ಆತನೇ ಪುರುಷಸೂಕ್ತ ಪ್ರತಿಪಾದ್ಯನಾದ ನಾರಾಯಣನು. ಸೃಷ್ಟಿಕಾಲದಲ್ಲಿ ನಾರಾಯಣರೂಪದಿಂದ ಬ್ರಾಹ್ಮಣಾದಿವರ್ಣವಿಭಾಗವನ್ನು ಮಾಡಿ ವರ್ಣಾನುಗುಣವಾಗಿ ಕರ್ಮ ವಿಭಾಗವನ್ನೂ ನಾನೇ ಮಾಡಿರುವೆನೆಂದು ಶ್ರೀಕೃಷ್ಣನ ಅಭಿಪ್ರಾಯವು *

ಸೃಷ್ಟಿಪ್ರಾರಂಭದಲ್ಲಿ ಚತುರ್ವರ್ಣಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಾರಾಯಣನು ಸೃಷ್ಟಿಮಾಡಿರುವನೆಂಬ ವೃತ್ತಾಂತವು ಪುರುಷಸೂಕ್ತದಲ್ಲಿ "**ಬ್ರಾಹ್ಮಣೋಽಸ್ಯ ಮುಖಮಾಸೀತ್**" ಇತ್ಯಾದಿ ವಾಕ್ಯಗಳಲ್ಲಿ ಸ್ಪಷ್ಟವಾಗಿ ರುವುದು; ಪರಂತು ಚತುರ್ವರ್ಣಗಳ ದೇಹಸೃಷ್ಟಿಯ ವಿಭಾಗದಲ್ಲಿ ನಿಮಿತ್ತ ವಾದ ಸತ್ವರಜಸ್ತಮೋಗುಣ ವಿಭಾಗವು ಸ್ಮೃತಿಗ್ರಂಥಗಳಲ್ಲಿ ವಿಶದವಾಗಿ ನಿರೂಪಿತವಾಗಿರುವುದು. ರಜೋಗುಣಕ್ಕಿಂತಲೂ ಅತ್ಯಂತ ಅಧಿಕವಾದ ಸತ್ವ ಗುಣೋಪೇತರು ಬ್ರಾಹ್ಮಣರು; ರಜೋಗುಣಕ್ಕಿಂತಲೂ ಸ್ವಲ್ಪ ಅಧಿಕವಾದ ಸತ್ವಗುಣೋಪೇತರು ಕ್ಷತ್ರಿಯರು; ತಮೋಗುಣಕ್ಕಿಂತ ಅಧಿಕವಾದ ರಜೋ ಗುಣವುಳ್ಳವರಾಗಿ ರಜೋಗುಣಕ್ಕೆ ಸಮಾನವಾದ ಸತ್ವಗುಣೋಪೇತರು ವೈಶ್ಯರು; ರಜೋಗುಣಕ್ಕಿಂತ ಅಧಿಕವಾದ ತಮೋಗುಣವುಳ್ಳವರಾಗಿ ಆ ತಮೋಗುಣಕ್ಕಿಂತ ಅಧಿಕವಾದ ಸತ್ವಗುಣವುಳ್ಳವರು ಶೂದ್ರರು ಎಂದು ಗುಣ

---

* ತನ್ನ ರೂಪಾಂತರಗಳಿಗೂ ತನಗೂ ಇರುವ ಅಭೇದವನ್ನು ತೋರಿಸುವುದಕ್ಕೂ, ತಾನೇ ನಿತ್ಯನಾದ ಪರಿಪೂರ್ಣನಾದ ಪರಮಾತ್ಮನೆಂದು ಪ್ರಕಟಮಾಡುವುದಕ್ಕೂ ಶ್ರೀಕೃಷ್ಣನು ಅಲ್ಲಿ ಅಲ್ಲಿ ಈರೀತಿಯಾದ ಪ್ರಯೋಗಗಳನ್ನು ಮಾಡುತ್ತಾನೆಂದು ತಿಳಿಯಬೇಕು. ಪಂಚದಶಾಧ್ಯಾಯದಲ್ಲಿ ಇದೇ ನ್ಯಾಯವನ್ನು ಅವಲಂಬಿಸಿ "**ವೇದಾಂತಕೃತ್**" ಎಂದರೆ ನಾನೇ ವೇದಾಂತಸೂತ್ರ ಗಳನ್ನು ರಚಿಸಿದವನೆಂದು ಹೇಳಿರುತ್ತಾನೆ. ವೇದವ್ಯಾಸರು ವೇದಾಂತಸೂತ್ರಗಳನ್ನು ರಚಿಸಿದವ ರೆಂದು ಸುಪ್ರಸಿದ್ಧವು. ಇದರಿಂದ ಶ್ರೀಕೃಷ್ಣವೇದವ್ಯಾಸರಿಗೆ ಐಕ್ಯವು ವಿದಿತವಾಗುವುದು. ಈ ನ್ಯಾಯವನ್ನು ಚೆನ್ನಾಗಿ ತಿಳಿಯದೆ ಅರ್ಜುನನು ಪ್ರಶ್ನೆಮಾಡಲು, ಶ್ರೀಕೃಷ್ಣನು ಚತುರ್ಥಾಧ್ಯಾಯದ ಆದಿಯಲ್ಲಿ ಉತ್ತರವನ್ನು ಕೊಟ್ಟಿರುತ್ತಾನೆಂದು ತಿಳಿಯಬೇಕು. (ಶ್ಲೋಕ 4. 1-10.)

ವಿಭಾಗದ ಸಂಕ್ಷೇಪವು. ಈ ಗುಣತಾರತಮ್ಯವನ್ನು ಅನುಸರಿಸಿ ಶ್ರೀಕೃಷ್ಣನು ಕರ್ಮವಿಧಾನವನ್ನು ಮಾಡಿರುವನು. ಅಷ್ಟೇ ಹೊರತು ಕಾಲ, ದೇಶ, ನಡೆ ನಳಿಕೆಗಳಿಗೆ ಅನುಗುಣವಾದ ಉದ್ಯೋಗಭೇದದಿಂದ ವರ್ಣಭೇದವು ಪ್ರಾಪ್ತ ವಾಗಿರುವುದಿಲ್ಲ.

**ಪ್ರಶ್ನೆ:**—ಸ್ವಾಮಿ! ನಾರಾಯಣನೇ ಚತುರ್ವರ್ಣಗಳಿಗೆ ಸೃಷ್ಟಿಕರ್ತ ನೆಂಬುದು ಶ್ರೀಕೃಷ್ಣನ ವಾಕ್ಯಗಳಿಂದ ಸಿದ್ಧವಾಗುವುದು. ಅಷ್ಟನ್ನು ನಾವು ಒಪ್ಪುವೆವು. ಆದರೆ ಕರ್ಮವಿಭಾಗವು ಬ್ರಾಹ್ಮಣಾದಿ ಜಾತಿಗಳ ಸತ್ವಾದಿ ಗುಣಗಳಿಗೆ ಅನುಗುಣವಾಗಿ ಉತ್ಪನ್ನವಾದುದೆಂಬಲ್ಲಿ ಪ್ರಮಾಣವೇನು?

**ಉತ್ತರ:—ಶ್ರೀಶ್ರೀಗಳವರು:**—ಶ್ರೀಕೃಷ್ಣನೇ ಹೇಳಿರುತ್ತಾನೆ:—

**ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।**
**ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥**

—(18. 41.)

ಎಲೈ ಶತ್ರುಸಂತಾಪಕನಾದ ಅರ್ಜುನನೇ! ಬ್ರಾಹ್ಮಣರಿಗೂ, ಕ್ಷತ್ರಿಯ ರಿಗೂ, ವೈಶ್ಯರಿಗೂ, ಶೂದ್ರರಿಗೂ ಸ್ವಭಾವ ಪ್ರಭವೈರ್ಗುಣೈಃ = ಎಂದರೆ ಬ್ರಾಹ್ಮಣ್ಯಾದಿ ಜನ್ಮಸ್ವಭಾವಾನುಸಾರಿಯಾಗಿ ಪ್ರಾಪ್ತವಾದ ಸತ್ವಾದಿಗುಣ, ಗಳಿಂದ ಕರ್ಮಗಳು ವಿಭಿನ್ನವಾಗಿರುತ್ತವೆ.

**ಪ್ರಶ್ನೆ:**—ಮಹಾಸ್ವಾಮಿ! ಇದರಿಂದ ಇಷ್ಟು ನಿಶ್ಚಿತವಾಯಿತು. ದೇಹ ನಿಷ್ಠವಾದ ಸತ್ವರಜಸ್ತಮೋಗುಣಗಳ ನ್ಯೂನಾಧಿಕ್ಯ ಭಾವದಿಂದ ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಭೇದಗಳು ಪರಮಾತ್ಮನಿಂದ ಉಂಟಾ ಗುವುವು. ಸತ್ವಾದಿ ಗುಣತಾರತಮ್ಯಾನುಗುಣವಾಗಿ ಅವರವರಿಗೆ ಕರ್ಮಗಳೂ ಪರಮಾತ್ಮನಿಂದ ವಿಧಿಸಲ್ಪಟ್ಟಿರುವುವು. ಹಾಗೆಯೇ ಆಗಲಿ. ಆದರೂ ಪ್ರಕೃತ ದಲ್ಲಿ ಯಾರಾದರೂ ಮಹಾಪುರುಷನು ಉತ್ಕೃಷ್ಟ ಕರ್ಮವನ್ನು ಆಚರಿಸಿ ಸತ್ವ ಪ್ರಚುರವಾದ ದೇಹವನ್ನು ಹೊಂದಿ ಯಾತಕ್ಕೆ ಬ್ರಾಹ್ಮಣನಾಗಬಾರದು?

**ಉತ್ತರ:—ಶ್ರೀಶ್ರೀಗಳವರು:**—ಲೋಕದಲ್ಲಿರುವವರೆಲ್ಲರೂ ಬ್ರಾಹ್ಮಣ ರಾದರೂ ನಮಗೆ ಸಂಕಟವಿಲ್ಲ. ಆದರೆ ಆಗಲು ಸಾಧ್ಯವಿಲ್ಲವೆಂದು ತೋರಿಸು ತ್ತೇವೆ. ಬ್ರಾಹ್ಮಣ, ಕ್ಷತಿಯ, ವೈಶ್ಯ, ಶೂದ್ರರೆಂಬ ವರ್ಣಪ್ರಭೇದವು ಅನಾದ್ಯ

ಸಂತಕಾಲದಲ್ಲಿಯೂ ಯೋಸಿಭೇದದಂತೆ ಭಿನ್ನವಾಗಿಯೇ ಇರತಕ್ಕ ಈಶ್ವರ ನಿರ್ಮಿತ ವಿಭಾಗವಾಗಿ ಇರುತ್ತದೆ. ಸ್ತ್ರೀಪುರುಷರು ಹೇಗೆ ಸ್ವಭಾವತಃ ವಿಭಕ್ತರೋ ಹಾಗೆಯೇ ಬ್ರಾಹ್ಮಣಾದಿ ವರ್ಣಗಳು ಪರಸ್ಪರೈಕ್ಯವನ್ನು ಹೊಂದ ಲಾರವು. ಸೂಕ್ಷ್ಮ ಸತ್ವಗುಣದಿಂದ ದೇವತೆಗಳ ಶರೀರವು ನಿರ್ಮಿಸಲ್ಪಟ್ಟಿರು ವುದು. ಎಷ್ಟು ಕರ್ಮಮಾಡಿದರೂ ಯಾವ ಆಹಾರವನ್ನು ತಿಂದರೂ ಅಂಥಾ ದೇಹವು ಮನುಷ್ಯನಿಗೆ ಬರಲಾರದು. ವಿಧ್ಯುಕ್ತವಾಗಿ ಸಕಾಲದಲ್ಲಿ ವಿವಾ ಹಿತಳಾದ ಬ್ರಾಹ್ಮಣ ಸ್ತ್ರೀಯಲ್ಲಿ ಷೋಡಶ ಸಂಸ್ಕಾರಗಳಿಂದ ಪವಿತ್ರವಾದ ದೇಹವುಳ್ಳ ಬ್ರಾಹ್ಮಣನ ವೀರ್ಯದಿಂದ ಉತ್ಪನ್ನನಾದ ಪುತ್ರನೇ ಬ್ರಾಹ್ಮಣ ನೆನ್ನಿಸುವನು. ಈ ಪ್ರಕಾರವಾಗಿ ಹುಟ್ಟಿದವರು ಬ್ರಾಹ್ಮಣ ಜಾತಿಗೆ ಸೇರಿದ ವರು. ಇದೇ ರೀತಿಯಲ್ಲಿ ವಿಧ್ಯುಕ್ತರೀತಿಯಲ್ಲಿ ವಿವಾಹಿತಳಾದ ಕ್ಷತ್ರಿಯ ಸ್ತ್ರೀ ಯಲ್ಲಿ ಕ್ಷತ್ರಿಯ ಪುರುಷನಿಂದ ಜನಿಸಿದ ಔರಸ ಪುತ್ರನು ಕ್ಷತ್ರಿಯನೆನ್ನಿಸು ವನು. ವಿಧ್ಯುಕ್ತ ರೀತಿಯಲ್ಲಿ ವಿವಾಹಿತಳಾದ ವೈಶ್ಯನಾರಿಯಲ್ಲಿ ವೈಶ್ಯಪತಿ ಯಿಂದ ಜನಿಸಿದವನು ವೈಶ್ಯನು. ಶೂದ್ರಸ್ತ್ರೀಯಲ್ಲಿ ಶೂದ್ರಪತಿಯಿಂದ ಹುಟ್ಟಿದವನು ಶೂದ್ರನು. ಹೀಗೆ ನಾಲ್ಕುಜಾತಿಗಳೂ ಸೃಷ್ಟಿಕಾಲದಿಂದಲೂ ಪರಂಪರೆಯಾಗಿ ನಡೆದುಕೊಂಡು ಬಂದಿರುವುವು. ಉಕ್ತಮಾರ್ಗವನ್ನು ಪರಿತ್ಯಜಿಸಿ ಬ್ರಾಹ್ಮಣಸ್ತ್ರೀಯರಲ್ಲಿ ಕ್ಷತ್ರಿಯಾದಿಗಳಿಂದ ಪುತ್ರರು ಉತ್ಪನ್ನ ರಾದರೆ ಅವರು ಕ್ಷೇತ್ರಗತ ಸತ್ವಗುಣವನ್ನು ಹೊಂದಿ ಬ್ರಾಹ್ಮಣರೆಂದೆನಿಸುವರು ಎಂದು ಭ್ರಮಿಸಬಾರದು. ವೇದನಿಷಿದ್ಧರೀತಿಯಲ್ಲಿ ಉತ್ಪನ್ನನಾದ ಆ ಪುತ್ರನು ತಮೋಗುಣಮಯನಾದ ದೇಹವುಳ್ಳವನಾಗಿ ಚಂಡಾಲಜಾತಿಯವನಾಗು ವನು. ಆತನು ಅತ್ಯಂತ ಅಪವಿತ್ರನು. ಯದ್ಯಪಿ ಈ ರೀತಿಯಾಗಿ ಹುಟ್ಟಿದ ಪುತ್ರರು ವಿಪರೀತ ಬುದ್ಧಿಶಾಲಿಗಳಾಗಿ ಪ್ರಗಲ್ಭರಾಗಿರುವರು. ಆದರೆ ತಮೋ ಗುಣ ಪ್ರಾಚುರ್ಯದಿಂದ ಪ್ರಾಪ್ತವಾದ ಈ ತಾಮಸ ಬುದ್ಧಿಯು ಇಂದ್ರಜಿತ್ತು ಮುಂತಾದ ರಾಕ್ಷಸರ ತಾಮಸ ಬುದ್ಧಿಯಂತೆ ಲೋಕಕ್ಷಯಕ್ಕೂ, ಆತ್ಮ ನಾಶಕ್ಕೂ, ಪಿತೃವರ್ಗದ ಅಧಃಪಾತಕ್ಕೂ ಕಾರಣವಾಗುವುದು. ಬ್ರಾಹ್ಮಣಾದಿ ವರ್ಣಗಳು ಪರಸ್ಪರ ಸಂಗಮಾದಿಗಳನ್ನು ಹೊಂದಿದರೆ ವರ್ಣನಾಶವೇ ಪ್ರಾಪ್ತವಾ ಗುವುದೇ ಹೊರತು ಅಧಮರು ಉತ್ತಮವರ್ಣಸಾಮ್ಯವನ್ನು ಹೊಂದಲಾರರು.

3. ವರ್ಣಸಾಂಕರ್ಯವು ಸರ್ವಪ್ರಕಾರದಿಂದಲೂ ಲೋಕ ನಾಶಕರವೆಂದು ಶ್ರೀಕೃಷ್ಣನು ನಿಂದಿಸಿರುತ್ತಾನೆ. ಮತ್ತು ಬ್ರಾಹ್ಮಣಾದಿ ವರ್ಣಗಳು ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಪರಮಾತ್ಮನಿಂದ ನಿರ್ಮಿತವಾಗಿರುವುವೆಂಬ ತತ್ವವು ಗೀತೆಯಲ್ಲಿ ಮಾಡಲ್ಪಟ್ಟಿರುವ ವರ್ಣಸಾಂಕರ್ಯವು ಪ್ರಾಪ್ತವಾಗುವಪ್ರಕಾರ ವರ್ಣನೆಯಿಂದಲೇ ವಿಶದವಾಗುವುದು. ಸ್ತ್ರೀಯರು ವ್ಯಭಿಚಾರದಲ್ಲಿ ಪ್ರವೃತ್ತರಾದರೇನೇ ವರ್ಣಸಾಂಕರ್ಯವು ಬರುವುದೆಂದು ಅರ್ಜುನನು ಹೇಳುತ್ತಾನೆ :—

(1) **ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।**
**ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ ॥**
**ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।**
**ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥**
**ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।**
**ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥***

—(1. 40-42.)

**ಅರ್ಥ**:–ಹೇ ಕೃಷ್ಣ! ಯೋಧಪುರುಷರುಗಳ ಮರಣದಿಂದ ಕುಲಕ್ಷಯವು ಉಂಟಾಗಿ (ಮನೆಯಲ್ಲಿ ಸಾಂಪ್ರದಾಯಿಕ ಧರ್ಮಜ್ಞರು ಇಲ್ಲದೇ ಹೋಗುವುದರಿಂದ) ಕ್ಷತ್ರಿಯಾದಿ ಕುಲಧರ್ಮಗಳು ನಷ್ಟವಾಗುತ್ತವೆ. ಕುಲಕ್ರಮಾಗತವಾದ ಧರ್ಮವು ನಷ್ಟವಾದರೆ ಅಧರ್ಮವು ಸಕಲ ಕುಲವನ್ನೂ ಆಕ್ರಮಿಸಿಬಿಡುತ್ತದೆ. ಇಂಥಾ ಅಧರ್ಮ ವ್ಯಾಪ್ತಿಯಿಂದ ಸಾಧ್ವಿಗಳಾಗಿದ್ದ ಕುಲಸ್ತ್ರೀಯರು ದುಷ್ಟರಾಗುತ್ತಾರೆ (ಎಂದರೆ ವ್ಯಭಿಚಾರದಿಂದ ದೂಷಿತರಾಗುತ್ತಾರೆ.) ಎಲೈ ವೃಷ್ಣಿ

* ಇದು ಅರ್ಜುನನ ಮಾತಾದುದರಿಂದ ಪೂರ್ವಪಕ್ಷಮಾತ್ರದ ನಿಶ್ಚಯವೆಂದು ತಿಳಿಯಕೂಡದು. ಈ ಯೋಧವೀರರು ಸತ್ತರೆ ಲೋಕದಲ್ಲಿ ಧರ್ಮೋಪದೇಶಕರು ಇಲ್ಲದೆಹೋಗಿ ಸ್ತ್ರೀಯರು ಕೆಟ್ಟು ವರ್ಣಸಾಂಕರ್ಯವು ಬರುವುದೆಂದು ಅರ್ಜುನನ ವಾದವು. ಇವರೇ ಭೂಭಾರರೂಪರಾದ ದೈತ್ಯರಾದುದರಿಂದ ಇವರಿಂದಲೇ ಧರ್ಮವು ಕೆಟ್ಟು ವರ್ಣಸಾಂಕರ್ಯವು ಪ್ರಾಪ್ತವಾಗುವುದರಿಂದ ಇವರನ್ನು ಅವಶ್ಯವಾಗಿ ಸಂಹರಿಸಬೇಕೆಂದು ಶ್ರೀಕೃಷ್ಣನ ಭಾವವು. **"ಸಂಕರಸ್ಯ ಚ ಕರ್ತಾ ಸ್ಯಾಂ"** ಇತ್ಯಾದಿ ತೃತೀಯಾಧ್ಯಾಯದ ವಚನಗಳಿಂದ ಶ್ರೀಕೃಷ್ಣನೂ ಧರ್ಮನಾಶದಿಂದ ಹೀಗೆಯೇ ವರ್ಣಸಾಂಕರ್ಯವು ಬರುವುದೆಂದು ತಿಳಿದಿದ್ದನೆಂದು ನಿಶ್ಚಿತವಾಗುವುದು.

ಕುಲೋತ್ಪನ್ನನಾದ ಶ್ರೀಕೃಷ್ಣನೇ! ಸ್ತ್ರೀಯರು ದುಷ್ಟರಾದರೆ (ಅನ್ಯವರ್ಣಸ್ಥರ ವೀರ್ಯದಿಂದ ಮಕ್ಕಳು ಉತ್ಪನ್ನರಾಗಿ) ವರ್ಣಸಾಂಕರ್ಯವು ಉತ್ಪನ್ನವಾಗುವುದು. (ಪಾತಿವ್ರತ್ಯರಹಿತಳಾದ ದುಷ್ಟಸ್ತ್ರೀಯಲ್ಲಿ ಉತ್ಪನ್ನನಾದ) ಸಂಕರಪುತ್ರನು ಕುಲನಾಶಕರನ್ನೂ, ಮತ್ತು ತಾನು ಹುಟ್ಟಿದ ಕುಲವನ್ನೂ ನರಕದಲ್ಲಿ ಕೆಡ ವುತ್ತಾನೆ.

ಈ ರೀತಿಯಾಗಿ ಶ್ರೀಕೃಷ್ಣನು ಬ್ರಾಹ್ಮಣದೇಹವು ಕ್ಷತ್ರಿಯಾದಿಗಳಿಗೂ, ಕ್ಷತ್ರಿಯಾದಿಗಳ ಅಧಿಕಾರಸಹಿತವಾದ ದೇಹವು ಇತರರಿಗೂ ಸರ್ವಥಾ ದೊರ ಕಲಾರದೆಂದು ಸ್ಪಷ್ಟವಾಗಿ ಸಯುಕ್ತಿಕವಾಗಿ ನಿರೂಪಿಸಿರುತ್ತಾನೆ. ಬ್ರಾಹ್ಮಣ ಕ್ಷತ್ರಿಯಾದಿ ಭಿನ್ನಭಿನ್ನ ವರ್ಣಸ್ಥರಾದ ಸ್ತ್ರೀಪುರುಷರಿಗೆ ಪರಸ್ಪರ ಸಂಗವು ಪ್ರಾಪ್ತವಾದರೆ ಸಂಕರ ಪುತ್ರರು ಹುಟ್ಟುವರು. ಅವರು ಚತುರ್ವರ್ಣದ ದೆಸೆಯಿಂದ ಹೊರಗಿನವರೆನ್ನಿಸುವರು.

4. ವರ್ಣಸಾಂಕರ್ಯದ ಅನರ್ಥವನ್ನು ತಪ್ಪಿಸುವುದು ಅತ್ಯವಶ್ಯಕವೆಂದೇ ನಾನೂ ಸಹ ಲೋಕಸಂಗ್ರಹಾರ್ಥವಾಗಿ ಸ್ವಕರ್ಮದಲ್ಲಿ ಆಸಕ್ತನಾಗಿರುವೆ ನೆಂದು ಶ್ರೀಕೃಷ್ಣನು ತೃತೀಯಾಧ್ಯಾಯದಲ್ಲಿಯೂ ಸಹ ನಿರೂಪಿಸಿರುತ್ತಾನೆ:—

(1) **ಯದಿ ಹ್ಯಹಂ ನ ಪ್ರವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।**
**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ॥**
**ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಂ ।**
**ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ॥**
—(3. 23-24.)

ಎಲೈ ಅರ್ಜುನನೇ! ಸ್ವಭಾವತಃ ಸರ್ವದಾ ಆಲಸ್ಯರಹಿತನಾದ ನಾನೂ ಯಾವಾಗಲಾದರೂ ಕರ್ಮವನ್ನು ಆಚರಿಸದಿದ್ದರೆ ಸಕಲ ಮನುಷ್ಯರೂ ನನ್ನ ಮಾರ್ಗವನ್ನೇ ಅನುಸರಿಸಿ ಬಿಡುತ್ತಾರೆ. (ಎಂದರೆ ಎಲ್ಲರೂ ವಿಹಿತ ಕರ್ಮವನ್ನು ಪರಿತ್ಯಾಗ ಮಾಡಿ ಧರ್ಮಭ್ರಷ್ಟರಾಗಿ ಕರ್ಮಚಂಡಾಲರಾಗುವರು. ಅವರು ಅಧರ್ಮಿಷ್ಟರಾದರೆ ಕುಲಧರ್ಮವು ಕೆಟ್ಟುಹೋಗಿ ಕ್ರಮೇಣ ಸ್ತ್ರೀಯರು ದೂಷಿತರಾಗುವರು. ನಂತರ ವರ್ಣಸಾಂಕರ್ಯವು ಪ್ರಾಪ್ತವಾಗುವುದೆಂದು ಭಾವವು.) ಹೀಗೆ ನಾನು ಸ್ವವರ್ಣಾಶ್ರಮೋಚಿತ ಕರ್ಮವನ್ನು ಅನುಷ್ಠಾನ

ಮಾಡದಿದ್ದರೆ ಈ ಸರ್ವ ಪ್ರಜೆಗಳೂ ನಾಶವನ್ನು ಹೊಂದಿಬಿಡುವರು; ನಾನೇ ವರ್ಣಸಾಂಕರ್ಯವನ್ನು ಮಾಡಿದಂತಾಗುವುದು ಮತ್ತು ಸರ್ವರನ್ನೂ ಕೊಂದಂತಾಗುವುದು. (ವರ್ಣಸಾಂಕರ್ಯದಿಂದ ಸರ್ವರೂ ಭ್ರಷ್ಟರಾಗಿ ನರಕಕ್ಕೆ ಬೀಳುವರೆಂದು ಭಾವವು.)

5. ಪರಂತು ಅಸುರಜನರು ಲೋಕದಲ್ಲಿ ಹೆಚ್ಚಿ ಸ್ವವರ್ಣಾಶ್ರಮ ಧರ್ಮಗಳನ್ನು ಉಲ್ಲಂಘಿಸಿ ಲೋಕನಾಶವನ್ನು ಮಾಡುತ್ತಿದ್ದುದರಿಂದಷ್ಟೇ ಭೂದೇವಿಯು ಅಂಥಾ ಪಾಪಿಗಳನ್ನು ಹೊರಲಾರದೇ ಬ್ರಹ್ಮದೇವರಿಗೆ ವಿಜ್ಞಾಪಿಸಿಕೊಂಡಳು; ಮತ್ತು ಚತುರ್ಮುಖಾದಿ ದೇವತೆಗಳಿಂದ ಪ್ರಾರ್ಥಿತನಾದ ಶ್ರೀಕೃಷ್ಣನು ತನ್ನ ಆಜ್ಞಾರೂಪವಾದ ವೇದಮರ್ಯಾದೆಯನ್ನು ಮೀರಿ ನಡೆಯುವ ಅಂಥಾ ಪಾಪಿಗಳನ್ನು ನಿಗ್ರಹಮಾಡಿ ವರ್ಣಾಶ್ರಮ ಧರ್ಮವನ್ನು ಪುನಃ ಸಂಸ್ಥಾಪಿಸುವ ಉದ್ದೇಶದಿಂದಷ್ಟೇ ಭೂಲೋಕದಲ್ಲಿ ಅವತರಿಸಿದ್ದುದು! ಶ್ರೀಕೃಷ್ಣನು ಹೇಳುತ್ತಾನೆ:—

(1) **ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

—(4. 7-8.)

**ಅರ್ಥ:**—ಎಲೈ ಅರ್ಜುನನೇ! ಯಾವ ಯಾವ ಕಾಲದಲ್ಲಿ ವರ್ಣಾಶ್ರಮ ಧರ್ಮಕ್ಕೆ ಹಾನಿಯೂ, ಅಧರ್ಮಕ್ಕೆ ವೃದ್ಧಿಯೂ ಬರುತ್ತದೆಯೋ ಆಗ ನಾನು ಅವತರಿಸುತ್ತೇನೆ. ಭಕ್ತರಾದ ಸಜ್ಜನರನ್ನು ರಕ್ಷಿಸುವುದಕ್ಕಾಗಿಯೂ, ದುರ್ಜನರನ್ನು ವಿನಾಶಹೊಂದಿಸುವುದಕ್ಕಾಗಿಯೂ ಮತ್ತು ವರ್ಣಾಶ್ರಮಧರ್ಮಸಂಸ್ಥಾಪನೆಗಾಗಿಯೂ ನಾನು ಆಯಾಯ ಕಾಲದಲ್ಲಿ ಅವತರಿಸುತ್ತೇನೆ.

ಈ ಪ್ರಕಾರವಾದ ಶ್ರೀಕೃಷ್ಣನ ವಾಕ್ಯಗಳಿಂದ ಸೂಚಿತವಾದ ಯುಕ್ತಿಪರಾಮರ್ಶವನ್ನು ಮಾಡಿದರೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳು ಭಿನ್ನವಾಗಿ ಅನಾದಿಕಾಲದಿಂದಲೂ ಇರುವುವು; ಇವುಗಳು ಜನರುಗಳ ಕರ್ಮವೈಚಿತ್ರ್ಯದಿಂದ ಪ್ರಾಪ್ತವಾದ ಆಗಂತುಕ ಧರ್ಮಗಳಲ್ಲ; ಮತ್ತೇ

ನೆಂದರೆ ಕ್ಲ್ಪಪ್ತವಾದ ಯೋನಿಗಳಲ್ಲಿ ಜನ್ಮದಿಂದಲೇ ಪ್ರಾಪ್ತವಾಗತಕ್ಕ ಜಾತಿಗಳೆಂದು ಸಿದ್ಧವಾಗುವುದು.

**6.** ಪರಂತು ಉತ್ಕೃಷ್ಟಕರ್ಮದಿಂದ ಶೂದ್ರಾದಿಗಳು ಬ್ರಾಹ್ಮಣ್ಯವನ್ನು ಹೊಂದಬಹುದೆಂಬ ಅಭಿಪ್ರಾಯವೂ ಅಯುಕ್ತವೇ ಆಗಿರುವುದು. ಹೇಗೆಂದರೆ ಭಗವಂತನು ನಾಲ್ಕು ಜಾತಿಗಳನ್ನು ನಿರ್ಮಾಣಮಾಡಿ ಮೊದಲೇ ಕರ್ಮವಿಭಾಗವನ್ನು ಮಾಡಿರುವನು. ಇದರಿಂದ ಪರಮಾತ್ಮನು ಯಾವ ಜಾತಿಯನ್ನು ಉದ್ದೇಶಮಾಡಿ ಯಾವ ಕರ್ಮವನ್ನು ವಿಧಿಸಿರುವನೋ ಆ ಜಾತಿಸ್ಥಪುರುಷನಿಗೆ ಆ ಕರ್ಮವು ಉತ್ಕೃಷ್ಟವು. ತದ್ಭಿನ್ನವಾದುವುಗಳು ದುಷ್ಕರ್ಮವೆನ್ನಿಸುವುವು. ಹೀಗಿರುವುದರಿಂದ ಶೂದ್ರನು ಸಂಧ್ಯಾವಂದನೆ, ಗಾಯತ್ರೀಜಪ, ಅಗ್ನಿಹೋತ್ರಾದಿಗಳನ್ನು ಮಾಡಿದರೆ ಅವುಗಳು ದುಷ್ಕರ್ಮವೆನ್ನಿಸುವುವು. ಬ್ರಾಹ್ಮಣನು ಅದೇ ಕರ್ಮವನ್ನು ಮಾಡಿದರೆ ಉತ್ಕೃಷ್ಟಕರ್ಮವೆನ್ನಿಸುವುದು. ಹೀಗೆ ಆಯಾಯ ಜಾತಿಯವರಿಗೆ ತಮತಮಗೆ ವಿಹಿತವಾದ ಕರ್ಮಗಳೇ ಉತ್ಕೃಷ್ಟ ಕರ್ಮಗಳಾಗಿರುವುದರಿಂದ ಉತ್ಕೃಷ್ಟ ಕರ್ಮಾಚರಣೆಯಿಂದ ಜಾತಿ ವಿವೇಕವು ಪ್ರತಿಷ್ಠಿತವಾಗಿ ನಿಂತು ಸರ್ವರೂ ಸುಖಿಗಳಾಗುವರೇ ಹೊರತು ಶೂದ್ರನು ಬ್ರಾಹ್ಮಣನಾಗಲಾರನು. ಬ್ರಾಹ್ಮಣನು ಶೂದ್ರನಾಗಲಾರನು. ಸ್ವವರ್ಣಾಶ್ರಮೋಚಿತಕರ್ಮವೇ ಉತ್ಕೃಷ್ಟಕರ್ಮವು ಎಂಬ ಅಭಿಪ್ರಾಯವು ಶ್ರೀಕೃಷ್ಣನ ವಾಕ್ಯಗಳಿಂದ ಸ್ಪಷ್ಟವಾಗಿ ತಿಳಿದುಬರುವುದು :—

(1) **ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।**
**ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತಚ್ಛೃಣು ॥***
—(18. 45.)

(2) **ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥**
**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।**
**ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥**
**ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।**
**ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥**
—(18. 46-48.)

---

* ಈ ಶ್ಲೋಕವು ಪುಟ (339ರಲ್ಲಿ) ವ್ಯಾಖ್ಯಾತವಾಗಿರುವುದು.

ಅರ್ಥ:- ಸರ್ವವ್ಯಾಪ್ತನಾದ ಭಗವಂತನನ್ನು **ಸ್ವಕರ್ಮ**ದಿಂದ ಚೆನ್ನಾಗಿ (ಭಕ್ತಿಸಹಿತನಾಗಿ) ಪೂಜಿಸಿ ಮನುಷ್ಯನು ಮೋಕ್ಷಾದಿ ಸಿದ್ಧಿಯನ್ನು ಹೊಂದುತ್ತಾನೆ. (ಸ್ವಧರ್ಮನಿರತತ್ವವು ಅತ್ಯಂತಾವಶ್ಯಕವೆಂಬುದನ್ನು ಅನ್ವಯವ್ಯತಿರೇಕಗಳಿಂದ* ಶ್ರೀಕೃಷ್ಣನು ಉಪಪಾದಿಸುತ್ತಾನೆ:-) ಅಂಗವಿಹೀನವಾದ ಸ್ವಧರ್ಮಾಚರಣೆಯು ಸಾಂಗವಾಗಿ ಉತ್ತಮರೀತಿಯಿಂದ ಆಚರಿಸಲ್ಪಟ್ಟ ಪರಧರ್ಮಕ್ಕಿಂತ ಶ್ರೇಷ್ಠವು.† ಸ್ವವರ್ಣಾಶ್ರಮಸ್ವಭಾವಾನುಗುಣವಾದ ವಿಹಿತಕರ್ಮವನ್ನು ಮಾಡುವವನು ಪಾಪವನ್ನು ಹೊಂದುವುದಿಲ್ಲ. (ಆದುದರಿಂದ ಅಂಗವೈಕಲ್ಯಶಂಕೆಯಿಂದ ಸ್ವಧರ್ಮವನ್ನು ಪರಿತ್ಯಾಗಮಾಡಬಾರದೆಂದು ಭಾವವು.) ಎಲೈ ಕೌಂತೇಯನೇ! ಯಾವ ಕಾರಣದಿಂದ ಸಕಲ ಧರ್ಮಾನುಷ್ಠಾನಗಳೂ ಹೊಗೆಯಿಂದ ಅಗ್ನಿಯು ಆವರಿಸಲ್ಪಟ್ಟಿರುವಂತೆ ಅಂಗವೈಕಲ್ಯಾದಿ ದೋಷಗಳಿಂದ ಆವೃತವಾಗಿರುವುವೋ, ಆ ಕಾರಣದಿಂದ ಸ್ವಲ್ಪ ಅಂಗವ್ಯತ್ಯಾಸಾದಿರೂಪದೋಷದಿಂದ ಸಹಿತವಾದರೂ ಸ್ವವರ್ಣಾಶ್ರಮವಿಹಿತಕರ್ಮವನ್ನು ಬಿಡಕೂಡದು.

---

* ಸ್ವಧರ್ಮಾಚರಣೆಯಿಂದ ಪುರುಷಾರ್ಥಪ್ರಾಪ್ತಿಯ ಸ್ವಧರ್ಮಾಚರಣೆಯಿಲ್ಲದಿದ್ದರೆ ಪುರುಷಾರ್ಥಪ್ರಾಪ್ತಿರಾಹಿತ್ಯವು ಮತ್ತು ಪಾಪರೂಪವಾದ ಅನರ್ಥಪ್ರಾಪ್ತಿಯು; ಹೀಗೆ ಅನ್ವಯವ್ಯತಿರೇಕಗಳನ್ನು ತಿಳಿಯಬೇಕು.

† ಸಾಂಗವಾಗಿ ಆಚರಿಸಲ್ಪಟ್ಟ ಪರಧರ್ಮಕ್ಕಿಂತ ಅಂಗವಿಕಲವಾದ ಸ್ವಧರ್ಮವು ಶ್ರೇಷ್ಠವು ಎಂಬ ವಾಕ್ಯಾರ್ಥದಿಂದ ಸಾಂಗವಾದ ಪರಧರ್ಮಾಚರಣೆಯು ಸ್ವಲ್ಪ ಶುಭಕರವು, ಅಂಗವಿಕಲವಾದರೂ ಸ್ವಧರ್ಮಾಚರಣೆಯು ಹೆಚ್ಚು ಶುಭಕರವು ಎಂಬ ಭ್ರಮವು ಹುಟ್ಟುವುದು. ಇದು ದುರರ್ಥವು. ಪುರುಷನು ಸಾಂಗವಾದ ಪರಧರ್ಮಾಚರಣೆಯನ್ನು ಬಲ್ಲವನಾಗಿದ್ದರೂ ಅದನ್ನು ಪರಿತ್ಯಾಗ ಮಾಡಿ ಅಂಗವಿಕಲವಾದರೂ ಸ್ವಧರ್ಮವನ್ನೇ ಆಚರಿಸಬೇಕು ಎಂದು ಶ್ರೀಕೃಷ್ಣನ ಅಭಿಪ್ರಾಯವು. ಸಾಂಗವಾಗಿ ಆಚರಿಸಲ್ಪಟ್ಟರೂ ಪರಧರ್ಮಾನುಷ್ಠಾನವು ಪಾಪಕರವೇ. ಈ ವಿಷಯವು ಸ್ವಧರ್ಮವನ್ನು ಅಚರಿಸುವವನು ಪಾಪವನ್ನು ಹೊಂದುವುದಿಲ್ಲ ಎಂಬ ಅರ್ಥವುಳ್ಳ "ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ" ಎಂಬ ಶ್ಲೋಕಭಾಗದಿಂದ ಸೂಚಿತವಾಗುವುದು. "ಯಃ ಶಾಸ್ತ್ರವಿಧಿಮುತ್ಸೃಜ್ಯ" ಇತ್ಯಾದಿ ಶ್ಲೋಕಗಳಿಂದ ಸ್ಪಷ್ಟವಾಗುವುದು. "ಪರಧರ್ಮೋ ಭಯಾವಹಃ" ಎಂಬ ವಾಕ್ಯವು ವಿವಾದಪರಿಹಾರಕವಾದ ನಿರ್ಣಯಜನಕಶ್ಲೋಕವಾಗಿರುವುದು.

ತೃತೀಯಾಧ್ಯಾಯದಲ್ಲಿಯೂ ಕೂಡ ಇದೇ ವಿಷಯವನ್ನು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ :—

**(3) ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥**
—(3. 35.)

ಹೇ ಪಾರ್ಥ! ಸರ್ವಾಂಗಸಮೃದ್ಧಿಪೂರ್ವಕವಾಗಿ ಉತ್ಕೃಷ್ಟರೀತಿಯಿಂದ ಅನುಷ್ಠಿತವಾದ ಪರಧರ್ಮಾತ್ = ಎಂದರೆ ಅನ್ಯವರ್ಣಾಶ್ರಮೋಚಿತವಾದ ಧರ್ಮಕ್ಕಿಂತಲೂ ಅಂಗವೈಕಲ್ಯದಿಂದ ಯುಕ್ತವಾಗಿದ್ದರೂ ಸ್ವವರ್ಣಾಶ್ರಮೋಚಿತವಾದ ಧರ್ಮವು ಶ್ರೇಯಸ್ಕರವು. (ಸಾಂಗವಾಗಿ ಆಚರಿಸಲ್ಪಟ್ಟರೂ ಪರಧರ್ಮವು ನರಕಪ್ರದವು. ಅಂಗನ್ಯೂನತೆಯಿಂದ ಸಹಿತವಾಗಿದ್ದರೂ ಸ್ವಧರ್ಮವು ಶ್ರೇಯಸ್ಕರವು ಎಂದು ಭಾವವು. ಈ ಅರ್ಥವನ್ನೇ ಸ್ಪಷ್ಟವಾಗಿ ಶ್ರೀಕೃಷ್ಣನು ಹೇಳುತ್ತಾನೆ) ಸ್ವಧರ್ಮಾನುಷ್ಠಾನದಲ್ಲಿ ಮರಣವನ್ನು ಹೊಂದಿದರೂ ಶ್ರೇಯಸ್ಕರವು; ಅನ್ಯವರ್ಣಾಶ್ರಮೋಚಿತ ಕರ್ಮಾನುಷ್ಠಾನವು ಭಯಂಕರವು. (ಎಂದರೆ ನರಕಪ್ರದವಾಗುವುದೆಂದು ಭಾವವು.)

ಈರೀತಿಯಾದ ಶ್ರೀಕೃಷ್ಣನ ವಾಕ್ಯಗಳಿಂದ ಸ್ವಧರ್ಮವು ಪರಧರ್ಮವು ಎಂಬ ಎರಡು ಪ್ರಕಾರವಾದ ವ್ಯವಸ್ಥೆಯು ಇರುವುದೆಂದು ನಿಶ್ಚಿತವಾಗುವುದು. ಉಪನಯನಾದಿ ಸಂಸ್ಕಾರಮಾತ್ರದಿಂದ ಬ್ರಾಹ್ಮಣ್ಯವು ಬರುವುದಾಗಿದ್ದರೆ, ಮತ್ತು ಗಾಯತ್ರೀಜಪಾದಿಗಳನ್ನು ಮಾಡಿದವನು ಬ್ರಾಹ್ಮಣನು, ಯುದ್ಧಾದಿಗಳನ್ನು ಮಾಡಿದವನು ಕ್ಷತ್ರಿಯನು, ಕೃಷ್ಯಾದಿಗಳಲ್ಲಿ ಆಸಕ್ತನಾದವನು ವೈಶ್ಯನು, ಸೇವಾವೃತ್ತಿಯಲ್ಲಿ ರತನಾದವನು ಶೂದ್ರನು ಎಂಬ ವ್ಯವಸ್ಥೆಯೇ ವೇದಾದಿ ಶಾಸ್ತ್ರಸಮ್ಮತವಾಗಿದ್ದರೆ ಇದು **ಸ್ವಧರ್ಮವು,** ಇದು **ಪರಧರ್ಮವು** ಎಂಬ ಭೇದದೃಷ್ಟಿಗೇ ಅವಕಾಶವಿರಲಿಲ್ಲ. ನಾಲ್ಕು ವಿಧವಾದ ಆಚರಣೆಗಳೂ ಧರ್ಮರೂಪವಾಗಿಯೇ ಇರುತ್ತಿದ್ದವು. ಯಾರಿಗೆ ಯಾವ ಧರ್ಮದಲ್ಲಿ ಮನಃಪ್ರವೃತ್ತಿಯು ಅಧಿಕವೋ ಅಂಥವನು ಆ ಧರ್ಮಾನುಷ್ಠಾನವನ್ನು ಮಾಡಿ ಸುಖವನ್ನು ಹೊಂದಬಹುದಾಗಿತ್ತು. ಶ್ರೀಕೃಷ್ಣನಾದರೋ ಇಂಥಾ ಭ್ರಮೋತ್ಪತ್ತಿಗೆ ಅವಕಾಶಕೊಡದೆ ಚತುರ್ವರ್ಣವೂ ತನ್ನಿಂದಲೇ ಸೃಷ್ಟಿಸಲ್ಪಟ್ಟು ಅನಾದಿ

ಕಾಲದಿಂದ ಭಗ್ನವಾಗಿರುವುದೆಂದು ಹೇಳಿ ನಾಲ್ಕು ವರ್ಣಗಳಿಗೂ ಭಿನ್ನಧರ್ಮಗಳು ವೇದವಿಹಿತವಾಗಿರುವುವೆಂದು ತಿಳಿಸಿ, ಇದು ಸ್ವಧರ್ಮವು, ಇದು ಪರಧರ್ಮವು ಎಂಬ ವ್ಯವಸ್ಥೆಯನ್ನು ಮಾಡಿ, ಸ್ವಧರ್ಮಾನುಷ್ಠಾನದಿಂದ ಪುರುಷಾರ್ಥಪ್ರಾಪ್ತಿಯನ್ನೂ ಪರಧರ್ಮಾಚರಣೆಯಿಂದ ಭಯಂಕರವಾದ ನರಕಾದಿ ಅನರ್ಥಫಲಪ್ರಾಪ್ತಿಯನ್ನೂ ನಿರೂಪಿಸಿರುತ್ತಾನೆ. ಆದುದರಿಂದ ಬ್ರಾಹ್ಮಣಾದಿ ವರ್ಣಗಳು ಕಲ್ಪಿತವೆಂದು ನೀವು ತಿಳಿಯಬಾರದು.

7. **ಪ್ರಶ್ನೆ:**—ಸ್ವಾಮಿ! ಶೂದ್ರನು ಮೌಂಜೀಬಂಧನವನ್ನು ಮಾಡಿಕೊಳ್ಳಬಾರದು, ಅಗ್ನಿಹೋತ್ರಾದಿಗಳನ್ನು ಮಾಡಬಾರದು ಎಂದು ವೇದದಲ್ಲಿ ಹೇಳಿರುವುದೇ?

**ಉತ್ತರ:–ಶ್ರೀಶ್ರೀಗಳವರು:**—ಅನಂತವಾಕ್ಯಗಳಿರುತ್ತವೆ. "ನಾಗ್ನಿರ್ನಯಜ್ಞೋ ಶೂದ್ರಸ್ಯ" ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ. ಮತ್ತು ಬ್ರಹ್ಮಸೂತ್ರದಲ್ಲಿ ಅಪಶೂದ್ರಾಧಿಕರಣದಲ್ಲಿ ಶೂದ್ರನು ವೇದಾಧಿಕಾರಿಯಲ್ಲವೆಂದು ಬಾದರಾಯಣರು ನಿಶ್ಚಯಿಸಿರುತ್ತಾರೆ. ಆದರೆ ನೀವು ಗೀತೆಯನ್ನು ಬಿಟ್ಟು ಯಾತಕ್ಕೆ ಪ್ರಶ್ನೆ ಮಾಡುತ್ತೀರಿ? ಗೀತೆಯಲ್ಲಿ ಶ್ರೀಕೃಷ್ಣನು ಸ್ವಧರ್ಮದಲ್ಲಿ ಮರಣವನ್ನು ಹೊಂದಿದರೂ ಚಿಂತೆಯಿಲ್ಲ ಪರಧರ್ಮವನ್ನು ಆಚರಿಸುವುದು ಭಯಂಕರವು ಎಂದು ನಿರೂಪಿಸಿರುವುದರಿಂದಲೇ ನಾಲ್ಕು ವರ್ಣಗಳೂ ಭಿನ್ನಭಿನ್ನ ಧರ್ಮಗಳಿಂದ ಯುಕ್ತವಾಗಿರುವುವೆಂದು ನಿರ್ಣೀತವಾಗುವುದು.

ಈ ವಿಮರ್ಶೆಯಿಂದ ಮತ್ತೊಂದು ಶಂಕೆಯೂ ನಿರಸ್ತವಾಯಿತು. ಬುದ್ಧಿಪ್ರಾಗಲ್ಭ್ಯವನ್ನು ಹೊಂದಿದ ಶೂದ್ರವೈಶ್ಯಾದಿಗಳು ಧ್ಯಾನಪ್ರವಚನಾದಿ ಕಾರ್ಯದಲ್ಲಿ ಸಮರ್ಥರಾದರೆ ಬ್ರಾಹ್ಮಣ್ಯವನ್ನು ಯಾತಕ್ಕೆ ಹೊಂದಬಾರದು ಎಂಬ ಪೂರ್ವಪಕ್ಷವು ಕೆಲವು ಜನರುಗಳ ಮನಸ್ಸಿನಲ್ಲಿರುವುದು. ಇದೂ ಕೂಡ ಮೌಢ್ಯಮೂಲಕವಾದುದು. ಶೂದ್ರನು ಎಷ್ಟೇ ಬುದ್ಧಿವಂತನಾದರೂ ವೇದಾಧ್ಯಯನ, ವೇದಾರ್ಥವಿಚಾರದಲ್ಲಿ ಪ್ರವೇಶಮಾಡಿದರೆ ಆತನು ಶೂದ್ರನಿಗಿಂತಲೂ ನೀಚತೆಯನ್ನು ಹೊಂದಿ ಘೋರವಾದ ನರಕಗಳಿಗೆ ಬೀಳುವನು. ಯಾತಕ್ಕೆಂದರೆ ಅದು ಆತನಿಗೆ ಪರಧರ್ಮವು. ಹೀಗಿರುವಲ್ಲಿ ಶೂದ್ರನು ಬುದ್ಧಿಬಲದಿಂದ ಬ್ರಾಹ್ಮಣ್ಯವನ್ನು ಹೊಂದುವುದು ಹೇಗೆ?

8. **ಪ್ರಶ್ನೆ:**—ಸ್ವಾಮಿ! ಹಾಗಾದರೆ ಶೂದ್ರ ಚಂಡಾಲಾದಿ ಜನರಿಗೆ ಎಷ್ಟು ಬುದ್ಧಿಯಿದ್ದರೂ ವ್ಯರ್ಥವೋ?

**ಉತ್ತರ:—ಶ್ರೀಶ್ರೀಗಳವರು:**—ನಿಮ್ಮ ಪ್ರಶ್ನೆಯು ಕೇವಲ ಭ್ರಾಂತಿಜನಿತವಾದುದು. ಹೀಗೆಯೇ ಅನೇಕರು ನಮ್ಮನ್ನು ಅಲ್ಲಿ ಅಲ್ಲಿ ಕೇಳುತ್ತಿರುತ್ತಾರೆ. ದೇಹಸ್ವಭಾವಭೇದದಿಂದ ಪ್ರಾಪ್ತವಾದ ಕರ್ಮವಿಭಾಗವನ್ನು ನಾವು ನಿರೂಪಣೆ ಮಾಡಿರುತ್ತೇವೆ. ಅಷ್ಟೇ ವಿನಾ ಚಂಡಾಲನೂ ಶೂದ್ರನೂ ಮನಸ್ಸಿನಿಂದ ಪರಮಾತ್ಮನನ್ನು ಧ್ಯಾನಮಾಡಕೂಡದೆಂದು ಹೇಳಿದವರು ಯಾರು? ಪರಬ್ರಹ್ಮನಾದ ಶ್ರೀಕೃಷ್ಣನ ಗುಣಗಣಗಳ ಧ್ಯಾನವನ್ನು ಸರ್ವ ವರ್ಣದವರೂ ಅವಶ್ಯವಾಗಿ ಸರ್ವದಾ ಮಾಡಬೇಕು. ಬ್ರಹ್ಮದೇವರ ಮನಸ್ಸೂ ಕೂಡ ಈ ಕಾರ್ಯದಲ್ಲಿ ಪರ್ಯಾಪ್ತವಾದ ಸಾಮರ್ಥ್ಯೋಪೇತವಾಗಿಲ್ಲವೆಂಬಲ್ಲಿ ಶೂದ್ರಚಂಡಾಲಾದಿಗಳಿಗೆ ಎಷ್ಟು ಊರ್ಜಿತವಾದ ಬುದ್ಧಿಯು ಇದ್ದರೂ ವ್ಯರ್ಥವಾಗಲಾರದೆಂದು ಹೇಳಬೇಕಾದುದೇನು? ಶೂದ್ರಾದಿಗಳು ಬ್ರಾಹ್ಮಣಾದಿ ಉತ್ತಮವರ್ಣಸ್ಥ ಹರಿಭಕ್ತರಿಂದ ಪರಮಾತ್ಮನ ಸ್ವರೂಪವನ್ನು ಉಕ್ತರೀತಿಯಲ್ಲಿ ಹೊಂದಿ ಸಂತತ ಭಗವದ್ಧ್ಯಾನದಲ್ಲಿ ಆಸಕ್ತರಾಗಿ ತಮ್ಮ ಯಾವತ್ತೂ ಬುದ್ಧಿಬಲವನ್ನೂ ಸಾರ್ಥಕಪಡಿಸಿಕೊಳ್ಳಬೇಕು. ಇದೇ ಶಾಸ್ತ್ರಾರ್ಥವು.

9. **ಪ್ರಶ್ನೆ:**— ಈ ಪ್ರಕಾರವಾಗಿ ಶೂದ್ರನು ಬ್ರಹ್ಮಜ್ಞಾನವನ್ನು ಹೊಂದಿದಮೇಲಾದರೂ ಅವನು ಬ್ರಾಹ್ಮಣನಾಗಲಾರನೇ?

**ಉತ್ತರ:—ಶ್ರೀಶ್ರೀಗಳವರು:**— ಇದು ಆಶ್ಚರ್ಯವು. ಬ್ರಾಹ್ಮಣಾದಿ ನಾಲ್ಕು ವರ್ಣಗಳು ಭಿನ್ನವಾದ ಪರಮಾತ್ಮನಿಂದ ಸೃಷ್ಟವಾದ ಜಾತಿಗಳೆಂದು ನಾವು ಮೊದಲೇ ನಿರೂಪಿಸಿರುತ್ತೇವೆ. ಹೀಗಿರುವಾಗ ಶೂದ್ರನು ಬ್ರಹ್ಮಜ್ಞಾನವನ್ನು ಹೊಂದಿದ ಮೇಲೆ ಹೇಗೆತಾನೇ ಬ್ರಾಹ್ಮಣನಾಗುವನು? ಶೂದ್ರನು ಜ್ಞಾನಿಯಾದರೆ ಅವನ ಶೂದ್ರದೇಹವು ಹೋಗುವುದೇ? ಶೂದ್ರನು ಜ್ಞಾನಿಯಾದನಂತರವೂ ಶೂದ್ರಯೋನಿಯಿಂದ ಉತ್ಪನ್ನವಾದ ದೇಹವು ಆತನಿಗೆ ಇರುವ ವರೆವಿಗೂ ಶೂದ್ರವರ್ಣಕ್ಕೆ ವಿಹಿತವಾದ ಕರ್ಮಗಳನ್ನೇ ಆಚರಿಸುತ್ತಿರಬೇಕು.

**ವಿದ್ಯಾರ್ಥಿಗಳು:—ಪ್ರಶ್ನೆ:**– ಸ್ವಾಮಿ! ಹಾಗಾದರೆ ಬ್ರಹ್ಮಜ್ಞಾನಿಯಾದ ಶೂದ್ರನಿಗಿಂತಲೂ ಪತಿತನಾದ ಮೂರ್ಖ ಬ್ರಾಹ್ಮಣನು ಅಧಿಕನು ಎಂದು ಪ್ರಾಪ್ತವಾಯಿತು. ಇದೀಗ ಬಹಳ ಚೆನ್ನಾಯಿತು!

**ಉತ್ತರ:–ಶ್ರೀಶ್ರೀಗಳವರು:**—ನಾವು ಹಾಗೆ ಹೇಳಲಿಲ್ಲ. ಜ್ಞಾನಿಯಾದ ಶೂದ್ರನ ದೇಹಕ್ಕಿಂತ ಮೂಢನಾದರೂ ಬ್ರಾಹ್ಮಣ **ದೇಹವು** ಶ್ರೇಷ್ಠವು; ತತ್ಪ್ರಯುಕ್ತವಾಗಿ ಬ್ರಾಹ್ಮಣನು ಹೆಚ್ಚು ವೈದಿಕಕರ್ಮಗಳಲ್ಲಿ ಅಧಿಕಾರವುಳ್ಳವನಾಗಿರುವನೆಂದು ನಾವು ನಿರೂಪಿಸಿದೆವು. ಆದರೆ ಜ್ಞಾನವಿಚಾರದಲ್ಲಿ ಜ್ಞಾನಿಯಾದ ಶೂದ್ರನು ಹೆಚ್ಚು ಪುಣ್ಯವಂತನು, ಮೂಢನಾದ ಬ್ರಾಹ್ಮಣನು ಪಾಪಿಯು. ಶೂದ್ರನು ಸ್ವರ್ಗಾದಿ ಉತ್ತಮ ಲೋಕಗಳನ್ನು ಹೊಂದುವನು. ಪಾಪಿಯಾದ ಬ್ರಾಹ್ಮಣನು ಅಧೋಗತಿಯನ್ನೇ ಹೊಂದುವನು. ಶೂದ್ರನೂ ಜ್ಞಾನವನ್ನು ಹೊಂದಿ ಉತ್ತಮಗತಿಯನ್ನು ಹೊಂದುವುದರಲ್ಲಿ ಸಂಶಯವಿಲ್ಲವೆಂದು ಶ್ರೀಕೃಷ್ಣನು ಹೇಳುತ್ತಾನೆ:—

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ।**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ ॥**
—(9. 32.)

"ಎಲೈ ಕೌಂತೇಯನೇ! ನನ್ನಲ್ಲಿ ಭಕ್ತಿಯುಳ್ಳವರಾಗಿ ಶರಣಾಗತರಾದರೆ ಪಾಪನಿಮಿತ್ತಕವಾದ ನೀಚಯೋನಿಗಳಲ್ಲಿ ಜನ್ಮವನ್ನು ಹೊಂದಿದ ಸ್ತ್ರೀಯರೂ,* ವೈಶ್ಯರೂ, ಶೂದ್ರರೂ ಕೂಡ ಉತ್ತಮಗತಿಯನ್ನು ಹೊಂದುತ್ತಾರೆ."

ಇದರಿಂದ ಇಷ್ಟು ವಿಷಯವು ಸಿದ್ಧವಾಗುವುದು. ಒಬ್ಬೊಬ್ಬ ಜೀವನೂ ಅನೇಕ ಕರ್ಮಶೇಷಗಳಿಂದ ಸಹಿತನಾಗಿ ಭೂಲೋಕದಲ್ಲಿ ಹುಟ್ಟುತ್ತಾನೆ. ಅವುಗಳಲ್ಲಿ ಕೆಲವು ಕರ್ಮಗಳು ಹುಟ್ಟುವ ಯೋನಿಗೆ ನಿಮಿತ್ತವಾಗುವುವು. ಶರೀರ

---

* ಇಲ್ಲಿ ಸ್ತ್ರೀಯರೆಂದರೆ ನಾಟಕಾದಿಗಳಲ್ಲಿ ಸ್ತ್ರೀವೇಷವನ್ನು ಧರಿಸೋಣವೇ ಮೊದಲಾದ ಪಾಪಪ್ರಯುಕ್ತವಾಗಿ ಜನ್ಮಾಂತರದಲ್ಲಿ ಸ್ತ್ರೀದೇಹವನ್ನು ಹೊಂದಿದ ಪುರುಷಜೀವರುಗಳೆಂದು ಅರ್ಥವನ್ನು ತಿಳಿದುಕೊಳ್ಳಬೇಕು. ಸ್ವರೂಪತಃ ಸ್ತ್ರೀಜೀವರಿಗೆ ಸ್ತ್ರೀದೇಹಪ್ರಾಪ್ತಿಯು ಪಾಪಮೂಲಕವಲ್ಲ.

ಬಲಾದಿಗಳಿಗೆ ಕಾರಣವಾದುವುಗಳು ಕೆಲವು ಕರ್ಮಗಳು; ಜ್ಞಾನಾಜ್ಞಾನಾದಿಗಳಿಗೆ ಕಾರಣವಾದುವುಗಳು ಕೆಲವು ಕರ್ಮಗಳು. ಸಂಪತ್ತು ದಾರಿದ್ರ್ಯಾದಿಗಳಿಗೆ ಕೆಲವು ಕರ್ಮಗಳು ನಿಮಿತ್ತಗಳು. ಅದರಲ್ಲಿ ಯೋನಿಗೆ ಕಾರಣವಾಗತಕ್ಕ ಕರ್ಮವು ಆಜನ್ಮನಾಶಪರ್ಯಂತವೂ ಭೋಕ್ತವ್ಯವಾಗಿರುವುದು. ಪಾಪದಿಂದ ಸ್ತ್ರೀಯೋನಿಯು ಪ್ರಾಪ್ತವಾದರೆ ಆಜನ್ಮನಾಶಪರ್ಯಂತವೂ ಸ್ತ್ರೀತ್ವವು ಭೋಕ್ತವ್ಯವು. ಶೂದ್ರಯೋನಿಯಲ್ಲಿ ಹುಟ್ಟಿದರೆ ಸಾಯುವವರೆವಿಗೂ ಶೂದ್ರನಾಗಿರಬೇಕು. ಅಂಥಾ ದೇಹೋತ್ಪತ್ತಿಗೆ ಪೂರ್ವಕೃತಪಾಪವು ಕಾರಣವು.

ಹೀಗಿದ್ದರೂ ಸಹ, ಶೂದ್ರ ಚಂಡಾಲಾದಿ ನೀಚಯೋನಿಗಳಲ್ಲಿ ಉತ್ಪತ್ತಿಗೆ ಕಾರಣವಾದ ಪಾಪವನ್ನು ಮಾಡಿದವನಾದರೂ ಅದೇ ಪುರುಷನು ಬ್ರಹ್ಮಜ್ಞಾನಪ್ರಾಪ್ತಿಗೆ ಕಾರಣವಾಗುವಂಥಾ ಮಹತ್ಪುಣ್ಯವನ್ನು ಪೂರ್ವಜನ್ಮದಲ್ಲಿ ಆಚರಿಸಿರಬಹುದು, ಮಹಾಸಂಪತ್ತಿಗೆ ಕಾರಣವಾಗುವ ಪುಣ್ಯವನ್ನೂ ಆಚರಿಸಿರಬಹುದು. ಅಂಥಾ ಪುಣ್ಯಬಲದಿಂದ ಶೂದ್ರನೂ, ಚಂಡಾಲನೂ ಕೂಡ ಬ್ರಹ್ಮಜ್ಞಾನವನ್ನು ಹೊಂದಬಹುದು. ಹಾಗಾದರೂ ಯೋನಿಗೆ ಕಾರಣವಾಗಿರುವ ಪಾಪವು ಪ್ರಾಯಶ್ಚಿತ್ತರೂಪವಾಗಿ ಮರಣಾವಧಿ ಇದ್ದೇ ಇರುವುದರಿಂದ ಜ್ಞಾನಿಯಾದ ಶೂದ್ರನೂ ಚಂಡಾಲಾದಿಗಳೂ ಉತ್ತಮವರ್ಣದಲ್ಲಿ ಸವ್ಯವಹಾರವನ್ನು ಮಾಡಿ ಪರಧರ್ಮಾನುಷ್ಠಾನರೂಪವಾದ ಭಯಂಕರ ಪಾಪವನ್ನು ಮಾಡಲಾರರು. ಮತ್ತು ಮರಣಾನಂತರದಲ್ಲಿ ಜ್ಞಾನಿಯಾದ ಬ್ರಾಹ್ಮಣನು ಹೇಗೆ ಉತ್ತಮಗತಿಯನ್ನು ಹೊಂದುವನೋ ಹಾಗೆಯೇ ಉತ್ತಮಗತಿಯನ್ನೇ ಶೂದ್ರಾದಿಗಳೂ ಹೊಂದುವುದರಲ್ಲಿ ಸಂಶಯವಿಲ್ಲ.

**ಪ್ರಶ್ನೆ:**—ಸ್ವಾಮಿ! ಇಹಲೋಕದಲ್ಲಿ ಜ್ಞಾನಿಯಾದರೂ ಸಹ ಯಾವ ಶೂದ್ರನೂ ಚಂಡಾಲನೂ ವ್ಯವಹಾರಯೋಗ್ಯನಲ್ಲದಿದ್ದ ಮೇಲೆ ಸತ್ತ ಮೇಲೆ ಸಮಾನವಾದ ಉರ್ಧ್ವಲೋಕಪ್ರಾಪ್ತಿಯಾಗುವುದೆಂದು ಹೇಳುವುದು ಹೇಗೆ?

**ಉತ್ತರ:—ಶ್ರೀಶ್ರೀಗಳವರು:—** ಇದರಲ್ಲಿ ಏನು ಆಶ್ಚರ್ಯವು? ಪೋಲೀಸು ಇಲಾಖಾ ಅಧ್ಯಕ್ಷನಿಗೂ 2000 ರೂಪಾಯಿ ವೇತನವು; ಛೀಫ್ ಕೋರ್ಟಿನ ನ್ಯಾಯಾಧಿಪತಿಗೂ 2000 ರೂಪಾಯಿಗಳು. ಮಹಾರಾಜನ ದರ್ಬಾರಿನಲ್ಲಿ ಇಬ್ಬರಿಗೂ ಸಮಾನವಾದ ಮರ್ಯಾದೆಯಾಗುವುದು. ಆದರೆ

ಒಬ್ಬರ ವೇಷವನ್ನು ಒಬ್ಬರು ಧರಿಸಕೂಡದು, ಒಬ್ಬರ ಕರ್ಮವನ್ನು ಒಬ್ಬರು ಮಾಡಕೂಡದೆಂಬ ಸರ್ಕಾರದ ನಿಬಂಧನೆಯುಂಟು. ಹೀಗೆಯೇ ಪೋಲೀಸು ವೇಷಕ್ಕೂ, ಗೌನ್ ಧಾರಣೆಯೇ ಮುಂತಾದ ಜಡ್ಜಿಯ ವೇಷಕ್ಕೂ ಭೇದವು ಇರುವಂತೆ ಶೂದ್ರವರ್ಣಕ್ಕೂ ಬ್ರಾಹ್ಮಣವರ್ಣಕ್ಕೂ ವ್ಯತ್ಯಾಸವಿರುವುದು. ಇಲಾಖಾ ಭೇದಪ್ರಯುಕ್ತವಾಗಿಯೂ ಪೋಲೀಸು ಅಧಿಕಾರಿಗೂ ನ್ಯಾಯ ಸ್ಥಾನದ ಅಧಿಕಾರಿಗೂ ಕರ್ಮಭೇದವುಂಟು. ಹಾಗೆಯೇ ವರ್ಣಭೇದ ಪ್ರಯು ಕ್ತವಾಗಿ ಬ್ರಾಹ್ಮಣನಿಗೂ ಶೂದ್ರನಿಗೂ ಭಿನ್ನ ಭಿನ್ನವಾದ ಧರ್ಮಗಳು ವಿಹಿತ ವಾಗಿರುವುವು. ರಾಜಸ್ಥಾನದಲ್ಲಿ ಪ್ರಾಪ್ತವಾದಾಗ ನ್ಯಾಯಾಧಿಪತಿಗೂ ಸೇನಾ ಧಿಕಾರಿಗೂ ಇಬ್ಬರಿಗೂ ಅವರ ಯೋಗ್ಯತೆಗೆ ಅನುಗುಣವಾಗಿ ಉತ್ತಮ ಮರ್ಯಾದೆಯೇ ಮಾಡಲ್ಪಡುವುದು. ಹೀಗೆಯೇ ಶೂದ್ರಾದಿಗಳೂ ಬ್ರಾಹ್ಮ ಣರೂ ಸ್ವವಿಹಿತಕರ್ಮಗಳನ್ನು ಮಾಡಿಕೊಂಡು ಬ್ರಹ್ಮಧ್ಯಾನದಲ್ಲಿ ಆಸಕ್ತ ರಾದರೆ, ರಾಜಸ್ಥಾನದಂತಿರುವ ನಾರಾಯಣನ ಲೋಕಗಳಲ್ಲಿ ಅವರವರ ಬ್ರಹ್ಮಜ್ಞಾನದಿಂದಲೂ, ಸ್ವಧರ್ಮ ಆಚರಣೆಯಿಂದಲೂ ಆರ್ಜಿತವಾದ ಪುಣ್ಯಕ್ಕೆ ಅನುಗುಣವಾಗಿ ಉತ್ತಮ ಫಲವೇ ದೊರಕುವುದು, ಆದರೆ ಇಷ್ಟುಮಾತ್ರ ವೈಷಮ್ಯವು ಇರುವುದು. ಸರ್ಕಾರದಲ್ಲಿ ಒಬ್ಬ ಇಲಾಖೆಯವನನ್ನು ಮತ್ತೊಂದು ಇಲಾಖೆಯ ಕರ್ಮದಲ್ಲಿ ಶೀಘ್ರವಾಗಿ ನಿಯೋಗಿಸುವರು. ಶ್ರೀ ಕೃಷ್ಣನ ಸತ್ಕಾರದಲ್ಲಿಯಾದರೋ ಶೂದ್ರನಿಗೆ ಬ್ರಾಹ್ಮಣಾದಿ ವರ್ಣವಿಹಿತವಾದ ಕರ್ಮದಲ್ಲಿ ಜನ್ಮಾಂತರದಲ್ಲಿ ಅಧಿಕಾರವು ಬರಬಹುದೇ ಹೊರತು ಅದೇ ಜನ್ಮ ದಲ್ಲಿ ಆಗಲಾರದು.

**10. ಪ್ರಶ್ನೆ:—** ಸ್ವಾಮಿ! ಶೂದ್ರನಿಗೂ, ಚಂಡಾಲನಿಗೂ ಸಹ ಬ್ರಹ್ಮ ಧ್ಯಾನವೂ, ಉತ್ತಮಗತಿಪ್ರಾಪ್ತಿಯೂ ಬ್ರಾಹ್ಮಣಾದಿ ವರ್ಣಗಳಿಗೆ ದೊರೆಯು ವಂತೆ ದೊರೆಯುವುದಾದರೆ ಬ್ರಾಹ್ಮಣರಾಗಿ ಹುಟ್ಟುವುದರಿಂದ ಬರುವ ಪ್ರಾಶಸ್ತ್ಯವೇನು? ಶೂದ್ರಜನ್ಮವೇನೂ ಅಷ್ಟು ಶೋಕಾರ್ಹವಲ್ಲವೆಂದು ನಮಗೆ ತೋರುತ್ತದೆ.

**ಉತ್ತರ:—ಶ್ರೀಶ್ರೀಗಳವರು:—**ಅತಿ ಶೋಕಾರ್ಹವೆಂದು ಹೇಳಿದವರು ಯಾರು? ಶೂದ್ರರು ಅಯೋಗ್ಯರು, ನರಕಕ್ಕೆ ಪಾತ್ರರು ಎಂದು ಯಾವ ಶಾಸ್ತ್ರ

ದಲ್ಲಿ ನಿರೂಪಿಸಲ್ಪಟ್ಟಿದೆ? ಮುಖ್ಯ ಶಾಸ್ತ್ರಾರ್ಥವನ್ನು ಕೇಳಿರಿ. ಯಾವ ಯೋನಿಯಲ್ಲಿ ಹುಟ್ಟಿದರೆ ತಾನೇ ಏನು? ಯಾವ ಪಾಪದಿಂದ ದಾರಿದ್ರ್ಯಾದಿಗಳು ಬಂದರೆ ತಾನೇ ಏನು? ಸ್ವವರ್ಣಾಶ್ರಮೋಚಿತವಾದ ಕರ್ಮವನ್ನು ಆಚರಿಸಿಕೊಂಡು, ಸಂಪನ್ನರಾದ ವಿಷ್ಣುಭಕ್ತರ ಸದುಪದೇಶಾನುಸಾರವಾಗಿ ಪರಮಾತ್ಮನಾದ ಶ್ರೀಕೃಷ್ಣನನ್ನು ಧ್ಯಾನಮಾಡಿದವನು ಮರಣಾನಂತರ ಉತ್ತಮಗತಿಯನ್ನು ಹೊಂದುವನು. ಭೋಜನ, ಸ್ಪರ್ಶ, ವಿವಾಹಾದಿಗಳು ದೇಹನಿಬಂಧನವಾದುವುಗಳು. ಅವುಗಳನ್ನು ವಿಧ್ಯುಕ್ತವಾಗಿ ಆಚರಿಸದಿದ್ದರೆ ವರ್ಣಸಾಂಕರ್ಯವು ಪ್ರಾಪ್ತವಾಗಿ ಸರ್ವರೂ ನರಕಕ್ಕೆ ಬೀಳುವರು. ಆದುದರಿಂದ ಸ್ವದೇಹಾನುಬಂಧದಿಂದ ಪ್ರಾಪ್ತವಾದ ವಿಹಿತಕರ್ಮಗಳನ್ನು ಅನುಷ್ಠಾನಮಾಡುತ್ತಾ ಪರಮಾತ್ಮನನ್ನು ಸೇವಿಸಬೇಕು. ಗಜೇಂದ್ರನು ಪಶುವಾದರೂ ಉತ್ತಮಲೋಕವನ್ನು ಹೊಂದಿದನು. ಭರತರಾಜನು ಹರಿಣನಾಗಿ ಹುಟ್ಟಿದರೂ ಪರಬ್ರಹ್ಮನನ್ನು ಉಪಾಸನೆಮಾಡಿ ಜನ್ಮಾಂತರದಲ್ಲಿ ಮುಕ್ತನಾದನು. ಪ್ರಹ್ಲಾದನು ನೀಚವಾದ ದೈತ್ಯಕುಲದಲ್ಲಿ ಹುಟ್ಟಿದರೂ ದೇವರ್ಷಿಗಳಿಂದ ಸ್ತುತ್ಯವಾದ ಕೀರ್ತಿಯುಳ್ಳವನಾದನು. ಚಕ್ರಿಕ, ಶಬರಿ ಪ್ರಭೃತಿಗಳು ಶೂದ್ರರಾದರೂ ಊರ್ಧ್ವಲೋಕವನ್ನು ಹೊಂದಿದರು. ನಂದಗೋಪಾದಿ ಗೋಕುಲದ ವಿಷ್ಣುಭಕ್ತರೆಲ್ಲರೂ ವೈಶ್ಯರು, ಗೋಪಿಕಾಸ್ತ್ರೀಯರು, ಅಬಲೆಯರು. ಹೀಗಿದ್ದರೂ ಅವರ ಕೀರ್ತಿಯು ಪವಿತ್ರತಮವಾಗಿರುವುದು. ವರ್ಣವಿವೇಕವು ಅನಾದಿನಿತ್ಯವಾಗಿರುವುದರಿಂದಲೇ ಶೂದ್ರವೈಶ್ಯಾದಿಗಳೆಲ್ಲರೂ ಜ್ಞಾನಿಗಳಾದರೂ ಉತ್ತಮ ವರ್ಣಸ್ಥರಾದ ಬ್ರಾಹ್ಮಣರಲ್ಲಿ ವ್ಯವಹಾರವನ್ನು ಬೆಳಸಿ, ಪರಧರ್ಮವನ್ನು ಆಚರಿಸಿ ವರ್ಣಸಾಂಕರ್ಯವನ್ನು ತರಲಿಲ್ಲ. ಕರ್ಮಮಾರ್ಗಕ್ಕೂ ಜ್ಞಾನಮಾರ್ಗಕ್ಕೂ ಈ ರೀತಿಯಾಗಿರುವ ವ್ಯತ್ಯಾಸವನ್ನು ತಿಳಿದುಕೊಂಡರೆ ಭರತಖಂಡದಲ್ಲಿರುವ ಬ್ರಾಹ್ಮಣರಿಗೂ ಅಬ್ರಾಹ್ಮಣರಿಗೂ ಯಾವ ವಿಧವಾದ ಮನೋವೈಷಮ್ಯವು ಉತ್ಪತ್ತಿಯಾಗುವುದಕ್ಕೂ ಕಾರಣವಿಲ್ಲ.

ಹೀಗಿದ್ದರೂ ಬ್ರಾಹ್ಮಣಯೋನಿಯಲ್ಲಿ ಜನನದಿಂದ ಜ್ಞಾನಯೋಗ್ಯನಾದ ಪುಣ್ಯವಂತನಿಗೆ ಒಂದು ಅನುಕೂಲವು ಉಂಟು. ಜ್ಞಾನಸಂಪಾದನೆಗೆ ಬ್ರಾಹ್ಮಣಜನ್ಮದಲ್ಲಿ ಹೆಚ್ಚು ಅವಕಾಶವಿರುವುದು. ಬುದ್ಧಿವಂತನಾದವನಿಗೆ ರೈಲ್ವೆ

ಇಲಾಖೆಯಲ್ಲಿ ಕೆಲಸವು ದೊರಕಿದರೆ ಬಹಳ ದುಃಖವಾಗುವುದು. ಪುಸ್ತಕ ಭಂಡಾರದಲ್ಲಿ ಅದೇ ಕೆಲಸವು ದೊರಕಿದರೆ ಆನಂದವುಂಟಾಗುವುದು. ಹೀಗೆಯೇ ಬ್ರಾಹ್ಮಣಜನ್ಮದಲ್ಲಿ ವೇದಾರ್ಥವಿಚಾರ, ಮತ್ತು ಸಾಕ್ಷಾತ್ ವೇದಾಂತೋಪದೇಶಾದಿಗಳಿಗೆ ಅಧಿಕಾರವು ಇರುವುದರಿಂದ ಮುಮುಕ್ಷುವು ಉತ್ತಮವಾದ ಬ್ರಾಹ್ಮಣಜನ್ಮವನ್ನು ಕೋರುವನು. ಬ್ರಾಹ್ಮಣದೇಹದಲ್ಲಿ ಭಗವತ್ಸನ್ನಿಧಾನವು ಅಧಿಕವಾಗಿರುವುದರಿಂದ ಶೀಘ್ರದಲ್ಲಿ ಜ್ಞಾನಸಿದ್ಧಿಯು ಪ್ರಾಪ್ತವಾಗುವುದು. ಈ ಅಭಿಪ್ರಾಯವೂ ಕೂಡ ಶ್ರೀಕೃಷ್ಣನಿಂದಲೇ ನಿರೂಪಿತವಾಗಿದೆ:—

**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ॥**
—(9. 33.)

ಎಲೈ ಕುಂತೀನಂದನನೆ! (ಪಾಪ ಯೋನಿಗಳಲ್ಲಿ ಹುಟ್ಟಿದ ಶೂದ್ರಾದಿಗಳೂ ಕೂಡ ನನ್ನಲ್ಲಿ ಭಕ್ತಿಮಾಡಿ ಉತ್ತಮಗತಿಯನ್ನು ಹೊಂದುವರು. ಹೀಗಿರುವಲ್ಲಿ) ಪುಣ್ಯನಿಮಿತ್ತಕವಾದ ದೇಹವನ್ನು ಹೊಂದಿದ ಬ್ರಾಹ್ಮಣರೂ, ರಾಜರ್ಷಿಗಳೂ ನನ್ನಲ್ಲಿ ಭಕ್ತರಾಗಿ ಉತ್ತಮಗತಿಯನ್ನು ಹೊಂದುವರೆಂದು ಹೇಳಬೇಕಾದುದೇನು?

**11. ಪ್ರಶ್ನೆ :**—ಸ್ವಾಮಿ! ಹಾಗಾದರೆ ಈಗ ಭರತಖಂಡದಲ್ಲಿ ಐಕಮತ್ಯವು ಬರಬೇಕಾದರೆ ಸ್ವವರ್ಣಾಶ್ರಮೋಚಿತವಾದ ಧರ್ಮಗಳಲ್ಲಿ ಚತುರ್ವರ್ಣದವರೂ ಆಸಕ್ತರಾಗಿ, ಎಲ್ಲರೂ ಪರಮಾತ್ಮನ ಉಪಾಸನೆಯಲ್ಲಿ ರತರಾಗಬೇಕು ಎಂದು ಪ್ರಾಪ್ತವಾಯಿತು.

**ಉತ್ತರ:— ಶ್ರೀಶ್ರೀಗಳವರು :**—ಹಾಗೆಯೇ ಸರಿ! ಇವುಗಳನ್ನೆಲ್ಲಾ ನೀವೇ ವಿಮರ್ಶೆಯಿಂದ ನಿರ್ಣಯಿಸಿಕೊಳ್ಳಬಹುದು. ನಾವು ಇದ್ದ ಶಾಸ್ತ್ರಾರ್ಥವನ್ನೂ ಶ್ರೀಕೃಷ್ಣನ ತತ್ವವನ್ನೂ ನಿರೂಪಿಸಿರುತ್ತೇವೆ.

12. **ಪ್ರಶ್ನೆ :**—ಸ್ವಾಮಿ! ಚಾತುರ್ವರ್ಣ್ಯವು ಅನಾದಿಕಾಲದಿಂದಲೂ ಇದ್ದಿತೆಂದು ಸಿದ್ಧವಾಗುವುದು. ಚಂಡಾಲರನ್ನು ದೇವರು ಸೃಷ್ಟಿಮಾಡಿದನೆ? ಅದು ಮನುಷ್ಯಕಲ್ಪನೆಯು ಯಾತಕ್ಕೆ ಆಗಬಾರದು?

**ಉತ್ತರ:—ಶ್ರೀಶ್ರೀಗಳವರು:**—ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರಪುರುಷನಿಂದ ಉತ್ಪನ್ನನಾದ ಪುತ್ರನು ಚಂಡಾಲನೆನ್ನಿಸುವನು. ಆತನ ದೇಹವು

ಅಸ್ಪೃಶ್ಯವೆಂದು ಶಾಸ್ತ್ರದಿಂದ ನಿಶ್ಚಿತವಾಗಿರುವುದು. ನಾವು ಪೂರ್ವದಲ್ಲಿಯೇ ನಿರೂಪಿಸಿರುತ್ತೇವೆ. ಚಂಡಾಲನಿಗೆ ಸ್ವದೇಹವು ಪಾಪದಿಂದ ಉತ್ಪನ್ನವಾಗಿದ್ದರೂ ಆತನೂ ಪುಣ್ಯವಂತನಾಗಿದ್ದರೆ, ಸ್ವವಿಹಿತಕರ್ಮವನ್ನು ಮಾಡಿಕೊಂಡು ಉತ್ತಮವರ್ಣದವರನ್ನು ಸ್ಪರ್ಶಮಾಡಿ ತಾನೂ ಪರಧರ್ಮದಿಂದ ಅನರ್ಥಗಳನ್ನು ಹೊಂದಿ ಅವರನ್ನು ಕೆಡಿಸದೆ ಇದ್ದರೆ ಪುಣ್ಯಲೋಕಗಳನ್ನೇ ಹೊಂದುವನು. ಮತ್ತು ಅವನಿಗೆ ಏಕಾದಶೀ ಉಪವಾಸಕ್ಕೆ ಮತ್ತು ಪರಮಾತ್ಮನ ಸಂತತನಾಮಧ್ಯಾನಕ್ಕೆ ಅಧಿಕಾರವುಂಟು.

ಚಂಡಾಲರು ಪೂರ್ವದಲ್ಲಿರಲಿಲ್ಲ, ನೂತನವಾಗಿ ದುರುಳರಾದ ಮನುಷ್ಯರು ಅವರನ್ನು ಕಲ್ಪಿಸಿದರು ಎಂದು ತಿಳಿಯಕೂಡದು. ಶ್ರೀಕೃಷ್ಣನೇ **"ಶುನಿ ಚೈವ ಶ್ವಪಾಕೇ ಚ"** ಎಂಬ ಶ್ಲೋಕಭಾಗದಲ್ಲಿ ಶ್ವಪಾಕಶಬ್ದದಿಂದ ಚಂಡಾಲರ ನಾಮವನ್ನು ನಿರ್ದೇಶಮಾಡಿರುವನು. ಇದರಿಂದಲೂ ಕೂಡ ಪೂರ್ವದಿಂದಲೂ ಚಂಡಾಲರು ಇದ್ದರೆಂದು ತಿಳಿದುಬರುವುದು.

"ಚಂಡಾಲಾಯ ಉಚ್ಛಿಷ್ಟಂ ಪ್ರಯಚ್ಛೇತ್" ಎಂಬ ಶ್ರುತಿಯ ವಾಕ್ಯದಿಂದಲೂ ಚಂಡಾಲರು ಅನಾದಿಕಾಲದಿಂದಲೂ ಇದ್ದರೆಂದು ತಿಳಿದುಬರುವುದು. ಚಂಡಾಲರಿಗೆ ವಿಹಿತವಾದ ಧರ್ಮಗಳನ್ನು ಮನ್ವಾದಿಸ್ಮೃತಿಗಳಿಂದ ತಿಳಿಯಬೇಕು. ಶ್ರೀಕೃಷ್ಣನು ಅವರಿಗೂ ಮತ್ತು ಸಕಲರಿಗೂ ಸ್ವವಿಹಿತಕರ್ಮಾಚರಣೆಯಿಂದ ಸಹಿತವಾದ ಭಗವದ್ಭಕ್ತಿಯಿಂದ ಸದ್ಗತಿಯುಂಟೆಂದು ನಿರೂಪಿಸಿರುತ್ತಾನೆ; ಮತ್ತು ಪರಧರ್ಮಾನುಷ್ಠಾನವು ದುರ್ಗತಿಗೆ ಕಾರಣವಾದ ಕುಪಥವೆಂದೂ ನಿರೂಪಿಸಿರುತ್ತಾನೆ.

————

# 23. ಇಪ್ಪತ್ತಮೂರನೆಯ ಅಂಶವು.

## ಕರ್ಮಾನುಷ್ಠಾನವು (ಮುಂದುವರಿಸಿದ್ದು.)

## ಧರ್ಮಪರಿವರ್ತನೆಯು ಉಂಟೇ ?—ಶಾಶ್ವತ ಧರ್ಮಸದ್ಭಾವವು.

1. **ಪ್ರಶ್ನೆ**:—ಸ್ವಾಮಿ! ತಾವು ಹೇಳಿದುದೆಲ್ಲಾ ಯುಕ್ತಿಯುಕ್ತವಾಗಿಯೇ ಇರುವುದು. ಇದೇ ಶ್ರೀಕೃಷ್ಣನ ಅಭಿಪ್ರಾಯವೆಂದು ನಮ್ಮ ಮನಸ್ಸಿನಲ್ಲಿ ದೃಢನಿಶ್ಚಯವು ಏರ್ಪಟ್ಟಿತು. ಆದರೆ ನಾವು ಒಂದು ಪ್ರಶ್ನೆಯನ್ನು ಕೇಳುತ್ತೇವೆ. ತಾವು ಸಾವಧಾನವಾಗಿ ಉತ್ತರವನ್ನು ದಯಪಾಲಿಸಬೇಕು.

**ಉತ್ತರ:-ಶ್ರೀಶ್ರೀಗಳವರು:**—ಕೇಳಿರಿ. ವಿದ್ಯಾರ್ಥಿಗಳ ಬುಭುತ್ಸೆಯನ್ನು ಪೂರ್ಣಮಾಡುವುದೇ ನಮ್ಮ ಕಾರ್ಯವಾಗಿರುವುದು.

**ಪ್ರಶ್ನೆ**:—ಸ್ವಾಮಿ ಜಾತಿವಿವೇಕವನ್ನುಮಾಡಿ ಪರಮಾತ್ಮನು ಪೂರ್ವದಲ್ಲೇ ಅವರವರ ಧರ್ಮಗಳನ್ನು ನಿರೂಪಿಸಿರುವನು. ಆದರೆ ಕಾಲಾನುಗುಣವಾಗಿ ನಾವು ಕೆಲವು ಯೋಜನೆಗಳನ್ನು ಮಾಡಬೇಕಾದುದು ಅವಶ್ಯಕವು. ಪೂರ್ವ ಕಾಲದಲ್ಲಿ ಉಕ್ತವಾದ ಧರ್ಮಗಳ ಅನುಷ್ಠಾನವು ಈ ಕಾಲದಲ್ಲಿ ಅಶಕ್ಯವು. ಆದುದರಿಂದ ಈಗಿನ ಕಾಲಮರ್ಯಾದೆಗಳಿಗೆ ಅನುಗುಣವಾಗಿ ಕೆಲವು ಧರ್ಮಗಳನ್ನು ಬದಲಾಯಿಸುವುದಕ್ಕೆ ಸಾಧ್ಯವಾಗಲಾರದೇ? ಎಂದು ನಮ್ಮ ಪ್ರಶ್ನೆಯು.

**ಉತ್ತರ:—ಶ್ರೀಶ್ರೀಗಳವರು:**— ಧರ್ಮವೆಂದರೆ ನೀವು ಏನು ತಿಳಿದಿರುವಿರೋ?

**ವಿದ್ಯಾರ್ಥಿಗಳು**:—ಪರಮಾತ್ಮನ ಆಜ್ಞಾರೂಪವಾದ ಸ್ವವರ್ಣಾಶ್ರಮೋಚಿತರೂಪವಾದ ಶಾಸ್ತ್ರೋಕ್ತ ಆಚರಣೆಯು ಧರ್ಮವೆನ್ನಿಸುವುದೆಂದು ತಮ್ಮ ಈಗಿನ ನಿರೂಪಣೆಯಿಂದ ನಮಗೆ ತಿಳಿದುಬಂದಿರುವುದು.

**ಶ್ರೀಶ್ರೀಗಳವರು:**—ಈ ಆಚರಣೆಗಳಿಂದ ಪ್ರಾಪ್ತವಾಗುವ ಫಲವೇನು ಎಂಬುದನ್ನು ನೀವು ತಿಳಿದಿರುವಿರೋ?

**ವಿದ್ಯಾರ್ಥಿಗಳು:**—ತನ್ನ ಆಜ್ಞೆಯನ್ನು ಉಲ್ಲಂಘಿಸಿದವರಲ್ಲಿ ಪರಮಾತ್ಮನು ಕುಪಿತನಾಗಿ ನರಕಾದಿಗಳನ್ನು ಕೊಡುತ್ತಿದ್ದನು. ಪರಮಾತ್ಮನಿಗೆ

ಇಷ್ಟವಾದ ಆಚರಣೆಯಿಂದ ಇಂಥಾ ಅನರ್ಥಫಲವು ತಪ್ಪಿದುದಲ್ಲದೆ ಅವನ ಸಂತೋಷದಿಂದ ಜನ್ಯವಾದ ಮೋಕ್ಷಾದಿಪುರುಷಾರ್ಥಗಳೂ ಪ್ರಾಪ್ತವಾಗುವುವು. ಇವೆಲ್ಲವನ್ನೂ ನಾವು ನಂಬಿದ್ದೇವೆ. ಈ ವಿಷಯದಲ್ಲಿ ನಾವು ವಿವಾದ ಮಾಡುವವರಲ್ಲ. ನಾವು ಕೇಳುವುದೇನೆಂದರೆ ಕಾಲಮರ್‍ಯಾದಾನುಸಾರವಾಗಿ ಕೆಲವು ವಿಶೇಷ ಆಚರಣೆಗಳನ್ನು ನಾವು ಯಾತಕ್ಕೆ ಅವಲಂಬಿಸಬಾರದು? ಇಷ್ಟೇ ನಮ್ಮ ಪ್ರಶ್ನೆಯು.

**ಉತ್ತರಃ—ಶ್ರೀಶ್ರೀಗಳವರುಃ**—ನಿಮ್ಮ ಪ್ರಶ್ನೆಗೆ ಉತ್ತರವನ್ನೇ ನಾವು ನಿರೂಪಣೆಮಾಡುತ್ತಿದ್ದೇವೆ. ಅಡ್ಡಹಾದಿಗೆ ಹೋಗುವುವೆಂದು ತಿಳಿಯಬೇಡಿರಿ. ಇಷ್ಟು ಫಲಿತವಾಯಿತು. ಪರಮಾತ್ಮನು ಮನುಷ್ಯನ ಯಾವ ಆಚರಣೆಯಿಂದ ಸಂತೋಷಪಟ್ಟು ಸ್ವರ್ಗಾದಿ ಉತ್ತಮ ಫಲವನ್ನು ಕೊಡುವನೋ ಅದು ಧರ್ಮವು. ಮನುಷ್ಯನ ಯಾವ ಆಚರಣೆಯಿಂದ ಕುಪಿತನಾಗಿ ನರಕಾದ್ಯನರ್ಥಗಳನ್ನು ಕೊಡುವನೋ ಅದು ಅಧರ್ಮವೆನ್ನಿಸುವುದು. ಬ್ರಾಹ್ಮಣನಿಗೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳೆಂಬ ಷಟ್ಕರ್ಮಗಳು ಸ್ವಧರ್ಮವೆನಿಸುವುವು. ಯಾತಕ್ಕೆಂದರೆ ಬ್ರಾಹ್ಮಣನು ಯಜನಾದಿ ಷಟ್ಕರ್ಮ ನಿರತನಾದರೆ ಪರಮಾತ್ಮನು ಸಂತೋಷವನ್ನು ಹೊಂದಿ ಸ್ವರ್ಗಾದಿ ಉತ್ತಮ ಲೋಕದಲ್ಲಿ ಆತನಿಗೆ ಸುಖವನ್ನು ಕೊಡುವನು. ಬ್ರಾಹ್ಮಣನು ಶೂದ್ರಸೇವೆಯಲ್ಲಿ ರತನಾಗಿ, ತೊಗಲು ಮುಂತಾದ ಪದಾರ್ಥವಿಕ್ರಯಾದಿಗಳಲ್ಲಿ ಆಸಕ್ತನಾಗಿ ಶಿಖೆಯನ್ನು ಬೋಳಿಸಿಕೊಂಡು, ಅಥವಾ ಮುಂಜುಟ್ಟುಬಿಟ್ಟು ಯಜ್ಞೋಪವೀತವನ್ನು ಪರಿತ್ಯಾಗಮಾಡಿದರೆ ಪರಮಾತ್ಮನು ಸ್ವಧರ್ಮವನ್ನು ಬಿಟ್ಟು ಪರಧರ್ಮವನ್ನು ಅವಲಂಬಿಸಿದ ಆ ಬ್ರಾಹ್ಮಣನ ವಿಷಯದಲ್ಲಿ ಕುಪಿತನಾಗಿ ಆತನಿಗೆ ನರಕಾದ್ಯನರ್ಥಗಳನ್ನು ಕಲ್ಪಿಸಿ ಪುನಃ ಭೂಲೋಕದಲ್ಲಿ ದಾರಿದ್ರ್ಯಾದಿ ದುಃಖಪೂರ್ಣವಾದ ದುರ್ಯೋನಿಗಳಲ್ಲಿ ಹುಟ್ಟಿಸುವನು. ಆದುದರಿಂದ ಅವುಗಳು ಅಧರ್ಮವೆನ್ನಿಸುವುವು. ಇಷ್ಟನ್ನು ನೀವು ಒಪ್ಪುತ್ತೀರೋ ಅಥವಾ ಇನ್ನೇನಾದರೂ ತಕರಾರು ಉಂಟೋ?

**ವಿದ್ಯಾರ್ಥಿಗಳುಃ**—ಅದೆಲ್ಲಾ ನಮಗೆ ಸಮ್ಮತವೇ! ಆದರೆ ಕಾಲಾನುಗುಣವಾಗಿ ಸ್ವಾರ್ಥೋದ್ದೇಶವಿಲ್ಲದೆ ಈಗ ನಾವು ಆಚರಿಸುವ ಕರ್ಮಗಳು

ಪರಮಾತ್ಮನಿಗೆ ಸಂತೋಷಕರವಾಗುವವೋ ಇಲ್ಲವೋ ಅದನ್ನು ನಮಗೆ ತಿಳಿಸೋಣವಾಗಲಿ.

**ಉತ್ತರ:—ಶ್ರೀಶ್ರೀಗಳವರು:**—ಅದನ್ನೇ ತಿಳಿಸುತ್ತೇವೆ. ಪಟ್ಟಣದ ದೊಡ್ಡ ರತ್ನಪಡಿ ಅಂಗಡಿಗೆ ಹೋಗಿನೋಡಿದರೆ ಪ್ರತಿಯೊಂದು ಸಾಮಾನಿನ ಹೆಸರನ್ನು ಆಯಾಯ ಪೆಟ್ಟಿಗೆಯ ಮೇಲೆ ಬರೆದು ಅದರ ಮೇಲೆ ರತ್ನದ ಬೆಲೆಯನ್ನು ವರ್ತಕನು ಬರೆದಿರುವನು. "ನೂರು ರೂಪಾಯಿಗಳನ್ನು ಕೊಟ್ಟರೆ ಈ ವಜ್ರವನ್ನು ಕೊಡುತ್ತೇನೆ." "ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈ ಪದಕವನ್ನು ಕೊಡುತ್ತೇನೆ" ಎಂದು ಅದರ ಅರ್ಥವು. ನಾವು ಕಾಲಾನುಗುಣವಾಗಿ ಬಡವರಾಗಿ ನಮ್ಮ ಮನೆಯಲ್ಲಿ ಬೆಲೆಗಳನ್ನು ಬದಲಾಯಿಸಿ ನೂರು ರೂಪಾಯಿನ ವಜ್ರವನ್ನು ಹತ್ತುರೂಪಾಯಿಗಳಿಗೂ, ಲಕ್ಷರೂಪಾಯಿನ ಪದಕವನ್ನು ಸಾವಿರರೂಪಾಯಿಗೂ ಕೊಡಬೇಕೆಂದು ಹೇಳಿದರೆ ವರ್ತಕನು ಕೊಡುವನೋ?

**ವಿದ್ಯಾರ್ಥಿಗಳು:**—ನಾವು ಮನೆಯಲ್ಲಿ ಬೆಲೆಯನ್ನು ಬದಲಾಯಿಸುವುದರಿಂದ ಆಗಲಾರದು. ಕಾಲಾನುಗುಣವಾಗಿ ಧನವು ವಿರಳವಾಗಿ ವಜ್ರಗಳು ಅಧಿಕವಾದರೆ ವರ್ತಕನೇ ಧಾರಣೆಯನ್ನು ಇಳಿಸುವನು.

**ಶ್ರೀಶ್ರೀಗಳವರು:**—ವರ್ತಕನು ಧಾರಣೆಯನ್ನು ಇಳಿಸದೇನೇ ಇದ್ದರೆ?

**ವಿದ್ಯಾರ್ಥಿಗಳು:**—ವರ್ತಕನು ಧಾರಣೆಯನ್ನು ಇಳಿಸದಿದ್ದರೆ ನೂರು ರೂಪಾಯಿಯನ್ನೇ ಕೊಟ್ಟು ಅಪೇಕ್ಷೆಯಿದ್ದವರು ವಜ್ರವನ್ನೂ, ಲಕ್ಷರೂಪಾಯಿಗಳನ್ನೇ ಕೊಟ್ಟು ಅಪೇಕ್ಷೆಯಿದ್ದವರು ಪದಕವನ್ನೂ ಕೊಂಡುಕೊಳ್ಳಬೇಕು. ಬೇರೆ ಉಪಾಯವಿಲ್ಲ. ಪ್ರಕೃತದಲ್ಲಿ ದೃಷ್ಟಾಂತದಿಂದ ಏನು ತಿಳಿಯಬೇಕು?

**ಶ್ರೀಶ್ರೀಗಳವರು:**— ಇದನ್ನು ತಿಳಿಯಬೇಕು: ಶ್ರೀ ಪರಮಾತ್ಮನೂ ಒಬ್ಬ ದೊಡ್ಡ ವರ್ತಕನಂತೆ, ಬ್ರಾಹ್ಮಣನು ಯಜನಾದಿ ಷಟ್ಕರ್ಮಗಳನ್ನು ಆಚರಿಸಿದರೆ ಇಷ್ಟು ವರ್ಷಗಳ ಕಾಲಪರ್ಯಂತ ಸ್ವರ್ಗವಾಸವನ್ನೂ ಮನುಷ್ಯಲೋಕದಲ್ಲಿ ಇಷ್ಟು ಸೌಖ್ಯವನ್ನೂ ಕೊಡುತ್ತೇನೆಂದು ವೇದಾದಿಗಳಲ್ಲಿ ಪಟ್ಟಿಯನ್ನು ತೋರಿಸಿರುತ್ತಾನೆ. ಕ್ಷತ್ರಿಯನು ರಾಜ್ಯಪರಿಪಾಲನಾದಿಗಳಲ್ಲಿ ರತನಾಗಿ ಬ್ರಾಹ್ಮಣರ ಧ್ಯಾನಪ್ರವಚನಾದಿಗಳಿಗೆ ಅನುಕೂಲನಾದರೇನೇ ಸುಖಪ್ರದನಾಗಿರುತ್ತೇನೆಂದು ವಿಧಿಸಿರುತ್ತಾನೆ. ಹಾಗೆಯೇ ವೈಶ್ಯನು ವ್ಯಾಪಾರಾದಿಗಳಲ್ಲಿಯೂ,

ಶೂದ್ರನು ಉತ್ತಮವರ್ಣಸೇವೆಯಿಂದಲೂ ಜೀವನವನ್ನು ಮಾಡಬೇಕೆಂದು ವಿಧಿಸಿರುತ್ತಾನೆ. ಅನ್ಯಥಾಚರಣೆಯಿಂದ ವಜ್ರ ರತ್ನಗಳಂತಿರುವ ಉತ್ತಮ ಲೋಕವಾಸವನ್ನು ಕೊಡುವುದಿಲ್ಲವೆಂದೂ ಹೇಳಿರುತ್ತಾನೆ. ಹೀಗಿರುವಲ್ಲಿ ನಾವು ಈ ದಿವಸ ಕಾಲಾನುಗುಣವಾಗಿ ಒಂದು ಆಚರಣೆಯನ್ನು ಮಾಡಿ ಅದನ್ನು ಧರ್ಮವೆಂದು ಕರೆಯುವುದಕ್ಕಾಗುವುದೋ? ವರ್ತಕನು ವಜ್ರದ ಧಾರಣೆಯನ್ನು ಇಳಿಸಿದರೆ ಕಡಿಮೆ ಬೆಲೆಗೆ ಆ ಪದಾರ್ಥವು ನಮಗೆ ದೊರಕುವುದೇ ಹೊರತು ನಾವು ಮಾಡುವ ವಿಧಿಯಿಂದ ನಮಗೆ ಕಮ್ಮಿ ಖರೀದಿಗೆ ವಜ್ರವು ದೊರಕಲಾರದು. ಹೀಗೆಯೇ ಪರಮಾತ್ಮನು ಕನ್ಯೆಗೆ ಋತುಮತಿಯಾಗುವುದಕ್ಕಿಂತ ಮೊದಲೇ ವಿವಾಹವು ನಡೆದಿದ್ದರೆ ಆ ಕನ್ಯಾದಾನಕ್ಕೆ ದಾನಫಲವು ಬರುವುದು; ಕನ್ಯಾದಾನಮಾಡಿದವನಿಗೆ ಸ್ವರ್ಗಾದಿಲೋಕ ಪ್ರಾಪ್ತಿಯಾಗುವುದೆಂದು ವಿಧಿಸಿರುವನು. ಈದಿನ ನಾವುಗಳೆಲ್ಲರೂ ಸೇರಿ ಪ್ರೌಢ ಸ್ತ್ರೀದಾನದಿಂದಲೂ ದಾನಫಲವು ಬರಲಿ ಎಂಬ ಕಾನೂನನ್ನು ಮಾಡಿದರೆ ಅದರಿಂದ ಫಲವನ್ನು ಕೊಡುವವರು ಯಾರು?

**ವಿದ್ಯಾರ್ಥಿಗಳು:**—ಸ್ವಾಮಿ! ನಮ್ಮ ಕಾಯಿದೆಗಳಿಂದ ಧರ್ಮಗಳು ಹುಟ್ಟಲಾರವು. ನಮಗೆ ಧರ್ಮನಿರ್ಮಾಣದಲ್ಲಿ ಅಧಿಕಾರವೆಲ್ಲಿಂದ ಬಂತು? ಯಾವಾತನು ಫಲಪ್ರದನೋ ಆತನೇ ಕಾಲಾನುಗುಣವಾಗಿ ಬೇರೆ ಧರ್ಮಗಳನ್ನು ಹೇಳಿದರೆ ಅದರ ಆಚರಣೆಯಿಂದ ಅನುಕೂಲವಾಗುವುದೋ ಇಲ್ಲವೋ? ಇಷ್ಟೇ ನಮ್ಮ ಪ್ರಶ್ನಾಭಿಪ್ರಾಯವು.

**ಉತ್ತರ:— ಶ್ರೀಶ್ರೀಗಳವರು:**—ಇಷ್ಟೇ ನಿಮ್ಮ ಪ್ರಶ್ನೆಯಾಗಿರಲಿಲ್ಲ. ಇದ್ದಿದ್ದರೆ ಸಂತೋಷವೇ. ಸರ್ಕಾರದವರು ಕಾಲಾನುಗುಣವಾಗಿ ಕಾಯಿದೆಗಳನ್ನು ಮಾಡುವಂತೆ ಪರಮಾತ್ಮನೂ ಇಂಥಾ ಕಾಲದಲ್ಲಿ ಇಂಥಾ ಆಚರಣೆಗಳು ಧರ್ಮವೆನ್ನಿಸುವುವು ಎಂದು ನಿರೂಪಿಸಿರುವನೇ ಎಂದು ನಿಮ್ಮ ಪ್ರಶ್ನೆಯಾಯಿತು.

**ವಿದ್ಯಾರ್ಥಿಗಳು:**—ಹೌದು ಮಹಾಸ್ವಾಮಿ! ಅಷ್ಟೇ ನಮ್ಮ ಪ್ರಶ್ನೆಯು.

**ಉತ್ತರ:— ಶ್ರೀಶ್ರೀಗಳವರು:**—ಪರಮಾತ್ಮನೂ ಕೂಡ ಕಾಲಾನುಗುಣವಾದ ಕೆಲವು ಧರ್ಮಗಳನ್ನು ವಿಧಿಸಿರುತ್ತಾನೆ. ವಸಂತಕಾಲದಲ್ಲಿ ಛತ್ರ

ಪಾನಕಾದಿ ದಾನಗಳಿಂದ ವಿಶೇಷಫಲವೂ, ಕಾರ್ತಿಕದಲ್ಲಿ ದೀಪದಾನದಿಂದ ವಿಶೇಷಫಲವೂ, ಮಾಘಮಾಸದಲ್ಲಿ ಕಂಬಳಾದಿ ವಸ್ತ್ರದಾನದಿಂದ ವಿಶೇಷ ಫಲವೂ ಬರುವುದೆಂದು ಪರಮಾತ್ಮನು ವಿಧಿಸಿರುತ್ತಾನೆ. ಆದರೂ ಶೂದ್ರನು ಯಜನಾದಿ ಷಟ್ಕರ್ಮಗಳನ್ನು ಕಲಿಯುಗದಲ್ಲಿ ಮಾಡಿದರೆ, ಅಥವಾ ಬ್ರಾಹ್ಮಣನು ಶೂದ್ರವೃತ್ತಿಯನ್ನು ಅವಲಂಬಿಸಿದರೆ, ಫಲವನ್ನು ಕೊಡುವೆನೆಂದು ಪರಮಾತ್ಮನು ವಿಧಿಸಿರುವುದಿಲ್ಲ. ಕೃತಯುಗದಲ್ಲಿ ಧ್ಯಾನದಿಂದ ಎಷ್ಟು ಪುಣ್ಯವೋ ಅಷ್ಟೇ ಪುಣ್ಯವು ಕಲಿಯುಗದಲ್ಲಿ ಭಕ್ತಿಯಿಂದ ವಿಷ್ಣುನಾಮಸಂಕೀರ್ತನಮಾತ್ರದಿಂದ ಲಭಿಸುವುದೆಂದು ಶ್ರೀಪರಮಾತ್ಮನು ವಿಧಿಸಿರುತ್ತಾನೆ. ಅಷ್ಟೇ ಅಲ್ಲ. ಆಪತ್ಕಾಲದಲ್ಲಿ ಕೆಲವು ವಿಶೇಷ ಆಚರಣೆಗಳನ್ನೂ ಆಚರಿಸಬಹುದೆಂದು ಶ್ರೀ ಪರಮಾತ್ಮನೇ ವಿಧಿಸಿರುತ್ತಾನೆ. ಅಂಥಾ ಆಪದ್ಧರ್ಮಗಳು ಶಾಂತಿಪರ್ವದಲ್ಲಿ ಉಕ್ತವಾಗಿರುವುವು. ಸ್ಮೃತಿಗಳನ್ನು ಶ್ರವಣಮಾಡಿ ಅವುಗಳನ್ನು ನೀವು ತಿಳಿದುಕೊಳ್ಳಬಹುದು. ಆದುದರಿಂದ ಪರಮಾತ್ಮನೇ ಕಾಲ, ದೇಶ, ಅವಸ್ಥೆಗಳನ್ನು ಅನುಸರಿಸಿ ಕೆಲವು ವಿಶೇಷ ಆಚರಣೆಗಳನ್ನು ನಾಮಗ್ರಹಣಮಾಡಿ ನಿರ್ದೇಶಮಾಡಿ ಅವುಗಳ ಅನುಷ್ಠಾನದಿಂದ ಉತ್ತಮಫಲವನ್ನು ಕೊಡುವೆನೆಂದು ಪ್ರತಿಜ್ಞೆ ಮಾಡಿರುತ್ತಾನಾದುದರಿಂದ ನಾವು ಅವುಗಳನ್ನು ಆಚರಿಸಿದರೆ ಧರ್ಮವನ್ನು ಪರಿವರ್ತನೆಮಾಡಿದ ಹಾಗಾಗಲಿಲ್ಲ. ಇವು ಕೃತಯುಗದಲ್ಲಿ ಅನುಷ್ಠೇಯವಾದ ಧರ್ಮಗಳು. ಇವು ತ್ರೇತಾಯುಗದಲ್ಲಿ ಅನುಷ್ಠೇಯವಾದ ಧರ್ಮಗಳು, ಇವು ದ್ವಾಪರಯುಗದಲ್ಲಿ, ಮತ್ತು ಇವುಗಳು ಕಲಿಯುಗದಲ್ಲಿ ಅನುಷ್ಠೇಯವಾದ ಧರ್ಮಗಳು ಎಂದು ಹೇಳಿದ್ದರೆ ಅವುಗಳನ್ನು ಆಚರಿಸಿದರೆ ಪುಣ್ಯವು ಬಂದೇ ಬರುವುದು. ಪರಮಾತ್ಮನು ಅನೇಕ ಆಪದ್ಧರ್ಮಗಳನ್ನು ಮಾಡಿರುವನು. "ಪಟ್ಟಣೇ ಪಾದಮಾಚಾರಃ", "ಪಥಿ ಶೂದ್ರವದಾಚರೇತ್" ಇತ್ಯಾದಿ ವಿಧಿಗಳು ಆ ರೀತಿಯಾಗಿಯೇ ಇರುವುವು. ಆದರೆ ಎಷ್ಟು ಹುಡುಕಿನೋಡಿದರೂ ಪ್ರೌಢಸ್ತ್ರೀವಿವಾಹವು ಧರ್ಮವೆಂದಾಗಲೀ, ಅಸ್ಪೃಶ್ಯರನ್ನು ಸ್ಪರ್ಶಮಾಡುವುದೂ, ಅವರಲ್ಲಿ ಭೋಜನಾದಿ ವ್ಯವಹಾರಗಳನ್ನು ಮಾಡುವುದೂ ಧರ್ಮವಾಗುವುದೆಂದಾಗಲೀ ಪರಮಾತ್ಮನು ಹೇಳಿರುವುದಿಲ್ಲ. ಶಿಖಾರಾಹಿತ್ಯವೂ, ಯಜ್ಞೋಪವೀತರಾಹಿತ್ಯವೂ ಬ್ರಾಹ್ಮಣ್ಯವನ್ನು ನಾಶಮಾಡುವುದಿಲ್ಲವೆಂದಾಗಲೀ, ಸಂಸ್ಕಾರ

ವಿಲ್ಲದೆ ಶೌಚಾಚಾರರಹಿತನಾಗಿ ಶಾಸ್ತ್ರಶ್ರವಣಾದಿಗಳನ್ನು ಮಾಡುವುದು ಫಲಪ್ರದವಾಗುವುದೆಂದಾಗಲೀ ಹೇಳಿರುವುದಿಲ್ಲ. **ಧರ್ಮವು ಶಾಶ್ವತವು;** ಮನುಷ್ಯಾದಿಗಳಿಂದ ಪರಿವರ್ತಿಸಲ್ಪಡಲಾರದೆಂದು ಶ್ರೀಕೃಷ್ಣನು ಹೇಳಿರುತ್ತಾನೆ:—

(1) "........**ಪ್ರತಿಷ್ಠಾಹಂ**.......**ಶಾಶ್ವತಸ್ಯ ಚ ಧರ್ಮಸ್ಯ** ॥ —(14. 27.)

ಶಾಶ್ವತವಾದ ಧರ್ಮಕ್ಕೂ ನಾನು (ಶ್ರೀಕೃಷ್ಣನು) ಆಧಾರಭೂತನೂ ನಿಯಾಮಕನೂ ಆಗಿರುವೆನು.

ಅರ್ಜುನನೂ ಹೀಗೆಯೇ ಶ್ರೀಕೃಷ್ಣನನ್ನು ಸ್ತುತಿಸುತ್ತಾನೆ:—

(2) **ತ್ವಮವ್ಯಯಃ ಶಾಶ್ವತ ಧರ್ಮಗೋಪ್ತಾ** । —(11. 18.)

ಎಲೈ ಕೃಷ್ಣನೇ! ನೀನು ಅವ್ಯಯನು ಮತ್ತು ಶಾಶ್ವತವಾದ ಧರ್ಮಕ್ಕೂ ರಕ್ಷಕನಾಗಿರುತ್ತೀ.

**2.** ಧರ್ಮವು ನಿತ್ಯವೆಂಬಲ್ಲಿ ಅನಂತಯುಕ್ತಿಗಳೂ ಇರುವುವು. ಧರ್ಮವೆಂದರೆ ಪರಮಾತ್ಮನ ಕಾಯಿದೆಗಳಿಗೆ ಅನುಸಾರಿಯಾದ ವ್ಯಾಪಾರವಷ್ಟೇ! ಎಂದ ಮೇಲೆ ಪರಮಾತ್ಮನೂ ಅವನ ಪ್ರಜೆಗಳೂ ಯಾವಾಗ ಇರುವರೋ ಆಗೆಲ್ಲಾ ಕಾಯಿದೆಗಳೂ ಇದ್ದೇ ಇರುವುವು. ಸರ್ಕಾರವು ಇದ್ದಾಗಲೆಲ್ಲಾ ಸರ್ಕಾರದ ನಿಬಂಧನೆಗಳು ಆಯಾಯ ಪ್ರಜೆಗಳ ನಿಯಮನಾರ್ಥವಾಗಿ ಏರ್ಪಡುತ್ತಲೇ ಇರುವುವು. ಹೀಗೆಯೇ ಜೀವರುಗಳು ಸ್ವರೂಪೇಣ ನಿತ್ಯರಾದುದರಿಂದ ಅವರುಗಳನ್ನು ನಿಯಮಿಸುವ ಪರಮಾತ್ಮನೂ ನಿತ್ಯನಾದುದರಿಂದ, ಜೀವರುಗಳ ನಿಯಮನಾರ್ಥವಾಗಿ ಪರಮಾತ್ಮನಿಂದ ಕ್ಲೃಪ್ತವಾದ ವಿಧಿನಿಷೇಧಗಳೂ ನಿತ್ಯವಾಗಿಯೇ ಇರುವುವು ಎಂದು ಯುಕ್ತಿಸಿದ್ಧವಾಗುವುದು.

**ಪ್ರಶ್ನೆ:**—ಸ್ವಾಮಿ! ಮಹಾಪ್ರಳಯದಲ್ಲಿ ಸರ್ವವೂ ಪರಮಾತ್ಮನ ಉದರವನ್ನು ಪ್ರವೇಶಿಸಿರುವಾಗ ಧರ್ಮಗಳು ಎಲ್ಲಿರುವುವು?

**ಉತ್ತರ:— ಶ್ರೀಶ್ರೀಗಳವರು:—** ಆಗ ಧರ್ಮಗಳೂ ಪರಮಾತ್ಮನ ಮನಸ್ಸಿನಲ್ಲಿ ಅಡಗಿರುವುವು. ಪುನಃ ಸೃಷ್ಟಿಯಾದ ನಂತರ ಪರಮಾತ್ಮನು ಪೂರ್ವದಲ್ಲಿದ್ದ ನಿಯಮಗಳನ್ನೇ ಅಭಿವ್ಯಕ್ತಿ ಮಾಡುವನು. ಲೋಕದಲ್ಲಿ ರಾತ್ರಿಯಲ್ಲಿ ಎಲ್ಲರೂ ಗಾಢನಿದ್ರೆಯಿಂದ ಸುಪ್ತರಾಗಿದ್ದಾಗ ಸರ್ಕಾರದ ನಿಬಂಧನೆಗಳ ಚಾಲತಿಗೆ ಅವಕಾಶವಿಲ್ಲದೆ, ಪ್ರಾತಃಕಾಲವಾದನಂತರ ಕಾನೂನುಗಳು ಹೇಗೆ

ಚಾರಿಗೆ ಬರುವುವೋ, ಹಾಗೆಯೇ ಪ್ರಳಯದಲ್ಲಿ ಕರ್ಮಾಧಿಕಾರಿಗಳಾದ ಜೀವರುಗಳು ಪರಮಾತ್ಮನ ಉದರವನ್ನು ಪ್ರವೇಶಿಸಿದ್ದರೂ ಪುನಃ ಸೃಷ್ಟಿಯಾದ ನಂತರ ಪರಮಾತ್ಮನಿಂದ ಸ್ಥೂಲಶರೀರವನ್ನು ಹೊಂದಿ ಕರ್ಮಭೂಮಿಯಲ್ಲಿ ಹುಟ್ಟಿದ ಒಡನೆಯೇ ಪರಮಾತ್ಮನು ತನ್ನ ಧರ್ಮಗಳನ್ನು ಬ್ರಹ್ಮಾದಿ ದೇವತೆಗಳಿಗೆ ಉಪದೇಶಮಾಡಿ ಋಷ್ಯಾದಿಗಳ ಮೂಲಕ ಲೋಕದಲ್ಲಿ ಪ್ರಚಾರಪಡಿಸುತ್ತಾನೆ. ಅಂಥಾ ಶಾಶ್ವತವಾದ ವರ್ಣಾಶ್ರಮಧರ್ಮಗಳನ್ನು ಗೌರವಮಾಡಿ ಅದರಂತೆ ನಡೆಯುವವರಿಗೆ ಉತ್ಕೃಷ್ಟ ಫಲವನ್ನೂ, ಅದನ್ನು ಉಲ್ಲಂಘಿಸುವ ದುರ್ಮತಿಗಳಿಗೆ ನರಕವಾಸಾದಿ ಭಯಂಕರವಾದ ಫಲವನ್ನೂ ಕೊಡುವನು.

3. **ಪ್ರಶ್ನೆ**:—ಸ್ವಾಮಿ! ಇಹಲೋಕದಲ್ಲಿ ರಾಜ್ಯದ ನಿಬಂಧನೆಗಳನ್ನು ತಿಳಿಯುವುದಕ್ಕೆ ಸಹಾಯಕವಾದ **ಗೆಜಿಟ್** ಮೊದಲಾದ ಗ್ರಂಥಗಳಿರುವುವು. ಆದರೆ ಪರಮಾತ್ಮನ ಆಜ್ಞಾರೂಪವಾದ ಧರ್ಮಗಳನ್ನು ಯಾವ ಪ್ರಮಾಣಗಳಿಂದ ತಿಳಿಯಬೇಕು?

**ಉತ್ತರ**:—**ಶ್ರೀಶ್ರೀಗಳವರು**:–ಈ ವಿಷಯದಲ್ಲಿ ಶಾಸ್ತ್ರಗಳು ಪ್ರಮಾಣವಾಗಿರುವುವು. ಶ್ರೀಕೃಷ್ಣನು ಹೇಳುತ್ತಾನೆ:—

(1) **ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ।**
**ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥**
—(16. 24.)

ಎಲೈ ಅರ್ಜುನನೇ! ಯಾವ ಕಾರಣದಿಂದ ಇದು ಕರ್ತವ್ಯಕರ್ಮವು, ಇದು ತ್ಯಾಜ್ಯವಾದ ಕರ್ಮವು ಎಂಬ ವ್ಯವಸ್ಥೆಯಾಗಬೇಕಾದರೆ ನಿನಗೆ ಶಾಸ್ತ್ರವು ಪ್ರಮಾಣವೋ ಅದನ್ನತಿಕ್ರಮಿಸಿದರೆ ದೋಷವು ಇರುವುದೋ ಆ ಕಾರಣದಿಂದ ವಿವೇಕಿಯಾದ ನೀನು ಶಾಸ್ತ್ರತಾತ್ಪರ್ಯವಿಷಯೀಭೂತವಾದ ಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮಗಳನ್ನು ತಿಳಿದುಕೊಂಡು ಕರ್ಮಾನುಷ್ಠಾನಗಳನ್ನು ಮಾಡಬೇಕು.

ನಿತ್ಯಧರ್ಮಗಳನ್ನು ಶಾಸ್ತ್ರದಿಂದ ತಿಳಿಯಬೇಕೆಂದು ಪರಮಾತ್ಮನು ಹೇಳಿರುವನು.

**ಋಗ್ಯಜುಃ ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಂ।**
**ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥**
**ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ।**

ಎಂಬ ಪ್ರಮಾಣಾನುಸಾರವಾಗಿ ಋಗಾದಿ ನಾಲ್ಕು ವೇದಗಳೂ ಭಾರತ ತುೂಲರಾಮಾಯಣಗಳೂ ಪಂಚರಾತ್ರಾಗಮವೂ ಮತ್ತು ಇವುಗಳಿಗೆ ಅವಿರುದ್ಧವಾದ ಮತ್ತು ಅನುಕೂಲವಾದ ಸ್ಮೃತಿಗ್ರಂಥಗಳೂ ಶಾಸ್ತ್ರಗಳೆನ್ನಿಸುವುವು. ಇವುಗಳು ಧರ್ಮಜ್ಞಾಪಕ ಪ್ರಮಾಣಗಳಾಗಿರುವುದರಿಂದ ಇವುಗಳಿಂದ ಧರ್ಮಾಧರ್ಮಗಳನ್ನು ತಿಳಿದುಕೊಂಡು ವಿವೇಕಿಯು ಅಧರ್ಮಗಳನ್ನು ಪರಿತ್ಯಾಗಮಾಡಿ ಧರ್ಮಮಾರ್ಗವನ್ನು ಪ್ರಯತ್ನಪೂರ್ವಕವಾಗಿ ಅವಲಂಬಿಸಬೇಕು. ಶ್ರೀಕೃಷ್ಣನು ಹೇಳಿರುತ್ತಾನೆ:—

(2) **ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥**—(16. 23.)

**ಅರ್ಥ :**—ಯಾವಾತನು ಶಾಸ್ತ್ರವಿಧಿಯನ್ನು ಪರಿತ್ಯಾಗಮಾಡಿ ಸ್ವೇಚ್ಛಾನುಸಾರವಾಗಿ ಆಚರಿಸುತ್ತಾನೆಯೋ ಆತನು ಜ್ಞಾನಾದಿ ಸಿದ್ಧಿಯನ್ನು ಹೊಂದುವುದಿಲ್ಲ. ಇಹದಲ್ಲಿಯೂ ಸುಖವನ್ನು ಹೊಂದುವುದಿಲ್ಲ ಮತ್ತು ಪರಲೋಕದಲ್ಲಿಯೂ ಉತ್ತಮಗತಿಯನ್ನು ಹೊಂದುವುದಿಲ್ಲ.

**4. ಪ್ರಶ್ನೆ :**—ಸ್ವಾಮಿ! ಶಾಸ್ತ್ರಾದಿಗಳನ್ನು ಓದದೆ ಅಜ್ಞನಾಗಿರುವವನು ಸಂಧ್ಯಾವಂದನಾದಿಗಳನ್ನು ಮಾಡುವುದಕ್ಕೆ ಕಾರಣಗಳನ್ನು ತಿಳಿಯಲಾರದೆ ನಿತ್ಯಕರ್ಮಗಳನ್ನು ಪರಿತ್ಯಾಗಮಾಡಿದರೆ ಅವನ ಗತಿಯೇನು?

**ಉತ್ತರ :—ಶ್ರೀಶ್ರೀಗಳವರು :**— ರಾಜ್ಯದಲ್ಲಿರುವ ಕಾನೂನುಗಳನ್ನು ತಿಳಿಯದೆ ಅಜ್ಞನಾಗಿರುವವನು ವಿಹಿತಕಾಲದಲ್ಲಿ ತೆರಿಗೆಯನ್ನು ಕೊಡದೆ ಮನೆಯಲ್ಲಿಯೇ ಕುಳಿತುಕೊಂಡಿದ್ದರೆ, ಅಥವಾ ಇಲ್ಲಿ ಹೇಸಿಗೆ ಮಾಡಬಾರದು ಎಂದು ಬರೆದಿರುವ ಸ್ಥಳದಲ್ಲಿ ಕಶ್ಮಲಮಾಡಿದರೆ ಆತನಿಗೆ ಆಗುವ ಗತಿಯೇನು?

**ವಿದ್ಯಾರ್ಥಿಗಳು :**— ರಾಜದಂಡವು ತಪ್ಪಲಾರದು. ಆದರೆ ಅಜ್ಞನಿಗೆ ಶಿಕ್ಷೆಯು ಕಡಿಮೆಯಾಗಿ ವಿಧಿಸಲ್ಪಡುವುದು. ಲೋಕದಲ್ಲಿ ಪ್ರತಿಯೊಬ್ಬ ಪ್ರಜೆಗೂ ತನ್ನ ಸರ್ಕಾರದಿಂದ ವಿಧಿಸಲ್ಪಟ್ಟಿರುವ ಶಾಸನಗಳ ಜ್ಞಾನವನ್ನು ಹೊಂದುವುದು ಕರ್ತವ್ಯವಾಗಿರುವುದು. ಅವಶ್ಯಜ್ಞೇಯವಾದ ಕಾಯಿದೆಗಳ ಅಜ್ಞಾನವೂ ಒಂದು ದೋಷವೇ. "Ignorance is no plea for excuse" ಎಂದರೆ ಅಜ್ಞಾನವು ಅಪರಾಧಮನ್ನಣೆಗೆ ಕಾರಣವಾಗಲಾರದೆಂಬ ನ್ಯಾಯಾನುಸಾರವಾಗಿ ರಾಜ್ಯಾಧಿಕಾರಿಗಳು ಅಜ್ಞತೆಯಿಂದ ತಪ್ಪು ಮಾಡಿದವರಿಗೂ ಶಿಕ್ಷೆಯನ್ನೇ ಮಾಡುವರು.

**ಉತ್ತರ:—ಶ್ರೀಶ್ರೀಗಳವರು**:—ನೀವು ನ್ಯಾಯಮಾರ್ಗವನ್ನವಲಂಬಿಸಿ ವಾದಮಾಡುವಿರಾದುದರಿಂದ ನಿಮಗೆ ಶಾಸ್ತ್ರಾರ್ಥವನ್ನು ತಿಳಿಸಿಕೊಡಲು ನಮಗೆ ಕಷ್ಟವಿಲ್ಲ. ನಮ್ಮ ನಾರಾಯಣನೂ ಇಂಥಾ ಮಹಾಪ್ರಭುವೇ. ಶ್ರೀಪರಮಾತ್ಮನು ಧರ್ಮಾಧರ್ಮಗಳನ್ನು ವಿಧಾನಮಾಡಿ ಅದನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವ ಮನೋಬುದ್ಧಿಗಳನ್ನು ಅಧಿಕಾರಿಗೆ ಕೊಟ್ಟು, ಶಾಸ್ತ್ರಜ್ಞರಾದ ಗುರುಗಳನ್ನೂ, ವೇದಾದಿ ಶಾಸ್ತ್ರಗಳನ್ನೂ ಏರ್ಪಡಿಸಿ, ವೇದೋಕ್ತಧರ್ಮಾನುಷ್ಠಾನಕ್ಕೆ ಅವಶ್ಯಕವಾದ ಜ್ಞಾನೇಂದ್ರಿಯಗಳನ್ನೂ, ಕರ್ಮೇಂದ್ರಿಯಗಳನ್ನೂ ಕೊಟ್ಟಿರುವನು. ಹೀಗಿರುವಲ್ಲಿ ಜಗತ್ಪ್ರಭುವಾದ ಪರಮಾತ್ಮನ ನಿಬಂಧನೆಗಳನ್ನು ತಿಳಿಯದೆ ಅವನ ಅಧೀನವಾದ ಪ್ರಪಂಚದಲ್ಲಿ ಅವನಿಂದ ವಿಹಿತವಾದ ವರ್ಣಾಶ್ರಮೋಚಿತವಾದ ಧರ್ಮಾನುಷ್ಠಾನಗಳನ್ನು ಮಾಡದೆ ವಾಸಮಾಡುವುದಕ್ಕಿಂತ ಬೇರೆ ರಾಜದ್ರೋಹವು ಇನ್ನು ಎಲ್ಲಿರುವುದು? ಆದುದರಿಂದ ಅಜ್ಞಾನದಿಂದ ಪಾಪಮಾಡಿದರೂ ನರಕಾದ್ಯನರ್ಥಗಳು ಸಂಭವಿಸುವುವು. ಶ್ರೀಕೃಷ್ಣನು ಹೇಳುತ್ತಾನೆ:—

(1) **ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।**
**ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥**
—(4. 40.)

"ಶಾಸ್ತ್ರಜ್ಞಾನರಹಿತನಾದವನು ಮತ್ತುಶಾಸ್ತ್ರಕ್ಕೆ ವಿರುದ್ಧವಾದ ನಿಶ್ಚಯವುಳ್ಳವನು, ಮತ್ತು ಶಾಸ್ತ್ರಾರ್ಥವಿಷಯಕಸಂಶಯಮನಸ್ಕನಾದವನು ನರಕಾದಿಗಳನ್ನು ಹೊಂದುತ್ತಾನೆ. ಸಂಶಯಾತ್ಮಕನಾದವನಿಗೆ ಇಹಲೋಕದಲ್ಲಿ ಸುಖವಿಲ್ಲ ಮತ್ತು ಪರಲೋಕದಲ್ಲಿ ಗತಿಯಿಲ್ಲ.

**5.** ಈ ಪ್ರಕಾರವಾಗಿ 1. ಆದಿಸೃಷ್ಟಿಕಾಲದಲ್ಲಿಯೇ ಶ್ರೀಮನ್ನಾರಾಯಣನು ಗುಣವಿಭಾಗವನ್ನು ನಿಮಿತ್ತಮಾಡಿ ಭಿನ್ನ ಭಿನ್ನ ಜಾತಿರೂಪದಿಂದ ಬ್ರಾಹ್ಮಣಾದಿ ವರ್ಣಗಳನ್ನು ಸೃಷ್ಟಿಮಾಡಿ ಅವರಿಗೆ ಭಿನ್ನ ಭಿನ್ನವಾದ ಎಂದರೆ ಪರಸ್ಪರ ಅನನುಷ್ಠೇಯವಾದ ವಿಲಕ್ಷಣ ಕರ್ಮಗಳನ್ನೂ ಜೀವನೋಪಾಯಗಳನ್ನೂ ವಿಧಾನಮಾಡಿರುವುದರಿಂದಲೂ, 2. ಸ್ವಧರ್ಮ ಪರಧರ್ಮ ಎಂದು ಪೃಥಕ್ ನಾಮನಿರ್ದೇಶವನ್ನು ಮಾಡಿ ವಿಲಕ್ಷಣ ಧರ್ಮಗಳನ್ನು ಬ್ರಾಹ್ಮಣಾದಿ ಚತುರ್ವರ್ಣಗಳಿಗೂ ಬೇರೆ ಬೇರೆ ಪ್ರಕಾರವಾಗಿ ಹೇಳಿರುವುದರಿಂದಲೂ

3. ಮತ್ತು ಇದ್ದ ಜಾತಿಯನ್ನು ಕಳೆದುಕೊಂಡು ಮತ್ತಷ್ಟು ಭ್ರಷ್ಟನಾಗಿ ನರಕಾದ್ಯನರ್ಥಗಳನ್ನು ಹೊಂದದಂತೆ ಯಾವ ಕರ್ಮ ಅಥವಾ ಜ್ಞಾನರೂಪವಾದ ಉಪಾಯದಿಂದಲೂ ಒಂದು ಜಾತಿಯವನು ಮತ್ತೊಂದು ವರ್ಣದಲ್ಲಿ ಬೆರೆತುಹೋಗುವುದು ಅಸಾಧ್ಯವಾದುದರಿಂದಲೂ, 4. ವರ್ಣಸಾಂಕರ್ಯವು ಸ್ತ್ರೀಯರ ವ್ಯಭಿಚಾರಮೂಲಕವಾಗಿಯೇ ಬರುವುದೆಂದು ಬ್ರಾಹ್ಮಣಾದಿ ವರ್ಣಗಳು ಪರಸ್ಪರ ಅತ್ಯಂತ ಭಿನ್ನವಾದ, ಕರ್ಮಾದಿಗಳಿಂದ ಪರಸ್ಪರ ತಾದಾತ್ಮ್ಯವನ್ನು ಹೊಂದದ ಜಾತಿಗಳೆಂಬಲ್ಲಿ ಯುಕ್ತಿಯನ್ನು ಶ್ರೀಕೃಷ್ಣನು ಸೂಚಿಸಿರುವುದರಿಂದಲೂ ಪ್ರತಿಯೊಬ್ಬ ಮುಮುಕ್ಷುವೂ ಪರಮಾತ್ಮನಿಂದ ವಿಹಿತವಾದ ಸ್ವಸ್ವವರ್ಣಾಶ್ರಮೋಚಿತವಾದ ಕರ್ಮಾನುಷ್ಠಾನದಲ್ಲಿ ಪರಧರ್ಮಪರಿತ್ಯಾಗಪೂರ್ವಕವಾಗಿ ತತ್ಪರನಾಗಬೇಕು. 5. ಪರಂತು ಸ್ವವರ್ಣಾಶ್ರಮೋಚಿತ ಧರ್ಮಗಳು ಸೃಷ್ಟಿಕರ್ತನಾದ, ನಿಖಿಲ ಜಗದೀಶ್ವರನಾದ ಶ್ರೀಮನ್ನಾರಾಯಣನ ಆಜ್ಞಾರೂಪವಾದುದರಿಂದಲೂ, 6. ಶಾಶ್ವತವಾದ ಧರ್ಮವನ್ನು ಆಧುನಿಕರಾದ ಮನುಷ್ಯರು ಪರಿವರ್ತನೆಮಾಡಿ ಕಾಲೋಚಿತವಾದ ಕಾಮಚಾರಗಳಿಂದ ಫಲವನ್ನು ಹೊಂದುವುದು ಅಸಾಧ್ಯವಾದುದರಿಂದಲೂ, 7. ಕರ್ಮಫಲಪ್ರದನಾದ ವಾಸುದೇವನೇ ಆಯಾಯ ಕಾಲಗಳಲ್ಲಿ ಆಚರಿಸಬೇಕಾದ ಧರ್ಮಗಳನ್ನು ಸ್ಪಷ್ಟವಾಗಿ ಚತುರ್ವೇದಗಳಲ್ಲಿಯೂ, ಇತಿಹಾಸಪುರಾಣಗಳಲ್ಲಿಯೂ, ಇರುವಂತೆ ನಾನಾ ಅವತಾರಗಳಿಂದ ತನ್ನ ಶಿಷ್ಯರಾದ ಬ್ರಹ್ಮಾದಿದೇವತೆಗಳ ಮುಖಾಂತರವಾಗಿ ಲೋಕದಲ್ಲಿ ಪ್ರಕಾಶಪಡಿಸಿ, ತಾನೂ ನಾನಾ ಅವತಾರಗಳಲ್ಲಿ ನಿದರ್ಶನಾರ್ಥವಾಗಿ ಧರ್ಮಾನುಷ್ಠಾನಗಳನ್ನು ಮಾಡಿ ತೋರಿಸಿರುವುದರಿಂದಲೂ, 8. ಪರಧರ್ಮಾವಲಂಬಿಗಳೆಲ್ಲರೂ ಪೂರ್ವದಲ್ಲಿ ದುಃಖದಲ್ಲಿ ಮಗ್ನರಾಗಿರುವರೆಂಬ ಚರಿತ್ರಪರಾಮರ್ಶೆಯಿಂದಲೂ ಧೀರರಾದ ಸಜ್ಜನರು ತಾವು ಎಷ್ಟೇ ಪ್ರಗಲ್ಭರಾದರೂ, ಎಂದರೆ ಅನ್ಯವರ್ಣಾಶ್ರಮೋಚಿತವಾದ ಕರ್ಮಗಳನ್ನು ಎಷ್ಟು ಸಾಂಗವಾಗಿ ಆಚರಿಸಲು ಶಕ್ತರಾದರೂ ಕೂಡ ಭಯಂಕರವಾದ ತಾಮಸ ವ್ಯಾಪಾರದಲ್ಲಿ ಪ್ರವೃತ್ತರಾಗದೆ ಸ್ವಸ್ವವಿಹಿತ ಧರ್ಮಾನುಷ್ಠಾನಗಳಿಂದಲೇ ಪರಮಾತ್ಮನನ್ನು ತೋಷಣಪಡಿಸಿ, ಇಂದ್ರಿಯನಿಗ್ರಹಾದಿ ದ್ವಾರಾ ಚಿತ್ತೈಕಾಗ್ರತೆಯನ್ನು ಸಂಪಾದಿಸಿ ಭಗವದ್ಧ್ಯಾನವನ್ನು ಮಾಡುವ ಅತ್ಯುತ್ತಮ ವ್ಯಾಪಾರದಲ್ಲಿ ತಮ್ಮ ಬುದ್ಧಿಬಲವನ್ನು ನಿಯೋಗಿಸಬೇಕು. 9. ಕಿಂಚ ಶೂದ್ರಾದಿಗಳಿಗೂ

ಕೂಡ ಸ್ವಧರ್ಮವು ಜಘನ್ಯವೃತ್ತಿಯಾದರೂ (ನೀಚವಾಗಿ ಕಂಡರೂ) ಭಕ್ತಿ ಶ್ರದ್ಧಾದಿಗಳಿಂದ ಆಚರಿಸಲ್ಪಟ್ಟರೆ ಉತ್ತಮವರ್ಣಸ್ಥನ ಉತ್ಕೃಷ್ಟವ್ಯಾಪಾರದಂತೆ ಅಂತ್ಯದಲ್ಲಿ ಉತ್ತಮ ಫಲಪ್ರದವಾಗುವುದೆಂಬುದು ಸ್ವಕರ್ಮದಲ್ಲಿ ಆದರತೆಯನ್ನು ಹುಟ್ಟಿಸತಕ್ಕ ಮತ್ತೊಂದು ಯುಕ್ತಿಯು. 10. ಪರಂತು ಧರ್ಮ ಪರಿತ್ಯಾಗಮಾಡುವುದರಲ್ಲಿ ಸಹಾಯಕವಾದ ಯುಕ್ತಿಯು ಒಂದೂ ಇರುವುದಿಲ್ಲ. ಕರ್ಮಾಕರಣದಿಂದ ವಿಷ್ಣುದ್ರೋಹವು ಪ್ರಾಪ್ತವಾಗುವುದು. ಅದರ ಫಲವು ನರಕಾದ್ಯನರ್ಥಗಳು. ಅಷ್ಟೇ ಅಲ್ಲ. ಕರ್ಮಭೂಮಿಯಾದ ಭರತ ಖಂಡದಲ್ಲಿ ಸಾಧನಾನುಕೂಲವಾದ ಮನುಷ್ಯದೇಹವನ್ನು ಹೊಂದಿ ಸ್ವಧರ್ಮ ವೇನೆಂಬುದನ್ನು ವಿಚಾರಿಸಿ ತಿಳಿದುಕೊಳ್ಳದಿರುವುದೇ ಮಹಾ ದೈವದ್ರೋಹವು. ಶ್ರದ್ಧಾರಹಿತನಾದ ಮತ್ತು ವಿಷಯಪ್ರಪಂಚದಲ್ಲಿ ಮತ್ತನಾದ ಅಜ್ಞನೂ, ಸಂಶಯಾತ್ಮಕಚಿತ್ತನೂ, ತತ್ತ್ವಬುಭುತ್ಸಾರಹಿತನೂ ಸ್ವಪಿತೃಗಳಿಗೂ ದುಃಖ ಪ್ರದನಾಗಿ, ಸ್ವನಾಶಾರ್ಥವಾಗಿಯೇ ಜನಿಸಿದ ಕುಲಪಾಂಸನು ಎಂದು ಶ್ರೀ ಕೃಷ್ಣನು ಸ್ಪಷ್ಟವಾಗಿ ಹೇಳಿರುತ್ತಾನೆ.

**(1) ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥**
— (3. 16.)

**ಅರ್ಥ:—**ಕೇವಲ ಇಂದ್ರಿಯ ವಿಷಯಗಳಲ್ಲಿ ಆಸಕ್ತನಾದವನು ಪಾಪ ಸಂಪಾದನೆಗಾಗಿಯೇ ಭೂಮಿಯಲ್ಲಿ ಹುಟ್ಟಿದವನು ; ಎಲೈ ಪಾರ್ಥನೇ! ಅವನ ಜೀವನವು ನಿರರ್ಥಕವು.

ಇಂಥಾ ಸ್ವಧರ್ಮಚ್ಯುತರು ಭೂಭಾರಭೂತರಾದ ದುರ್ಜನರೆಂದೂ, ಇವರುಗಳೇ ವಿಷ್ಣುದ್ವೇಷಿಗಳೆಂದೂ, ಇವರುಗಳ ಸಂಹಾರಾರ್ಥವಾಗಿ ತಾನೂ ದೇವತೆಗಳಿಂದ ಸಹಿತನಾಗಿ ಆಯಾಯ ಕಾಲಗಳಲ್ಲಿ ಅವತರಿಸುವನೆಂದೂ ಸಹ ಶ್ರೀ ಕೃಷ್ಣನು ಉದ್ಘೋಷಿಸಿರುತ್ತಾನೆ. ಆದುದರಿಂದ ಸಕಲ ಸಾತ್ವಿಕರೂ ಪರಮಾತ್ಮನು ಕೊಟ್ಟಿರುವ ಮನಸ್ಸು ದೇಹೇಂದ್ರಿಯಾದಿಗಳನ್ನು ಅವನಿಂದ ನಿಯತವಾದ ವಿಧಿಗಳಿಗೆ ಅನುಸಾರವಾಗಿ ಉಪಯೋಗಿಸಿ ಸ್ವಕರ್ಮಾನುಷ್ಠಾನಜನಿತವಾದ ಶ್ರವಣಾದಿ ಜ್ಞಾನಸಾಧನೋಪಯೋಗಿಯಾದ ಪರಮಾತ್ಮನ ಪ್ರಸಾದಕ್ಕೆ ಪಾತ್ರರಾಗಬೇಕೆಂದು ಪುನಃ ಪುನಃ ನಾವೂ ನಿರೂಪಿಸಿರುತ್ತೇವೆ.

# 24. ಇಪ್ಪತ್ತನಾಲ್ಕನೆಯ ಅಂಶವು.

## ತ್ಯಾಗಸ್ವರೂಪ ನಿರೂಪಣೆಯು.

**1. ಶ್ರೀಶ್ರೀಗಳವರು:—**ಭಗವತ್ಪ್ರಾಪ್ತಿಸಾಧಕವಾದ ಧ್ಯಾನಕಾರಣವಾದ ವಿಶಿಷ್ಟ ಕರ್ಮಯೋಗದಲ್ಲಿ ತ್ಯಾಗವು ಒಂದು ಅಂಶವೆಂದು ನಾವು ಪೂರ್ವದಲ್ಲಿಯೇ ನಿರೂಪಿಸಿರುತ್ತೇವೆ. ತ್ಯಾಗಶಬ್ದಾರ್ಥವನ್ನು ಶ್ರೀಕೃಷ್ಣನೇ ಹೇಳುತ್ತಾನೆ:—

(1) **ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥**

—(18. 2.)

ಸರ್ವ ಕರ್ಮಗಳಿಗೂ ಭಗವತ್ಪ್ರಸಾದಕ್ಕಿಂತ ಅನ್ಯವಾದ ಫಲವನ್ನು ಅಪೇಕ್ಷಿಸದೆ ಸರ್ವ ಕರ್ಮಫಲಗಳನ್ನೂ ಪರಮಾತ್ಮನಲ್ಲಿ ಸಮರ್ಪಿಸುವುದೇ ತ್ಯಾಗಶಬ್ದಾರ್ಥವೆಂದು ಜ್ಞಾನಿಗಳು ಹೇಳುತ್ತಾರೆ.

ಸಫಲವಾದ ಸಕಲಕರ್ಮಯೋಗಗಳಿಗೂ ತ್ಯಾಗವು ಅತ್ಯವಶ್ಯಕವಾದ ಅಂಗವೆಂದು ತಿಳಿಯಬೇಕು. ಎಂದರೆ ಮುಮುಕ್ಷುವು ತಾನು ಆಚರಿಸಿದ ಕರ್ಮದ ಫಲವನ್ನು ಶ್ರೀ ಪರಮಾತ್ಮನಲ್ಲಿ ಸಮರ್ಪಿಸಬೇಕು, ಎಂದರ್ಥವು. ವೈಷ್ಣವ ಸಂಪ್ರದಾಯವೂ ಹೀಗೆಯೇ ಇರುತ್ತದೆ. ಸಕಲ ಸಜ್ಜನರೂ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಮಾಡಿದ ನಂತರ, ಕೈಯಲ್ಲಿ ನೀರುತುಂಬಿಕೊಂಡು "**ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ**" ಇತ್ಯಾದಿ ಮಂತ್ರಗಳನ್ನು ಪಠಿಸಿದ ನಂತರ ತಮ್ಮ ಕರ್ಮಫಲಗಳನ್ನು ಶ್ರೀಪರಮಾತ್ಮನ ಪಾದದಲ್ಲಿ ಸಮರ್ಪಿಸುವರು. ಮತ್ತು ತ್ಯಾಗಶಬ್ದಾರ್ಥವನ್ನು ಚೆನ್ನಾಗಿ ವಿವರಿಸುವ ಈ ಶ್ಲೋಕವನ್ನು ಪಠಿಸುವರು:—

**ಕಾಯೇನ ವಾಚಾ ಮನಸೇಂದ್ರಿಯೈರ್ವಾ**
**ಬುದ್ಧ್ಯಾತ್ಮನಾ ವಾಽನುಸೃತಃ ಸ್ವಭಾವಂ ।**
**ಕರೋಮಿ ಯದ್ಯತ್ಸಕಲಂ ಪರಸ್ಮೈ**
**ನಾರಾಯಣಾಯೇತಿ ಸಮರ್ಪಯಾಮಿ ॥**

**ಅರ್ಥವು:—**ಎಲೈ ಪರಮಾತ್ಮನೇ! ನಾನು ನನ್ನ ಶರೀರದಿಂದಲೂ, ವಾಗಿಂದ್ರಿಯದಿಂದಲೂ, ಮನಸ್ಸಿನಿಂದಲೂ, ಇತರ ಜ್ಞಾನಕರ್ಮೇಂದ್ರಿಯ

ಗಳಿಂದಲೂ, ಮತ್ತು ಬುದ್ಧಿಯಿಂದಲೂ ಚಿತ್ತದಿಂದಲೂ ನನ್ನ ಸ್ವಭಾವಾನುಗುಣ ವಾಗಿ ಸ್ವತಂತ್ರನಾದ ನಿನ್ನ ಪ್ರೇರಣೆಯಿಂದ ಏನೇನು ನಿನ್ನ ಸೇವೆಯನ್ನು ಮಾಡುತ್ತೇನೆಯೋ ಅವೆಲ್ಲವನ್ನೂ ಪರಬ್ರಹ್ಮನಾದ ನಾರಾಯಣನಾದ ನಿನ ಗೋಸ್ಕರ ಸಮರ್ಪಿಸುತ್ತೇನೆ.

ಇದು ನಿಜಭಕ್ತನ ಪ್ರತಿಜ್ಞೆಯು. ಶ್ರೀಕೃಷ್ಣನು ಇಂಥಾ ಆಚರಣೆಯು ಅವಶ್ಯಕರ್ತವ್ಯವೆಂದು ಅರ್ಜುನನಿಗೆ ಬೋಧಿಸಿರುತ್ತಾನೆ.

2. **ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥**
**ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।**
**ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥**
—(9. 27-28.)

ಹೇ ಕೌಂತೇಯ! ನೀನು ಯಾವ ಯಾವ ಸತ್ಕರ್ಮವನ್ನು ಮಾಡು ತ್ತೀಯೋ, ಯಾವುದನ್ನು ಭೋಜನಮಾಡುತ್ತೀಯೋ, ಯಾವುದನ್ನು ಹೋಮ ಮಾಡುತ್ತೀಯೋ, ಯಾವುದನ್ನು ದಾನಮಾಡುತ್ತೀಯೋ ಮತ್ತು ಯಾವ ತಪಸ್ಸನ್ನು ಆಚರಿಸುತ್ತೀಯೋ ಅವುಗಳೆಲ್ಲವನ್ನೂ ನನ್ನಲ್ಲಿ ಸಮರ್ಪಣೆಮಾಡು ವವನಾಗು. ಏವಂ= ನೀನು ಹಾಗೆ ಮಾಡುವುದರಿಂದ, ಶುಭಾಶುಭ ಫಲಾ ತ್ಮಕವಾದ ಸಂಸಾರಬಂಧದಿಂದ ನೀನು ಮುಕ್ತನಾಗುತ್ತೀಯೆ. (ಕ್ರಮೇಣ ಜ್ಞಾನವನ್ನು ಹೊಂದಿ ಮೋಕ್ಷವನ್ನು ಹೊಂದುತ್ತೀಯೆ ಎಂದು ಭಾವವು. ಅದನ್ನೇ ವಿವರಿಸುತ್ತಾನೆ:—) ಸಂನ್ಯಾಸದಿಂದಲೂ, ವಿಹಿತ ಕರ್ಮಾನುಷ್ಠಾನ ದಿಂದಲೂ ಯುಕ್ತವಾದ ಬುದ್ಧಿಯುಳ್ಳವನಾಗಿ (ಅಪರೋಕ್ಷ ಜ್ಞಾನದ್ವಾರಾ) ವಿಮುಕ್ತನಾಗಿ ನನ್ನನ್ನು ಹೊಂದುತ್ತೀಯೆ.

**2.** ಶ್ರೀಕೃಷ್ಣನ ಈ ವಾಕ್ಯಗಳಿಂದ ತ್ಯಾಗಶಬ್ದಾರ್ಥವು ಸಿದ್ಧವಾಗು ವುದಲ್ಲದೆ ತ್ಯಾಗವು ಯಾವ ಪ್ರಕಾರದಿಂದ ಮೋಕ್ಷಫಲಪ್ರದವಾಗುವುದೋ ಅಂಥಾ ಕ್ರಮವೂ ವಿದಿತವಾಗುವುದು. ಸಕಲ ಕರ್ಮಫಲಗಳನ್ನೂ ತ್ಯಾಗ ಮಾಡುವವನು ಸಂನ್ಯಾಸದಿಂದಲೂ, ವಿಹಿತಕರ್ಮಾನುಷ್ಠಾನದಿಂದಲೂ, ಸಾಂಖ್ಯ ರೂಪವಾದ ಪರೋಕ್ಷತತ್ವನಿಶ್ಚಯದಿಂದಲೂ ಯುಕ್ತನಾಗಿ ಕ್ರಮೇಣ

ಮುಕ್ತನಾಗುವನು. ಇದರಿಂದ ತ್ಯಾಗವು **ಸಾಕ್ಷಾತ್** ಜ್ಞಾನಾದಿ ಪುರುಷಾರ್ಥಪ್ರದವಾಗಲಾರದೆಂದು ನಿಶ್ಚಿತವಾಗುವುದು. ಮತ್ತೇನೆಂದರೆ ಸಂನ್ಯಾಸ, ಯೋಗ, ಸಾಂಖ್ಯಗಳೆಂಬ ಇತರ ಮೂರು ಅಂಶಗಳಿಂದ ಸಹಿತವಾಗಿ ವಿಶಿಷ್ಟ ಕರ್ಮಯೋಗದಲ್ಲಿ ಅಂತರ್ಭೂತವಾಗಿ ಜ್ಞಾನಕ್ಕೂ ಅಪರೋಕ್ಷಜ್ಞಾನಕ್ಕೂ ಕಾರಣವಾಗಿ ಮೋಕ್ಷಪ್ರದವಾಗುವುದು.

ವಿಶಿಷ್ಟಕರ್ಮಯೋಗದಲ್ಲಿ ಅಂತರ್ಭಾವವನ್ನು ಹೊಂದಿದ ಕೇವಲ ತ್ಯಾಗವು ಸಾಕ್ಷಾತ್ಸತ್ವ ಶುದ್ಧಿಗೆ (ಸಂನ್ಯಾಸಕ್ಕೆ) ಕಾರಣವಾಗಿ, ಕ್ರಮೇಣ ಚತುರಂಗ ಸಮನ್ವಿತವಾದ ಕರ್ಮಯೋಗದ ನಿಷ್ಪತ್ತಿಗೆ ಕಾರಣವಾಗಿ ನಂತರ ಜ್ಞಾನಕ್ಕೆ ಕಾರಣವಾಗುವುದು. ಸಾಂಖ್ಯ, ಸಂನ್ಯಾಸ, ಕರ್ಮಾನುಷ್ಠಾನಗಳಿಂದ ಸಹಿತವಾದ ತ್ಯಾಗವೇ ಕ್ಷಿಪ್ರಫಲಪ್ರದವಾಗುವುದು; ಅದೇ ಉತ್ತಮ ತ್ಯಾಗವು. ಶ್ರೀ ಕೃಷ್ಣನು ಹೇಳುತ್ತಾನೆ:—

**(1) ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।**
**ತ್ಯಾಗೀ ಸತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥**

—(18. 10.)

**ಅರ್ಥ:—** ದುಷ್ಟಕರ್ಮವು ಪಾಪಕಾರಣವೆಂದು ಪರಿತ್ಯಾಗಮಾಡದೆ ಪುಣ್ಯಕಾರಣವೆಂದು ಸ್ನೇಹಮಾಡದೇ (ಎಂದರೆ ಕೇವಲ ಭಗವತ್ಪ್ರೀತಿಕಾರಣವೆಂದು ಪುಣ್ಯಕರ್ಮವನ್ನೂ ಭಗವತ್ಕೋಪಕಾರಣವೆಂದು ದುಷ್ಕರ್ಮತ್ಯಾಗವನ್ನೂ ಮಾಡುವ) ಉತ್ತಮ ಅಂತಃಕರಣದಿಂದ ಯುಕ್ತನಾದ ಭಗವತ್ತತ್ವ ಜ್ಞಾನವುಳ್ಳ ಪರಾಪರತತ್ವವಿಷಯದಲ್ಲಿ ಸಂಶಯರಹಿತನಾದ ಅಧಿಕಾರಿಯು ಉತ್ತಮ ತ್ಯಾಗಿಯು. (ಇಂಥಾ ಕರ್ಮಯೋಗಿಯೇ ಶೀಘ್ರದಲ್ಲಿಯೇ ಜ್ಞಾನವನ್ನು ಹೊಂದುವನೆಂದು ಭಾವವು.)

**3.** ಇದು ಕರ್ಮಯೋಗದಲ್ಲಿ ಅಂತರ್ಭಾವವನ್ನು ಹೊಂದಿದ ತ್ಯಾಗದ ಮಹಿಮೆಯು. ಶ್ರೀಕೃಷ್ಣನು ತ್ಯಾಗದಿಂದ ಸಹಿತವಾದ ಧ್ಯಾನವೂ ಕೂಡ ಅತ್ಯಂತ ಅತಿಶಯವಾದ ಫಲವನ್ನು ಕ್ಷಿಪ್ರದಲ್ಲಿ ಕೊಡಿಸುವುದೆಂದು ಸೂಚಿಸಿರುತ್ತಾನೆ:—

(1) **ಶ್ರೇಯೋ ಹಿ ಜ್ಞಾನಮಭ್ಯಾಸಾತ್ ಜ್ಞಾನಾದ್ಧ್ಯಾನಂ ವಿಶಿಷ್ಯತೇ ।**
**ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಂ ॥**
—(12. 12.)

"ಅಜ್ಞಾನಪೂರ್ವಕವಾದ ಅಭ್ಯಾಸಕ್ಕಿಂತ ತತ್ವಜ್ಞಾನವು ಶ್ರೇಷ್ಠವು. ಕೇವಲ ಜ್ಞಾನಕ್ಕಿಂತಲೂ ಜ್ಞಾನಸಹಿತವಾದ ಧ್ಯಾನವು ಶ್ರೇಷ್ಠವು. ಕೇವಲ ಧ್ಯಾನಕ್ಕಿಂತಲೂ ಕರ್ಮಫಲತ್ಯಾಗದಿಂದ ಸಹಿತವಾದ ಧ್ಯಾನವು ಶ್ರೇಷ್ಠವು. ಕರ್ಮಫಲಾಪೇಕ್ಷಾರಹಿತವಾದ ಫಲತ್ಯಾಗ ಸಹಿತವಾದ ಧ್ಯಾನಕ್ಕಿಂತ ಅಪರೋಕ್ಷ ಜ್ಞಾನವು ಶ್ರೇಷ್ಠವು. ಅಪರೋಕ್ಷಜ್ಞಾನವಾದ ನಂತರ ಮೋಕ್ಷವು ಆಗುತ್ತದೆ."

ಈ ರೀತಿಯಲ್ಲಿ ಕರ್ಮಫಲತ್ಯಾಗವು ಧ್ಯಾನಕ್ಕೂ ತನ್ನ ಮೇಳಸದಿಂದ ಶ್ರೇಷ್ಠತ್ವ ಸಂಪಾದನೆಯಲ್ಲಿ ಕಾರಣವಾಗುವುದಾದರೆ ಅದು ಎಷ್ಟು ಮಹಿಮೋಪೇತವಾಗಿರುವುದೆಂಬುದು ಊಹೆಯಿಂದ ತಿಳಿಯುವ ಅಂಶವಾಗಿರುವುದು.

ಧ್ಯಾನಾತ್ಕರ್ಮಫಲತ್ಯಾಗಃ ಎಂಬಲ್ಲಿ ತ್ಯಾಗಶಬ್ದಾರ್ಥವು ಕೇವಲ ಕರ್ಮಫಲಸಮರ್ಪಣೆಯಲ್ಲ, ಮತ್ತೇನೆಂದರೆ ಕರ್ಮಫಲಾಪೇಕ್ಷಾರಾಹಿತ್ಯಪೂರ್ವಕವಾದ ಕರ್ಮಫಲ ಸಮರ್ಪಣೆಯೆಂದು ತಿಳಿಯಬೇಕು. ಎಂದರೆ ಸಂನ್ಯಾಸಪೂರ್ವಕವಾದ ಫಲಸಮರ್ಪಣೆಯು. ಇಂಥಾ ಫಲಸಮರ್ಪಣೆಯೇ ಉತ್ತಮವಾದುದು. ಸಕಾಮವಾದ ಫಲಸಮರ್ಪಣೆಯು ಬಲವಂತದಿಂದ ಕೊಡಲ್ಪಟ್ಟ ದಾನದಂತೆ ಅತ್ಯಲ್ಪ ಫಲಪ್ರದವಾಗುವುದು.

ಈ ಪ್ರಕಾರವಾಗಿ ಶ್ರೀಕೃಷ್ಣನು ಅನ್ವಯ ರೀತಿಯಿಂದ ತ್ಯಾಗದಿಂದ ಉಕ್ತ ಕ್ರಮವಾಗಿ ಮೋಕ್ಷಾದಿ ಪುರುಷಾರ್ಥಗಳು ಸಂಭವಿಸುವುವೆಂದು ನಿರೂಪಿಸಿ, ವ್ಯತಿರೇಕದಿಂದಲೂ ಎಂದರೆ ತ್ಯಾಗರಾಹಿತ್ಯದಿಂದ ಪ್ರಾಪ್ತವಾಗುವ ಅನರ್ಥವನ್ನು ಹೇಳುವುದರಿಂದಲೂ ಕೂಡ ಸಂಸಾರತರಣರೂಪವಾದ ಕಾರ್ಯದಲ್ಲಿ ತ್ಯಾಗವು ಎಷ್ಟು ಅವಶ್ಯಕವಾದ ಉಪಾಯವೆಂಬುದನ್ನು ತೋರಿಸುತ್ತಾನೆ :—

(1) **ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಂ ।**
**ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್॥**
—(18. 12.)

**ಅರ್ಥ:**–ಕರ್ಮಫಲಗಳನ್ನು ಪರಮಾತ್ಮನಲ್ಲಿ ನಿಷ್ಕಾಮತೆಯಿಂದ ಸಮರ್ಪಿಸದವರಿಗೆ ನರಕಾದಿಗಳು, ಸ್ವರ್ಗಾದಿಗಳು, ಮತ್ತು ಮಿಶ್ರವಾದ ಮಾನುಷಾದಿ ಜನ್ಮರೂಪವಾದ ತ್ರಿವಿಧಕರ್ಮಫಲವೂ ಬರುತ್ತಲೇ ಇರುವುದು. ಸಂನ್ಯಾಸಿನಾಂ= ತ್ಯಾಗ ಉಳ್ಳವರಿಗೆ ಎಂದರೆ ಫಲೇಚ್ಛಾರಹಿತರಾಗಿ ಕರ್ಮಫಲಗಳನ್ನು ಪರಮಾತ್ಮನಲ್ಲಿ ಸಮರ್ಪಿಸುವವರಿಗೆ, ಪೂರ್ವೋಕ್ತ ತ್ರಿವಿಧವಾದ ಕರ್ಮಫಲಗಳು ಸರ್ವಥಾ ಬರಲಾರವು. (ಅವರಿಗೆ ಮೋಕ್ಷವು ಬರುವುದೆಂದು ಭಾವವು.)

---

## 25. ಇಪ್ಪತ್ತೈದನೆಯ ಅಂಶವು.

### ತ್ಯಾಗ (ಮುಂದುವರಿಸಿದ್ದು)

### ಸಾತ್ವಿಕತ್ಯಾಗದ ಮಹಿಮೆಯು.

1. ಸ್ವರೂಪೇಣ ಕರ್ಮಪರಿತ್ಯಾಗವೇ ಮುಮುಕ್ಷುವಿನಿಂದ ಅನುಷ್ಠೇಯವಾದ ಕರ್ತವ್ಯಧರ್ಮವೆಂದು ಹೇಳುವ ಮಿಥ್ಯಾಜ್ಞಾನಮೂಲಕವಾದ ಅದ್ವೈತಮತವನ್ನು ಶ್ರೀಕೃಷ್ಣನು ಸಯುಕ್ತಿಕವಾಗಿ ಖಂಡನೆ ಮಾಡಿ ಸಕಲ ಸಜ್ಜನಾನುಷ್ಠೇಯವಾದ ಸಾತ್ವಿಕ ತ್ಯಾಗಸ್ವರೂಪವನ್ನು ಹದಿನೆಂಟನೆಯ ಅಧ್ಯಾಯದಲ್ಲಿ ನಿರೂಪಿಸಿರುತ್ತಾನೆ:—

(1) **ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।**
**ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥**
**ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।**
**ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಸ್ಸಂಪ್ರಕೀರ್ತಿತಃ ॥**
**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥**
**ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।**
**ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥**
—(18. 3-6.)

**ಅರ್ಥವು:**—ಕೆಲವರು ಜ್ಞಾನಿಗಳು (ಜನನ ಮರಣರೂಪವಾದ ಸಂಸಾರಕ್ಕೆ ಕಾರಣವಾಗುವುದೇ ಮುಂತಾದ) ದೋಷಯುಕ್ತವಾದ ಕರ್ಮವು ಬಿಡಲ್ಪಡಬೇಕೆಂದು ಹೇಳುತ್ತಾರೆ. ಇನ್ನು ಕೆಲವು ಜ್ಞಾನಿಗಳು, ಯಜ್ಞ ದಾನ ತಪಸ್ಸೇ ಮುಂತಾದ ಕರ್ಮಗಳು ಪರಿತ್ಯಾಗಾರ್ಹವಲ್ಲವೆಂದು ಹೇಳುವರು. ಎಲೈ ಭರತಶ್ರೇಷ್ಠನೇ! ತ್ಯಾಗ ವಿಷಯದಲ್ಲಿ ನನ್ನ ನಿಶ್ಚಯವನ್ನು ಕೇಳು:— ತ್ಯಾಗವು ಮೂರು ಪ್ರಕಾರವೆಂದು ಹೇಳಲ್ಪಟ್ಟಿರುವುದು. ಯಜ್ಞವು, ದಾನವು, ತಪಸ್ಸು, ಮುಂತಾದ ಕರ್ಮಗಳು ತ್ಯಾಜ್ಯವಲ್ಲ; ಅವುಗಳು ಅವಶ್ಯವಾಗಿ ಅನುಷ್ಠೇಯವಾದವುಗಳು. ಯಜ್ಞ, ದಾನ, ತಪಸ್ಸುಗಳು ಪಂಡಿತರಿಗೂ ಪಾಪನಾಶಕವಾದುವುಗಳು. (ಕೆಲವು ಜ್ಞಾನಿಗಳು ದೋಷಯುಕ್ತವಾದುದರಿಂದ ಕರ್ಮವು ಪರಿತ್ಯಾಜ್ಯವೆಂದು ಹೇಳಿರುವರಲ್ಲವೇ, ಎಂದು ಶಂಕಿಸಿದರೆ ಅವರ ಅಭಿಪ್ರಾಯವನ್ನು ವಿವರಿಸಿ ಶಾಸ್ತ್ರನಿಶ್ಚಿತ ಸಿದ್ಧಾಂತವನ್ನು ಶ್ರೀಕೃಷ್ಣನು ತಿಳಿಸುತ್ತಾನೆ:–) ಎಲೈ ಪಾರ್ಥನೇ! ಪೂರ್ವೋಕ್ತಯಜ್ಞಾದಿ ಕರ್ಮಗಳೂ ಕೂಡ ಕರ್ತೃತ್ವಾಭಿಮಾನ ಮಮತಾಭಿಮಾನ ರೂಪವಾದ ಸ್ನೇಹವನ್ನು ಪರಿತ್ಯಾಗ ಮಾಡಿ, ಫಲ ಸ್ನೇಹವನ್ನು ಬಿಟ್ಟು, ಫಲಾನಿ ತ್ಯಕ್ತ್ವಾ= ಕರ್ಮಫಲವನ್ನು ಭಗವಂತನಲ್ಲಿ ಸಮರ್ಪಿಸಿ ಕರ್ತವ್ಯಾನಿ = ಅವಶ್ಯ ಅನುಷ್ಠೇಯವಾದುವುಗಳು ಎಂದು ನನ್ನ ವ್ಯವಸ್ಥಿತವಾದ ಮತವು.

ಈ ಪ್ರಕಾರವಾಗಿ ಕರ್ಮಫಲಾಪೇಕ್ಷೆಯಿಂದ ರಹಿತವಾದ ಮನಸ್ಸಿನಿಂದ ಮಾಡಲ್ಪಟ್ಟ ಕರ್ಮದ ಫಲವನ್ನು ಭಗವಂತನಲ್ಲಿ ಸಮರ್ಪಿಸುವುದೇ ನಿಜವಾದ ತ್ಯಾಗವು; ಅದ್ವೈತಭಾಷ್ಯದಲ್ಲಿ ನಿರೂಪಿತವಾದ ಕರ್ಮಸ್ವರೂಪದ ತ್ಯಾಗವು ನಿಜವಾದ ತ್ಯಾಗವಲ್ಲ, ಎಂಬುದು ಶ್ರೀಕೃಷ್ಣನ ಸಿದ್ಧಾಂತವೆಂದು ಸ್ಪಷ್ಟವಾಯಿತು.

**2.** ಕರ್ಮವನ್ನು ನಿಶ್ಶೇಷವಾಗಿ ಪರಿತ್ಯಾಗ ಮಾಡುವುದು ಅಶಕ್ಯವೆಂದು ಶ್ರೀಕೃಷ್ಣನು ಹೇಳಿರುತ್ತಾನೆ:—

(1) **ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।**
**ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥**

—(18. 11.)

"ಎಲೈ ಪಾರ್ಥನೇ! ಸಕಲ ಕರ್ಮಗಳನ್ನೂ ನಿಶ್ಶೇಷವಾಗಿ ಪರಿತ್ಯಾಗ ಮಾಡುವುದು ಯಾವ ಪ್ರಾಣಿಗೂ ಶಕ್ಯವಲ್ಲ. (ಆದುದರಿಂದ ಇದು ನಿಜವಾದ ತ್ಯಾಗವಲ್ಲವೆಂದು ಭಾವವು, ಯಥಾರ್ಥವಾದ ತ್ಯಾಗವೇನೆಂದರೆ :—) ಯಾವಾತನು ಕರ್ಮಫಲಾಪೇಕ್ಷೆಯನ್ನು ಪರಿತ್ಯಾಗಮಾಡುವನೋ, ಮತ್ತು ಕರ್ಮಫಲಗಳನ್ನು ಪರಮಾತ್ಮನಲ್ಲಿ ಸಮರ್ಪಿಸುವನೋ ಆತನೇ ನಿಜವಾದ ತ್ಯಾಗವುಳ್ಳವನೆನ್ನಿಸುವನು."

**3.** ವಿಧ್ಯುಕ್ತಕರ್ಮವನ್ನು ಪರಿತ್ಯಾಗ ಮಾಡುವುದು ತಾಮಸವೆಂದೂ ಶ್ರೀಕೃಷ್ಣನು ಹೇಳುತ್ತಾನೆ :—

(1) **ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।**
**ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥**

—(18. 7.)

"ವಿಧಿವಿಹಿತವಾದ ವರ್ಣಾಶ್ರಮೋಚಿತವಾದ ಕರ್ಮಕ್ಕೆ ಸ್ವರೂಪೇಣ ತ್ಯಾಗವು ಉಚಿತವಲ್ಲ. (ಅದ್ವೈತಮತವೇ ಮುಂತಾದ ಮತಗಳಿಂದ ಪ್ರಸಂಜಿತವಾದ) ವಿಪರೀತಜ್ಞಾನದಿಂದ ವಿಹಿತಕರ್ಮವನ್ನು ಪರಿತ್ಯಾಗಮಾಡುವುದು ತಾಮಸವೆಂದು ಹೇಳಲ್ಪಟ್ಟಿರುವುದು."

**4.** ಹೀಗೆಯೇ ಶ್ರೀಕೃಷ್ಣನು ರಾಜಸ ತ್ಯಾಗವನ್ನು ನಿಂದಿಸಿ, ಸಾತ್ವಿಕವಾದ ಎಂದರೆ ಮುಕ್ತಿಯೋಗ್ಯರಾದ ಸಜ್ಜನರಿಂದ ಅನುಷ್ಠಿಸಲ್ಪಡುವ ಶಾಸ್ತ್ರಸಮ್ಮತವಾದ ತ್ಯಾಗವನ್ನು ವರ್ಣಿಸುತ್ತಾನೆ :—

(1) **ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।**
**ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥**
**ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।**
**ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಸ್ಸಾತ್ವಿಕೋ ಮತಃ ॥**

—(18. 8-9)

**ಅರ್ಥವು:**—(ಕರ್ಮಾಚರಣೆಯು ಅವಶ್ಯವೆಂದು ತಿಳಿದು) ಕರ್ಮಾಚರಣೆಯು ದುಃಖರೂಪವಾಗಿರುವುದೆಂದು ಶರೀರಾಯಾಸ ಭೀತಿಯಿಂದ ಕರ್ಮಪರಿತ್ಯಾಗ ಮಾಡುವವನು ರಾಜಸತ್ಯಾಗವನ್ನು ಮಾಡಿದವನಾಗಿ (ಭಗವತ್ಪ್ರೀತ್ಯಾದಿ ರೂಪವಾದ) ತ್ಯಾಗದ ಫಲವನ್ನು ಹೊಂದುವುದಿಲ್ಲ. ವಿಹಿತ ಕರ್ಮಾನು

ಷ್ಠಾನವು ಅವಶ್ಯವಾಗಿ ಆಚರಿಸಲ್ಪಡತಕ್ಕದ್ದೆಂಬ ಬುದ್ಧಿಪೂರ್ವಕವಾಗಿ, ಕರ್ತೃತ್ವ ಮಮತಾಭಿಮಾನಪರಿತ್ಯಾಗಪೂರ್ವಕವಾಗಿ, ಮತ್ತು ಫಲಾಪೇಕ್ಷಾರಾಹಿತ್ಯ ಪೂರ್ವಕವಾಗಿ ಮಾಡಲ್ಪಟ್ಟ ಕರ್ಮದ ಫಲವನ್ನು ಭಗವಂತನಲ್ಲಿ ಸಮರ್ಪಣೆ ಮಾಡೋಣವೆಂಬುದು ಯಾವುದೋ ಅದು ಸಾತ್ವಿಕ ತ್ಯಾಗವೆಂದು ಹೇಳಲ್ಪಡುವುದು.

5. **ಪ್ರಶ್ನೆ:**—ಸ್ವಾಮಿ! ಕರ್ಮಫಲಗಳಲ್ಲಿ ಅಪೇಕ್ಷೆಯನ್ನು ಪರಿತ್ಯಾಗ ಮಾಡಿ ನಿಷ್ಕಾಮವಾಗಿ ಕರ್ಮವನ್ನು ಆಚರಿಸಿದ ಮೇಲೆ ಕರ್ಮಫಲವನ್ನು ಈಶ್ವರನಲ್ಲಿ ಸಮರ್ಪಿಸುವುದರಲ್ಲಿ ಕಾರಣವೇನು? ಈಶ್ವರನಿಂದ ನಾವು ಯಾವ ಫಲವನ್ನೂ ಕೋರುವುದಿಲ್ಲವಷ್ಟೇ?

**ಉತ್ತರ:–ಶ್ರೀಶ್ರೀಗಳವರು:**—ಈಶ್ವರನ ಪ್ರೀತಿ, ಜ್ಞಾನ, ಭಕ್ತಿ, ವೈರಾಗ್ಯಾದಿ ಫಲಗಳನ್ನು ಕೋರುವಿರೋ ಇಲ್ಲವೋ?

**ವಿದ್ಯಾರ್ಥಿಗಳು:**—ಕೋರುತ್ತೇವೆ.

**ಶ್ರೀಶ್ರೀಗಳವರು**—ಸರಿ, ಹಾಗಿದ್ದರೆ ಕರ್ಮಫಲವನ್ನು ಈಶ್ವರನಿಗೆ ಸಮರ್ಪಿಸುವುದು ಉಚಿತವೇ. ನಿಷ್ಕಾಮನಾಗಿ ಕರ್ಮಮಾಡೋಣವೆಂದರೆ ಕ್ಷುದ್ರವಾದ, ಅನಿತ್ಯವಾದ ಸ್ವರ್ಗ, ದಾರಾ, ಪುತ್ರಧನಾದಿರೂಪವಾದ ಫಲಗಳನ್ನು ಬಯಸದೆ ಉತ್ತಮವಾದ ಶಾಶ್ವತವಾದ ಮೋಕ್ಷರೂಪ ಫಲವನ್ನೂ ಭಗವತ್ಪ್ರೀತಿರೂಪವಾದ ಮಹಾಫಲವನ್ನೂ ಅಪೇಕ್ಷಿಸಬೇಕೆಂದು ಅರ್ಥವು. ಅಲ್ಪ ಆಶೆಗಳನ್ನು ಮಾಡಬಾರದು, ದೊಡ್ಡ ಆಶೆಗಳನ್ನು ಮಾಡಬೇಕು ಎಂದು ಶಾಸ್ತ್ರದ ಹಿತೋಪದೇಶವು. ಸಾಮಾನ್ಯ ಜನರು ತಾವು ಮಾಡತಕ್ಕ ಕರ್ಮಗಳಿಗೆ ಕ್ಷಿಪ್ರದಲ್ಲಿ ಬರುವ ಸ್ವರ್ಗಸಂತಾನಾದಿ ಫಲವನ್ನು ಕೋರುವರು. ನಿಷ್ಕಾಮಿಗಳಾದ ಮುಮುಕ್ಷುಗಳು ಬಹುಕಾಲ ಪರ್ಯಂತವೂ ಕಾಯುವುದರಲ್ಲಿ ಸಮರ್ಥರಾಗಿ ಮಹತ್ಫಲವನ್ನೇ ಸಾಧಿಸುವರು. ಇಷ್ಟೇ ವಿನಹ ಪ್ರಯೋಜನವನ್ನು ಅಪೇಕ್ಷಿಸದೆ ಕರ್ಮವನ್ನು ಮಾಡುವುದು ಅಸಂಭಾವಿತವು.

ಇದರ ಮೇಲೆ ಸಕಾಮನಾಗಲೀ ನಿಷ್ಕಾಮನಾಗಲೀ ಸರ್ವರೂ ಪರಮಾತ್ಮನ ಅಧೀನರು. ಕರ್ಮಫಲಪ್ರದಾತನು ಶ್ರೀಕೃಷ್ಣನೇ ಆಗಿರುವನು. ಆದುದರಿಂದ ಕರ್ಮಗಳನ್ನು ನಾವು ಆತನ ಆರಾಧನರೂಪವಾಗಿ ಆಚರಿಸಿ

ಪರಮಾತ್ಮನು ಇವುಗಳನ್ನು ಸ್ವೀಕರಿಸಿ ಅನುಗ್ರಹೋನ್ಮುಖನಾಗಲಿ ಎಂಬ ಅನುಸಂಧಾನಪೂರ್ವಕವಾಗಿ ಆತನ ಪಾದದಲ್ಲಿ ಸಮರ್ಪಿಸಬೇಕು. ಅನ್ಯಥಾ ಕರ್ಮಫಲಗಳನ್ನು ದೈತ್ಯರು ಕದ್ದೊಯ್ಯುವರು ಎಂದು ಪ್ರಮಾಣಗಳಲ್ಲಿ ಉಕ್ತವಾಗಿರುವುದು. * ಆದುದರಿಂದ ನಾವು ಗಳಿಸಿದ ಹಣವನ್ನು ಬ್ಯಾಂಕಿನಲ್ಲಿ ಇಡುವಂತೆ ನಮ್ಮ ಕರ್ಮಫಲಗಳನ್ನು ಪರಮಾತ್ಮನಲ್ಲಿ ಅರ್ಪಿಸಬೇಕು. ಸಕಾಮನಾಗಿ ಅರ್ಪಿತವಾದುದನ್ನು ಸ್ವರ್ಗಾದಿ ಪ್ರತಿಫಲರೂಪವಾಗಿ ಪರಮಾತ್ಮನು ಕೊಟ್ಟುಬಿಡುವನು. ನಿಷ್ಕಾಮವಾಗಿ ಅರ್ಪಿತವಾದ ಕರ್ಮವನ್ನು ಆತನು ತಾನೇ ಸ್ವೀಕರಿಸಿ ಅವುಗಳಿಗೆ ಕ್ಷುದ್ರಫಲಗಳನ್ನು ಪ್ರತಿಫಲರೂಪವಾಗಿ ಕೊಡದೆ ಉತ್ತಮವಾದ ಜ್ಞಾನಾದಿ ಫಲಗಳನ್ನು ಕೊಡುವನು. ಅನರ್ಪಿತವಾದ ಕರ್ಮವು ಮಾತ್ರ ಭಸ್ಮದಲ್ಲಿ ಮಾಡಿದ ಹೋಮದಂತೆ ನಿರರ್ಥಕವಾಗುವುದು.

6. **ಪ್ರಶ್ನೆ:—** ಸ್ವಾಮಿ! ತ್ಯಾಗವು ಯಾವ ಪ್ರಕಾರವಾಗಿ ಬ್ರಹ್ಮಜ್ಞಾನಕ್ಕೆ ಸಾಧಕವಾಗುವುದು ?

**ಉತ್ತರ:—ಶ್ರೀಶ್ರೀಗಳವರು:—**ನಾವು ಹಿಂದೆಯೇ ನಿರೂಪಿಸಿರುತ್ತೇವೆ. ತ್ಯಾಗಾದಿಗಳು ಅಂತಃಕರಣ ಶುದ್ಧಿದ್ವಾರಾ ಪರಂಪರಯಾ ಜ್ಞಾನಕಾರಣವೆನ್ನಿಸುವುವು. ಅದರಲ್ಲಿಯೂ ತ್ಯಾಗವು ಮುಮುಕ್ಷುವಿಗೆ ಜ್ಞಾನಸಾಧನಮಾರ್ಗದಲ್ಲಿ ಪ್ರಾಪ್ತವಾಗುವ ಪ್ರಥಮ ಸೋಪಾನವು ಎಂದು ತಿಳಿಯಬೇಕು. ಜ್ಞಾನರಹಿತನಾಗಿ, ಚಿತ್ತಶುದ್ಧಿರಹಿತನಾಗಿ, ನಿಷ್ಕಾಮ ಕರ್ಮಾನುಷ್ಠಾನವನ್ನು

---

* ಇದು ಹರಿವಂಶದಲ್ಲಿ ಶ್ರೀವಾಮನ ದೇವರು ಬಲಿನಾಮಕ ದೈತ್ಯರಾಜನಿಗೆ ಹೇಳಿದ ಮಾತುಗಳು:—

**ವೇದೋಕ್ತಂ ಯೇ ಪರಿತ್ಯಜ್ಯ ಧರ್ಮಮನ್ಯಂ ಪ್ರಕುರ್ವತೇ ।**
**ತತ್ಸರ್ವಂ ತವ ದೈತ್ಯೇಂದ್ರ ಮತ್ಪ್ರಸಾದಾದ್ಭವಿಷ್ಯತಿ ॥**

**ಅರ್ಥವು:—** ವೇದೋಕ್ತವಿಧಿಯನ್ನು ಪರಿತ್ಯಜಿಸಿ (ವಿಧ್ಯುಕ್ತವಾಗಿ ಕರ್ಮಮಾಡದೆ, ಪರಮಾತ್ಮನಲ್ಲಿ ಸಮರ್ಪಿಸದೆ) ವಿಪರೀತ ರೀತಿಯಲ್ಲಿ ಕರ್ಮವನ್ನು ಆಚರಿಸಿದರೆ ಅದೆಲ್ಲವೂ ಎಲೈ ಬಲಿಯೇ ! ನನ್ನ ಪ್ರಸಾದದಿಂದ ನಿನಗೆ ಬಂದುಸೇರುತ್ತದೆ.

ಉತ್ತಮ ಕಲ್ಪದಿಂದ ಮಾಡುವುದಕ್ಕೆ ಅಸಮರ್ಥನಾಗಿ ಶ್ರದ್ಧಾಮಾತ್ರದಿಂದ ಕೂಡಿದ ಮುಮುಕ್ಷುವು ಜ್ಞಾನವನ್ನು ಸಂಪಾದಿಸುವದಕ್ಕಾಗಿ ಪ್ರಥಮತಃ ಯಾವ ಉಪಾಯವನ್ನು ಆಚರಿಸಬೇಕು ಎಂದು ನೀವು ಹಿಂದೆ ಕೇಳಿದ್ದಿರಿ. ಅದಕ್ಕೆ ಇದು ಉತ್ತರವು:—ಶ್ರದ್ಧಾವಂತನಾದ ಮುಮುಕ್ಷುವು ಎಷ್ಟೇ ಕಲುಷಿತಚಿತ್ತನಾದರೂ ಪರಮಾತ್ಮನನ್ನು ಸ್ಮರಿಸುತ್ತಾ, ತನಗೆ ಯಾವ ದೇವತೆಯಲ್ಲಿ ವಿಶ್ವಾಸಬರುವುದೋ ಅಂಥಾ ದೇವತೆಯನ್ನೇ ಭಜಿಸಿ, ಅಥವಾ ಸಹಜವಾಗಿ ತನಗೆ ಅವಕಾಶ ಒದಗಿದಂತೆ ಏನೇನು ಪುಣ್ಯಕರ್ಮಗಳನ್ನು ಮಾಡುವನೋ ಅವುಗಳನ್ನೆಲ್ಲಾ **"ಶ್ರೀಕೃಷ್ಣಾರ್ಪಣಮಸ್ತು"** ಎಂದು ಭಗವಂತನಲ್ಲಿ ಸಮರ್ಪಿಸಬೇಕು. ಇದು ಸಾಮಾನ್ಯತ್ಯಾಗವು. ಇದರಿಂದ ಪರಮಾತ್ಮನು ಪ್ರಸನ್ನನಾಗಿ ಚಿತ್ತಶುದ್ಧಿಯನ್ನು ಕೊಡುವನು. ಅನಂತರ ಶುದ್ಧಮನಸ್ಸಿನಿಂದ ನಿಷ್ಕಾಮವಾದ ಕರ್ಮವನ್ನು ನಿಯತವಾದ ರೀತಿಯಲ್ಲಿ ಅಧಿಕವಾಗಿ ಮಾಡಿ ಪರಮಾತ್ಮನಲ್ಲಿ ಸಮರ್ಪಿಸಿದರೆ, ಭಗವದನುಗ್ರಹದಿಂದ ಮೋಕ್ಷಹೇತುಭೂತವಾದ ವಿಧ್ಯುಕ್ತಶ್ರವಣಾದಿಗಳಿಗೆ ಅವಕಾಶವು ಪ್ರಾಪ್ತವಾಗುವುದು. ಅನಂತರ ಧ್ಯಾನಾದಿ ಉಪಾಸನೆಯಿಂದ ಜೀವನು ಮುಕ್ತನಾಗುವನು.

ಶ್ರೀಕೃಷ್ಣನು ಹೇಳುತ್ತಾನೆ:—

(1) **ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।**
**ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥**
—(12. 11.)

**ಅರ್ಥ:**—ಎಲೈ ಅರ್ಜುನನೇ! ನೀನು ನಿರಂತರ ಭಗವದುಪಾಸನೆಯನ್ನು ಮಾಡು. ಅದು ಅಸಾಧ್ಯವಾದರೆ ಪ್ರತ್ಯಾಹಾರಾದಿ ಪ್ರಯತ್ನಗಳನ್ನೂ ಮನನಾದಿ ಪ್ರಯತ್ನವನ್ನೂ ಮಾಡುವವನಾಗು. ಅವುಗಳು ಸಾಧ್ಯವಲ್ಲದಿದ್ದರೆ ನಿಷ್ಕಾಮ ಕರ್ಮವನ್ನು ಅಧಿಕವಾಗಿ ಅನುಷ್ಠಾನಮಾಡು. ಚಿತ್ತೈಕಾಗ್ರತೆಯಿಂದ ಕರ್ಮಾಚರಣೆಯನ್ನು ಮಾಡುವುದಕ್ಕೂ ನೀನು ಅಸಮರ್ಥನಾದರೆ, ನೀನು ನಿನಗೆ ಇಷ್ಟವಾದ ದೇವತಾಪೂಜಾದಿಗಳನ್ನು ಮಾಡಿ, ಅಥವಾ ನೀನು ಅವುಗಳನ್ನು ಅವಶ್ಯವಾಗಿ ಮಾಡುವ ವಿಧ್ಯುಕ್ತ ನಿತ್ಯನೈಮಿತ್ತಿಕ ಕರ್ಮಗಳನ್ನೇ ನನ್ನ ಪ್ರೀತ್ಯರ್ಥವಾಗಲೆಂದು ಮಾಡಿ, ಯತಾತ್ಮವಾನ್=ಮನಸ್ಸನ್ನು ನನ್ನಲ್ಲಿ ಇಡೋಣವೆಂಬ ಯತ್ನಪೂರ್ವಕವಾಗಿ ಸಕಲಕರ್ಮಫಲಗಳನ್ನೂ ನನ್ನಲ್ಲಿ ಸಮರ್ಪಿಸು.

ಈ ಪ್ರಕಾರವಾಗಿ ಸಾಮಾನ್ಯವಾದ ತ್ಯಾಗವು ಮೋಕ್ಷೋಪಾಯದಲ್ಲಿ ಪ್ರಥಮ ಸೋಪಾನವೆಂದು ಕರೆಯಲ್ಪಡುವುದು. ಜ್ಞಾನಾದಿಗಳು ಪ್ರಾಪ್ತವಾದನಂತರ ಅತ್ಯಂತ ನಿಷ್ಕಾಮತೆಯಿಂದ ಸಹಿತವಾಗಿ ಆಚರಿಸಲ್ಪಟ್ಟ ತ್ಯಾಗವು ಕ್ಷಿಪ್ರದಲ್ಲಿ ಬ್ರಹ್ಮಾಪರೋಕ್ಷಜ್ಞಾನಕ್ಕೆ ಸಾಧನವಾಗುವುದು. ಹೇಗಿದ್ದರೂ ಸಾಂಖ್ಯ, ಸಂನ್ಯಾಸ, ಕರ್ಮಾನುಷ್ಠಾನ, ತ್ಯಾಗಗಳೆಂಬ ನಾಲ್ಕು ಅಂಶಗಳೂ, ಒಂದು ಯಂತ್ರದ ನಾಲ್ಕು ಭಾಗಗಳಂತೆ, ಸಮಗ್ರವಾಗಿ ಮಿಳಿತವಾಗಿಯೇ ಧ್ಯಾನಕ್ಕೆ ಕಾರಣವಾಗಿ ಶ್ರೀಹರಿಪ್ರಸಾದ ದ್ವಾರಾ ಅಪರೋಕ್ಷ ಜ್ಞಾನವನ್ನು ಹುಟ್ಟಿಸುವುವು. ಸರ್ವತ್ರ ಸರ್ವಸಾಧನಗಳ ಅನುಷ್ಠಾನಾರಂಭದಲ್ಲಿಯೂ, ಅಂತ್ಯದಲ್ಲಿ, ಅನುಷ್ಠಿತವಾದ ಸಾಧನೆಗಳಿಗೆ ಫಲವನ್ನು ಕೊಡುವುದರಲ್ಲಿಯೂ ಸ್ವತಂತ್ರನಾದ ಶ್ರೀಪರಮಾತ್ಮನ ಪ್ರಸಾದವು ಅತ್ಯವಶ್ಯಕವು ಎಂಬ ನಮ್ಮ ಪೂರ್ವನಿರೂಪಿತ ನಿಶ್ಚಯವನ್ನು ನೀವು ಜ್ಞಾಪಕದಲ್ಲಿಟ್ಟಿರಬೇಕು.

**7.** ಇಷ್ಟು ಸಂಕ್ಷಿಪ್ತ ಮೋಕ್ಷಸಾಧನ ಪ್ರಕಾರ ವರ್ಣನೆಯು. ಪ್ರಕೃತಿಬಂಧ ನಿವೃತ್ತಿಪೂರ್ವಕವಾದ ಸ್ವರೂಪಾನಂದಾವಿರ್ಭಾವರೂಪವಾದ ಮುಕ್ತಿಯು ನಿಯಾಮಕನಾದ ಶ್ರೀಪರಮಾತ್ಮನ ಅನುಗ್ರಹದಿಂದ ಬದ್ಧರಾದ ಜೀವರುಗಳಿಗೆ ಪ್ರಾಪ್ತವಾಗಬೇಕು. ನಿಯಾಮಕನಾದ ಪರಮಾತ್ಮನ ಪ್ರಸಾದವು ನಿಷ್ಕಾರಣವಾಗಿ ಬರಲಾರದು. ಅಧಿಕಾರಿಯ ನಿರಪೇಕ್ಷವಾದ ಪರಮಭಕ್ತಿಯು ಮಹಾಪುರುಷನ ಪ್ರಸಾದವನ್ನು ಹೊಂದಿಸುವುದರಲ್ಲಿ ಸಮರ್ಥವಾಗುವುದೆಂದು ಹೇಳುವುದು ಯುಕ್ತಿಯುಕ್ತವಾಗಿಯೂ ಇರುವುದು. ಇಂಥಾ ಪರಮಭಕ್ತಿಯು ಬ್ರಹ್ಮಸಾಕ್ಷಾತ್ಕಾರದಿಂದಲೂ, ಅಂಥ ಬ್ರಹ್ಮಜ್ಞಾನವು ಧ್ಯಾನದಿಂದಲೂ ಪರಮಾತ್ಮಪ್ರಸಾದದಿಂದಲೇ ಪ್ರಾಪ್ತವಾಗುವುವು. ಧ್ಯಾನಕ್ಕೆ ಚಿತ್ತಪ್ರಸಾದವೂ ಮತ್ತು ಶ್ರವಣ ಮನನ ಜನಿತವಾದ ವಿಷ್ಣುಸರ್ವೋತ್ತಮತ್ವ ನಿಶ್ಚಯವೂ ಅವಶ್ಯಕವು. ನಿಷ್ಕಾಮತ್ವಪೂರ್ವಕವಾಗಿ ಆಚರಿಸಲ್ಪಟ್ಟು ಪರಮಾತ್ಮನಲ್ಲಿ ಸಮರ್ಪಿಸಲ್ಪಟ್ಟ ವಿಧ್ಯುಕ್ತಕರ್ಮವು ಚಿತ್ತಶುದ್ಧಿಗೆ ಕಾರಣವಾಗಿ ಶ್ರವಣ ಮನನಾದಿ ದ್ವಾರಾ ಧ್ಯಾನಕ್ಕೆ ಕಾರಣವಾಗುವುದು. ವಿಹಿತಕರ್ಮವನ್ನು ಸ್ವರೂಪತಃ ಪರಿತ್ಯಜಿಸಿದ ಮಂದನು ನರಕಾದ್ಯನರ್ಥಗಳನ್ನು ಹೊಂದುವನು. ಅದರಲ್ಲಿಯೂ ಸ್ವಸ್ವವರ್ಣಾಶ್ರಮೋಚಿತವಾದ ಧರ್ಮಗಳನ್ನು ಪರಿತ್ಯಾಗ

ಮಾಡಿ ಯಥೇಷ್ಟ ವ್ಯವಹಾರದಲ್ಲಿ ರತನಾದವನು ವರ್ಣಸಂಕರಕಾರಕನಾಗಿ ತಾನು ಘೋರವಾದ ನರಕಗಳನ್ನು ಹೊಂದುವುದಲ್ಲದೇ ತನ್ನ ಕುಲಸ್ಥ ಪೂರ್ವಿಕರಿಗೂ ದುರ್ಗತಿಯನ್ನು ಹೊಂದಿಸುವನು. ಆದುದರಿಂದ ಸರ್ವಸಜ್ಜನರೂ ಸ್ವಸ್ವವರ್ಣಾಶ್ರಮೋಚಿತ ಧರ್ಮಗಳಲ್ಲಿ ರತರಾಗಿ ಯಥಾಶಕ್ತಿ ಶ್ರವಣಮನನಾದಿ ಜ್ಞಾನಸಾಧನಗಳಲ್ಲಿ ತತ್ಪರರಾಗಿ ಶ್ರೀಪರಮಾತ್ಮನ ಪ್ರಸಾದದಿಂದಲೇ ಕ್ರಮಕ್ರಮವಾಗಿ ವೃದ್ಧವಾದ ಜ್ಞಾನಾದಿ ಸಂಪತ್ತುಗಳನ್ನು ಅನುಭವಿಸಿ ಬ್ರಹ್ಮಾಪರೋಕ್ಷವನ್ನು ಹೊಂದುವುದಕ್ಕೆ ಯತ್ನಿಸಬೇಕು. ಇದು ಶ್ರೀಕೃಷ್ಣನ ಸಿದ್ಧಾಂತವು.

**8.** ಭಂಗಾರದ ಸರಪಣಿಯಲ್ಲಿ ಪೋಣಿಸಿರುವ ಮಾಣಿಕ್ಯ ಮಾಲೆಯಂತೆ ಯುಕ್ತ್ಯುಪನ್ಯಾಸ ಪೂರ್ವಕವಾದ ಭಗತ್ಪ್ರಾಪ್ತಿಸಾಧಕ ಮಾರ್ಗವನ್ನು ಶ್ರೀಕೃಷ್ಣನು ನಿರೂಪಿಸಿರುತ್ತಾನೆ. ಆದರೂ ಗುಹ್ಯತಮವಾದ ಭಗವಂತನ ನಿಜಾಭಿಪ್ರಾಯವನ್ನು ತಿಳಿಯದ ಕುಮತಿಗಳು ನಾನಾ ರೀತಿಯಲ್ಲಿ ಮೋಕ್ಷ ಸಾಧನವನ್ನು ಉತ್ಪ್ರೇಕ್ಷಿಸುವರು. ಭಗವತ್ಪ್ರಸಾದನಿರಪೇಕ್ಷವಾಗಿ ಜ್ಞಾನ ಮಾತ್ರದಿಂದ ಮಿಥ್ಯಾಭೂತವಾದ ಸಂಸಾರ ಬಂಧವು ವಿಲೀನವಾಗುವುದು; ಜ್ಞಾನ ಕರ್ಮಗಳು ಸಮುಚ್ಚಿತವಾಗಿ ಸಮಕಕ್ಷತೆಯಿಂದ ಮೋಕ್ಷಕಾರಣಗಳು; ದ್ವೇಷಾದಿಗಳಿಂದ ಸಹಿತವಾದರೂ ನಿರಂತರ ಧ್ಯಾನಮಾತ್ರವೇ ಮೋಕ್ಷಸಾಧನವು; ಗುರುಪಾದದಲ್ಲಿ ಶ್ರವಣಮನನಾದಿ ಸಾಧನರಹಿತವಾದ ಪ್ರಪತ್ತಿಮಾತ್ರವು ಮುಕ್ತಿದಾಯಕವು; ಸಕಲ ಕರ್ಮಪರಿತ್ಯಾಗಪೂರ್ವಕವಾದ ಆತ್ಮೈಕ್ಯ ಜ್ಞಾನವು ಮುಕ್ತಿಸಾಧಕವು; ಅಹಿಂಸಾದಿ ಕರ್ಮಮಾತ್ರದಿಂದ ಮುಕ್ತಿಯು; ಇತ್ಯಾದಿ ನಾನಾ ಪ್ರಕಾರವಾಗಿ ತಮೋಗುಣ ವ್ಯಾಪ್ತವಾದ ತಮ್ಮ ಕುಬುದ್ಧಿಗಳಿಂದ ಜನಿತವಾದ ಸ್ವೋತ್ಪ್ರೇಕ್ಷಿತ ಅಭಿಪ್ರಾಯಗಳನ್ನು ಗೀತಾರ್ಥವೆಂದು ಉಪಪಾದಿಸಿ ಶ್ರೀಕೃಷ್ಣನ ಮತವನ್ನು ಆಗ್ರಹದಿಂದ ನಾಶಮಾಡುವರು. ತಮ್ಮ ತಮ್ಮ ಮನೋನುಕೂಲವಾಗಿ ತತ್ವಗಳನ್ನು ಕಲ್ಪಿಸಿಕೊಂಡು ಅದನ್ನು ಬಲಾತ್ಕಾರವಾಗಿ ಗೀತೆಯಲ್ಲಿ ಯೋಜನೆಮಾಡಿ, ಪ್ರಬಲಾಶ್ರಯದಿಂದ ತಮ್ಮ ದುಷ್ಕರ್ಮವನ್ನು ಮರೆಮಾಚುವುದಕ್ಕೆ ಎಣಿಸಿದ ದುರ್ಜನರಂತೆ, ನಾನಾ ಭಾಷ್ಯಕಾರರುಗಳೂ ಸಹ ಶ್ರೀಕೃಷ್ಣನ ದ್ರೋಹವನ್ನು ಸಂಪಾದಿಸಿರುವರೆಂದು ಪರಂಪರೋ

ಪದೇಶದಿಂದ ಪ್ರಾಪ್ತವಾದ ವಿಷ್ಣುತತ್ವ ರಹಸ್ಯವನ್ನು ಬಲ್ಲ ಸಜ್ಜನರು ನಿರ್ಣಯಿಸುವರು. ಆದುದರಿಂದ ಸರ್ವ ವೈಷ್ಣವ ಸಜ್ಜನರೂ, ಪ್ರಕೃತದಲ್ಲಿ, ಭರತ ಖಂಡದಲ್ಲಿ, ವರ್ಣಾಶ್ರಮ ಧರ್ಮನಾಶದಲ್ಲಿ ಪರ್ಯವಸಾನವನ್ನು ಹೊಂದಿರುವ ಅತಏವ ಭಗವಂತನಾದ ಶ್ರೀಕೃಷ್ಣನ ಕೋಪಾಗ್ನಿಯಿಂದ ಭಸ್ಮೀಭೂತವಾಗಿರುವ ದುಷ್ಟಸಮಾಜಗಳಿಂದ ದೂರೀಕೃತವಾದ ಮನಸ್ಸುಳ್ಳವರಾಗಿ, ಸ್ವಸ್ವವರ್ಣಾಶ್ರಮೋಚಿತವಾದ ರೀತಿಯಲ್ಲಿ ದೇಶಸೇವೆ, ಸಂಘಸೇವೆ, ಕುಟುಂಬಪೋಷಣೆ, ಸ್ವದೇಹಪಾಲನಾದಿಗಳನ್ನು ಮಾಡಬೇಕು. ಮತ್ತು ತಮ್ಮ ತಮ್ಮ ಮನೋಭಿಲಷಿತವಾದ ತತ್ವಗಳನ್ನು ಮುಕುಂದನು ಉಪದೇಶ ಮಾಡದಿರುವುದರಿಂದ, ಗೀತೆಯಲ್ಲಿ ದೋಷವನ್ನೆಣಿಸಿ ಕಾಲಾನುಗುಣವಾಗಿ ಧರ್ಮಪರಿವರ್ತನವನ್ನು ಬಯಸುವ ದುಷ್ಟಚಿತ್ತರೂ ಸಹ ಶ್ರೀಕೃಷ್ಣವಿದ್ವೇಷಿಗಳಾಗಿರುವುದರಿಂದ, ಶ್ರೇಯೋರ್ಥಿಗಳು ಸಜ್ಜನಸಂಗದಲ್ಲಿ ಸಾವಧಾನಮನಸ್ಸಿನಿಂದ ವಿಚಾರಮಾಡಿ ನಿಜತತ್ವವನ್ನು ತಿಳಿದುಕೊಂಡು ಶಾಶ್ವತವಾದ ಶ್ರೀಕೃಷ್ಣನಿಂದ ಪರಿರಕ್ಷಿತವಾದ ಧರ್ಮಮಾರ್ಗದ ಮರ್ಯಾದೆಯನ್ನು ಸ್ವಲ್ಪವೂ ವಿೂರದೆ, ಭಗವತ್ಪ್ರಸಾದಕ್ಕೆ ಪಾತ್ರರಾಗತಕ್ಕದ್ದೆಂದು ನಾವು ಪುನಃ ಪುನಃ ಉಪದೇಶಮಾಡಿರುತ್ತೇವೆ.

ಶ್ರೀಕೃಷ್ಣನು ಹೇಳುತ್ತಾನೆ:—

**(1) ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।**
**ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ॥**
**ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ ।**
**ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿ ನಷ್ಟಾನಚೇತಸಃ ॥**

—(3. 31-32.)

**ಅರ್ಥವು:**— ಯಾವ ಮನುಷ್ಯರು ನನ್ನ (ಶ್ರೀಕೃಷ್ಣನ) ವಾಕ್ಯದಲ್ಲಿ ವಿಶ್ವಾಸವುಳ್ಳವರಾಗಿ, ಕಷ್ಟವಾದ ಕರ್ಮಾನುಷ್ಠಾನದಲ್ಲಿ ಪ್ರವೃತ್ತಿಯುಂಟುಮಾಡಿದನೆಂದು ನನ್ನಲ್ಲಿ ದೋಷದೃಷ್ಟಿಯನ್ನು ಮಾಡದೆ, ನನ್ನಿಂದ ಉಕ್ತವಾದ ರೀತಿಯಲ್ಲಿ ಜ್ಞಾನೋಪಾಯವನ್ನು ಅನುಷ್ಠಾನ ಮಾಡುತ್ತಾರೆಯೋ, ಅವರು ಸಕಲ ಕರ್ಮಬಂಧದಿಂದ ಮುಕ್ತರಾಗುತ್ತಾರೆ. ಯಾರು ನನ್ನ ಮಾತನ್ನು ಕುರಿತು ಅಭ್ಯಸೂಯಂತಃ = ಯಥಾರ್ಥವಾಗಿದ್ದರೂ ಅದರಲ್ಲಿ ದೋಷದೃಷ್ಟಿ

ಯುಳ್ಳವರಾಗಿ ಆಚರಿಸುವುದಿಲ್ಲವೋ ಅಂಥವರು ವಿವೇಕಶೂನ್ಯರು, ಸರ್ವ ವಿಷಯದಲ್ಲಿಯೂ ಮಿಥ್ಯಾಜ್ಞಾನಿಗಳು ಮತ್ತು ನರಕಾದ್ಯನರ್ಥಭಾಗಿಗಳು ಎಂದು ನೀನು ತಿಳಿಯುವವನಾಗು.

---

# VIII.

# ಪ್ರಮಾಣವಿಚಾರವು.

15—8—1930 ರಲ್ಲಿ (ಚಿತ್ರರಂಜನ, ಮೈಸೂರು.)

---

**ಸಭಿಕರು:—ಧರ್ಮಾಧಿಕಾರಿಗಳು, ವಿದ್ವಾಂಸರು ಮತ್ತು ವಿದ್ಯಾರ್ಥಿಗಳು.**

**ವಿದ್ಯಾರ್ಥಿಗಳು:**—ಸ್ವಾಮಿ! **"ಭಕ್ತಿಶ್ಚ ತತ್ಸಾಧನಂ"** ಎಂಬ ಶ್ಲೋಕ ಭಾಗವು ಗೀತಾವಾಕ್ಯಗಳ ಆಧಾರದಿಂದ ತಮ್ಮಿಂದ ಸವಿಸ್ತರವಾಗಿ ವಿವೃತ ವಾಯಿತು. ಇನ್ನು **"ಅಕ್ಷಾದಿತ್ರಿತಯಂ ಪ್ರಮಾಣಂ"** ಎಂಬ ಪಾದದ ಅರ್ಥ ವನ್ನು ವಿವರಿಸಿ ಶ್ರೀಕೃಷ್ಣನ ವಾಕ್ಯಗಳಿಂದ ಉಕ್ತ ವಿಷಯುವನ್ನು ಸಾಧಿಸ ಬೇಕಾಗಿರುವುದು.

**ಉತ್ತರ:—ಶ್ರೀಶ್ರೀಗಳವರು:**—ಒಳ್ಳೆಯದು. ಸರ್ವಾರ್ಥಚಿಂತಾಮಣಿ ಯಾದ ಶ್ರೀಕೃಷ್ಣ ವಾಕ್ಯವನ್ನು ನಂಬಿದರೆ ಯಾವ ಅರ್ಥವನ್ನು ಸಾಧಿಸಿಕೊಡು ವುದು ಕಷ್ಟವಾಗುವುದು? **"ಅಕ್ಷಾದಿತ್ರಿತಯಂ ಪ್ರಮಾಣಂ"** ಎಂದರೆ ಪ್ರತ್ಯಕ್ಷ, ಅನುಮಾನ, ಆಗಮಗಳು ಮೂರೇ ಪ್ರಮಾಣಗಳು ಎಂದು ಅರ್ಥವು. ಪ್ರಮಾಣವೆಂದರೆ ಯಥಾರ್ಥ ಜ್ಞಾನವನ್ನುಹುಟ್ಟಿಸತಕ್ಕದ್ದು ಎಂದು ಅರ್ಥವು. ಇದರಲ್ಲಿ ದೋಷರಹಿತವಾದ ಶ್ರೋತ್ರ, ಚಕ್ಷು, ತ್ವಕ್, ಜಿಹ್ವಾ, ಘ್ರಾಣಗ ಳೆಂಬ ಪಂಚ ಜ್ಞಾನಜನಕವಾದ ಇಂದ್ರಿಯಗಳು, ಮನಸ್ಸು ಮತ್ತು ಸಾಕ್ಷೀ ಎಂದು ಶಾಸ್ತ್ರದಲ್ಲಿ ಕರೆಯಲ್ಪಡುವ ಜೀವಸ್ವರೂಪೇಂದ್ರಿಯವು, ಇವು ಏಳು ಕರಣಗಳು (ಜ್ಞಾನಸಾಧನಗಳು) ಪ್ರತ್ಯಕ್ಷಪ್ರಮಾಣಗಳೆನ್ನಿಸುವುವು. ಇವು ಗಳಿಂದ ಹುಟ್ಟತಕ್ಕ ಯಥಾರ್ಥ ಜ್ಞಾನಕ್ಕೂ ಪ್ರತ್ಯಕ್ಷವೆಂದು ಹೆಸರು. ಇವುಗಳಲ್ಲಿ ಶ್ರೋತ್ರೇಂದ್ರಿಯದಿಂದ ಶಬ್ದವಿಷಯಕ ಪ್ರತ್ಯಕ್ಷವು ಉಂಟಾಗ ವುದು; ಚಕ್ಷುರಿಂದ್ರಿಯದಿಂದ ರೂಪವಿಷಯಕ ಪ್ರತ್ಯಕ್ಷವು ಉಂಟಾಗುವುದು;

ತ್ವಗಿಂದ್ರಿಯದಿಂದ ಸ್ಪರ್ಶಸಾಕ್ಷಾತ್ಕಾರವು ಉಂಟಾಗುವುದು; ರಸನೇಂದ್ರಿಯದಿಂದ ರಸವಿಷಯಕ ಸಾಕ್ಷಾತ್ಕಾರವು ಉಂಟಾಗುವುದು; ಘ್ರಾಣೇಂದ್ರಿಯದಿಂದ ಗಂಧವಿಷಯಕ ಪ್ರತ್ಯಕ್ಷವು ಉಂಟಾಗುವುದು. ಮತ್ತು ಸುಖ, ದುಃಖ, ಜ್ಞಾನ, ಅಜ್ಞಾನ, ಕಾಲಾದಿ ಅನೇಕ ವಿಷಯಗಳು ಸ್ವರೂಪೇಂದ್ರಿಯವಾದ ಸಾಕ್ಷಿಯಿಂದ ವಿಷಯೀಕರಿಸಲ್ಪಡುವುವು. ಏವಂಚ ಈ ಬಹ್ಮಾಂಡದಲ್ಲಿರುವ ಪಂಚಭೂತಾತ್ಮಕವಾದ ಸಮಸ್ತ ವಸ್ತುಗಳ ಸದ್ಭಾವದಲ್ಲಿಯೂ ಪ್ರತ್ಯಕ್ಷವು ಪ್ರಮಾಣವಾಗಿರುವುದು.

2. ಮತ್ತೊಂದು ವ್ಯವಸ್ಥಿತವಿಷಯವನ್ನು ಸೂಚಿಸಿ ಉಕ್ತವಿಷಯದಲ್ಲಿ ಶ್ರೀಕೃಷ್ಣನ ವಾಕ್ಯಗಳನ್ನು ಪ್ರಮಾಣವನ್ನಾಗಿ ಉದಾಹರಿಸುವೆವು. ಏನೆಂದರೆ, ಇಂದ್ರಿಯಗೋಚರವಾಗತಕ್ಕ ಸಮಸ್ತ ಪದಾರ್ಥಗಳೂ ಸತ್ಯವೆಂಬುದರಲ್ಲಿ ನಿರ್ದುಷ್ಟಪ್ರತ್ಯಕ್ಷವು ಪ್ರಮಾಣವಾಗಿರುವುದು. ಬಧಿರತ್ವಾದಿಗಳು ಶ್ರೋತ್ರದೋಷಗಳೆನ್ನಿಸುವುವು. ಅವುಗಳಿಂದ ರಹಿತವಾದ ಮತ್ತು ಸರಿಯಾಗಿ ಸನ್ನಿಕೃಷ್ಟವಾದ ಶ್ರೋತ್ರೇಂದ್ರಿಯದಿಂದ, ಷಡ್ಜ ಋಷಭ ಗಾಂಧಾರಾದಿ ಸ್ವರಗಳಿಂದ ಸಹಿತವಾದ ಶಬ್ದವಿಷಯಕ ಯಥಾರ್ಥಜ್ಞಾನವು ಹುಟ್ಟುವುದು. ಅಂಥಾ ಯಥಾರ್ಥಜ್ಞಾನಕ್ಕೆ ವಿಷಯವಾದ ಶಬ್ದವೂ ಯಥಾರ್ಥವೆನ್ನಿಸುವುದು. ಅದು ಶುಕ್ತಿರಜತದಂತೆ ಅಥವಾ ರಜ್ಜುಸರ್ಪದಂತೆ ಸುಳ್ಳಾದ ಪದಾರ್ಥವೆಂದು ಹೇಳಲಾಗುವುದಿಲ್ಲ. ಹೀಗೆಯೇ ಕಾಚ, ಕಾಮಲಾದಿದೋಷಗಳಿಂದ ರಹಿತವಾದ, ಯುಕ್ತರೀತಿಯಲ್ಲಿ ವಸ್ತುಸನ್ನಿಕೃಷ್ಟವಾದ ಚಕ್ಷುರಿಂದ್ರಿಯದಿಂದ (ಕಣ್ಣಿನಿಂದ) ಯಥಾರ್ಥವಾದ ರೂಪವಿಶಿಷ್ಟಪದಾರ್ಥಗಳ ಯಥಾರ್ಥಜ್ಞಾನವು ಹುಟ್ಟುವುದು. ಇಂಥಾ ನಿರ್ದುಷ್ಟಜ್ಞಾನಕ್ಕೆ ವಿಷಯಗಳಾದ ಪದಾರ್ಥಗಳೂ ಸತ್ಯವೆನ್ನಿಸುವುವು. ಅವುಗಳು ಶುಕ್ತಿರಜತದಂತೆ ಮಿಥ್ಯಾ ಎನ್ನಿಸಲಾರವು.

ಸ್ಪರ್ಶೇಂದ್ರಿಯ ವಿಷಯದಲ್ಲಿಯೂ, ರಸನೇಂದ್ರಿಯವಿಷಯದಲ್ಲಿಯೂ, ಘ್ರಾಣೇಂದ್ರಿಯ ವಿಷಯದಲ್ಲಿಯೂ ಹೀಗೆಯೇ ತಿಳಿಯಬೇಕು. ಹಾಗೆಯೇ ರಾಗಾದಿ ದೋಷರಹಿತವಾದ ನಿರ್ದುಷ್ಟಮನಸ್ಸಿನಿಂದ ಉತ್ಪನ್ನವಾಗುವ ಸ್ಮೃತಿಯೂ ಯಥಾರ್ಥವಾಗಿರುವುದು. ಅಂಥಾ ಸ್ಮೃತಿಯಲ್ಲಿ ಗೋಚರವಾಗ

ತಕ್ಕ ಪೂರ್ವಾನುಭೂತವಸ್ತುಗಳೂ ಆ ಪೂರ್ವಾವಸ್ಥೆಯಲ್ಲಿ ಇದ್ದವು ಎಂದೇ ನಿರ್ಣೀತವಾಗಿರುವುದು.

ಸ್ವರೂಪೇಂದ್ರಿಯವಾದ ಸಾಕ್ಷಿಯು ಸ್ವಭಾವತಃ ದೋಷರಹಿತವಾಗಿರುವುದು. ಸಾಕ್ಷಿಗೃಹೀತವಾದ ವಿಷಯಗಳೆಲ್ಲವೂ ಅತ್ಯಂತ ಸತ್ಯವಾದವುಗಳೆಂದು ಅನುಭವಸಿದ್ಧವಾಗಿರುವುದು. ಸಾಕ್ಷಿಸಿದ್ಧವಾದ ವಿಷಯಗಳಲ್ಲಿ ಯಾವ ಕಾಲದಲ್ಲೂ ಯಾರಿಗೂ ಸಂಶಯವು ಬರುವುದಿಲ್ಲ. ಸಾಕ್ಷಿಪ್ರತ್ಯಕ್ಷವು ಅತ್ಯಂತ ಯಥಾರ್ಥವಾದುದರಿಂದ ಅಂಥಾ ಸ್ವರೂಪೇಂದ್ರಿಯಕ್ಕೆ ಗೋಚರವಾಗತಕ್ಕ ಅವ್ಯಾಕೃತಾಕಾಶ, ಕಾಲ, ಸುಖ, ದುಃಖ, ಜ್ಞಾನ, ಅಜ್ಞಾನ ಇತ್ಯಾದಿ ವಿಷಯಗಳೆಲ್ಲವೂ ಅತ್ಯಂತ ಸತ್ಯವಾದುವುಗಳು. ಶುಕ್ತಿರಜತದಂತೆ ಮಿಥ್ಯಾ ಅಲ್ಲ ಎಂದು ನಿರ್ಣೀತವಾಗುವುದು.

3. ಇನ್ನು ಪ್ರತ್ಯಕ್ಷಪ್ರಾಮಾಣ್ಯವಿಷಯದಲ್ಲಿ ಗೀತಾ ಸಮ್ಮತಿಯನ್ನು ತೋರಿಸುವೆವು. ಜೀವನು, ಮನ ಆದಿ ಪ್ರಕೃತಿನಿರ್ಮಿತ ಇಂದ್ರಿಯಗಳಿಂದ ಯುಕ್ತನಾಗಿ ವಿಷಯಜ್ಞಾನವನ್ನು ಹೊಂದುತ್ತಿರುವನೆಂದು ಶ್ರೀಕೃಷ್ಣನು ಹದಿನೈದನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ:—

(1) **ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।**
**ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥** —(15.7.)

ಬ್ರಹ್ಮಾದಿಜೀವಶರೀರದಲ್ಲಿ ಇರುವ ಸ್ವರೂಪತಃ ಅನಾದಿನಿತ್ಯನಾದ ನನ್ನ ಅಧೀನನಾದ ಜೀವನೆಂಬುವನು ನನ್ನ ಅಂಶನೆನಿಸುವನು. (ನನ್ನಿಂದ ಅತ್ಯಂತ ಭಿನ್ನವಾದ ನನ್ನ ಅಧೀನನಾದ ಪ್ರತಿಬಿಂಬರೂಪನು ಎಂದು ಭಾವವು.) ಇಂಥಾ ಜೀವನು ಪ್ರಕೃತಿಕಾರ್ಯವಾದ ದೇಹದಲ್ಲಿರುವ ಮನಸ್ಸಿನಿಂದ ಸಹಿತವಾದ ಪಂಚಜ್ಞಾನೇಂದ್ರಿಯಗಳನ್ನು (ಒಟ್ಟು ಆರು ಇಂದ್ರಿಯಗಳನ್ನು) ಕರ್ಷತಿ= ವಿಷಯಗಳನ್ನು ಕುರಿತು ಪ್ರೇರಿಸುತ್ತಾನೆ. (ಜೀವನು ಪ್ರಕೃತಿನಿರ್ಮಿತದೇಹದಲ್ಲಿದ್ದು ತನ್ನ ಆರು ಇಂದ್ರಿಯಗಳನ್ನೂ ಪುನಃ ಪುನಃ ವಿಷಯಸಾಕ್ಷಾತ್ಕಾರಕ್ಕೋಸ್ಕರ ಪ್ರೇರಿಸುತ್ತಾನೆ ಎಂದು ತಾತ್ಪರ್ಯವು.)

ಇದರಿಂದ ಜೀವನಿಗೆ ಮನಸ್ಸೇ ಮುಂತಾದ ಆರು ಇಂದ್ರಿಯಗಳು ಉಂಟೆಂದೂ ಅವುಗಳಿಂದ ವಿಷಯಜ್ಞಾನವು ಬರುವುದೆಂದೂ ಸಿದ್ಧವಾಗುವುದು.

ಶತ್ರುಯೋಧರನ್ನು ನೋಡಿ ಶ್ರೀಕೃಷ್ಣನು ಮಾಡಿರುವ ನಿರ್ದೇಶದಿಂದಲೂ ಸಹ ಪ್ರತ್ಯಕ್ಷವು ಪ್ರಮಾಣವೆಂದೂ, ನಿರ್ದುಷ್ಟಪ್ರತ್ಯಕ್ಷಕ್ಕೆ ವಿಷಯವಾದ ಜಗತ್ತು ಸತ್ಯವೆಂದೂ ಸಿದ್ಧವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ:—

(2) .... .... **ನೇಮೇ ಜನಾಧಿಪಾಃ ।** —(2.12.)

ಎಲೈ ಅರ್ಜುನನೇ! ಇಮೇ = ಈ ಪರಿದೃಶ್ಯಮಾನರಾದ (ಕಣ್ಣಿಗೆ ಕಾಣುವ) ಕ್ಷತ್ರಿಯರಾಜರುಗಳು ಹಿಂದೆ ಇರಲಿಲ್ಲವೆಂದು ತಿಳಿಯಬೇಡ.

ಶ್ರೀಕೃಷ್ಣನು ಕ್ಷತ್ರಿಯರಾಜರುಗಳ ದೇಹವನ್ನು ನೋಡಿ ಈ ಮಾತನ್ನು ಹೇಳಿದನು. ಇದರಿಂದ ದೇಹಾದಿವಿಷಯಕಜ್ಞಾನವು ಚಕ್ಷುರಿಂದ್ರಿಯದಿಂದ ಬರುವುದೆಂದು ಸಿದ್ಧವಾಯಿತು. ಅಷ್ಟೇ ಅಲ್ಲ. ಪರಮೇಶ್ವರನಾದ ಶ್ರೀಕೃಷ್ಣನು ತನ್ನ ನಿರ್ದುಷ್ಟಇಂದ್ರಿಯದಿಂದ ಶತ್ರುರಾಜರುಗಳ ದೇಹಗಳನ್ನು ನೋಡಿ "ಈ ದೇಹಗಳು" ಎಂದು ನಿರ್ದೇಶಮಾಡಿ ಹೇಳುವುದರಿಂದ ಅವುಗಳು ಸತ್ಯವಾದವುಗಳು ರಜ್ಜುಸರ್ಪದಂತೆ ಮಿಥ್ಯಾ ಅಲ್ಲ ಎಂದೂ ಸಿದ್ಧವಾಗುವುದು.

ಪುನಃ ಶ್ರೀಕೃಷ್ಣನು ಹೇಳುತ್ತಾನೆ:—

(3) **ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾಃ ಶರೀರಿಣಃ ।** —(2.18.)

ಎಲೈ ಪಾರ್ಥನೇ! ಸ್ವರೂಪೇಣ ನಿತ್ಯನಾದ ಜೀವನ ಇಮೇ ದೇಹಾಃ = **ಈ ಪ್ರತ್ಯಕ್ಷಸಿದ್ಧವಾದ ದೇಹಗಳು** ನಾಶ ಹೊಂದತಕ್ಕವುಗಳು.

**4.** ಶ್ರೀಕೃಷ್ಣನ ಈ ನಿರ್ದೇಶವು ಅದ್ವೈತಮತಕ್ಕೆ ಕುಠಾರರೂಪವಾಗಿರುವುದು. ಅದ್ವೈತಮತದಲ್ಲಿ ಆಕಾಶ, ಕಾಲ, ಬ್ರಹ್ಮಾಂಡ, ದೇಹಗೇಹಾದಿಸಕಲ ವಸ್ತುಗಳೂ ಶುಕ್ತಿರಜತದಂತೆ ಮಿಥ್ಯಾಭೂತವಾದುವುಗಳು ಎಂದರೆ ಹಿಂದೆ ಇರಲಿಲ್ಲ, ಈಗ ಇಲ್ಲ ಮತ್ತು ಮುಂದೆ ಇರುವುದಿಲ್ಲ. ಇವುಗಳ ವಿಷಯದಲ್ಲಿ ಸತ್ವಗ್ರಾಹಿ ಪ್ರತ್ಯಕ್ಷವು ಅಪ್ರಮಾಣವೇ. ಎಂದರೆ ನನ್ನ 'ಮನೆಯು ನೆಲದ ಮೇಲೆ **ಇರುತ್ತದೆ,** ನನ್ನ ದೇಹವು ಇರುತ್ತದೆ, ಆಕಾಶವು **ಇರುತ್ತದೆ,** ಕಾಲವು ಇರು**ತ್ತದೆ,** ಕಡಗ, ಕಿರೀಟಾದಿಗಳು **ಇರುತ್ತವೆ** ಇತ್ಯಾದಿ ರೀತಿಯಾಗಿ ಪದಾರ್ಥಗಳಲ್ಲಿ ಸತ್ತೆಯನ್ನು (ಇರೋಣವನ್ನು) ಗ್ರಹಿಸುವ ಜ್ಞಾನಗಳೆಲ್ಲವೂ ಅಪ್ರಮಾಣಗಳೇ(ಅಯಥಾರ್ಥಗಳೇ). ವಸ್ತುತಃ ಆಕಾಶ, ಕಾಲ, ದೇಹ, ಗೇಹಾದಿ

ಗಳು ಇಲ್ಲದಿದ್ದರೂ ಭ್ರಾಂತಿಯಿಂದ ಇವು ಇರುವಂತೆ ತೋರುತ್ತವೆ ಎಂದು ಅದ್ವೈತಿಗಳು ಹೇಳುತ್ತಾರೆ.

ಕೃಷ್ಣಸರ್ವೋತ್ತಮತ್ವವನ್ನು ಧಿಕ್ಕರಿಸಿದ ಶಿಶುಪಾಲನನ್ನು ಶ್ರೀಕೃಷ್ಣನು ತನ್ನ ಅಪ್ರತಿಹತವಾದ ಚಕ್ರದಿಂದ ಸಂಹರಿಸಿದನು. ಪ್ರತ್ಯಕ್ಷ ಸಿದ್ಧವಾದ ಸಕಲ ಜಗತ್ತೂ ಸುಳ್ಳೆಂಬ ದುಸ್ತತ್ವವನ್ನು ಶ್ರೀಕೃಷ್ಣನು "ಇಮೇ" ಎಂಬ ತನ್ನ ನಿರ್ದೇಶಮಾತ್ರದಿಂದ ನಾಶಹೊಂದಿಸಿರುವನು. ಮಿಥ್ಯಾ ಪದಾರ್ಥಗಳು ನಿರ್ದುಷ್ಟ ಚಕ್ಷುಸ್ಸುಳ್ಳವನಿಗೆ ಗೋಚರವಾಗಲಾರವು. ಸರ್ವಜ್ಞನಾದ, ನಿರ್ದೋಷೇಂದ್ರಿಯಗಳುಳ್ಳ ಶ್ರೀಕೃಷ್ಣನು ತನ್ನ ಸ್ವಂತಕಣ್ಣು ಗಳಿಂದ ಪುರೋವರ್ತಿರಾಜರುಗಳನ್ನು ನೋಡುತ್ತಾ "ಇಮೇ" ಎಂದು ನಿರ್ದೇಶಮಾಡಿರುವುದರಿಂದ ಅವುಗಳೆಲ್ಲವೂ ಯಥಾರ್ಥವೇ ಎಂದು ಸಿದ್ಧವಾಗುವುದು.

ಇದರಿಂದ ಅದ್ವೈತಮತದ ಮತ್ತೊಂದು ದೋಷವೂ ಹೊರಬಿದ್ದಂತಾಯಿತು. ಪ್ರತ್ಯಕ್ಷವು ಪ್ರಮಾಣವೆಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಅವುಗಳಿಗೆ ವಿಷಯಗಳಾದ ಘಟ ಪಟಾದಿ ಸಕಲ ಪದಾರ್ಥಗಳೂ ಮಿಥ್ಯಾ ಎಂದು ಹೇಳುತ್ತಾರೆ. ಇದು ಅತ್ಯಂತ ಮೂಢೋಕ್ತಿಯು. ಹೇಗೆಂದರೆ ಜ್ಞಾನವು ಪ್ರಮಾಣವಾದರೆ (ಯಥಾರ್ಥವಾದರೆ) ಆ ಜ್ಞಾನಕ್ಕೆ ವಿಷಯವಾದ ಘಟ ಪಟಾದಿ ಪದಾರ್ಥಗಳು ಸತ್ಯವೆಂದು ಸಿದ್ಧವಾಗಿರುವುದು. ಜ್ಞಾನವು ಅಪ್ರಮಾಣವಾದರೆ ಆ ಜ್ಞಾನಕ್ಕೆ ವಿಷಯವಾದ ಶುಕ್ತಿರಜತಾದಿಗಳು ಮಿಥ್ಯಾ ಎನ್ನಿಸುವುವು. ಆದರೆ ಶಂಕರಾಚಾರ್ಯರೇ ಮುಂತಾದ ಅದ್ವೈತಗ್ರಂಥ ಕಾರರು ಧೈರ್ಯವಾಗಿ ಪ್ರತ್ಯಕ್ಷಜ್ಞಾನವು ಪ್ರಮಾಣವೆಂದು (ಯಥಾರ್ಥವೆಂದು) ಹೇಳಿ ಆ ಜ್ಞಾನಕ್ಕೆ ವಿಷಯವಾದ ದೇಹಗೇಹಾದಿಸಕಲ ಪದಾರ್ಥಗಳೂ ಶುಕ್ತಿರಜತದಂತೆ ಸುಳ್ಳೆಂದು ಹೇಳಿರುವರು. ಇದು ಸರಿಯಲ್ಲ. ವಸ್ತುತಃ ಇಲ್ಲದೇ ಇರುವ ಘಟವಿಷಯದಲ್ಲಿ ಘಟವು ಇರುತ್ತದೆ ಎಂದು ಗ್ರಹಿಸುವ ಜ್ಞಾನವು ಅಪ್ರಮಾಣವೇ. ಆದುದರಿಂದ ಅದ್ವೈತಮತದಲ್ಲಿ ಪ್ರತ್ಯಕ್ಷವು ಪ್ರಮಾಣವಲ್ಲ, ಮತ್ತು ಸಕಲ ಪ್ರತ್ಯಕ್ಷವೂ ಅಪ್ರಮಾಣವು ಎಂದು ಸಿದ್ಧವಾಯಿತು. ಇದೇ ಬೌದ್ಧರ ಶೂನ್ಯವಾದವು. ಉಭಯಮತಗಳೂ ಲೋಕ

ದಿಂದ ಶೂನ್ಯತೆಯನ್ನು ಹೊಂದುವುದಕ್ಕೆ ಅರ್ಹವಾಗಿರುವುವೆಂದು ಶ್ರೀಕೃಷ್ಣನ ನಿರ್ದುಷ್ಟಪ್ರತ್ಯಕ್ಷಪೂರ್ವಕವಾದ ನಿರ್ದೇಶವು ತಿಳಿಸಿರುವುದು.

5. ಕಿಂಚ ಶಬ್ದಾದಿಸರ್ವವಿಷಯಗಳೂ ಪರಮಾತ್ಮನಿಗೆ ಪ್ರತ್ಯಕ್ಷವಿಷಯವಾಗಿರುವುವೆಂದೂ, ಪರಮಾತ್ಮನು ವಿಷಯಜ್ಞಾನಜನಿತವಾದ ಸುಖವನ್ನೂ ಕೂಡ ತನ್ನಸ್ವೇಚ್ಛೆಯಿಂದ ಸ್ವೀಕರಿಸುವನೆಂದೂ ಶ್ರೀಕೃಷ್ಣನು ಹೇಳುತ್ತಾನೆ:-

**(1) ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।**
**ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥** —(15.9.)

**ಅರ್ಥ:**— ಸರ್ವೇಂದ್ರಿಯ ಪ್ರೇರಕನಾದ ಪರಮಾತ್ಮನು (ಶ್ರೀಕೃಷ್ಣನು) ಜೀವನ ಶ್ರೋತ್ರೇಂದ್ರಿಯವನ್ನೂ, ನೇತ್ರೇಂದ್ರಿಯವನ್ನೂ, ತ್ವಗಿಂದ್ರಿಯವನ್ನೂ ರಸನೇಂದ್ರಿಯವನ್ನೂ, ಘ್ರಾಣೇಂದ್ರಿಯವನ್ನೂ ಮತ್ತೂ ಮನೋ ಇಂದ್ರಿಯವನ್ನೂ ಕೂಡ ಪ್ರವೇಶಮಾಡಿಯೇ ಶಬ್ದಾದಿಸದ್ವಿಷಯಗಳನ್ನು ಭೋಗಿಸುತ್ತಾನೆ.

ಏವಂಚ ಶಬ್ದಾದಿ ವಿಷಯಕಜ್ಞಾನವು ಪರಮಾತ್ಮನ ಪ್ರತ್ಯಕ್ಷರೂಪವಾಗಿರುವುದು. ಈಶ್ವರಪ್ರತ್ಯಕ್ಷವು ಅತ್ಯಂತ ಪ್ರಮಾಣವೆಂದು ನಿಶ್ಚಿತವಾಗಿರುವುದು. ಆದ್ದರಿಂದ ಆತನ ಜ್ಞಾನಕ್ಕೆ ಗೋಚರವಾದ ಸಕಲ ವಿಷಯಗಳೂ ಅತ್ಯಂತ ಸತ್ಯವೆಂದು ನಿರ್ವಿವಾದವಾಗಿ ಏರ್ಪಡುವುದು.

**6.** ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳಿಗೂ ಕ್ರಮವಾಗಿ ಶಬ್ದಸ್ಪರ್ಶರೂಪರಸಗಂಧಗಳು ವಿಷಯಗಳೆಂಬುದು,

**(1) ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ॥** —(2. 14.)

ಎಂಬ ಶ್ಲೋಕದಿಂದ ಸೂಚಿತವಾಗುವುದು. ಇಲ್ಲಿ ಮಾತ್ರಾಸ್ಪರ್ಶಾಃ ಎಂದರೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳಿಗೂ ಶ್ರೋತ್ರಾದಿಗಳಿಗೂ ಇರುವ ಜ್ಞಾನಜನಕವಾದ ಸಂಬಂಧಗಳು ಎಂದರ್ಥವು. ಇಂದ್ರಿಯಗಳಿಗೆ ತತ್ತದ್ಯೋಗ್ಯವಿಷಯಸಂಬಂಧದಿಂದ ಆಯಾಯ ವಿಷಯಕವಾದ ಯಥಾರ್ಥಜ್ಞಾನವು ಹುಟ್ಟುವುದು. ಆ ಜ್ಞಾನಗಳಿಂದ ಸುಖದುಃಖಾದಿಗಳು ಹುಟ್ಟುವುವು.

————

## 2. ಎರಡನೆಯ ಅಂಶವು.

### ಪ್ರಮಾಣ ವಿಚಾರವು (ಮುಂದುವರಿಸಿದ್ದು.)

### ಅನುಮಾನವು.

1. **ಪ್ರಶ್ನೆ**:—ಸ್ವಾಮಿ! ಪ್ರತ್ಯಕ್ಷವು ಪ್ರಮಾಣವೆಂದು ಸರ್ವಸಮ್ಮತವು. ಆದರೆ ಅನುಮಾನವು ಪ್ರಮಾಣವೆಂದು ಶ್ರೀಕೃಷ್ಣನು ಎಲ್ಲಿ ಹೇಳಿರುವನು?

**ಶ್ರೀಶ್ರೀಗಳವರು**:—ಅನುಮಾನವು ಪ್ರಮಾಣವಾಗಲಾರದೆಂದು ನಿಮ್ಮ ಶಂಕಾಭಿಪ್ರಾಯವೋ ಅಥವಾ . . . .

**ವಿದ್ಯಾರ್ಥಿಗಳು**:—ಸ್ವಾಮಿ! ಅನುಮಾನ ಪ್ರಾಮಾಣ್ಯವನ್ನು ತಾವು ಸಾಧಿಸಿ ತೋರಿಸಿರುವುದರಿಂದ ನಮಗೆ ಆ ವಿಷಯದಲ್ಲಿ ಸಂದೇಹವಿಲ್ಲ.* ಶ್ರೀಕೃಷ್ಣನು ಅನುಮಾನ ಪ್ರಾಮಾಣ್ಯವನ್ನು ಎಲ್ಲಿಯೂ ಹೇಳಿರುವುದಿಲ್ಲವಾದುದರಿಂದ ಈ ವಿಷಯವು ಗೀತೆಯಿಂದ ಸಿದ್ಧವಾಗತಕ್ಕ ಪ್ರಮೇಯವಲ್ಲವೆಂದು ನಮ್ಮ ಅಭಿಪ್ರಾಯವು.

**ಶ್ರೀಶ್ರೀಗಳವರು**:—ಶ್ರೀಕೃಷ್ಣನು ಸ್ಪಷ್ಟವಾಗಿ ಅನುಮಾನವು ಪ್ರಮಾಣವು ಎಂದು ಹೇಳಿರುವುದಿಲ್ಲ. ಆದರೆ ಅನುಮಾನಗಳಿಂದ ಯಥಾರ್ಥ ಪ್ರಮೇಯಗಳು ನಿಶ್ಚಯಿಸಲ್ಪಟ್ಟಿರುವುವು ಎಂದು ಹೇಳಿರುತ್ತಾನೆ. ಇದರಿಂದಲಾದರೂ ಅನುಮಾನಕ್ಕೆ ಪ್ರಾಮಾಣ್ಯವು ಸಿದ್ಧವಾಗುವುದಿಲ್ಲವೋ?

**ಪ್ರಶ್ನೆ**:—ಸ್ವಾಮಿ! ಶ್ರೀಕೃಷ್ಣನು ಹಾಗೆ ಎಲ್ಲಿ ಹೇಳಿರುತ್ತಾನೆ?

**ಶ್ರೀಶ್ರೀಗಳವರು**:— ಶ್ರೀಕೃಷ್ಣನು ಕ್ಷೇತ್ರಕ್ಷೇತ್ರಜ್ಞಾದಿ ಸ್ವರೂಪವನ್ನು ನಿರೂಪಿಸುವುದಾಗಿ ಪ್ರತಿಜ್ಞೆಮಾಡಿ ಈ ವಿಷಯವು,

(1) **ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।**
**ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿಃ ಸುನಿಶ್ಚಿತೈಃ ॥**
—(13. 5.)

---

* ಸಭಾಸಾರಸಂಗ್ರಹ, Vol. I. ಪ್ರಶ್ನೋತ್ತರಗಳು. ಪುಟ 6.

ಎಂದು ಹೇಳಿರುವನು. ಕ್ಷೇತ್ರಕ್ಷೇತ್ರಜ್ಞ ಸ್ವರೂಪವು **ಹೇತು**ಗಳಿಂದ ಪೂರ್ಣವಾದ ಬ್ರಹ್ಮಸೂತ್ರಪದಗಳಿಂದ ನಿರ್ಣೀತವಾದ ಅರ್ಥವುಳ್ಳ ವೇದಗಳಿಂದ ಬಹು ವಿಧವಾಗಿ ನಿರೂಪಿಸಲ್ಪಟ್ಟಿರುವುದು ಎಂದು ತಾತ್ಪರ್ಯವು. ವೇದಾರ್ಥವು ಬ್ರಹ್ಮಸೂತ್ರದಲ್ಲಿ ಉಕ್ತವಾಗಿರುವ ಹೇತುಗಳಿಂದ ಎಂದರೆ ಅನುಮಾನ ಅಥವಾ ಯುಕ್ತಿಗಳಿಂದ ನಿಶ್ಚಯಿಸಲ್ಪಟ್ಟಿರುವುದು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಸೂತ್ರವನ್ನು ಮೊದಲುಮಾಡಿಕೊಂಡು "ಅನಾವೃತ್ತಿಃ ಶಬ್ದಾತ್" ಎಂಬ ಸೂತ್ರದ ಕೊನೆಯವರೆಗಿರುವ ಐನೂರರವತ್ತ ನಾಲ್ಕುಸೂತ್ರಗಳಿಗೆ ಬ್ರಹ್ಮಸೂತ್ರಗಳೆಂದು ಹೆಸರು. ಈ ಬ್ರಹ್ಮಸೂತ್ರಗಳು ವೇದಾರ್ಥನಿರ್ಣಾಯಕವಾದ ಯುಕ್ತಿಸಮುದಾಯವೆಂದು ತಿಳಿಯಬೇಕು. ವೇದ ವಾಕ್ಯಗಳು ಬಹು ಗಂಭೀರವಾಗಿಯೂ ಗಹನವಾಗಿಯೂ ಇರುವುದರಿಂದ ವೇದ ದಲ್ಲಿರುವ ಪದಗಳಿಗೂ ವಾಕ್ಯಗಳಿಗೂ ಯಾವ ಅರ್ಥವನ್ನು ಮಾಡಬೇಕೆಂದು ಸಂದೇಹಬಂದರೆ ಸಂದಿಗ್ಧವಾದ ಪದಗಳಿಗೂ ವಾಕ್ಯಗಳಿಗೂ ಬ್ರಹ್ಮಪರವಾಗಿಯೇ ಅರ್ಥಮಾಡುವುದರಲ್ಲಿ ಯುಕ್ತಿಗಳನ್ನು ಬಾದರಾಯಣರು ಬ್ರಹ್ಮಸೂತ್ರಗಳಲ್ಲಿ ನಿರೂಪಿಸಿರುವರು.

ಒಂದು ಉದಾಹರಣೆಯನ್ನು ಕೊಡುವೆವು. "ಆನಂದಮಯೋ ಅಭ್ಯಾಸಾತ್" ಎಂಬ ಬ್ರಹ್ಮಸೂತ್ರವಿರುವುದು. ಇಲ್ಲಿ "ಅನ್ಯೋ ಅಂತರ ಆತ್ಮಾ ಆನಂದ ಮಯಃ" ಎಂಬ ವೇದದಲ್ಲಿ **ಆನಂದಮಯ** ಎಂಬ ಪದಕ್ಕೆ ಆನಂದಮಯ ಕೋಶವೆಂದು ಅರ್ಥಮಾಡಬೇಕೋ, ಜೀವನೆಂದು ಅರ್ಥಮಾಡಬೇಕೋ, ಚತುರ್ಮುಖಬ್ರಹ್ಮನೆಂದು ಅರ್ಥಮಾಡಬೇಕೋ, ಪರಬ್ರಹ್ಮನಾದ ವಿಷ್ಣು ವೆಂದು ಅರ್ಥಮಾಡಬೇಕೋ ಎಂದು ಸಂಶಯವು ಬಂದರೆ ಸೂತ್ರಕಾರರು ಆ ಶ್ರುತಿಯಲ್ಲಿ ಆನಂದಮಯಶಬ್ದ ಪ್ರತಿಪಾದ್ಯವಾದ ವಸ್ತುವು ಪರಬ್ರಹ್ಮನಾದ ವಿಷ್ಣುವೇ ಎಂಬಲ್ಲಿ **"ಅಭ್ಯಾಸಾತ್"** ಎಂಬ ಯುಕ್ತಿಯನ್ನು ಹೇಳಿರುವರು. ಎಂದರೆ ಆನಂದಮಯನನ್ನು ವರ್ಣಿಸುವಾಗ ತೈತ್ತಿರೀಯ ಶ್ರುತಿಯಲ್ಲಿ ಪರಮಾತ್ಮನಲ್ಲಿಯೇ ಮುಖ್ಯವಾಗಿ ಉಪಯೋಗಿಸಲ್ಪಡುವ **ಬ್ರಹ್ಮಶಬ್ದ**ವನ್ನು ದ್ವಿರಾವರ್ತಿ ಪ್ರಯೋಗಿಸಿರುವುದರಿಂದಲೂ, ಪರಮಾತ್ಮನಲ್ಲಿಯೇ ಮುಖ್ಯವಾಗಿ ಉಪಯೋಗಿಸಲ್ಪಡುವ **ಆತ್ಮಶಬ್ದ**ವನ್ನು ಅನೇಕಾವರ್ತಿ ಪ್ರಯೋಗಿಸಿರುವುದರಿಂದಲೂ

ಆನಂದಮಯಶಬ್ದ ಪ್ರತಿಪಾದ್ಯವಾದ ವಸ್ತುವು ಪರಬ್ರಹ್ಮನಾದ ವಿಷ್ಣುವೇ ಹೊರತು ಜೀವ, ಕ್ಲೇಶ, ವಿರಿಂಚ, ಸೂರ್ಯಾದಿಗಳಲ್ಲ ಎಂದು ನಿರ್ಣಯವನ್ನು ಮಾಡಿರುವರು. ಹೀಗೆಯೇ ಅನಂತ ಶ್ರುತಿಗಳ ಅರ್ಥವನ್ನು ಮಾಡುವುದರಲ್ಲಿ ಸಹಾಯಕವಾದ ಯುಕ್ತಿಗಳನ್ನು ಇತರ ಸೂತ್ರಗಳಲ್ಲಿ ನಿರೂಪಿಸಿರುವರೆಂದು ತಿಳಿಯಬೇಕು. ಯುಕ್ತಿಗಳಿಂದ ವೇದಾರ್ಥವು ನಿರ್ಣಯಿಸಲ್ಪಟ್ಟಿರುತ್ತದೆ ಎಂದು ಶ್ರೀಕೃಷ್ಣನು ಹೇಳಿದುದರಿಂದ ಯುಕ್ತಿಗೆ ಪ್ರಾಮಾಣ್ಯವನ್ನು (ಯಥಾರ್ಥಜ್ಞಾನಜನಕತ್ವವನ್ನು) ಶ್ರೀಕೃಷ್ಣನು ಒಪ್ಪಿರುವನೆಂದು ಅವಶ್ಯವಾಗಿ ಸಿದ್ಧವಾಗುವುದು. ಯುಕ್ತಿಬೋಧಕವಾದ ಪದಗಳು ಪ್ರಾಯೇಣ "ಪಂಚಮೀವಿಭಕ್ತ್ಯಂತವಾಗಿಯೋ ತೃತೀಯಾಂತವಾಗಿಯೋ ಇರುವುವು. "ಆನಂದಮಯೋ ಅಭ್ಯಾಸಾತ್" ಎಂಬಲ್ಲಿ ಅಭ್ಯಾಸಾತ್ ಎಂಬುದು ಪಂಚಮೀವಿಭಕ್ತ್ಯಂತವಾದ ಯುಕ್ತಿಬೋಧಕಪದವು. ಅಭ್ಯಾಸಾತ್ ಎಂದರೆ ಅಭ್ಯಾಸವು **ಇರೋಣದರಿಂದ** ಎಂದು ಅರ್ಥವು. ಇವುಗಳಿಗೆ ಹೇತುಗಳೆಂದೂ ಹೆಸರುಂಟು.

**2.** ಸೂತ್ರಕಾರರು ಅನುಮಾನಗಳಿಂದ ವೇದಾರ್ಥನಿರ್ಣಯವನ್ನು ಮಾಡಿರುವರೆಂದು ಮಾತ್ರವೇ ಶ್ರೀಕೃಷ್ಣನು ಹೇಳಲಿಲ್ಲ. ತಾನೂ ಸಹ ವಿಷ್ಣುವೇ ಸರ್ವೋತ್ತಮನೆಂಬಲ್ಲಿ ಸಾಧಕವಾದ ಅನೇಕ ಯುಕ್ತಿಗಳನ್ನು ಉಪನ್ಯಾಸಮಾಡಿರುತ್ತಾನೆ. ಶ್ರೀಕೃಷ್ಣನಿಂದ ಉಪನ್ಯಸ್ತವಾದ ಅನೇಕ ಯುಕ್ತಿಗಳನ್ನು ನಾವು ಪೂರ್ವದಲ್ಲಿಯೇ ತೋರಿಸಿರುತ್ತೇವೆ. ಪ್ರಕೃತದಲ್ಲಿ ಪಂಚಮ್ಯ್ಯಂತವಾದ ಪದಗಳಿಂದಲೇ ಸಾಕ್ಷಾತ್ತಾಗಿ ಯುಕ್ತಿಗಳನ್ನು ಶ್ರೀಕೃಷ್ಣನು ನಿರೂಪಿಸಿರುವ ಕೆಲವು ಸ್ಥಳಗಳನ್ನು ಪ್ರದರ್ಶಿಸುತ್ತೇವೆ. ಮತ್ತು ಇತರ ವಿಷಯಗಳಲ್ಲಿಯೂ ಯುಕ್ತಿಯನ್ನು ಬೋಧಿಸುವ ಕೆಲವು ಗೀತಾವಾಕ್ಯಗಳನ್ನೂ ಉದಾಹರಿಸಿರುತ್ತೇವೆ.

(1) **ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥**
**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।**
**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥**
**(5. 18-19.)**

ಈ ಶ್ಲೋಕಾರ್ಥವು ಪೂರ್ವದಲ್ಲಿಯೇ ವಿವೃತವಾಗಿರುವುದು. "ಸಮ" ದರ್ಶಿಗಳನ್ನು ಶ್ರೀಕೃಷ್ಣನು ಸ್ತುತಿಮಾಡಲು ಅರ್ಜುನನಿಗೆ ಬ್ರಹ್ಮಜ್ಞಾನಿಗಳನ್ನು ಸ್ತೋತ್ರಮಾಡದೆ "ಸಮ" ಪದಾರ್ಥಜ್ಞಾನಿಗಳನ್ನು ಶ್ರೀಕೃಷ್ಣನು ಸ್ತೋತ್ರ

ಮಾಡಲು ಕಾರಣವೇನೆಂದು ಶಂಕೆಯು ಬರಲು ಶ್ರೀಕೃಷ್ಣನು ಸಮದರ್ಶಿಗಳು ಬ್ರಹ್ಮದರ್ಶಿಗಳೇ ಎಂಬಲ್ಲಿ ಅನುಮಾನವನ್ನು ಪ್ರಯೋಗಮಾಡಿರುತ್ತಾನೆ. ಇದು ಅನುಮಾನವಾಕ್ಯವು:—

**ಸಮದರ್ಶಿಗಳು- ಬ್ರಹ್ಮಜ್ಞಾನಿಗಳೇ ಆಗಿರುವರು- ದೋಷಶೂನ್ಯನಾದ ಬ್ರಹ್ಮನೇ ಸಮನೆಂದು ಕರೆಯಲ್ಪಡುವ ವಸ್ತುವಾದುದರಿಂದ.** ಇದರಲ್ಲಿ ಸಮದರ್ಶಿಗಳು ಎಂಬುದು ಪಕ್ಷವೆನ್ನಿಸುವುದು; ಬ್ರಹ್ಮಜ್ಞಾನಿಗಳೇ ಆಗಿರುವರು. ಎಂಬುದು ಸಾಧ್ಯವು; ಬ್ರಹ್ಮನೇ ಸಮವಸ್ತುವಾದುದರಿಂದ ಎಂಬುದು ಹೇತುವೆನ್ನಿಸುವುದು. ಯುಧಿಷ್ಠಿರನನ್ನು ನೋಡಿದವರು ಧರ್ಮರಾಜನನ್ನು ನೋಡಿದವರಾಗುವರು, ಯಾತಕ್ಕೆಂದರೆ ಯುಧಿಷ್ಠಿರನೇ ಧರ್ಮರಾಜನು ಇತ್ಯಾದಿ ಪ್ರಯೋಗಗಳು ದೃಷ್ಟಾಂತವಾಗಿರುವುವು.

**3.** ಅನುಮಾನಗಳು ಕಾರ್ಯಾನುಮಾನವೆಂದೂ, ಕಾರಣಾನುಮಾನವೆಂದೂ ಅಕಾರ್ಯಕಾರಣಾನುಮಾನವೆಂದೂ ಮೂರು ಪ್ರಕಾರವಾಗಿರುವುವು. ಪುನಃ ಮತ್ತೊಂದು ವಿವಕ್ಷೆಯಿಂದ ದೃಷ್ಟಾನುಮಾನವೆಂದೂ ಸಾಮಾನ್ಯತೋದೃಷ್ಟಾನುಮಾನವೆಂದೂ ಅನುಮಾನವು ದ್ವಿವಿಧವಾಗಿರುವುದು. ಪ್ರಕೃತದಲ್ಲಿ ಶ್ರೀಕೃಷ್ಣನಿಂದ ಪ್ರಯುಕ್ತವಾದ ಅನುಮಾನವು ಅಕಾರ್ಯಕಾರಣಾನುಮಾನವೆನ್ನಿಸುವುದು, ಮತ್ತು ಸಾಮಾನ್ಯತೋದೃಷ್ಟಾನುಮಾನವೆಂದೂ ಕರೆಯಲ್ಪಡುವುದು.

**4.** ಹದಿನೈದನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ತಾನು ಪುರುಷೋತ್ತಮನೆಂಬಲ್ಲಿ ಅನುಮಾನವನ್ನು ಪ್ರಯೋಗಮಾಡಿರುತ್ತಾನೆ:—

(1) **ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।**
**ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥**
—(15. 18.)

ಈ ಶ್ಲೋಕಾರ್ಥವು ಪೂರ್ವದಲ್ಲಿ ಉಕ್ತವಾಗಿರುವುದು. ಇಲ್ಲಿ ಶ್ರೀಕೃಷ್ಣನು ಪ್ರಯೋಗಮಾಡಿರುವ ಅನುಮಾನವನ್ನು ಈ ಪ್ರಕಾರವಾಗಿ ವಿವರಿಸಬಹುದು.

**ಶ್ರೀಕೃಷ್ಣನು- ಪುರುಷೋತ್ತಮನು (ಸರ್ವೋತ್ತಮಚೇತನನು)- ಕ್ಷರಾಕ್ಷರರೆಂಬ ಲೋಕದಲ್ಲಿ ವಿದ್ಯಮಾನ ಉಭಯವಿಧರಾದ ಚೇತನರಿ**

**ಗಿಂತಲೂ ಉತ್ತಮನಾದುದರಿಂದ.** ತಾಲೂಕಿನಲ್ಲಿರುವ ಒಬ್ಬೊಬ್ಬ ವ್ಯಕ್ತಿಗಿಂತಲೂ ತಾಸಿಲ್ದಾರನು ಅಧಿಕನಾಗಿದ್ದರೆ ತಾಸಿಲ್ದಾರನು ಆ ತಾಲೂಕಿನಲ್ಲಿ ಸರ್ವಾಧಿಕನೆನ್ನಿಸುವನು. ಇದೇ ರೀತಿಯಲ್ಲಿ ಚೇತನತ್ವವುಳ್ಳ ಕ್ಷರಾಕ್ಷರರೆಂಬ ಉಭಯವರ್ಗದಿಂದಲೂ ಪರಮಾತ್ಮನು ಅಧಿಕನಾದುದರಿಂದ ಪರಮಾತ್ಮನು ಸರ್ವಾಧಿಕಚೇತನನೆಂದು ಪ್ರಸಿದ್ಧವಾಗಿರುವನೆಂದು ಸಿದ್ಧವಾಗುವುದು.

ಈ ಅನುಮಾನವೂ ಕೂಡ ಸಾಮಾನ್ಯತೋದೃಷ್ಟಾನುಮಾನವೆಂದು ಶಾಸ್ತ್ರಪ್ರಸಿದ್ಧವಾಗಿರುವುದು.

5. ಶ್ರೀಕೃಷ್ಣನ ಈ ರೀತಿಯಾದ ಅನುಮಾನಪ್ರಯೋಗದಿಂದ ಮತ್ತೊಂದು ವಿಷಯವು ಸಿದ್ಧವಾಗುವುದು. ನೈಯಾಯಿಕರು ಪ್ರತಿಜ್ಞಾ, ಹೇತು, ಉದಾಹರಣ, ಉಪನಯ, ನಿಗಮನಗಳೆಂಬ ಪಂಚಾವಯವ ವಾಕ್ಯಗಳಿಂದ ಸಹಿತವಾದ ಪರೋಪದೇಶರೂಪವಾದ ಅನುಮಾನ ಪ್ರಯೋಗವೇ ಸಾಧ್ಯಜ್ಞಾನವನ್ನು ಹುಟ್ಟಿಸುವುದು ಎಂದು ನಿರ್ಬಂಧವನ್ನು ಮಾಡಿರುವರು. ಶ್ರೀ ಕೃಷ್ಣನು ತಾನು ಪುರುಷೋತ್ತಮನೆಂಬಲ್ಲಿ ಹೇತುವನ್ನು ಹೇಳಿ ಉದಾಹರಣ, ಉಪನಯ, ನಿಗಮನಗಳನ್ನು ಬಿಟ್ಟುಬಿಟ್ಟನು. ಆದರೂ ಸುದೃಢವಾದ ಆತನ ಅನುಮಾನವು ಪರಮಾತ್ಮನು ಸರ್ವೋತ್ತಮ ಚೇತನನೆಂಬ ಸಾಧ್ಯಜ್ಞಾನವನ್ನು ಹುಟ್ಟಿಸಿಯೇ ಹುಟ್ಟಿಸುವುದು. ಇದರಿಂದ ಸೂಕ್ಷ್ಮಜ್ಞರನ್ನು ಕುರಿತು ಯುಕ್ತ್ಯುಪನ್ಯಾಸವನ್ನು ಮಾಡುವಾಗ ಪಂಚಾವಯವಗಳುಳ್ಳ ಅನುಮಾನವಾಕ್ಯವನ್ನೇ ಪ್ರಯೋಗಮಾಡಬೇಕೆಂಬ ನಿಯಮವು ಉಚಿತವಲ್ಲವೆಂದು ಸೂಚಿತವಾಗುವುದು. ಈ ಖಂಡನೆಯು ಷಟ್ಪ್ರಮಾಣವಾದಿಗಳಾದ ಅದ್ವೈತಿಗಳ ಮೇಲೂ ಬಂದೇ ಬರುವುದು. ಬೌದ್ಧರು ಅನುಮಾನವಾಕ್ಯವು ನಿಯಮೇನ ಎರಡು ಅವಯವಗಳುಳ್ಳದ್ದಾಗಿರಬೇಕೆಂದು ನಿರೂಪಿಸುವರು. ಇತರರು ಪ್ರತಿಜ್ಞಾಹೇತೂದಾಹರಣಗಳೆಂಬ ಮೂರು ಅವಯವಗಳು ಇರಬೇಕೆಂದೂ ಅಥವಾ ಉದಾಹರಣ, ಉಪನಯ, ನಿಗಮನಗಳೆಂಬ ಮೂರು ಅವಯವಗಳು ನಿಯಮೇನ ಇರಬೇಕೆಂದೂ ನಿರ್ಬಂಧಮಾಡುವರು. ಇವರೆಲ್ಲರ ನಿಯಮಗಳೂ ಸ್ವಸ್ವಮತಾಭಿನಿವೇಶನದಿಂದ ಉತ್ಪನ್ನವಾದ ಆಗ್ರಹವೇ ಸರಿ. ಸಾಧ್ಯಜ್ಞಾನದ ಉತ್ಪತ್ತಿಯು ಅನುಮಾನವಾಕ್ಯಪ್ರಯೋಗಕ್ಕೆ ಫಲವು. ಅದು ಕ್ವಚಿತ್

ಸಂದರ್ಭಾನುಸಾರೇಣ ಹೇತುವಾಕ್ಯಮಾತ್ರದಿಂದಲೂ, ಕ್ವಚಿತ್ ಎರಡು ಅವಯವಗಳ ಪ್ರಯೋಗದಿಂದಲೂ, ಕ್ವಚಿತ್ ಮೂರು ಅವಯವಗಳಿಂದಲೂ, ಕ್ವಚಿತ್ ನಾಲ್ಕು ಅಥವಾ ಐದು ಅಯವಗಳಿಂದಲೂ ಮತ್ತೆ ಕೆಲವು ಸಂದರ್ಭಗಳಲ್ಲಿ ಸಂದೇಹದಿಂದ ವಿವಾದವು ಬಂದರೆ ಅನೇಕ ವಾಕ್ಯಗಳಿಂದಲೂ ಉತ್ಪನ್ನವಾಗುವುದು. ಆದುದರಿಂದ ಎರಡೇ ಅವಯವಗಳಿಂದ ಸಾಧ್ಯಜ್ಞಾನವು ಬರುವುದೆಂಬ ಬೌದ್ಧರ ನಿಯಮವೇ ಮುಂತಾದ ಸರ್ವ ನಿರ್ಬಂಧಗಳು ಲೌಕಿಕಾನುಭವ ನ್ಯೂನತಾ ಮೂಲಕವಾಗಿರುವವು. ಶ್ರೀಕೃಷ್ಣನು ಕೆಲವು ಸ್ಥಳಗಳಲ್ಲಿ ಎರಡೇ ಅವಯವಗಳುಳ್ಳ ಮತ್ತು ಕೆಲವು ಸ್ಥಳಗಳಲ್ಲಿ ಮೂರು ಅವಯವಗಳುಳ್ಳ ಅನುಮಾನ ವಾಕ್ಯವನ್ನು ಪ್ರಯೋಗಮಾಡಿರುವುದು ಈ ಪ್ರಮೇಯ ವಿಶೇಷವನ್ನು ಸೂಚಿಸುವುದು. ಇನ್ನು ಕೆಲವು ವೇಳೆ ಹೇತ್ವರ್ಥಗರ್ಭವಿಶೇಷಣಗಳಿಂದ ಶ್ರೀಕೃಷ್ಣನು ಸಾಧ್ಯಜ್ಞಾನವನ್ನು ಹುಟ್ಟಿಸುವನು. ಹೇಗೆಂದರೆ ಶ್ರೀಕೃಷ್ಣನು **"ಉತ್ತಮಃ ಪುರುಷಸ್ತ್ವನ್ಯಃ"** ಎಂದರೆ ಕ್ಷರಾಕ್ಷರ ಚೇತನರಿಗಿಂತಲೂ ಉತ್ತಮ ಪುರುಷನು ಭಿನ್ನನು ಎಂದು ಹೇಳಿ ಈ ವಿಷಯ ದಲ್ಲಿ ಯುಕ್ತಿಯನ್ನು ಸೂಚಿಸುವುದಕ್ಕಾಗಿ, **"ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ"** ಎಂದು ಪುರುಷಶಬ್ದಕ್ಕೇ ನಾಲ್ಕೈದು ವಿಶೇಷಣಗಳನ್ನು ಕೊಟ್ಟಿರುವನು. "ಉತ್ತಮ ಪುರುಷನು ಭಿನ್ನನು" ಎಂದು ಇಷ್ಟೇ ಹೇಳದೆ, "ಮೂರುಲೋಕವನ್ನು ಅನುಪ್ರವೇಶಮಾಡಿ ಧಾರಣ ಪಾಲನವನ್ನು ಮಾಡುವಂಥಾ ನಾಶರಹಿತನಾದಂಥಾ ಅಚಿಂತ್ಯ ಶಕ್ತಿಯುಳ್ಳ ಉತ್ತಮ ಪುರುಷನು ಭಿನ್ನನು" ಎಂದು ಶ್ರೀಕೃಷ್ಣನು ಹೇಳಿರುವುದು, ಪರಮಾತ್ಮನು ಕ್ಷರಾಕ್ಷರವೆಂಬ ಉಭಯವಿಧವಾದ ಚೇತನ ವರ್ಗದಲ್ಲೇ ಅಂತರ್ಭಾವವನ್ನು ಹೊಂದದೆ ಅವೆರಡಕ್ಕಿಂತಲೂ ಭಿನ್ನವಾಗಿರುವುದರಲ್ಲಿ ಹೇತುಗಳನ್ನು ಸೂಚಿಸುವುದಕ್ಕಾಗಿ ಎಂದು ತಿಳಿಯಬೇಕು. ಹಾಗಾದ ಮೇಲೆ ಫಲಿತವಾದ ಅನುಮಾನ ವಾಕ್ಯವು ಈ ರೀತಿಯಾಗುವುದು:—

**ಪರಮಾತ್ಮನು– ಕ್ಷರಾಕ್ಷರಪುರುಷರುಗಳಿಗಿಂತ ಅತ್ಯಂತ ಭಿನ್ನನು– ಕ್ಷರಾಕ್ಷರಪುರುಷರುಗಳಲ್ಲಿಲ್ಲದಿರುವ ತ್ರೈಲೋಕ್ಯಧಾರಣಪೋಷಣ ಕರ್ತೃತ್ವ ಅವ್ಯಯತ್ವ ಈಶ್ವರತ್ವಾದಿ ಮಹಾಮಹಿಮೋಪೇತನಾದುದರಿಂದ–ಜಲದಲ್ಲಿಲ್ಲ**

ದಿರುವ ಧರ್ಮವುಳ್ಳ ಅಗ್ನಿಯು ಜಲಕ್ಕಿಂತ ಭಿನ್ನವಾಗಿರುವಂತೆ. ಈ ಪ್ರಕಾರ ವಾಗಿ ಆಲೋಚಿಸಿದರೆ ಇದು ಒಂದೇ ಅವಯವವುಳ್ಳ ಅನುಮಾನವಾದಂತಾ ಯಿತು. ಇಂಥಾ ಅನುಮಾನಗಳು ಗೀತೆಯಲ್ಲಿ ಅನೇಕವಾಗಿರುವುವು.

**6.** ಅನುಮಾನವು ಸಾಧ್ಯಜ್ಞಾನವನ್ನು ಹುಟ್ಟಿಸುವುದರಿಂದ ಪ್ರಮಾಣವೇ ಸರಿ ಎಂದು ನಿರೂಪಿತವಾಯಿತು. ಇಲ್ಲಿ ಅನುಮಾನ ಶಬ್ದದಿಂದ ನಿರ್ದುಷ್ಟ ವಾದ ಅನುಮಾನಗಳನ್ನೇ ತೆಗೆದುಕೊಳ್ಳಬೇಕು, ಯಾತಕ್ಕೆಂದರೆ ವ್ಯಾಪ್ತಿ ರಾಹಿತ್ಯಾದಿ ದೋಷಗಳಿಂದ ಯುಕ್ತವಾದ ಅನುಮಾನವಾಕ್ಯಪ್ರಯೋಗವು ಅಯಥಾರ್ಥ ಜ್ಞಾನವನ್ನು ಹುಟ್ಟಿಸುವುದು. ಅಂಥಾ ಅನುಮಾನಗಳಿಗೆ ಹೇತ್ವಾಭಾಸಗಳೆಂದು ಹೆಸರು.

**ಪ್ರಶ್ನೆ**:—ಸ್ವಾಮಿ! ಇಂಥಾ ದುಷ್ಟಾನುಮಾನಕ್ಕೆ ಒಂದೆರಡು ಉದಾ ಹರಣೆಗಳನ್ನು ನಿರೂಪಿಸಬೇಕು.

**ಉತ್ತರ:—ಶ್ರೀಶ್ರೀಗಳವರು**:— ಅನಂತ ಅನುಮಾನಗಳಿರುತ್ತವೆ. ಎಲ್ಲಾ ನೀವುಗಳೇ ಸಭೆಯಲ್ಲಿ ಉಗ್ಗಳಿಸಿ ಹೇಳಿರುವುದೇ:—

**1.** ಚಂಡಾಲನು ಸ್ಪೃಶ್ಯನು ಮನುಷ್ಯನಾಗಿರೋಣದರಿಂದ ಬ್ರಾಹ್ಮಣ ನಂತೆ.

**2.** ಪ್ರೌಢಾವಿವಾಹವು ಪುಣ್ಯಪ್ರದವು ಸ್ತ್ರೀವಿವಾಹವಾದುದರಿಂದ– ಕನ್ಯಾವಿವಾಹದಂತೆ.

**3.** ಸ್ತ್ರೀಪುನರ್ವಿವಾಹವು ಪುಣ್ಯಕರವು ಪುನರ್ವಿವಾಹವಾದುದರಿಂದ ಪುರುಷನ ದ್ವಿತೀಯ ವಿವಾಹದಂತೆ.

**4.** ದೇವತಾಪ್ರತಿಮೆಯು ಪೂಜ್ಯವಲ್ಲ ಪಾಷಾಣಾತ್ಮಕವಾದುದರಿಂದ ಬಚ್ಚಲುಗುಂಡಿ ಕಲ್ಲಿನಂತೆ.

**5.** ಶಿಖಾಯಜ್ಞೋಪವೀತಗಳ ಪರಿತ್ಯಾಗವು ದೋಷಾರ್ಹವಲ್ಲ ವ್ಯರ್ಥ ಪದಾರ್ಥಗಳ ಪರಿತ್ಯಾಗವಾದುದರಿಂದ ನಖ ಚಿಂದೀವಸ್ತ್ರಗಳೇ ಮುಂತಾ ದುವುಗಳ ಪರಿತ್ಯಾಗದಂತೆ.

**6.** ಹೋಟಲು ಅನ್ನವು ಭೋಜ್ಯವು ಸಣ್ಣಕ್ಕಿ ಅನ್ನವಾಗಿರುವುದರಿಂದ ಮನೆಯ ನಿವೇದಿತ ಅನ್ನದಂತೆ.

7. ವ್ಯಸನಜನಿತ ಉಪವಾಸಗಳು ತಪೋರೂಪವು ಉಪವಾಸವಾದುದರಿಂದ ಏಕಾದಶೀ ಉಪವಾಸದಂತೆ.

8. ವಿಧವಾಕೇಶಧಾರಣೆಯು ಮಂಗಳಪ್ರದವು ಕೇಶಧಾರಣರೂಪವಾದುದರಿಂದ ಪತಿವ್ರತೆಯ ಕೇಶಧಾರಣೆಯಂತೆ.

9. ಗೋಹತ್ಯೆಯು ಪುಣ್ಯಪ್ರದವು ಹತ್ಯಾರೂಪವಾದುದರಿಂದ ಆತತಾಯಿಯ ಹನನದಂತೆ.

10. ಮದ್ಯಪಾನಾರ್ಥವಾದ ದ್ರವ್ಯದಾನವು ಪುಣ್ಯಪ್ರದವು ದ್ರವ್ಯದಾನವಾದುದರಿಂದ ಉತ್ತಮ ಬ್ರಾಹ್ಮಣರಿಗೆ ಅರ್ಪಿತವಾದ ದಾನದಂತೆ.

11. ವೇದವಿರುದ್ಧವಾದ ಶೌರ್ಯ, ಧೈರ್ಯ, ಸೇವಾ, ದಾನ, ಕರ್ಮಾದಿಗಳೂ ಮೋಕ್ಷೋಪಯೋಗಿಯು ಉತ್ಸಾಹಪೂರ್ವಕ ಆಚರಣೆಯಾದುದರಿಂದ ವಿಶ್ವಾಮಿತ್ರರ ತಪಸ್ಸಿನಂತೆ.

I. **ವಿದ್ಯಾರ್ಥಿಗಳು:**—ಮಹಾಸ್ವಾಮಿ ! ದಯಮಾಡಿ ಸಾಕುಮಾಡಬೇಕು. ಗೀತೆಯಲ್ಲಿ ಇಂಥ ದುಷ್ಟಾನುಮಾನಗಳಿಗೆ ದೃಷ್ಟಾಂತವಿದ್ದರೆ ತೋರಿಸಬೇಕು.

**ಶ್ರೀಶ್ರೀಗಳವರು :**—ಸರ್ವಜ್ಞನಾದ ಶ್ರೀಕೃಷ್ಣನ ವಾಕ್ಯಗಳಲ್ಲಿ ದುರ್ಯುಕ್ತಿಗಳು ದೊರಕಲಾರವು. ಆದರೆ ಬಂಧುಸ್ನೇಹಪರವಶನಾದ ಅರ್ಜುನನು ದುರ್ಯೋಧನಾದಿಗಳನ್ನು ಕೊಲ್ಲಬಾರದೆಂಬಲ್ಲಿ ಕೆಲವು ದುರನುಮಾನಗಳನ್ನು ಪ್ರಯೋಗಿಸಿರುತ್ತಾನೆ. ಒಂದು ಅನುಮಾನವನ್ನು ಮಾದರಿಗಾಗಿ ತೋರಿಸುತ್ತೇವೆ :—

(1) **ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ ।**
**ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸ್ವಬಾಂಧವಾನ್॥**
—(1. 36-37.)

ಈ ಶ್ಲೋಕಾರ್ಥವು ಪೂರ್ವದಲ್ಲಿ ಉಕ್ತವಾಗಿರುವುದು. ಇದು ಅರ್ಜುನನ ಅನುಮಾನವು. **1. ದುರ್ಯೋಧನಾದಿಗಳ ಹನನವು–ಪಾಪಕಾರಣವು–ಬಂಧುಹನನವಾದುದರಿಂದ ಮಾತೃಹನನದಂತೆ. 2. ಪಾಂಡವರು ದುರ್ಯೋಧನಾದಿಗಳನ್ನು ಸಂಹರಿಸಕೂಡದು, ಪಾಪವು ಬರುವುದರಿಂದ, ಗುರುಸಂಹಾರದಂತೆ.**

**ಪ್ರಶ್ನೆ :— ವಿದ್ಯಾರ್ಥಿಗಳು:—** ಸ್ವಾಮಿ! ಈ ಅನುಮಾನವನ್ನು ಯಾವ ಶ್ಲೋಕದಲ್ಲಿ ಶ್ರೀಕೃಷ್ಣನು ಖಂಡನೆಮಾಡಿರುವನು?

**ಶ್ರೀಶ್ರೀಗಳವರು:-** ಶ್ರೀಕೃಷ್ಣನು ಎರಡು ರೀತಿಯಾಗಿ ಪ್ರತ್ಯನುಮಾನಗಳನ್ನು ಪ್ರಯೋಗಮಾಡಿ ದುರ್ಯೋಧನಾದಿಗಳು ಹನನಯೋಗ್ಯರೆಂದು ತೋರಿಸಿರುತ್ತಾನೆ. ದುರ್ಯೋಧನಾದಿಗಳ ಹನನವೆಂದರೆ ದುರ್ಯೋಧನಾದಿ ಜೀವಸ್ವರೂಪ ಹನನವೇ ಅಥವಾ ಅವರ ದೇಹಹನನವೇ ಎಂದು ವಿಕಲ್ಪಮಾಡಿ, ದುರ್ಯೋಧನಾದಿಗಳ ಜೀವಸ್ವರೂಪ ಹನನವು ಪಾಪಕಾರಣವು ಬಂಧುಹನನವಾದುದರಿಂದ ಎಂದು ಹೇಳುವುದಾದರೆ ಆಶ್ರಯಾಸಿದ್ಧಿ, ಸ್ವರೂಪಾಸಿದ್ಧ್ಯಾದಿ ಬಹು ದೋಷಗಳು ಬರುವುವೆಂದು **"ನ ತ್ವೇವಾಹಂ ಜಾತು ನಾಸಂ"** ಮುಂತಾದ ಅನೇಕ ಶ್ಲೋಕಗಳಿಂದ ಸಾವಧಾನವಾಗಿ ತೋರಿಸಿದನು. ದುರ್ಯೋಧನಾದಿಗಳ ದೇಹ ಹನನವು ಪಾಪಕರವು ಬಂಧುಹನನವಾದುದರಿಂದ ಎಂಬ ಅನುಮಾನವನ್ನು ಈ ಶ್ಲೋಕದಲ್ಲಿ ಖಂಡಿಸಿರುತ್ತಾನೆ:—

(2) **ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।**
**ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ಕ್ಷತ್ರಿಯಸ್ಯ ನ ವಿದ್ಯತೇ॥**
—(2. 31.)

ಈ ಶ್ಲೋಕಾರ್ಥವೂ ಪೂರ್ವದಲ್ಲಿ ವಿವೃತವಾಗಿರುವುದು. ಇದು ಶ್ರೀಕೃಷ್ಣನ ಪ್ರತ್ಯನುಮಾನಗಳು :—

(1) **ದುರ್ಜನಹನನವು- ಕ್ಷತ್ರಿಯನಿಗೆ ಪಾಪಸಾಧನವಲ್ಲ ಮತ್ತು ಪುಣ್ಯಸಾಧನವು- ಸ್ವಧರ್ಮವಾದುದರಿಂದ.**

(2) **ದುರ್ಯೋಧನಾದಿಗಳ ಹನನವು- ಪಾಪಸಾಧನವಲ್ಲ ಮತ್ತು ಪುಣ್ಯಸಾಧನವು- ದುರ್ಜನಹನನವಾದುದರಿಂದ.**

ಈ ಅನುಮಾನಗಳಿಂದ ಅರ್ಜುನನ ಅನುಮಾನಗಳು ನಷ್ಟವಾದವು. ಇದೇ ರೀತಿಯಲ್ಲಿ ಅರ್ಜುನನು ಆಶಂಕಿಸಿದ ಇತರ ಹೇತುಗಳನ್ನೂ ಸಹ ಶ್ರೀಕೃಷ್ಣನು ಪ್ರತ್ಯನುಮಾನಗಳಿಂದ ಖಂಡಿಸಿರುತ್ತಾನೆ.

8. **ಪ್ರಶ್ನೆ**:—ಸ್ವಾಮಿ! ಅರ್ಜುನನು ಅನುಮಾನಗಳನ್ನು ಪ್ರಯೋಗಿಸಿದನು. ಶ್ರೀಕೃಷ್ಣನು ಅವುಗಳಿಗೆ ವಿರುದ್ಧವಾಗಿ ಅನುಮಾನಗಳನ್ನು ಮಾಡಿರುವನು. ಇವುಗಳಲ್ಲಿ ಬಲಾಬಲವನ್ನು ನಿರ್ಣಯಿಸುವುದು ಹೇಗೆ?

**ಉತ್ತರ:—ಶ್ರೀಶ್ರೀಗಳವರು:—**ನೀವು ಕೇಳಿದುದು ಸರಿ. ಅನುಮಾನವು ಸ್ವತಂತ್ರ ಪ್ರಮಾಣವಲ್ಲ. ಪ್ರತ್ಯಕ್ಷವೂ, ಆಗಮವೂ ಸ್ವತಂತ್ರ ಪ್ರಮಾಣಗಳು. ಪ್ರತ್ಯಕ್ಷ ಆಗಮಗಳಿಗೆ ಅನುಸಾರಿಯಾದ ಅಥವಾ ವಿರುದ್ಧವಾದ ಅನುಮಾನವು ಪ್ರಮಾಣವೆನ್ನಿಸುವುದು. ಪ್ರಕೃತದಲ್ಲಿ ಶ್ರೀಕೃಷ್ಣನು ಹೇಳಿದ ಅನುಮಾನಕ್ಕೆ ಆಗಮವು ಮೂಲವಾಗಿರುವುದು. ವೇದದಲ್ಲಿ ವಿಷ್ಣುದ್ವೇಷಿಗಳನ್ನು ಕ್ಷತ್ರಿಯರು ಧರ್ಮಯುದ್ಧದಲ್ಲಿ ನಿಗ್ರಹಿಸುವುದರಿಂದ ಶ್ರೇಯಸ್ಸನ್ನು ಹೊಂದುವರು; ಅವರು ಬಂಧುಗಳಾದರೂ ಹನನಯೋಗ್ಯರು ಎಂದು ನಿರ್ಣೀತವಾಗಿರುವುದು. ಶ್ರೀಕೃಷ್ಣನು ಅಂಥಾ ವೇದಾನುಸಾರಿಯಾಗಿ ಅನುಮಾನ ಮಾಡಿರುವುದರಿಂದ ಇದು ಪ್ರಬಲವೆನ್ನಿಸುವುದು. ಅರ್ಜುನನ ಅನುಮಾನಗಳು ಆಗಮವಿರುದ್ಧವಾಗಿರುವುದರಿಂದ ಆಂಗ್ಲೇಯ ತತ್ವವಿಚಾರಪರವಾದ ಗ್ರಂಥಗಳಲ್ಲಿರುವ ಅನುಮಾನಗಳಂತೆ ನಿರ್ಮೂಲವಾಗಿರುವುವು. ವಿರೋಧ, ಅಸಂಗತಿ, ನ್ಯೂನ, ಆಧಿಕ್ಯಗಳೆಂದು ಅನುಮಾನದೋಷಗಳು ನಾಲ್ಕು ಪ್ರಕಾರವಾಗಿರುವುವು. ಇವುಗಳಲ್ಲಿ ಅನೇಕ ಅವಾಂತರ ಭೇದಗಳುಂಟು. ಈ ಸೂಕ್ಷ್ಮಗಳನ್ನು ಪ್ರಮಾಣಗ್ರಂಥಗಳಿಂದ ವಿಶೇಷವಾದ ವಿಚಾರಪೂರ್ವಕವಾಗಿ ತಿಳಿಯಬೇಕು. ಮತ್ತು "ಕಾಮಾಚ್ಚ ನಾನುಮಾನಾಪೇಕ್ಷಾ" ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ಅನುಮಾನಕ್ಕೆ ಇರುವ ಸಾಮರ್ಥ್ಯವನ್ನು ವೇದವ್ಯಾಸರು ನಿರ್ಣಯಮಾಡಿರುತ್ತಾರೆ. ಪ್ರಕೃತದಲ್ಲಿ ನೀವು ಇಷ್ಟನ್ನು ಒಪ್ಪಿದರೆ ಸಾಕು. ಪ್ರತ್ಯಕ್ಷಾಗಮಗಳೆಂಬ ಮೂಲಪ್ರಮಾಣಗಳಿಗೆ ಅವಿರುದ್ಧವಾದ ನಿರ್ದುಷ್ಟ ಅನುಮಾನಗಳು ಕ್ರಮವಾಗಿ ಇಂದ್ರಿಯಗೋಚರ ಮತ್ತು ಅತೀಂದ್ರಿಯ ವಿಷಯಗಳಲ್ಲಿ ಪ್ರಮಾಣಗಳು ಎಂದರೆ ಯಥಾರ್ಥಜ್ಞಾನಜನಕಗಳೆಂದು ಶಾಸ್ತ್ರನಿರ್ಣಯವು.

# 3 ಮೂರನೆಯ ಅಂಶವು

## ಪ್ರಮಾಣವಿಚಾರವು (ಮುಂದುವರಿಸಿದ್ದು.)

### ಆಗಮವು.

**1. ವಿದ್ಯಾರ್ಥಿಗಳು — ಪ್ರಶ್ನೆ**:—ಸ್ವಾಮಿ! ಆಗಮವು ಪ್ರಮಾಣ ವೆಂದರೆ ಏನು?

**ಶ್ರೀಶ್ರೀಗಳವರು**:— ನಿರ್ದುಷ್ಟವಾದ ಶಬ್ದವು ಯಥಾರ್ಥಜ್ಞಾನಜನ ಕವು ಎಂದರ್ಥವು.

**ವಿದ್ಯಾರ್ಥಿಗಳು** :—ಶಬ್ದದಲ್ಲಿ ದೋಷಗಳು ಯಾವುವು?

**ಶ್ರೀಶ್ರೀಗಳವರು**:—ಶಬ್ದದಲ್ಲಿ ಸ್ವಾಭಾವಿಕವಾದ ದೋಷಗಳು ಯಾವು ವೂ ಇಲ್ಲ. ವಕ್ತೃ(ಮಾತಾಡುವ) ಪುರುಷನ ದೋಷದಿಂದ ಶಬ್ದವು ಕೆಲವು ವೇಳೆ ಅಯಥಾರ್ಥಜ್ಞಾನವನ್ನು ಹುಟ್ಟಿಸುವುದು. ಗಂಗೆಯು ಸ್ವಾಭಾವಿಕ ವಾಗಿ ನಿರ್ಮಲವಾಗಿ ಪಾವನಕರವಾಗಿರುವುದು. ಆದರೆ ನೀಚನ ಮದ್ಯಭಾಂಡ ದಲ್ಲಿ ಅದೇ ನೀರು ಒಯ್ಯಲ್ಪಟ್ಟರೆ ಅದು ಪಾನಾರ್ಹವಲ್ಲ. ಪುರುಷದೋಷದಿಂದ ಸ್ವಾಭಾವಿಕವಾದ ಪವಿತ್ರಜಲವೂ ಪಾನಕ್ಕೆ ಅನರ್ಹವಾಗುವುದು. ಹೀಗೆಯೇ ಶಬ್ದವು ಸ್ವಾಭಾವಿಕವಾಗಿ ಯಥಾರ್ಥಜ್ಞಾನವನ್ನು ಹುಟ್ಟಿಸುವುದು. ಆದರೆ ವಂಚಕಪುರುಷನು ಅಥವಾ ಅಜ್ಞಪುರುಷನು ಆ ಶಬ್ದಗಳನ್ನು ತನ್ನ ಇಷ್ಟಾನು ಸಾರ ಜೋಡಿಸಿ ಪ್ರಯೋಗಿಸಿದರೆ ಅದು ಅಯಥಾರ್ಥಜ್ಞಾನವನ್ನು ಹುಟ್ಟಿಸು ವುದು. ವಕ್ತೃ ಪುರುಷದೋಷದಿಂದ ಶಬ್ದವು ದುಷ್ಟಜ್ಞಾನವನ್ನು ಹುಟ್ಟಿಸು ವುದು. 1. ವಕ್ತೃಪುರುಷನು ನಿರ್ದುಷ್ಟನಾದರೆ ಅಥವಾ 2. ಯಾವ ಪುರು ಷನೂ ಆನುಪೂರ್ವಿಯನ್ನು ರಚನೆಮಾಡದೆಯೇ ಇದ್ದರೆ ಅಂಥಾ ಶಬ್ದವು ಸ್ವತಃ ಯಥಾರ್ಥಜ್ಞಾನವನ್ನು ಹುಟ್ಟಿಸುವುದು.

**2. ಪ್ರಶ್ನೆ** :—ಸ್ವಾಮಿ! ಹಾಗಾದರೆ ಈಗ ಬುದ್ಧ, ಕ್ರಿಸ್ತ, ಮಹಮ್ಮ ದಾದಿಗಳೂ ತತ್ವಗಳನ್ನು ಉಪದೇಶಮಾಡುವವರಾಗಿ ನಾನಾವಿಧವಾಗಿ ಶಬ್ದ ರಚನೆಯನ್ನು ಮಾಡಿರುತ್ತಾರೆ. ಮತ್ತು ಶಂಕರ, ರಾಮಾನುಜ, ವಲ್ಲಭ, ಭಾಸ್ಕ ರಾದಿಗಳೂ ಶಬ್ದರಚನೆಯನ್ನು ಮಾಡಿರುತ್ತಾರೆ. ಈ ಶಬ್ದಗಳು ಪ್ರಮಾಣ ಗಳೋ ಅಲ್ಲವೋ?

**ಶ್ರೀಶ್ರೀಗಳವರು**:—ಶಬ್ದದಲ್ಲಿ ಸ್ವಾಭಾವಿಕವಾದ ದೋಷವಿಲ್ಲ. ವಕ್ತೃ ಪುರುಷರುಗಳಾದ ಬುದ್ಧ, ಕ್ರಿಸ್ತ, ಮುಹಮ್ಮದ, ರಾಮಾನುಜ, ಶಂಕರ, ವಲ್ಲಭಾದಿಗಳು ನಿರ್ದುಷ್ಟಮನಸ್ಕರಾಗಿದ್ದರೆ (ವಿವಕ್ಷಿತಾರ್ಥ ತತ್ವಜ್ಞಾನ, ಕರಣ ಪಾಟವ, ಅರ್ಥವಿವಕ್ಷಾ, ಅವಿಪ್ರಲಿಪ್ಸಾ ಎಂಬ ಗುಣಗಳಿಂದ ಯುಕ್ತರಾಗಿದ್ದರೆ), ಅವರ ಶಾಸ್ತ್ರಗಳೂ ಯಥಾರ್ಥಜ್ಞಾನವನ್ನು ಹುಟ್ಟಿಸುವುವು. ಇಲ್ಲದಿದ್ದರೆ ಅಪ್ರಮಾಣಗಳೇ. ಎಂದರೆ ಅವರು ಮತ್ತೊಬ್ಬನನ್ನು ಹಿಂಸೆಮಾಡದ ಸಾಧುಗಳಾದ ಸಜ್ಜನರಾಗಿದ್ದರೆ ಅವರ ಶಾಸ್ತ್ರವು ಪ್ರಮಾಣವೆಂದು ನಂಬಕೂಡದು. ಅವರು ಸರ್ವಜ್ಞರಾಗಿದ್ದರೆ ಅವರ ತತ್ವನಿರೂಪಣೆಯು ಪ್ರಾಮಾಣಿಕವು. ಅನ್ಯಥಾ ಅಪ್ರಾಮಾಣಿಕವೇ.

**ವಿದ್ಯಾರ್ಥಿಗಳು**:—ಸ್ವಾಮಿ! ಹಾಗಾದರೆ ಇವರೆಲ್ಲರೂ ತಾವು ತಾವು ಸರ್ವಜ್ಞರೆಂದು ಹೇಳಿಕೊಂಡರೆ?

**ಶ್ರೀಶ್ರೀಗಳವರು**:—ಪರಸ್ಪರ ವಿರುದ್ಧವಾದ ತತ್ವಗಳನ್ನು ಉಪಪಾದಿಸುವವರೆಲ್ಲರೂ ಯಥಾರ್ಥಜ್ಞರೆಂದು ನಿಶ್ಚಯಿಸುವುದಕ್ಕಾಗುವುದಿಲ್ಲ. "ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ" ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. ಪ್ರಾಮಾಣಿಕವಾದ ತತ್ವನಿಶ್ಚಯವು ಒಂದೇ ಇರುವುದು. ಆದುದರಿಂದ ಇವರೆಲ್ಲರೂ ಸುಳ್ಳು ಹೇಳಿರುವರು, ಅಥವಾ ಒಬ್ಬರು ಸರಿಯಾಗಿ ಹೇಳಿರುವರೆಂದು ತಿಳಿಯಬೇಕು.

**ಪ್ರಶ್ನೆ**:—ಹಾಗಾದರೆ ಇದನ್ನು ನಿರ್ಣಯಿಸುವುದು ಹೇಗೆ?

**ಉತ್ತರ**:—**ಶ್ರೀಶ್ರೀಗಳವರು**:—ಯಾವ ಪುರುಷನೂ ಸ್ವತಂತ್ರವಾಗಿ ರಚಿಸದೇ ಇರುವ ವೇದವು ಸ್ವಭಾವತಃ ನಿರ್ದುಷ್ಟವಾಗಿರುವುದಲ್ಲದೆ, ವಕ್ತೃ ಪುರುಷಮೂಲಕವಾದ ದೋಷದಿಂದ ರಹಿತವಾಗಿರುವುದರಿಂದ ಅತ್ಯಂತ ಯಥಾರ್ಥವಾದ ಜ್ಞಾನವನ್ನು ಹುಟ್ಟಿಸುವುದು. ಅಂಥಾ ವೇದೋಕ್ತತತ್ವವನ್ನೇ ನಿರೂಪಿಸುವ ಪೌರುಷೇಯ ಗ್ರಂಥಗಳು ವೇದವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರ ಭಾರತಾದಿಗಳು ಪ್ರಮಾಣವೆನ್ನಿಸುವುವು. ತದ್ಭಿನ್ನವಾದುವುಗಳೆಲ್ಲಾ ಅಪ್ರಮಾಣಗಳೇ.

**3. ಪ್ರಶ್ನೆ**:—ವೇದವು ಯಾವ ಪುರುಷನೂ ರಚಿಸದಿರುವ ಅಪೌರುಷೇಯ ಗ್ರಂಥವೆಂದು ಶ್ರೀಕೃಷ್ಣನು ಎಲ್ಲಿ ಹೇಳಿರುತ್ತಾನೆ? ಮತ್ತು ವೇದಕ್ಕೆ ಅನುಸಾರಿಯಾದ ಪೌರುಷೇಯ ಗ್ರಂಥಗಳು ಯಾವುವು ಎಂದು ಹೇಳಿರುವನು?

**ಶ್ರೀಶ್ರೀಗಳವರು**:—ನಿಮ್ಮ ಎರಡು ಪ್ರಶ್ನೆಗಳಿಗೂ ಉತ್ತರವನ್ನು ಶ್ರೀಕೃಷ್ಣನು ಹದಿನೈದನೆಯ ಅಧ್ಯಾಯದಲ್ಲಿ ಸೂಚಿಸಿರುತ್ತಾನೆ. ಇದು ಶ್ರೀಕೃಷ್ಣನ ಮಾತುಗಳು :—

(1) **ವೇದೈಶ್ಚ ಸರ್ವೈರಹಮೇವ ವೇದ್ಯೋ**
**ವೇದಾಂತಕೃದ್ವೇದವಿದೇವ ಚಾಹಂ ||** —(15. 15.)

**ಅರ್ಥವು** :—ಸರ್ವ ವೇದಗಳಿಂದಲೂ ನಾನೇ ಮುಖ್ಯತಃ ಪ್ರತಿಪಾದ್ಯನು. ವೇದಾರ್ಥನಿರ್ಣಯಕವಾದ ಬ್ರಹ್ಮಸೂತ್ರಗಳನ್ನು ರಚಿಸಿದವನೂ ನಾನೇ. ಮತ್ತು ವೇದಾರ್ಥವನ್ನು ಚೆನ್ನಾಗಿ ನಾನೇ ತಿಳಿದವನು.

ಶ್ರೀಕೃಷ್ಣನ ಈ ವಾಕ್ಯದಿಂದ ಮೂರು ವಿಷಯಗಳು ಸಿದ್ಧವಾಗುವುವು. 1. ವೇದರೂಪವಾದ ಅನಂತಶಬ್ದರಾಶಿಗಳೂ ಪರಮಾತ್ಮನನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವುವು. ಎಂದರೆ ಸರ್ವ ವೇದಗಳಿಂದಲೂ ಪರಮಾತ್ಮವಿಷಯಕವಾದ ಯಥಾರ್ಥಜ್ಞಾನವು ಹುಟ್ಟುವುದರಿಂದ ವೇದವು ಪ್ರಮಾಣವು. 2. ಬ್ರಹ್ಮಸೂತ್ರಗಳನ್ನು ನಿರ್ದುಷ್ಟವಾದ ವೇದಗಳಲ್ಲಿ ಸರ್ವಜ್ಞನೆಂದು ಪ್ರಸಿದ್ಧನಾದ ಶ್ರೀಕೃಷ್ಣನು ಬಾದರಾಯಣ ರೂಪಿನಿಂದ ರಚಿಸಿರುವನಾದುದರಿಂದ ಅವುಗಳೂ ಉತ್ತಮಪ್ರಮಾಣಗಳೇ. ಈ ರೀತಿಯಾಗಿ ವೇದಾನುಸಾರಿಯಾಗಿರುವುದರಿಂದಲೇ ಬ್ರಹ್ಮಸೂತ್ರಗಳು ಪ್ರಮಾಣಗಳೆಂದು ಸಿದ್ಧವಾಗುವುದರಿಂದ ಇತರ ಗ್ರಂಥಗಳೂ ಈ ಮರ್ಯಾದೆಯಿಂದಲೇ ಪ್ರಾಮಾಣ್ಯವನ್ನು ಹೊಂದುವುವು. ಆದುದರಿಂದ ವೇದಾನುಸಾರಿಯಾದ ಪೌರುಷೇಯ ಗ್ರಂಥಗಳು ಪ್ರಮಾಣಗಳು. ಅನ್ಯ ಗ್ರಂಥಗಳು ಅಪ್ರಮಾಣಗಳು ಎಂದು ಸಿದ್ಧವಾಗುವುದು. 3. ವೇದಗಳು ಅಪೌರುಷೇಯಗಳೆಂದು ಈ ವಾಕ್ಯದಿಂದಲೇ ವಿದಿತವಾಗುವುದು. ಹೇಗೆಂದರೆ ಶ್ರೀಕೃಷ್ಣನು ಸರ್ವ ವೇದಗಳಿಂದಲೂ ನಾನು **ಪ್ರತಿಪಾದ್ಯನು** ಎಂದು ಹೇಳಿ, ಈ ವಿಷಯವನ್ನು ತಿಳಿಯುವುದು ಹೇಗೆ ಎಂಬ ಶಂಕೆಗೆ ಸಮಾಧಾನಾರ್ಥವಾಗಿ "ವೇದಾಂತಕೃತ್", "ವೇದವಿದೇವ ಚಾಹಂ" ಎಂಬ ಎರಡು ವಾಕ್ಯಗಳಿಂದ ಸಮಾ

ಧಾನವನ್ನು ಕೊಟ್ಟಿರುವನು. ಸರ್ವ ವೇದಗಳಿಂದಲೂ ನಾನೇ ಪ್ರತಿಪಾದ್ಯನು. ಹೇಗೆಂದರೆ ವೇದಾಂತನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನು ರಚಿಸಿದವನೂ ನಾನೇ; ಮತ್ತು ನಾನೇ ವೇದಾರ್ಥಗಳನ್ನು ಚೆನ್ನಾಗಿ ತಿಳಿದವನು ಎಂದು ಇವು ಗಳ ಅರ್ಥವು. ಇದರಲ್ಲಿ ಶ್ರೀಕೃಷ್ಣನು ಬ್ರಹ್ಮಸೂತ್ರಗಳನ್ನು ನಾನು ರಚಿಸಿದವನು ಎಂದು ಹೇಳಿ ವೇದಗಳನ್ನು ರಚಿಸಿದವನು ನಾನು ಎಂದು ಹೇಳದಿರುವುದರಿಂದ ವೇದವು ಶ್ರೀಕೃಷ್ಣನಿಂದ ರಚಿತವಲ್ಲವೆಂದು ಸಿದ್ಧವಾಗುವುದು. ಅಷ್ಟೇ ಅಲ್ಲ. "ಅಹಂ ವೇದಕೃತ್" ಎಂದರೆ ವೇದವನ್ನು ನಾನು ಮಾಡಿದವನು ಎಂದು ಹೇಳಿ ಕೊಳ್ಳದೆ, ಶ್ರೀಕೃಷ್ಣನು "ಅಹಂ ವೇದವಿತ್" ಎಂದರೆ ವೇದವನ್ನು ನಾನು ಬಲ್ಲವನು ಎಂದು ಹೇಳಿರುತ್ತಾನೆ. ಈ ವಾಕ್ಯಸ್ವಾರಸ್ಯಪರ್ಯಾಲೋಚನೆಯಿಂದ ವೇದಗಳನ್ನು ಶ್ರೀಕೃಷ್ಣನು ಮಾಡಲಿಲ್ಲವೆಂದು ನಿಶ್ಚಿತವಾಗುವುದು. ಇದ ರಿಂದ ವೇದವು ಅಪೌರುಷೇಯವಾದ ಅನಾದಿ ಶಬ್ದರಾಶಿಯೆಂದು ಏರ್ಪಡುವುದು. ಯಾತಕ್ಕೆಂದರೆ ಶ್ರೀಕೃಷ್ಣನು ವೇದವನ್ನು ತಾನು ಮಾಡಲಿಲ್ಲ. ಇತರರು ಮಾಡ ಲಿಲ್ಲವೆಂದು ಸುಪ್ರಸಿದ್ಧ ವಿಷಯವು. ಪರಿಶೇಷದಿಂದಲೂ ಕೂಡ ವೇದವು ಅನಾದಿ ನಿತ್ಯವಾದ ಯಾರಿಂದಲೂ ರಚಿತವಲ್ಲದ ಶಬ್ದರಾಶಿಯು ಎಂದು ನಿಶ್ಚಿತವಾಗುವುದು.

ಮತ್ತೊಂದು ಸ್ಥಳದಲ್ಲಿಯೂ ಶ್ರೀಕೃಷ್ಣನು ಈ ವಿಷಯವನ್ನೇ ಸೂಚಿಸಿರು ತ್ತಾನೆ:—

(2) **ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥**
—(15. 18.)

ನಾನು (ಶ್ರೀಕೃಷ್ಣನು) ಸಕಲ ಪೌರುಷೇಯ ಪ್ರಮಾಣ ಗ್ರಂಥಗಳಲ್ಲಿಯೂ ವೇದಗಳಲ್ಲಿಯೂ ಪುರುಷೋತ್ತಮನು (ಸರ್ವೋತ್ತಮ ಚೇತನನು) ಎಂದು ಪ್ರಸಿದ್ಧನಾಗಿರುತ್ತೇನೆ.

ಈ ವಾಕ್ಯದಲ್ಲಿ ಶ್ರೀಕೃಷ್ಣನು ಸಕಲ ಪೌರುಷೇಯ ಪ್ರಾಮಾಣಿಕ ಗ್ರಂಥ ಗಳನ್ನು "ಲೋಕ" ಶಬ್ದದಿಂದ ನಿರ್ದೇಶಮಾಡಿ ನಂತರ "ವೇದೇ" ಎಂದು ಪ್ರತ್ಯೇಕವಾಗಿ ಗ್ರಹಣಮಾಡಿರುವುದರಿಂದ ವೇದಗಳು "ಲೋಕ"ಕ್ಕಿಂತ ವಿಲಕ್ಷ ಣವಾದ ಎಂದರೆ ಪೌರುಷೇಯ ಗ್ರಂಥಗಳಿಗಿಂತ ವಿಲಕ್ಷಣವಾದ ಅಪೌರುಷೇಯ ವಾದ ಪ್ರಮಾಣಗಳೆಂದು ಸಿದ್ಧವಾಗುವುದು.

**ಪ್ರಶ್ನೆ**:—ಸ್ವಾಮಿ! ಇಲ್ಲಿ "ಲೋಕೇ" ಎಂಬ ಪದಕ್ಕೆ ಸಕಲ ಲೋಕದಲ್ಲಿಯೂ ನಾನು ಪುರುಷೋತ್ತಮನೆಂದು ಪ್ರಸಿದ್ಧನಾಗಿರುತ್ತೇನೆ ಎಂದು ಯಾತಕ್ಕೆ ಅರ್ಥ ಮಾಡಬಾರದು? ಸಕಲ ಪೌರುಷೇಯ ಸ್ಮೃತಿಗಳಲ್ಲಿಯೂ ಎಂದು ವಿಲಕ್ಷಣವಾಗಿ ಅರ್ಥಮಾಡುವುದರಲ್ಲಿ ಕಾರಣವೇನು?

**ಉತ್ತರ**:—**ಶ್ರೀಶ್ರೀಗಳವರು**:— 1. "ಲೋಕ" ಶಬ್ದದಿಂದ ಇಲ್ಲಿ ಮನುಷ್ಯರನ್ನು ತೆಗೆದುಕೊಳ್ಳಬಾರದು. ಪರಮಾತ್ಮನು ಅತೀಂದ್ರಿಯನು. ಆತನು ಆಗಮಮಾತ್ರಗಮ್ಯನು. ಅವನನ್ನು ಪ್ರತಿಪಾದನೆ ಮಾಡುವ ಆಗಮಗಳು ಭಾರತ, ಭಾಗವತಾದಿಗಳಂತೆ ಕೆಲವು ಪೌರುಷೇಯಗಳು. ಇಂಥಾ ಪೌರುಷೇಯಾಗಮದಿಂದ ಅನೇಕ ಅಧಿಕಾರಿಗಳು ಭಗವತ್ಸ್ವರೂಪವನ್ನು ತಿಳಿಯುವವರಾದುದರಿಂದ ಶ್ರೀಕೃಷ್ಣನು ನಾನು "ಲೋಕ"ದಲ್ಲಿ ಹೀಗೆ ಪ್ರಸಿದ್ಧನಾಗಿರುತ್ತೇನೆ ಎಂದು ಹೇಳಿದನು. ಆದುದರಿಂದ ಇಲ್ಲಿ ಲೋಕ ಶಬ್ದದಿಂದ ಗ್ರಂಥಗಳೆಂದೇ ಅರ್ಥವನ್ನು ಮಾಡಬೇಕು. 2. ಕಿಂಚ ಲೋಕಶಬ್ದದ ಮಗ್ಗುಲಿನಲ್ಲಿ "ವೇದೇ" ಎಂದು ಇತರ ಗ್ರಂಥಗಳನ್ನು ನಾಮದಿಂದ ನಿರ್ದೇಶಮಾಡಿರುವುದರಿಂದ ಲೋಕಶಬ್ದಕ್ಕೂ ಪೌರುಷೇಯ ಗ್ರಂಥಗಳೆಂದೇ ಅರ್ಥವನ್ನು ಮಾಡಬೇಕು. ಅನ್ಯಥಾ ನಿಷ್ಕಾರಣವಾಗಿ ಪ್ರಾಯಪಾಠವಿರೋಧವು ಬರುವುದು.

ಇಂಥಾ ಪೌರುಷೇಯ ಗ್ರಂಥವೈಲಕ್ಷಣ್ಯವು ವೇದದಲ್ಲಿ ಅಪೌರುಷೇಯತ್ವರೂಪವೇ ಆಗಿರುವುದು. ವೇದವು ಅಪೌರುಷೇಯವಾದುದರಿಂದ ಸರ್ವಪ್ರಕಾರದಿಂದಲೂ ನಿರ್ದುಷ್ಟವಾಗಿರುವುದು. ಆದರಿಂದ ಯಾವ ಶಬ್ದದೋಷವೂ ಆದರಲ್ಲಿ ಪ್ರವೇಶಿಸುವುದಕ್ಕೆ ಕಾರಣವೇ ಇರುವುದಿಲ್ಲ. ಇದನ್ನು ತಿಳಿದವರಿಗೆ ವೇದದಲ್ಲಿ ಅಪ್ರಾಮಾಣ್ಯ ಶಂಕೆಯೇ ಉತ್ಪತ್ತಿಯಾಗಲಾರದು. ಆದುದರಿಂದಲೇ ವೇದವು ಅತ್ಯುತ್ತಮ ಪ್ರಮಾಣವೆನ್ನಿಸುವುದು. ಭಾರತಾದಿ ಪೌರುಷೇಯ ಗ್ರಂಥಗಳು ಪ್ರಮಾಣಗಳೋ ಅಲ್ಲವೋ ಎಂಬ ಶಂಕಾಸ್ಪದವಾಗಿರುವುದರಿಂದ ಇವುಗಳು ವೇದದಷ್ಟು ನಿಶ್ಶಂಕವಾದ ಪ್ರವೃತ್ತಿಯನ್ನು ಉಂಟುಮಾಡಲಾರವು.

**4. ಪ್ರಶ್ನೆ**— ಸ್ವಾಮಿ! ಹಾಗಾದರೆ ಪೌರುಷೇಯ ಗ್ರಂಥಗಳಲ್ಲಿ ಪ್ರಾಮಾಣ್ಯನಿಶ್ಚಯವು ಹೇಗೆ?

**ಉತ್ತರ— ಶ್ರೀಶ್ರೀಗಳವರು:—**ಯಾವ ಪೌರುಷೇಯ ಗ್ರಂಥಕರ್ತನು ವೇದದಿಂದ ಸರ್ವಜ್ಞನು, ಸುಳ್ಳು ಹೇಳುವವನಲ್ಲ ಎಂದು ಪ್ರಮಿತನಾಗಿರುವನೋ ಆತನು ಬರೆದುದೆಲ್ಲವೂ ಸತ್ಯವೇ ಸರಿ. ಒಂದು ಉದಾಹರಣೆಯನ್ನು ಕೊಡುವೆವು. "ಯದ್ವೈ ಕಿಂಚನ ಮನುರವದತ್ತದ್ಭೇಷಜಂ" ಎಂದು ಸರ್ವಜ್ಞನಾದ ವಾಯುವೂ ಮತ್ತು ಮನುವೂ ತನ್ನಗ್ರಂಥಗಳಲ್ಲಿ ಸುಳ್ಳು ಹೇಳಿರುವುದಿಲ್ಲವೆಂದು ವೇದವು ಹೇಳುತ್ತದೆ.* ಆದುದರಿಂದ ಮಧ್ವಶಾಸ್ತ್ರವೂ ಮನುಧರ್ಮಶಾಸ್ತ್ರವೂ ಪ್ರಮಾಣವೆನ್ನಿಸುವುವು. "ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ"ಎಂಬ ಶ್ರುತಿವಚನದಿಂದ ಭಾರತ ಮೂಲರಾಮಾಯಣಗಳೆಂಬ ಇತಿಹಾಸಗಳೂ, ಸಾತ್ವಿಕಪುರಾಣಗಳೂ ಪ್ರಮಾಣಗಳೆಂದು ನಿರ್ಧರಿಸಲ್ಪಡುವುವು. ಯದ್ಯಪಿ ಈ ವಾಕ್ಯದಲ್ಲಿ ಪುರಾಣೇತಿಹಾಸಗಳು ಪ್ರಮಾಣವೆಂದು ಸಾಮಾನ್ಯವಾಗಿ ಹೇಳಲ್ಪಟ್ಟಿದ್ದರೂ ಸಹ ವಿಶೇಷ ವಚನಬಲದಿಂದ ಈ ವಾಕ್ಯಕ್ಕೆ ಸಂಕುಚಿತವಾದ ಅರ್ಥವನ್ನು ಮಾಡಬೇಕು. ಮುಖ್ಯವಾದ ಅಭಿಪ್ರಾಯವೇನೆಂದರೆ ಸ್ಪಷ್ಟವಾದ ವೇದವಾಕ್ಯವಿರುದ್ಧವಾದ ಯಾವ ಪೌರುಷೇಯವಚನಕ್ಕೂ ಪ್ರಾಮಾಣ್ಯವು ಇರುವುದಿಲ್ಲ. ಅವು ಸುಳ್ಳು ಹೇಳುವುವು ಎಂದು ನಿಶ್ಚಯಿಸಬೇಕು.†

---

* **"ತೇ ವಾಯವೇ ಮನವೇ ಬಾಧಿತಾ ಯೇ"** ಮುಂತಾದ ಶ್ರುತಿಗಳಿಂದ ವಾಯುದೇವರೇ ಮುಖ್ಯವಾಗಿ ಈ ಶ್ರುತಿಪ್ರತಿಪಾದ್ಯಮನುವೆಂದು ನಿರ್ಧರಿಸಬೇಕು.

† ಸರ್ವ ವೇದಗಳೂ ಶ್ರೀಮನ್ನಾರಾಯಣನೇ ಅನಂತಗುಣಭರಿತನಾದ ಪರಬ್ರಹ್ಮನೆಂದು ಹೇಳುವುದರಲ್ಲಿ ತಾತ್ಪರ್ಯವುಳ್ಳವುಗಳಾಗಿರುವುವು. ಇಂಥಾ ವೇದದ ಮಹಾ ತಾತ್ಪರ್ಯಕ್ಕೆ ವಿರುದ್ಧವಾದ ಸಮಸ್ತವೂ ತಾಮಸನೇ. ಮನುವೂ ಹಾಗೆಯೇ ಹೇಳಿರುತ್ತಾನೆ:—

**ಯಾ ವೇದ ಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ ।**
**ಸರ್ವಾಸ್ತಾಃ ನಿಷ್ಫಲಾಃ ಪ್ರೋಕ್ತಾಸ್ತಮೋನಿಷ್ಠಾಹಿತಾಃ ಸ್ಮೃತಾಃ॥**

ಆದುದರಿಂದ ಪುರಾಣಗಳಲ್ಲಿ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವ ಭಾಗಗಳೆಲ್ಲವೂ ಸಾತ್ವಿಕ ಭಾಗಗಳು. ತದ್ಭಿನ್ನವಾದುವುಗಳು ರಾಜಸತಾಮಸಗಳು. ಮತ್ಸ್ಯಪುರಾಣದಲ್ಲಿ ಈ ವ್ಯವಸ್ಥೆಯು ನಿರೂಪಿಸಲ್ಪಟ್ಟಿದೆ:—

**'ಸಂಕೀರ್ಣಾಸ್ತಾಮಸಾಶ್ಚೈವ ರಾಜಸಾಃ ಸಾತ್ವಿಕಾಃ ಸ್ಮೃತಾಃ ।**
**ಕಲ್ಪಾಶ್ಚತುರ್ವಿಧಾಃ ಪ್ರೋಕ್ತಾ ಬ್ರಹ್ಮಣೋದಿವಸಾಶ್ಚಯೇ॥**

ಪ್ರಶ್ನೆ:— ಸ್ವಾಮಿ! ಇದಕ್ಕೆ ಒಂದೆರಡು ದೃಷ್ಟಾಂತಗಳನ್ನು ಕೊಡಬೇಕು.

ಉತ್ತರ— ಶ್ರೀಶ್ರೀಗಳವರು:— 1. ಅಗ್ನಿರ್ವೈ ದೇವಾನಾಮವಮಃ ವಿಷ್ಣುಃ ಪರಮಃ ಎಂಬ ನಿರವಕಾಶ ಶ್ರುತಿಯಲ್ಲಿ ವಿಷ್ಣುವು ಸರ್ವೋತ್ತಮ

---

ಯಸ್ಮಿನ್ ಕಲ್ಪೇ ತು ಯತ್ಪ್ರೋಕ್ತಂ ಪುರಾಣಂ ಬ್ರಹ್ಮಣಾ ಪುರಾ।
ತಸ್ಯ ತಸ್ಯ ಚ ಮಾಹಾತ್ಮ್ಯಂ ತತ್ತತ್ಕಲ್ಪೇ ವಿಧೀಯತೇ ॥
ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ಪ್ರಕೀರ್ತಿತಂ।
ರಾಜಸೇಷು ಚ ಮಹಾತ್ಮ್ಯಮಧಿಕಂ ಬ್ರಹ್ಮಣೋ ವಿದುಃ ॥
ಸಂಕೀರ್ಣೇಷು ಸರಸ್ವತ್ಯಾಃ ಪಿತೄಣಾಂ ಚ ನಿಗದ್ಯತೇ।
ಸಾತ್ವಿಕೇಷು ಚ ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ ॥
ತೇಷ್ವೇವ ಯೋಗಸಂಸಿದ್ಧಾಃ ಗಮಿಷ್ಯಂತಿ ಪರಾಂಗತಿಂ।

ಕೂರ್ಮಪುರಾಣದಲ್ಲಿಯೂ ಕೂಡ ವಿಷ್ಣೂತ್ಕರ್ಷವನ್ನು ಪ್ರತಿಪಾದನೆಮಾಡದ ಗ್ರಂಥಗಳು ರಾಜಸತಾಮಸಗಳೆಂದೇ ಹೇಳಲ್ಪಟ್ಟಿರುವುದು :—

ಅಸಂಖ್ಯಾತಾಸ್ತದಾ ಕಲ್ಪಾ ಬ್ರಹ್ಮವಿಷ್ಣುಶಿವಾತ್ಮಕಾಃ।
ಕಥಿತಾ ಹಿ ಪುರಾಣೇಷು ಮುನಿಭಿಃ ಕಾಲಚಿಂತಕೈಃ ॥
ಸಾತ್ವಿಕೇಷ್ವಪಿ ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ।
ತಾಮಸೇಷು ಶಿವಸ್ಯೋಕ್ತಂ ರಾಜಸೇಷು ಪ್ರಜಾಪತೇಃ ॥

ಪದ್ಮಪುರಾಣದಲ್ಲಿ ಸಾಮಾನ್ಯವಾದ ಸಾತ್ವಿಕಾದಿ ವ್ಯವಸ್ಥೆಯು ಈ ರೀತಿ ಮಾಡಲ್ಪಟ್ಟಿರುವುದು :—

ಶೃಣು ದೇವಿ ಪ್ರವಕ್ಷ್ಯಾಮಿ ತಾಮಸಾನಿ ಯಥಾಕ್ರಮಾತ್।
ಯೇಷಾಂ ಶ್ರವಣಮಾತ್ರೇಣ ಪಾತಿತ್ಯಂ ಜ್ಞಾನಿನಾಮಪಿ ॥
ಮಾತ್ಸ್ಯಂ ಕೌರ್ಮಂ ತಥಾ ಲೈಂಗಂ ಶೈವಂ ಸ್ಕಾಂದಂ ತಥೈವ ಚ।
ಆಗ್ನೇಯಂ ತು ಷಡೇತಾನಿ ತಾಮಸಾನಿ ನಿಬೋಧ ಮೇ ॥
ವೈಷ್ಣವಂ ನಾರದೀಯಂ ತು ತಥಾ ಭಾಗವತಂ ಶುಭಂ।
ಗಾರುಡಂ ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ ॥

ದೇವತೆಯೆಂದು ಹೇಳಲ್ಪಟ್ಟಿರುವುದು. ಇದಕ್ಕೆ ವಿರುದ್ಧವಾಗಿ ಅನೇಕ ಸ್ಮೃತಿ ಪುರಾಣ ಗ್ರಂಥಗಳಲ್ಲಿ ಶಿವಾದಿಗಳು ಸರ್ವೋತ್ತಮರು ಎಂದು ಹೇಳಲ್ಪಟ್ಟಿರುವುದು. ಆದುದರಿಂದ ಅವುಗಳು ಅಪ್ರಮಾಣಗಳು ಎಂದರೆ ಸುಳ್ಳು ಹೇಳುವ

---

ಸಾತ್ವಿಕಾನಿ ಪುರಾಣಾನಿ ವಿಜ್ಞೇಯಾನಿ ಶುಭಾನಿ ವೈ ।
ಬ್ರಹ್ಮಾಂಡಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ತಥೈವ ಚ ॥
ಭವಿಷ್ಯದ್ವಾಮನಂ ಬ್ರಾಹ್ಮಂ ರಾಜಸಾನಿ ನಿಬೋಧ ಮೇ ।
ಸಾತ್ವಿಕಾ ಮೋಕ್ಷದಾಃ ಪ್ರೋಕ್ತಾ ರಾಜಸಾ ಸ್ಸ್ವರ್ಗದಾಶ್ಶುಭಾಃ ॥
ತಥೈವ ತಾಮಸಾ ದೇವಿ ನಿರಯಪ್ರಾಪ್ತಿಹೇತವಃ ।
ತಥೈವ ಸ್ಮೃತಯಃ ಪ್ರೋಕ್ತಾ ಋಷಿಭಿಸ್ತ್ರಿಗುಣಾನ್ವಿತಾಃ ॥
ಸಾತ್ವಿಕಾ ರಾಜಸಾಶ್ಚೈವ ತಾಮಸಾಃ ಶುಭದರ್ಶನೇ ।
ವಾಸಿಷ್ಠಂ ಚೈವ ಹಾರೀತಂ ವ್ಯಾಸಂ ಪಾರಾಶರಂ ತಥಾ ॥
ಭಾರದ್ವಾಜಂ ಕಾಶ್ಯಪಂ ಚ ಸಾತ್ವಿಕಾ ಮುಕ್ತಿದಾಃ ಶುಭಾಃ ।
ಮಾನವಂ ಯಾಜ್ಞವಲ್ಕ್ಯಂ ಚ ಆತ್ರೇಯಂ ದಾಕ್ಷ್ಯಮೇವ ಚ ॥
ಕಾತ್ಯಾಯನಂ ವೈಷ್ಣವಂ ಚ ರಾಜಸಾಸ್ಸ್ವರ್ಗದಾಃ ಶುಭಾಃ ।
ಗೌತಮಂ ಬಾರ್ಹಸ್ಪತ್ಯಂ ಚ ಸಾಂವರ್ತಂ ಚ ಯಮಃ ಸ್ಮೃತಂ ॥
ಶಾಂಖಂ ಚೌಶನಸಂ ದೇವಿ ತಾಮಸಾ ನಿರಯಪ್ರದಾಃ ।
ಕಿಮತ್ರ ಬಹುನೋಕ್ತೇನ ಪುರಾಣೇಷು ಸ್ಮೃತಿಷ್ವಪಿ ॥
ತಾಮಸಾ ನಿರಯಾಯೈವ ವರ್ಜಯೇತ್ತಾನ್ ವಿಚಕ್ಷಣಃ ।

ಈ ವಾಕ್ಯಗಳಲ್ಲಿ ಮಾತ್ಸ್ಯಾದಿ ಪುರಾಣಗಳು ತಾಮಸಗಳೆಂದರೆ ಪ್ರಚುರವಾಗಿ ತಾಮಸಗಳೆಂದು ಅರ್ಥವು. ವೈಷ್ಣವಾದಿ ಪುರಾಣಗಳು ಪ್ರಚುರವಾಗಿ ಸಾತ್ವಿಕಗಳು. ಬ್ರಹ್ಮಾಂಡಾದಿ ಪುರಾಣಗಳು ಪ್ರಚುರವಾಗಿ ರಾಜಸಗಳು. ಇವುಗಳಲ್ಲೆಲ್ಲಾ ಒಂದೊಂದು ಸಾತ್ವಿಕಾಂಶವು ಇದ್ದೇ ಇರುವುದು. ಯಾವ ಭಾಗವು ವಿಷ್ಣು ಮಹಿಮೆಯನ್ನು ತಿಳಿಸುವುದೋ ಅದು ಸಾತ್ವಿಕವು, ತದ್ಭಿನ್ನವಾದುವುಗಳೆಲ್ಲವೂ ರಾಜಸತಾಮಸಗಳು. ಈ ವಿಷಯವು ಮತ್ಸ್ಯ ಕೂರ್ಮ ಪುರಾಣಗಳ ಉದಾಹೃತ ವಚನಗಳಿಂದ ಸಿದ್ಧವಾಗುವುದು. ಗರುಡಪುರಾಣಸ್ಥ ವಿಶೇಷವಾಕ್ಯವೂ ಸಹ ಈ ನಿರ್ಣಯವನ್ನೇ ನಿರೂಪಿಸುವುದು :—

ತಾಮಸಶಾಸ್ತ್ರಗಳು ಎಂದು ನಿಶ್ಚಯಿಸಬೇಕು. 2. ನಪಲಾಂಡುಂ ಭಕ್ಷಯಿತ ಎಂದು ಶ್ರುತಿಯು ಈರುಳ್ಳಿ ಭಕ್ಷಣದಿಂದ ನರಕವಾಗುವುದೆಂದು ಹೇಳುವುದು. ಇದಕ್ಕೆ ವಿರುದ್ಧವಾಗಿ ಆಂಗ್ಲೇಯ ಗ್ರಂಥಗಳು ಈರುಳ್ಳಿ ಭಕ್ಷಣವನ್ನು ಪ್ರಶಸ್ತ ವೆಂದು ಹೇಳುವುವು. ಅವುಗಳು ತಾಮಸವೆಂದು ನಿಶ್ಚಯಿಸಬೇಕು.

5. **ಪ್ರಶ್ನೆ** :—ಸ್ವಾಮಿ! ಈರೀತಿಯಾಗಿ ಸುಳ್ಳು ಹೇಳುವ ಗ್ರಂಥಗಳು ಹೇಗೆ ಉತ್ಪನ್ನವಾದುವು?

**ಉತ್ತರ:–ಶ್ರೀಶ್ರೀಗಳವರು:**– ಇದೇನು ಪ್ರಶ್ನೆಯು! 1. ಅಜ್ಞಾನದಿಂದ ಕೆಲವರು ಸುಳ್ಳು ಬರೆಯುವರು. 2. ಜಗತ್ತನ್ನು ವಂಚಿಸಿ ದ್ರವ್ಯಸಂಪಾದಿಸ ಬೇಕೆಂದು ಜನಗಳ ಮನೋನುಕೂಲವಾಗಿ ಸುಳ್ಳು ವಿಷಯಗಳನ್ನು ಗ್ರಂಥ ಗಳಲ್ಲಿ ಕೆಲವರು ಬರೆಯುವರು. 3. ಪ್ರಸಂಗದೋಷದಿಂದ ಕೆಲವು ಸುಳ್ಳು ಗ್ರಂಥಗಳು ಉತ್ಪನ್ನವಾಗುವುವು. ಎಂದರೆ ಹುಡುಗಾಟದಿಂದ ಕೆಲವು ಸುಳ್ಳು ಮಾತುಗಳನ್ನು ಗ್ರಂಥಕಾರನು ಬರೆದರೆ ಮಂದರು ಅದನ್ನು ನಿಜವೆಂದು ಭ್ರಮಿ ಸಿ ಮೋಸಹೋಗುವರು. 4. ಅಪಟುಕರಣತ್ವದಿಂದ ಕೆಲವು ಸುಳ್ಳುಗಳು ಹೊರಬೀಳುವುವು. ಒಬ್ಬ ಮುದುಕನು "ಸಾರು ತೆಗೆದುಕೊಂಡು ಬಾ" ಎಂದು ಕೂಗುವುದಕ್ಕೆ ಬದಲಾಗಿ "ಸಾವು ತೆಗೆದುಕೊಂಡು ಬಾ" ಎಂದು ಕೂಗಿದನಂತೆ. ಹೀಗೆ ನಾನಾ ಕಾರಣಗಳಿಂದ ತಾಮಸ ಗ್ರಂಥಗಳು ಉತ್ಪನ್ನ

---

**ಶಾಸ್ತ್ರಾಣ್ಯಪಿ ಚ ಸರ್ವಾಣಿ ತ್ರಿವಿಧಾನಿ ಮಹಾಮತೇ |**
**ಯಾನಿ ಸತ್ತ್ವಪರಂ ವಿಷ್ಣುಂ ವದಂತಿ ಪರಮೇಶ್ವರಂ ||**
**ತಾನಿ ಸರ್ವಾಣಿ ಶಾಸ್ತ್ರಾಣಿ ಸಾತ್ವಿಕಾನಿ ಮತಾನಿ ವೈ |**
**ಪ್ರಜಾಪತಿಂ ಕೃಶಾನುಂ ಚ ತಥಾ ದೇವೀಂ ಸರಸ್ವತೀಂ |**
**ಪರತ್ವೇನ ವದಚ್ಛಾಸ್ತ್ರಂ ರಾಜಸಂ ಪರಿಚಕ್ಷತೇ |**
**ಯಚ್ಛಾಸ್ತ್ರಂ ಲಿಂಗಪಾರಮ್ಯಂ ಪರಂ ದೇವಮುಮಾಪತಿಂ |**
**ತಮಃ ಪ್ರವರ್ತಕಂ ವಕ್ತಿ ತತ್ತಾಮಸಮುದಾಹೃತಂ |**
**ಸತ್ತ್ವನಿಷ್ಠಾ ಹಿ ಪುರುಷಾ ವಿಷ್ಣುಮೇವ ಯಜಂತಿ ತೇ ||**
**ಬ್ರಹ್ಮಾಣಂ ರಾಜಸಾಸ್ಸರ್ವೇ ತಮೋನಿಷ್ಠಾಸ್ತು ಶೂಲಿನಂ |**

ವಾಗುವುವು. ಪ್ರಾಯೇಣ ಅಜ್ಞಾನವೇ ತಾಮಸ ಗ್ರಂಥಗಳ ಉತ್ಪತ್ತಿಯಲ್ಲಿ ಹೆಚ್ಚಾದ ಕಾರಣವು. ಶ್ರೀಕೃಷ್ಣನು ಹೇಳುತ್ತಾನೆ:—

**(1) ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ||**
—(2. 41.)

"ವೇದಾದಿ ಶಾಸ್ತ್ರನಿರ್ಣೀತವಾದ ಅರ್ಥವನ್ನು ತಿಳಿಯದವರ ವಾಕ್ಯಗಳು ಪರಸ್ಪರ ವಿರುದ್ಧವಾಗಿ ನಾನಾ ವಿಧವಾಗಿ ವಿಷಯವನ್ನು ಪ್ರತಿಪಾದನೆಮಾಡ ತಕ್ಕವುಗಳಾಗಿರುವುವು."

ಮುಖ್ಯ ಕಾರಣವೇನೆಂದರೆ, ದುಷ್ಕರ್ಮನಿಮಿತ್ತಕವಾದ ತಮಃಪ್ರಚುರ ವಾದ ದೇಹಬುದ್ಧಿಗಳುಳ್ಳವರಾಗಿ ಭೂಲೋಕದಲ್ಲಿ ಅನೇಕರು ಹುಟ್ಟುತ್ತಾರೆ. ಅಂಥವರಿಗೆ ವೇದದಲ್ಲಿ ಅಧಿಕಾರವೇ ಇರುವುದಿಲ್ಲ. ಬ್ರಾಹ್ಮಣದೇಹವುಳ್ಳವರಿಗೆ ಅಧಿಕಾರವಿದ್ದರೂ ಬುದ್ಧಿಗತವಾದ ತಾಮಸಗುಣಪ್ರಭಾವದಿಂದ ವೇದದಲ್ಲಿ ರತಿಯಾಗಲೀ, ಪರಂಪರೋಪದೇಶದಿಂದ ಪ್ರಾಪ್ತವಾದ ವೇದಾರ್ಥಜ್ಞಾನ ವಾಗಲೀ ಪ್ರಾಪ್ತವಾಗಲಾರದು. ತಮ್ಮ ತಮ್ಮ ತಾಮಸಬುದ್ಧಿಯಿಂದ ಸ್ವತಂತ್ರವಾಗಿ ಆಲೋಚನೆ ಮಾಡಿ ಸ್ವಕಪೋಲಕಲ್ಪಿತವಾದ ದುಸ್ತತ್ವಗಳನ್ನು ಪ್ರಾಮಾಣಿಕವೆಂಬ ದುರಭಿಮಾನದಿಂದ ಲೋಕನಾಶಾರ್ಥವಾಗಿ ಪ್ರಪಂಚದಲ್ಲಿ ಹರಡುವರು. ಇದರಿಂದ ಶ್ರೀಕೃಷ್ಣನ ದ್ವೇಷವನ್ನು ಸಂಪಾದಿಸುವರೆಂದು ಬೇರೆ ಹೇಳಬೇಕಾಗಿಲ್ಲ. ತತ್ವವಿಚಾರದಲ್ಲಿ ಶಿಷ್ಯಭಾವದಿಂದ ಉತ್ತಮಗುರು ವನ್ನು ಸೇರಿ ಬೇಕಾದಂತೆ ಪ್ರಶ್ನೆಗಳನ್ನು ಕೇಳಿ ಯಥಾರ್ಥಜ್ಞಾನವನ್ನು ಹೊಂದ ಬೇಕು. ನಿರಂಕುಶವಾದ ಮತ್ತು ನಿರ್ಮೂಲವಾದ ಆಲೋಚನೆಗೆ ವೇದೈಕ ಸಮಧಿಗಮ್ಯನಾದ ಅವ್ಯಕ್ತನಾದ ಪರಮಾತ್ಮನು ಗೋಚರನಾಗುವುದಿಲ್ಲವೆಂದು ನಿಶ್ಚಿತವಾದ ಸಿದ್ಧಾಂತವು.

**6. ಪ್ರಶ್ನೆ** :— ಸ್ವಾಮಿ! ಪರಮಾತ್ಮನು ವೇದೈಕಗಮ್ಯನೆಂದರೇನು? ಆತನು ನಮ್ಮ ಆಲೋಚನೆಗಳಿಗೆ ವಿಷಯನಾಗಲಾರನೇ?

**ಉತ್ತರ— ಶ್ರೀಶ್ರೀಗಳವರು**:— ಪರಮಾತ್ಮನು ಅಜ್ಞೇಯನೆಂದು ನಾವು ಹೇಳಲಿಲ್ಲ. "ಜ್ಞೇಯಂ ಜ್ಞಾನಗಮ್ಯಂ" ಎಂದು ಪರಮಾತ್ಮನನ್ನು ಶ್ರೀಕೃಷ್ಣನೇ ವರ್ಣಿಸಿರುವನು. ಆದರೆ ಪರಮಾತ್ಮನನ್ನು ಜಿಜ್ಞಾಸುವಾದ

ಅಧಿಕಾರಿಯು ಪ್ರತ್ಯಕ್ಷದಿಂದ ತಿಳಿಯಲಾರನು. ಪರಮಾತ್ಮನು ಅತೀಂದ್ರಿಯನು. ಪರಮಾತ್ಮನು ಕೇವಲ ಅನುಮಾನಗಮ್ಯನಲ್ಲ. ಆಗಮ ಸಹಾಯರಹಿತವಾದ ಅನುಮಾನವು ಸಂದಿಗ್ಧವೂ ಅನಿರ್ಣಾಯಕವೂ ಆಗುವುದು.

**ವಿದ್ಯಾರ್ಥಿಗಳು** :— ಸರಿ ಮಹಾಸ್ವಾಮಿ! ಕ್ಯಾಂಟ್ ಸಾಹೇಬನೂ ಹಾಗೆಯೇ ಹೇಳಿರುವನು. ಅನುಮಾನವು (Reasoning) ಅತೀಂದ್ರಿಯ ವಿಷಯಗಳಲ್ಲಿ ಯಾವ ನಿರ್ಣಯವನ್ನು ಹುಟ್ಟಿಸುವುದಕ್ಕೂ ಅಸಮರ್ಥವಾಗಿರುವುದೆಂದು ಆತನು ಬಹು ಚರ್ಚೆಯನ್ನು ಮಾಡಿ ನಿರ್ಧರಿಸಿದನು.

**ಶ್ರೀಶ್ರೀಗಳವರು** :—ಕ್ಯಾಂಟ್ ಸಾಹೇಬನು ಹೇಳಿದ ಮೇಲೆ ವೇದದಲ್ಲಿ ಹೇಳಿದಂತೆಯೇ ಸರಿ.

**ವಿದ್ಯಾರ್ಥಿಗಳು** :—ಸ್ವಾಮಿ! ಕ್ಷಮಿಸಬೇಕು. ಜ್ಞಾಪಕಕ್ಕೆ ಬಂದ ಸಂಗತಿಯನ್ನೇ ಹೇಳಿದೆವೇ ಹೊರತು ಕ್ಯಾಂಟನು ಮಹಾ ಜ್ಞಾನಿಯು, ಸರ್ವ ವಿಷಯಗಳಲ್ಲಿಯೂ ಯಥಾರ್ಥವನ್ನೇ ಹೇಳಿರುವನೆಂದು ತಾತ್ಪರ್ಯವಲ್ಲ. ಅತೀಂದ್ರಿಯ ಪದಾರ್ಥಗಳ ವಿಷಯದಲ್ಲಿ ವೇದಾದಿಗಳೇ ಪ್ರಮಾಣವೆಂದು ಶ್ರೀಕೃಷ್ಣನು ಎಲ್ಲಿ ಹೇಳಿರುತ್ತಾನೆ?

**ಉತ್ತರ— ಶ್ರೀಶ್ರೀಗಳವರು** :— ಧರ್ಮಾಧರ್ಮಗಳು ಅತೀಂದ್ರಿಯಗಳು. ಅವುಗಳನ್ನು ವೇದಾದಿ ಶಾಸ್ತ್ರದಿಂದಲೇ ತಿಳಿಯಬೇಕೆಂದು ಅರ್ಜುನನಿಗೆ ಉಪದೇಶಿಸಿರುವನು:—

(1) **ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ||**
—(16. 24.)

ಧರ್ಮಾಧರ್ಮಗಳ ನಿರ್ಣಯದಲ್ಲಿ ಶಾಸ್ತ್ರವು ಆಧಾರವು ಎಂದು ಅರ್ಥವು.

(2) **ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ |**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ||**
—(16. 23.)

ಶಾಸ್ತ್ರಾಧಾರವಿಲ್ಲದೆ ಕಾಮಕಾರತಃ = ಎಂದರೆ ಸ್ವಕಪೋಲಕಲ್ಪಿತವಾದ ಅನುಮಾನಗಳ ಆಧಾರದಿಂದ ರಚಿತವಾದ ಉಪದೇಶಾನುಸಾರವಾಗಿ ನಡೆಯುವವರು ಮೋಕ್ಷಾದಿ ಪುರುಷಾರ್ಥಗಳನ್ನು ಹೊಂದಲಾರರು ಎಂದು ಭಾವವು.

7. **ಪ್ರಶ್ನೆ** :— ಸ್ವಾಮಿ! ಈ ವಿಷಯವು ತೀರ್ಮಾನವಾಯಿತು. ಸಾಕ್ಷಾತ್ಪರಮಾತ್ಮನೇ ವೇದವ್ಯಾಸಬುದ್ಧಾದಿರೂಪಗಳಿಂದ ಸುಳ್ಳು ಶಾಸ್ತ್ರಗಳನ್ನು ಬರೆದಿರುವನೆಂದು ತಿಳಿದುಬರುವುದು. ತಾಮಸ ಪುರಾಣಗಳನ್ನೂ ವೇದವ್ಯಾಸರೇ ರಚಿಸಿದವರು. ಸಾಕ್ಷಾದ್ವಿಷ್ಣುವೇ ಸುಳ್ಳು ತತ್ವಗಳನ್ನು ರಚಿಸಿ ಜನಗಳನ್ನು ಮೋಸಮಾಡಲು ಕಾರಣವೇನು?

**ಉತ್ತರ:— ಶ್ರೀಶ್ರೀಗಳವರು** :—ಸೂಕ್ಷ್ಮಕಾರಣಗಳನ್ನು ಶ್ರೀಕೃಷ್ಣನು ಗೀತೆಯಲ್ಲಿ ಹೇಳಲಿಲ್ಲವಾದುದರಿಂದ ಬೇರೆ ವಿಚಾರದಲ್ಲಿ ಸಾವಧಾನವಾಗಿ ಈ ಪ್ರಶ್ನೆಗೆ ಉತ್ತರವನ್ನು ನಿರೂಪಿಸುವೆವು. ಆದರೆ ಈಗ ಇಷ್ಟನ್ನು ಹೇಳುವೆವು. "ಯಾಮಿಮಾಂ ಪುಷ್ಪಿತಾಂ ವಾಚಂ" ಇತ್ಯಾದಿ ಶ್ರೀಕೃಷ್ಣನ ವಾಕ್ಯಗಳ ಸ್ವಾರಸ್ಯಪರ್ಯಾಲೋಚನೆಯಿಂದ ಇಷ್ಟು ತಿಳಿದುಬರುವುದು. ಯದ್ಯಪಿ ಗ್ರಂಥಗಳಲ್ಲಿ ಪರಸ್ಪರ ವಿರುದ್ಧವಾದ ಅನೇಕ ಪ್ರಕ್ರಿಯೆಗಳೂ, ಆಪಾತತಃ ಕೆಲವು ವಿರೋಧಗಳೂ ಕಂಡುಬರುವುವು. ಆದರೆ ಮುಮುಕ್ಷುವು ಗುರೂಪದೇಶದಿಂದ ಸೂಕ್ಷ್ಮ ವಿಚಾರಮಾಡಿ ವೇದಗಳ ತಾತ್ಪರ್ಯವನ್ನು ಚೆನ್ನಾಗಿ ತಿಳಿದುಕೊಂಡು ಅವುಗಳಿಗೆ ಅನುಗುಣವಾದ ಸ್ಮೃತಿಗಳಲ್ಲಿ ವಿಶ್ವಾಸಮಾಡಿ ತಾಮಸ ವಚನಗಳನ್ನು ಅನಾದರಿಸಬೇಕು. ಶ್ರೀಕೃಷ್ಣನು ಹೇಳುತ್ತಾನೆ :—

(1) **ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ||**

—(16-24.)

ಎಲೈ ಅರ್ಜುನನೇ! ಶಾಸ್ತ್ರಕ್ಕೆ ತಾತ್ಪರ್ಯವಿಷಯೀಭೂತವಾದ ಧರ್ಮವನ್ನು ತಿಳಿದು ನೀನು ಆಚರಿಸಬೇಕು.

**ಪ್ರಶ್ನೆ** :—ಸ್ವಾಮಿ! ವಿಷ್ಣುವೇ ಸುಳ್ಳು ಪುರಾಣಗಳನ್ನು ಯಾತಕ್ಕೆ ಬರೆಯಬೇಕು?

**ಶ್ರೀಶ್ರೀಗಳವರು** :— ವಿಷ್ಣುವೇ ನಿಷಿದ್ಧವಾದ ಈರುಳ್ಳಿ ಮುಂತಾದ ಪದಾರ್ಥಗಳನ್ನು ಯಾತಕ್ಕೆ ಸೃಷ್ಟಿಸಿದನು?

**ವಿದ್ಯಾರ್ಥಿಗಳು** :—ನಾವು ಹೇಳಲಾರೆವು?

**ಶ್ರೀಶ್ರೀಗಳವರು**:—ಪರಮಾತ್ಮನು ನಾನಾ ದ್ರವ್ಯಗಳನ್ನು ಸೃಷ್ಟಿಮಾಡಿ ಕೆಲವು ಪದಾರ್ಥಗಳನ್ನು ಯಾರೂ ಯಾವಾಗಲೂ ಉಪಯೋಗಿಸ

ಬಾರದೆಂದು ನಿಯಮಿಸಮಾಡಿರುವನು. ಹೀಗೆಯೇ ನಾನಾ ವಿಧವಾದ ಗ್ರಂಥಗಳನ್ನು ಸೃಷ್ಟಿಮಾಡಿ ಕೆಲವು ಗ್ರಂಥಗಳನ್ನು ನಂಬಿ ಆಚರಿಸಬಾರದೆಂದು ನಿಯಮಿಸಿರುವನು. ಸರ್ವಕ್ಕೂ ತಾನೇ ಪ್ರೇರಕನೂ ಸೃಷ್ಟಿಕರ್ತನೂ ಆಗಿದ್ದರೂ ಸಾತ್ವಿಕ ಧರ್ಮಗಳಿಗೆ ಮಾತ್ರ ತಾನು ಫಲಕೊಡುವವನೆಂದು **"ಧರ್ಮಾವಿರುದ್ಧೋಽಭೂತೇಷು ಕಾಮೋಽಸ್ಮಿ ಭರತರ್ಷಭ"** ಮುಂತಾದ ವಾಕ್ಯಗಳಲ್ಲಿ ಸೂಚಿಸಿರುತ್ತಾನೆ. ಹೀಗೆಯೇ ಅನೇಕ ಶಾಸ್ತ್ರಗಳನ್ನು ತಾನೇ ಸಾಕ್ಷಾತ್ತಾಗಿ ಅಥವಾ ಪ್ರೇರಣೆಯಿಂದ ಅನ್ಯರ ದ್ವಾರಾ ರಚಿಸಿದ್ದರೂ ಪಾಶುಪತಾದಿ ಗ್ರಂಥಗಳನ್ನೂ, ತಾಮಸ ಪುರಾಣಾದಿಗನ್ನೂ ಸ್ವಕಪೋಲಕಲ್ಪಿತ ವಿಷಯಗಳಿಂದ ಪೂರ್ಣವಾದ ಹೂಣಾದಿಗಳ ತತ್ವವಿಷಯಕ ಗ್ರಂಥಗಳನ್ನೂ ಮುಮುಕ್ಷುಗಳು ಯಥಾರ್ಥವೆಂದು ವಿಶ್ವಾಸಮಾಡಿ ಶ್ರೀಕೃಷ್ಣನ ಕೋಪಕ್ಕೆ ಪಾತ್ರರಾಗಬಾರದು.* ಏತಕ್ಕೆಂದರೆ ಇವುಗಳೆಲ್ಲಾ ವಕ್ತೃ ಪುರುಷದೋಷಗಳಿಂದ

---

* ವಿಷ್ಣುವೇ ಉದ್ದೇಶಪೂರ್ವಕವಾಗಿ ತಾಮಸ ಪುರಾಣಗಳನ್ನು ಬರೆದಿರುವನು. ಮತ್ತು ರುದ್ರಾದಿಗಳಿಂದ ಬರೆಯಿಸಿರುವನು. ಬುದ್ಧನು ತಾಮಸ ಶಾಸ್ತ್ರವನ್ನು ಪ್ರಚುರಪಡಿಸಿದನು. ಅಸುರ ಜನರ ಮೋಹನಾರ್ಥವಾಗಿ ಸಾಕ್ಷಾತ್ ಶ್ರೀಮನ್ನಾರಾಯಣನೂ ಹೀಗೆ ಮಾಡುವನೆಂದು ಪದ್ಮ ಪುರಾಣದಿಂದ ವಿದಿತವಾಗುವುದು. ಇದುವಿಷ್ಣುವಾಕ್ಯವು:—

**ತ್ವಂ ಹಿ ರುದ್ರ ಮಹಾಬಾಹೋ ಮೋಹನಾರ್ಥಂ ಸುರದ್ವಿಷಾಂ ।**
**ತಾಮಸಾನಿ ಪುರಾಣಾನಿ ಕಥಯಸ್ವ ಚ ತಾನ್ ಪ್ರತಿ ॥**
**ಪಾಷಂಡಾಚರಣಂ ಧರ್ಮಂ ಕುರುಷ್ವ ಸುರಸತ್ತಮ ।**
**ಮೋಹನಾನಿ ಚ ಶಾಸ್ತ್ರಾಣಿ ಕುರುಷ್ವ ಚ ಮಹಾಮತೇ ॥**
**ಅಹಮಪ್ಯವತಾರೇಷು ತ್ವಾಂ ಚ ರುದ್ರ ಮಹಾಬಲ ।**
**ತಾಮಸಾನಾಂ ಮೋಹನಾರ್ಥಂ ಪೂಜಯಾಮಿ ಯುಗೇ ಯುಗೇ ॥**
**ಕಣಾದಂ ಗೌತಮಂ ಶಕ್ತಿಮುಪಮನ್ಯುಂ ಚ ಜೈಮಿನಿಂ ।**
**ಕಪಿಲಂ ಚೈವ ದುರ್ವಾಸಂ ಮೃಕುಂಡುಂ ಚ ಬೃಹಸ್ಪತಿಂ ॥**
**ತ್ವಚ್ಛಕ್ತ್ಯಾ ಸನ್ನಿವಿಷ್ಟಾಸ್ತೇ ತಮಸೋದ್ರಿಕ್ತಯಾ ಭೃಶಂ ।**
**ತಾಮಸಾಸ್ತೇ ಭವಿಷ್ಯಂತಿ ಕ್ಷಣಾದೇವ ನ ಸಂಶಯಃ ॥**

ಯಾಥಾರ್ಥ್ಯರಹಿತವಾದ ದುಷ್ಟಗ್ರಂಥಗಳು. ನಿರ್ದುಷ್ಟವಾದ ವೇದವಾಕ್ಯಕ್ಕೆ ವಿರುದ್ಧವಾದುವುಗಳು. ವೇದವು ನಿರ್ದುಷ್ಟವೆಂಬುದು ಶ್ರೀಕೃಷ್ಣನ ಉಪದೇಶಪ್ರಕಾರದಿಂದಲೇ ತಿಳಿದುಬರುವುದು. ತಾನು ಪುರುಷೋತ್ತಮನೆಂಬಲ್ಲಿ ವೇದದ ಸಮ್ಮತಿಯನ್ನು ಕೊಟ್ಟಿರುವನು. ತನ್ನ ಮಹಿಮೆಯನ್ನು ತಿಳಿಸಿಕೊಡಬೇಕಾಗಿ ಸರ್ವ ವೇದಗಳಲ್ಲಿ ತಾನು ಪ್ರತಿಪಾದ್ಯನೆಂದು ಹೇಳುವನು. ಜೀವ ಪರಮಾತ್ಮರು ನಿತ್ಯರೆಂದು ಹೇಳಿ **"ನ ಜಾಯತೇ ಮ್ರಿಯತೇ ವಾ ಕದಾಚಿತ್"** ಇತ್ಯಾದಿ ರೀತಿಯಾಗಿ ಕಾಠಕ ಶ್ರುತಿಯನ್ನು ಪ್ರಮಾಣವಾಗಿ ಉದಾಹರಿಸುವನು. ಸರ್ವಜ್ಞನಾದ ಶ್ರೀಕೃಷ್ಣನಿಂದ ಆಧಾರವೆಂದು ಸ್ವೀಕರಿಸಲ್ಪಡಬೇಕಾದರೆ ಆ ಶಬ್ದರಾಶಿಯು ಅತ್ಯಂತ ನಿರ್ದುಷ್ಟವೂ ಸಕಲ ಪೌರುಷೇಯ ಗ್ರಂಥವಿಲಕ್ಷಣವೂ ಆಗಿರಬೇಕೆಂದು ಅನುಮಾನದಿಂದಲೇ ಸಿದ್ಧವಾಗುವುದು. ವಿಶೇಷ ಚರ್ಚೆಯನ್ನು ಮಾಡಿದರೂ ಈ ನಿರ್ಣಯವು ಮತ್ತಷ್ಟು ನಿರ್ವಿವಾದವಾಗುವುದು.

**ವಿದ್ಯಾರ್ಥಿಗಳು:**—ಸ್ವಾಮಿ ! ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಯು ಆಗಲೇ ನಡೆದಿರುವುದು. ನಮಗೆ ವೇದಪ್ರಾಮಾಣ್ಯ ವಿಷಯದಲ್ಲಿ ಸಂಶಯ ವಿರುವುದಿಲ್ಲ. ನಾವು ಆಸ್ತಿಕರು.

**ಶ್ರೀಶ್ರೀಗಳವರು:**—ಬಹಳ ಸಂತೋಷ. ಹಾಗಾದರೆ ಇನ್ನೇನು ಕೇಳಬೇಕೆಂದಿರುತ್ತೀರಿ?

**ವಿದ್ಯಾರ್ಥಿಗಳು** :— ನಾಳೆಯ ದಿವಸ ತಾವು **"ಅಖಿಲಾಮ್ನಾಯೈಕ ವೇದ್ಯೋ ಹರಿಃ"** ಎಂಬ ತಮ್ಮಿಂದ ಉದಾಹೃತವಾದ ಶ್ಲೋಕಭಾಗವನ್ನು ವಿವರಿಸಿ ಶ್ರೀಕೃಷ್ಣ ವಾಕ್ಯಗಳಿಂದ ಆ ವಿಷಯವನ್ನು ಕುರಿತು ಉಪನ್ಯಾಸ ಮಾಡಬೇಕಾಗಿ ಪ್ರಾರ್ಥನೆ.

**8. ಶ್ರೀಶ್ರೀಗಳವರು:**—ಒಳ್ಳೆಯದು. ಪ್ರಕೃತದಲ್ಲಿ ಪ್ರಮಾಣ ವಿಚಾರವು ಸಮಾಪ್ತವಾಯಿತು. ಇಷ್ಟು ಸಂಕ್ಷಿಪ್ತಾರ್ಥವು. ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ ಮೂರೇ ಪ್ರಮಾಣಗಳು. ಸಾದೃಶ್ಯ, ಅರ್ಥಾಪತ್ತಿ, ಸಂಭವ, ಅನುಪಲಬ್ಧಿ, ಪರಿಶೇಷ ಇವೇ ಮುಂತಾದುವುಗಳೆಲ್ಲಾ ಈ ಮೂರರಲ್ಲೇ ಅಂತರ್ಭಾವವನ್ನು ಹೊಂದುವುವು. ಪ್ರಮಾಣ ವಿಚಾರವು ಸ್ವಲ್ಪ ಸೂಕ್ಷ್ಮ

ವಾಗಿರುವುದರಿಂದ ಅಲಸರಿಗೆ ಕಷ್ಟಕರವಾಗುವುದು. ಗೀತೆಯು ಸಿರ್ಣೀಯ ಗ್ರಂಥವು. ಶ್ರೀಕೃಷ್ಣನು ಇದರಲ್ಲಿ ಹೆಚ್ಚು ಪ್ರಮಾಣವಿಷಯಕರವಾದ ಚರ್ಚೆಯನ್ನು ನಡೆಸಿರುವುದಿಲ್ಲ. ಬ್ರಹ್ಮತರ್ಕವೇ ಮುಂತಾದ ಉದ್ಗ್ರಂಥ ಗಳಲ್ಲಿ ಪ್ರಮಾಣಲಕ್ಷಣವಿಭಾಗಾದಿಗಳು ಉಪಪಾದಿಸಲ್ಪಟ್ಟಿರುವುವು. ಶ್ರೀಮದಾ ಚಾರ್ಯರು ಪ್ರಮಾಣಲಕ್ಷಣ, ಅನುವ್ಯಾಖ್ಯಾನಾದಿ ಗ್ರಂಥಗಳಲ್ಲಿ ಅವು ಗಳನ್ನು ಉದ್ಧರಿಸಿ ಸೂಕ್ಷ್ಮ ವಿಷಯಗಳನ್ನು ನಿರೂಪಿಸಿರುವರು. ಆದುದರಿಂದ ನೀವುಗಳೆಲ್ಲರೂ ವಿಧ್ಯುಕ್ತವಾದ ರೀತಿಯಲ್ಲಿ ಆ ಗ್ರಂಥಗಳನ್ನು ಅಭ್ಯಾಸಮಾಡಿ ಗೀತಾರ್ಥವನ್ನೂ ಮತ್ತು ಇತರ ಪ್ರಮೇಯಗ್ರಂಥಗಳನ್ನೂ ಮನನಮಾಡಿ ದರೆ ನಿಮ್ಮ ಜ್ಞಾನವು ಸುದೃಢವೂ ಬ್ರಹ್ಮಸಾಕ್ಷಾತ್ಕಾರೋಪಯೋಗಿಯೂ ಆಗುವುದು. ಅನ್ಯಥಾ ಕೇವಲ ಕೆಲವು ಪ್ರಮೇಯಗಳ ವಿಶ್ವಾಸದಿಂದಲೇ ಮುಕ್ತಿಯಾಗುವುದೆಂದು ಮೂಢ ಭರವಸೆಯನ್ನು ಹೊಂದಿದ್ದರೆ ದುಸ್ತರವಾದ ಸಾಗರವನ್ನು ಸಣ್ಣ ದೋಣಿಯಿಂದ ದಾಟುವುದಕ್ಕೆ ಯತ್ನಿಸಿದಂತಾಗುವುದು. ಜ್ಯೋತಿಷ್ಯದಲ್ಲಿ ಗಣಿತಭಾಗವು ಹೇಗೆ ಶ್ರೇಷ್ಠವೋ ಮತ್ತು ಅಧಿಕಪುಣ್ಯ ಪ್ರದವೋ ಹಾಗೆಯೇ ಪ್ರಮಾಣ ಪ್ರಮೇಯ ಭಾಗಗಳಲ್ಲಿ ಪ್ರಮಾಣಭಾಗದ ಜ್ಞಾನವು ಶ್ರೇಷ್ಠವೂ ಅಧಿಕ ಪುಣ್ಯಪ್ರದವೂ ಆಗಿರುವುದು. ಆದರೆ ಒಂದನ್ನು ಬಿಟ್ಟು ಒಂದನ್ನು ಅವಲಂಬಿಸಿ ಪುರುಷಾರ್ಥವನ್ನು ಸಂಪಾದಿಸುವುದು ಅಶಕ್ಯವು. ಉಭಯದಿಂದಲೂ ಸಹಿತನಾಗಿಯೇ ಗುರುದೇವತೆಗಳ ಅನುಗ್ರಹದಿಂದ ಅಧಿ ಕಾರಿಯು ಮುಕ್ತನಾಗುವನು.

**9. ಪ್ರಶ್ನೆ**:—ಸ್ವಾಮಿ! ಪ್ರತ್ಯಕ್ಷ, ಅನುಮಾನ, ಆಗಮಗಳು ಮೂರೂ ಪ್ರಮಾಣವೆಂದು ಏರ್ಪಟ್ಟಿತು. ಆಗಮವೆಂದರೆ ಋಗಾದಿಶಾಸ್ತ್ರಗಳು. ಹೀಗಿ ರುವಲ್ಲಿ ಶ್ರೀಮನ್ಮಧ್ವಾಚಾರ್ಯರು ಮಾಡಿರುವ ಗ್ರಂಥವು ಪ್ರಮಾಣವೆಂದು ಹೇಗೆ ಪ್ರಾಪ್ತವಾಯಿತು?

**ಉತ್ತರ—ಶ್ರೀಶ್ರೀಗಳವರು**:— 1. ಆಗಮವು ಪ್ರಮಾಣವೆಂದು ಸಿದ್ಧಿ ಸಿದರೆ ಮಧ್ವಮತವು ಪ್ರಮಾಣವೆಂದು ಅನಾಯಾಸವಾಗಿ ಸಿದ್ಧಿಸಿತು. ಹೇ ಗೆಂದರೆ ಪ್ರಮೇಯಗಳಲ್ಲಾಗಲೀ, ಪ್ರಮಾಣ ವಿಷಯದಲ್ಲಾಗಲೀ ಪ್ರಾಚೀನ ಗ್ರಂಥಗಳಲ್ಲಿ ಇಲ್ಲದ ನವೀನರಚನೆಯನ್ನು ಶ್ರೀಮದಾಚಾರ್ಯರು ತಮ್ಮ

ಭಾಷ್ಯಾದಿ ಗ್ರಂಥಗಳಲ್ಲಿ ಎಲ್ಲಿಯೂ ಮಾಡಿಲ್ಲ. 2. ಕಿಂಚ **"ಯಚ್ಚಾನುಕೂಲ ಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ"** ಎಂಬ ವಚನರೀತ್ಯಾ ವೇದಶಾಸ್ತ್ರಗಳಿಗೆ ಅವಿರುದ್ಧವಾದ ಗ್ರಂಥಗಳೆಲ್ಲವೂ ಸದಾಗಮವೆಂದೇ ಕರೆಯಲ್ಪಡುವುವು. ಸರ್ವ ಶಾಸ್ತ್ರಗಳೂ ಮಧ್ವಮತವನ್ನೇ ಪ್ರತಿಪಾದಿಸುತ್ತವೆ. ಪ್ರಕೃತದಲ್ಲಿ ಶ್ರೀಮಧ್ವಮತದಲ್ಲಿ ಹೇಳಲ್ಪಟ್ಟಿರುವ ಪ್ರಮೇಯಗಳು ಗೀತೋಕ್ತವೆಂದು ತೋರಿಸಿರುತ್ತೇವೆ. ಇದರಲ್ಲಿ ನಿಮಗೆ ಸಂಶಯ ಉಂಟೋ ?

**ವಿದ್ಯಾರ್ಥಿಗಳು:**—ಸಕಲ ಗೀತಾವಾಕ್ಯಗಳೂ ಮಧ್ವಮತದ ಪ್ರಮೇಯಗಳನ್ನೇ ಹೇಳುತ್ತವೆ.

**ಶ್ರೀಶ್ರೀಗಳವರು:—** ಮಧ್ವಮತವೆಂದರೆ ತಾನೇ ಏನು ಎಂದು ತಿಳಿದಿರುತ್ತೀರಿ? ಶ್ರೀಮನ್ಮಧ್ವಾಚಾರ್ಯರು ನಿರ್ಮಿಸಿದ ಮತವೆಂದು ತಿಳಿಯಬೇಡಿರಿ. ಶ್ರುತಿಯ ಮತವೇ ಶ್ರೀಕೃಷ್ಣನ ಮತವು. ಶ್ರೀಕೃಷ್ಣನ ಮತವೇ ಶ್ರೀಮನ್ಮಧ್ವಾಚಾರ್ಯರ ಮತವು. ಶ್ರೀಮದಾಚಾರ್ಯರ ಮತವೇ ನಮ್ಮ ಮತವು. ಶ್ರೀಕೃಷ್ಣನೇ ಮೊದಲಾದ ಸಕಲ ಗುರುಗಳೂ ವೈದಿಕ ಮತದ ಲುಪ್ತವಾದ ಪ್ರಾಚೀನ ಸತ್ಸಂಪ್ರದಾಯಗಳನ್ನು ಪುನರುಪದೇಶದಿಂದ ಪ್ರವರ್ತಿಸಿದವರೇ ಹೊರತು ನೂತನವಾಗಿ ಯಾವುದನ್ನೂ ನಿರ್ಮಾಣಮಾಡಲಿಲ್ಲ.

**ಪ್ರಶ್ನೆ—ವಿದ್ಯಾರ್ಥಿಗಳು:**—ಸ್ವಾಮಿ! ಇತರ ಮತಗಳು ಇಂಥ ಅನಾದಿ ಸತ್ಸಂಪ್ರದಾಯಕ್ಕೆ ಸೇರಿಲ್ಲವೆಂದು ಹೇಗೆ ನಿರ್ಣಯಮಾಡುವುದು ?

**ಶ್ರೀಶ್ರೀಗಳವರು:—** ವೇದಾದಿ ಶಾಸ್ತ್ರಗಳಿಗೆ ವಿರುದ್ಧವಾದ ಮತವು ದುರ್ಮತವು. ಸತ್ಸಂಪ್ರದಾಯದಿಂದ ಬಂದದ್ದಲ್ಲ. ಒಂದೊಂದಾಗಿ ಕೇಳಿರಿ.

**10. ವಿದ್ಯಾರ್ಥಿಗಳು:** — ಅದ್ವೈತವು ಅನಾದಿಸತ್ಸಂಪ್ರದಾಯಕ್ಕೆ ಸೇರದ ಮತವೆಂದು ಹೇಗೆ ಹೇಳುವುದು?

**ಶ್ರೀಶ್ರೀಗಳವರು:—** ಗೌಡಪಾದ ಶಂಕರಾಚಾರ್ಯರಿಂದ ಉಪಪಾದಿತವಾದ ಅದ್ವೈತ ಮತವು ಪ್ರಚ್ಛನ್ನ ಬೌದ್ಧಮತವೆಂದು ನಾವು ತೋರಿಸಿರುತ್ತೇವೆ. ಶ್ಯಾಮಶಾಸ್ತ್ರಿಗಳು ಅದನ್ನು ಒಪ್ಪಿದರಷ್ಟೇ! ಜಗತ್ತಿನ ವಿಷಯದಲ್ಲಿಯೂ, ಬ್ರಹ್ಮನ ವಿಷಯದಲ್ಲಿಯೂ, ಮೋಕ್ಷವಿಷಯದಲ್ಲಿಯೂ ಅಡಕ್ಕೂ

ಬೌದ್ಧಮತಕ್ಕೂ ಸಹ ಅತ್ಯಂತ ಸಾದೃಶ್ಯವಿರುವುದು. * ಹೀಗಿರುವಲ್ಲಿ ಅದು ವೇದಾದಿ ಶಾಸ್ತ್ರಗಳಿಗೆ ಸಮ್ಮತವಾದ ಮತವೆಂದು ಹೇಳುವುದು ಹೇಗೆ ?

---

* ಸಭಾಸಾರಸಂಗ್ರಹ Vol I. ಪ್ರಶ್ನೋತ್ತರಗಳು ಪುಟ 23-24. ಅದ್ವೈತಮತವು ಪ್ರಚ್ಛನ್ನ ಬೌದ್ಧಮತವೆಂಬಲ್ಲಿ ಪ್ರಾಯೇಣ ಸಕಲ ಆಂಗ್ಲೇಯರೂ ಸಮ್ಮತಿಸಿರುತ್ತಾರೆ. ಪ್ರಾಚೀನರಾದ ಅನೇಕ ಭರತಖಂಡದ ವಿದ್ವದಗ್ರಣಿಗಳೂ ಒಪ್ಪಿರುತ್ತಾರೆ. ಬೌದ್ಧಮತಕ್ಕೂ ಗೌಡಪಾದ ಶಂಕರಾಚಾರ್ಯರ ಮತಕ್ಕೂ ಅತ್ಯಂತ ಸಾದೃಶ್ಯವು ಇದ್ದರೂ ಗೌಡಪಾದರೂ ಶಂಕರಾಚಾರ್ಯರೂ ಉದ್ದೇಶಪೂರ್ವಕವಾಗಿ ಅಪಲಪಿಸಿರುವರೆಂದು ಪ್ರೊಫೆಸರ್ ರಾಧಾಕೃಷ್ಣರೂ, ದಾಸಗುಪ್ತರೂ ಸಹ ಬರೆದಿರುತ್ತಾರೆ:—

1. **Later Buddhism is responsible for this exaggeration in Goudapada's theory He seems to have been conscious of the similarity of his system to some phases of Buddhist thought. He therefore protests—rather overmuch—that his view is not Buddhism.**

**—Sir S. Radhakrishnan, M.A., D.Litt.**

**1.** **ಅರ್ಥ**—ಗೌಡಪಾದರ ತತ್ವದಲ್ಲಿ ಈ ವಿಪರೀತೋಕ್ತಿಗೆ (ಸಕಲವೂ ಕಲ್ಪಿತವೆಂಬ ವಾದಕ್ಕೆ) ಅರ್ವಾಚೀನ ಬೌದ್ಧಮತವು ಕಾರಣವು. ಗೌಡಪಾದರಿಗೂ ತಮ್ಮ ತತ್ವವು ಕೆಲವು ಬೌದ್ಧ ವಾದಗಳಿಗೆ ಸದೃಶವಾಗಿತ್ತೆಂದು ತಿಳಿದಿತ್ತೆಂದು ತೋರುತ್ತದೆ. ಆದ್ದರಿಂದಲೇ ಅವರು ತಮ್ಮ ತತ್ವವನ್ನು ಪ್ರತಿಪಾದನೆ ಮಾಡುವಾಗ, ಇದು ಬುದ್ಧನಿಂದ ಹೇಳಲ್ಪಟ್ಟಿಲ್ಲ, ಇದು ಬುದ್ಧನಿಂದ ಹೇಳಲ್ಪಟ್ಟಿಲ್ಲ ಎಂದು—ಸ್ವಲ್ಪ ತುಂಬ—ವಾದಿಸುತ್ತಾರೆ.

2. **That Goudapada gives us a Vedantic adaptation of the Buddhist Sunyavada is supported by many scholars, such as Jacobi, Poussin, Sukhtankar and Vidhusekhara Bhattacharya. Unfortunately Samkara explains away all obvious references to Buddhism. See S. B. on iv. 1, 2, 19, 42, 90, where striking references to Buddha and his doctrine are explained away.** **—Sir S. Radhakrishnan, M.A., D.Litt.**

**ವಿದ್ಯಾರ್ಥಿಗಳು:**— ಅದ್ವೈತಮತವು ಬೌದ್ಧಮತವೇ. ಆದರೆ ಬೌದ್ಧಮತವು, ಯಾತಕ್ಕೆ ವೇದಾದಿಶಾಸ್ತ್ರ ಸಮ್ಮತವಾಗಿರಬಾರದು ?

---

2. **ಅರ್ಥ**— ಗೌಡಪಾದರು ಬೌದ್ಧಶೂನ್ಯವಾದವನ್ನೇ ರೀತ್ಯಂತರದಿಂದ ಉಪಪಾದಿಸುತ್ತಾರೆಂಬುದು ಪ್ರೊಫೆಸರ್ ಜೆಕೋಬಿ, ಪೌಸ್ಸಿ, ಸುಖಟಂಕರ್, ವಿಧುಶೇಖರಭಟ್ಟಾಚಾರ್ಯರೇ ಮುಂತಾದ ಅನೇಕ ಪಂಡಿತರಿಂದ ಅಂಗೀಕರಿಸಲ್ಪಟ್ಟಿದೆ. ಆದರೆ ದುರದೃಷ್ಟದಿಂದ ಶಂಕರಾಚಾರ್ಯರೇ ತಮ್ಮ ಮತದಲ್ಲಿರುವ ಅತಿ ಸ್ಪಷ್ಟವಾದ ಬೌದ್ಧ ಸಾದೃಶ್ಯವನ್ನೂ ಸಹ ಅನ್ಯಾಯವಾಗಿ ಅನ್ಯಥಾ ಉಪಪಾದಿಸಿಬಿಟ್ಟಿರುತ್ತಾರೆ. ಬ್ರ. ಸೂ. ಭಾ. iv 1, 2, 19, 42, 90, ಈ ಸ್ಥಳಗಳಲ್ಲಿ ಸ್ಪಷ್ಟಬೌದ್ಧಮತ ಸಾದೃಶ್ಯವು ಅನ್ಯಥಾ ಉಪಪಾದಿಸಲ್ಪಟ್ಟಿದೆ.

**3. He (Sankara) has I think tried his level best to explain away even the most obvious references to Buddha and Buddhism in Goudapada's Karika.**

**—S. Das Gupta, M.A., Ph.D.**

**3.** ಶಂಕರಾಚಾರ್ಯರು ಗೌಡಪಾದಕಾರಿಕೆಯಲ್ಲಿ ಅತಿ ಸ್ಪಷ್ಟವಾದ ಬೌದ್ಧಮತ ಸಾದೃಶ್ಯವನ್ನೂ ಕೂಡ ಒಪ್ಪಿಕೊಳ್ಳದೆ ಅನ್ಯಥಾ ಪ್ರತಿಪಾದಿಸುವುದಕ್ಕೆ ಅತಿ ಪ್ರಯತ್ನಮಾಡಿರುತ್ತಾರೆ.

**4. Thus, it does not seem so passing strange that there should be striking similarities between Buddhism and Sankara seeing that the sources of their thought lie so near together ......... But in view of all this, what are we to say of the vehement opposition to Buddhism which we find in Sankara's own writings, and particularly in the second section of the second chapter of his Commentary on the Vedanta sutras? ...... His language is that of the full-blooded controversialist rather than of the abstractly intellectual reasoner........**

**—W. S. Urquhart, M.A., D.Litt.**

**4.** ಈ ರೀತಿಯಾಗಿ ಶಂಕರಮತಕ್ಕೂ ಬೌದ್ಧವಾದಕ್ಕೂ ಸ್ಪಷ್ಟ ಸಾದೃಶ್ಯವು ಇರುವುದು ಏನೂ ಆಶ್ಚರ್ಯವಲ್ಲ. ಯಾತಕ್ಕೆಂದರೆ ಎರಡು ಮಾತುಗಳಿಗೂ ಆಧಾರವು ಅತಿ ಸಮೀಪವೇ ....,

**ಶ್ರೀಶ್ರಿಗಳವರು:—** ಬೌದ್ಧಮತವು ದುರ್ಮತವೆಂದು ಸೂತ್ರಕಾರರು ನಿರ್ಣಯಿಸಿರುವರು. ಶಂಕರಾಚಾರ್ಯರೂ ಕೂಡ ಬೌದ್ಧಮತವು ಶ್ರೇಯೋರ್ಥಿಗಳಿಂದ ಅನುಷ್ಠೇಯಾರ್ಹವಲ್ಲವೆಂದು ತೀರ್ಮಾನಮಾಡಿರುತ್ತಾರೆ:—

**"ಕಿಂ ಬಹುನಾ? ಸರ್ವಪ್ರಕಾರೇಣ—ಯಥಾ ಯಥಾಯಂ ವೈನಾಶಿಕಸಮಯಃ ಉಪಪತ್ತಿಮತ್ವಾಯ ಪರೀಕ್ಷ್ಯತೇ ತಥಾ ತಥಾ ಸಿಕತಾಕೂಪವದ್ವಿದೀರ್ಯತೇ ಏವ। ನ ಕಾಂಚಿದಪ್ಯತ್ರೋಪಪತ್ತಿಂ ಪಶ್ಯಾಮಃ। ಅತಶ್ಚಾನುಪಪನ್ನೋ ವೈನಾಶಿಕತಂತ್ರವ್ಯವಹಾರಃ। ಅಪಿಚ ಬಾಹ್ಯಾರ್ಥವಿಜ್ಞಾನಶೂನ್ಯವಾದತ್ರಯಮಿತರೇತರವಿರುದ್ಧಮುಪದಿಶತಾ ಸುಗತೇನ ಸ್ಪಷ್ಟೀಕೃತಮಾತ್ಮನೋ ಅಸಂಬದ್ಧಪ್ರಲಾಪಿತ್ವಂ। ಪ್ರದ್ವೇಷೋ ವಾ ಪ್ರಜಾಸು—ವಿರುದ್ಧಾರ್ಥಪ್ರತಿಪತ್ತ್ಯಾ ವಿಮುಹ್ಯೇಯುರಿಮಾಃ ಪ್ರಜಾ ಇತಿ। ಸರ್ವಥಾಪ್ಯನಾದರಣೀಯೋಽಯಂ ಸುಗತಸಮಯಃ ಶ್ರೇಯಸ್ಕಾಮೈರಿತ್ಯಭಿಪ್ರಾಯಃ ॥** —(ಶಂಕರಭಾಷ್ಯಂ, 2. 2. 33.)

**ಅರ್ಥವು :—** ಅಧಿಕಮಾತಿನಿಂದೇನು? ಯಾವ ರೀತಿಯಲ್ಲಿ ಈ ಬೌದ್ಧಮತವನ್ನು ಯುಕ್ತಿ ಇರುವುದೇ ಎಂದು ಪರೀಕ್ಷೆಮಾಡಿದರೂ, ಅದು ಮರಳಿನಲ್ಲಿ ತೋಡಿದ ಭಾವಿಯಂತೆ ನಾಶವಾಗುವುದೇ ಹೊರತು, ಒಂದಾದರೂ ಸಾಧಕ ಯುಕ್ತಿಯನ್ನು ಕಾಣಲಾರೆವು. ಆದುದರಿಂದ ಬೌದ್ಧಸಿದ್ಧಾಂತರೀತ್ಯಾ ವ್ಯವಹಾರವು ಅಯುಕ್ತವು. ಮತ್ತು ಬಾಹ್ಯಾರ್ಥವಾದ, ವಿಜ್ಞಾನವಾದ, ಶೂನ್ಯವಾದವೆಂಬ ಪರಸ್ಪರ ವಿರುದ್ಧವಾದ ಮೂರು ವಾದಗಳನ್ನು ಉಪದೇಶಮಾಡಿರುವುದರಿಂದಲೇ ಈ ಬುದ್ಧನು ತಾನು ಅಸಂಬದ್ಧಪ್ರಲಾಪಿಯೆಂದು ತೋರಿಸಿಕೊಂಡಿರುತ್ತಾನೆ. ಅಥವಾ ಈ ವಿರುದ್ಧೋಪದೇಶಗಳಿಂದ ಅವನಿಗೆ ಪ್ರಜೆಗಳಲ್ಲಿರುವ ಪ್ರದ್ವೇಷವು—ತನ್ನ ದುರುಪದೇಶವನ್ನು ನಂಬಿ ಜನರು ಮೋಸಹೋಗಲಿ ಎಂಬ

---

ಹೀಗೆ ಇಷ್ಟೆಲ್ಲಾ ಇದ್ದರೂ ಕೂಡ ಶಂಕರಾಚಾರ್ಯರು ತಮ್ಮ ಗ್ರಂಥಗಳಲ್ಲಿ ಅದರಲ್ಲಿಯೂ ದ್ವಿತೀಯಾಧ್ಯಾಯ ಬ್ರಹ್ಮಸೂತ್ರಭಾಷ್ಯದ ದ್ವಿತೀಯ ಪಾದದಲ್ಲಿ ಅತ್ಯುಗ್ರವಾಗಿ ಬೌದ್ಧವಾದವನ್ನು ಖಂಡಿಸುವುದನ್ನು ನೋಡಿ ನಾವು ಏನು ಹೇಳಬೇಕು? ಈ ಭಾಗದಲ್ಲಿ ಶಂಕರಾಚಾರ್ಯರ ಭಾಷೆಯು ಕೊಬ್ಬಿದ ವಾದಿಯ ವಾಣಿಯಂತಿರುವುದೇ ಹೊರತು ನಿರಭಿಮಾನಿಯಾದ ತತ್ವಜಿಜ್ಞಾಸುವಿನ ಮಾತುಗಳಲ್ಲ.

ಕ್ರೂರದ್ವೇಷವು ಪ್ರಕಟವಾಗುವುದು. ಆದುದರಿಂದ ಬೌದ್ಧಮತವು ಸರ್ವಥಾ ಮೋಕ್ಷಕಾಂಕ್ಷಿಗಳಿಂದ ಅನಾದರಣೀಯವು.

ಈ ದೂಷಣಗಳೆಲ್ಲಾ ಅದ್ವೈತಮತದಮೇಲೂ ಬಂದೇ ಬರುವುವು.*

**11. ಪ್ರಶ್ನೆ:**— ಸ್ವಾಮಿ! ಅದ್ವೈತಮತವು ಬೌದ್ಧಮತವಾದರೆ ಭಸ್ಮಧಾರಣಾದಿ ಸಂಪ್ರದಾಯಗಳು ಬರುವುದಕ್ಕೆ ಕಾರಣವೇನು?

**ಉತ್ತರ:—ಶ್ರೀಶ್ರೀಗಳವರು:—**ಅದ್ವೈತಿಗಳೆಲ್ಲರೂ ಪ್ರಾಚೀನ ಬ್ರಾಹ್ಮಣರೇ. ಆದುದರಿಂದಲೇ ಅನೇಕ ವೈದಿಕ ಕರ್ಮಗಳು ಅವರಲ್ಲಿರುವುವು. ಆದರೆ ಭಸ್ಮಧಾರಣ ರುದ್ರಾಕ್ಷಮಾಲಾಧಾರಣಾದಿಗಳು ವೈದಿಕವಲ್ಲ. ಅವು ಶೈವ ಸಂಪ್ರದಾಯಗಳು. ಅವುಗಳು ಶೈವರಿಂದಲೇ ಬಂತೆಂದು ಕೆಲವರು ಹೇಳುವರು. †

---

* ಈ ದೂಷಣಗಳೆಲ್ಲಾ ಅದ್ವೈತಮತದ ಮೇಲೂ ಬಂದೇ ಬರುವುವು. ಅದ್ವೈತಮತದಲ್ಲೂ ಕೂಡ ಬ್ರಹ್ಮನು ಸರ್ವ ಧರ್ಮಶೂನ್ಯನೆಂಬವಾದವೂ, ಅಭಾವಧರ್ಮಗಳುಂಟೆಂಬ ವಾದವೂ ಸಂಚರಿಸುತ್ತಿರುವುದು. ಏಕಜೀವವಾದವು ಬಹುಜೀವವಾದವು ಎಂಬ ಎರಡು ವಾದಗಳು ಪರಸ್ಪರ ವಿರುದ್ಧವಾಗಿ ಸಂಚಲಿಸುತ್ತಿರುವುವು. ಬ್ರಹ್ಮನಿಗೆ ಅವಿದ್ಯಾಸಂಬಂಧವುಂಟು, ಇಲ್ಲ. ಅವಿದ್ಯೆಯು ಮಾಯಾಜನ್ಯವು, ಮಾಯೆಯು ಅವಿದ್ಯಾಜನ್ಯವು, ಅವಿದ್ಯೆಯು ಮಾಯೆಯು ಎರಡು ಪದಾರ್ಥಗಳು, ಒಂದೇ ಪದಾರ್ಥವು; ಅವಿದ್ಯೆಗೆ ಅಂಶವುಂಟು, ಅಂಶವಿಲ್ಲ; ಜಗತ್ತು ಮಿಥ್ಯಾ ಎಂದರೆ ಮೂರು ಕಾಲದಲ್ಲೂ ಇಲ್ಲದ್ದು ಎಂದು ಅರ್ಥ, ಅನಿತ್ಯ ಎಂದು ಅರ್ಥ; ಇತ್ಯಾದಿ ಅನೇಕ ವಿರುದ್ಧವಾದಗಳು ಕಂಡುಬರುವುವು. ಪರಂತು ಅದ್ವೈತಮತವನ್ನು ವ್ಯಾಹತೋಕ್ತಿಗಳ ಭಂಡಾರವೆಂದು ಹೇಳಬಹುದು. ಸದಸದ್ವಿಲಕ್ಷಣ ವ್ಯಾವಹಾರಿಕಸತ್ತಾ, ನಿರ್ಗುಣಬ್ರಹ್ಮ, ವಿವರ್ತೋಪಾದಾನ, ತಟಸ್ಥಲಕ್ಷಣ, ಅತತ್ವಬೋಧಕ ಪ್ರಮಾಣ ಇವೇ ಮುಂತಾದ ಪದಕದಂಬಗಳು "ಇಲ್ಲ ಉಂಟು" ಎಂಬಂತೆ ಭಾವಾಭಾವ ಸಮಾಹಾರರೂಪವಾಗಿರುವುದರಿಂದ ವಿರುದ್ಧೋಕ್ತಿಗಳಾಗಿರುವುವು. ಇಂಥ ಪದಾರ್ಥಗಳು ಅಪ್ರಸಿದ್ಧಗಳೇ. ಈ ಕಾರಣದಿಂದ ಅದ್ವೈತಮತವು ಮುಮುಕ್ಷುಗಳಿಂದ ಹೇಯವೆಂದು ನ್ಯಾಯಪ್ರಾಪ್ತವಾಗುವುದು.

---

† 1. ಇದು **ಗುರುವಂಶಕಾವ್ಯದ** 109ನೇ ಪುಟದ ಶ್ಲೋಕವು :—

(1) ಶ್ರೀಚಂದ್ರಮೌಳೀಶ್ವರಲಿಂಗಮಸ್ಮೈ
ಸದ್ರತ್ನಗರ್ಭಂ ಗಣನಾಯಕಂ ಚ ।

**12. ಪ್ರಶ್ನೆ—ವಿದ್ಯಾರ್ಥಿಗಳು:**— ಸ್ವಾಮಿ! ಶೈವ ಸಂಪ್ರದಾಯವು ಅಪ್ರಾಮಾಣಿಕವೆಂದು ಹೇಳುವುದು ಹೇಗೆ?

**ಉತ್ತರ — ಶ್ರೀಶ್ರೀಗಳವರು:**— ವಿಷ್ಣು ಸರ್ವೋತ್ತಮತ್ವವನ್ನು ಗೀತೆಯಿಂದಲೇ ಸಾಧಿಸಿ ತೋರಿಸಿರುವೆವು. **ಅಗ್ನಿರ್ವೈ ದೇವಾನಾಮವಮಃ**

---

**ಸ ವಿಶ್ವರೂಪಾಯ ಸುಸಿದ್ಧದತ್ತಂ**
**ದತ್ವಾ ನ್ಯಗಾದೀಚ್ಚಿರಮರ್ಚಯೇತಿ ||**

**ಅರ್ಥವು:**—ಶಂಕರಾಚಾರ್ಯರು ತಮಗೆ ಸುಸಿದ್ಧನಿಂದ ಕೊಡಲ್ಪಟ್ಟ ಶ್ರೀಚಂದ್ರ ಮೌಳೀಶ್ವರನನ್ನೂ ರತ್ನಗರ್ಭಗಣಪತಿಯನ್ನೂ ಸುರೇಶ್ವರಾಚಾರ್ಯನಿಗೆ ಕೊಟ್ಟು ಇದನ್ನು ಬಹು ಕಾಲ ಪೂಜಿಸೆಂದು ಹೇಳಿದರು.

ಗ್ರಂಥಕಾರರೇ ಈ ಸುಸಿದ್ಧನು ಯಾರೆಂಬುದನ್ನು ತಮ್ಮ ಸ್ವಂತ ವ್ಯಾಖ್ಯಾನದಿಂದ ನಿರೂಪಿಸಿರುತ್ತಾರೆ:—**"ಸುಸಿದ್ಧೇನ ರೇವಣಾಸಿದ್ಧಮಹಾಯೋಗಿನಾ ದತ್ತಂ"** ರೇವಣಸಿದ್ಧನೆಂಬ ಮಹಾಯೋಗಿಯಿಂದ ಕೊಡಲ್ಪಟ್ಟದ್ದು ಎಂದು ಅರ್ಥವು.

ಈ ಗುರುವಂಶಕಾವ್ಯವು ಶೃಂಗೇರಿ ಆಸ್ಥಾನವಿದ್ವಾನ್ ಕಾಶೀಲಕ್ಷ್ಮಣಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು. ಇದರ ಶೋಧಕರು ವಿದ್ಯಾವಿಶಾರದ ವಿದ್ವಚ್ಛಿರೋಭೂಷಣ ಕುಣಿಗಲ್ ರಾಮಶಾಸ್ತ್ರಿಗಳು, ಧರ್ಮಾಧಿಕಾರಿ ಮೈಸೂರು ಸಂಸ್ಥಾನ. ಶ್ರೀರಂಗದ ವಾಣೀವಿಲಾಸ ಪ್ರೆಸ್ಸಿನಲ್ಲಿ ಮುದ್ರಿತವಾದುದು. ಲಕ್ಷ್ಮಣಶಾಸ್ತ್ರಿಗಳು ಗ್ರಂಥಾದಿಯಲ್ಲಿಯೇ "ಪ್ರಾಚಾಮಸಮ್ಮತಂ ನೈವಲಿಖ್ಯತೇತ್ರ ನ ಚಾಧಿಕಂ" ಎಂದು ಪ್ರತಿಜ್ಞೆ ಮಾಡಿರುವುದರಿಂದ ಈ ವಿಷಯಕ್ಕೆ ಆಧಾರವಾದ ಪ್ರಾಚೀನ ಚರಿತ್ರೆಯು ಇರುವುದೆಂದು ಸಿದ್ಧವಾಗುವುದು.

ಇನ್ನೂ ಪ್ರಾಚೀನವಾದ **ಶಿವತತ್ವರತ್ನಾಕರವೆಂಬ** ಗ್ರಂಥದ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿದ್ಯಾರಣ್ಯರು ಸನ್ಯಾಸಾಶ್ರಮವನ್ನು ಸ್ವೀಕಾರ ಮಾಡಿದ ಚರಿತ್ರೆಯನ್ನು ಬರೆಯುವ ಸಂದರ್ಭದಲ್ಲಿ ಹೀಗೆ ವರ್ಣಿಸಲ್ಪಟ್ಟಿರುವುದು:—

**ತತಃ ಸ ರೇವಣಾಸಿದ್ಧಸಂಪ್ರದಾಯಪ್ರವರ್ತಿನಾಂ |**
**ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಂ ||೯||**
**ಸಂನ್ಯಾಸಿನಮುಪಾಶ್ರಿತ್ಯ ವಿನಯಾವನತೋಽಧಿಕಂ |**
**ವೃತ್ತಾಂತಮಖಿಲಂ ತಸ್ಮೈ ಯತಯೇ ಸ್ವಂ ವ್ಯಜಿಜ್ಞಪತ್ ||೧೦||**

ವಿಷ್ಣುಃ ಪರಮಃ ಮುಂತಾದ ಅನಂತ ಶ್ರುತಿಗಳಿಗೆ ವಿರುದ್ಧವಾಗಿ, "ಪತ್ಯುರಸಾಮಂಜಸ್ಯಾತ್" ಮುಂತಾದ ಬ್ರಹ್ಮಸೂತ್ರಗಳಲ್ಲಿ ಖಂಡಿಸಲ್ಪಟ್ಟು, "ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ" "ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ" ಮುಂತಾದ ಗೀತಾವಾಕ್ಯಗಳಿಂದ ತಿರಸ್ಕೃತವಾದ ಶೈವವಾದವು

---

.... .... .... ....

ರೇವಣಾಸಿದ್ಧಸಂಪ್ರಾಪ್ತಂ ಚಂದ್ರಮೌಳೀಶಮಪ್ಯದಾತ್ ।
ಆಖ್ಯಾಚ್ಚಾನೇನ ಲಿಂಗೇನ ತನಾಭೀಷ್ಟಾಪ್ತಿರಿತ್ಯಪಿ ॥

**ಅರ್ಥವು:—** ವಿದ್ಯಾರಣ್ಯರು (ಶಿವಧರ್ಮನಾಮಕ ಬ್ರಾಹ್ಮಣನು) ರೇವಣಾಸಿದ್ಧಸಂಪ್ರದಾಯಪ್ರವರ್ತಿಗಳಾದ ಶಂಕರಾಚಾರ್ಯರ ಪರಂಪರೆಯಲ್ಲಿ ಬಂದಂಥ ಸಂನ್ಯಾಸಿಗಳನ್ನು ಸಮೀಪಿಸಿ ಅತ್ಯಂತ ವಿನಯದಿಂದ ತಮ್ಮ ಅಖಿಲ ವೃತ್ತಾಂತವನ್ನೂ ವಿಜ್ಞಾಪಿಸಿಕೊಂಡರು. ........ಆಗ ಆ ಸಂನ್ಯಾಸಿಗಳು ಶಿವಧರ್ಮನಿಗೆ (ವಿದ್ಯಾರಣ್ಯರಿಗೆ) ಸಂನ್ಯಾಸವನ್ನು ಕೊಟ್ಟು ರೇವಣಸಿದ್ಧಸಂಪ್ರಾಪ್ತವಾದ ಚಂದ್ರಮೌಳೀಶ್ವರನನ್ನೂ ಸಹ ಕೊಟ್ಟು ಈ ಲಿಂಗದಿಂದ ನಿನ್ನ ಅಭೀಷ್ಟ ಸಿದ್ಧಿಯಾಗುವುದೆಂದು ಹೇಳಿದರು.

ಶಿವತತ್ವರತ್ನಾಕರ ಗ್ರಂಥವು ಬಹು ಪ್ರಾಚೀನ ಗ್ರಂಥವು. ಇದರ ನವೀನ ಎಡಿಟರುಗಳು ಬಿ. ರಾಮರಾವ್, ಎಂ.ಎ., ಎಲ್‌ಎಲ್.ಬಿ., ಮದ್ರಾಸ್ ಗೌರ್ನಮೆಂಟ್ ಸೀನಿಯರ್ ಟ್ರಾನ್ಸ್ಲೇಟರ್ ಮತ್ತು ವಿದ್ವಾನ್ ಪಿ. ಸುಂದರಶಾಸ್ತ್ರಿ, ಅಸಿಸ್ಟೆಂಟ್ ಲೈಬ್ರೇರಿಯನ್, ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ. ಈ ಗ್ರಂಥವನ್ನು ಮುದ್ರಣಮಾಡಿಸುವಾಗ ಇಂಡಿಯಾ ಗೌರ್ನಮೆಂಟಿನ ಪ್ರಾಚೀನ ಶಾಸನ ಶೋಧಕರಾದ **ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿ, ಬಿ.ಎ.** ಎಂಬುವರು ಒಂದು ಇಂಗ್ಲಿಷ್ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ಅದರಲ್ಲಿಯೂ ಈ ಭಾಗವು ಉದಾಹರಣಯೋಗ್ಯವಾಗಿರುವುದು :—

**"One very interesting point which must be particularly drawn attention to in the story of Vidyaranya as given in the 12th Taranga of the 4th Kallola is the "Revanasiddha sampradaya" which the Acharyas of the Sankaracharya line that initiated our Vidyaranya were practising at**

ಹೇಗೆ ತಾನೇ ವೇದಸಮ್ಮತವಾದ ಬ್ರಹ್ಮಾದಿ ಪರಂಪರೆಯಿಂದ ಪ್ರಾಪ್ತವಾದ ಪ್ರಾಚೀನ ಸಂಪ್ರದಾಯಾನುಗುಣವಾದ ಯಥಾರ್ಥ ತತ್ವವೆಂದು ನಿಶ್ಚಯಿಸಲ್ಪಡುವುದು ? ಆದುದರಿಂದ ಅದು ಯಾರಿಂದಲೋ ಸ್ವಕಪೋಲಕಲ್ಪಿತವಾಗಿ

---

Sringeri. The Linga of Chandramouleswara which is still worshipped as the chief deity by the Acharyas of Sringeri Mutt, is also said to have been presented to Vidyaranya by his direct guru. Revanasiddha, we know, is a well-known Saiva teacher, whom the Veerasaivas still claim as one of their earliest Acharyas. The Keladi chiefs who were mostly followers of the Veerasaiva religion, were devout adherents of the Sringeri Sankaracharya Mutt perhaps also for the same reason *viz*: that the Shankaracharyas were followers of the Revana siddha sampradaya. This explains perhaps why in the Adwaita Mutt of Sringeri there is still a greater bias towards Saivism and Saiva worship than towards Vaishnavism and Krishna worship, though the founder, the great Sankaracharya was no respector of creeds nor of any distinction between Siva and Vishnu."

ಶೈವ ಗ್ರಂಥಕಾರನಾದ ಸಿದ್ಧನಾಥ ಶಿವಾಚಾರ್ಯನೆಂಬ ಇನ್ನು (800—900 ವರ್ಷಗಳ) ಪ್ರಾಚೀನ ಕವಿಯು ರೇವಣಸಿದ್ಧನ ಚರಿತ್ರೆಯನ್ನು ಬರೆದಿರುವಾಗಲೇ ಶಂಕರರೇವಣಸಿದ್ಧರ ಸಮಾಗಮವನ್ನು ವರ್ಣಿಸಿರುತ್ತಾನೆ.

ಆತನ ಗ್ರಂಥದಲ್ಲಿ ಶಂಕರಾಚಾರ್ಯರು ಮಲಯಪರ್ವತದಲ್ಲಿ ತಪಸ್ಸುಮಾಡಿದಹಾಗೂ, ಅಶರೀರವಾಣಿಯಿಂದ ಚಂದ್ರಮೌಳೀಶ್ವರ ಪ್ರಾಪ್ತಿಯನ್ನು ಶ್ರವಣಮಾಡಿ ಊರಿಂದ ಊರಿಗೆ ಲಿಂಗಾನ್ವೇಷಣತತ್ಪರರಾಗಿ ಸಂಚಾರಮಾಡಿದಹಾಗೂ, ಸಹ್ಯಪರ್ವತದಲ್ಲಿ ಈ ತಪೋಫಲರೂಪವಾಗಿ ರೇವಣಸಿದ್ಧನ ದರ್ಶನವಾದಂತೆಯೂ ನಿರೂಪಿಸಲ್ಪಟ್ಟಿರುತ್ತದೆ. ಇದು ರೇಣುಕಾಚಾರ್ಯನನ್ನು ಕುರಿತು

ರಚಿಸಲ್ಪಟ್ಟ ವಿಚಾರಗ್ರಂಥವೆಂದು ನಿರ್ಣಯಿಸಬೇಕು. ವೇದ, ಸೂತ್ರ, ಗೀತೆಗಳಿಗೆ ಸಮ್ಮತವಾದ ಮತವು ಒಂದೇ ಪ್ರಮಾಣಿಕ ತತ್ವವು. ಅದು ಒಂದೇ ಬ್ರಹ್ಮಾದಿ ನಿಜಪರಂಪರೆಗೆ ಸೇರಿದ ಅನಾದಿ ಮತವು. ಇತರ ಮತಗಳೆಲ್ಲಾ ಸ್ವಬುದ್ಧ್ಯನುಸಾರವಾಗಿ ಕಲ್ಪಿತವಾದುವುಗಳು ಎಂದು ಸರ್ವಸಮ್ಮತವಾದ ನಿರ್ಣಯವು.

**ಪ್ರಶ್ನೆ**:—ಸ್ವಾಮಿ ! ಇನ್ನು ಇತರ ದರ್ಶನಗಳ ಪಾಡೇನು ?

**ಉತ್ತರ:—ಶ್ರೀಶ್ರೀಗಳವರು :—** 1. ಸಾಂಖ್ಯಮತವು ಅಪ್ರಾಮಾಣಿಕವೆಂದು "**ಯತೋ ವಾ ಇಮಾನಿ ಭೂತಾನಿ ಜಾಯಂತೇ**" ಮುಂತಾದ ಶ್ರುತಿಗಳ ಪರ್ಯಾಲೋಚನೆಯಿಂದಲೂ, "**ರಚನಾನುಪತ್ತೇಶ್ಚ ನಾನುಮಾನಂ**" ಮುಂತಾದ ಬ್ರಹ್ಮಸೂತ್ರಾರ್ಥವಿಮರ್ಶೆಯಿಂದಲೂ "**ಅಹಂ ಸರ್ವಸ್ಯ ಪ್ರಭವಃ**" ಮುಂತಾದ ಗೀತಾವಾಕ್ಯಾರ್ಥಪರಾಮರ್ಶದಿಂದಲೂ ಸಿಕ್ಷಿತವಾಗುವುದು. ಸಾಂಖ್ಯಮತದಲ್ಲಿ ಜಡವಾದ ಪ್ರಧಾನವೇ ಜಗತ್ಕರ್ತೃವು, ಚೇತನನಿಗೆ ಕರ್ತೃತ್ವವಿಲ್ಲ. ಇದು ಅವೈದಿಕವೆಂದು ಹೇಳಬೇಕಾದುದೇನು ?

2. ನ್ಯಾಯಶಾಸ್ತ್ರದಲ್ಲಿ ಈಶ್ವರನು, ಎಂಟುಗುಣಮಾತ್ರವುಳ್ಳವನು, ಜೀವನೂ ಸರ್ವತ್ರ ವ್ಯಾಪ್ತನು, ದುಃಖಧ್ವಂಸವೇ ಮುಕ್ತಿಯು. ಇಂಥಾ ಅಭಿಪ್ರಾಯಗಳೂ, ಪರಮಾಣ್ವಾರಂಭವಾದವೂ, "ವಿಷ್ಣೋರ್ನು ಕಂ ವೀರ್ಯಾಣಿ ಪ್ರಾವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ" ಮುಂತಾದ ಶ್ರುತಿಗಳಿಗೂ, "ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಂ" ಮುಂತಾದ ಬ್ರಹ್ಮಸೂತ್ರಗಳಿಗೂ, "ಅಕ್ಷಯ್ಯಂ ಸುಖಮಶ್ನುತೇ" ಮುಂತಾದ ಗೀತಾ

---

(ರೇವಣಸಿದ್ಧನಿಗೆ ರೇಣುಕ ಮುಂತಾದ ಮೂರು ನಾಲ್ಕು ಹೆಸರುಗಳುಂಟೆಂದು ಆ ಗ್ರಂಥದಿಂದಲೇ ತಿಳಿದುಬರುವುದು) ಶಂಕರಾಚಾರ್ಯರು ಮಾಡಿದ ಸ್ತುತಿಯ ಕೊನೆಯ ಶ್ಲೋಕವು :—

**ಭದ್ರಾಂಕುರಾಯ ಭಜತಾಮಭಯಂಕರಾಯ**
**ಯೋಗೇಶಕಲ್ಪತರವೇ ಕವಯೇ ಮುನೀನಾಂ ।**
**ಕೈವಲ್ಯತಲ್ಪಗುರವೇ ಗುರವೇ ಗುರೂಣಾಂ**
**ಶ್ರೀರೇಣುಕಾಯ ಗಣಪಾಯ ನಮೋಽಸ್ತು ತುಭ್ಯಂ ॥.**

ವಾಕ್ಯಗಳಿಗೂ ವಿರುದ್ಧವಾಗಿರುವುವು. ಆದುದರಿಂದ ಅದೂ ಸ್ವಕಪೋಲಕಲ್ಪಿತವಾದ ತತ್ವವು.

3. ಪತಂಜಲಿಯ ಯೋಗಸೂತ್ರವೂ ಕೂಡ "ಏತೇನ ಯೋಗಃ ಪ್ರತ್ಯುಕ್ತಃ" ಮುಂತಾದ ಬ್ರಹ್ಮಸೂತ್ರಗಳಿಗೂ ಯೋಗಾನುಶಾಸನವನ್ನು ವರ್ಣಿಸುವ ಉಪನಿಷತ್ತುಗಳಿಗೂ ಅನೇಕ ವಿಷಯಗಳಲ್ಲಿ ವಿರುದ್ಧವಾಗಿರುವುದರಿಂದಲೂ, ಶ್ರೀಕೃಷ್ಣನಿಂದ ಉಪದಿಷ್ಟವಾದ ಕರ್ಮಯೋಗಾದಿಗಳಿಗೂ ಕೆಲವು ವಿಷಯಗಳಲ್ಲಿ ವಿರುದ್ಧವಾಗುವುದರಿಂದಲೂ ಸ್ವಕಪೋಲಕಲ್ಪಿತವಾದ ತತ್ವವೆಂದು ನಿರ್ಧರಿಸಬೇಕು.

4. ಜೈಮಿನಿಕೃತ ಮೀಮಾಂಸಾಶಾಸ್ತ್ರದ ಮೂಲಾರ್ಥವು ದುರ್ಘಟವು. ಶಾಬರ, ಭಟ್ಟ, ಪ್ರಭಾಕರರೇ ಮುಂತಾದವರ ವ್ಯಾಖ್ಯಾನರೂಪದಿಂದ ನಿರ್ಗಳಿತವಾದ ಮೀಮಾಂಸಾಶಾಸ್ತ್ರವು ಅಪ್ರಾಮಾಣಿಕವೆಂದು ಸಾಮಾನ್ಯರಿಗೂ ವಿದಿತವಾಗುವುದು. "ತಸ್ಮೈ ನಮಃ ಕರ್ಮಣೇ" ಎಂದು ಮೀಮಾಂಸಾಶಾಸ್ತ್ರಕಾರರು ಕರ್ಮವೇ ಸ್ವತಂತ್ರಫಲಪ್ರದವೆಂದು ನಂಬಿರುವರು. ಸ್ವರ್ಗವೇ ಮುಕ್ತಿಯು. ಈಶ್ವರನೇ ಇಲ್ಲವೆಂದು ಅನೇಕ ಮೀಮಾಂಸಕರ ವಾದವು.

**14. ವಿದ್ಯಾರ್ಥಿಗಳು:—** ಇದು ನಿಸ್ಸಂದೇಹವಾಗಿಯೂ ದುಸ್ತತ್ವವು. ಸ್ವಾಮಿ! ರಾಮಾನುಜತತ್ವವು ದ್ವೈತವಾದವನ್ನೇ ಹೇಳುವುದಷ್ಟೇ!

**ಉತ್ತರ— ಶ್ರೀಶ್ರೀಗಳವರು:—**ಅನೇಕ ವಿಷಯದಲ್ಲಿ ವೇದಕ್ಕೆ ಅವಿರುದ್ಧವಾಗಿರುವುದು. ಆದರೆ ಪರಂಪರೋಪದೇಶರಾಹಿತ್ಯವನ್ನು ತೋರಿಸುವ ಅನೇಕ ದೋಷಗಳು ಆದರಲ್ಲಿರುವುವು.

1 * **ತ್ರಿವಿಧಾ ಭವತಿ ಶ್ರದ್ಧಾ ಪ್ರಾಣಿನಾಂ ಸಾ ಸ್ವಭಾವಜಾ ।**
**ಸಾತ್ವಿಕೀ ರಾಜಸೀ ಚೇತಿ ತಾಮಸೀ ಚೇತಿ ತಾಂ ಶೃಣು ॥**
**ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।**
**ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಸ್ಸ ಏವ ಸಃ ॥**
—(17. 2-3)

---

* ತಾ॥ ಭರತಕುಲೋತ್ಪನ್ನನೇ! ಜೀವರ ಆಸ್ತಿಕ್ಯಬುದ್ಧಿಯು ಸಾತ್ವಿಕ, ರಾಜಸ, ತಾಮಸವೆಂದು ಮೂರು ವಿಧವಾಗಿರುವುದು. ಈ ಆಸ್ತಿಕ್ಯಬುದ್ಧಿಯು "ಸ್ವಭಾವಜಾ ಏವ" ಸ್ವರೂಪಭೂತವಾದದ್ದೇ, ಮನೋವೃತ್ತಿರೂಪವಾದುದು ಅಲ್ಲ. ಈ ಶ್ರದ್ಧಾತ್ರಯಗಳಿಂದ ಯುಕ್ತರಾದ ಜನರಿಂದ ಆಚರಿಸಲ್ಪಟ್ಟ ಯಜನಪ್ರಕಾರವನ್ನು ಕೇಳು. (ಅದರಂತೆ ಮಾಡು) ಸಮಸ್ತವಾದ ಪ್ರಾಣಿಗಳ ಆಸ್ತಿಕ್ಯ

ಮುಂತಾದ ಅನೇಕಸ್ಥಳಗಳಲ್ಲಿ ಶ್ರೀಕೃಷ್ಣನು ಸ್ಪಷ್ಟವಾಗಿ ಜೀವರುಗಳು ತ್ರಿವಿಧರೆಂದು ತೋರಿಸಿದ್ದರೂ ಸಹ ಜೀವತ್ರೈವಿಧ್ಯವು ಶಾಸ್ತ್ರಸಮ್ಮತವಲ್ಲವೆಂದು ಹೇಳುವರು. 2. ಮತ್ತು ಜ್ಞಾನಾತಿರಿಕ್ತವಾದ ಆನಂದವೇ ಇಲ್ಲವೆಂದು ಅನುಭವವಿರುದ್ಧವಾದ ಪ್ರಕ್ರಿಯೆಯನ್ನು ಹೇಳುವರು. 3. ವಿಷ್ವಕ್ಸೇನ ಶೇಷಾದಿ ಅನೇಕ ದುಃಖಸಂಬಂಧವುಳ್ಳ ದೇವತೆಗಳು ನಿತ್ಯಮುಕ್ತರೆಂದು ಅಪ್ರಾಮಾಣಿಕ ನಿಶ್ಚಯವನ್ನು ಮಾಡಿರುವರು. 4. ಸರ್ವಾಧಿಕವಾದ ಅನರ್ಥವೇನೆಂದರೆ, ನಿರವಧಿಕಪರಿಪೂರ್ಣನಾದ ಪರಮಾತ್ಮನಿಗೆ ಸಮಾನವಾದ ಆನಂದಭೋಗವು ಪ್ರತಿಯೊಬ್ಬ ಜೀವನಿಗೂ ಮುಕ್ತಿಯಲ್ಲಿ ಬರುವದೆಂದು ಕಲ್ಪನೆಯನ್ನು ಮಾಡಿರುವರು. 5. ಮತ್ತು ಅತಿ ಹಾಸ್ಯಾಸ್ಪದವಾದ ಸತ್ಖ್ಯಾತಿವಾದವನ್ನು ಶಾಸ್ತ್ರದಲ್ಲಿ ಅಂಗೀಕರಿಸಿ ಭ್ರಮವೇ ಯಾರಿಗೂ ಇಲ್ಲ, ಎಲ್ಲವೂ ಯಥಾರ್ಥಜ್ಞಾನವೆಂದು ಪ್ರತಿಪಾದಿಸಿರುವರು. ಇವೇ ಮುಂತಾದ ವಿಷಯಗಳ ಪರ್ಯಾಲೋಚನೆಯಿಂದ ಈ ಮತವೂ ಅನೇಕ ಮುಖ್ಯಾಂಶಗಳಲ್ಲಿ ಸ್ವಕಪೋಲಕಲ್ಪಿತವಾದ ಪ್ರಕ್ರಿಯೆಯೇ ಹೊರತು, ಪ್ರಾಚೀನ ಉತ್ತಮ ಪರಂಪರೋಪದೇಶದಿಂದ ಪ್ರಾಪ್ತವಾದ ತತ್ವವಲ್ಲವೆಂದು ಹೇಳಬೇಕಾಗಿರುವುದು.

**15. ವಿದ್ಯಾರ್ಥಿಗಳು :—** ಸ್ವಾಮಿ! ಕೆಲವು ವಿಷಯಗಳು ಸುಳ್ಳಾಗಿದ್ದ ಮಾತ್ರಕ್ಕೆ ಸರ್ವ ವಿಷಯಗಳಲ್ಲಿಯೂ ಅಪ್ರಮಾಣವೆಂದು ಹೇಳುವುದು ಹೇಗೆ?

**ಉತ್ತರ— ಶ್ರೀಶ್ರೀಗಳವರು :—** ನಮ್ಮ ಅಭಿಪ್ರಾಯವು ನಿಮಗೆ ತಿಳಿಯಲಿಲ್ಲ. ಸಕಲ ಮತಗಳಲ್ಲಿಯೂ ಕೆಲವು ಪ್ರಾಮಾಣಿಕ ವಿಷಯಗಳು ಇದ್ದೇ ಇರುವವು. ಆದರೆ ಆ ಕಾರಣದಿಂದ ಆ ಮತವು ಸಜ್ಜನರಿಂದ ಪರಿಗ್ರಾಹ್ಯವಾಗಿ ಪ್ರಾಚೀನ ಸಂಪ್ರದಾಯದಿಂದ ಬಂದುದೆಂದು ಹೇಳಲಾಗುವುದಿಲ್ಲ. ಸರ್ವ ಪ್ರಕಾರದಿಂದಲೂ ನಿರ್ದುಷ್ಟವಾಗಿ ಬ್ರಹ್ಮದೇವರ ಪರಂಪರೆಯಿಂದ ಪ್ರಾಪ್ತ

---

ಬುದ್ಧಿಯೂ, "ಸತ್ವಾನುರೂಪಾ" ಎಂದರೆ ಜೀವಸ್ವರೂಪವಾಗಿರುತ್ತದೆ (ಸತ್ವಂ ಜೀವಃ ಕ್ವಚಿತ್ ಪ್ರೋಕ್ತಃ) (ಶ್ರದ್ಧೆಯು ಜೀವಸ್ವರೂಪಾನುರೂಪವಾಗಿರುವುದರಿಂದ ಅದರಿಂದ ಜೀವಸ್ವರೂಪವನ್ನು ತಿಳಿಯಬೇಕು ಎಂದು ಭಾವ.) ಶ್ರದ್ಧೆಗೆ ಜೀವಸ್ವರೂಪಾನುರೂಪತ್ವವು ಹೇಗೆ ಬಂತೆಂದರೆ; ಈ ಜೀವನು "ಶ್ರದ್ಧಾಮಯನು" ಎಂದರೆ ಶ್ರದ್ಧಾಸ್ವರೂಪನು. (ತಾದಾತ್ಮ್ಯಾರ್ಥೇಮಯಟ್. ಸೂರ್ಯನು ಪ್ರಕಾಶಮಯನು ಎಂಬಂತೆ.) ಯಾರು ಎಂತಹ ಶ್ರದ್ಧೆಯುಳ್ಳವರೋ ಅವರು ಅವರೇ.

ವಾದ, ಅತಏವ ನಿಜತತ್ವಗಳನ್ನು ಮಾತ್ರವೇ ಒಳಗೊಂಡ, ಒಂದು ವಿಷಯದಲ್ಲಿಯೂ ಸುಳ್ಳನ್ನು ಹೇಳದಿರುವ ಶಾಸ್ತ್ರವೇ ಶಾಸ್ತ್ರವು. ವೇದ, ಸೂತ್ರ, ಭಾರತಾದಿಗಳಿಗೆ ಅನುಗುಣವಾಗಿ ಸರ್ವದೋಷವಿವರ್ಜಿತವಾದ ಮತವೇ ಮತವು. ಅನ್ಯಮತಗಳ ಅವಲಂಬನೆಯಿಂದ ಮೋಕ್ಷಜನಕವಾದ ಪರಮಾತ್ಮನ ಪ್ರಸಾದವು ಪ್ರಾಪ್ತವಾಗಲಾರದು. ಈಶ್ವರಾದಿಗಳು ತಾಮಸ ಉಗ್ರಕರ್ಮಗಳಿಗೂ ಪ್ರತಿಫಲರೂಪವಾಗಿ ವರಗಳನ್ನು ಕೊಡುವರು. ಅದು ಬೇರೆ ವಿಷಯವು. ಪರಮಾತ್ಮನ ಸಾಕ್ಷಾತ್ಕಾರವು ಅರ್ಜುನಾದಿ ಭಕ್ತರುಗಳಿಗೆ ಆದಂತೆ ಆಗಲಾರದು.

**ದುರಾಗಮಾಸ್ತದನ್ಯೇ ಯೇ ತೈರ್ನ ಜ್ಞೇಯೋ ಜನಾರ್ದನಃ ॥**

ಎಂದು ಸ್ಕಾಂದವಚನವಿರುವುದು.

ಯುಕ್ತಿಯಿಂದಲೂ ಕೂಡ ಯಾವುದಾದರೂ ಒಂದು ಮತವೇ ನಿಜತತ್ವವನ್ನು ಬೋಧಿಸತಕ್ಕ ಸಂಪ್ರದಾಯಕ್ಕೆ ಸೇರಿದುದು ಮತ್ತು ಸರ್ವದೋಷರಹಿತವಾದುದು ಎಂದು ಸಿದ್ಧವಾಗುವುದು. ಹೇಗೆಂದರೆ—

**ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।**
**ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥**

ಎಂಬ ಗೀತಾವಾಕ್ಯದಲ್ಲಿ ಶ್ರೀಕೃಷ್ಣನು ನಿರ್ಣೀತವಾದ ಶ್ರುತಿಸಿದ್ಧಾಂತವು ತಿಳಿದಮೇಲೆಯೇ ಅಪರೋಕ್ಷಜ್ಞಾನವು ಆಗುವುದೆಂದು ಹೇಳಿರುತ್ತಾನೆ. ಆ ಅಪರೋಕ್ಷವು ಸದುಪದೇಶದಿಂದ ಜನ್ಯವಾದ ತತ್ವಜ್ಞಾನದಿಂದಲೇ ಆಗಬೇಕು. ಹೇಗೆಂದರೆ "ವೇದವಿದೇವಚಾಹಂ" ಎಂದರೆ ದುರ್ಗಮವಾದ ವೇದಾರ್ಥವನ್ನು ನಾನೊಬ್ಬನೇ ಚೆನ್ನಾಗಿ ತಿಳಿದವನೆಂದು ಶ್ರೀಕೃಷ್ಣನು ಹೇಳಿದನು. ಆದುದರಿಂದ ಇತರರಿಗೆ ವೇದಾರ್ಥವು ಪರಮಾತ್ಮನ ಉಪದೇಶ ಪರಂಪರೆಯಿಂದ ಬರಬೇಕು. ಪರಮಾತ್ಮನು ದೇವತೆಗಳಿಗೆ ಸಾಕ್ಷಾತ್ತಾಗಿ ಉಪದೇಶಮಾಡಿರುವನು. ಸರ್ವಜ್ಞರಾದ ದೇವತೆಗಳು ಋಷ್ಯಾದಿಗಳಿಗೆ ಉಪದೇಶಮಾಡಿರುವರು. ಈರೀತಿಯಾಗಿಯೇ ನಿಜತತ್ವವು ಪ್ರಚಾರವನ್ನು ಹೊಂದುವುದು. ಪ್ರಾಚೀನ ಪರಂಪರೋಪದೇಶಕ್ಕೆ ಶ್ರೀಕೃಷ್ಣನ ತತ್ವವು ಸೇರಿದುದು ಎಂಬುದು,

**ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ।**
**ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥**
**ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ।**

* * * * *

**ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ॥**
—(4. 1-3.)

ಇತ್ಯಾದಿ ಗೀತಾವಾಕ್ಯಗಳಿಂದ ಸ್ಪಷ್ಟವಾಗುವುದು. ಇಂಥಾ ಬ್ರಹ್ಮಾದಿ ದೇವತಾಪರಂಪರೆಗೆ ಸೇರದ ಅನ್ಯತತ್ವಗಳು ಸ್ವಬುದ್ಧಿ ವೈಚಿತ್ರ್ಯಾನುಗುಣವಾಗಿ ಸ್ವಲ್ಪ ಸುಳ್ಳು, ಹೆಚ್ಚು ಸುಳ್ಳು, ಮಹತ್ತರ ಸುಳ್ಳು ಹೀಗೆ ಕ್ರಮವಾಗಿ ಅನೃತ ಭೂಯಿಷ್ಟವಾಗಿ, ಮಾಡಿದವರಿಗೂ ನಂಬಿದವರಿಗೂ ಅನರ್ಥದಾಯಕವಾಗಿರುವುವು. "ವೇದವಾದರತಾಃ ಪಾರ್ಥ" ಎಂಬಲ್ಲಿಯೂ, "ಬಹುಶಾಖಾಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ" ಎಂಬಲ್ಲಿಯೂ ಆಪಾತತಃ ವೇದಕ್ಕೆ ತೋರುವ ಅರ್ಥವನ್ನು ಆಧಾರವಾಗಿಟ್ಟುಕೊಂಡು ಸುಳ್ಳು ಶಾಸ್ತ್ರಗಳನ್ನು ಅನೇಕರು ರಚಿಸಿರುವರು ಎಂದು ಶ್ರೀಕೃಷ್ಣನು ಸೂಚಿಸಿರುವನು. ಆದರೆ "ವ್ಯವಸಾಯಾತ್ಮಿಕಾ ಬುದ್ಧಿರೇಕೇಹ", ನಿರ್ಣೀತವಾದ ಶಾಸ್ತ್ರಸಮ್ಮತವಾದ ಮತವು ಒಂದೇ. ಅದನ್ನೇ ಶ್ರೀಕೃಷ್ಣನು ಹೇಳಿರುತ್ತಾನೆ. ಅದನ್ನೇ ಶ್ರೀಮನ್ಮಧ್ವಾಚಾರ್ಯರು ಪ್ರಮಾಣ ವಾಕ್ಯಗಳ ಉಪಬೃಂಹಣದಿಂದ ಪ್ರತಿಪಾದಿಸಿ ತೋರಿಸಿರುವರು. ಅವರು ಯಾವ ವಿಷಯದಲ್ಲಿಯೂ ವೇದಾದಿ ಪ್ರಮಾಣಗಳಿಗೆ ಅಸಮ್ಮತವಾಗಿಯಾಗಲೀ ವಿರುದ್ಧವಾಗಿಯಾಗಲೀ ಬರೆದಿಲ್ಲವೆಂದು ನಾವು ತೋರಿಸುತ್ತೇವೆ. ನೀವು ಬೇಕಾದ ವಿಷಯದಲ್ಲಿ ಪ್ರಶ್ನೆಮಾಡಿರಿ.

**16. ವಿದ್ಯಾರ್ಥಿಗಳು:**—ಸ್ವಾಮಿ! ನಾವು ಅಷ್ಟು ಸಮರ್ಥರಲ್ಲ. ಮಧ್ವಮತವೂ ಶ್ರೀಕೃಷ್ಣನ ಮತವೂ ಒಂದೇ ಎಂದು ನಮಗೆ ತಿಳಿಯಿತು. ಆದರೂ ಶ್ರೀಮನ್ಮಧ್ವಾಚಾರ್ಯರು ಸರ್ವಜ್ಞರೆಂಬಲ್ಲಿ ಏನಾದರೂ ಪ್ರಮಾಣವಿದ್ದರೆ ಹೇಳಬೇಕಾಗಿ ಪ್ರಾರ್ಥಿಸುತ್ತೇವೆ.

**ಉತ್ತರ—ಶ್ರೀಶ್ರೀಗಳವರು:**—ಮುಖನೋಡಿದರೆ ಇದು ಹನುಮಂತನ ವಿಗ್ರಹವು ಎಂದು ತಿಳಿಯುವಂತೆ ಅವರು ಮಾಡಿದ ಕಾರ್ಯವೇ ಅವರ ಸರ್ವಜ್ಞತೆಯನ್ನು ಪ್ರಕಟಮಾಡುವುದು. ಸರ್ವ ವಿಷಯಗಳಲ್ಲಿಯೂ ವೇದಾದಿಗಳ

ಪ್ರಮಾಣ ವಾಕ್ಯಗಳನ್ನು ಉದಾಹರಿಸಿ ಬಾದರಾಯಣರ ಮತವನ್ನು ಪ್ರಕಾಶ ಪಡಿಸಿದರು.

ಪರಂತು ಶ್ರೀಮದಾಚಾರ್ಯರು ಉತ್ತಮ ದೇವತಾವತಾರರೂಪರೆಂದು ವಚನಗಳೂ ಉಂಟು. ಇತರ ಸರ್ವಮತಗಳನ್ನೂ ಧಿಕ್ಕರಿಸತಕ್ಕ ವಾಕ್ಯಗಳೂ ಉಂಟು. ಆದರೆ ಸ್ವಸ್ವಮತಾಭಿಮಾನದಿಂದ ಜನರುಗಳು ಆ ವಾಕ್ಯಗಳನ್ನು ಕೆಲವು ವೇಳೆ ಗ್ರಂಥಗಳಿಂದಲೇ ತೆಗೆದುಬಿಡುವರು; ಕೆಲವು ವಚನಗಳನ್ನು ವ್ಯತ್ಯಾಸಮಾಡುವರು. ಕೆಲವು ಪ್ರಕ್ಷಿಪ್ತಗಳೆಂದು ಹೇಳುವರು. ಇಂಥ ವಿವಾದವನ್ನು ಪರಿಹರಿಸುವುದು ಅಶಕ್ಯವು. ಹೀಗೆ ನಾನಾವಿಧವಾದ ತೊಂದರೆ ಗಳಿದ್ದರೂ ಪ್ರಸಿದ್ಧವಾದ ಕೆಲವು ಶ್ರುತಿಗಳನ್ನು ಯಾರೂ ಏನೂ ಮಾಡ ಲಾರರು. ಅವುಗಳ ಅರ್ಥವನ್ನು ನೀವೇ ನೋಡಿರಿ.

(1) ಬಳಿತ್ಥಾ ಸೂಕ್ತದಲ್ಲಿ "**ಯದೀಮನುಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ**" ಎಂದು ಹೇಳಲ್ಪಟ್ಟಿದೆ. ಎಂದರೆ ಜ್ಞಾನಿಶ್ರೇಷ್ಠನಾದ ವಾಯುದೇವತೆಯು ಅವತಾರರೂಪರಾದಂಥಾ ಮಧ್ವಾ ಚಾರ್ಯರು ಪರಮಾತ್ಮನೇ ಜಗತ್ಪತಿಯು ಎಂಬ ವಿಷಯದಲ್ಲಿ ಶ್ರುತಿತತಿಗಳನ್ನು ಮಥನಮಾಡುತ್ತಾರೆ ಮತ್ತು ದುಸ್ತತ್ವಗಳ ಪ್ರಚಾರದಿಂದ ಗೂಢನಾದ ವಿಷ್ಣು ವನ್ನು ಸರ್ವೋತ್ತಮನೆಂದು ಪುನಃ ಪ್ರಕಟಿಸುತ್ತಾರೆ ಎಂದು ಅರ್ಥವು. ಈ ಮಹಿಮೆಯೂ "ಮಾತರಿಶ್ವಾ ಮಧ್ವಃ" ಎಂಬ ನಿರ್ದೇಶವೂ ಅನ್ಯರಿಗೆ ಸಲ್ಲ ಲಾರದು.

(2) **ಸಪ್ತಸ್ವಸೄಃ ಋಷಿರ್ವಾವಶಾನೋ ವಿದ್ವಾನ್**
**ಮಧ್ವ ಉಜ್ಜಭಾರಾದೃಶೀಕಂ॥**

ಈ ಶ್ರುತಿಯಲ್ಲಿ **ವಿದ್ವಾನ್ ಮಧ್ವಃ** ಎಂದರೆ ಜ್ಞಾನಿಗಳಾದ ಮಧ್ವಾಚಾ ಚಾರ್ಯರು ಸಮಿಾಚಿನ ಜ್ಞಾನಾರ್ಥವಾಗಿ ಚತುರ್ವೇದಗಳು, ಮೂಲರಾಮಾ ಯಣ, ಪುರಾಣೇತಿಹಾಸಗಳು, ಪಂಚರಾತ್ರಾಗಮಗಳೆಂಬ ಸಪ್ತಪ್ರಕಾರವಾದ ಶಾಸ್ತ್ರಗಳನ್ನು ಉದ್ಧಾರಮಾಡುತ್ತಾರೆ ಎಂದು ಹೇಳಲ್ಪಟ್ಟಿರುವುದು. ಇದರಲ್ಲಿ ಉಕ್ತವಾದ ವ್ಯಾಪಾರವೂ, "ವಿದ್ವಾನ್ ಮಧ್ವಃ" ಎಂಬ ನಿರ್ದೇಶವೂ ಮತ್ತೊಬ್ಬ ರಿಗೆ ಸಲ್ಲಲಾರದು.

**3. ........ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ ।**

ಸರ್ವೋತ್ತಮನಾದ ವಿಷ್ಣುವಿನ ಪಾದದಲ್ಲಿ ಮಧ್ವಾಚಾರ್ಯರು **ಪೂರ್ಣೋ**ತ್ಸಾಹದಿಂದ ಆಸಕ್ತರಾಗಿದ್ದಾರೆ ಎಂದು ಅರ್ಥವು. ವಿಷ್ಣುಸರ್ವೋತ್ತಮತ್ವ ಜ್ಞಾನಪೂರ್ವಕವಾಗಿ ವಿಷ್ಣುವಿನ ಪಾದದಲ್ಲಿ ಆಸಕ್ತರಾದ, ಮಧ್ವನಾಮ ಧಾರಕರು ಶ್ರೀಮದಾಚಾರ್ಯರೇ ಆಗಿರುವರು.

**4. ಪವಮಾನಮವಸ್ಯವೋ ವಿಪ್ರಮಭಿಪ್ರಗಾಯತ**
**ಸುಷ್ವಾಣಂ ದೇವವೀತಯೇ ॥**

**ಅರ್ಥವು :**—ದೇವತಾರಕ್ಷಣಾರ್ಥವಾಗಿ ಆವಿರ್ಭೂತರಾದ **ಪವಮಾನಂ ವಿಪ್ರಂ**= ವಾಯುಸ್ವರೂಪರಾದ ಬ್ರಾಹ್ಮಣರನ್ನು ಸಂಸಾರ ಭೀತಿಯಿಂದ ರಕ್ಷಣೆಯನ್ನು ಇಚ್ಛಿಸುವವರು ಸ್ತೋತ್ರಮಾಡಿರಿ.

ಇಲ್ಲಿ ಬ್ರಾಹ್ಮಣತ್ವವನ್ನು ಹೊಂದಿದ ವಾಯುದೇವತ್ವವು, ದೇವತಾ ರಕ್ಷಣಾರ್ಥವಾಗಿ ಅವತರಿಸೋಣವು, ಮತ್ತು ಸಂಸಾರ ಭೀತಿಯಿಂದ ಜನರುಗಳನ್ನು ರಕ್ಷಾಮಾಡುವ ಸಾಮರ್ಥ್ಯವು ಈ ಮೂರು ಲಕ್ಷಣಗಳು ಮೋಕ್ಷಪ್ರದವಾದ ಶಾಸ್ತ್ರವನ್ನು ಪ್ರದರ್ಶಿಸಿ ವಿಷ್ಣುದೇವತೋದ್ದೇಶಕ ಪರಮಧರ್ಮಗಳು ಯಥಾವಸ್ಥಿತವಾಗಿ ನಡೆಯುವಂತೆ ಮತವನ್ನು ಸ್ಥಾಪಿಸಿ ಬ್ರಾಹ್ಮಣರೂಪದಿಂದ ವಿಜೃಂಭಿಸಿದ ಶ್ರೀಮದಾಚಾರ್ಯರಲ್ಲಿ ಅನ್ವಯಿಸುವುದೇ ಹೊರತು ಅನ್ಯರಲ್ಲಿ ಕೂಡಲಾರದು.

**5. ಮಧ್ವೋ ವೋ ನಾಮ ಮಾರುತಂ ಯಜತ್ರಾಃ**
**ಪ್ರಯಜ್ಞೇಷು ಶವಸಾಮದಂತಿ ॥**

ಎಲೈ ದೇವತೆಗಳಿರಾ! ನಿಮ್ಮ ಸ್ವಾಮಿಯಾದ ಮಧ್ವನಾಮಕವಾದ ಮರುದ್ರೂಪವನ್ನು ಯಾಜ್ಞಿಕರು ಯಜ್ಞದಲ್ಲಿ ಸುಖದಿಂದ ಸಂತೋಷಪಡಿಸುತ್ತಾರೆ. ಇಲ್ಲಿ ವಾಯುರೂಪರಾದ ಮಧ್ವಾಚಾರ್ಯರೆಂಬ ನಿರ್ದೇಶವು ವಾಯುದೇವರಿಗೆ ಮಧ್ವನಾಮಕ ಒಂದು ಅವತಾರವು ಉಂಟೆಂಬಲ್ಲಿ ಸಾಧಕವಾಗಿರುತ್ತದೆ.

ಇನ್ನೂ ಅನೇಕ ಶ್ರುತಿಸ್ಮೃತಿಗಳಿರುತ್ತವೆ. ಸಾವಕಾಶವಾಗಿ ಶ್ರೀಮದಾಚಾರ್ಯರ ವಿಭವವನ್ನು ನಿರೂಪಿಸುತ್ತೇವೆ. ಪ್ರಕೃತದಲ್ಲಿ ಗೀತಾವಿಷಯದಲ್ಲಿ ನೀವು ಕೇಳಿದ ಪ್ರಶ್ನೆಗೆ ಉತ್ತರ ಬಂತೋ ಇಲ್ಲವೋ?

**ವಿದ್ಯಾರ್ಥಿಗಳು**— ಶ್ರೀಮನ್ಮಧ್ವಾಚಾರ್ಯರು ವಾಯುದೇವರಾದುದರಿಂದ ಅವರು ಸರ್ವಜ್ಞರೆಂದು ಸಿದ್ಧವಾಯಿತು. ಮತ್ತು ಅವರು ಮಾಡಿದ ಗ್ರಂಥಗಳು ಪ್ರಾಮಾಣಿಕವಾದುವುಗಳೆಂದು ಸಿದ್ಧವಾಗುವುವು.

17. **ಶ್ರೀಶ್ರೀಗಳವರು**–ನಿಜವೇ! ಆದರೂ ಒಂದು ಸೂಕ್ಷ್ಮವಿರುವುದು. ದೇವತಾ ಅವತಾರವಾದ ಮಾತ್ರಕ್ಕೆ ಅವರು ಮಾಡಿದ ಗ್ರಂಥಗಳು ಪ್ರಾಮಾಣಿಕವಾದುವುಗಳು ಎಂದು ಏರ್ಪಡುವುದಿಲ್ಲ. ದೇವತೆಯಾದ ಮಹಾದೇವನು ಪಾಶುಪತಾದಿ ದುರಾಗಮಗಳನ್ನು ರಚಿಸಿ ಲೋಕವನ್ನು ಮರುಳುಮಾಡಿದನೆಂದು ಪ್ರಮಿತವಾಗಿರುವುದು. ವಿಷ್ಣುವಿನ ಅವತಾರರೂಪನಾದ ಬುದ್ಧನು ಸುಳ್ಳು ತತ್ವವನ್ನು ಬರೆದನೆಂದು ಪ್ರಮಿತವಾಗಿರುವುದು. ಹಾಗೆಯೇ ಅದ್ವೈತಾದಿ ಶಾಸ್ತ್ರಗಳನ್ನು ಮಹಾದೇವರೇ ಮುಂತಾದ ದೇವತೆಗಳು ಅನ್ಯರನ್ನು ನಿಮಿತ್ತಮಾಡಿ ಪ್ರವರ್ತಿಗೆ ತಂದಿರುವರೆಂದೂ ಪ್ರಮಾಣಗಳಿರುತ್ತವೆ. ಪ್ರಕೃತದಲ್ಲಿ ವಾಯುದೇವತೆಯು ಲೋಕದಲ್ಲಿ ಅವತಾರಮಾಡಿ ಸುಳ್ಳು ತತ್ವವನ್ನು ರಚಿಸಿ ಜನರನ್ನು ಹಾಳುಮಾಡುವನೆಂದು ಎಲ್ಲಿಯೂ ಪ್ರಮಿತವಾಗಿಲ್ಲ. ಇದೂ ಅಲ್ಲದೆ ಶ್ರೀಮದಾಚಾರ್ಯರ ತತ್ವವು ಅತ್ಯಂತ ಶ್ರೇಷ್ಠವೆಂಬಲ್ಲಿ ಮುಖ್ಯವಾದ ಯುಕ್ತಿಯೇನೆಂದರೆ ಅದು ಸರ್ವ ಶ್ರುತಿಗಳಿಗೂ ಸ್ಮೃತಿಗಳಿಗೂ ಸಾತ್ವಿಕ ಪುರಾಣಗಳಿಗೂ ಸಮ್ಮತವಾಗಿರುವುದು. ಲೋಕದಲ್ಲಿ ಅನ್ವಯಿಸಿ ನೋಡಿದರೆ ಹೃದಯಂಗಮವಾಗುವಂತೆ ಅನುಭವಕ್ಕೆ ಬರುವುದು. ತತ್ವಗಳ ಪ್ರಾಶಸ್ತ್ಯವನ್ನು ತಿಳಿಯಬೇಕಾದರೆ ಲೋಕವ್ಯವಹಾರವು ಒರೆಗಲ್ಲೆನಿಸುವುದು. ನಮ್ಮ ಸಮಸ್ತ ತತ್ವ ವಿಷಯಕ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರವನ್ನು ಕೊಡುವ ತತ್ವವನ್ನು ಸುಳ್ಳೆಂದು ಅಪಲಪಿಸುವುದು ಹೇಗೆ ಸಾಧ್ಯವಾಗುವುದು ?

**ವಿದ್ಯಾರ್ಥಿಗಳು**:—ಹೌದು ಮಹಾ ಸ್ವಾಮಿ ! ಅದ್ವೈತಮತದಲ್ಲಿ ವ್ಯವಹಾರಾದಿಗಳೂ ಒಂದೂ ಇಲ್ಲ ಎಂಬ ಒಂದೇ ಉತ್ತರವೇ ಹೊರತು ತತ್ವದ ಆನುಗುಣ್ಯ ಚಿಂತೆಗೇ ಅವಕಾಶವಿರುವುದಿಲ್ಲ.

18. **ಶ್ರೀಶ್ರೀಗಳವರು**:—ತತ್ವವೂ ಸುಳ್ಳೆಂದು ಅವರ ಮಾತಿನಿಂದಲೇ ಪ್ರಾಪ್ತವಾಗುವುದರಿಂದ ಮುಮುಕ್ಷುಗಳು ವಿಚಾರಮಾಡಿ ಬೇರೆ ತತ್ವವನ್ನು

ಅವಲಂಬಿಸುವುದು ಉಚಿತವು. ಸಮೀಚೀನಶಾಸ್ತ್ರಗಳು ವೇದಾದಿಗಳೆಂದು ಶ್ರೀ ಕೃಷ್ಣನು ಹೇಳಿದನು. ಮತ್ತು ವೇದತಾತ್ಪರ್ಯಕ್ಕೆ ವಿಷಯವಾದ ವಸ್ತುವು ತಾನೇ ಎಂದು ಹೇಳಿದನು. ಇದರಿಂದ ವಿಷ್ಣುವಿನಲ್ಲೇ ಸರ್ವಾಗಮಗಳಿಗೂ ತಾತ್ಪರ್ಯವಿರುವುದೆಂದು ಸಿದ್ಧವಾಯಿತು. ಮಹಾಭಾರತದಲ್ಲಿ ವಿಷ್ಣುಸಹಸ್ರ ನಾಮದ ಉಪಸಂಹಾರ ಶ್ಲೋಕಗಳ ಮಧ್ಯದಲ್ಲಿ ಇದನ್ನೇ ಸದಾಗಮಲಕ್ಷಣ ವಾಗಿ ಭೀಷ್ಮಾಚಾರ್ಯರು ಪ್ರತಿಪಾದಿಸಿರುವರು.

**ಏಷ ನಿಷ್ಕಂಟಕಃ ಪಂಥಾಃ ಯತ್ರ ಸಂಪೂಜ್ಯತೇ ಹರಿಃ ।**
**ಕುಪಥಂ ತಂ ವಿಜಾನೀಯಾದ್ಗೋವಿಂದರಹಿತಾಗಮಂ ॥**

**ಅರ್ಥವು:**—ಯಾವ ಗ್ರಂಥದಲ್ಲಿ ಶ್ರೀಹರಿಯೇ ಸರ್ವೋತ್ತಮ ಪೂಜ್ಯ ನೆಂದು ಪ್ರತಿಪಾದಿಸಲ್ಪಟ್ಟಿರುವುದೋ ಅದೇ ಅನಾಯಾಸದಿಂದ ಮೋಕ್ಷವನ್ನು ಹೊಂದಿಸತಕ್ಕ ಶಾಸ್ತ್ರವು. ಗೋವಿಂದನನ್ನು ಪ್ರತಿಪಾದಿಸದ ಆಗಮವು ಎಂದರೆ ಅನ್ಯ ದೇವತೆಗಳ ಆಧಿಕ್ಯವನ್ನು ಪ್ರತಿಪಾದಿಸುವ ಅಥವಾ ನಿರ್ಗುಣ ಬ್ರಹ್ಮಾದಿಗಳನ್ನು ಪ್ರತಿಪಾದಿಸುವ ಆಗಮಗಳು ದುಷ್ಟಶಾಸ್ತ್ರಗಳೆನ್ನಿಸುವುವು.

ಇದರಿಂದ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕಗ್ರಂಥಗಳೇ ಸದಾಗಮ ಗಳು, ತದ್ಭಿನ್ನವಾದ ಸಕಲ ಗ್ರಂಥಗಳೂ ದುರಾಗಮಗಳು ಎಂದು ನಿಶ್ಚಿತ ವಾಗುವುದು. ಈ ಕಾರಣದಿಂದಲೇ ಶ್ರೀಮನ್ಮಧ್ವಶಾಸ್ತ್ರವು ಸದಾಗಮವು ತದನ್ಯ ಗ್ರಂಥಗಳೆಲ್ಲಾ ಸತ್ಪರಂಪರೆಗೆ ಸೇರದ ದುರಾಗಮಗಳೆಂದು ನಾವು ನಿರೂಪಿಸಿದೆವು.

# IX.

# ವಿಷ್ಣುವೇ ಸರ್ವವೇದಪ್ರತಿಪಾದ್ಯನು.

19—8—1930 ರಲ್ಲಿ (ಚಿತ್ರರಂಜನ, ಮೈಸೂರು.)

———

**ಸಭಿಕರು—ಧರ್ಮಾಧಿಕಾರಿಗಳು, ವಿದ್ವಾಂಸರು, ಮತ್ತು ವಿದ್ಯಾರ್ಥಿಗಳು.**

I. **ಪ್ರಶ್ನೆ—ವಿದ್ಯಾರ್ಥಿಗಳು:**— ಸ್ವಾಮಿ ! ದಿವ್ಯ ಭೋಜನಾಂತ್ಯದಲ್ಲಿ ಮೊಸರನ್ನವನ್ನು ಬಯಸುವ ಬ್ರಾಹ್ಮಣನಂತೆ ನಮ್ಮ ಮನಸ್ಸು ತಮ್ಮ ಶ್ಲೋಕದ ಅಂತ್ಯಪಾದವಾದ **"ಅಖಿಲಾಮ್ನಾಯೈಕವೇದ್ಯೋ ಹರಿಃ"** ಎಂಬ ವಿಷಯ ದಲ್ಲಿ ವಿಶೇಷ ನಿರೂಪಣವನ್ನು ಶ್ರವಣಮಾಡಬೇಕೆಂದು ಇಚ್ಛಿಸುತ್ತಿರುವುದು.

**ಉತ್ತರ– ಶ್ರೀಶ್ರೀಗಳವರು:—"ಅಖಿಲಾಮ್ನಾಯೈಕ ವೇದ್ಯೋಹರಿಃ"** ಎಂಬ ವಾಕ್ಯಕ್ಕೆ ಎರಡು ಅರ್ಥಗಳು ಇರುವುವು. 1. ಶ್ರೀಹರಿಯು ಶಾಸ್ತ್ರೈಕ ಗಮ್ಯನು ಎಂದು ಒಂದು ಅರ್ಥವು. ಎಂದರೆ ಕೇವಲ ಪ್ರತ್ಯಕ್ಷದಿಂದಲಾಗಲೀ ಕೇವಲ ಅನುಮಾನದಿಂದಲಾಗಲೀ ಮುಮುಕ್ಷುವು ಪ್ರಥಮತಃ ಪರಮಾತ್ಮನ ಮಹಿಮೆಯನ್ನೂ, ದರ್ಶನಪ್ರಕಾರವನ್ನೂ ನಿರ್ಣಯಿಸಲಾರನು. ಪರಮಾತ್ಮ ನನ್ನು ಶಾಸ್ತ್ರದಿಂದಲೇ ತಿಳಿಯಬೇಕು ಎಂದು ತಾತ್ಪರ್ಯವು. ಈ ವಿಷಯವು ಪೂರ್ವದಲ್ಲಿಯೇ ವಿಸ್ತಾರವಾಗಿ ಚರ್ಚಿಸಲ್ಪಟ್ಟಿರುತ್ತದೆ. 2. ಸರ್ವಾಗಮ ಗಳಿಂದಲೂ ಮುಖ್ಯತಃ ಎಂದರೆ ಪರಮಮುಖ್ಯವೃತ್ತಿಯಿಂದ ಪರಮಾತ್ಮನೇ ಪ್ರತಿಪಾದ್ಯನುಎಂದು ಎರಡನೆಯ ಅರ್ಥವು. **"ಸರ್ವೇ ವೇದಾ ಯತ್ಪದಮಾ ಮನಂತಿ"** ಇತ್ಯಾದಿ ಶ್ರುತಿಗಳಲ್ಲಿ ಈ ಪ್ರಮೇಯವು ನಿರೂಪಿತವಾಗಿರುವುದು. ಸರ್ವವೇದಗಳು ಎಂದರೆ ವೇದದಲ್ಲಿರುವ ಸರ್ವವಾಕ್ಯಗಳೂ, ಪದಗಳೂ, ವರ್ಣ ಗಳೂ, ಸ್ವರಗಳೂ ಸಹ ಪರಮಾತ್ಮನ ಅಗಣಿತ ಗುಣಗಳನ್ನು ಬೋಧಿಸುವುವು.

ವೇದವು ಮುಖ್ಯವಾಗಿ ಪರಮಾತ್ಮಸ್ತುತಿಪರವಾದ ಸ್ತೋತ್ರಮಾಲೆಯೇ. ಈ ವಿಷಯವನ್ನು ಈ ದಿವಸ ನಿರೂಪಿಸಬೇಕಾಗಿರುವದು.

2. **ಪ್ರಶ್ನೆ**—ಸ್ವಾಮಿ! ಸರ್ವ ವೇದಗಳೂ ಪರಮಾತ್ಮನನ್ನೇ ಬೋಧಿಸುವುವು ಎಂಬಲ್ಲಿ ಯಾವ ಗೀತಾವಾಕ್ಯವು ಆಧಾರವಾಗಿರುವುದು?

**ಉತ್ತರ—ಶ್ರೀಶ್ರೀಗಳವರು:**—ಕೇಳಿಲ್ಲವೇ?

**ವೇದೈಶ್ಚ ಸರ್ವೈರಹಮೇವ ವೇದ್ಯೋ**
**ವೇದಾಂತಕೃದ್ವೇದವಿದೇವ ಚಾಹಂ ॥**

—(15. 15.)

**ಅರ್ಥವು:**—ಸರ್ವ ವೇದಗಳಿಂದಲೂ ನಾನೇ ಪ್ರತಿಪಾದ್ಯನು, ವೇದಾರ್ಥನಿರ್ಣಯಕವಾದ ಬ್ರಹ್ಮಸೂತ್ರಗಳನ್ನು ರಚಿಸಿದವನೂ ನಾನೇ, ಸರ್ವ ವೇದಾರ್ಥಗಳನ್ನೂ ನಾನೇ ತಿಳಿದವನು.

ಈ ಶ್ಲೋಕಾರ್ಥ ಪರ್ಯಾಲೋಚನೆಯಿಂದ ಎರಡು ಮೂರು ವಿಷಯಗಳು ತಿಳಿದುಬರುವುವು. 1. ಸರ್ವ ವೇದಗಳಿಗೂ ಎಂದರೆ ತತ್ವಮಸಿ ಅಹಂಬ್ರಹ್ಮಾಸ್ಮಿ ಮುಂತಾದ ಉಪನಿಷತ್ತುಗಳಿಂದ ಸಹಿತವಾದ ಸರ್ವ ವೇದಗಳಿಗೂ ಶ್ರೀಕೃಷ್ಣನು ಪುರುಷೋತ್ತಮನು ಎಂದು ಪ್ರತಿಪಾದಿಸುವುದರಲ್ಲಿಯೇ ತಾತ್ಪರ್ಯವಿರುತ್ತದೆ. ಆದುದರಿಂದ ಪುರುಷೋತ್ತಮನೆಂದು ಪ್ರಸಿದ್ಧನಾದ ಪರಬ್ರಹ್ಮನು ಸರ್ವ ವೇದಪ್ರತಿಪಾದ್ಯನು ಎಂದರೆ ಸರ್ವವೇದಗಳಿಂದಲೂ ಜ್ಞೇಯನು. ಅವನು ಅಜ್ಞೇಯನಾದ ನಿರ್ಗುಣ ವಸ್ತುವಲ್ಲ. "ಸರ್ವೈಃ ವೇದೈಃ ಅಹಂ ವೇದ್ಯ ಏವ" ಎಂಬ ಯೋಜನಾ ಪ್ರಕಾರದಿಂದ ಈ ಅರ್ಥವು ಸಿದ್ಧವಾಗುವುದು. 2. ಸರ್ವವೇದಗಳಿಂದ ವಿಷ್ಣುವೇ ಜ್ಞೇಯನಾದುದರಿಂದ ತತ್ವಮಸಿ, ಅಹಂ ಬ್ರಹ್ಮಾಸ್ಮಿ ನೇಹ ನಾನಾಸ್ತಿ ಕಿಂಚನ ಮುಂತಾದ ವಾಕ್ಯಗಳಿಂದಲೂ ಪುರುಷೋತ್ತಮನೇ ಜ್ಞೇಯನು; ಬ್ರಹ್ಮೈಕ್ಯ ಪಿಶಾಚಿಗಾಗಲೀ, ಮಿಥ್ಯಾವಾದವೆಂಬ ಮಂಕುಬೂದಿಗಾಗಲೀ ವೇದವೆಂಬ ದೇವಮಂದಿರದಲ್ಲಿ ಪ್ರವೇಶವು ಸರ್ವಥಾ ಇಲ್ಲವೆಂದೂ ನಿಶ್ಚಿತವಾಗುವುದು. 3. ಈ ಪ್ರಕಾರವಾಗಿ ಪರಮಾತ್ಮನು ಜ್ಞೇಯನು ಎಂದು ಸಿದ್ಧವಾಗುವುದಲ್ಲದೆ ಈ ವಾಕ್ಯಗಳಿಂದ ವೇದದ ಪ್ರತಿಯೊಂದು ವರ್ಣದಿಂದಲೂ ಪರಮಾತ್ಮನೇ ಜ್ಞೇಯನು ಎಂದು ಸಿದ್ಧವಾಗು

ವುದು. ವೇದಾಂತ ಸೂತ್ರಗಳಲ್ಲಿಯೂ ಪರಮಾತ್ಮನೇ ಸರ್ವ ವೇದಗಳಲ್ಲಿ ಪ್ರತಿಪಾದ್ಯನು ಎಂದು ತಿಳಿಸುವುದಕ್ಕಾಗಿಯೇ ಶ್ರೀಕೃಷ್ಣನು ನಾನೇ ವೇದಾಂತ ಸೂತ್ರಗಳನ್ನು ಮಾಡಿದವನು ಮತ್ತು ವೇದಾರ್ಥಗಳನ್ನು ತಿಳಿದವನು ಎಂದು ಹೇಳಿದನು.

**3. ಪ್ರಶ್ನೆ**— ಸ್ವಾಮಿ! ಸರ್ವ ವೇದಗಳೂ ಶ್ರೀವಿಷ್ಣುವನ್ನೇ ಪ್ರತಿಪಾದಿಸುವವು ಎಂದು ಹೇಳಿದರೆ ಏನು ತಾತ್ಪರ್ಯವು? ವೇದದ ಒಂದೊಂದು ಪದವೂ ಪರಮಾತ್ಮನನ್ನು ಬೋಧಿಸುವುದು ಎಂದು ಅರ್ಥವೇ?

**ಶ್ರೀಶ್ರೀಗಳವರು:**—ಇದು ಶ್ರೀಕೃಷ್ಣನ ಭಾವವು. ಸಕಲ ವೇದಗಳೂ ಎರಡು ಪ್ರಕಾರದಿಂದ ಪರಮಾತ್ಮನನ್ನು ಬೋಧಿಸುವುವು. ವೇದದ ಪ್ರತಿಯೊಂದು ಪದವೂ ಪರಮಾತ್ಮನ ಗುಣಗಳನ್ನು ಬೋಧಿಸುವುದು ಎಂಬುದು ಒಂದು ಪಕ್ಷವು. ಈ ವಿವಕ್ಷೆಯಿಂದ ಅಗ್ನಿಮೀಳೇ ಪುರೋಹಿತಂ ಇತ್ಯಾದಿ ವೇದವಾಕ್ಯಗಳಲ್ಲಿ ಅಗ್ನಿಂ ಎಂದರೆ ಬ್ರಹ್ಮಾದಿಗಳನ್ನು ಆಳುವ ವಿಷ್ಣುವು ಎಂದರ್ಥವು; ಈಳೇ ಎಂದರೆ ಜಗದ್ವಂದ್ಯನಾದ ವಿಷ್ಣುವು ಎಂದರ್ಥವು; ಪುರೋಹಿತಂ ಎಂದರೆ ಸಕಲ ಜೀವರುಗಳಲ್ಲಿಯೂ ಅಗ್ರಗಣ್ಯನಾದ ವಿಷ್ಣುವು ಎಂದರ್ಥವು. ಹೀಗೆಯೇ ವರ್ಣಗಳೂ, ಪ್ರತ್ಯಯಗಳೂ ಕೂಡ ಪರಮಾತ್ಮನ ಒಂದೊಂದು ಅಥವಾ ಅನೇಕ ಗುಣಗಳನ್ನು ಬೋಧಿಸುವುವು. ಇಂಥ ಪದಸಮನ್ವಯಪಕ್ಷದಲ್ಲಿ ಸಕಲವೇದಗಳೂ "ವಿಶ್ವಂ ವಿಷ್ಣುರ್ವಷಟ್ಕಾರೋ" ಎಂಬ ನಾಮಾವಳಿಯಂತೆ ಪರಮಾತ್ಮನ ಸ್ತುತಿರೂಪವಾದ ನಾಮಸಮುದಾಯವಾಗಿರುತ್ತದೆ.

ವಾಕ್ಯಸಮನ್ವಯಪಕ್ಷದಲ್ಲಿ ಸಕಲ ವಾಕ್ಯಗಳಿಗೂ ವಿಷ್ಣುಸರ್ವೋತ್ತಮತ್ವವನ್ನೇ ಬೋಧಿಸುವುದರಲ್ಲಿ ಮುಖ್ಯ ತಾತ್ಪರ್ಯವಿರುತ್ತದೆ. ಶ್ರೀಕೃಷ್ಣನು ಸಂಕ್ಷೇಪವಾಗಿ ಈ ವಿಷಯವನ್ನು ಗೀತೆಯಲ್ಲಿ ಸೂಚಿಸಿರುವನು. ಭಾಗವತದಲ್ಲಿ ಉದ್ಧವನಿಗೆ ಉಪದೇಶಮಾಡುವಾಗ ಸ್ಪಷ್ಟವಾಗಿ ವಿಸ್ತರಿಸಿರುವನು:—

**ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಽಪೋಹ್ಯ ಏವ ಚ।**
**ಏತಾವಾನ್ ಸರ್ವವೇದಾರ್ಥಃ .... .... .... ....॥**

**ಅರ್ಥವು:**—ಎಲೈ ಉದ್ಧವನೇ! ಅಹರಹಃ ಸಂಧ್ಯಾಮುಪಾಸೀತ ಇವೇ ಮುಂತಾದ ವಿಧಿಪರವಾದ ಸಕಲ ವೇದವೂ ನನ್ನ ಪ್ರೀತ್ಯರ್ಥವಾಗಿಯೇ ಕರ್ಮ ವನ್ನು ವಿಧಾನಮಾಡುವುದರಿಂದ ಆ ವೇದಭಾಗವೂ ನನ್ನನ್ನೇ ಪ್ರತಿಪಾದಿಸು ವುದು. ಇಂದ್ರಾದಿನಾಮಗಳನ್ನೂ ಸತ್ಯಜ್ಞಾನಾದಿಧರ್ಮಗಳನ್ನೂ ಬೋಧಿ ಸುವ ವೇದಭಾಗವು ಮುಖ್ಯವಾಗಿ ನನ್ನಹೆಸರುಗಳನ್ನೂನನ್ನ ಗುಣಗಳನ್ನೂ ವರ್ಣಿಸುವುದಾದುದರಿಂದ ಆ ವೇದಭಾಗವೂ ನನ್ನನ್ನೇ ಪ್ರತಿಪಾದಿಸುವುದು. ವಿವಿಧರೂಪಗಳನ್ನು ಬೋಧಿಸುವ ವೇದಭಾಗವೂ ಸಹ ನನ್ನ ವಾಸುದೇವಾದಿ ಅನಂತರೂಪಗಳನ್ನೇ ವರ್ಣಿಸುವುದರಿಂದ ನನ್ನನ್ನೇ ಪ್ರತಿಪಾದಿಸುವುದು. "ನ ಸುರಾಂ ಪಿಬೇತ್" ಇತ್ಯಾದಿ ನಿಷೇಧಗಳನ್ನು ಬೋಧಿಸುವ ವೇದಭಾಗವೂ ಕೂಡ ನನ್ನ ಪ್ರೀತ್ಯುದ್ದೇಶದಿಂದ ನನಗೆ ಅಪ್ರಿಯವಾದ ಆಚರಣೆಗಳನ್ನು ಪರಿ ತ್ಯಜಿಸಬೇಕೆಂದು ಬೋಧಿಸುವುದರಿಂದ ಆ ವೇದಭಾಗವೂ ಕೂಡ ನನ್ನನ್ನೇ ಪ್ರತಿ ಪಾದಿಸುವುದು. ಈ ರೀತಿಯಾಗಿ ನನ್ನ ವಿಷಯಕವಾದ ಉಪಪಾದನೆಯೇ ಸರ್ವ ವೇದಗಳಿಗೂ ತಾತ್ಪರ್ಯವಿಷಯೀಭೂತವಾದ ನಿಶ್ಚಯವು.

ಈರೀತಿಯಾಗಿ ಉಭಯವಿಧದಲ್ಲಿಯೂ ಪರಮಾತ್ಮನೇ ಸರ್ವವೇದಪ್ರತಿ ಪಾದ್ಯನು.

4. **ಪ್ರಶ್ನೆ**—ಸ್ವಾಮಿ! ಹಾಗಾದರೆ ವೇದದ ಪದಗಳಿಗೆ ಅರ್ಥವನ್ನು ಮಾಡುವಾಗ ಅಗ್ನಿ ಮುಂತಾದ ಪದಗಳಿಂದ ಪ್ರತ್ಯಕ್ಷಸಿದ್ಧವಾದ ಅಗ್ನಿಯನ್ನಾ ಗಲೀ, ಅಗ್ನಿದೇವತೆಯನ್ನಾಗಲೀ ಸರ್ವಥಾ ತೆಗೆದುಕೊಳ್ಳಬಾರದೋ?

**ಉತ್ತರ:— ಶ್ರೀಶ್ರೀಗಳವರು :**— ಸರ್ವಥಾ ತೆಗೆದುಕೊಳ್ಳಬಾರದೆಂಬ ನಿರ್ಬಂಧವು ಇರುವುದಿಲ್ಲ. ಅಗ್ನಿಯೆಂದರೆ ಅಗ್ನಿಯಲ್ಲಿ ಅಂತರ್ಗತನಾದ ಪರಮಾ ತ್ಮನು ಎಂದರ್ಥವಾಗುವುದು. ವೇದದಲ್ಲಿ ಅಗ್ನಿ, ಹಿಮ, ಘಟ, ಮುಂತಾದ ಪದಗಳಿಂದ ಪರಮಾತ್ಮನೇ ಪ್ರಧಾನವಾಚ್ಯನು. ಆದರೆ ಅಗ್ನಿ, ಹಿಮ, ಘಟ ಮುಂತಾದ ಪದಗಳಿಂದ ಅಜ್ಞರ ಹೃದಯದಲ್ಲಿ ಶೀಘ್ರವಾಗಿ ಉಪಸ್ಥಾಪಿತವಾ ಗುವ ಅಗ್ನಿಯೇ ಮುಂತಾದ ಜಡಪದಾರ್ಥಗಳೂ ಅರ್ಥವಾಗುವುವು. ಅಂಥಾ ಸಮಯದಲ್ಲಿ ಅಗ್ನಿ, ಹಿಮ, ಘಟ ಮುಂತಾದ ಪದಗಳನ್ನು ಅಗ್ನ್ಯಂತರ್ಗತನಾದ

ಬ್ರಹ್ಮಾದಿಪತಿಯಾದ ಪರಮಾತ್ಮನು, ನಿರ್ದುಷ್ಟಜ್ಞಾನಾತ್ಮಕನಾದ ಹಿಮಾಂತರ್ಗತ ಪರಮಾತ್ಮನು, ಘಟಾಂತರ್ಗತನಾದ ಜಗಚ್ಛ್ರೇಷ್ಟಕನಾದ ಪರಮಾತ್ಮನು ಇತ್ಯಾದಿರೀತಿಯಾಗಿ ವಿಭೂತಿರೂಪಗಳ ಸ್ತುತಿಪರವಾಗಿ ತಿಳಿಯಬೇಕು. ಸಮಾಕರ್ಷಾತ್, ಸಾಕ್ಷಾದಪ್ಯವಿರೋಧಂ ಜೈಮಿನಿಃ, ಅಭಿವ್ಯಕ್ತೇರಿತ್ಯಾಶ್ಮರಥ್ಯಃ ಇತ್ಯಾದಿಬ್ರಹ್ಮಸೂತ್ರಗಳಲ್ಲಿ ಉಕ್ತವಿಷಯವೆಲ್ಲವೂ ನಿರ್ಣೀತವಾಗಿರುವುದು. ಇದು ವಿಶೇಷವಾದ ವೇದವಿಚಾರದಿಂದ ತಿಳಿಯತಕ್ಕ ಸೂಕ್ಷ್ಮವಿಷಯವು. ಆದುದರಿಂದಲೇ ಶ್ರೀಕೃಷ್ಣನು ಜ್ಞಾತವ್ಯತತ್ವವಿಚಾರವನ್ನು ಸಾಮಾನ್ಯಜ್ಞಾನ ವಿಜ್ಞಾನಗಳೆಂದು ಎರಡು ವಿಭಾಗಮಾಡಿ ಪರಮಾತ್ಮನ ಸೃಷ್ಟಿಕರ್ತೃತ್ವ, ಸ್ಥಿತಿಕರ್ತೃತ್ವ, ಸಂಹಾರಕರ್ತೃತ್ವಾದಿ ಮಹಿಮೆಗಳನ್ನು ಸಾಮಾನ್ಯ ಜ್ಞಾನದಲ್ಲಿ ಅಂತರ್ಭಾವವನ್ನು ಹೊಂದಿಸಿ, ಇನ್ನೂ ಉತ್ತಮಾಧಿಕಾರಿಗಮ್ಯವಾದ ವಿಶೇಷಸ್ವರೂಪಜ್ಞಾನವನ್ನೂ ಪರಮಾತ್ಮನ ವಿಭೂತಿರೂಪಗಳ ಮಹಿಮೆಯನ್ನೂ ದಶಮಾಧ್ಯಾಯದಲ್ಲಿ ವಿವರಿಸಿದನು. ವೇದದ ಪದಗಳು ಇತರ ವಸ್ತುಗಳನ್ನೂ ಬೋಧಿಸುವುವು. ಆದರೆ ಪರಮಮುಖ್ಯವಾಗಿ ಪರಮಾತ್ಮನನ್ನು ಬೋಧಿಸುವುವು. ಹಾಗೆಯೇ ಅಪ್ರಧಾನವಾಗಿ ದೇವತಾದಿಗಳನ್ನೂ, ನಂತರ ಯಜ್ಞಾದಿ ಕರ್ಮಗಳನ್ನೂ ಬೋಧಿಸುವುವು. ಶ್ರೀಕೃಷ್ಣನೂ ಈ ವಿಷಯವನ್ನು ಸೂಚಿಸಿರುತ್ತಾನೆ:–

(1) **ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।**
**ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥**
**ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥**

—(2. 42-44.)

ವೇದವು ಕರ್ಮಸ್ವರ್ಗಾದಿಗಳನ್ನೇ ಸಾಧನಫಲರೂಪಗಳಾಗಿ ಪ್ರತಿಪಾದಿಸುವುದೆಂದು ತಿಳಿದ, ವೇದದ ಆಪಾತಾರ್ಥದಲ್ಲಿ, ಆಸಕ್ತರಾದ, (ಎಂದರೆ ವೇದದ ಮುಖ್ಯತಾತ್ಪರ್ಯವನ್ನು ತಿಳಿಯದ) ಅಜ್ಞರಿಗೆ ಮೋಕ್ಷಜನಕವಾದ ಅಪರೋಕ್ಷಜ್ಞಾನಕಾರಣವಾದ ನಿರ್ಣೀತ ತತ್ವನಿಶ್ಚಯವು ಉಂಟಾಗುವುದಿಲ್ಲವೆಂದು ತಾತ್ಪರ್ಯವು.

**5.** ಇದರಿಂದ ವಿಧಿನಿಷೇಧಪರವಾದ ಮತ್ತು ದೇವತಾಪ್ರತಿಪಾದಕವಾದ ವೇದಭಾಗಗಳಿಗೂ ಕೂಡ ಮೋಕ್ಷಜನಕವಾದ ಅಪರೋಕ್ಷಜ್ಞಾನ

ಕಾರಣವಾದ ಉಪದೇಶ ಮಾಡುವುದರಲ್ಲಿಯೇ ತಾತ್ಪರ್ಯವಿರುವುದೇ ಹೊರತು ಸ್ವತಂತ್ರವಾಗಿ ಕರ್ಮವನ್ನೂ, ದೇವತೆಗಳನ್ನೂ, ಸ್ವರ್ಗಾದಿ ಫಲಗಳನ್ನೂ ವರ್ಣಿಸುವುದರಲ್ಲಿ ತಾತ್ಪರ್ಯವಿರುವುದಿಲ್ಲ ಎಂದು ಸಿದ್ಧವಾಗುವುದು. ಸಕಲ ವೇದಗಳೂ ಮೋಕ್ಷಜನಕವಾದ ಉಪದೇಶವನ್ನು ಮಾಡುವುವು ಎಂದಮೇಲೆ ಸಕಲ ವೇದಗಳೂ ವಿಷ್ಣುಸರ್ವೋತ್ತಮತ್ವವನ್ನೂ, ವಿಷ್ಣುವಿನ ಗುಣಗಳನ್ನೂ ವಿಷ್ಣುಪ್ರೀತಿಕರವೆಂದು ಸಾತ್ವಿಕ ಕರ್ಮಗಳನ್ನೂ, ವಿಷ್ಣುದಾಸರೆಂದು ದೇವತೆಗಳನ್ನೂ, ವಿಷ್ಣುವಿರೋಧಿಯಾದುದರಿಂದ ತ್ಯಾಜ್ಯವೆಂದು ತೋರಿಸುವುದಕ್ಕಾಗಿ ನಿಷೇಧಮಾಡಿ ಅಭಕ್ಷ್ಯಭಕ್ಷಣಾದಿ ದುಷ್ಕರ್ಮಗಳನ್ನೂ ಪ್ರತಿಪಾದಿಸುವುವು ಎಂದು ಸಿದ್ಧವಾಗುವುದು. ಈರೀತಿಯಾಗಿ ವಿಚಾರಮಾಡಿದರೆ ಕರ್ಮಾದಿಗಳನ್ನು ಪ್ರತಿಪಾದಿಸುವ ವೇದಭಾಗವೂ ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದಿಸಿದಂತೆಯೇ ಆಯಿತು. ಯಾತಕ್ಕೆಂದರೆ ಪರಮಾತ್ಮನ ಪ್ರೀತ್ಯರ್ಥವಾಗಿ ಕರ್ಮ ಮಾಡಬೇಕೆಂದು ವಿಧಿಸುವ ವೇದವು ಪರಮಾತ್ಮನ ಉತ್ಕರ್ಷವನ್ನೇ ಸಾಧಿಸಿದಂತಾಯಿತು. ಹಾಗೆಯೇ ದೇವತೆಗಳನ್ನು ಪ್ರತಿಪಾದಿಸುವ ವೇದಭಾಗವೂ ಪರಮಾತ್ಮನ ಸೇವಕರನ್ನು ತಿಳಿಯಬೇಕೆಂದು ವಿಧಿಸುವುದರ ಮೂಲಕ ಸ್ವಾಮಿಯಾದ ಪರಮಾತ್ಮನ ಉತ್ಕರ್ಷವನ್ನೇ ಸಾಧಿಸಿದಂತಾಯಿತು.

**ವಿದ್ಯಾರ್ಥಿಗಳು:**—ಸ್ವಾಮಿ! ಹಾಗಾದರೆ ಸರ್ವ ವೇದಗಳಿಗೂ ಮುಖ್ಯ ತಾತ್ಪರ್ಯವಿಷಯನಾದವನು ಶ್ರೀಪರಮಾತ್ಮನೇ ಎಂದು ಹೇಳಿದಂತಾಯಿತು.

**ಶ್ರೀಶ್ರೀಗಳವರು:**—ಹೌದು! ವಾಕ್ಯಸಮನ್ವಯಪಕ್ಷದಲ್ಲಿ ಈ ಪ್ರಕಾರದಿಂದಲೇ ಪರಮಾತ್ಮನಿಗೆ ನಿಖಿಲವೇದಪ್ರತಿಪಾದ್ಯತ್ವವು ಸಂಭವಿಸುವುದು.

6. **ವಿದ್ಯಾರ್ಥಿಗಳು:**—ಸ್ವಾಮಿ! ಇನ್ನು ಶಾಸ್ತ್ರದಲ್ಲಿರುವ ಸರ್ವ ಪದಗಳಿಂದಲೂ ಪರಮಾತ್ಮನ ಅನಂತ ವಿಭೂತಿರೂಪಗಳನ್ನು ತಿಳಿಯಬೇಕೆಂದು ಹೇಳಿದುದಕ್ಕೆ ಗೀತೆಯಲ್ಲಿ ಆಧಾರವೇನು?

**ಉತ್ತರ— ಶ್ರೀಶ್ರೀಗಳವರು:—** ಸಪ್ತಮಾಧ್ಯಾಯ, ನವಮಾಧ್ಯಾಯ, ದಶಮಾಧ್ಯಾಯಗಳಲ್ಲಿ ತನ್ನಾಮ, ತದ್ರೂಪ, ತತ್ಕ್ರಿಯೆಗಳನ್ನನುಸರಿಸಿ ಸರ್ವ ಪದಾರ್ಥಗಳಲ್ಲಿ ಪರಮಾತ್ಮನು ಇರುವನು; ಆದರೂ ಆ ಪದಾರ್ಥಧರ್ಮ

ಗಳಿಗಿಂತ ವಿಲಕ್ಷಣವಾದ ವಿಶಿಷ್ಟ ಗುಣಗಳಿಂದ ಪೂರ್ಣನಾಗಿ ಅಲ್ಲಿ ವಾಸಮಾಡುವನು ಎಂದು ತೋರಿಸುವುದಕ್ಕಾಗಿ ಶ್ರೀಕೃಷ್ಣನು ಶೃಂಗಗ್ರಾಹಿಕತಯಾ ಕೆಲವು ವೈದಿಕಪದಬೋಧ್ಯವಾದ ವಿಭೂತಿರೂಪ ವಿಶೇಷಗಳನ್ನು ನಿರ್ದೇಶಮಾಡಿ ವರ್ಣಿಸಿರುವನು. ಇಂಥ ರೂಪಗಳು ಅನಂತವಾಗಿರುವುವು. ಅನಂತ ಬ್ರಹ್ಮ ಕಲ್ಪಗಳಲ್ಲಿಯೂ ಅನಂತ ಜೀವರುಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಗಣನೆಮಾಡಿದರೂ ಪರಮಾತ್ಮನ ರೂಪಸಂಖ್ಯೆಯನ್ನು ಎಣಿಸಿ ಮುಗಿಸುವುದು ಅಸಾಧ್ಯವೆಂದು ಶ್ರೀಕೃಷ್ಣನು ತಾನೇ ಹೇಳಿಬಿಟ್ಟಿರುತ್ತಾನೆ :—

(1) **ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।**
**ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ॥**
**ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಂ ॥**

—(10. 40-41.)

"ಎಲೈ ಅರ್ಜುನನೇ! ನನ್ನ ಅತ್ಯದ್ಭುತವಾದ ವಿಭೂತಿರೂಪಗಳಿಗೆ ಪರ್ಯವಸಾನವು ಇಲ್ಲ. ಈಗ ಆತ್ಮರೂಪವೇ ಮೊದಲುಗೊಂಡು ನನ್ನಿಂದ ಮಾಡಲ್ಪಟ್ಟ ಅನಂತವಿಭೂತಿರೂಪಗಳ ಸಂಕ್ಷೇಪನಿರೂಪಣವು ಶೃಂಗಗ್ರಾಹಿಕತಯಾ ಎಂದರೆ ಕೊಂಬು ಹಿಡಿದುಕೊಂಡು 'ಇದು ಆಕಳು' ಎಂದು ತೋರಿಸುವಂತೆ 'ಪರಮಾತ್ಮನ ವಿಭೂತಿರೂಪಗಳು ಈ ಪ್ರಕಾರವಾಗಿರುತ್ತವೆ' ಎಂದು ಪರಿಚಯಾರ್ಥವಾಗಿಯೇ. ಪರಂತು ಯಾವ ಯಾವ ವಸ್ತುವು ಸ್ವಸಜಾತೀಯ ವಸ್ತುಗಳಲ್ಲಿ ಶ್ರೇಷ್ಠತ್ವವನ್ನು ಹೊಂದಿರುವುದೋ, ಸಂಪದ್ಯುಕ್ತವಾಗಿರುವುದೋ ಅಥವಾ ಬೇರೆ ವಿಧವಾದ ಅಭಿವೃದ್ಧಿಯಿಂದ ಕೂಡಿರುವುದೋ ಅಂಥದೆಲ್ಲವೂ ನನ್ನ ವಿಭೂತಿರೂಪ ವಿಶೇಷದಿಂದ ಸಹಿತವಾಗಿರುವುದೆಂದು ತಿಳಿ."

**7.** ಲೋಕದಲ್ಲಿ ಪರಮಾತ್ಮನ ವ್ಯಾಪ್ತಿಯು ಎರಡುಪ್ರಕಾರವಾಗಿರುವುದು. ಸರ್ವತ್ರ ಪರಮಾತ್ಮನು ವ್ಯಾಪ್ತನು. ಪ್ರತಿಯೊಂದು ವಸ್ತುವಿನಲ್ಲಿಯೂ ಪರಮಾತ್ಮನು ಅದರ ಸತ್ತಾಪ್ರವೃತ್ತ್ಯಾದಿಗಳಿಗೆ ನಿಯಾಮಕನಾಗಿ ಒಂದೊಂದು ರೂಪದಿಂದ ರಕ್ಷಕನಾಗಿರುವನು. ಘಟದಲ್ಲಿರುವ ಪರಮಾತ್ಮನು ಚೇಷ್ಟಕತ್ವಾದಿ ಕಲ್ಯಾಣಗುಣನಿಮಿತ್ತಕವಾಗಿ ಘಟಶಬ್ದವಾಚ್ಯನಾಗಿ ಅದರ ನಾಮರೂಪಕ್ರಿಯೆ

ಗಳಿಗೆ ಪಾಲಕನಾಗಿರುವನು. ಹೀಗೆ ಪಟದಲ್ಲಿರುವ ದೇವರಿಗೆ ಪಟವೆಂದು ಹೆಸರು. ತೃಣದಲ್ಲಿರುವ ದೇವರಿಗೆ ತೃಣವೆಂದು ಹೆಸರು. ತತ್ತದ್ವಸ್ತ್ವಂತರ್ಗತನಾದ ಪರಮಾತ್ಮನ ಹೆಸರೇ ಆಯಾಯ ವಸ್ತುಗಳಿಗೆ ಅಮುಖ್ಯವಾಗಿ ವಾಚಕವಾಗಿರುವುದೆಂದು ಹೇಳಲ್ಪಟ್ಟಿರುವುದು. ಇದರಿಂದಲೇ ಪರಮಾತ್ಮನು ಸರ್ವಶಬ್ದಗಳಿಂದಲೂ ವಾಚ್ಯನೆಂದೂ, ಆತನಿಗೆ ಅನಂತನಾಮಗಳೆಂದೂ ಶಾಸ್ತ್ರದಲ್ಲಿ ನಿರೂಪಿಸಲ್ಪಟ್ಟಿರುವುದು. ಆದರೆ ಲೋಕದಲ್ಲಿರುವ ನಾಮಗಳಿಗೂ ಪರಮಾತ್ಮನ ನಾಮಗಳಿಗೂ ಒಂದು ವ್ಯತ್ಯಾಸವುಂಟು. ಲೋಕದಲ್ಲಿ ಒಬ್ಬನನ್ನು ನಾವು ಇಂದ್ರ, ಚಂದ್ರ, ನಾರಾಯಣಭಟ್ಟ ಎಂದು ಕರೆಯುತ್ತೇವೆ. ಆ ಇಂದ್ರ, ಚಂದ್ರ, ನಾರಾಯಣಭಟ್ಟರುಗಳಲ್ಲಿ ಶ್ರೀಪರಮಾತ್ಮನೂ ಇಂದ್ರ, ಚಂದ್ರ, ನಾರಾಯಣಭಟ್ಟನೆಂಬ ಹೆಸರುಗಳಿಂದಲೇ ಇರುತ್ತಾನೆ. ಆದರೆ ಪರಮಾತ್ಮನು ಪರಮೈಶ್ವರ್ಯಸಂಪೂರ್ಣನಾದುದರಿಂದ ಇಂದ್ರನೆಂಬ ಹೆಸರನ್ನು ಹೊಂದಿದವನಾಗಿ ಇಂದ್ರಚೇತನನಲ್ಲಿ ಇರುವನು. ನಾವು ಇಂದ್ರನೆಂದು ಕರೆಯುವ ಚೇತನನಿಗಾದರೋ, ಪೂರ್ಣವಾದ ಪರಮೈಶ್ವರ್ಯವು ಇರುವುದಿಲ್ಲ. ಒಂದು ಕೋಟಿ ಧನವು ಇರಬಹುದು. ಅಥವಾ ಸಂಕೇತಮಾತ್ರವಾದ ನಾಮಕರಣವಿರಬಹುದು. ಪರಮಾತ್ಮನ ನಾಮಗಳೆಲ್ಲಾ ಯೌಗಿಕನಾಮಗಳು ; ಲೋಕದಲ್ಲಿರುವ ಪದಾರ್ಥಗಳ ನಾಮಗಳು ರೂಢನಾಮಗಳು ; ಅಥವಾ ಕೇವಲ ಸಂಕೇತಿತವಾದುವುಗಳು. ಸರ್ವ ವಸ್ತುಗಳಲ್ಲಿಯೂ ಪರಮಾತ್ಮನು ವ್ಯಾಪ್ತನಾಗಿ ತತ್ತತ್ಪದಾರ್ಥಗಳ ಸತ್ತಾಪಾಲಕನಾಗಿರುವನೆಂದು ಈ ಶ್ಲೋಕದಿಂದ ನಿಶ್ಚಿತವಾಗುವುದು :—

(1) **ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥**
—(10. 42.)

ನಾನು (ಶ್ರೀಕೃಷ್ಣನು) ಪ್ರಮಾಣಪ್ರಮಿತವಾದ ಸಮಸ್ತ ಪ್ರಪಂಚವನ್ನೂ ನನ್ನ ಒಂದು ಅಂಶದಿಂದಲೇ ವ್ಯಾಪಿಸಿಕೊಂಡು ಇದ್ದೇನೆ. (ಪ್ರತಿಯೊಂದು ವಸ್ತುವಿನಲ್ಲಿಯೂ ತತ್ತಚ್ಛಬ್ದವಾಚ್ಯನಾಗಿ ಅದರ ಸತ್ತಾ, ನಾಮ, ರೂಪ, ಕ್ರಿಯಾದಿಗಳಿಗೆ ನಿಯಾಮಕನಾಗಿ ವ್ಯಾಪಿಸಿಕೊಂಡಿರುತ್ತೇನೆ ಎಂದು ಭಾವವು.)

ಶ್ರೀಕೃಷ್ಣನ ವಾಕ್ಯಾಂತರವೂ ಈ ಅರ್ಥವನ್ನೇ ಸೂಚಿಸುವುದು :—

(2) **ನ ತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಂ ||**
—(10-39.)

ಎಲೈ ಅರ್ಜುನನೇ! ಚರಾಚರ ಜಗತ್ತಿನಲ್ಲಿ ನನ್ನಿಂದ ಸಹಿತವಾಗದೇ ಇರುವ ವಸ್ತುವು ಇಲ್ಲ. (ಪ್ರತಿಯೊಂದು ವಸ್ತುವಿನಲ್ಲಿಯೂ ನಾನು ತತ್ತಚ್ಛಬ್ದ ವಾಚ್ಯನಾಗಿ ಒಂದೊಂದು ರೂಪದಿಂದ ಅದರ ಸತ್ತಾದಿಗಳಿಗೆ ನಿಯಾಮಕನಾಗಿ ವಾಸಮಾಡುತ್ತೇನೆ ಎಂದು ಭಾವವು.)

ಪರಮಾತ್ಮನ ಇಂಥಾ ವ್ಯಾಪ್ತಿಯು ಸರ್ವ ಚೇತನಾಚೇತನಾತ್ಮಕ ಪದಾರ್ಥಗಳಲ್ಲಿಯೂ ಇದ್ದರೂ, ಉತ್ತಮ ವಸ್ತುಗಳಲ್ಲಿರುವ ರೂಪಗಳನ್ನೇ ಮುಮುಕ್ಷುವು ಧ್ಯಾನಮಾಡಬೇಕು. ಸಪ್ತಮಾಧ್ಯಾಯದಲ್ಲಿ ಅಂಥಾ ಸತ್ತಾ ನಿಯಾಮಕವಾದ ತತ್ತಚ್ಛಬ್ದವಾಚ್ಯವಾಗಿ ರಸಾದಿಗಳಲ್ಲಿ ವ್ಯಾಪ್ತವಾದ ಭಗವದ್ರೂಪಗಳೇ "ರಸೋಽಹಮಪ್ಸು ಕೌಂತೇಯ" ಎಂಬ ಶ್ಲೋಕದಿಂದ ಆರಂಭಮಾಡಿ "ಕಾಮೋಽಸ್ಮಿ ಭರತರ್ಷಭ" ಎಂಬ ಶ್ಲೋಕಪರ್ಯಂತವೂ ಶ್ರೀಕೃಷ್ಣನಿಂದ ಹೇಳಲ್ಪಟ್ಟಿರುವುದು. (ಶ್ಲೋಕಗಳು 7. 8-11.) ಇದು ಆ ಶ್ಲೋಕಗಳ ತಾತ್ಪರ್ಯವು:— ಎಲೈ ಅರ್ಜುನನೇ! ನಾನು ರಸದಲ್ಲಿ ರಸ ಶಬ್ದನಾಗಿ ವಾಚ್ಯನಾಗಿದ್ದೇನೆ. ಪ್ರಭೆಯಲ್ಲಿ ಪ್ರಭಾಶಬ್ದವಾಚ್ಯನಾಗಿದ್ದೇನೆ. ಪ್ರಣವದಲ್ಲಿ ಪ್ರಣವಶಬ್ದವಾಚ್ಯನಾಗಿದ್ದೇನೆ. ಶಬ್ದದಲ್ಲಿ ಶಬ್ದಶಬ್ದದಿಂದ ವಾಚ್ಯನಾಗಿದ್ದೇನೆ. ಪೌರುಷದಲ್ಲಿ ಪೌರುಷ ಶಬ್ದವಾಚ್ಯನಾಗಿದ್ದೇನೆ. ಗಂಧ ದಲ್ಲಿ ಗಂಧಶಬ್ದವಾಚ್ಯನಾಗಿದ್ದೇನೆ. ತೇಜಸ್ಸಿನಲ್ಲಿ ತೇಜಶ್ಶಬ್ದವಾಚ್ಯನಾಗಿ ದ್ದೇನೆ. ತಪಸ್ಸಿನಲ್ಲಿ ತಪಶ್ಶಬ್ದವಾಚ್ಯನಾಗಿದ್ದೇನೆ. ಬುದ್ಧಿಯಲ್ಲಿ ಬುದ್ಧಿಶಬ್ದ ವಾಚ್ಯನಾಗಿದ್ದೇನೆ. ಬಲದಲ್ಲಿ ಬಲಶಬ್ದವಾಚ್ಯನಾಗಿದ್ದೇನೆ. ಕಾಮದಲ್ಲಿ ಕಾಮಶಬ್ದವಾಚ್ಯನಾಗಿದ್ದೇನೆ.

ನವಮಾಧ್ಯಾಯದಲ್ಲಿಯೂ ದಶಮಾಧ್ಯಾಯದಲ್ಲಿಯೂ ಕೂಡ ಶ್ರೀ ಪರಮಾತ್ಮನು ತನ್ನ ವ್ಯಾಪ್ತಿಯನ್ನು ಬೋಧಿಸಿ ತತ್ತಚ್ಛಬ್ದವಾಚ್ಯನಾಗಿ ಅನೇಕ ಪದಾರ್ಥಗಳಲ್ಲಿ ತಾನು ಇರುವೆನೆಂದು ಹೇಳಿರುವನು.

**8. ಪ್ರಶ್ನೆ :—** ಸ್ವಾಮಿ! ವೇದದಲ್ಲಿರುವ ಸರ್ವಪದಗಳಿಂದಲೂ ಪರ ಮಾತ್ಮನು ಪ್ರತಿಪಾದ್ಯನು ಎಂದು ತಮ್ಮಿಂದ ನಿರೂಪಿತವಾಯಿತು. ಪ್ರತಿ

ಯೊಂದು ಪದಾರ್ಥದಲ್ಲಿಯೂ ಒಂದೊಂದು ರೂಪದಿಂದ ಶ್ರೀ ಪರಮಾತ್ಮನು ಇರುವನೆಂದು ಈಗ ನಿರೂಪಿಸಲ್ಪಟ್ಟಿತು. ಇವುಗಳಿಗೆ ಪರಸ್ಪರ ಸಂಬಂಧ ವೇನು ?

**ಉತ್ತರ—ಶ್ರೀಶ್ರೀಗಳವರು**:—ವೇದಗಳಲ್ಲಿರುವ ಶಬ್ದಗಳೇ ಜಗತ್ತಿನಲ್ಲಿ ಪದಾರ್ಥಗಳ ನಾಮಗಳಾಗಿರುವುವು. ವೇದದಲ್ಲಿರುವ ಪ್ರತಿಯೊಂದು ಪದವೂ ಪರಮಾತ್ಮನನ್ನು ಬೋಧಿಸುವುದೆಂದು ಹೇಳಿದರೆ ಆಯಾಯ ನಾಮದಿಂದ ಪರಮಾತ್ಮನು ಅದೇ ನಾಮವುಳ್ಳ ವಸ್ತುವಿನಲ್ಲಿ ನಿಯಾಮಕನಾಗಿದ್ದು ರಕ್ಷಿಸುವನೆಂದು ಭಾವವು. ಪರಮಾತ್ಮನು ಸರ್ವ ಪದಗಳಿಂದಲೂ ವಾಚ್ಯನು, ಆತನು ಅನಂತ ನಾಮಗಳುಳ್ಳವನು. **"ಸರ್ವನಾಮಾ" "ನಾಮಾನಿ ಸರ್ವಾಣಿ ಯಮಾವಿಶಂತಿ", "ಯೋ ದೇವಾನಾಂ ನಾಮಧಾ"** ಇತ್ಯಾದಿ ಅನೇಕ ಶ್ರುತಿಗಳೂ ಪರಮಾತ್ಮನಿಗೆ ಅನಂತ ಹೆಸರುಗಳುಂಟು ಎಂದು ಹೇಳುತ್ತವೆ.

**9. ಪ್ರಶ್ನೆ**:—ಸ್ವಾಮಿ! ಪರಮಾತ್ಮನನ್ನು ಅನಂತನಾಮಗಳ್ನ ಹೊಂದಿದುದರಿಂದ ಏನು ಸಿದ್ಧಿಸುವುದು ?

**ಉತ್ತರ:**—ಒಂದೊಂದು ನಾಮದಿಂದ ಬೋಧ್ಯವಾದ ಗುಣವೂ ಪರಮಾತ್ಮನಲ್ಲಿರುವುದೆಂದು ಸಿದ್ಧವಾಗುವುದರಿಂದ ಅನಂತ ಯೌಗಿಕ ನಾಮಗಳುಳ್ಳವನು ಅನಂತಕಲ್ಯಾಣಗುಣವುಳ್ಳವನು ಎಂದು ಸಿದ್ಧವಾಗುವುದು. ಇದನ್ನು ಮಾತ್ರ ನೆನಪಿನಲ್ಲಿಡಬೇಕು. ಪರಮಾತ್ಮನ ಹೆಸರುಗಳೆಲ್ಲವೂ ಯೌಗಿಕನಾಮಗಳು ಎಂದರೆ ಅವನಲ್ಲಿರುವ ಉತ್ಕೃಷ್ಟ ಗುಣಗಳನ್ನೇ ಬೋಧಿಸುವುವು. ವಿಷ್ಣುಸಹಸ್ರನಾಮ ಸ್ತುತಿಯಲ್ಲಿಯೂ ಈ ವಿಷಯವು ಹೇಳಲ್ಪಟ್ಟಿರುವುದು:—

**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ||**

**ಅರ್ಥವು:**—ಪರಮಾತ್ಮನ ಇಂದ್ರ, ಚಂದ್ರ, ವಿಶ್ವಾದಿ ಸಕಲ ನಾಮಗಳೂ ಗೌಣಗಳು ಎಂದರೆ ಅವನಲ್ಲಿ ವಿದ್ಯಮಾನವಾದ ಗುಣನಿಮಿತ್ತಕವಾಗಿ ಅವನಿಗೆ ಅನಾದಿಕಾಲದಿಂದಲೂ ಇರುವುವು.

ಹೀಗೆ "ಸರ್ವೇ ವೇದಾ ಯತ್ಪದಮಾಮನಂತಿ" ಎಂಬ ಶ್ರುತಿಪ್ರತಿಪಾದ್ಯವಾದ ಈ ನಿಶ್ಚಯವನ್ನು ಶ್ರೀಕೃಷ್ಣನು "ವೇದೈಶ್ಚ ಸರ್ವೈರಹಮೇವ ವೇದ್ಯಃ" ಎಂಬ ವಾಕ್ಯದಿಂದ ಹೇಳಿರುವನು.

**10. ಪ್ರಶ್ನೆ:**—ಸ್ವಾಮಿ! ಮತ್ತೊಂದು ಪ್ರಕಾರವಾದ ಪರಮಾತ್ಮನ ವ್ಯಾಪ್ತಿಯು ಯಾವುದು?

**ಉತ್ತರ— ಶ್ರೀಶ್ರೀಗಳವರು:—** ಲಕ್ಷ್ಮೀಬ್ರಹ್ಮರುದ್ರೇಂದ್ರಾದಿ ದೇವತೆಗಳಲ್ಲಿ ಪರಮಾತ್ಮನು ಆಯಾಯ ದೇವತೆಗಳ ನಾಮಕನಾಗಿಯೇ ವಿಶೇಷ ರೂಪದಿಂದ ಆವಿಷ್ಟನಾಗಿ ಕೆಲವು ಅಸಾಧಾರಣ ಮಹಿಮೆಗಳನ್ನು ಪ್ರಕಟನೆ ಮಾಡಿರುವನು. ಇಂಥಾ ರೂಪಗಳಿಗೆ ವಿಭೂತಿರೂಪಗಳೆಂದು ಹೆಸರು. ವೇದೋಕ್ತವಾದ ಈ ನಾಮಗಳು ಪರಮಾತ್ಮನ ಮಹಿಮಾತಿಶಯವನ್ನು ವಿಶದೀ ಕರಿಸುತ್ತವೆ. ಮತ್ತು ಇದೇ ರೀತಿಯಾಗಿ ಚಿಂತಾಮಣಿ, ಮೇರುಪರ್ವತವೇ ಮುಂತಾದ ಜಡವಸ್ತುಗಳಲ್ಲಿಯೂ ಪರಮಾತ್ಮನು ತತ್ತನ್ನಾಮಕವಾದ ವಿಭೂತಿ ರೂಪದಿಂದ ಸನ್ನಿಹಿತನಾಗಿ ಅವುಗಳಿಗೆ ಸಜಾತೀಯವಾದ ಇತರ ವಸ್ತುಗಳಿಗಿಂತ ಆಧಿಕ್ಯಪ್ರದನಾಗಿರುವನು. ಆದುದರಿಂದ ವೇದೋಕ್ತವಾದ ಈ ನಾಮಗಳೂ ಕೂಡ ಪರಮಾತ್ಮನ ಮಹಿಮಾತಿಶಯವನ್ನು ಸ್ಪಷ್ಟೀಕರಿಸುತ್ತವೆ. ಏವಂಚ ವೇದೋಕ್ತ ದೇವತಾನಾಮಗಳೂ, ವೇದೋಕ್ತ ಮೇರ್ವಾದಿ ಜಡಪದಾರ್ಥ ಗಳ ನಾಮಗಳೂ ಪರಮಾತ್ಮನಿಗೇ ಮುಖ್ಯವಾಗಿ ಇರುವವು. ತತ್ತನ್ನಾಮಕ ಪರಮಾತ್ಮನ ಆವಾಸಸ್ಥಾನವಾದ ಕೆಲವು ಪದಾರ್ಥಗಳಿಗೆ ಪರಮಾತ್ಮನ ನಿಯ ಮನದಿಂದ ತತ್ತಚ್ಛಬ್ದವಾಚ್ಯತ್ವದ ಜೊತೆಗೆ ಮಹಿಮಾತಿಶಯವೂ ಬರುವುದೆಂ ಬುದು ಸಿದ್ಧವಾದ ಪ್ರಮೇಯವು. ಇದು ಅರ್ಜುನನ ಪ್ರಶ್ನೆಯು—

**ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।**
**ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥**
**ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।**
**ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ ॥**
**ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।**
**ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಂ॥**
—(10. 16-18.)

ಎಲೈ ಭಗವಂತನೇ! ಯಾವ ವಿಶೇಷರೂಪಗಳಿಂದ ನೀನು ಈ ಸಮಸ್ತ ಲೋಕಗಳನ್ನೂ ವ್ಯಾಪಿಸಿಕೊಂಡು ಸ್ಥಿತನಾಗಿದ್ದೀಯೋ ಅಂಥಾ ನಿನ್ನ ಅದ್ಭುತ

ರೂಪಗಳನ್ನು ಸಂಪೂರ್ಣವಾಗಿ ನೀನು ನನಗೆ ಬೋಧಿಸುವವನಾಗು. ಎಲೈ ಅಚಿಂತ್ಯಶಕ್ತನಾದ ಸ್ವಾಮಿಯೇ! ನಾನು ಯಾವ ಪ್ರಕಾರವಾಗಿ ಸರ್ವದಾ ಧ್ಯಾನಮಾಡುವವನಾಗಿ ನಿನ್ನನ್ನು ತಿಳಿಯುವುದಕ್ಕಾಗುವುದು? ಮತ್ತು ಯಾವ ಯಾವ ಪದಾರ್ಥಗಳಲ್ಲಿ ವಿಭೂತಿರೂಪವುಳ್ಳ ನೀನು ನನ್ನ ಧ್ಯಾನಕ್ಕೆ ಗೋಚರ ವಾಗುವಿ? (ಯಾವ ಪದಾರ್ಥಗಳಲ್ಲಿ ನಿನ್ನ ವಿಭೂತಿರೂಪವು ಇರುವದು ಎಂದು ಪ್ರಶ್ನಭಾವವು.) ಎಲೈ ಜನಾರ್ದನನೇ! ನಿನ್ನ ವಿಭೂತಿರೂಪಗಳನ್ನೂ ಮತ್ತು ನಿನ್ನ ಸಾಮರ್ಥ್ಯವನ್ನೂ ನನಗೆ ವಿಸ್ತಾರವಾಗಿ ಪುನಃ ನಿರೂಪಿಸುವವನಾಗು. ನಿನ್ನ ವಾಗಮೃತವನ್ನು ಎಷ್ಟು ಪಾನಮಾಡಿದರೂ ನನಗೆ ತೃಪ್ತಿ ಇಲ್ಲವು.

ಈ ಪ್ರಕಾರವಾಗಿ ಪ್ರಶ್ನೆಯನ್ನು ಶ್ರವಣಮಾಡಿದ ಪರಮಾತ್ಮನು ಇಂದ್ರ ಚಂದ್ರಾದಿ ನಾನಾ ನಾಮಗಳಿಂದ ಭೂಷಿತವಾದ ತನ್ನ ವಿಭೂತಿರೂಪಗಳನ್ನು ನಿರೂಪಿಸುವುದಕ್ಕಾರಂಭಿಸಿದನು.

**11. ಪ್ರಶ್ನೆ:**—ಸ್ವಾಮಿ! ಘಟ, ಪಟ, ಕುಡ್ಯ, ಸ್ಥಂಡಿಲಾದಿ ಅನಂತ ನಾಮಗಳಿಂದ ಪರಮಾತ್ಮನು ಜಡವಾದ ಸ್ವಭಿನ್ನವಾದ ಘಟಾದಿ ಅಧಿಷ್ಠಾನ ಗಳಲ್ಲಿ ನಿಯಾಮಕನಾಗಿ ವ್ಯಾಪ್ತನಾಗಿದ್ದಾನೆಂದು ಪೂರ್ವದಲ್ಲಿಯೇ ತಮ್ಮಿಂದ ನಿರೂಪಿತವಾಯಿತು. ಇದೂ ಅಲ್ಲದೆ ಈಗ ಬೇರೆ ವಿಭೂತಿರೂಪಗಳ ನಿರೂಪಣೆಗೆ ಅವಸರವೇನು?

**ಉತ್ತರ—ಶ್ರೀಶ್ರೀಗಳವರು:—** ಸಾಮಾನ್ಯ ವಿಶೇಷಭಾವದಿಂದ ವಿಚಾ ರವು ಮಾಡಲ್ಪಡುವುದು. ಅಧಿಕ ವ್ಯತ್ಯಾಸವೇನೂ ಇರುವುದಿಲ್ಲ. ಘಟ ಪಟಾದಿ ನಾಮವುಳ್ಳ ಪರಮಾತ್ಮನು ಘಟಪಟಾದಿಗಳಲ್ಲಿ ವಾಸಮಾಡಿ ಅವುಗಳ ಸತ್ತಾದಿಗಳಿಗೆ ರಕ್ಷಕನಾಗಿರುತ್ತಾನೆ. ಸರ್ವ ಚೇಷ್ಟಕತ್ವ ಸಾಮರ್ಥ್ಯೋಪೇತ ನಾದುದರಿಂದ ಪರಮಾತ್ಮನಿಗೆ ಘಟನೆಂದು ಹೆಸರು. ಇಂಥಾ ಪರಮಾತ್ಮನು ಘಟದಲ್ಲಿ ವಾಸಮಾಡಿದರೂ ಸಹ ಆ ಗಡಿಗೆಯು ನಿಶ್ಚಲವಾಗಿ ಜಡವಾಗಿರು ವುದು. ಅದಕ್ಕೆ ಚೇಷ್ಟಕತ್ವ ಶಕ್ತಿಯನ್ನು ಪರಮಾತ್ಮನು ಕೊಡಲಿಲ್ಲ. ಆದುದ ರಿಂದ ಈ ನಾಮಗಳು ಪರಮಾತ್ಮನ ಸಾಮಾನ್ಯರೂಪಗಳ ನಾಮಗಳು.

ಆದರೆ ಈ ಪರಮಾತ್ಮನೇ ಪೂರ್ಣೈಶ್ವರ್ಯವುಳ್ಳವನಾದುದರಿಂದ ಇಂದ್ರ ಶಬ್ದ ವಾಚ್ಯನಾಗಿ ಇಂದ್ರನಲ್ಲಿರುವನು, ಇದರಿಂದ ಇಂದ್ರನಿಗೂ ಸ್ವಲ್ಪ ಐಶ್ವ

ರ್ಯವೂ, ಸಜಾತೀಯ ದೇವತೆಗಳಲ್ಲಿ ಶ್ರೇಷ್ಠತ್ವವೂ ಬರುವುದು. ಇಂಥಾ ಪರಮಾತ್ಮನ ರೂಪಗಳಿಗೆ ವಿಭೂತಿರೂಪಗಳೆಂದು ಹೆಸರು. ಯಾವ ವಸ್ತುವಿನಲ್ಲಿದ್ದ ಪರಮಾತ್ಮನು ತನ್ನ ಸಾಮರ್ಥ್ಯವನ್ನು ವಿಶೇಷವಾಗಿ ಅಭಿವ್ಯಕ್ತಿಮಾಡುವನೋ ಆ ರೂಪವು ವಿಭೂತಿರೂಪವೆಂದು ಕರೆಯಲ್ಪಡುವುದು. ಆ ನಾಮಗಳು ವಿಶೇಷ ನಾಮಗಳು ಎನ್ನಿಸುವುವು. ನಾರಾಯಣಾದಿ ನಾಮಗಳು ಇನ್ನೂ ವಿಶೇಷ ನಾಮಗಳು. ಯಾತಕ್ಕೆಂದರೆ ನಾರಾಯಣಾದಿ ಭಗವದ್ರೂಪಗಳು ಮತ್ತೊಂದು ಪದಾರ್ಥದಲ್ಲಿ ಪ್ರತ್ಯೇಕವಾಗಿ ಆವಿಷ್ಟವಾಗಿ ವಾಸಮಾಡದೆ ಸ್ವರೂಪದಿಂದಲೇ ಭಕ್ತಾದಿಗಳಿಗೆ ಅನುಗ್ರಹಿಸುವುವು. ಇವುಗಳು ಸ್ವಯಂವಿಭೂತಿ ರೂಪಗಳೆನ್ನಿಸುವುವು. ನಾರಾಯಣಾದಿ ನಾಮಗಳು ಭಗವಂತನಿಗೆ ಕೇವಲ ಸ್ವಕೀಯನಾಮಗಳೆನ್ನಿಸುವುವು. ಆದರೂ ಎಲ್ಲ ವೈದಿಕಪದಗಳೂ ಭಗವನ್ನಾಮಗಳೇ. ಈ ವಿಷಯದಲ್ಲಿ ಸಂದೇಹವಿಲ್ಲ.

**12. ಪ್ರಶ್ನೆ— ವಿದ್ಯಾರ್ಥಿಗಳು :—**ಸ್ವಾಮಿ! ಈ ವಿಶೇಷ ಭಗವದ್ರೂಪಗಳು ಎಷ್ಟುಪ್ರಕಾರವಾಗಿರುವವು?

**ಉತ್ತರ— ಶ್ರೀಶ್ರೀಗಳವರು:—** ಮೂರು ಪ್ರಕಾರವಾಗಿ ವಿಭೂತಿ ರೂಪಗಳು ಸಾಮರ್ಥ್ಯವನ್ನು ಅಭಿವ್ಯಕ್ತಿಮಾಡುತ್ತವೆ, ಎಂದು ಶ್ರೀಕೃಷ್ಣನು ಹೇಳಿರುತ್ತಾನೆ. 1. ಕೆಲವು ಸ್ವಯಂ (ಪ್ರತ್ಯಕ್ಷ) ವಿಭೂತಿರೂಪಗಳು; ಎಂದರೆ ಶ್ರೀಪರಮಾತ್ಮನು ಮತ್ಸ್ಯ, ಕೂರ್ಮ, ವರಾಹಾದಿ ಅನಂತ ಅವತಾರಗಳನ್ನು ಸ್ವೀಕರಿಸಿ, ಮತ್ಸ್ಯಾದಿ ಕೇವಲಸ್ವವಾಚಕವಾದ ನಾಮಗಳಿಂದ ಭೂಷಿತವಾಗಿ ಬ್ರಹ್ಮಾದಿ ದೇವತೆಗಳಿಗೂ ಅಸಾಧ್ಯವಾದ ಅನಂತ ಮಹಿಮೆಗಳನ್ನು ಪ್ರಕಟನೆಮಾಡಿ ತನ್ನ ಲೀಲಾದಿಗಳನ್ನು ಭಜಿಸುವ ಭಕ್ತರಿಗೆ ಮೋಕ್ಷಪ್ರದನಾಗಿರುವನು. ಈ ಭಗವದ್ರೂಪಗಳು ಮತ್ತೊಂದು ಜೀವನಲ್ಲಿ ಆವಿಷ್ಟವಾದುವುಗಳಲ್ಲ. ಇವು ಸಾಕ್ಷಾದವತಾರಗಳು. 2. ಇಂದ್ರ, ಚಂದ್ರ, ವರುಣ, ಕುಬೇರಾದಿಗಳಲ್ಲಿ ಶ್ರೀಪರಮಾತ್ಮನು ತತ್ತನ್ನಾಮಗಳಿಂದಲೇ ಸಹಿತವಾದ ವಿಭೂತಿರೂಪಗಳನ್ನು ಸ್ವೀಕರಿಸಿ ಅವರಲ್ಲಿ ವಾಸಮಾಡಿ ಆ ದೇವತೆಗಳಿಗೆ ಸ್ವಸಜಾತೀಯವಾದ ಇತರ ಚೇತನರುಗಳಿಗಿಂತ ಆಧಿಕ್ಯಪ್ರದನಾಗಿರುವನು. ಲಕ್ಷ್ಮೀ ದೇವತೆಯಲ್ಲಿ ಭಗವಂತನು ಲಕ್ಷ್ಮೀನಾಮಕ ವಿಭೂತಿರೂಪ

ದಿಂದ ಆಕೆಗೆ ಸ್ವಸಜಾತೀಯವಾದ ಸರ್ವಚೇತನವರ್ಗಕ್ಕಿಂತಲೂ ಶ್ರೇಷ್ಠತ್ವವನ್ನು ಕೊಟ್ಟಿರುತ್ತಾನೆ. ಬ್ರಹ್ಮದೇವರಲ್ಲಿ ಬ್ರಹ್ಮನಾಮಕ ಪರಮಾತ್ಮನು ವಾಸಮಾಡಿ ಅವರಿಗೆ ಸ್ವಸಜಾತೀಯ ಸರ್ವ ದೇವತೆಗಳಿಗಿಂತಲೂ ಆಧಿಕ್ಯಪ್ರದನಾಗಿರುವನು. ರುದ್ರೇಂದ್ರಾದಿಗಳಲ್ಲಿ ಶ್ರೀಪರಮಾತ್ಮನು ರುದ್ರೇಂದ್ರಾದಿನಾಮಕವಾದ ತನ್ನ ವಿಭೂತಿರೂಪಗಳನ್ನು ಇಟ್ಟು ಅವರುಗಳಿಗೆ ಸ್ವಜಾತೀಯೈಕದೇಶಾಧಿಕ್ಯಕ್ಕೆ ಕಾರಣನಾಗುತ್ತಾನೆ; ಎಂದರೆ ಅವರುಗಳಿಂದ ಅಧಿಕರಾದ ಬ್ರಹ್ಮವಾಯ್ವಾದಿ ದೇವತೆಗಳನ್ನು ಬಿಟ್ಟು ಅವರುಗಳಿಂದ ನೀಚರಾದ ದೇವತೆಗಳ ದೆಸೆಯಿಂದ ಅವರನ್ನು ಅಧಿಕರನ್ನಾಗಿ ಮಾಡುತ್ತಾನೆ. 3. ಮತ್ತು ಕೆಲವು ಭಗವದ್ರೂಪಗಳು ತಮ್ಮಿಂದ ಅಧಿಷ್ಠಿತವಾದ ವಸ್ತುಗಳಿಗೆ ವಿಜಾತೀಯ ಇತರ ವಸ್ತುಗಳಿಗಿಂತ ಆಧಿಕ್ಯಪ್ರದವಾಗುವುವು. ಚಂದ್ರನಲ್ಲಿ ಪರಮಾತ್ಮನು ಚಂದ್ರನಾಮಕನಾಗಿದ್ದು ವಿಜಾತೀಯವಾದ ನಕ್ಷತ್ರಗಳಿಗಿಂತ ಚಂದ್ರನಿಗೆ ಆಧಿಕ್ಯಪ್ರದನಾಗಿರುವನು. ಇದೂ ಅಲ್ಲದೆ ಪರಮಾತ್ಮನು ಅನಂತ ಪದಾರ್ಥಗಳಲ್ಲಿಯೂ ಒಂದೊಂದು ರೂಪದಿಂದ ನಿಯಾಮಕನಾಗಿದ್ದು ಅವುಗಳಲ್ಲಿರುವ ಸಾರಧರ್ಮಕ್ಕೆ ಕಾರಣನಾಗುತ್ತಾನೆ. ಕೆಲವು ಪದಾರ್ಥಗಳಲ್ಲಿ ಒಂದೊಂದೇ ವಿಧವಾದ ವಿಭೂತಿರೂಪವೂ, ಕೆಲವು ವಸ್ತುಗಳಲ್ಲಿ ಎರಡು ಮೂರು ವಿಧವಾದ ವಿಭೂತಿರೂಪಗಳೂ ಇರಬಹುದು. ಈ ಮೂರು ನಾಲ್ಕು ವಿಧವಾದ ವಿಭೂತಿರೂಪಗಳಿಗೂ ದೃಷ್ಟಾಂತವು ಗೀತೆಯಲ್ಲಿಯೇ ಉಕ್ತವಾಗಿರುತ್ತದೆ. ಕೆಲವು ರೂಪಗಳನ್ನು ನಿರೂಪಿಸಿದ ಮಾತ್ರಕ್ಕೆ ಭಗವದ್ವಿಭೂತಿಗಳು ಪರಿಚ್ಛಿನ್ನಸಂಖ್ಯಾಕವೆಂದು ತಿಳಿಯಕೂಡದು. ವಿಭೂತಿರೂಪನಿರೂಪಣೆಗೆ ಪ್ರಾರಂಭದಲ್ಲಿಯೇ ಶ್ರೀಕೃಷ್ಣನು ನನ್ನ ನಾಮರೂಪಗಳನ್ನು ಅಗಣಿತವೆಂದು ತಿಳಿಯಬೇಕೆಂದು ಬೋಧಿಸಿರುತ್ತಾನೆ:—

**ಶ್ರೀಭಗವಾನುವಾಚ :—**

**ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।**
**ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥**

—(10. 19.)

"ಎಲೈ ಕುರುಶ್ರೇಷ್ಠನೇ! ಅದ್ಭುತವಾದ ನನ್ನ ವಿಭೂತಿರೂಪಗಳಲ್ಲಿ (ವಸ್ತುಗಳಿಗೆ ವಿಶೇಷಪ್ರದವಾದ ಅಥವಾ ನಾನಾವಿಧ ಮಹಿಮೆಗಳುಳ್ಳ ನನ್ನ

ರೂಪಗಳಲ್ಲಿ) ಮುಖ್ಯವಾದ ಕೆಲವು ರೂಪಗಳನ್ನು ನಿನಗೆ ಹೇಳುತ್ತೇನೆ. ನನ್ನ ವಿಭೂತಿರೂಪಗಳಿಗೆ ಪರಿಸಮಾಪ್ತಿಯು ಇಲ್ಲವು."

**13. ಪ್ರಶ್ನೆ:**—ಸ್ವಾಮಿ ! ವಸ್ತುತಃ ಪರಮಾತ್ಮನು ಸರ್ವತ್ರ ವ್ಯಾಪ್ತನು. ವಿಭೂತಿರೂಪಗಳೆಂದರೆ ಒಂದೊಂದು ದೇಹದಲ್ಲಿ ಮಾತ್ರ ಇರತಕ್ಕ ಮಧ್ಯಮ ಪರಿಮಾಣಮಾತ್ರೋಪೇತವಾದ ರೂಪಗಳು. ಇವೆರಡು ಧರ್ಮಗಳೂ ಒಬ್ಬನಲ್ಲಿ ಹೇಗೆ ಸಂಭವಿಸುವುವು? ಸರ್ವಗತನಾದವನು ಸಣ್ಣರೂಪಗಳಿಂದ ಇರುವುದು ಹೇಗೆ?

**ಉತ್ತರ— ಶ್ರೀಶ್ರೀಗಳವರು:**—ಬ್ರಹ್ಮಾದಿ ದೇವತೆಗಳಿಗೂ ದುರ್ಜ್ಞೇಯವಾದ ಮಹಿಮೆಯುಳ್ಳವನು ಶ್ರೀಪರಮಾತ್ಮನು. ಆತನ ಅಚಿಂತ್ಯಶಕ್ತಿಯಿಂದ ಇದು ಸಂಭವಿಸುವುದು. ಆತ್ಮನಿ ಚೈವಂ ವಿಚಿತ್ರಾಶ್ಚ ಹಿ, ಸರ್ವೋಪೇತಾ ಚ ತದ್ದರ್ಶನಾತ್, ಇತ್ಯಾದಿ ಬ್ರಹ್ಮಸೂತ್ರಗಳಲ್ಲಿ ಈ ವಿಷಯವು ನಿರ್ಣೀತವಾಗಿರುವುದು. ಅಣೋರಣೀಯಾನ್ ಮಹತೋ ಮಹೀಯಾನ್ ಮುಂತಾದ ಶ್ರುತಿಗಳು ಈ ಅರ್ಥವನ್ನೇ ಉದ್ಘೋಷಿಸುವುವು. ದಾಮೋದರನೆಂಬ ಪರಮಾತ್ಮನ ಹೆಸರೇ ಆತನಿಗೆ ಇಂಥ ಅಚಿಂತ್ಯಮಹಿಮೆಯು ಉಂಟೆಂಬುದನ್ನು ಸೂಚಿಸುವುದು. ಶ್ರೀಕೃಷ್ಣನು ಹೇಳುತ್ತಾನೆ:—

(1) **ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ।** – (10. 20.)

ಎಲೈ ಜಿತನಿದ್ರನಾದ ಪಾರ್ಥನೇ ! ಸರ್ವಸ್ವಾಮಿಯಾದ ನಾನು (ವ್ಯಾಪ್ತನಾದರೂ) ಸರ್ವ ಪ್ರಾಣಿಗಳ ಹೃದಯ ಗುಹೆಯಲ್ಲಿರುತ್ತೇನೆ.

**14. ಪ್ರಶ್ನೆ:**—ಸ್ವಾಮಿ ! ಇನ್ನು ಮೇಲೆ ಪರಮಾತ್ಮನ ವಿಭೂತಿರೂಪಗಳನ್ನು ಆ ರೂಪಗಳ ನಾಮನಿರ್ವಚನಪೂರ್ವಕವಾಗಿ ವಿವರಿಸಬೇಕೆಂದು ಪ್ರಾರ್ಥಿಸುತ್ತೇವೆ.

**ಉತ್ತರ— ಶ್ರೀಶ್ರೀಗಳವರು:**— ಇವುಗಳು ಶ್ರೀಪರಮಾತ್ಮನ ಪ್ರತ್ಯಕ್ಷ ವಿಭೂತಿರೂಪಗಳು ಎಂದರೆ ಮತ್ತೊಂದು ಜೀವನಲ್ಲಿ ಆವಿಷ್ಟವಾಗದೆ ವ್ಯಾಪಾರ ಮಾಡುವ ಸ್ವಯಂ ವಿಭೂತಿರೂಪಗಳು.

1. **ಆದಿತ್ಯಾನಾಮಹಂ ವಿಷ್ಣುಃ.......** ||

—(10-21.)

2. ............ಸಿದ್ಧಾನಾಂ ಕಪಿಲೋ ಮುನಿಃ ॥

—(10-26.)

3. ............ರಾಮಶ್ಶಸ್ತ್ರಭೃತಾಮಹಂ ॥

—(10-31.)

4. ವೃಷ್ಣೀನಾಂ ವಾಸುದೇವೋಽಸ್ಮಿ ॥

—(10.37.)

5. ಮುನೀನಾಮಪ್ಯಹಂ ವ್ಯಾಸಃ....... ॥

—(10. 37.)

**ಅರ್ಥವು:**—ನಾನು (ಶ್ರೀಕೃಷ್ಣನು) ಸರ್ವತ್ರ ವ್ಯಾಪ್ತನಾದುದರಿಂದ ವಿಷ್ಣುನಾಮಕನಾಗಿ ಆದಿತ್ಯರಲ್ಲಿ ಶ್ರೇಷ್ಠನಾಗಿ ಸ್ಥಿತನಾಗಿದ್ದೇನೆ. ನಾನು ಸುಖ ರೂಪನಾಗಿಯೂ, ಜಗತ್ಪಾಲಕನಾಗಿ, ಜಗತ್ಸಂಹಾರಕಾರಣನಾಗಿಯೂ ಇರು ವುದರಿಂದ ಕಪಿಲನಾಮಕನಾಗಿ ಬ್ರಹ್ಮಾದಿ ಸರ್ವಸಿದ್ಧರುಗಳಲ್ಲಿಯೂ ಶ್ರೇಷ್ಠ ನಾಗಿದ್ದೇನೆ. ಲೋಕರಂಜಕನಾದುದರಿಂದ ರಾಮನಾಮಕನಾಗಿ ನಾನು ಸಕಲ ಶಸ್ತ್ರಧಾರಿಗಳಲ್ಲಿಯೂ ಅಗ್ರಗಣ್ಯನಾಗಿರುವೆನು. ಸರ್ವತ್ರ ವಾಸಮಾಡುವವ ನಾಗಿ ಮತ್ತು ಕ್ರೀಡಾದಿ ಅನಂತಗುಣಭರಿತನಾದುದರಿಂದ ವಾಸುದೇವನಾಮ ಕನಾಗಿ ನಾನು ಸರ್ವ ಯಾದವರ ಮಧ್ಯದಲ್ಲಿ ಶ್ರೇಷ್ಠನಾಗಿರುವೆನು. ಸರ್ವೋ ತ್ತಮವಾದ ಸ್ಥಿತಿಯುಳ್ಳವನಾದುದರಿಂದ ವ್ಯಾಸನಾಮಕನಾಗಿ ನಾನು ಸರ್ವ ಮುನಿಗಳಲ್ಲಿ ಶ್ರೇಷ್ಠನಾಗಿರುವೆನು.

ಇವೆಲ್ಲಾ ಭಗವಂತನ ಸಾಕ್ಷಾದವತಾರರೂಪಗಳು. ವಿಷ್ಣು, ಕಪಿಲ, ರಾಮ, ವಾಸುದೇವ ವ್ಯಾಸಾದಿನಾಮಗಳಿಂದ ಪರಮಾತ್ಮನು ವಾಚ್ಯನಾದುದ ರಿಂದ ಆಯಾಯ ಶಬ್ದಗಳಿಂದ ಬೋಧ್ಯವಾದ ಅನೇಕ ಗುಣಗಳು ಅವನಲ್ಲಿರು ವುವು ಎಂದು ಸಿದ್ಧವಾಗುವುದು.

**15.** ಇನ್ನು ಸಜಾತೀಯವಾದ ಇತರ ವಸ್ತುಗಳಿಗಿಂತ ಆಧಿಕ್ಯಪ್ರದ ವಾಗಿ ತತ್ತದ್ವಸ್ತುಗಳಲ್ಲಿ ಸನ್ನಿಹಿತವಾದ ಅನೇಕ ಭಗವದ್ರೂಪಗಳನ್ನು ಅವುಗಳ ನಾಮನಿರ್ವಚನಪೂರ್ವಕವಾಗಿ ನಿರೂಪಿಸುತ್ತೇವೆ. ಶ್ರೀಕೃಷ್ಣನು ಹೇಳು ತ್ತಾನೆ :—

(1) ................ ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ....................... ॥

**ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।**
**ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥**
**ರುದ್ರಾಣಾಂ ಶಂಕರಶ್ಚಾಸ್ಮಿ ... ....... .. ।**
**ವಸೂನಾಂ ಪಾವಕಶ್ಚಾಸ್ಮಿ ಮೇರುಶ್ಶಿಖರಿಣಾಮಹಂ ॥**
**ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಂ ।**
**ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥**
**ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಂ ।**
**ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥**
**ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।**
**ಗಂಧರ್ವಾಣಾಂ ಚಿತ್ರರಥಃ............... ॥**

—(10. 21-26.)

ಎಲೈ ಪಾರ್ಥನೆ! ವೇದರೂಪವಾದ ಶಬ್ದದಿಂದ ಜ್ಞೇಯನಾದುದರಿಂದ ರವಿಶಬ್ದವಾಚ್ಯನಾಗಿ ನಾನು ರವಿಯಲ್ಲಿದ್ದು ಸಕಲ ತೇಜೋಮಯ ಪದಾರ್ಥಗಳಿಗಿಂತಲೂ ಆತನಿಗೆ ಆಧಿಕ್ಯಪ್ರದನಾಗಿರುವೆನು. ಮೇಘಚಾಲನ ಶಕ್ತಿಯುಳ್ಳವನಾದುದರಿಂದ ಮರೀಚಿನಾಮಕನಾಗಿ ನಾನು ಮರೀಚಿ ವಾಯುವಿನಲ್ಲಿದ್ದು ಆತನನ್ನು (ಪ್ರಧಾನವಾಯುವೇ ಮೊದಲಾದ ಕೆಲವರನ್ನು ಬಿಟ್ಟು) ಇತರ ವಾಯುಗಳಿಗಿಂತ ಅಧಿಕನನ್ನಾಗಿ ಮಾಡಿರುವೆನು. ಸರ್ವತ್ರ ಜ್ಞಾನಾನಂದಾದಿ ಗುಣಗಳಿಂದ ಸಮನಾದುದರಿಂದ ಸಾಮಶಬ್ದ ವಾಚ್ಯನಾದ ನಾನು ಸಾಮವೇದದಲ್ಲಿದ್ದು (ಋಗ್ವೇದ ಹೊರತು) ಇತರ ವೇದಗಳಿಗಿಂತ ಅದಕ್ಕೆ ಶ್ರೇಷ್ಠತ್ವಪ್ರದನಾಗಿರುವೆನು. ಸರ್ವದೇಶದಲ್ಲಿಯೂ ಸದಾ ವಾಸಮಾಡುವವನಾದುದರಿಂದ ವಾಸವನಾಮಕನಾದ ನಾನು ವಾಸವನಲ್ಲಿದ್ದು ಆತನನ್ನು (ಬ್ರಹ್ಮರುದ್ರಾದಿ ದೇವತೆಗಳನ್ನು ಬಿಟ್ಟು) ಇತರ ದೇವತೆಗಳಿಗಿಂತ ಅಧಿಕನನ್ನಾಗಿ ಮಾಡಿರುವೆನು. ಜ್ಞಾನಸ್ವರೂಪನಾದುದರಿಂದ ಮನೋನಾಮಕನಾದ ನಾನು ಮನೋಇಂದ್ರಿಯದಲ್ಲಿದ್ದು ಅದಕ್ಕೆ ಸಕಲ ಇಂದ್ರಿಯಾಪೇಕ್ಷಯಾ ಉತ್ತಮತ್ವಪ್ರದನಾಗಿರುವೆನು. ಸಕಲರ ಚಿತ್ತನಿಯಾಮಕನಾದುದರಿಂದ ಚೇತನ ನಾಮಕನಾದ ನಾನು ಚಿತ್ತದಲ್ಲಿದ್ದು ಚಿತ್ತಕ್ಕೆ ಅಧಿಕ ಶಕ್ತಿಪ್ರದನಾಗುವೆನು.

ಸಜ್ಜನರಿಗೆ ಸುಖಕಾರಣನಾದುದರಿಂದ ಶಂಕರನಾಮಕನಾದ ನಾನು ಉಮಾಪತಿಯಾದ ರುದ್ರನಲ್ಲಿದ್ದು ಆತನಿಗೆ ಏಕಾದಶ ರುದ್ರರುಗಳಲ್ಲಿ ಉತ್ತಮತ್ವಪ್ರದನಾಗಿರುವೆನು. ಪಶ್ಚಾತ್ತಪ್ತರಾದ ಪಾಪಿಗಳನ್ನು ಶುದ್ಧಿಮಾಡುವುದರಿಂದ ಪಾಪಕನಾಮಕನಾದ ನಾನು ಅಗ್ನಿಯಲ್ಲಿದ್ದು ಆತನನ್ನು ಸರ್ವ ವಸ್ತುಗಳಲ್ಲಿಯೂ ಶ್ರೇಷ್ಠನನ್ನಾಗಿ ಮಾಡಿರುವೆನು. ಅನನ್ಯಪ್ರೇರಕನಾದುದರಿಂದ ಮೇರುಶಬ್ದವಾಚ್ಯನಾದ ನಾನು ಮೇರುಪರ್ವತದಲ್ಲಿದ್ದು ಸಕಲ ಪರ್ವತಗಳ ದೆಸೆಯಿಂದ ಅದಕ್ಕೆ ಉತ್ತಮತ್ವಪ್ರದನಾಗಿರುತ್ತೇನೆ. ಶ್ರೇಷ್ಠರಾದ ಬ್ರಹ್ಮಾದಿಗಳಿಗೂ ಕೂಡ ಸ್ವಾಮಿಯಾದುದರಿಂದ ಬೃಹಸ್ಪತಿ ನಾಮಕನಾದ ನಾನು ಬೃಹಸ್ಪತ್ಯಾಚಾರ್ಯರಲ್ಲಿ ಸನ್ನಿಹಿತನಾಗಿ ಅವರಿಗೆ ಸಕಲ ಪುರೋಹಿತರುಗಳಲ್ಲಿ ಉತ್ತಮತ್ವಪ್ರದನಾಗಿರುತ್ತೇನೆ. ಸ್ವೋದರದಿಂದ ಜಗತ್ತನ್ನು ಸೃಷ್ಟಿಕಾಲದಲ್ಲಿ ಹೊರಗೆ ಹಾಕುವುದರಿಂದ ಸ್ಕಂದನಾಮಕನಾದ ನಾನು ಷಣ್ಮುಖನಲ್ಲಿ ಸ್ಥಿತನಾಗಿ ಆತನನ್ನು ಸೇನಾಧಿಪತಿಗಳಲ್ಲಿ ಅಗ್ರಗಣ್ಯನನ್ನಾಗಿ ಮಾಡಿರುವೆನು. ಸಾರಭೋಕ್ತನಾದುದರಿಂದ ಸಾಗರನಾಮಕನಾದ ನಾನು ಸಮುದ್ರದಲ್ಲಿದ್ದು ಜಲಾಶಯಗಳಲ್ಲೆಲ್ಲಾ ಸಮುದ್ರವನ್ನು ಶ್ರೇಷ್ಠವನ್ನಾಗಿ ಮಾಡಿರುವೆನು. ದೈತ್ಯರನ್ನು ಹುರಿಯುವುದರಿಂದ (ಕ್ಲೇಶಗಳಿಂದ ಪೀಡಿಸುವುದರಿಂದ) ಭೃಗುನಾಮಕನಾಗಿ ನಾನು ಭೃಗುಋಷಿಗಳಲ್ಲಿದ್ದು ಅವರಿಗೆ ಮಹರ್ಷಿಗಳಲ್ಲಿ ಉತ್ತಮತ್ವಪ್ರದನಾಗಿರುವೆನು. ಸರ್ವಪ್ರಧಾನನೂ ಚತುರ್ವಿಧನಾಶರಹಿತನೂ ಆದುದರಿಂದ ಏಕಾಕ್ಷರನಾಮಕನಾದ ನಾನು ಪ್ರಣವದಲ್ಲಿದ್ದು ಅದನ್ನು ಸರ್ವವೇದಾಕ್ಷರಗಳಲ್ಲಿ ಶ್ರೇಷ್ಠವರ್ಣವನ್ನಾಗಿ ಮಾಡಿರುವೆನು. ಹುಟ್ಟಿದವರನ್ನೆಲ್ಲಾ ರಕ್ಷಣೆ ಮಾಡುತ್ತಾ ಭಕ್ತರಿಂದ ಯಜ್ಞದಲ್ಲಿ ಪೂಜ್ಯನಾದುದರಿಂದ ಜಪಯಜ್ಞನಾಮಕನಾದ ನಾನು ಜಪಕ್ರಿಯೆಯಲ್ಲಿ ಸನ್ನಿಹಿತವಾಗಿ ಅದಕ್ಕೆ (ಶ್ರವಣಮನನಾದಿ ಜ್ಞಾನಯಜ್ಞಗಳನ್ನು ಹೊರತು) ಸರ್ವಯಜ್ಞಗಳಿಗಿಂತಲೂ ಶ್ರೈಷ್ಠ್ಯಪ್ರದನಾಗಿರುವೆನು. ಲಕ್ಷ್ಮೀದೇವಿಯವರಿಗೆ ನಿವಾಸಭೂತನಾದುದರಿಂದ ಹಿಮಾಲಯಶಬ್ದವಾಚ್ಯನಾದ ನಾನು ಹಿಮಾಲಯದಲ್ಲಿದ್ದು ಅದನ್ನು ಸರ್ವಸ್ಥಾವರಗಳಲ್ಲಿಯೂ ಶ್ರೇಷ್ಠವನ್ನಾಗಿ ಮಾಡಿರುತ್ತೇನೆ. ಅತಿ ಶೀಘ್ರಗಮನವುಳ್ಳವನಾದುದರಿಂದ ಅಶ್ವತ್ಥನಾಮಕನಾದ ನಾನು ಅಶ್ವತ್ಥವೃಕ್ಷದಲ್ಲಿ ಸ್ಥಿತನಾಗಿ ಅಶ್ವತ್ಥವೃಕ್ಷಕ್ಕೆ ಸರ್ವವೃಕ್ಷಗಳಿ

ಗಿಂತ ಆಧಿಕ್ಯಪ್ರದನಾಗಿರುತ್ತೇನೆ. ಭಕ್ತರಿಗೆ ಅಭೀಷ್ಟವಾದ ಜ್ಞಾನಾದಿದಾತನಾದುದರಿಂದ ನಾರದನಾಮಕನಾದ ನಾನು ನಾರದರಲ್ಲಿ ಸ್ಥಿತನಾಗಿ ಅವರನ್ನು ಸಕಲ ದೇವರ್ಷಿಶ್ರೇಷ್ಠರನ್ನಾಗಿ ಮಾಡಿರುತ್ತೇನೆ. ವಿಚಿತ್ರವಾದ ದೇವಾದಿ ದೇಹಗಳನ್ನೇ ರಥವನ್ನಾಗಿ ಮಾಡಿಕೊಂಡಿರುವುದರಿಂದ ಚಿತ್ರರಥನಾಮಕನಾದ ನಾನು ಚಿತ್ರರಥನೆಂಬ ಗಂಧರ್ವನಲ್ಲಿದ್ದು ಅವನಿಗೆ ಇತರ ಗಂಧರ್ವರಿಗಿಂತ ಉತ್ತಮತ್ವಪ್ರದನಾಗಿರುತ್ತೇನೆ.

ಈ ವಾಕ್ಯಗಳಿಂದ ವೇದೋಕ್ತವಾದ ರವಿ, ಮರೀಚಿ, ಸಾಮ, ವಾಸವ, ಮನ, ಚೇತನಾ, ಶಂಕರ, ಪಾವಕ, ಮೇರು ಬೃಹಸ್ಪತಿ, ಸ್ಕಂದ, ಸಾಗರ, ಭೃಗು, ಏಕಾಕ್ಷರ, ಜಪಯಜ್ಞ, ಹಿಮಾಲಯ, ಅಶ್ವತ್ಥ, ನಾರದ, ಚಿತ್ರರಥಾದಿ ಅನೇಕ ನಾಮಗಳಿಂದ ಶ್ರೀವಿಷ್ಣುವೇ ಮುಖ್ಯಪ್ರತಿಪಾದ್ಯನೆಂದು ಸಿದ್ಧವಾಗುವುದು. ಇನ್ನೂ ವೇದದಲ್ಲಿರುವ ಅನೇಕ ನಾಮಗಳು ಇದೇ ರೀತಿಯಾಗಿ ಪರಮಾತ್ಮನನ್ನು ಬೋಧಿಸುವುವೆಂದು ಶ್ರೀಪರಮಾತ್ಮನು ತೋರಿಸುತ್ತಾನೆ:—

**ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಂ ।**
**ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಂ ॥**
**ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।**
—(10. 26-28.)

ಅತ್ಯುತ್ಕೃಷ್ಟವಾದ ಕೀರ್ತಿಯುಳ್ಳವನಾದುದರಿಂದ ಉಚ್ಚೈಃಶ್ರವನಾಮಕನಾದ ನಾನು ಉಚ್ಚೈಃಶ್ರವನೆಂಬ ಕ್ಷೀರಸಮುದ್ರಜಾತವಾದ ಇಂದ್ರನ ಕುದುರೆಯಲ್ಲಿ ಸ್ಥಿತನಾಗಿ ಆ ಕುದುರೆಗೆ ಸರ್ವಾಪೇಕ್ಷಯಾ ಆಧಿಕ್ಯಪ್ರದನಾಗಿರುವೆನು. ಐರನಾಮಕ ಮುಕ್ತಸ್ಥಾನದ ಲಕ್ಷ್ಮ್ಯಾತ್ಮಕ ಸರೋವರಕ್ಕೆ ನಿಯಾಮಕನಾದುದರಿಂದ ಐರಾವತನಾಮಕನಾದ ನಾನು ಐರಾವತವೆಂಬ ಗಜಶ್ರೇಷ್ಠನಲ್ಲಿ ಸ್ಥಿತನಾಗಿ ಅದಕ್ಕೆ ಸರ್ವ ಆನೆಗಳ ದೆಸೆಯಿಂದ ಉತ್ತಮತ್ವಪ್ರದನಾಗಿರುವೆನು. ಸಕಲ ಪ್ರಜೆಗಳಿಗೂ ಅಧಿಪತಿಯಾಗಿರುವುದರಿಂದ ನರಾಧಿಪಸಂಜ್ಞಕನಾದ ನಾನು ಚಕ್ರವರ್ತ್ಯಾದಿಗಳಲ್ಲಿ ಸ್ಥಿತನಾಗಿ ಅವರುಗಳಿಗೆ ಇತರ ಜನಗಳಿಗಿಂತ ಆಧಿಕ್ಯಪ್ರದನಾಗಿರುವೆನು.

ಸರ್ವ ದೋಷವರ್ಜಿತನಾದುದರಿಂದ ವಜ್ರನಾಮಕನಾದ ನಾನು ವಜ್ರಾಯುಧದಲ್ಲಿ ಸ್ಥಿತನಾಗಿ ಅದನ್ನು ಆಯುಧಗಳಲ್ಲಿ ಶ್ರೇಷ್ಠವನ್ನಾಗಿ ಮಾಡಿರುವೆನು.

ಕಾಮಿತಾರ್ಥಪ್ರದನಾದುದರಿಂದ ಕಾಮಧೇನುನಾಮಕನಾದ ನಾನು ಕಾಮ ಧೇನುವಿನಲ್ಲಿ ಸ್ಥಿತನಾಗಿ ಅದಕ್ಕೆ ಇತರ ಗೋವುಗಳ ದೆಸೆಯಿಂದ ಉತ್ತಮತ್ವ ಪ್ರದನಾಗಿರುವೆನು.

ಮತ್ತು ಕೆಲವು ವೈದಿಕ ನಾಮಗಳು ಶ್ರೀಹರಿಗೆ ಉಂಟೆಂದು ಮುಂದಿನ ಶ್ಲೋಕಗಳಿಂದ ನಿರೂಪಿಸಲ್ಪಡುವುದು:—

**.... .... .... ಸರ್ಪಾಣಾಮಸ್ಮಿ ವಾಸುಕಿಃ ||**
**ಅನಂತಶ್ಚಾಸ್ಮಿ ನಾಗಾನಾಂ ... .... .... .... |**
**ಪಿತೄಣಾಮರ್ಯಮಾ ಚಾಸ್ಮಿ ಯಮಸ್ಸಂಯಮತಾಮಹಂ ||**
**ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಂ |**
**ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಂ ||**
**ಪವನಃ ಪವತಾಮಸ್ಮಿ .... .... .... .... |**
**ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ||**
**.... .... .... .... .... .... |**
**ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಂ ||**
**ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ |**
—(10. 28-33.)

ಎಲೈ ಪಾರ್ಥನೇ! ಭಕ್ತರಿಗೆ ವಾಸಸುಖ ಪ್ರದನಾದುದರಿಂದ ವಾಸುಕಿ ನಾಮಕನಾದ ನಾನು ವಾಸುಕಿನಾಮಕನಾದ ಸರ್ಪದಲ್ಲಿ ಸ್ಥಿತನಾಗಿ ಅದಕ್ಕೆ ಸರ್ವ ಸರ್ಪಗಳ ದೆಸೆಯಿಂದ ಆಧಿಕ್ಯಪ್ರದನಾಗಿರುತ್ತೇನೆ. ದೇಶತಃ ಕಾಲತಃ ಮತ್ತು ಗುಣತಃ ಪರಿಪೂರ್ಣನಾದುದರಿಂದ ಅನಂತ ನಾಮಕನಾದ ನಾನು ಶೇಷಾಖ್ಯ ಸರ್ಪನಲ್ಲಿದ್ದು ಅವನನ್ನು ಸರ್ಪನಾಗಗಳ (ಅನೇಕ ಹೆಡೆಗಳುಳ್ಳ ಸರ್ಪಗಳ) ದೆಸೆಯಿಂದ ಅಧಿಕನನ್ನಾಗಿ ಮಾಡಿರುತ್ತೇನೆ. ಜ್ಞೇಯವಾದ ಸಕಲ ವನ್ನೂ ತಿಳಿದವನಾದುದರಿಂದ ಅರ್ಯಮಾನಾಮಕನಾದ ನಾನು ಅರ್ಯಮ ನೆಂಬ ಪಿತೃ ದೇವನಲ್ಲಿದ್ದು ಆತನಿಗೆ ಇತರ ಪಿತೃದೇವತೆಗಳಿಗಿಂತ ಉತ್ತಮತ್ವ ಪ್ರದನಾಗಿರುವೆನು. ಜಗನ್ನಿಯಮನಕರ್ತನಾದುದರಿಂದ ಯಮನಾಮಕನಾದ ನಾನು ಯಮದೇವರಲ್ಲಿದ್ದು ಆತನಿಗೆ ನಿಗ್ರಹಮಾಡುವವರಲ್ಲಿ ಶ್ರೇಷ್ಠತ್ವ ಸಂಪಾ ದಕನಾಗಿರುತ್ತೇನೆ. ಪ್ರಕೃಷ್ಟ ಸುಖಪೂರ್ಣನಾದುದರಿಂದ ಪ್ರಹ್ಲಾದನಾಮ

ಕನಾದ ನಾನು ಪ್ರಹ್ಲಾದನೆಂಬ ದೈತ್ಯನಲ್ಲಿ ಸ್ಥಿತನಾಗಿ ಆತನಿಗೆ ಉತ್ತಮತ್ವ ಪ್ರದನಾಗಿರುವೆನು. ಸರ್ವಜ್ಞನಾದುದರಿಂದ ಕಾಲನಾಮಕನಾದ ನಾನು ಕಾಲದಲ್ಲಿ ಸ್ಥಿತನಾಗಿ ಅದನ್ನು ನಾಶಕಾರಣಗಳಲ್ಲೆಲ್ಲಾ ಶ್ರೇಷ್ಠವನ್ನಾಗಿ ಮಾಡಿರುತ್ತೇನೆ. ನನ್ನನ್ನು ಅನ್ವೇಷಣಮಾಡತಕ್ಕ ಭಕ್ತರಿಗೆ ಅಧಿಪತಿಯಾದುದರಿಂದ ಮೃಗೇಂದ್ರನಾಮಕನಾದ ನಾನು ಸಿಂಹದಲ್ಲಿ ಸ್ಥಿತನಾಗಿ ಅದನ್ನು ಸರ್ವ ಮೃಗಗಳಿಗಿಂತಲೂ ಶ್ರೇಷ್ಠವನ್ನಾಗಿ ಮಾಡಿರುವೆನು. ಶರಣಾಗತರಿಗೆ ಆಶ್ರಯನಾದುದರಿಂದ ವೈನತೇಯ ನಾಮಕನಾದ ನಾನು ಗರುಡನಲ್ಲಿ ಸ್ಥಿತನಾಗಿ ಆತನನ್ನು ಸರ್ವ ಪಕ್ಷಿಗಳಿಗಿಂತಲೂ ಶ್ರೇಷ್ಠನನ್ನಾಗಿ ಮಾಡಿರುವೆನು. ಜಗತ್ಪಾಲಕರಾದ ದೇವತೆಗಳಿಂದ ಭಜನೀಯನಾದುದರಿಂದ ಪವನ ನಾಮಕನಾದ ನಾನು ಪ್ರಧಾನ ವಾಯುವಿನಲ್ಲಿ ಸ್ಥಿತನಾಗಿ ಆತನನ್ನು ಶುದ್ಧಿಮಾಡುವವರಲ್ಲೆಲ್ಲಾ ಶ್ರೇಷ್ಠನನ್ನಾಗಿ ಮಾಡಿರುವೆನು.(ಅಥವಾ ಸಕಲ ವಾಯುಗಳಿಗಿಂತಲೂ ಉತ್ತಮನನ್ನಾಗಿ ಮಾಡಿರುವೆನು.) ಸಕಲರನ್ನೂ ನನಗಿಂತ ಅಲ್ಪಜ್ಞಾನ ಉಳ್ಳವರನ್ನಾಗಿ ಮಾಡುವವನಾದುದರಿಂದ ಮಕರನಾಮಕನಾದ ನಾನು ಮೊಸಳೆಯಲ್ಲಿ ಸ್ಥಿತನಾಗಿ ಅದನ್ನು ಸಕಲ ಮೀನುಗಳಲ್ಲಿ ಶ್ರೇಷ್ಠವನ್ನಾಗಿ ಮಾಡಿರುವೆನು. ವೈರಾಗ್ಯದಿಂದ ಸಂಸಾರವನ್ನು ಪರಿತ್ಯಾಗಮಾಡಿದವರನ್ನು ರಕ್ಷಿಸುವೆನಾದುದರಿಂದ ಜಾಹ್ನವೀನಾಮಕನಾದ ನಾನು ಗಂಗಾನದಿಯಲ್ಲಿ ಸ್ಥಿತನಾಗಿ ಅದನ್ನು ಸಕಲ ಪ್ರವಾಹಗಳ ದೆಸೆಯಿಂದಲೂ ಅಧಿಕವನ್ನಾಗಿ ಮಾಡಿರುವೆನು.......ನಿಖಿಲ ಜೀವೇಶ್ವರನಾಗಿ ನಿತ್ಯಜ್ಞಪ್ತಿಸ್ವರೂಪನಾದುದರಿಂದ ಅಧ್ಯಾತ್ಮ ವಿದ್ಯಾನಾಮಕನಾದ ನಾನು ಬ್ರಹ್ಮವಿದ್ಯೆಯಲ್ಲಿ ಸ್ಥಿತನಾಗಿ ಅದಕ್ಕೆ ಸರ್ವ ವಿದ್ಯೆಗಳಿಗಿಂತಲೂ ಉತ್ತಮತ್ವ ಪ್ರದನಾಗಿರುವೆನು. ನಿಖಿಲಶಬ್ದವಾಚ್ಯನಾದುದರಿಂದ ವಾದನಾಮಕನಾದ ನಾನು ವಾದಕಥೆಯಲ್ಲಿ ಸನ್ನಿಹಿತನಾಗಿ ಅದಕ್ಕೆ ಇತರ ವಾದಗಳಿಗಿಂತ ಆಧಿಕ್ಯ ಪ್ರದನಾಗಿರುವೆನು. "ಅ" ಎಂದು ಕರೆಯಲ್ಪಡುವುದರಿಂದ "ಅಕಾರ" ನಾಮಕನಾದ ನಾನು ಅವರ್ಣದಲ್ಲಿ ಸ್ಥಿತನಾಗಿ ಅದಕ್ಕೆ ಇತರ ವರ್ಣಗಳ ದೆಸೆಯಿಂದ ಆಧಿಕ್ಯಪ್ರದನಾಗಿರುವೆನು. ಅಂತಃ ಮತ್ತು ಬಹಿಃ ಎಂದು ಎರಡು ರೂಪಗಳಿಂದ ಸ್ಥಿತನಾದುದರಿಂದ ದ್ವಂದ್ವನಾಮಕನಾದ ನಾನು ದ್ವಂದ್ವಸಮಾಸದಲ್ಲಿ ಸ್ಥಿತನಾಗಿ ಅದನ್ನು ಸಮಾಸಗಳಲ್ಲಿ ಶ್ರೇಷ್ಠವನ್ನಾಗಿ ಮಾಡಿರುವೆನು.

ಈ ವಾಕ್ಯಾರ್ಥಪರ್ಯಾಲೋಚನೆಯಿಂದ ಉಚ್ಚೈಃಶ್ರವ, ಐರಾವತ, ನರಾಧಿಪ, ವಜ್ರ, ಕಾಮಧುಕ್, ವಾಸುಕಿ, ಅನಂತ, ಅರ್ಯಮಾ, ಯಮ, ಪ್ರಹ್ಲಾದ, ಕಾಲ, ಮೃಗೇಂದ್ರ, ವೈನತೇಯ, ಪವನ, ಮಕರ, ಜಾಹ್ನವೀ, ಅಧ್ಯಾತ್ಮವಿದ್ಯಾ, ವಾದ, ಅಕಾರ ದ್ವಂದ್ವಗಳೆಂಬ ವೈದಿಕ ಪದಗಳಿಂದ ಶ್ರೀಹರಿಯೇ ಪ್ರತಿಪಾದ್ಯನು ಎಂದು ಸ್ಪಷ್ಟವಾಗುವುದು. ಆ ನಾಮಾಂಕಿತನಾದ ಪರಮಾತ್ಮನು ಆಯಾಯ ನಾಮವುಳ್ಳ ರೂಪಿನಿಂದ ಒಂದೊಂದು ವಸ್ತುವಿನಲ್ಲಿ ಸ್ಥಿತನಾಗಿ ತನ್ನಿಂದ ಅಧಿಷ್ಠಿತವಾದ ವಸ್ತುವಿಗೆ ಸಜಾತೀಯವಾದ ಇತರ ವಸ್ತುಗಳಿಗಿಂತ ಆಧಿಕ್ಯಪ್ರದನಾಗಿರುವನೆಂದೂ ಸಿದ್ಧವಾಗುವುದು.

ಉತ್ತರ ಶ್ಲೋಕಗಳಲ್ಲಿ ಇದೇ ರೀತಿಯಾದ ವಿಭೂತಿರೂಪಗಳಿಗೆ ವಾಚಕಗಳಾದ ಮತ್ತೆ ಕೆಲವು ವೈದಿಕ ನಾಮಗಳನ್ನು ನಿರೂಪಿಸಿ ಅವುಗಳೂ ನನ್ನನ್ನೇ ಪ್ರತಿಪಾದಿಸುವುವೆಂದು ಶ್ರೀಕೃಷ್ಣನು ಉಪದೇಶಮಾಡಿರುತ್ತಾನೆ:—

**ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಂ।**
**ಮಾಸಾನಾಂ ಮಾರ್ಗಶೀರ್ಷೋಽಹಂ ಋತೂನಾಂ ಕುಸುಮಾಕರಃ॥**
**.............. ಪಾಂಡವಾನಾಂ ಧನಂಜಯಃ।**
**........................... ಕವೀನಾಮುಶನಾ ಕವಿಃ ॥**

—(10. 35-37.)

ಪೂರ್ಣಸಾರನಾಗಿಯೂ ಸಾಕಲ್ಯೇನ ಅಜ್ಞೇಯನಾಗಿಯೂ ಇರುವುದರಿಂದ ಬೃಹತ್ಸಾಮನಾಮಕನಾದ ನಾನು ಬೃಹತ್ಸಾಮವೆಂಬ ಸಾಮಭಾಗದಲ್ಲಿ ಸ್ಥಿತನಾಗಿ ಅದನ್ನು ಇತರ (ರಥಂತರಾದಿ) ಸಾಮಗಳಿಗಿಂತಲೂ ಶ್ರೇಷ್ಠವನ್ನಾಗಿ ಮಾಡಿರುವೆನು. ನನ್ನನ್ನು ಕುರಿತು ಗಾಯನ ಮಾಡುವವರನ್ನು ರಕ್ಷಿಸುವನಾದುದರಿಂದ ಗಾಯತ್ರೀನಾಮಕನಾದ ನಾನು ಗಾಯತ್ರಿಯನ್ನು ಛಂದಸ್ಸುಗಳಲ್ಲಿ ಶ್ರೇಷ್ಠವನ್ನಾಗಿ ಮಾಡಿರುವೆನು. ಸನ್ಮಾರ್ಗದಿಂದ ಪ್ರಾಪ್ಯರಾದವರಲ್ಲಿ ನಾನೇ ಕೊನೆಯವನಾದುದರಿಂದ ಮಾರ್ಗಶೀರ್ಷನಾಮಕನಾದ ನಾನು ಮಾರ್ಗಶೀರ್ಷದಲ್ಲಿ ಸ್ಥಿತನಾಗಿ ಅದನ್ನು (ಕಾರ್ತಿಕಾದಿಮಾಸಗಳನ್ನು ಬಿಟ್ಟು) ಇತರ ಮಾಸಗಳಿಗಿಂತ ಶ್ರೇಷ್ಠವನ್ನಾಗಿ ಮಾಡಿರುವೆನು. ಜನರ ಯೋಗ್ಯತಾನುಸಾರ ಉತ್ತಮಜ್ಞಾನವನ್ನೂ ದುಷ್ಟಜ್ಞಾನವನ್ನೂ ವಿತರಿಸುವವನಾದು

ದರಿಂದ ಕುಸುಮಾಕರ ನಾಮಕನಾದ ನಾನು ವಸಂತ ಋತುವಿನಲ್ಲಿ ಸನ್ನಿಹಿತನಾಗಿ ಅದನ್ನು ಇತರ ಋತುಗಳಿಗಿಂತ ಶ್ರೇಷ್ಠವನ್ನಾಗಿ ಮಾಡಿರುವೆನು. ಸಮಸ್ತ ಧನವನ್ನೂ ಜಯಿಸುವವನಾದುದರಿಂದ ಧನಂಜಯನಾಮಕನಾದ ನಾನು ಅರ್ಜುನನಲ್ಲಿ ಸ್ಥಿತನಾಗಿ ಆತನನ್ನು (ಭೀಮಸೇನನನ್ನು ಹೊರತು) ಇತರ ಪಾಂಡವರಿಗಿಂತ ಅಧಿಕನನ್ನಾಗಿ ಮಾಡಿರುವೆನು. ಸೃಷ್ಟ್ಯಾದಿಕಾಲಗಳಲ್ಲಿ ಜಗತ್ಸರ್ಜನಾದಿ ಇಚ್ಛೆಯುಳ್ಳವನಾದುದರಿಂದ ಉಶನಾನಾಮಕನಾದ ನಾನು ಶುಕ್ರಾಚಾರ್ಯರಲ್ಲಿ ಸ್ಥಿತನಾಗಿ ಅವರನ್ನು (ಬ್ರಹ್ಮಾದಿ ಉತ್ತಮ ಕವಿಗಳಿಂದ ಭಿನ್ನರಾದ) ಇತರ ಕಾಳಿದಾಸಾದಿ ಕವಿಗಳಿಗಿಂತ ಉತ್ತಮರನ್ನಾಗಿ ಮಾಡಿರುವೆನು.

ಈ ಪ್ರಕಾರವಾಗಿ ವೇದದಲ್ಲಿರುವ ಬೃಹತ್ಸಾಮ, ಗಾಯತ್ರೀ, ಮಾರ್ಗಶೀರ್ಷ, ಕುಸುಮಾಕರ, ಧನಂಜಯ, ಉಶನಾ ಇತ್ಯಾದಿ ಶಬ್ದಗಳು ಪರಮಾತ್ಮನ ಗುಣಗಳನ್ನೇ ಬೋಧಿಸುವುವೆಂದು ಸ್ಪಷ್ಟವಾಗುವುದು. ಇವುಗಳೆಲ್ಲವೂ ಸಜಾತೀಯ ವಸ್ತುಗಳಿಗಿಂತ ಉತ್ಕರ್ಷ ದಾನಾರ್ಥವಾಗಿ ಆಯಾಯ ಯೋಗ್ಯ ವಸ್ತುವಿನಲ್ಲಿ ಸ್ಥಿತವಾದ ಭಗವದ್ರೂಪಗಳ ಹೆಸರುಗಳಾಗಿರುವುವು.

**16.** ಮತ್ತು ಕೆಲವು ವೈದಿಕಶಬ್ದಗಳು ವಿಜಾತೀಯ ವಸ್ತುಗಳಿಂದ ಸ್ವಾಧಿಷ್ಠಾನಕ್ಕೆ ಆಧಿಕ್ಯಪ್ರದಾನಾರ್ಥವಾಗಿ ಸ್ಥಿತವಾದ ಭಗವದ್ರೂಪಗಳ ಹೆಸರುಗಳಾಗಿರುವುವು. ಶ್ರೀಕೃಷ್ಣನು ಹೇಳುತ್ತಾನೆ.:—

(1) .... .... **ನಕ್ಷತ್ರಾಣಾಮಹಂ ಶಶೀ ॥**
—(10. 21.)

(2) .... .... **ವಿತ್ತೇಶೋ ಯಕ್ಷರಕ್ಷಸಾಂ ।**
—(10. 23.)

(3) .... .... **ವರುಣೋ ಯಾದಸಾಮಹಂ ।**
—(10. 29.)

**ಅರ್ಥ:**– ಅತಿಸುಖವಂತನಾದುದರಿಂದ ಶಶಿನಾಮಕನಾದ ನಾನು ಚಂದ್ರನಲ್ಲಿ ಸ್ಥಿತನಾಗಿ ಆತನನ್ನು ಸರ್ವನಕ್ಷತ್ರಗಳಿಗೆ ಅಧಿಪತಿಯನ್ನಾಗಿ ಮಾಡಿರುತ್ತೇನೆ. ನಿಖಿಲದ್ರವ್ಯಗಳಿಗೂ ಸ್ವಾಮಿಯಾದುದರಿಂದ ವಿತ್ತೇಶ ನಾಮಕನಾದ ನಾನು ಕುಬೇರನಲ್ಲಿ ಸ್ಥಿತನಾಗಿ ಆತನನ್ನು ಯಕ್ಷರಕ್ಷೋ ಗಣಗಳಿಗೆ ಅಧಿಪತಿಯ

ನ್ನಾಗಿ ಮಾಡಿರುವೆನು. ಉತ್ಕೃಷ್ಟಾನಂದ ಸ್ವರೂಪನಾದುದರಿಂದ ವರುಣ ನಾಮಕನಾದ ನಾನು ವರುಣದೇವನಲ್ಲಿ ಸನ್ನಿಹಿತನಾಗಿ ಆತನನ್ನು ಸರ್ವ ಜಲ ಚರಪ್ರಾಣಿಗಳಿಗೂ ಅಧಿಪತಿಯನ್ನಾಗಿ ಮಾಡಿರುವೆನು.

ಈ ಪ್ರಕಾರವಾಗಿ ವೇದೋಕ್ತವಾದ ಶಶಿ, ವಿತ್ತೇಶ, ವರುಣನಾಮಗಳಿಂದ ಪರಮಾತ್ಮನೇ ಪ್ರತಿಪಾದ್ಯನು.

**17.** ಕಂದರ್ಪ, ಕೀರ್ತಿ, ಶ್ರೀ, ನೀತಿಮುಂತಾದ ಇನ್ನೂ ಅನೇಕ ವೈದಿಕ ಶಬ್ದಗಳಿಂದಲೂ ಪರಮಾತ್ಮನೇ ಪ್ರತಿಪಾದ್ಯನು. ಈ ನಾಮಗಳಿಂದ ಕರೆಯ ಲ್ಪಡುವ ತನ್ನ ರೂಪಗಳನ್ನು ಶ್ರೀಪರಮಾತ್ಮನು ನಾನಾ ಪದಾರ್ಥಗಳಲ್ಲಿಟ್ಟು ಆಯಾಯ ವಸ್ತುಗತ ಸಾರಧರ್ಮಗಳಿಗೆ ಕಾರಣನಾಗಿಯೂ ನಿಯಾಮಕನಾ ಗಿಯೂ ಇರುವನು. ಕೆಲವು ಭಗವನ್ನಾಮಗಳು ಪರಮಾತ್ಮನ ಗುಣಗಳನ್ನು ಮಾತ್ರ ಬೋಧಿಸುವುವು. ಆ ನಾಮದಿಂದ ವಾಚ್ಯವಾದ ಭಗವದ್ರೂಪವು ನಿಯತವಾದ ಒಂದು ಅಧಿಷ್ಠಾನದಲ್ಲಿರುವುದಿಲ್ಲ. ಶ್ರೀಕೃಷ್ಣನು ಹೇಳುತ್ತಾನೆ:–

(1) **ಪ್ರಜನಶ್ಚಾಸ್ಮಿ ಕಂದರ್ಪಃ........ ||**

—(10. 28.)

(2) **ಮೃತ್ಯುಸ್ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಂ।**
**ಕೀರ್ತಿಶ್ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ||**

—(10. 34.)

**ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಂ ।**
**ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಂ ||**

—(10. 36.)

**ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಂ ।**
**ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಂ ||**

—(10. 38.)

"ಮೋದಪ್ರಮೋದಾದಿ ಅನೇಕ ಸುಖಪ್ರಭೇದಗಳನ್ನು ಅನುಭವಿಸುವ ನಾದುದರಿಂದ ಕಂದರ್ಪನಾಮಕನಾದ ನಾನು ಪ್ರಕೃಷ್ಟಜನನಕಾರಣನಾದ ಮನ್ಮಥನಲ್ಲಿ ಸ್ಥಿತನಾಗಿ (ಸರ್ವರಲ್ಲಿರುವ ಪ್ರಜನನ ಶಕ್ತಿಗೂ) ನಿಯಾಮಕನಾಗಿ ರುವೆನು. ಮಾರಕನಾದುದರಿಂದ ಮೃತ್ಯುನಾಮಕನಾದ ನಾನು ಆಯುಸ್ಸ

ಮುಗಿದವರನ್ನು ಸಂಹಾರಮಾಡುವ ಮೃತ್ಯುದೇವತೆಯಲ್ಲಿ ಸ್ಥಿತನಾಗಿ ಆಕೆಯ ಶಕ್ತಿಗೆ ನಿಯಾಮಕನಾಗಿರುವೆನು. ಜಗದುತ್ಪಾದಕನಾದುದರಿಂದ ಉದ್ಭವ ನಾಮಕನಾದ ನಾನು ಉತ್ಪನ್ನವಾಗುವ ಸಕಲ ವಸ್ತುಗಳ ಉತ್ಪತ್ತಿಗೆ ನಿಯಾಮಕನಾಗಿರುವೆನು. ಗಾಯಕರ ಸಂಕೀರ್ತನೆಗಳಿಗೆ ವಿಷಯನಾದುದರಿಂದ ಕೀರ್ತಿನಾಮಕನೂ; ಜಗತ್ತಿಗೆ ಆಶ್ರಯನಾದುದರಿಂದ ಶ್ರೀನಾಮಕನೂ; ಉತ್ತಮನಾದ ವಾಗ್ಮಿಯಾದುದರಿಂದ ನಾನೇ ವಾಙ್ನಾಮಕನೂ ಆಗಿ, ನಾನೇ ಕೀರ್ತಿ, ಶ್ರೀ ಮತ್ತು ವಚನ ಶಕ್ತಿಗಳಿಗೆ ನಿಯಾಮಕನಾಗಿರುವೆನು. ಭಕ್ತರಿಂದ ಸ್ಮರಣೀಯನಾದುದರಿಂದ ಸ್ಮೃತಿನಾಮಕನಾದ ನಾನು ಸ್ಮೃತಿಗೆ ನಿಯಾಮಕನಾಗಿರುವೆನು. ಹೀಗೆ ಮೇಧಾರೂಪನಾದುದರಿಂದ ಮೇಧಾನಾಮಕನಾಗಿ ಬುದ್ಧಿಯಲ್ಲಿ ಸನ್ನಿಹಿತನಾಗಿರುವೆನು. ಧೃತಿಸ್ವರೂಪನಾದುದರಿಂದ ಧೃತಿನಾಮಕನಾಗಿ ನಾನು ಧೃತಿಗೆ ನಿಯಾಮಕನಾಗಿರುವೆನು. ಕ್ಷಮಾರೂಪನಾದುದರಿಂದ ಕ್ಷಮಾನಾಮಕನಾದ ನಾನು ಕ್ಷಮಾಗುಣಕ್ಕೆ ನಿಯಾಮಕನಾಗಿರುತ್ತೇನೆ.

ಕಪಟಿಗಳಲ್ಲಿ ದ್ಯೂತವೆಂಬ ಪ್ರಧಾನ ಧರ್ಮಕ್ಕೆ ಕ್ರೀಡಾರತನಾದುದರಿಂದ ದ್ಯೂತನಾಮಕನಾದ ನಾನು ನಿಯಾಮಕನಾಗಿರುತ್ತೇನೆ. ಪ್ರಕಾಶಸ್ವರೂಪನಾದುದರಿಂದ ತೇಜಶ್ಶಬ್ದವಾಚ್ಯನಾದ ನಾನು ತೇಜೋವಂತರಲ್ಲಿರುವ ತೇಜಸ್ಸೆಂಬ ಸಾರಧರ್ಮಕ್ಕೆ ಪ್ರವರ್ತಕನು. ನಿತ್ಯಜಯಶೀಲನಾದುದರಿಂದ ಜಯನಾಮಕನಾದ ನಾನು ಜಯವಂತರಲ್ಲಿರುವ ಜಯರೂಪವಾದ ಸಾರಧರ್ಮಕ್ಕೆ ನಿಯಾಮಕನು. ನಿಶ್ಚಯವಂತರಲ್ಲಿರುವ ನಿಶ್ಚಯರೂಪವಾದ ಸಾರಧರ್ಮಕ್ಕೆ ಕಾರಣನಾದುದರಿಂದ ನಾನೇ ವ್ಯವಸಾಯನಾಮಕನು. ಬಲವಂತರಲ್ಲಿರುವ ಬಲರೂಪವಾದ ಸಾರಧರ್ಮಕ್ಕೆ ಕಾರಣನಾದುದರಿಂದ ನಾನೇ ಸತ್ವನಾಮಕನು. ದಂಡಮಾಡುವವರಲ್ಲಿರುವ ದಂಡನಶಕ್ತಿಗೆ ಕಾರಣನಾದುದರಿಂದ ನಾನೇ ದಂಡನಾಮಕನು. ಜಯಾಪೇಕ್ಷಿಗಳಲ್ಲಿರುವ ನೀತಿರೂಪವಾದ ಸಾರಧರ್ಮಕ್ಕೆ ಪ್ರವರ್ತಕನಾದುದರಿಂದ ನಾನೇ ನೀತಿನಾಮಕನು. ಗೋಪನೀಯವಸ್ತುಗಳಲ್ಲೆಲ್ಲಾ ಅತ್ಯಂತ ಗೋಪನೀಯನಾದುದರಿಂದ ಮೌನನಾಮಕನಾದ ನಾನು ಮುನಿಗಳಲ್ಲಿರುವ ಮೌನವೆಂಬ ಸಾರಧರ್ಮಕ್ಕೆ ಪ್ರವರ್ತಕನು.

ಸ್ವಯಂ ಜ್ಞಾನಸ್ವರೂಪನಾದುದರಿಂದ ಜ್ಞಾನನಾಮಕನಾದ ನಾನು ಜ್ಞಾನವಂತರಲ್ಲಿರುವ ಜ್ಞಾನವೆಂಬ ಸಾರಧರ್ಮಕ್ಕೆ ಪ್ರವರ್ತಕನು."

ಈ ಶ್ಲೋಕಾರ್ಥಪರ್ಯಾಲೋಚನೆಯಿಂದ ಕಂದರ್ಪ, ಮೃತ್ಯು, ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧಾ, ಧೃತಿ, ಕ್ಷಮಾ, ದ್ಯೂತ, ತೇಜ, ಜಯ, ವ್ಯವಸಾಯ, ಸತ್ವ, ದಂಡ, ನೀತಿ, ಮೌನ, ಜ್ಞಾನ ಮುಂತಾದ ವೇದದಲ್ಲಿರುವ ಪದಗಳು ಶ್ರೀಪರಮಾತ್ಮನನ್ನೇ ಪ್ರತಿಪಾದಿಸುವುವು ಎಂದು ಸಿದ್ಧವಾಗುವುದು.

ಸಪ್ತಮಾಧ್ಯಾಯದಲ್ಲಿಯೂ ಕೂಡ ರಸ, ಪ್ರಭಾ, ಪ್ರಣವ, ಶಬ್ದ, ಪೌರುಷ, ಗಂಧ, ತೇಜಸ್ಸು, ಜೀವನ, ತಪ, ಬುದ್ಧಿ, ಬಲ, ಕಾಮಾದಿ ನಾನಾ ವಸ್ತುಗಳಲ್ಲಿರುವ ಸಾರಧರ್ಮಗಳಿಗೆ ಪ್ರವರ್ತಕನಾದುದರಿಂದ ರಸಾದಿ ವೈದಿಕ ನಾಮಗಳಿಂದ ಶ್ರೀಮನ್ನಾರಾಯಣನೇ ಪ್ರತಿಪಾದ್ಯನೆಂದು ಸಿದ್ಧವಾಗುವುದು.

**18.** ನವಮಾಧ್ಯಾಯದ ಕೆಲವು ಶ್ಲೋಕಗಳಿಂದಲೂ ಕೂಡ ಕ್ರತು, ಯಜ್ಞ, ಸ್ವಧಾ, ಔಷಧ, ಮಂತ್ರ, ಆಜ್ಯ, ಅಗ್ನಿ, ಹುತಾದಿಗಳಿಗೆ ನಿಯಾಮಕನಾದುದರಿಂದ ಶ್ರೀಪರಮಾತ್ಮನೇ ಕ್ರತು, ಯಜ್ಞಾದಿ ವೈದಿಕನಾಮಗಳಿಂದ ಕರೆಯಿಸಿಕೊಳ್ಳಲ್ಪಡುವವನಾಗಿ ಕ್ರತ್ವಾದಿಗಳಲ್ಲಿದ್ದು ಫಲಪ್ರದನಾಗುವನು ಎಂದು ಸಿದ್ಧವಾಗುವುದು. ಪ್ರಕಾರಾಂತರದಿಂದಲೂ ಈ ನಾಮಗಳ ನಿರ್ವಚನವು ಸಾಧ್ಯವಾಗಿರುವುದು. ಶ್ಲೋಕವನ್ನು ಉದಾಹರಿಸಿ ವ್ಯಾಖ್ಯಾನವನ್ನು ನಿರೂಪಿಸುವೆವು:—

(1) **ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಂ ।**
**ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಂ ॥**

—(9. 16.)

**ತಾತ್ಪರ್ಯವು :—** ಉತ್ತಮಕೃತಿಸ್ವರೂಪನಾದುದರಿಂದ ನಾನು ಕ್ರತುನಾಮಕನಾಗಿ, ಕ್ರತುಗಳಿಗೆ ಪ್ರವರ್ತಕನಾಗಿರುತ್ತೇನೆ. ಪ್ರಾಮಾಣಿಕವಾದ ಸರ್ವವನ್ನೂ ತಿಳಿಯುವವನಾದುದರಿಂದ ಯಜ್ಞನಾಮಕನಾದ ನಾನು ಯಜ್ಞಗಳಿಗೆ ಪ್ರವರ್ತಕನಾಗಿರುತ್ತೇನೆ. ನಾನೇ ನನಗೆ ಆಧಾರನಾಗಿರುವುದರಿಂದ ಸ್ವಧಾನಾಮಕನಾದ ನಾನು ಸ್ವಧೆಗೆ ನಿಯಾಮಕನಾಗಿರುವೆನು.

ತಾಪತ್ರಯದಗ್ಧರಾದವರಿಗೆ ನಿಧಿರೂಪನಾದುದರಿಂದ ನಾನು ಓಷಧನಾಮಕನಾಗಿ ವನಸ್ಪತಿಗಳಲ್ಲಿ ನಿಯಾಮಕನಾಗಿರುವೆನು. ಜ್ಞಾನವನ್ನು ಕೊಟ್ಟು ಭಕ್ತರನ್ನು ರಕ್ಷಿಸುವುದರಿಂದ ಮಂತ್ರನಾಮಕನಾದ ನಾನು ಮಂತ್ರದಲ್ಲಿ ಸನ್ನಿಹಿತನಾಗಿರುವೆನು. ಸರ್ವರ ದೆಸೆಯಿಂದ ಶ್ರೇಷ್ಠನಾದುದರಿಂದ ಆಜ್ಯನಾಮಕನಾದ ನಾನು ಆಜ್ಯದಲ್ಲಿ ಸನ್ನಿಹಿತನಾಗಿರುವೆನು. ಗತಿವಿಹೀನರಿಗೆ ನಾಯಕನಾದುದರಿಂದ ಅಗ್ನಿನಾಮಕನಾದ ನಾನು ಅಗ್ನಿಯಲ್ಲಿ ಸನ್ನಿಹಿತನಾಗಿರುವೆನು. ಯಜ್ಞದಲ್ಲಿ ಆಹೂತನಾದುದರಿಂದ ಹುತನಾಮಕನಾದ ನಾನು ಹೋಮದಲ್ಲಿ ಸನ್ನಿಹಿತನಾಗಿರುವೆನು.

ಇದೇ ರೀತಿಯಲ್ಲಿ ಪಿತೃ, ಮಾತೃ, ಧಾತೃ, ಪಿತಾಮಹಾದಿ ವೈದಿಕ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನು. ವೇದ್ಯ, ಪವಿತ್ರ, ಓಂಕಾರ, ಋಕ್, ಸಾಮ, ಯಜುಃ, ಮುಂತಾದ ವೈದಿಕ ಪದಗಳೂ ಭಗವಂತನನ್ನೇ ಪ್ರತಿಪಾದಿಸುವುವು. ಹಾಗೆಯೇ ಗತಿ, ಭರ್ತಾ, ಪ್ರಭು, ಸಾಕ್ಷೀ, ನಿವಾಸ, ಶರಣಂ, ಸುಹೃತ್, ಪ್ರಭವ, ಪ್ರಳಯ, ಸ್ಥಾನ, ನಿಧಾನ, ಬೀಜ, ಅಮೃತ, ಮೃತ್ಯು, ಸತ್, ಅಸತ್ ಮುಂತಾದ ವೈದಿಕ ಪದಗಳೂ ಪರಮಾತ್ಮನನ್ನೇ ಪ್ರತಿಪಾದಿಸುವುವು. ಶ್ರೀಕೃಷ್ಣನು ಹೇಳುತ್ತಾನೆ:—

(2) **ಪಿತಾಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।**
**ವೇದ್ಯಂ ಪವಿತ್ರಮೋಂಕಾರ ಋಕ್ಸಾಮಯಜುರೇವ ಚ ॥**
**ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಶ್ಶರಣಂ ಸುಹೃತ್ ।**
**ಪ್ರಭವಃ ಪ್ರಳಯಃ ಸ್ಥಾನಂ ನಿಧಾನಂ ಬೀಜಮವ್ಯಯಂ ॥**
.... .... .... ....
**ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ।**
—(9. 17-19.)

**ತಾತ್ಪರ್ಯವು :—**ಜಗತ್ತನ್ನು ಸೃಷ್ಟಿಸುವುದರಿಂದ ಪಿತೃನಾಮಕನಾದವನು ನಾನು; ರಕ್ಷಕನಾದುದರಿಂದ ಮಾತೃನಾಮಕನು ನಾನು; ಧಾರಕನಾದುದರಿಂದ ಧಾತೃನಾಮಕನು ನಾನು; ಅತ್ಯಂತ ಪೂಜ್ಯನಾದುದರಿಂದ ಪಿತಾಮಹನಾಮಕನು ನಾನು. ಜ್ಞೇಯನಾದುದರಿಂದ ವೇದ್ಯನಾಮಕನು ನಾನು; ಭಜಕರನ್ನು ಶುದ್ಧಿಮಾಡುವುದರಿಂದ ಪವಿತ್ರನಾಮಕನು ನಾನು; ಪ್ರಣವ

ಪ್ರತಿಪಾದ್ಯನಾದುದರಿಂದ ಓಂಕಾರನಾಮಕನು ನಾನು; ಋಗ್ವೇದದಿಂದ ಪ್ರತಿಪಾದ್ಯನಾದುದರಿಂದ ಋಕ್‌ನಾಮಕನು ನಾನು; ಸಾಮವೇದಪ್ರತಿಪಾದ್ಯನಾದುದರಿಂದ ಸಾಮನಾಮಕನು ನಾನು. ಯಜುರ್ವೇದಪ್ರತಿಪಾದ್ಯನಾದುದರಿಂದ ಯಜುರ್ನಾಮಕನು ನಾನು. ಮೋಕ್ಷಾರ್ಥಿಗಳಿಂದ ಪ್ರಾಪ್ಯನಾದುದರಿಂದ ಗತಿನಾಮಕನು ನಾನು; ಪೋಷಕನಾದುದರಿಂದ ಭರ್ತೃನಾಮಕನು ನಾನು; ಸ್ವಾಮಿಯಾದುದರಿಂದ ಪ್ರಭುನಾಮಕನು ನಾನು; ಸಾಕ್ಷಾತ್ತಾಗಿ ಸರ್ವವನ್ನೂ ನೋಡುವುದರಿಂದ ಸಾಕ್ಷಿನಾಮಕನು ನಾನು; ಆಶ್ರಯನಾದುದರಿಂದ ನಿವಾಸನಾಮಕನು ನಾನು; ಭೀತರಾದವರಿಗೆ ರಕ್ಷಕನಾದುದರಿಂದ ಶರಣನಾಮಕನು ನಾನು; ಜಗದುತ್ಪತ್ತಿಕರ್ತನಾದುದರಿಂದ ಪ್ರಭವನಾಮಕನು ನಾನು. ಲಯಕರ್ತನಾದುದರಿಂದ ಪ್ರಳಯನಾಮಕನು ನಾನು. ಸರ್ವಾಧಾರನಾದುದರಿಂದ ಸ್ಥಾನನಾಮಕನು ನಾನು. ಅತ್ಯಂತವಾಗಿ ಧಾರಕನಾದುದರಿಂದ ನಿಧಾನನಾಮಕನು ನಾನು. ಜಗದ್ವ್ಯಂಜಕನಾದುದರಿಂದ ಬೀಜನಾಮಕನು ನಾನು. ನಾಶರಹಿತನಾದುದರಿಂದ ಅವ್ಯಯನಾಮಕನು ನಾನು........ ಇಂದ್ರಿಯಗಳಲ್ಲಿದ್ದು ಅವುಗಳಿಗೆ ದೇಹಧಾರಣೆಯಿಂದ ಪ್ರಾಪ್ತವಾಗುವ ಮೃತಿಯನ್ನು ಪರಿಹರಿಸುವವನಾದುದರಿಂದ ಅಮೃತನಾಮಕನು ನಾನು. ಪ್ರಳಯಕಾಲದಿಂದ ಭಿನ್ನವಾದ ಕಾಲಗಳಲ್ಲಿಯೂ ಸಂಹಾರಕನಾದುದರಿಂದ ಮೃತ್ಯುನಾಮಕನು ನಾನು; ಕಾರ್ಯಪ್ರಪಂಚಕ್ಕೆ ನಿಯಾಮಕನಾದುದರಿಂದ ಸನ್ನಾಮಕನು ನಾನು; ಕಾರಣವಸ್ತುಗಳಿಗೆ ನಿಯಾಮಕನಾದುದರಿಂದ ಅಸನ್ನಾಮಕನು ನಾನು.

ಮತ್ತೂ ಮೂರು ವೈದಿಕನಾಮಗಳಿಂದ ಶ್ರೀಕೃಷ್ಣನೇ ಪ್ರತಿಪಾದ್ಯನೆಂಬುದು ಹದಿನೇಳನೆಯ ಅಧ್ಯಾಯದ ಈ ಶ್ಲೋಕದಿಂದ ವಿದಿತವಾಗುವುದು :—

**(3) ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ||**

"ಸರ್ವರಕ್ಷಕನಾದುದರಿಂದ ಜಗತ್ತಿನಲ್ಲಿ ಪ್ರವಿಷ್ಟನಾದುದರಿಂದಲೂ ಗುಣಪೂರ್ಣನಾದುದರಿಂದಲೂ ಓಂ ನಾಮಕನು ಪರಬ್ರಹ್ಮನಾದ ಶ್ರೀಕೃಷ್ಣನು. ಸರ್ವತ್ರ ವ್ಯಾಪ್ತನಾದುದರಿಂದಲೂ, ವೇದೈಕವೇದ್ಯನಾದುದರಿಂದಲೂ, ಪ್ರತ್ಯಕ್ಷಕ್ಕೆ ಅಗೋಚರನಾದುದರಿಂದಲೂ ತತ್ ಎಂಬ ನಾಮವುಳ್ಳವನು ಶ್ರೀಪರಮಾ

ತ್ಮನೇ. ದೋಷಗಳಿಂದ ರಹಿತನಾದುದರಿಂದ 'ಸತ್' ನಾಮಕನು ಶ್ರೀಪರಮಾತ್ಮನು."

"ವೇದೈಶ್ಚ ಸರ್ವೈರಹಮೇವ ವೇದ್ಯಃ" ಎಂಬ ವಾಕ್ಯದಲ್ಲಿ ನಾನೇ ಸರ್ವವೇದ ಪ್ರತಿಪಾದ್ಯನೆಂದು ಪ್ರತಿಜ್ಞೆಮಾಡಿದ ಶ್ರೀಕೃಷ್ಣನು, ಪೂರ್ವೋಕ್ತಪ್ರಕಾರದಲ್ಲಿ ವೇದದಲ್ಲಿರುವ ಅನೇಕ ಪದಗಳಿಂದ ತಾನೇ ಪ್ರತಿಪಾದಿತನೆಂದು ನಿರ್ದೇಶಮಾಡಿ ನಿರೂಪಿಸಿ, ಈ ಕ್ರಮದಿಂದಲೇ ಸಕಲ ವೈದಿಕಪದಗಳೂ ತನ್ನನ್ನೇ ಪ್ರತಿಪಾದಿಸುವುವೆಂದು ತಿಳಿಯಬೇಕೆಂದು ತೋರಿಸಿರುತ್ತಾನೆ. ಆದುದರಿಂದಲೇ ಶ್ರೀಕೃಷ್ಣನು ಅನಂತಕಲ್ಯಾಣಗುಣಭರಿತನಾದ ಸರ್ವದೋಷವಿವರ್ಜಿತನಾದ ಪರಬ್ರಹ್ಮನೆಂಬ ಸತ್ಸಿದ್ಧಾಂತವು ಸಜ್ಜನರ ಹೃತ್ಕಮಲದಲ್ಲಿ ವಿರಾಜಿಸುತ್ತಿದೆ.*

---

* ಶಾಸ್ತ್ರದ ಯಥಾರ್ಥತತ್ವವನ್ನು ತಿಳಿಯದೇ, ಎಂದರೆ ಸಕಲ ಶಾಸ್ತ್ರಗಳಲ್ಲಿಯೂ ರುಕ್ಮಿಣೀವಲ್ಲಭನಾದ ಶ್ರೀಕೃಷ್ಣನೇ ಪರಮ ಮುಖ್ಯವೃತ್ತಿಯಿಂದ ಪ್ರತಿಪಾದಿತನಾದ ಪರಬ್ರಹ್ಮನೆಂದು ತಿಳಿಯದೇ, ಬ್ರಹ್ಮನು ಗುಣಶೂನ್ಯನು, ಅನ್ಯದೇವತೆಗಳಿಗಿಂತ ಉತ್ಕರ್ಷರಹಿತನು ಇತ್ಯಾದಿ ರೀತಿಯಾಗಿ ದುಸ್ತತ್ತ್ವವನ್ನು ರಚಿಸುವ ವಾದಿಗಳ ಸ್ವರೂಪವನ್ನು ಮಹಾಭಾರತದಲ್ಲಿಯೇ ಶ್ರೀವೇದವ್ಯಾಸರು ಅವರಿಗೆ ಪ್ರಾಪ್ತವಾಗುವ ಫಲಕಥನಪೂರ್ವಕವಾಗಿ ನಿರೂಪಿಸಿರುವರು :—

**ಯಾಥಾತಥ್ಯಮವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ ।**
**ನೈಗುಣ್ಯಮೇವ ಪಶ್ಯಂತಿ ನ ಗುಣಾನಿ ನಿಯುಂಜತೇ ॥**
**ತೇಷಾಂ ತಮಶ್ಶರೀರಾಣಾಂ ತಮ ಏವ ಪರಾಯಣಂ ।**

**ಅರ್ಥ**:— ಶಾಸ್ತ್ರದಸ್ಯವಃ = ಶಾಸ್ತ್ರದ (ನಿಜವಾದ ತತ್ವವನ್ನು ಮರೆಮಾಚುವ)ಕಳ್ಳರು, ಶಾಸ್ತ್ರಾಣಾಂ = ಶಾಸ್ತ್ರಗಳ, ಯಾಥಾತಥ್ಯಂ = ನಿಜವಾದ ತತ್ವವನ್ನು; ಅವಿಜ್ಞಾಯ = ತಿಳಿಯದೇ, (ಶ್ರೀಹರಿಯಲ್ಲಿ) ನೈಗುಣ್ಯಮೇವ = ಗುಣಶೂನ್ಯತೆಯನ್ನೇ, ಪಶ್ಯಂತಿ = ತಿಳಿಯುತ್ತಾರೆ; ಗುಣಾನಿ = (ಶ್ರೀಹರಿಯಲ್ಲಿರುವ ಕಲ್ಯಾಣ) ಗುಣಗಳನ್ನು, ನ ನಿಯುಂಜತೇ = ಅವನಲ್ಲಿರುವುವೆಂದು ತಿಳಿಯುವುದಿಲ್ಲ. ತಮಶ್ಶರೀರಾಣಾಂ = ತಮೋಗುಣಮಯವಾದ ಸ್ವರೂಪ ದೇಹಗಳುಳ್ಳಂಥಾ, ತೇಷಾಂ = ಆ ಶಾಸ್ತ್ರಚೋರರಿಗೆ, ತಮ ಏವ = ಅಂಧಂತಮಸ್ಸೇ, ಪರಾಯಣಂ = ಪ್ರಾಪ್ಯವಾದ ಸ್ಥಾನವು.

# X.

# ಗೀತಾಮಾಹಾತ್ಮ್ಯವು.

## ಅನುಬಂಧಚತುಷ್ಟಯವು.

**1. ಪ್ರಶ್ನೆ :**—ಸ್ವಾಮಿ! ಸರ್ವ ಧರ್ಮಗಳಿಗಿಂತಲೂ ಗೀತೋಕ್ತವಾದ ಧರ್ಮಗಳೇ ಅವಶ್ಯ ಅನುಷ್ಠೇಯವೆಂದೂ ಗೀತೆಯಲ್ಲಿ ಶ್ರೀಕೃಷ್ಣನು ಸರ್ವತ್ರ ಪ್ರಾಮಾಣಿಕವಾದ ಉಪದೇಶವನ್ನೇ ಮಾಡಿರುವನೆಂದೂ ನಿರ್ಧರಿಸುವುದು ಹೇಗೆ?

**ಉತ್ತರ— ಶ್ರೀಶ್ರೀಗಳವರು :**—ಆ ವಿಚಾರವೂ ನಡೆಯಲಿ. ಶ್ರೀಮದ್ಭಗವದ್ಗೀತೆಯಿಂದಲೇ ಈ ವಿಷಯಕ್ಕೂ ಉತ್ತರವನ್ನು ನಿರೂಪಿಸಬೇಕೋ ಅಥವಾ ಪ್ರಮಾಣಾಂತರದಿಂದ ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳಬಹುದೋ?

**ವಿದ್ಯಾರ್ಥಿಗಳು—** ಮಹಾಸ್ವಾಮಿ! ಶ್ರೀಕೃಷ್ಣವಾಕ್ಯಗಳಿಂದಲೇ ಸಾಧ್ಯವಾದಷ್ಟುಮಟ್ಟಿಗೆ ಈ ಪ್ರಶ್ನೆಗೂ ಉತ್ತರವನ್ನು ಹೇಳಬೇಕೆಂದು ಪ್ರಾರ್ಥಿಸುತ್ತೇವೆ.

**ಉತ್ತರ— ಶ್ರೀಶ್ರೀಗಳವರು :**— ಓಂ! ಕೇಳಿರಿ. ಭಗವದ್ಗೀತೆಯು ಅತ್ಯಂತ ಪ್ರಾಮಾಣಿಕವಾದ ಗ್ರಂಥವು. ಮತ್ತು ಮುಮುಕ್ಷುವಿನ ನಿಶ್ಶಂಕ ಪ್ರವೃತ್ತಿಗೆ ಕಾರಣವಾದ ಸಕಲ ಗುಣಗಳೂ ಗೀತೋಕ್ತವಿಷಯಗಳಲ್ಲಿ ತುಂಬಿರುವುವು. ತಥಾಹಿ :—

ಭಗವದ್ಗೀತೆಯು ಆಪ್ತತಮನಾದ ಶ್ರೀಕೃಷ್ಣನಿಂದ ಉತ್ತಮಾಧಿಕಾರಿಯಾದ ಅರ್ಜುನನಂಥಾ ಶಿಷ್ಯನಿಗೆ ಧರ್ಮಸಂಕಟವನ್ನು ಪರಿಹರಿಸಬೇಕೆಂಬ ಉದ್ದೇಶದಿಂದ ಮಾಡಿದ ಹಿತೋಪದೇಶವಾಗಿರುತ್ತದೆ. ಆದುದರಿಂದ ಇದರಲ್ಲಿ ಆಪ್ತಿಮೂಲಕವಾದ ಪ್ರಾಮಾಣ್ಯವು ಸಮಗ್ರವಾಗಿರುವುದು. ಯಾವ ಗ್ರಂಥದಲ್ಲಿ ವಕ್ತ್ರಾನುಕೂಲ್ಯವೂ, ಶ್ರೋತ್ರಾನುಕೂಲ್ಯವೂ, ಮತ್ತು ಪ್ರಸಂಗಾನು

ಕೂಲ್ಯವೂ ಇರುವುದೋ ಅದರಲ್ಲಿ ಸಮಗ್ರವಾದ ಆಪ್ತಿಮೂಲತ್ವವು ಸಿದ್ಧವಾಗಿರುವುದು. ಗೀತೆಯ ಉಪದೇಶಕನಾದ ಶ್ರೀಕೃಷ್ಣನು ಉತ್ತಮ ವಕ್ತೃಗುಣಗಳಿಂದ ಪೂರ್ಣನಾದವನು. ಆತನು ಸರ್ವಜ್ಞನಾದುದರಿಂದ ವಿವಕ್ಷಿತಾರ್ಥತತ್ವಜ್ಞಾನದಿಂದ ಪೂರ್ಣನು "ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ" ಇತ್ಯಾದಿ ವಾಕ್ಯಗಳಿಂದ ಈ ವಿಷಯವು ಸಿದ್ಧವಾಗುವುದು.

ತಿಳಿದ ವಿಷಯವನ್ನು ಬೋಧಿಸುವಾಗ ಅಪಟುಕರಣತ್ವದಿಂದ ಸ್ಖಲನಾದಿಗಳು ಲೋಕದಲ್ಲಿ ಸಂಭವಿಸುವುದುಂಟು. ಶ್ರೀಕೃಷ್ಣನು ಅನಂತಬಲವುಳ್ಳ ಪರಬ್ರಹ್ಮನಾದುದರಿಂದ ಆತನಲ್ಲಿ ಕರಣಪಾಟವವು ಸಮಗ್ರವಾಗಿರುವುದು. "ಅನಂತವೀರ್ಯಾಮಿತವಿಕ್ರಮಸ್ತ್ವಂ", "ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ" ಇತ್ಯಾದಿ ವಚನಗಳು ಈ ವಿಷಯದಲ್ಲಿ ಸಾಧಕವಾಗಿರುವುವು. ಅರ್ಥವಿವಕ್ಷೆಯೂ ಗೀತೆಯಲ್ಲಿ ಕಂಡುಬಂದಿರುವುದು. ಉಪದೇಶಕನಾದ ಗುರುವು ಸರ್ವಜ್ಞನಾದರೂ ಆತನು ತನ್ನಿಂದ ತಿಳಿದ ಪ್ರಮೇಯವನ್ನು ಶಿಷ್ಯನಿಗೆ ಬೋಧಿಸಬಾರದೆಂಬ ನಿಶ್ಚಯವನ್ನು ಮಾಡಿ ಮೌನವನ್ನು ಧರಿಸಿದರೆ ಗ್ರಂಥೋತ್ಪತ್ತಿಯೇ ದುರ್ಘಟವಾಗುವುದು. ದುರ್ಜನಶಿಷ್ಯರು ಒದಗಿದರೆ ಪ್ರಾಯೇಣ ಸದ್ಗುರುಗಳು ಈ ಆಚರಣೆಯನ್ನು ಅವಲಂಬಿಸುವರು. ಗೀತೆಯಲ್ಲಿ ಭಕ್ತಾಗ್ರಣಿಯಾದ ಪಾಂಡುನಂದನನು "ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ" ಎಂದು ಪ್ರಾರ್ಥನಾಪೂರ್ವಕವಾಗಿ ಪ್ರಪನ್ನನಾಗಿರುವುದರಿಂದ ಶ್ರೀಕೃಷ್ಣನು ಮುಖ್ಯ ತತ್ವವನ್ನು ಬಚ್ಚಿಡುವುದಕ್ಕೆ ಕಾರಣವಿಲ್ಲವಾದುದರಿಂದ ಶ್ರೀಕೃಷ್ಣನು ಸ್ವಾಭಿಪ್ರಾಯವನ್ನು ನಿಶ್ಶಂಕವಾಗಿ ತಿಳಿಸಿರುವನು. ಇದು (ಅರ್ಥವಿವಕ್ಷೆಯು) ಶ್ರೋತ್ರಾನುಕೂಲ್ಯನಿಬಂಧನವಾದುದು. ಶಿಷ್ಯನಾದ ಅರ್ಜುನನು ವಕ್ತೃಪ್ರೀತಿ ವಿಷಯನಾಗಿ ತತ್ವಜ್ಞಾನಕ್ಕೆ ಅಧಿಕಾರಿಯಾಗಿರುವನು.

ಅವಿಪ್ರಲಿಪ್ಸೆ (ವಂಚನಾಭಾವ)ಯೆಂಬ ಆಪ್ತಧರ್ಮವೂ ಗೀತೋಪದೇಶಕನಲ್ಲಿರುವುದು. ಉಪದೇಶಕನಾದ ಗುರುವು ಸರ್ವಜ್ಞನಾದರೂ ಪಟುಕರಣನಾದರೂ ಶಿಷ್ಯನು ಅನಧಿಕಾರಿಯಾದರೆ ದುಸ್ತತ್ವಗಳನ್ನು ತಿಳಿಸುವನು. ಚೋರನು ಧನಿಕನು ಹೋದ ಮಾರ್ಗವು ಯಾವುದೆಂದು ಪ್ರಶ್ನೆಮಾಡಿದರೆ ಸಜ್ಜನರು ತಾವು ಯಥಾರ್ಥಮಾರ್ಗವನ್ನು ತಿಳಿದಿದ್ದರೂ ವಿರುದ್ಧಮಾರ್ಗವನ್ನು ತೋರಿಸಿ

ಸುಳ್ಳು ಹೇಳುವರು. ಇದು ದೋಷವಲ್ಲ. "ಪಂಚಾನೃತಾನ್ಯಾಹುರಪಾತಕಾನಿ" ಇತ್ಯಾದಿ ಮನುವಚನಗಳಿಂದಲೂ ಇದು ಧರ್ಮವೆಂದೇ ಪ್ರಮಿತವಾಗಿರುವುದು. ಇದೇ ಕಾರಣದಿಂದ ಬೌದ್ಧಶಾಸ್ತ್ರ, ಪಾಶುಪತಶಾಸ್ತ್ರವೇ ಮುಂತಾದ ಅನೇಕ ಗ್ರಂಥಗಳು ಜ್ಞಾನಿಗಳಿಂದ ಪ್ರಣೀತವಾದರೂ ವಂಚನೋದ್ದೇಶದಿಂದ ರಚಿತವಾದವುಗಳಾಗಿರುವುದರಿಂದ ಅವುಗಳೆಲ್ಲವೂ ದುಸ್ತತ್ವವನ್ನೇ ಬೋಧಿಸುವುವು. ಶಿಷ್ಯನು ಅಧಿಕಾರಿಯಾಗಿದ್ದರೂ ನರ್ಮ, ಕ್ರೀಡಾ, ಪರಿಹಾಸಾದಿ ಸಮಯಗಳಲ್ಲಿ ಉದ್ದೇಶಪೂರ್ವಕವಾಗಿ ಗುರುವು ಜ್ಞಾನಿಯಾದರೂ ಸುಳ್ಳು ಹೇಳುವನು. ಪ್ರಕೃತದಲ್ಲಿ ಗೀತೋಪದೇಶಸಮಯವು ಕ್ರೀಡಾಕಾಲವಲ್ಲ. ಗೀತೆಗೆ ಪ್ರಸಂಗಾನುಕೂಲ್ಯವೂ ಇರುವುದು.

ಈರೀತಿಯಾಗಿ ವಕ್ತ್ರಾನುಕೂಲ್ಯ, ಶ್ರೋತ್ರಾನುಕೂಲ್ಯ ಮತ್ತು ಪ್ರಸಂಗಾನುಕೂಲ್ಯವೂ ಸಹ ಗೀತೆಯಲ್ಲಿ ಸಮೀಚೀನವಾಗಿ ಕಂಡುಬಂದಿರುವುದರಿಂದ ಶ್ರೀಕೃಷ್ಣನ ಉಪದೇಶವು ಆಪ್ತಿಮೂಲವಾದುದೆಂದು ಸರ್ವರೂ ಸಮ್ಮತಿಸಿರುವರು. ಆಪ್ತಿಗೆ ಕಾರಣವಾದ ವಿವಕ್ಷಿತಾರ್ಥತತ್ವಜ್ಞಾನ, ಪಟುಕರಣತ್ವ, ಅರ್ಥವಿವಕ್ಷಾ, ಅವಿಪ್ರಲಿಪ್ಸಾ ಎಂಬ ನಾಲ್ಕು ಧರ್ಮಗಳೂ ಇಲ್ಲಿ ಇರುವುವು.

1. ಕೃಷ್ಣನು ಸರ್ವಜ್ಞನಾದುದರಿಂದ ವಿವಕ್ಷಿತಾರ್ಥತತ್ವಜ್ಞಾನವುಳ್ಳವನು. ಲೋಕಪಾಲಕರಾದ ಸೂರ್ಯಾದಿ ದೇವತೆಗಳಿಗೂ ಜಗದ್ಗುರುಗಳಾದ ಬ್ರಹ್ಮಾದಿಗಳಿಗೂ ಗುರುವಾದುದರಿಂದಲೂ, ವೇದಾಂತಶಾಸ್ತ್ರವನ್ನು ರಚಿಸಿದವನಾದುದರಿಂದಲೂ, ಪರಾಪರ ನಿಖಿಲಜಗತ್ತಿಗೂ ಸೃಷ್ಟ್ಯಾದಿಗಳನ್ನು ಮಾಡುವ ಪರಬ್ರಹ್ಮನಾದುದರಿಂದಲೂ ಶ್ರೀಕೃಷ್ಣನು ಪೂರ್ಣವಾದ ತತ್ವಜ್ಞಾನವುಳ್ಳವನೆಂದು ಸಿದ್ಧವಾಗುವುದು.

2. ಸೃಷ್ಟ್ಯಾದಿಕರ್ತನಾದ ಪರಬ್ರಹ್ಮನಿಗೆ ಇಂದ್ರಿಯಸಾಮರ್ಥ್ಯವು ಇರುವುದೆಂದು ಬೇರೇ ಹೇಳಬೇಕಾದುದಿಲ್ಲ.

3. ಅರ್ಥವಿವಕ್ಷೆಯೂ ಗೀತೆಯಲ್ಲಿರುವುದೆಂದು ಅರ್ಜುನನ ಗುಣಗಳನ್ನು ಪರ್ಯಾಲೋಚಿಸಿದರೆ ವಿದಿತವಾಗುವುದು. "ವಕ್ಷ್ಯಾಮಿ ತೇ ಹಿತಂ" ಎಂದು ಪುನಃ ಪುನಃ ಶ್ರೀಕೃಷ್ಣನು ಪ್ರತಿಜ್ಞೆಮಾಡಿರುವುದರಿಂದಲೂ ಇದು ಸಿದ್ಧವಾಗುವುದು.

4. ಗೀತೆಯು ಪಂಚಮೋಪದೇಶವಲ್ಲವೆಂಬುದು ಸರ್ವಸಮ್ಮತವಾದ ಅಭಿಪ್ರಾಯವು. "ಅಧ್ಯಾತ್ಮಸಂಮೂಢಚೇತಾಃ" ಎಂದು ಅರ್ಜುನನು ಹೇಳಿರುವಂತೆ ತತ್ವವಿಷಯದಲ್ಲಿ ಪ್ರಾಪ್ತವಾದ ಸಂದೇಹವನ್ನು ಪರಿಹಾರಮಾಡುವ ಉದ್ದೇಶದಿಂದಲೇ ಪ್ರವೃತ್ತವಾದುದರಿಂದಲೂ, ಅಧಿಕಾರಿಯೂ ಶ್ರೀಕೃಷ್ಣನ ಪರಮಪ್ರೀತಿಗೆ ವಿಷಯನಾದುದರಿಂದಲೂ, ಪರಮಗೋಪ್ಯವಾದ ಉಪನಿಷದ್ರಹಸ್ಯಗಳೇ ಇದರಲ್ಲಿ ಅಡಗಿರುವುವು. **"ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ"** ಎಂಬ ಶ್ರೀಕೃಷ್ಣನ ಉಕ್ತಿಯೇ ಅರ್ಜುನನ ಯೋಗ್ಯತೆಯನ್ನೂ ಶ್ರೀಕೃಷ್ಣನಿಗೆ ಅವನಲ್ಲಿದ್ದ ಪ್ರೀತ್ಯತಿಶಯವನ್ನೂ ವ್ಯಕ್ತಿಗೊಳಿಸುತ್ತದೆ. ಆದುರಿಂದಲೇ **"ಬ್ರಹ್ಮವಿದ್ಯಾಯಾಂ ........ಶ್ರೀಕೃಷ್ಣಾರ್ಜುನಸಂವಾದೇ"** ಎಂಬಲ್ಲಿ ಕೃಷ್ಣಾರ್ಜುನ ಸಂವಾದವು ಪರಮತತ್ವವನ್ನು ಬೋಧಿಸುವ ಬ್ರಹ್ಮವಿದ್ಯೆಯೆಂದು ಉಲ್ಲಖಿಸಲ್ಪಟ್ಟಿರುವುದು.

2. ಶ್ರುತಿಸಂವಾದರೂಪವಾಗಿರುವುದರಿಂದಲೂ ಗೀತೆಯು ಅತ್ಯಂತ ಪ್ರಾಮಾಣಿಕ ಗ್ರಂಥವೆಂದು ನಿರ್ಧರಿಸಬಹುದು. **"ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ"** ಎಂಬ ಛಾಂದೋಗ್ಯಶ್ರುತಿಯು, ಭಾರತರೂಪವಾದ ಇತಿಹಾಸವು ವೇದತುಲ್ಯವೆಂದು ಬೋಧಿಸಿರುವುದು. ಗೀತೆಯು ಸುವರ್ಣನಿರ್ಮಿತಆಸನದಂತಿರುವ ಇಂಥ ಭಾರತದ ಮಧ್ಯಭಾಗದಲ್ಲಿ ವಜ್ರದಂತೆ ವಿರಾಜಿಸುತ್ತಿರುವುದು. ಇಷ್ಟೇ ಅಲ್ಲ. ಗೀತೆಯು ವೇದಕ್ಕೆ ಸಂವಾದರೂಪವಾಗಿಯೂ ಇರುವುದು; ಎಂದರೆ ವೇದದಲ್ಲಿ ಪ್ರತಿಪಾದಿತವಾಗಿರುವ ಪ್ರಮೇಯುಗಳೇ ವಿಶದವಾಗಿ ಗೀತೆಯಲ್ಲಿ ಪ್ರತಿಪಾದಿಸಲ್ಪಟ್ಟಿರುವುವು. ಗೀತೆಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ವಿಷ್ಣುಸರ್ವೋತ್ತಮತ್ವವು **"ಅಗ್ನಿರ್ವೈ ದೇವಾನಾಮವಮಃ ವಿಷ್ಣುಃ ಪರಮಃ"** ಮುಂತಾದ ಶ್ರುತಿಗಳಲ್ಲಿ ನಿರೂಪಿಸಲ್ಪಟ್ಟಿರುವುದು. ಜಗತ್ಸತ್ಯತ್ವವು **"ವಿಶ್ವಂ ಸತ್ಯಂ"** ಮುಂತಾದ ಶ್ರುತಿಗಳಲ್ಲಿ ನಿರೂಪಿಸಲ್ಪಟ್ಟಿರುವುದು. **'ದ್ವಾಸುಪರ್ಣಾ'** ಮುಂತಾದ ಶ್ರುತಿಗಳಲ್ಲಿ ಗೀತೋಕ್ತವಾದ ಜೀವಬ್ರಹ್ಮರ ಭೇದವೂ, **"ಸರ್ವಂ ತದಿಂದ್ರ ತೇ ವಶೇ"** ಮುಂತಾದ ಶ್ರುತಿಗಳಲ್ಲಿ ಸರ್ವಜಗತ್ತಿಗೂ ಹರಿವಶತ್ವವೂ ಪ್ರತಿಪಾದಿಸಲ್ಪಟ್ಟಿರುವುವು. ಗೀತೆಯಲ್ಲಿ ಸಮರ್ಥಿಸಲ್ಪಟ್ಟಿರುವ ಜೀವತ್ರೈವಿಧ್ಯವು **"ಶೃಣ್ವೇ ವೀರಮುಗ್ರಂ"**

ಮುಂತಾದ ಶ್ರುತಿಗಳಲ್ಲಿಯೂ, ತಾರತಮ್ಯವು **ಅಗ್ನಿರ್ವೈ ದೇವಾನಾಮವಮಃ** ಮುಂತಾದ ಶ್ರುತಿಗಳಲ್ಲಿಯೂ ನಿರೂಪಿಸಲ್ಪಟ್ಟಿರುವುವು. **"ಮಮ ಸಾಧರ್ಮ್ಯ ಮಾಗತಾಃ"** ಮುಂತಾದ ಗೀತಾಶ್ಲೋಕಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಮುಕ್ತಿ ಸ್ವರೂಪವು ವೇದದಲ್ಲಿ **"ನಿರಂಜನಃ ಪರಮಂ ಸಾಮ್ಯಮುಪೈತಿ"** ಮುಂತಾದ ಶ್ರುತಿಗಳಲ್ಲಿ ನಿರೂಪಿಸಲ್ಪಟ್ಟಿರುವುದು. **"ಯಮೇವೈಷ ವೃಣುತೇ" "ನಾನ್ಯಃ ಪಂಥಾ ಅಯನಾಯ ವಿದ್ಯತೇ", "ಆತ್ಮಾ ವಾ ಅರೇ ದ್ರಷ್ಟವ್ಯಃ" "ಕರ್ಮಣಾ ಜ್ಞಾನಮಾತನೋತಿ"** ಮುಂತಾದ ಶ್ರುತಿಗಳಲ್ಲಿ ಮೋಕ್ಷ ಸಾಧನನಿರೂಪಣವೂ ಮಾಡಲ್ಪಟ್ಟಿರುವುದು. ಇನ್ನೂ ವಿಚಾರಮಾಡಿದರೆ ಗೀತೆಯು ವೇದಕ್ಕೆ ವ್ಯಾಖ್ಯಾನರೂಪವಾಗಿರುವುದು. ಶ್ರೀಕೃಷ್ಣನು ಅಲ್ಲಿ ಅಲ್ಲಿ ತತ್ವಗಳನ್ನು ನಿರೂಪಣೆಮಾಡಿ ತಾನು ಹೇಳಿರುವ ಪ್ರಮೇಯಗಳು ವೇದ ದಲ್ಲಿ ಉಕ್ತವಾದುವುಗಳೆಂದು ತೋರಿಸುವುದಕ್ಕಾಗಿ, **"ಪರಮಾತ್ಮೇತ್ಯುದಾ ಹೃತಃ" "ನ ಜಾಯತೇ ಮ್ರಿಯತೇ ವಾ"** ಇತ್ಯಾದಿ ಸ್ಥಳಗಳಲ್ಲಿ ಶ್ರುತಿಗಳನ್ನು ಪ್ರತೀಕದಿಂದ ಗ್ರಹಣಮಾಡಿ ವ್ಯಾಖ್ಯಾನವನ್ನು ಮಾಡಿರುವನು. ಈ ರೀತಿ ಯಾಗಿ ನಿರ್ದುಷ್ಟವಾದ ವೇದದಿಂದ ಪ್ರತಿಪಾದ್ಯವಾದ ತತ್ವವೂ ಗೀತಾಪ್ರತಿಪಾ ದ್ಯವಾದ ತತ್ವವೂ ಒಂದೇ ಆಗಿರುವುದರಿಂದಲೂ ಭಗವದ್ಗೀತೆಯು ಅತ್ಯಂತ ಪ್ರಾಮಾಣಿಕವಾದ ಮೋಕ್ಷಶಾಸ್ತ್ರವೆಂದು ಸಿದ್ಧವಾಗುವುದು.

**3.** ಇದೇ ಪ್ರಕಾರವಾಗಿ ಉತ್ತಮ ಯುಕ್ತ್ಯುಪಬೃಂಹಿತವಾಗಿರು ವುದರಿಂದ ಗೀತೋಕ್ತ ತತ್ವವು ಅತ್ಯಂತ ಪ್ರಾಮಾಣಿಕವೆಂದು ಸಿದ್ಧವಾಗುವುದು. ಅದು ಹೇಗೆಂದರೆ ಯುಕ್ತಿಶಾಸ್ತ್ರವೆಂದು ಪ್ರಸಿದ್ಧವಾದ ಬ್ರಹ್ಮಸೂತ್ರಗಳಲ್ಲಿ ಪ್ರತಿಪಾದಿತವಾದ ತತ್ವಗಳೇ ಗೀತೆಯಲ್ಲಿ ಪ್ರತಿಪಾದಿತವಾಗಿರುವುವು. ಮತ್ತು ಶ್ರೀಕೃಷ್ಣನು ತಾನು ತತ್ವಗಳನ್ನಾಗಿ ನಿರೂಪಿಸುವಾಗ ಅಲ್ಲಿ ಅಲ್ಲಿ ಅವುಗಳನ್ನು ಅಂಗೀಕರಿಸುವುದಕ್ಕೆ ಸಹಾಯಕವಾಗುವ ಕಾರಣಗಳನ್ನೂ ನಿರೂಪಿಸಿರುತ್ತಾನೆ.

**4.** ಈ ಪ್ರಕಾರವಾಗಿ ತ್ರಿವಿಧಪರಾಮರ್ಶೆಯಿಂದಲೂ ಗೀತೆಯು ಅತ್ಯಂತ ಪ್ರಾಮಾಣಿಕ ಗ್ರಂಥವೆಂದು ನಿಶ್ಚಿತವಾಗುವುದು. ಆದರೆ ಪ್ರಾಮಾ ಣಿಕ ಗ್ರಂಥಗಳೆಲ್ಲಾ ಅಭ್ಯಾಸಾರ್ಹವಲ್ಲ. ಲಂಡನ್ ಪಟ್ಟಣದ ಚರಿತ್ರೆಯೂ, ನ್ಯೂಸ್‌ಪೇಪರ್ ವೃತ್ತಾಂತಗಳೂ ಪ್ರಾಮಾಣಿಕವಾದರೂ ಮುಮುಕ್ಷುಗಳು

ಅವುಗಳನ್ನು ಆದರಮಾಡಲಾರರು. ಪರಂತು ಲೌಕಿಕ ಹರಟೆಗಳನ್ನು ದೂರೀಕರಿಸಿ ಉತ್ತಮ ಗ್ರಂಥಗಳನ್ನು ಅಭ್ಯಾಸಮಾಡುವರು. ಆದುದರಿಂದ ಗ್ರಂಥವು ಪ್ರಾಮಾಣಿಕವಾದರೂ ಉತ್ತಮವಾದ ವಿಷಯ, ಪ್ರಯೋಜನ, ಅಧಿಕಾರಿ ಮತ್ತು ಇವುಗಳಿಗೆ ಪರಸ್ಪರ ಸಂಬಂಧಗಳೆಂಬ ಅನುಬಂಧ ಚತುಷ್ಟಯವು ಇದ್ದರೆ ಅದು ಶ್ರದ್ಧಾಪೂರ್ವಕವಾದ ಅನುಷ್ಠಾನಕ್ಕೆ ವಿಷಯವಾಗುವುದು. ಪ್ರಕೃತದಲ್ಲಿ ಭಗವದ್ಗೀತೆಯು ತನ್ನಲ್ಲಿರುವ ವಿಷಯಪ್ರಯೋಜನಾದಿಗಳ ಮಹತ್ವದಿಂದಲೇ ಸರ್ವೋತ್ತಮ ಗ್ರಂಥವೆಂದು ಪ್ರಸಿದ್ಧವಾಗಿ ವಿರಾಜಿಸುತ್ತಿರುವುದು. ನಿಖಿಲ ವೇದಪ್ರತಿಪಾದ್ಯನೂ ಬ್ರಹ್ಮಾಂಡನಾಯಕನೂ ಆದ ಶ್ರೀಪದ್ಮನಾಭನೂ ಅವನ ಅನಂತಾನಂತ ವಿಭೂತಿಗಳೂ ಗೀತಾಪ್ರತಿಪಾದ್ಯವಾದ ವಿಷಯಗಳು. ಅಷ್ಟಾದಶ ಅಧ್ಯಾಯಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಪರಮಾತ್ಮನ ಒಂದೊಂದು ಅವಯವವೆಂದು ತಿಳಿಯಬಹುದು. ಪರಮಾತ್ಮನೂ ಅವನ ಮಹಿಮೆಗಳೂ ಮುಖ್ಯ ವಿಷಯರೂಪವಾಗಿರುವುವು. ಅಂಥ ಬ್ರಹ್ಮಸ್ವರೂಪಜ್ಞಾನವನ್ನು ಹೊಂದುವ ಕ್ರಮವು ಎಂದರೆ ಮೋಕ್ಷಸಾಧನೋಪಾಯಾನುಷ್ಠಾನಗಳು ಅಮುಖ್ಯ ವಿಷಯಗಳೆನ್ನಿಸುವುವು. ಸರ್ವೋತ್ತಮನಾದ ಪರಬ್ರಹ್ಮನನ್ನೇ ವಿಷಯವನ್ನಾಗಿ ಒಳಗೊಂಡ ಗ್ರಂಥವು ಸರ್ವೋತ್ತಮವಿಷಯೋಪೇತವಾದುದೆಂದು ತಿಳಿಸಬೇಕಾದುದೇನು ? ಗೀತಾಗ್ರಂಥದ ಬಿರುದುಗಳೇ ಅದರಲ್ಲಿರುವ ವಿಷಯಗಳನ್ನು ಉದ್ಘೋಷಿಸುವುವು. **"ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ"** ಎಂಬಲ್ಲಿ ಬ್ರಹ್ಮವಿದ್ಯಾಯಾಂ ಎಂಬ ವಿಶೇಷಣದಿಂದ ಗೀತೆಯಲ್ಲಿ ಪರಬ್ರಹ್ಮಸ್ವರೂಪವು ವಿಷಯವೆಂದೂ, ಯೋಗಶಾಸ್ತ್ರೇ ಎಂಬ ವಿಶೇಷಣದಿಂದ ಮೋಕ್ಷಸಾಧನಾನುಷ್ಠಾನವು ವಿಷಯವೆಂದೂ ಸಿದ್ಧವಾಗುವುದು. ಶ್ರೀಕೃಷ್ಣನೂ ಸಹ ಸಪ್ತಮ ನವಮಾಧ್ಯಾಯಗಳಲ್ಲಿ ಭಗವನ್ಮಹಿಮೆಗಳನ್ನು ಉಪದೇಶಮಾಡುತ್ತೇನೆಂದು ಸ್ಪಷ್ಟವಾಗಿ ಪ್ರತಿಜ್ಞೆಯನ್ನು ಮಾಡಿರುತ್ತಾನೆ.

**5.** ಭಗವದ್ಗೀತೆಯ ಉತ್ತಮತ್ವವು ಅದರ ಅಭ್ಯಾಸದಿಂದ ಪ್ರಾಪ್ತವಾಗುವ ಪ್ರಯೋಜನವಿಮರ್ಶೆಯಿಂದಲೂ ವಿದಿತವಾಗುವುದು. ''ಕೃಷ್ಣಗೀತಾ ಚ ತಜ್ಜ್ಞಾನಾನ್ಮುಚ್ಯತೇಽಂಜಸಾ'' ಎಂಬ ಶ್ರೀಮದಾಚಾರ್ಯರಿಂದ ಉದಾ

ಹೃತವಾದ ಪ್ರಮಾಣವಚನದಿಂದ ಭಗವದ್ಗೀತೆಯು ಮೋಕ್ಷದಾಯಕವಾದ ಶಾಸ್ತ್ರವೆಂದು ನಿಶ್ಚಿತವಾಗುವುದು. ಪದ್ಮಪುರಾಣದಲ್ಲಿಯೂ ವರಾಹ ಪುರಾಣ ದಲ್ಲಿಯೂ ಗೀತೆಯ ಒಂದೊಂದು ಅಕ್ಷರದ ಪಾಠಮಾತ್ರಕ್ಕೂ ಮಹತ್ಪ್ರಯೋಜನವು ನಿರೂಪಿಸಲ್ಪಟ್ಟಿರುವುದು. ಇನ್ನು ಅದರಿಂದ ಪ್ರತಿಪಾದಿತವಾದ ಅರ್ಥ ಮನನದಿಂದ ಆಗುವ ಪ್ರಯೋಜನವನ್ನು ಸ್ವಯಂ ಗೀತಾಪ್ರತಿಪಾದ್ಯನಾದ ಶ್ರೀಕೃಷ್ಣನು ಹೇಳಲು ಸಮರ್ಥನೇ ಹೊರತು ಇತರರಿಗೆ ಶಕ್ಯವಲ್ಲ. ಶ್ರೀ ಕೃಷ್ಣನು ಗೀತಾಜ್ಞಾನವನ್ನು ಹೊಂದಿ ಅದರಂತೆ ಅನುಷ್ಠಾನಮಾಡುವವರಿಂದ ಲಭ್ಯವಾಗುವ ಫಲವನ್ನು ಹೇಳಿಯೂ ಇರುತ್ತಾನೆ :—

**(1) ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ ।**
**ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥**

—(15. 20.)

"ಎಲೈ ಪಾಪರಹಿತನಾದ ಅರ್ಜುನನೇ! ನನ್ನ ಜಗದ್ವೃಕ್ಷ ಮೂಲತ್ವ, ಸರ್ವಾಂತರ್ಯಾಮಿತ್ವ, ಪುರುಷೋತ್ತಮತ್ವಾದಿ ಅತಿಗೋಪ್ಯವಾದ ರಹಸ್ಯ ಗಳು ನನ್ನಿಂದ ನಿನಗೆ ನಿರೂಪಿಸಲ್ಪಟ್ಟವು. ಇದನ್ನು ತಿಳಿದವನು (ತಿಳಿದು ಅನು ಷ್ಠಾನಮಾಡುವವನು) ಅಪರೋಕ್ಷಜ್ಞಾನಿಯಾಗುತ್ತಾನೆ."

ಇದರಿಂದ ಭಗವದ್ಗೀತೆಗೆ ಮುಕ್ತಿಯು ಮುಖ್ಯಪ್ರಯೋಜನವೆಂದೂ, ಅಪರೋಕ್ಷಜ್ಞಾನವು ಅಮುಖ್ಯಪ್ರಯೋಜನವೆಂದೂ ಸಿದ್ಧವಾಗುವುದು.

ಮಧ್ಯೇ ಮಧ್ಯೇ ಶ್ರೀಕೃಷ್ಣನು ತತ್ವವನ್ನು ಉಪದೇಶಮಾಡಿ ಅವುಗಳ ಅನುಷ್ಠಾನದಿಂದ ಪ್ರಾಪ್ತವಾಗುವ ಫಲವನ್ನು ನಿರೂಪಿಸಿರುತ್ತಾನೆ. ಶ್ರೀಕೃಷ್ಣ ನು ಹೇಳುತ್ತಾನೆ :—

**(2) ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।**
**ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥**

—(13. 18.)

"ಎಲೈ ಪಾರ್ಥನೇ! ಈರೀತಿಯಾಗಿ ನನ್ನಿಂದ ಸಂಕ್ಷೇಪವಾಗಿ ಕ್ಷೇತ್ರ ಸ್ವರೂಪ, ಜ್ಞಾನಸಾಧನ ಮತ್ತು ಜ್ಞೇಯವಾದ ಭಗವನ್ಮಹಿಮೆ ಮುಂತಾದ ವಿಷಯಗಳ ಉಪದೇಶವು ಮಾಡಲ್ಪಟ್ಟಿತು. ಇದನ್ನು ತಿಳಿದು ನನ್ನ

ಭಕ್ತನಾದವನು ನನ್ನಲ್ಲಿ ಸಾರೂಪ್ಯ ಮುಕ್ತಿಯನ್ನು ಹೊಂದುವುದಕ್ಕೆ ಅರ್ಹನಾಗುತ್ತಾನೆ.''

(3) **ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ ।**
—(13. 13.)

''ಎಲೈ ಪಾರ್ಥನೇ! ನಾನು ನಿನಗೆ ಯಾವ ಜ್ಞೇಯವಾದ ಭಗವತ್ಸ್ವರೂಪವನ್ನು ತಿಳಿಯುವುದರಿಂದ ಅಧಿಕಾರಿಯು ಮುಕ್ತನಾಗುತ್ತಾನೆಯೋ ಅಂಥಾ ಉಪದೇಶವನ್ನು ಮಾಡುತ್ತೇನೆ.''

ಇದರಿಂದ ಗೀತೋಕ್ತವಾದ ಭಗವತ್ಸ್ವರೂಪ ಧ್ಯಾನದಿಂದ ಮುಕ್ತಿಯಾಗುವುದೆಂದು ಸಿದ್ಧವಾಗುವುದು.

ಇನ್ನೂ ಕೆಲವು ಶ್ಲೋಕಗಳ ಪರಾಮರ್ಶೆಯಿಂದ ಯಥಾರ್ಥ ತತ್ವಜ್ಞಾನ ದ್ವಾರಾ ವೈರಾಗ್ಯಜ್ಞಾನಭಕ್ತಿಗಳು ಮತ್ತು ಪಾಪನಾಶಾದಿಗಳು ಭಗವದ್ಗೀತೆಗೆ ಅವಾಂತರ ಪ್ರಯೋಜನಗಳೆಂದು ಸಿದ್ಧವಾಗುವುದು. ಶ್ರೀಕೃಷ್ಣನು ಹೇಳುತ್ತಾನೆ :—

(4) **ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।**
**ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥**
—(9. 1.)

''ಎಲೈ ಪಾರ್ಥನೇ ! ಯಾವುದನ್ನು ತಿಳಿಯುವುದರಿಂದ ಅಮಂಗಳವಾದ ಸಂಸಾರದ ದೆಸೆಯಿಂದ ಮುಕ್ತನಾಗುತ್ತೀಯೋ ಅಂಥಾ ಅತಿಗೋಪ್ಯವಾದ ವಿಜ್ಞಾನದಿಂದ ಸಹಿತವಾದ ಜ್ಞಾನವನ್ನು ಅಸೂಯಾರಹಿತನಾದ ನಿನಗೋಸ್ಕರ ನಾನು ಉಪದೇಶಮಾಡುತ್ತೇನೆ.''

(5) **ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।**
**ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥**
—(7. 2.)

''ಎಲೈ ಅರ್ಜುನನೇ ! ಯಾವ ನನ್ನ ಉಪದೇಶವನ್ನು ತಿಳಿದ ಬಳಿಕ ಪುನಃ ಜ್ಞಾತವ್ಯವಾದ ಪ್ರಮೇಯವು ಒಂದೂ ಉಳಿಯುವುದಿಲ್ಲವೋ ಅಂಥಾ (ಸರ್ವಜ್ಞತೆಯನ್ನುಂಟುಮಾಡುವ) ವಿಜ್ಞಾನದಿಂದ ಸಹಿತವಾದ ಜ್ಞಾನವನ್ನು ನಿನಗೆ ಉಪದೇಶಮಾಡುತ್ತೇನೆ.''

(6) ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥
—(10. 7.)

"ನನ್ನ (ಶ್ರೀಕೃಷ್ಣನ) ವಿಭೂತಿರೂಪಗಳನ್ನೂ ಸಾಮರ್ಥ್ಯವನ್ನೂ ಯಥಾರ್ಥವಾಗಿ ತಿಳಿದವನು ನಿಶ್ಚಲವಾದ ಧ್ಯಾನರೂಪವಾದ ಉಪಾಯದಿಂದ ಸಹಿತನಾಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ."

(7) ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ ॥
—(3. 31.)

"ಎಲೈ ಧನಂಜಯನೇ! ಯಾವ ಮನುಷ್ಯರು ಶ್ರದ್ಧಾವಂತರಾಗಿ ಮತ್ತು ಅಸೂಯಾರಹಿತರಾಗಿ ನನ್ನಿಂದ ಉಪದಿಷ್ಟವಾದ ನಿಷ್ಕಾಮಕರ್ಮವನ್ನು ಅನುಷ್ಠಾನಮಾಡುತ್ತಾರೆಯೋ ಅವರು ಕರ್ಮಬಂಧದಿಂದ ಮುಕ್ತರಾಗುತ್ತಾರೆ."

(8) ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥
—(2. 39.)

"ಎಲೈ ಪಾರ್ಥನೆ! ನನ್ನಿಂದ ಮುಂದೆ ಉಪದೇಶಮಾಡಲ್ಪಡುವ ಜ್ಞಾನಸಾಧನೋಪಾಯವನ್ನು ಕೇಳು. ಅದನ್ನು ಅನುಷ್ಠಾನಮಾಡುವುದರಿಂದ ನೀನು ಕರ್ಮಬಂಧವನ್ನು ದಾಟುತ್ತೀಯೆ."

ಗೀತೆಯ ಉಪದೇಶಕ್ಕೂ, ಅಧ್ಯಯನಕ್ಕೂ ಶ್ರವಣಗಳಿಗೂ ಸಹ ಶ್ರೀಕೃಷ್ಣನು ಫಲವನ್ನು ಹೇಳಿರುತ್ತಾನೆ:—

(9) ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿದಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಂ ॥
ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ ॥
ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಮಿಷ್ಟಸ್ಸ್ಯಾಮಿತಿ ಮೇ ಮತಿಃ ॥

(10) ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ।
ಸೋಽಪಿ ಮುಕ್ತಶ್ಶುಭಾಁ ಲೋಕಾಁ ಪ್ರಾಪ್ನುಯಾತ್ಪುಣ್ಯ
ಕರ್ಮಣಾಂ ॥
—(18. 68-71.)

"ಅತಿಗೋಪ್ಯವಾದ ಈ ಗೀತಾಶಾಸ್ತ್ರವನ್ನು ಯಾವಾತನು ನನ್ನ ಭಕ್ತರಿಗೆ ಉಪದೇಶ ಮಾಡುತ್ತಾನೆಯೋ ಆತನು ನನ್ನಲ್ಲಿ ಉತ್ತಮವಾದ ಭಕ್ತಿಯನ್ನು ಮಾಡಿ ನಿಸ್ಸಂಶಯವಾಗಿ ನನ್ನನ್ನೇ ಹೊಂದುತ್ತಾನೆ. ಗೀತೋಪದೇಶವನ್ನು ಮಾಡುವವನಿಗಿಂತಲೂ ನನಗೆ ಇಷ್ಟವಾದ ಕಾರ್ಯವನ್ನು ಮಾಡಿದವರಲ್ಲಿ ಶ್ರೇಷ್ಠನು ಇಲ್ಲವು. ಆತನಿಗಿಂತ ಬೇರೊಬ್ಬನು ನನಗೆ ಅಧಿಕ ಪ್ರೀತಿವಿಷಯನು ಈ ಭೂಲೋಕದಲ್ಲಿ ಹಿಂದೆ ಇರಲಿಲ್ಲ, ಮುಂದೆ ಇರುವುದಿಲ್ಲ. ಜಗದ್ಧಾರಕನಾದುದರಿಂದ ಧರ್ಮನಾಮಕನಾದ ಪರಮಾತ್ಮನ ವಿಷಯಕವಾದ ಈ ನಮ್ಮ ಸಂವಾದವನ್ನು (ಕೃಷ್ಣಾರ್ಜುನರ ಸಂವಾದರೂಪವಾದ ಗೀತೆಯನ್ನು) ಯಾರು ಪಠನೆ ಮಾಡುತ್ತಾರೆಯೋ ನಾನು ಆತನಿಂದ ಜ್ಞಾನಯಜ್ಞದಿಂದ ಪೂಜಿಸಲ್ಪಟ್ಟಂತಾಯಿತೆಂದು ನನ್ನ ನಿಶ್ಚಯವು."

ಶ್ರದ್ಧಾವಂತನಾದ ಮತ್ತು ಅಸೂಯಾರಹಿತನಾದ ಯಾವ ಮನುಷ್ಯನು ಈ ಗೀತಾಶಾಸ್ತ್ರವನ್ನು ಶ್ರವಣಮಾಡುವನೋ ಆತನೂ ಕೂಡ ಬಂಧರಹಿತನಾಗಿ ಪುಣ್ಯಕರ್ಮಗಳಿಂದ ಹೊಂದಲ್ಪಡುವ ಉತ್ತಮ ಲೋಕವನ್ನು ಹೊಂದುತ್ತಾನೆ.

**6**. ಗೀತಾಶಾಸ್ತ್ರಕ್ಕೆ ಅಧಿಕಾರಿಯನ್ನೂ ಶ್ರೀಕೃಷ್ಣನು ಹೇಳಿರುವನು.

**ಪ್ರಶ್ನೆ**—ಸ್ವಾಮಿ ! "ಅಧಿಕಾರಿ" ಎಂದರೇನು.

**ಉತ್ತರ—ಶ್ರೀಶ್ರೀಗಳವರು:**—ಗಹನವಾದ ಪರಿಷ್ಕಾರವು ಈ ವಿಷಯದಲ್ಲಿ ಪ್ರವೃತ್ತವಾಗಿರುವುದು. ಮುಖ್ಯ ತಾತ್ಪರ್ಯವನ್ನು ಹೇಳುತ್ತೇವೆ. ಯಾವಾತನು ಯಾವ ಕರ್ಮವನ್ನು ಅನುಷ್ಠಾನಮಾಡುವುದರಿಂದ ಆ ಕರ್ಮಕ್ಕೆ ಉಕ್ತವಾಗಿರುವ ಫಲವನ್ನು ಹೊಂದುವನೋ, ಆ ಕರ್ಮಕ್ಕೆ ಆತನು ಅಧಿಕಾರಿಯು. ಲೋಕದಲ್ಲಿಯೂ ಇದು ಪ್ರಸಿದ್ಧವಾಗಿರುವುದು. ಸರ್ಕಾರದಿಂದ ನಿಯಮಿಸಲ್ಪಟ್ಟ ನ್ಯಾಯಾಧಿಪತಿಯು ತೀರ್ಮಾನವನ್ನು ಬರೆದರೆ, ಆ ತೀರ್ಮಾನ

ದಂತೆ ಅಪರಾಧಿಯನ್ನು ಗಲ್ಲಿಗೆ ಬೇಕಾದರೂ ಹಾಕಿಬಿಡುವರು. ಇತರರು ಅದೇ ವಾಕ್ಯವನ್ನು ಬರೆದರೆ ಹಾಸ್ಯಾಸ್ಪದರಾಗುವರು ಅಥವಾ ಶಿಕ್ಷಿಸಲ್ಪಡುವರು. ಹೀಗೆಯೇ ಅಧಿಕಾರಿಗೆ ಫಲವು ಬರುವುದು. ಅನಧಿಕಾರಿಗೆ ಫಲಾಭಾವವೂ ವಿರುದ್ಧಫಲವೂ ಬರುವುದೆಂದು ಶಾಸ್ತ್ರ ವಿಷಯದಲ್ಲಿಯೂ ನಿಶ್ಚಯವಿರುವುದು. ಉಪನೀತನಾದ ಬ್ರಾಹ್ಮಣನು ಗಾಯತ್ರಿಯನ್ನು ಉಚ್ಚರಿಸಿದರೆ ವೇದೋಕ್ತ ಫಲವು ಬರುವುದು. ಇತರರು ಉಚ್ಚರಿಸಿದರೆ ನರಕಕ್ಕೆ ಬೀಳುವರು. ಗೀತಾ ತತ್ತ್ವೋಪದೇಶಕ್ಕೆ ಬ್ರಾಹ್ಮಣನಾಗಿದ್ದರೆ ಮಾತ್ರವೇ ಸಾಲದು. ವೈರಾಗ್ಯ ಹರಿಭಕ್ತ್ಯಾದಿ ಗುಣಗಳೂ ಇರಬೇಕು. ಅನಧಿಕಾರಿಯಿಂದ ಗ್ರಹಿಸಲ್ಪಟ್ಟ ತತ್ತ್ವವು ಶ್ರೀಕೃಷ್ಣನ ಪ್ರೀತಿಗೆ ಕಾರಣವಾಗಲಾರದು. ಶ್ರೀಕೃಷ್ಣನು ಹೇಳುತ್ತಾನೆ :—

(1) **ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।**
**ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥**
—(18. 67.)

"ಎಲೈ ಅರ್ಜುನನೇ! ಈ ಗೀತಾಶಾಸ್ತ್ರವು ವೈರಾಗ್ಯಾದಿ ಗುಣಯುಕ್ತವಾದ ತಪಸ್ಸಿನಿಂದ ರಹಿತನಾದವನಿಗೂ, ವಿಷ್ಣುಭಕ್ತಿರಹಿತನಾದವನಿಗೂ, ಹರಿಗುರುಗಳ ಸೇವೆಯನ್ನು ಮಾಡದಿರುವವನಿಗೂ, ಮತ್ತು (ಕಷ್ಟಕರವಾದ ಉಪದೇಶವೆಂದು) ನನ್ನಲ್ಲಿ ದೋಷವನ್ನು ಆರೋಪಿಸುವವರಿಗೂ ಯಾವಾಗಲೂ ಹೇಳಲ್ಪಡಕೂಡದು."

ಈ ವಿಧಾನದಿಂದ ವೈರಾಗ್ಯ ಹರಿಭಕ್ತಿ ಗುರುಸೇವಾದಿಗಳಿಂದ ಯುಕ್ತರಾದ, ಅಸೂಯಾರಹಿತರಾದ, ಶ್ರದ್ಧಾಳುಗಳಾದ ದ್ವಿಜರು ಗೀತೋಪದೇಶವನ್ನು ಹೊಂದುವದಕ್ಕೆ ಅಧಿಕಾರಿಗಳು ಎಂದು ನಿಶ್ಚಿತವಾಗುವುದು. ಈ ಗುಣಗಳಿಂದ ರಹಿತರಾದವರ ಗೀತಾಭ್ಯಾಸವು ರುದ್ರಭೂಮಿಯ ರೋದನದಂತೆ ನಿರರ್ಥಕವೆಂದು ಶಾಸ್ತ್ರಸಮ್ಮತವಾದ ನಿಶ್ಚಯವು.*

---

* **ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ॥** ಎಂಬಲ್ಲಿ ಮತ್ತು **"ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿದಾಸ್ಯತಿ"** ಎಂಬಲ್ಲಿ ಗೀತಾಶ್ರವಣಾಧಿಕಾರವನ್ನೂ; **"ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ । ಶ್ರದ್ಧಾವಂತೋಽನಸೂಯಂತೋ ...."** ಇತ್ಯಾದಿಗಳಲ್ಲಿ ಮತ್ತು **ಯೇ ತ್ವೇ**

**7.** ಈರೀತಿಯಾಗಿ ಗೀತಾವಾಕ್ಯಗಳಿಂದಲೇ ಅದರ ವಿಷಯ ಪ್ರಯೋಜನಾಧಿಕಾರಿಗಳು ಪ್ರದರ್ಶಿಸಲ್ಪಟ್ಟವು. ಇವುಗಳಿಗೆ ಪರಸ್ಪರ ಸಂಬಂಧವು ಸಾಮಾನ್ಯರಿಂದಲೂ ಊಹ್ಯವಾಗಿದೆ. ಅಧಿಕಾರಿಗೂ ವಿಷಯುವಾದ ಬ್ರಹ್ಮನಿಗೂ ಜ್ಞಾತೃಜ್ಞೇಯಉಭಾವವೆಂಬ ಸಂಬಂಧವು; ಮೋಕ್ಷವೆಂಬ ಪ್ರಯೋಜನಕ್ಕೂ ಅಧಿಕಾರಿಗೂ ಪ್ರಾಪ್ಯಪ್ರಾಪಕಭಾವವೆಂಬ ಸಂಬಂಧವು. ಪ್ರಯೋಜನ ವಿಷಯುಗಳಿಗೆ ದಾತೃದೇಯಉಭಾವವೆಂಬ ಸಂಬಂಧವು.

**8.** ಗೀತೆಯು ಪ್ರಮಾಣತಮವಾದ ಗ್ರಂಥವೆಂಬುದನ್ನು ಉಪಪಾದಿಸಿ ತೋರಿಸಿದೆವು. ಅದರ ವಿಷಯುಗಳನ್ನೂ, ಸರ್ವೋತ್ಕೃಷ್ಟ ಪ್ರಯೋಜನವನ್ನೂ, ಅದಕ್ಕೆ ಅಪೇಕ್ಷಿತವಾಗಿರುವ ಉತ್ತಮಾಧಿಕಾರಿಯುನ್ನೂ ನಿರೂಪಿಸಿದೆವು. ಶ್ರೀಕೃಷ್ಣಾರ್ಜುನ ಸಂವಾದವು ಬ್ರಹ್ಮಾದಿ ದೇವತೆಗಳಿಂದಲೂ ಮಾನ್ಯವಾದ ಬ್ರಹ್ಮವಿದ್ಯೆಯಾಗಿರುತ್ತದೆ. ಇಂಥಾ ಗಹನವಾದ ಗೀತಾಶಾಸ್ತ್ರದ ಯಥಾರ್ಥರಹಸ್ಯವನ್ನು ತಿಳಿಯಲಾರದೆ ಅನೇಕರು ಸ್ವೋತ್ಪ್ರೇಕ್ಷಿತ ಅರ್ಥಗಳನ್ನು ಗೀತಾರ್ಥವೆಂದು ಪ್ರಕಲ್ಪಿಸಿ ಕೃಷ್ಣದ್ರೋಹಕ್ಕೆ ಪಾತ್ರರಾಗಿ ನರಕಾದ್ಯನರ್ಥಗಳನ್ನು ಹೊಂದುವರು. ಬದರೀ ಪ್ರಾಂತದಲ್ಲಿ ಪ್ರವಹಿಸುವ ಪಾಪಘ್ನವಾದ ಶೀತಳಗಂಗೆಯು ಮನುಷ್ಯಮಾತ್ರರಿಂದ ಸ್ನಾನಮಾಡುವುದಕ್ಕೆ ಶಕ್ಯವಲ್ಲ. ಹಾಗೆಯೇ ನಿಗಮಾರ್ಥಗಳಿಂದ ಪರಿಪೂರ್ಣವಾದ ಗೀತೆಯನ್ನು ಸ್ವತಂತ್ರಬುದ್ಧಿಯಿಂದ ಸಾಮಾನ್ಯರು ತಿಳಿಯುವುದು ಶಕ್ಯವಲ್ಲ. ಆದುದರಿಂದಲೇ ಶ್ರೀಕೃಷ್ಣೋಪದೇಶದ ಪ್ರಾಚೀನ ಸಾಂಪ್ರದಾಯಿಕ ಅರ್ಥವನ್ನು ಶ್ರೀಬಾದರಾಯಣರ ಅನುಗ್ರಹದಿಂದ ತಿಳಿದ ಸರ್ವಜ್ಞರಾದ ಶ್ರೀಮದಾಚಾರ್ಯರು ಅನೇಕ ಪ್ರಮಾಣೋದಾಹರಣಪೂರ್ವಕವಾಗಿ ವಿಸ್ತರಿಸಿ ಶ್ರೀಮನ್ನಾರಾಯಣದೇವರ ಪಾದದಲ್ಲಿ ಕಾಣಿಕೆಯಾಗಿ ಅರ್ಪಿಸಿದರೆಂದು ಚರಿತ್ರೆಯು ಸುಪ್ರಸಿದ್ಧವಾಗಿದೆ. ತಮ್ಮ ಗೀತಾಭಾಷ್ಯವನ್ನು ರಚಿಸುವಾಗ ಶ್ರೀಮದಾಚಾರ್ಯರು "ಗೀತಾರ್ಥಂ ವಕ್ಷ್ಯಾಮಿ ಶಕ್ತಿತಃ" ಎಂದು

---

**ತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ । ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿ ನಷ್ಟಾನಚೇತಸಃ ॥** ಇತ್ಯಾದಿ ಶ್ಲೋಕಗಳಲ್ಲಿಯೂ ಸಹ ಗೀತೋಕ್ತ ಫಲಕ್ಕೆ ಕಾರಣವಾಗುವ ಅಧಿಕಾರವನ್ನೇ ಶ್ರೀಕೃಷ್ಣನು ಹೇಳಿರುವನು.

ಪ್ರತಿಜ್ಞೆಮಾಡಿದ್ದರು. ನಾರಾಯಣದೇವರು "ಗೀತಾರ್ಥಂ ವಕ್ಷ್ಯಾಮಿ ಲೇಶತಃ" ಎಂದು ಪ್ರತಿಜ್ಞಾಭಾಗವನ್ನು ತಿದ್ದಿ ಶ್ರೀಮದಾಚಾರ್ಯರ ವ್ಯಾಖ್ಯಾನ ಸಾಮರ್ಥ್ಯವನ್ನು ಲೋಕಕ್ಕೆ ಪ್ರಕಾಶಪಡಿಸಿದರು.

ವೇದಾರ್ಥಗಳನ್ನೂ ಬ್ರಹ್ಮಸೂತ್ರಾರ್ಥಗಳನ್ನೂ ತಿಳಿಯದ ಅಲ್ಪಬುದ್ಧಿಗಳಾದುದರಿಂದ ಇತರ ಮತಸ್ಥರು ಪುಂಡರೀಕಾಕ್ಷನ ಹೃದಯರೂಪವಾದ ಭಗವದ್ಗೀತೆಯ ಯಥಾರ್ಥ ಅಭಿಪ್ರಾಯವನ್ನು ತಿಳಿಯಲಾರದೆ, ಆಗ್ರಹಮಾತ್ರದಿಂದ ವ್ಯಾಖ್ಯಾನಕಾರ್ಯದಲ್ಲಿ ಆಸಕ್ತರಾದರು. ಆದುದರಿಂದಲೇ ಈ ವ್ಯಾಖ್ಯಾನಗಳೆಲ್ಲವೂ ಅಪ್ರಮಾಣಗಳೆಂದು ಮುಮುಕ್ಷುಗಳು ನಿರ್ಧರಿಸಬೇಕು. "ದುರಾಗ್ರಹಗೃಹೀತತ್ವಾದ್ವರ್ತಂತೇ ಸಮಯಾಃ ಸದಾ" ಎಂದರೆ ವೇದಾರ್ಥಜ್ಞಾನಗಂಧದಿಂದ ಶೂನ್ಯರಾದ ಅನಧಿಕಾರಿಗಳು ದುರಭಿಮಾನಕ್ಕೆ ವಶರಾಗಿ ದುಸ್ಸಮಯಗಳನ್ನು ಪ್ರಕಲ್ಪಿಸುತ್ತಲೇ ಇರುವರು; ಶಾಸ್ತ್ರಕ್ಕೆ ದುರರ್ಥಗಳನ್ನೂ ಕಲ್ಪಿಸುತ್ತಲೇ ಇರುವರು ಎಂದು ಶ್ರೀಮದಾಚಾರ್ಯರು ನಿರೂಪಿಸಿರುವರು. ಆದುದರಿಂದ ಕಲುಷಿತವಾದ ಕ್ಷುದ್ರಜಲವನ್ನು ತಿರಸ್ಕರಿಸಿ ದೇವಗಂಗೆಯನ್ನು ಸೇವಿಸುವ ಯಾತ್ರಿಕನಂತೆ ಮುಮುಕ್ಷುವು ಮೋಕ್ಷೋಪಯೋಗಿಯಾದ ಗೀತಾರ್ಥವನ್ನು ಶ್ರೀಮದಾಚಾರ್ಯರು ವಿವರಿಸಿರುವಂತೆ ನಾವು ಉಪದೇಶ ಮಾಡಿರುವುದನ್ನು ಮನನಮಾಡಿ ಅನುಷ್ಠಾನಮಾಡಿ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರನಾಗಬೇಕು. ಇದೇ ತತ್ತ್ವಾರ್ಥವು. ಬಾದರಾಯಣರೂ ಕೂಡ ಪ್ರತಿಜ್ಞೆ ಮಾಡಿ ಹೀಗೆಯೇ ಹೇಳಿರುತ್ತಾರೆ :—

**ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ ।**
**ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ ॥**

---

**॥ श्रीः ॥**

**॥ श्रीकृष्णार्पणमस्तु ॥**

---

# ಅಶುದ್ಧಶೋಧನ

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೫ | ೧೨ | ನಂದಂತಿ | ನಂದತಿ |
| ೫ | ೧೯ | ಸರ್ವಾಣಿ | ಸರ್ವಾಣಿ |
| ೨೨ | ೧೪ | ದ್ರುಷ್ಟನಾದ | ದೃಷ್ಟನಾದ |
| ೨೮ | ೧೮ | ಸ್ಪಷ್ಟಪಾಗಿ | ಸ್ಪಷ್ಟವಾಗಿ |
| ೨೮ | ೧೯ | wich | which |
| ೩೨ | ೨ | ಜ್ನಾನಿ | ಜ್ಞಾನಿ |
| ೪೪ | ೨೨ | ಸ್ವರೂಪನ್ನು | ಸ್ವರೂಪವನ್ನು |
| ೪೭ | ೧೫ | ಪ್ರಾರಾಬ್ಧೇತರ | ಪ್ರಾರಬ್ಧೇತರ |
| ೪೯ | ೭ | ತಿಾದು | ತಿಳಿದು |
| ೮೮ | ೬ | ಅದ್ವೈತಗಳ | ಅದ್ವೈತಿಗಳ |
| ೧೨೪ | ೬ | ಶ್ಲೋಕ | ಶ್ಲೋಕ |
| ೧೨೮ | ೧೦ | ಸಂಖ್ಯಾನುಸಂಧಾನ | ಸಾಂಖ್ಯಾನುಸಂಧಾನ |
| ೧೪೭ | ೧೧ | ಕರುಗಳನ್ನು | ಕುರುಗಳನ್ನು |
| ೧೪೯ | ೧೧ | ಪೃಚ್ಛಾಮಿ | ಪೃಚ್ಛಾಮಿ |
| ೧೫೦ | ೧೫ | ಹೃಷೀಕೇಶಂ | ಹೃಷೀಕೇಶಃ |
| ೧೫೦ | ೨೦ | ಅಪಹಾಸ್ಯ | ಅಪಹಾಸ |
| ೧೯೧ | ೩ | ವ್ಯಾಪ್ತಪಾದ | ವ್ಯಾಪ್ತವಾದ |
| ೧೯೨ | ೩ | ನಾಗುದರಲ್ಲಿ | ನಾಗುವುದರಲ್ಲಿ |
| ೧೯೪ | ೧೪ | ವಣುರ್ಜಿವೋ | ವಣುರ್ಜೀವೋ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೯೯ | ೨೪ | ಏತತ್ತಯಾ | ಏತತ್ತ್ರಯಾ |
| ೨೦೩ | ೩ | ಸತ್ವಾದಿ | ಸತ್ತ್ವಾದಿ |
| ೨೦೫ | ೧೩ | ಪರಿದೇವೆನಾ | ಪರಿದೇವನಾ |
| ೨೦೭ | ೨೬ | ಶಂಶಯು | ಸಂಶಯು |
| ೨೨೪ | ೨ | ಪ್ರಲಯಸ್ಥಾನಂ | ಪ್ರಲಯಃ ಸ್ಥಾನಂ |
| ೨೩೫ | ೨೩ | ಸಂಗಡದಲ್ಲಿಯೂ | ಸಂಗಡವೂ |
| ೨೪೭ | ೩ | ವಿಷಯೇಯು | ವಿಷಯೇಚ್ಛೆಯು |
| ೨೫೨ | ೧೨ | ಪ್ರವರ್ತ | ಪ್ರವೃತ್ತ |
| ೨೫೨ | ೨೧ | ನಿರಹಂಕಾರ್ಥ | ನಿರಹಂಕಾರಃ |
| ೨೫೩ | ೯ | ತತ್ವಜಾನಾರ್ಥ | ತತ್ವಜ್ಞಾನಾರ್ಥ |
| ೨೫೩ | ೧೧ | ಸ್ತ್ವಕ್ತ್ವಾ | ಸ್ತ್ಯಕ್ತ್ವಾ |
| ೨೫೬ | ೧ | ಶಾಮ್ಯಕರ್ಮ | ಕಾಮ್ಯಕರ್ಮ |
| ೨೭೫ | ೭ | ಸ್ವವರ್ಣೋ | ಸ್ವವರ್ಣಾ |
| ೨೯೪ | ೨೦ | ದ್ಜ್ಞಾನ | ಜ್ಜ್ಞಾನ |
| ೨೯೬ | ೮ | ಸಿದ್ಥಿ | ಸಿದ್ಧಿ |
| ೩೦೩ | ೧೫ | ಮಾಡಿರುವುದ್ಧ | ಮಾಡಿರುವುದ |
| ೩೦೩ | ೧೬ | ಸಿದ | ಸಿದ್ಧ |
| ೩೦೭ | ೨೨ | ಪ್ರವರ್ತನಾಗು | ಪ್ರವೃತ್ತನಾಗು |
| ೩೪೪ | ೧೧ | ಪಾತಃಕಾಲ | ಪ್ರಾತಃಕಾಲ |
| ೩೫೦ | ೧೪ | ನಾಗಿರಬೇಕು, | ನಾಗಿರಬೇಕು. |
| ೩೫೧ | ೧೪ | ಬ್ರಹ್ಮ | ಬ್ರಾಹ್ಮಂ |
| ೩೬೦ | ೭ | ವೆಂದುಬಲ್ಲ | ವೆಂಬಲ್ಲಿ |
| ೩೬೦ | ೨೧ | ವ್ಯಾವರ್ತಿ | ವ್ಯಾವೃತ್ತಿ |
| ೩೬೪ | ೨ | ಜಯೂದ್ವಾರಾ | ಜಯದ್ವಾರಾ |
| ೩೭೩ | ೧೫ | ಪ್ರವರ್ತೇಯಂ | ವರ್ತೇಯಂ |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೩೭೮ | ೧ | ಭಗ್ನವಾಗಿ | ಭಿನ್ನವಾಗಿ |
| ೩೮೩ | ೧೬ | ವೈಶ್ಯರು, | ವೈಶ್ಯರು; |
| ೪೦೭ | ೧೨ | ವರ್ಣನೆಯು | ವರ್ಣನೆಯು. |
| ೪೦೮ | ೬ | ವೃದ್ಧವಾದ | ಪ್ರವೃದ್ಧವಾದ |
| ೪೦೮ | ೧೦ | ಭಗತ್ಪ್ರಾಪ್ತಿ | ಭಗವತ್ಪ್ರಾಪ್ತಿ |
| ೪೧೮ | ೧೫ | ಅಭಾ | ಅಭ್ಯಾ |
| ೪೨೧ | ೫ | ಪ್ರಸಿದ್ಧವಾಗಿ | ಪ್ರಸಿದ್ಧನಾಗಿ |
| ೪೪೮ | ೮ | ಸಂಸ್ಯಾಸಿ | ಸಂನ್ಯಾಸಿ |
| ೪೫೨ | ೯ | ವಿಶ್ವಕ್ಸೇನ | ವಿಷ್ವಕ್ಸೇನ |
| ೪೫೪ | ೮ | ಭೂಯಿಷ್ಟ | ಭೂಯಿಷ್ಠ |
| ೪೫೫ | ೨೨ | ಸಮಿಾಚಿನ | ಸಮಿಾಚೀನ |
| ೪೫೭ | ೧೧ | ಪ್ರವರ್ತಿಗೆ | ಪ್ರವರ್ತನೆಗೆ |
| ೪೬೦ | ೯ | ಸಿರ್ಣಯಕ | ನಿರ್ಣಾಯಕ |
| ೪೬೭ | ೬ | ಪ್ರಾಪ್ತಿಯು | ವ್ಯಾಪ್ತಿಯು |
| ೪೬೮ | ೧೨ | ನಾಮಗಳ್ನ | ನಾಮಗಳನ್ನು |
| ೪೮೦ | ೪ | ಆಕಾರ | ಅಕಾರ |

॥ श्रीः ॥



## ಮಾಧ್ವಗ್ರಾಹಕರಿಗೆ ಮಾತ್ರ ಈ ಪುಸ್ತಕಗಳು ದೊರೆಯುತ್ತವೆ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕಗುಣಸಂಪನ್ನ
ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯರಾದ ಶ್ರೀಮದುತ್ತ
ರಾದಿಮಠದ ಸಂಸ್ಥಾನಾಧೀಶ್ವರರಾದ ಶ್ರೀಸತ್ಯಧ್ಯಾನತೀರ್ಥ
ಶ್ರೀಪಾದಂಗಳವರು ಮೈಸೂರು ರಾಜಧಾನಿಯಲ್ಲಿ ಮಾಡಿದ
ಮಹೋಪದೇಶಗಳನ್ನು ಒಳಗೊಂಡಿರುವ ಗ್ರಂಥಗಳು

**(1) ಸಭಾಸಾರಸಂಗ್ರಹ (Vol. I. P. 122,)**

[ಶ್ರೀಶ್ರೀಗಳವರು ಧರ್ಮ, ಅಧರ್ಮ, ವೇದಪ್ರಾಮಾಣ್ಯ, ಸ್ಪೃಶ್ಯಾಸ್ಪೃಶ್ಯ, ದ್ವೈತಾದ್ವೈತ, ಪ್ರಚ್ಛನ್ನಬೌದ್ಧತ್ವ, ಯಜ್ಞದಲ್ಲಿ ಪಶುಹಿಂಸಾ ವಿಚಾರ, ಆಶ್ರಮಧರ್ಮ, ಬ್ರಹ್ಮವಿಚಾರ, ಮಾಯಾವಾದ ಮುಂತಾದ ಬಹು ವಿಷಯಗಳಲ್ಲಿ ರಿ॥ ಯೂನಿವರ್ಸಿಟಿ ರಿಜಸ್ಟ್ರಾರ್ರವರು, ವಿ. ಸುಬ್ರಹ್ಮಣ್ಯ ಅಯ್ಯರವರೇ ಮುಂತಾದವರು ಮಾಡಿದ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳು ಎಚ್. ಸುಬ್ಬರಾವ್, ಎಂ.ಎ., ಇವರಿಂದ ಸಂಗ್ರಹಿಸಲ್ಪಟ್ಟದ್ದು. ಕನ್ನಡ ಅಕ್ಷರ 16 lb. ಕಾಗದ, ಸಾದಾ ರಟ್ಟಿನ ಬೈಂಡ್. ಸ್ವಲ್ಪಪ್ರತಿಗಳು ಮಾತ್ರ ಉಳಿದಿವೆ.]

ಬೆಲೆ ಪ್ರತಿ 1ಕ್ಕೆ 0—8—0.

**(2) ಸಭಾಸಾರಸಂಗ್ರಹ (Volume II.) ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದಂಗಳವರ ಗೀತೋಪನ್ಯಾಸಗಳು. Part I.**

[ಶ್ರೀಶ್ರೀಗಳವರ ಗೀತೋಪದೇಶಗಳು ಈ ಗ್ರಂಥದಲ್ಲಿ ಇರುವುವು. ಇದರ ಪ್ರಥಮಭಾಗದಲ್ಲಿ ವಿಷ್ಣುಸರ್ವೋತ್ತಮತ್ವ, ಜಗತ್ಸತ್ಯತ್ವ, ಜೀವಬ್ರಹ್ಮರ ಭೇದ, ಜೀವಪಾರತಂತ್ರ್ಯ, ಜೀವತ್ರೈವಿಧ್ಯ, ತಾರತಮ್ಯ ಮತ್ತು ಮುಕ್ತಿಸ್ವರೂಪ ಇವುಗಳ ವಿಷಯಗಳಲ್ಲಿ ಕೇವಲ ಶ್ರೀಕೃಷ್ಣನ ವಾಕ್ಯಗಳಿಂದಲೇ ದ್ವೈತತತ್ವವನ್ನು ಶ್ರೀಶ್ರೀಗಳವರು ಸಾಧನೆಮಾಡಿರುವರು. ಅದ್ಭುತವಾದ

ಉಪದೇಶಗಳು ಎಚ್‌. ಸುಬ್ಬರಾವ್, ಎಂ. ಎ., ಇವರಿಂದ ಸಂಗ್ರಹಿಸಲ್ಪಟ್ಟದ್ದು. 335 ಪುಟ. ಅನುಕ್ರಮಣಿಕೆ 8 ಪುಟ. ಕನ್ನಡ ಅಕ್ಷರ. ಉತ್ತಮ 20 lb ಕಾಗದ.] ಕ್ಯಾಲಿಕೋ ಬೈಂಡು ರೂ. 1—8—0.
(ಬಾಲಬೋಧ ಅಕ್ಷರದ ಪ್ರತಿಗಳುಕೆಲವು ಮಾತ್ರ ಉಳಿದಿವೆ.)

**(3) ಸಭಾಸಾರಸಂಗ್ರಹ (Vol. III.) ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದಂಗಳವರ ಗೀತೋಪನ್ಯಾಸಗಳು Part II.**

[ಈ ದ್ವಿತೀಯಭಾಗವು ಕರ್ಮಯೋಗ, ವೇದಪ್ರಾಮಾಣ್ಯ, ವರ್ಣಾಶ್ರಮಧರ್ಮವ್ಯವಸ್ಥೆ, ಧ್ಯಾನಯೋಗ, ಅಪರೋಕ್ಷಜ್ಞಾನ, ಹರಿಭಕ್ತಿಸ್ವರೂಪ, ಹರಿಪ್ರಸಾದಮಹಿಮೆಯು, ಗೀತೆಗೆ ಪ್ರಾಮಾಣ್ಯ ಸಮರ್ಥನವು, ಸಾಂಖ್ಯ ತತ್ತ್ವೋಪದೇಶವು, ಸಂನ್ಯಾಸಸ್ವರೂಪವು, ಕರ್ಮಾನುಷ್ಠಾನಸ್ವರೂಪವು, ಸರ್ವ ಕರ್ಮಸಮರ್ಪಣೆಯು, ತ್ಯಾಗಸ್ವರೂಪವು, ಪ್ರಮಾಣನಿರೂಪಣವು ಮತ್ತು ಗೀತೆಗೆ ಪ್ರಾಮಾಣ್ಯಸಮರ್ಥನೆಯು, ಶ್ರೀಹರಿಗೆ ವೇದೈಕವೇದ್ಯತ್ವಸಮರ್ಥನೆಯು, ಅದ್ವೈತಮತಕ್ಕೆ ಅಪ್ರಾಮಾಣ್ಯಸಮರ್ಥನವು, ಗೀತೆಗೆ ಅನುಬಂಧ ಚತುಷ್ಟಯಸಮರ್ಥನವು ಇವೇ ಮೊದಲಾದ ವಿಷಯಗಳಲ್ಲಿ ಶ್ರೀಶ್ರೀಗಳವರು ಕೇವಲ ಗೀತಾವಾಕ್ಯಗಳ ಆಧಾರದಿಂದಲೇ ಮಾಡಿದ ಅದ್ಭುತ ಉಪದೇಶಗಳನ್ನು ಒಳಗೊಂಡಿರುವುದು. ಪ್ರತಿಯೊಂದು ವಿಚಾರದಲ್ಲಿಯೂ ಅದ್ವೈತತತ್ತ್ವವು ವಿಮರ್ಶಿಸಲ್ಪಟ್ಟಿರುವುದು. ಮತ್ತು ಖಂಡನ ವಿಷಯದಲ್ಲಿ ಆಧುನಿಕತತ್ತ್ವಜ್ಞರ ಸಮ್ಮತಿಯನ್ನು ಪ್ರದರ್ಶಿಸುವ ಟಿಪ್ಪಣಿಗಳಿಂದ ಯುಕ್ತವಾಗಿರುವುದು.]
ಉತ್ತಮ ಕಾಗದ. ಕನ್ನಡ ಅಕ್ಷರ. 535 ಪುಟವುಳ್ಳದ್ದು. ಬೆಲೆ 2—4—0.
ಆರ್ಟ್ ಪೇಪರಿನ ಪ್ರತಿ 1 ಕ್ಕೆ 4—0—0.

**(4) ತತ್ತ್ವೋದ್ಯೋತ— (ನಾರಾಯಣೀಯಟಿಪ್ಪಣಿ)** ಸಂಸ್ಕೃತಭಾಷೆಯಲ್ಲಿ. ಇದು ಶ್ರೀಮದಾಚಾರ್ಯರಿಂದ ಕೃತವಾದ ತತ್ತ್ವೋದ್ಯೋತ ಮೂಲ ಗ್ರಂಥಕ್ಕೆ ಟೀಕಾಕಾರರಾದ ಶ್ರೀಮತ್ ಜಯತೀರ್ಥಶ್ರೀಶ್ರೀಗಳವರ ಅರ್ಥ ಗಂಭೀರವಾದ ಟೀಕೆಗೆ ನಾರೋಪಂತರೆಂಬ ಮಹಾಪಂಡಿತರಿಂದ ರಚಿತವಾದ ಟಿಪ್ಪಣಿ—ಈ ಗ್ರಂಥದಲ್ಲಿ ಅತ್ಯುಪಯುಕ್ತಗಳಾದ ವಿಷಯಗಳೂ ಅತಿ ಚಮತ್ಕಾರವಾದ ಅನೇಕ ಯುಕ್ತಿಗಳೂ ತುಂಬಿರುತ್ತವೆ. ತತ್ತ್ವೋದ್ಯೋತಕ್ಕೆ ಇಂತಹ ಅನರ್ಘಟೀಕೆಯು ಇದುವರೆಗೂ ಅಚ್ಚಾಗಿರಲಿಲ್ಲವಾದುದರಿಂದ ಇದರ

ಮೂಲಪ್ರತಿಯನ್ನು ಬಹು ಪ್ರಯಾಸಪಟ್ಟು ಸಂಗ್ರಹಿಸಿ ಪ್ರಕಟಿಸಲಾಗಿದೆ. ಇದು ಉತ್ತಮವಾದ 20 lb ನ ಮೆರಗುವ ಕಾಗದದ ಮೇಲೆ ಸುಂದರವಾದ ದೇವನಾಗರೀ ಅಕ್ಷರದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಡೆಮ್ಮಿ 8 ಪತ್ರದ ಆಕಾರದ ಸುಮಾರು 46 ಪುಟಗಳಿವೆ.] ಪ್ರತಿ 1ಕ್ಕೆ ಬೆಲೆ 0—8—0

---

### ಎಲ್ಲರಿಗೂ ದೊರೆಯುವ ಇತರ ಗ್ರಂಥಗಳು:—

**(5) Dwaita Siddhanta Vichara and what came of it. or His Holiness' Upadesha,**

[A small treatise in English containing the invaluable teaching of His Holiness at Chitraranjana. Edited by H. Subba Rao, M.A.]

**(6) ಸಾಂಬಗಳಹಸ್ತಿಕಾ. (ಅದ್ವೈತತತ್ವವಿಮರ್ಶೆ—with a foreward) ಎಚ್. ಸುಬ್ಬರಾವ್, ಎಂ.ಎ. ಇವರಿಂದ ವಿರಚಿತವಾದುದು.**

[ಆಸ್ಥಾನವಿದ್ವಾನ್ ಸಾಂಬಶಾಸ್ತ್ರಿಗಳಿಂದ ಬರೆಯಲ್ಪಟ್ಟ ಸಾಂಬಭಂಜನ ಚಪೇಟಿಕಾ ಎಂಬ ಗ್ರಂಥಕ್ಕೆ ಉತ್ತರರೂಪವಾದುದು. ದಿವ್ಯವಾದ ಇಂಗ್ಲಿಷ್ ಮುನ್ನುಡಿ ಮತ್ತು ಕನ್ನಡ ಉಪೋದ್ಘಾತಗಳನ್ನುಳ್ಳದ್ದು. ದೂಷಣಾನುವಾದವು, ಕ್ಷುದ್ರಾಪವಾದಪರಿಹಾರವು, ಅದ್ವೈತಮತದ ಅವೈದಿಕತ್ವಪ್ರದರ್ಶನವು, ದ್ವೈತತತ್ವದ ಅನಾದಿತ್ವ ಮತ್ತು ವೈದಿಕತ್ವ ಸಮರ್ಥನವು, ಅದ್ವೈತಮತದ ಪ್ರಚ್ಛನ್ನಬೌದ್ಧತ್ವ ಸಮರ್ಥನವು, ಅದ್ವೈತಮತದ ಉತ್ಸೂತ್ರತ್ವ ಸಮರ್ಥನವು, ಅದ್ವೈತತತ್ವದ ಗೀತಾತಿಕ್ರಮಣಸಮರ್ಥನವು, ಅದ್ವೈತತತ್ವದ ಕಾಪಟ್ಯಪ್ರದರ್ಶನವು, ಅದ್ವೈತೋಪಾಸನೆಯ ಭಯಂಕರತ್ವಪ್ರದರ್ಶನೆಯು ಮತ್ತು ತಪ್ತಮುದ್ರಾಧಾರಣೆಯ ವೈದಿಕತ್ವಪ್ರದರ್ಶನವು, ಅವೈಷ್ಣವಾಚಾರದ ನಿಷ್ಫಲತ್ವಪ್ರದರ್ಶನವು, ಇವೇ ಮೊದಲಾದ ವಿಷಯಗಳಿಂದ ಉಪಬೃಂಹಿತವಾಗಿರುವುದು.] ರಫ್ ಕಾಗದ ಪ್ರತಿ 1ಕ್ಕೆ 0—8—0

20 lb (ಉತ್ತಮ ಕಾಗದ) ಪ್ರತಿ 1ಕ್ಕೆ 1—0—0

**(7) ಗೀತಾರಂಜನ—" ಭಗವದ್ಗೀತಾ " (ಶೇಷಕವಿವಿರಚಿತವಾದ ಪುರಾತನಗ್ರಂಥ)**

[ಇದರಲ್ಲಿ ಮೇಲೆ ಸಂಸ್ಕೃತ ಮೂಲಶ್ಲೋಕಗಳೂ, ಕೆಳಗಡೆ ಮೂಲಾರ್ಥಕ್ಕೆ ಸರಿಯಾದ ಕನ್ನಡಪದ್ಯಗಳೂ ಇರುವುವು. ಮತ್ತು ಇದು ಶ್ರೀಮದುತ್ತರಾದಿಮಠದ ಆಸ್ಥಾನದಲ್ಲಿ ಪಂಡಿತೋತ್ತಮರಾದ ವೇ॥ ಪಾಂಡುರಂಗೀ ಕೃಷ್ಣಾಚಾರ್ಯರವರಿಂದ ಬರೆಯಲ್ಪಟ್ಟ ಅನರ್ಘವಾದ ಅವತಾರಿಕೆಯಿಂದಲೂ ಕೂಡಿರುತ್ತದೆ. ಈ ಗ್ರಂಥವು ಕನ್ನಡದಲ್ಲಿ ಮನೋಹರವಾದ ಪದ್ಯರೂಪವಾಗಿರುವುದಲ್ಲದೆ, ''ಗೀತಾರಂಜನ'' ವೆಂಬ ಹೆಸರಿಗೆ ತಕ್ಕಂತೆ ಗೀತಾರ್ಥವನ್ನು ಸ್ತ್ರೀಯರ ಮತ್ತು ಬಾಲಕರ ಮನಸ್ಸಿನಲ್ಲಿ ಸಹ ಸ್ಥಿರವಾಗಿ ನೆಲೆಗೊಳಿಸುವಂತಹ ಮನೋಹರವಾದ ಶೈಲಿಯಲ್ಲಿದೆ. (ಇಂತಹ ಪುಸ್ತಕವು ಅಚ್ಚಾದುದು ಇದೇ ಮೊದಲನೆಯ ಸಲ.) ಉತ್ತಮವಾದ 28 ಪೌಂಡಿನ ಮೆರಗುವ ಕಾಗದದ ಮೇಲೆ ಕ್ರೌನ್ 8 ಪತ್ರುದ ಆಕಾರದಲ್ಲಿ ಮುದ್ದಾದ ಮುದ್ರಣ.]

ಪ್ರತಿ 1ಕ್ಕೆ ಬೆಲೆ 0—12—0

**ಸೂಚನೆ:—**ಸಕಲ ಮಾಧ್ವರೂ ಎಷ್ಟು ಬಡವರಾದರೂ ಜ್ಞಾನವನ್ನು ಸಂಪಾದಿಸಲೆಂದು ಕರುಣಾಪೂರ್ಣದೃಷ್ಟಿಯಿಂದ ಶ್ರೀಶ್ರೀಗಳವರು ಅತ್ಯುತ್ತಮ ಕಾಗದದಲ್ಲಿ ಈ ಗ್ರಂಥಗಳನ್ನು ಅಚ್ಚು ಮಾಡಿಸಿ, ಕಾಗದ ಮತ್ತು ಪ್ರೆಸ್ಸಿನ ಖರ್ಚನ್ನು ಪುಸ್ತಕಗಳಿಗೆ ಹಂಚಿ, ಸುಲಭವಾದ ಬೆಲೆಯಿಂದ ಗ್ರಂಥಗಳನ್ನು ಪ್ರಚಾರಪಡಿಸಬೇಕೆಂದು ನಿರ್ಣಯಿಸಿರುವರು. ಪ್ರತಿವರ್ಷವೂ ಅವರು ಚಾತುರ್ಮಾಸ್ಯದಲ್ಲಿ ಮಾಡುವ ಉಪದೇಶಗಳು ಆಯಾಯ ವರ್ಷದ ಗ್ರಂಥಗಳಲ್ಲಿ ಸುಂದರವಾದ ಮುದ್ರಣದಲ್ಲಿ ಅಚ್ಚಾಗಿ, ಮಾಧ್ವಗ್ರಾಹಕರಿಗೆ ಕೊಡಲ್ಪಡುವುದು. ವಿ. ಪಿ. ಚಾರ್ಜು ವಗೈರೆ ಪ್ರತ್ಯೇಕ.

ಗ್ರಂಥಗಳು ದೊರೆಯುವ ಸ್ಥಳ:—

**ವಿ. ಎಸ್. ದೇಶಿಕಾಚಾರ್ಯರು, ಬಿ. ಎ.,**

ಲೈಬ್ರೇರಿಯನ್,

ಎಸ್. ಎಂ. ಎಸ್. ಎ. ಸಭಾ, ಉತ್ತರಾದಿಮಠದ ಬಿಲ್ಡಿಂಗ್ಸ್,

**ಬಸವನಗುಡಿ ಪೋಸ್ಟ್, ಬೆಂಗಳೂರು ಸಿಟಿ.**